ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಪ್ರಕಟಣೆ – ೮೯

ಸಾಹಿತ್ಯ ಮಾಲೆ – ೭೫

ಪ್ರಧಾನ ಸಂಪಾದಕರು

**ಡಾ. ಪ್ರಧಾನ್ ಗುರುದತ್ತ**

# ಇಂದಿರಾಗಾಂಧಿ ಹತ್ಯೆಯ ಬಳಿಕ

# ಇಂದಿರಾಗಾಂಧಿ ಹತ್ಯೆಯ ಬಳಿಕ

ಮೂಲ
**ಡಾ. ಉಣ್ಣಿ ಕೃಷ್ಣನ್ ತಿರುವಾಯಿಯೋಡ್**
ಅನುವಾದ
**ಕೆ.ಕೆ. ನಾಯರ್**

**ಕುವೆಂಪು ಭಾಷಾ ಭಾರತಿ ಪ್ರಾಧಿಕಾರ**
ಕಲಾಗ್ರಾಮ, ಜ್ಞಾನಭಾರತಿ
ಬೆಂಗಳೂರು ವಿಶ್ವವಿದ್ಯಾಲಯ ಆವರಣದ ಹಿಂಭಾಗ, ಮಲ್ಲತ್ತಹಳ್ಳಿ
ಬೆಂಗಳೂರು – ೫೬೦ ೦೫೬

**INDIRĀ GĀNDHI HATYEYA BAḶIKA ;** Kannada Translation of **DṛKsākṣi** by **Unni Krishnan Thiruvayiyode;** Kannada translation by **K.K. Nair;** Editor-in-Chief : **Dr. Pradhan Gurudatta ;** Published by **Sri P. Narayana Swamy, Registrar, Kuvempu Bhasha Bharathi Pradikara ;** Kalagrama, Jnana Bharathi, Behind Bangalore University Campus, Mallattahalli, Bangalore - 560 056; 2010; Pp.xx+284; Price : Rs. 90/-

© ಹಕ್ಕುಗಳನ್ನು ಕಾದಿರಿಸಿದೆ

ಮುದ್ರಣ : ೨೦೧೦
ಪುಟಗಳು : XX + ೨೮೪
ಬೆಲೆ : ರೂ. ೯೦.೦೦

ಪ್ರಕಾಶಕರು :
**ಪಿ. ನಾರಾಯಣಸ್ವಾಮಿ**
ರಿಜಿಸ್ಟ್ರಾರ್
**ಕುವೆಂಪು ಭಾಷಾ ಭಾರತಿ ಪ್ರಾಧಿಕಾರ**
ಕಲಾಗ್ರಾಮ, ಜ್ಞಾನಭಾರತಿ
ಬೆಂಗಳೂರು ವಿಶ್ವವಿದ್ಯಾಲಯ ಆವರಣದ ಹಿಂಭಾಗ
ಮಲ್ಲತ್ತಹಳ್ಳಿ, ಬೆಂಗಳೂರು – ೫೬೦ ೦೫೬
ದೂ. : ೨೩೧೮೩೩೧೧, ೨೩೧೮೩೩೧೨

ಮುಖಪುಟ ವಿನ್ಯಾಸ ಮತ್ತು ಚಿತ್ರ : **ವಿಶ್ವನಾಥ್ ಶೆಟ್ಟಿಗಾರ್**

**ISBN : 978-93-80415-14-7**

ಮುದ್ರಕರು :
**ಮೆ|| ಮಯೂರ ಪ್ರಿಂಟ್ ಆಡ್ಸ್**
ನಂ. ೬೯, ಸುಭೇದಾರ್ ಛತ್ರಂ ರೋಡ್
ಬೆಂಗಳೂರು – ೫೬೦೦೨೦ ದೂ : ೨೩೩೪೨೭೨೪

**ಬಿ.ಎಸ್. ಯಡಿಯೂರಪ್ಪ**
ಮುಖ್ಯಮಂತ್ರಿಗಳು

ಕರ್ನಾಟಕ ಸರ್ಕಾರ

ವಿಧಾನಸೌಧ
ಬೆಂಗಳೂರು – ೫೬೦ ೦೦೧

ಸಿಎಂ/ಪಿಎಸ್/೧೪೭/೦೯
ದಿನಾಂಕ : ೦೫.೦೮.೨೦೦೯

## ಮೊದಲ ಮಾತು

ಕನ್ನಡ ನಾಡಿನ ಹೆಮ್ಮೆಯ ಮಹಾಕವಿ ಶ್ರೀ ಕುವೆಂಪು ಅವರು ಕನ್ನಡದ ಕೀರ್ತಿಯನ್ನು ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಟ್ಟದಲ್ಲಿ ಎತ್ತಿ ಹಿಡಿದ ಮಹಾಚೇತನ. ಅವರ ಹೆಸರಿನಲ್ಲಿ ಕರ್ನಾಟಕ ಸರ್ಕಾರ ಸಂಸ್ಥಾಪಿಸಿರುವ **'ಕುವೆಂಪು ಭಾಷಾ ಭಾರತಿ ಪ್ರಾಧಿಕಾರ'** ರಾಷ್ಟ್ರೀಯ ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಸಂಸ್ಥೆಯಾಗಿ ಬೆಳೆಯಬೇಕೆಂಬುದು ಸರ್ಕಾರದ ಸದಾಶಯ. ಬೆಂಗಳೂರು **'ಜ್ಞಾನಭಾರತಿ'** ಆವರಣದಲ್ಲಿ ನಿರ್ಮಿಸಲಾಗಿರುವ ಬೃಹತ್ ಭವನದ ಸಮುಚ್ಚಯದಲ್ಲಿ ಶಿಕ್ಷಣ, ತರಬೇತಿ ಮತ್ತು ಪ್ರಕಟಣೆಗಳ ರೂಪದಲ್ಲಿ ಬಹು–ಆಯಾಮದ ಅದರ ಚಟುವಟಿಕೆಗಳು ಅರಳಿ ನಿಲ್ಲಲಿವೆ.

ಅದು ಆರಂಭಿಸಲಿರುವ ಭಾಷಾಂತರ ಮತ್ತು ತೌಲನಿಕ ಸಾಹಿತ್ಯ ಸಂಬಂಧವಾದ ವಿಶಿಷ್ಟ ಶಿಕ್ಷಣಗಳು ಆಡಳಿತ ಕ್ಷೇತ್ರ, ನ್ಯಾಯಾಂಗ ಕ್ಷೇತ್ರ ಮತ್ತು ಶಿಕ್ಷಣ ಕ್ಷೇತ್ರಗಳಿಗೆ ಪೂರಕವಾಗಿ, ಕನ್ನಡವನ್ನು ಸರ್ವತೋಮುಖವಾಗಿ ಬೆಳೆಸಲು ಸಹಾಯಕವಾಗಲಿವೆ.

ಭಾರತೀಯ ಭಾಷಾ–ಸಾಹಿತ್ಯಗಳ ಉತ್ತಮೋತ್ತಮ ಕೃತಿಗಳನ್ನು ಮಾತ್ರವಲ್ಲದೆ, ವಿಶ್ವಸಾಹಿತ್ಯದ ಶ್ರೇಷ್ಠ ಕೃತಿಗಳನ್ನು ಕನ್ನಡಕ್ಕೆ ತರುವುದಲ್ಲದೆ, ಕನ್ನಡದ ಶ್ರೇಷ್ಠ ಕೃತಿಗಳನ್ನು ಜಾಗತಿಕ ಸಾಹಿತ್ಯಕ್ಕೆ ಪರಿಚಯಿಸಿಕೊಡುವ ಕರ್ತವ್ಯದ ಜೊತೆಗೆ, ಜ್ಞಾನ–ವಿಜ್ಞಾನ ಮತ್ತು ತಂತ್ರಜ್ಞಾನದ ಮಹತ್ವದ ಕೃತಿಗಳನ್ನು ಕನ್ನಡಕ್ಕೆ ತರುವ ಮಹತ್ತರ ಕಾರ್ಯವನ್ನೂ ಅದು ಹಮ್ಮಿಕೊಳ್ಳಬೇಕಾದ ಅಗತ್ಯವಿದೆ.

ನಾಡಿನ ಶ್ರೇಷ್ಠ ವಿದ್ವಾಂಸರ ಸಲಹೆ–ಸೂಚನೆ–ಮಾರ್ಗದರ್ಶನಗಳ ಬೆಳಕಿನಲ್ಲಿ ಅದರ ಕೆಲಸ ಕಾರ್ಯಗಳು ಆದರ್ಶಪ್ರಾಯವಾಗಿ ಮೂಡಿಬರಲಿ ಹಾಗೂ ಇದೊಂದು ವಿಶಿಷ್ಟ ಸಂಸ್ಥೆಯಾಗಿ ದೇಶ–ವಿದೇಶಗಳ ಗಮನವನ್ನು ಸೆಳೆಯುವಂತಾಗಲಿ ಎಂದು ಹಾರೈಸುತ್ತೇನೆ.

ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಕಾರ್ಯಚಟುವಟಿಕೆಗಳಲ್ಲಿ ಆಸಕ್ತರೆಲ್ಲರೂ ಪಾಲ್ಗೊಳ್ಳಬೇಕೆಂಬ, ಇದರ ಪ್ರಕಟಣೆಗಳನ್ನು ಜನಸಮುದಾಯ ಆದರ–ವಿಶ್ವಾಸಗಳಿಂದ ಸ್ವೀಕರಿಸುವರೆಂಬ ಆಶಯ ನಮ್ಮದಾಗಿದೆ.

(ಬಿ.ಎಸ್. ಯಡಿಯೂರಪ್ಪ)

ಕರ್ನಾಟಕ ಸರ್ಕಾರ

**ಗೋವಿಂದ ಎಂ. ಕಾರಜೋಳ**
ಕನ್ನಡ ಮತ್ತು ಸಂಸ್ಕೃತಿ, ಸಣ್ಣ ನೀರಾವರಿ ಹಾಗೂ
ಜವಳಿ ಸಚಿವರು

ವಿಧಾನ ಸೌಧ
ಬೆಂಗಳೂರು – ೦೧

೫ ಅಕ್ಟೋಬರ್ ೨೦೧೦

## ಶುಭಾಕಾಂಕ್ಷೆ

ರಾಷ್ಟ್ರಕವಿ ಶ್ರೀ ಕುವೆಂಪು ಅವರ ಹೆಸರಿನಲ್ಲಿ ಕರ್ನಾಟಕ ಸರ್ಕಾರ ಸ್ಥಾಪಿಸಿರುವ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ರಾಷ್ಟ್ರೀಯ ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳ ಮೂಲಕ ಈಗಾಗಲೇ ಖ್ಯಾತಿಯನ್ನು ಗಳಿಸಿದೆ. ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಹತ್ವದ ಸಾಹಿತ್ಯಿಕ, ಐತಿಹಾಸಿಕ, ವೈಜ್ಞಾನಿಕ ಮತ್ತು ಇತರ ಗ್ರಂಥಗಳನ್ನು ಪ್ರಕಟಿಸುವ ಮೂಲಕ ಮತ್ತು ರಾಷ್ಟ್ರೀಯ ವಿಚಾರಸಂಕಿರಣಗಳನ್ನು ಏರ್ಪಡಿಸುವ ಮೂಲಕ ಅಂತರರಾಷ್ಟ್ರೀಯ ಮಟ್ಟದ ಸಂಸ್ಥೆಯಾಗಿ ಬೆಳೆಯುವ ದಿಕ್ಕಿನಲ್ಲಿ ಮಹತ್ವದ ಹೆಜ್ಜೆಗಳನ್ನು ಇಡುತ್ತಿರುವುದು ನನಗೆ ತುಂಬ ಸಂತೋಷವನ್ನು ತಂದುಕೊಟ್ಟಿದೆ. ಈ ಮೂಲಕ ಕನ್ನಡ ನಾಡಿನ ಜನತೆಗೆ ಈಗಾಗಲೇ ಮಹತ್ವದ ಕೃತಿಗಳು ಕನ್ನಡದಲ್ಲಿ ದೊರೆಯುವಂತಾಗಿಸುವುದು ಮಾತ್ರವಲ್ಲದೆ, ಕನ್ನಡದ ಶ್ರೇಷ್ಠ ಕೃತಿಗಳ ಪರಿಚಯ ಇತರ ಭಾಷಾ ಬಾಂಧವರಿಗೂ ಆಗುವಂತೆ ಮಾಡುವ ದಿಕ್ಕಿನಲ್ಲಿ ಈ ಸಂಸ್ಥೆ ಕಾರ್ಯೋನ್ಮುಖವಾಗಬೇಕಾಗಿದೆ. ಈ ಕಾರ್ಯದಲ್ಲಿ ನಾಡಿನ ಖ್ಯಾತ ಲೇಖಕರು, ವಿದ್ವಾಂಸರು, ವಿಮರ್ಶಕರು ಸಹಕರಿಸುತ್ತಿರುವುದು ವಿಶೇಷ ಸಂಗತಿಯೇ ಆಗಿದೆ. ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಆಶ್ರಯದಲ್ಲಿ ಮುಂದಿನ ದಿನಗಳಲ್ಲಿ ಶೈಕ್ಷಣಿಕ ಕಾರ್ಯಕ್ರಮಗಳು ಪ್ರಾರಂಭವಾಗಲಿರುವುದು ಸಂತೋಷದ ಸಂಗತಿ. ನಮ್ಮ ತರುಣ ಜನಾಂಗವನ್ನು ಈ ಸಾಹಿತ್ಯಿಕ–ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಸಿದ್ಧಗೊಳಿಸುವ ಕಾರ್ಯ ಇದರ ಮೂಲಕ ನಡೆಯುತ್ತದೆ ಎಂದು ನಂಬಿದ್ದೇನೆ.

ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಕಾರ್ಯಕ್ರಮಗಳಲ್ಲಿ ನಾಡಿನ ಜನತೆ ಸಕ್ರಿಯವಾಗಿ ಭಾಗವಹಿಸಲಿ ಎಂದು ಹಾರೈಸುತ್ತೇನೆ.

**ಗೋವಿಂದ ಎಂ. ಕಾರಜೋಳ**



ಕರ್ನಾಟಕ ಸರ್ಕಾರ

**ರಮೇಶ್ ಬಿ.ಝಳಕಿ,** ಭಾ.ಆ.ಸೇ.
ಸರ್ಕಾರದ ಕಾರ್ಯದರ್ಶಿಗಳು
ಕನ್ನಡ ಮತ್ತು ಸಂಸ್ಕೃತಿ ಹಾಗೂ
ವಾರ್ತಾ ಇಲಾಖೆ

ವಿಕಾಸ ಸೌಧ
ಬೆಂಗಳೂರು – ೦೧

## ಹಾರೈಕೆ

ರಾಷ್ಟ್ರಕವಿ ಶ್ರೀ ಕುವೆಂಪು ಅವರ ಹೆಸರಿನಲ್ಲಿ ಕರ್ನಾಟಕ ಸರ್ಕಾರ ಸ್ಥಾಪಿಸಿರುವ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಿಂದ ನಮ್ಮ ನಾಡಿನ ಜನಸಮುದಾಯದ ಗಮನವನ್ನು ಸೆಳೆಯುವ ದಿಕ್ಕಿನಲ್ಲಿ ಮುನ್ನಡೆಯುತ್ತಿರುವುದು ತುಂಬ ಸಂತೋಷದ ಸಂಗತಿಯೇ ಆಗಿದೆ. ಪ್ರಾಧಿಕಾರದ ಒಂದು ಭಾಗವೇ ಆಗಿ ಕಲ್ಪಿಸಿಕೊಳ್ಳಲಾಗಿದ್ದ ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿಯ ಕಾರ್ಯಚಟುವಟಿಕೆಗಳ ಅಂಗವಾಗಿ ಹೊರತರಲಾಗಿದ್ದ ಸುಮಾರು ೬೦ ಗ್ರಂಥಗಳ ಜೊತೆಗೆ, ಪ್ರಾಧಿಕಾರ ಮತ್ತಷ್ಟು ಮಹತ್ವಪೂರ್ಣ ಗ್ರಂಥಗಳನ್ನು ಹೊರತರುತ್ತಿದ್ದು, ಸದ್ಯದಲ್ಲಿಯೇ ಈ ಸಂಖ್ಯೆ ನೂರರ ಗಡಿಯನ್ನು ದಾಟಲಿದೆ. 'ಭಾರತೀಯ ವಿದ್ಯಾಭವನ'ದಂಥ ರಾಷ್ಟ್ರೀಯ ಸಂಸ್ಥೆಯೊಂದಿಗೆ ಸಂಯುಕ್ತ ಕಾರ್ಯಕ್ರಮವನ್ನು ಏರ್ಪಡಿಸಿಕೊಂಡು ಪ್ರಾಧಿಕಾರ ಮುನ್ನಡೆಯಲಿರುವುದು ಪ್ರಾಧಿಕಾರದ ಚಟುವಟಿಕೆಗಳಿಗೆ ಹೊಸ ಆಯಾಮವನ್ನೇ ನೀಡಲಿದೆ ಎಂದು ನಂಬಿದ್ದೇನೆ. ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಅವರ ೧೪ ಸಂಪುಟಗಳ ಕನ್ನಡ ಅನುವಾದದ ಪರಿಷ್ಕರಣ, ೧೫ ರಿಂದ ಮುಂದಿನ ಸಂಪುಟಗಳ ಅನುವಾದ ಕಾರ್ಯ, ಪಂಡಿತ್ ದೀನ್‌ದಯಾಳ್ ಉಪಾಧ್ಯಾಯ ಅವರ ಸಮಗ್ರ ಕೃತಿಗಳ ಕನ್ನಡ ಅನುವಾದದ ಪ್ರಕಟಣೆ. ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಕನ್ನಡ ಲೇಖಕರ ಸಂಚಯಗಳ ಹಿಂದೀ ಮತ್ತು ಇಂಗ್ಲಿಷ್ ಆವೃತ್ತಿಗಳ ಪ್ರಕಟಣೆ – ಇವೇ ಮೊದಲಾದ ಮಹತ್ವದ ಕಾರ್ಯಕ್ರಮಗಳನ್ನು ಈ ಪ್ರಾಧಿಕಾರ ಹಮ್ಮಿಕೊಂಡಿರುವುದು ಸ್ತುತ್ಯರ್ಹವಾದ ಸಂಗತಿಯೇ ಆಗಿದೆ. 'ಕಾವೇರಿ ನ್ಯಾಯಾಧಿಕರಣ'ದ ತೀರ್ಪಿನ ಕನ್ನಡ ಆವೃತ್ತಿಯೂ ಸದ್ಯದಲ್ಲಿಯೇ ಹೊರಬರಲಿದೆ. ವೈಜ್ಞಾನಿಕ, ತಾಂತ್ರಿಕ ಮತ್ತು ವೈದ್ಯಕೀಯ ಸಾಹಿತ್ಯ ಪ್ರಕಟಣೆಯತ್ತಲೂ ಪ್ರಾಧಿಕಾರ ಗಮನಹರಿಸಿದೆ. ಪ್ರಾಧಿಕಾರದ ಮುನ್ನಡೆಗೆ ಕರ್ನಾಟಕ ಸರ್ಕಾರದ ಎಲ್ಲ ಬಗೆಯ ನೆರವೂ ಲಭಿಸಲಿದೆ.

ಈ ಎಲ್ಲ ಚಟುವಟಿಕೆಗಳು ಕನ್ನಡಿಗರ ಆದರ, ಮೆಚ್ಚಿಕೆ, ಸಂತೋಷಗಳಿಗೆ ಪಾತ್ರವಾಗುತ್ತದೆಂದು ನಂಬಿದ್ದೇನೆ.

(ರಮೇಶ್ ಬಿ.ಝಳಕಿ)

ಕರ್ನಾಟಕ ಸರ್ಕಾರ

**ಮನು ಬಳಿಗಾರ್**
ನಿರ್ದೇಶಕರು
ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಕನ್ನಡ ಭವನ, ಜೆ.ಸಿ. ರಸ್ತೆ
ಬೆಂಗಳೂರು – ೫೬೦ ೦೦೨

## ಪ್ರಾಸ್ತಾವಿಕ ನುಡಿ

ಕುವೆಂಪು ಭಾಷಾ ಭಾರತಿ ಅಂಗವಾಗಿ ಕರ್ನಾಟಕ ಸರ್ಕಾರ 2005ರಲ್ಲಿ ಸ್ಥಾಪಿಸಿದ ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿ ಕೇವಲ ಮೂರು ವರ್ಷಗಳಲ್ಲಿ ಮಾಡಿರುವ ವೈವಿಧ್ಯಮಯವಾದ ಕಾರ್ಯವನ್ನು ನಾನು ಗಮನಿಸಿದ್ದೇನೆ. ಕುವೆಂಪು ಭಾಷಾ ಭಾರತಿಯ ಕಟ್ಟಡ ಸಮುಚ್ಚಯದ ನಿರ್ಮಾಣಕಾರ್ಯ ಪೂರ್ಣಗೊಂಡಿದ್ದು, ಸನ್ಮಾನ್ಯ ಮುಖ್ಯಮಂತ್ರಿಗಳು ಅದರ ಉದ್ಘಾಟನ ಕಾರ್ಯಕ್ರಮವನ್ನು ನೆರವೇರಿಸಿದ್ದಾರೆ. ವೈವಿಧ್ಯಮಯವಾದ ಮತ್ತು ವ್ಯಾಪಕವಾದ ಕಾರ್ಯಯೋಜನೆಗಳನ್ನು, ಧ್ಯೇಯೋದ್ದೇಶಗಳನ್ನು ಹೊಂದಿರುವ ಕುವೆಂಪು ಭಾಷಾ ಭಾರತಿ ಕುವೆಂಪು ಅವರ ಹೆಸರಿನಲ್ಲಿಯೇ ಸ್ಥಾಪಿತವಾಗಿದ್ದರೂ ಕುವೆಂಪು ಸಾಹಿತ್ಯದ ಪ್ರಚಾರ ಪ್ರಸಾರಗಳಿಗೆ ಮಾತ್ರವೇ ಸೀಮಿತವಾಗಿರುವುದಿಲ್ಲ. ಕುವೆಂಪು ಮಾಡಿರುವ ಅತ್ಯುಚ್ಚ ಸಾಹಿತ್ಯಿಕ ಸಾಧನೆಯ ಪ್ರತೀಕವಾಗಿ ಈ ಸಂಸ್ಥೆಗೆ ಆ ಹೆಸರನ್ನು ಕೊಡಲಾಗಿದೆ. ಕನ್ನಡ ಭಾಷಾ ಸಾಹಿತ್ಯಗಳ ಹಿರಿಯ ಸಾಧನೆಯನ್ನು ಕನ್ನಡೇತರರಿಗೆ, ದೇಶ–ವಿದೇಶಗಳ ಸಾಹಿತ್ಯಿಕ ಸಾಧನೆಯನ್ನು ಕನ್ನಡಿಗರಿಗೆ ಪರಿಚಯಿಸಿಕೊಡುವುದಲ್ಲದೆ, ಸಾಹಿತ್ಯ, ಜ್ಞಾನ–ವಿಜ್ಞಾನ–ತಂತ್ರಜ್ಞಾನಗಳ ವಿವಿಧ ಕ್ಷೇತ್ರಗಳಲ್ಲಿನ ಸಾಧನೆಗೆ ಕನ್ನಡವನ್ನು ಅಣಿಗೊಳಿಸುವ ಧ್ಯೇಯವನ್ನೂ ಇದು ಇರಿಸಿಕೊಂಡಿದೆ. ಹೀಗೆ ಇದು ಸರ್ವಭಾಷೆಗಳ ಸಾಮರಸ್ಯದ ಪ್ರತೀಕವಾದ ಸಾಹಿತ್ಯಿಕ ಸಂಸ್ಥೆಯಾಗಿ ಕೆಲಸ ಮಾಡಲಿದೆ. ಭಾಷಾಂತರ ಶಿಕ್ಷಣ, ವಿದೇಶ ಭಾಷೆಗಳ ಶಿಕ್ಷಣ, ತೌಲನಿಕ ಸಾಹಿತ್ಯಾಧ್ಯಯನ, ತರಬೇತಿ ಕಾರ್ಯಕ್ರಮಗಳು, ಪ್ರಕಟಣೆಗಳು – ಹೀಗೆ ಬಹುಮುಖವಾದ ಕಾರ್ಯಚಟುವಟಿಕೆಗಳಿಂದ ಕುವೆಂಪು ಭಾಷಾ ಭಾರತಿ ನಾಡಿನ ಹೆಮ್ಮೆಯ ಸಂಸ್ಥೆಯಾಗಿ ಬೆಳೆದು ಬರಬೇಕೆಂಬ ಆಶಯವನ್ನು ಇರಿಸಿಕೊಳ್ಳಲಾಗಿದೆ. ಕುವೆಂಪು ಭಾಷಾ ಭಾರತಿಯ ಅಂಗವಾಗಿ ಈ ಹಿಂದೆ ಸ್ಥಾಪಿತವಾಗಿದ್ದ ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿ ಕುವೆಂಪು ಭಾಷಾ ಭಾರತಿಯಲ್ಲಿ ಈಗ ವಿಲೀನಗೊಂಡಿದ್ದು, ಹೆಚ್ಚಿನ ವೈವಿಧ್ಯ ಮತ್ತು ವ್ಯಾಪ್ತಿಯ ಕಾರ್ಯಕ್ರಮಗಳಲ್ಲಿ ಅದು ತನ್ನನ್ನು ತೊಡಗಿಸಿಕೊಳ್ಳಲಿದೆ. ಈ ಅಕಾಡೆಮಿಯ ಮೂರು ವರ್ಷಗಳ ಅಲ್ಪಾವಧಿಯಲ್ಲಿ ಅಭಿನಂದನೀಯವಾದ ಕಾರ್ಯವನ್ನು ಮಾಡಿದ ಹಿರಿಯ, ಬಹುಭಾಷಾ ವಿದ್ವಾಂಸರಾದ ಡಾ.ಪ್ರಧಾನ್ ಗುರುದತ್ತ ಅವರನ್ನು ಕುವೆಂಪು ಭಾಷಾ ಭಾರತಿಯ ಪ್ರಥಮಾಧ್ಯಕ್ಷರಾಗಿ ಕರ್ನಾಟಕ ಸರ್ಕಾರ ನೇಮಕ ಮಾಡಿದ್ದು, ಅವರು ಈ ಸಂಸ್ಥೆಯ ಧ್ಯೇಯೋದ್ದೇಶಗಳನ್ನು ಈಡೇರಿಸಲು ಸಂಕಲ್ಪಬದ್ಧರಾಗಿದ್ದಾರೆ ಎಂದು ನಾನು ಭಾವಿಸಿದ್ದೇನೆ.



ಕುವೆಂಪು ಭಾಷಾ ಭಾರತಿ ತನ್ನ ವಿಶಿಷ್ಟ ಕಾರ್ಯಚಟುವಟಿಕೆಗಳಿಂದ ಕನ್ನಡಿಗರ ಮೆಚ್ಚಿನ ಸಾಹಿತ್ಯಿಕ – ಸಾಂಸ್ಕೃತಿಕ ಸಂಸ್ಥೆಯಾಗಿ ಬೆಳೆಯಲಿ ಎಂದು ಹಾರೈಸುತ್ತೇನೆ. ಅದು ಅನೇಕ ಮಹತ್ವದ ಪ್ರಕಟಣೆಗಳನ್ನು ಹೊರತರುತ್ತಿರುವುದು ಅದರ ಕಾರ್ಯಚಟುವಟಿಕೆಗಳ ಪ್ರತೀಕವಾಗಿದೆ. ಈ ಸಂಸ್ಥೆ ಇತೋಪ್ಯತಿಶಯವಾಗಿ ಬೆಳೆಯಲಿ ಎಂದು ಹಾರೈಸುತ್ತೇನೆ.

ಮನು ಬಳಿಗಾರ್
(ಮನು ಬಳಿಗಾರ್)

## ಪೀಠಿಕೆ

ಶ್ರೀ ಕುವೆಂಪು ಅವರು ಕನ್ನಡ ನಾಡಿನ ಹೆಮ್ಮೆಯ ರಾಷ್ಟ್ರಕವಿ. ಕನ್ನಡದ ಇನ್ನೊಬ್ಬ ವರಕವಿಗಳಾದ ಬೇಂದ್ರೆಯವರಿಂದಲೇ ಯುಗದ ಕವಿ, ಜಗದ ಕವಿ ಎಂದು ಕೀರ್ತಿತರಾಗಿದ್ದಂಥವರು. ಕನ್ನಡದ ಹಿರಿಮೆಯನ್ನು ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಸ್ತರಗಳಲ್ಲಿ ಎತ್ತಿ ಹಿಡಿದ ಮಹಾಚೇತನವೂ ಅವರಾಗಿದ್ದರು. ಸಾಹಿತ್ಯದ ಅನೇಕ ಪ್ರಕಾರಗಳಿಗೆ ಮಹತ್ವಪೂರ್ಣ ಕೊಡುಗೆಗಳನ್ನು ನೀಡಿರುವ ಹಿರಿಮೆಯೂ ಅವರದಾಗಿದೆ. ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿಯಿಂದ ಹಿಡಿದು ಜ್ಞಾನಪೀಠ ಪ್ರಶಸ್ತಿಯವರೆಗೆ ರಾಷ್ಟ್ರಮಟ್ಟದ ಬಹುತೇಕ ಗೌರವ ಪ್ರಶಸ್ತಿಗಳೆಲ್ಲ ಅವರದಾಗಿವೆ. ರಾಷ್ಟ್ರಮಟ್ಟದ ಈ ಗೌರವ ಪ್ರಶಸ್ತಿಗಳೆಲ್ಲ ಕನ್ನಡದಲ್ಲಿ ಮೊದಲ ಬಾರಿಗೆ ಅವರನ್ನು ಅರಸಿಬಂದವು. ದೇಶ–ವಿದೇಶಗಳ ವಿಶ್ವವಿದ್ಯಾನಿಲಯಗಳ ಹಾಗೂ ಪ್ರತಿಷ್ಠಿತ ಸಾಹಿತ್ಯಿಕ ಸಂಸ್ಥೆಗಳ ಗೌರವಾದರಗಳಿಗೂ ಅವರು ಪಾತ್ರರಾಗಿದ್ದರು.

ಶ್ರೀ ಕುವೆಂಪು ಅವರ ಶೈಕ್ಷಣಿಕ–ಸಾಹಿತ್ಯಿಕ ಹಿರಿಮೆ ಸಾಧನೆಗಳನ್ನು ಗುರುತಿಸಿ, ಅವರ ಹೆಸರಿನಲ್ಲಿ ಅಧ್ಯಯನ ಸಂಸ್ಥೆಗಳನ್ನು ಮಾತ್ರವಲ್ಲದೆ, ವಿಶ್ವವಿದ್ಯಾನಿಲಯವೊಂದನ್ನೂ ಸ್ಥಾಪಿಸಲಾಗಿದೆ. ಶ್ರೀ ಕುವೆಂಪು ಅವರ ಮಹಾಕಾವ್ಯವಾದ 'ಶ್ರೀ ರಾಮಾಯಣ ದರ್ಶನಂ' ಸೇರಿದಂತೆ ಅವರ ಸಾಹಿತ್ಯದ ಬಹ್ವಂಶ ಇಂಗ್ಲಿಷ್‌ನಂಥ ವಿದೇಶಿ ಭಾಷೆಗೆ ಮಾತ್ರವಲ್ಲದೆ ಹಿಂದಿಯಂಥ ಇತರ ಭಾರತೀಯ ಭಾಷೆಗಳಿಗೂ ಅನುವಾದಗೊಂಡಿದೆ ಎಂಬುದು ಗಮನಾರ್ಹ ಸಂಗತಿಯಾಗಿದೆ. ಶ್ರೀ ಕುವೆಂಪು ಅವರ ಈ ಹೈಮಾಚಲೋಪಮ ಸಾಧನೆಗೆ ಯೋಗ್ಯವಾದ ರಾಷ್ಟ್ರೀಯ ಮಹತ್ವದ ಸಾಹಿತ್ಯಿಕ–ಸಾಂಸ್ಕೃತಿಕ ಸಂಸ್ಥೆಯೊಂದನ್ನು ಸ್ಥಾಪಿಸಬೇಕೆಂಬುದು ಮತ್ತು ಅದು ಭಾರತೀಯ ಸಾಹಿತ್ಯಿಕ ಸಾಂಸ್ಕೃತಿಕ ಲೋಕದ ಹೆಮ್ಮೆಯ ಪ್ರತೀಕವಾದ ಸಂಸ್ಥೆಯಾಗಬೇಕೆಂಬುದು ಕರ್ನಾಟಕ ಸರ್ಕಾರದ ಮಹತ್ವಾಕಾಂಕ್ಷೆಯ ಯೋಜನೆಯಾಗಿದೆ. ಈ ಯೋಜನೆಯ ಮೂಲ ರೂವಾರಿ ಪ್ರೊ.ದೇ. ಜವರೇಗೌಡ ಅವರು. 'ಕುವೆಂಪು ಭಾಷಾ ಭಾರತಿ'ಯ ಅಂಗವಾಗಿ ಆರಂಭಿಸಲಾಗಿದ್ದ ಅನುವಾದ ಸಾಹಿತ್ಯ ಅಕಾಡೆಮಿಯನ್ನು ಈಗ ವಿಧ್ಯುಕ್ತವಾಗಿ 'ಕುವೆಂಪು ಭಾಷಾ ಭಾರತಿ ಪ್ರಾಧಿಕಾರ'ದಲ್ಲಿ ವಿಲೀನಗೊಳಿಸಲಾಗಿದ್ದು, ಅದರ ಎಲ್ಲ ಕಾರ್ಯಚಟುವಟಿಕೆಗಳೂ ಇನ್ನಷ್ಟು ವ್ಯಾಪ್ತಿ–ವೈವಿಧ್ಯಗಳೊಂದಿಗೆ ಮುಂದುವರಿಯಲಿವೆ. 'ಕುವೆಂಪು ಭಾಷಾ ಭಾರತಿ' ಕುವೆಂಪು ಸಾಹಿತ್ಯದ ಪ್ರಚಾರ–ಪ್ರಸಾರಗಳಿಗೆ ಮಾತ್ರವೇ ಮೀಸಲಾದ ಸಂಸ್ಥೆಯಾಗಿರದೆ, ಕನ್ನಡ ಸಾಹಿತ್ಯದ ಹಿರಿಮೆ–ಗರಿಮೆಗಳನ್ನು ರಾಷ್ಟ್ರೀಯ–ಅಂತರರಾಷ್ಟ್ರೀಯ ಮಟ್ಟದಲ್ಲಿ ಮೆರೆಸುವ, ಭಾರತೀಯ ಸಾಹಿತ್ಯದ ಮತ್ತು ವಿಶ್ವಸಾಹಿತ್ಯದ ಉತ್ಕೃಷ್ಟ ಕೃತಿಗಳಿಂದ ಕನ್ನಡ ಸಾಹಿತ್ಯವನ್ನು ಸಮೃದ್ಧಗೊಳಿಸುವ ಮಹದಾಶಯವನ್ನು ಹೊಂದಿದೆ.

ಬೆಂಗಳೂರು ವಿಶ್ವವಿದ್ಯಾನಿಲಯದ ಜ್ಞಾನಭಾರತಿ ಆವರಣದಲ್ಲಿ ಎರಡು



ಎಕರೆಗಳಷ್ಟು ವಿಶಾಲವಾದ ಸ್ಥಳದಲ್ಲಿ 'ಕುವೆಂಪು ಭಾಷಾ ಭಾರತಿ'ಯ ಕಟ್ಟಡದ ಶಿಲಾನ್ಯಾಸ ಕಾರ್ಯಕ್ರಮ ದಿನಾಂಕ : ೦೧.೦೯.೨೦೦೫ರಂದು ಅಂದಿನ ಮಾನ್ಯ ಮುಖ್ಯಮಂತ್ರಿಗಳಾಗಿದ್ದ ಶ್ರೀ ಎನ್. ಧರ್ಮಸಿಂಗ್ ಅವರಿಂದ ನೆರವೇರಿತು. 'ವಿಶ್ವಚೇತನ' ಮತ್ತು 'ಕಾಜಾಣ' ಎಂದು ಹೆಸರಿಸಲಾಗಿರುವ ಎರಡು ಬೃಹತ್ ಕಟ್ಟಡಗಳ ಸಮುಚ್ಚಯವನ್ನು ಒಳಗೊಂಡಿರುವ ಕುವೆಂಪು ಭಾಷಾ ಭಾರತಿಯ ಕಟ್ಟಡದ ನಿರ್ಮಾಣಕ್ಕೆ ಸುಮಾರು ಎರಡೂವರೆ ಕೋಟಿ ರೂಪಾಯಿಗಳನ್ನು ಖರ್ಚು ಮಾಡಲಾಗಿದ್ದು, ೨೦೦೯ರಲ್ಲಿ ಇದರ ಕಾಮಗಾರಿ ಪೂರ್ಣಗೊಂಡಿತು. ಇದೇ ದಿನಾಂಕ: ೧೯.೦೮.೨೦೦೯ರಂದು ಬೆಳಗ್ಗೆ ೧೧.೦೦ ಗಂಟೆಗೆ ಕರ್ನಾಟಕ ಸರ್ಕಾರದ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್.ಯಡಿಯೂರಪ್ಪ ಅವರು ಈ ಕಟ್ಟಡ–ಸಮುಚ್ಚಯದ ಉದ್ಘಾಟನೆ ಸಮಾರಂಭವನ್ನು ಹಾಗೂ ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಪ್ರಕಟಣೆಗಳ ಮೊದಲ ಕಂತಿನ ಹತ್ತು ಪುಸ್ತಕಗಳ ಬಿಡುಗಡೆ ಕಾರ್ಯಕ್ರಮವನ್ನು ನೆರವೇರಿಸಿದ್ದಾರೆ.

ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಕಾರ್ಯಚಟುವಟಿಕೆಗಳ ಸ್ವರೂಪ ಮೂರು ಮುಖದ್ದಾಗಿರುತ್ತದೆ :

(ಅ) ಶೈಕ್ಷಣಿಕ ಚಟುವಟಿಕೆಗಳು ಮತ್ತು ತರಬೇತಿ ಕಾರ್ಯಗಳು

(ಆ) ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳು

(ಇ) ಪ್ರಕಟಣೆಗಳು

**(ಅ) ಶೈಕ್ಷಣಿಕ ಚಟುವಟಿಕೆಗಳು ಮತ್ತು ತರಬೇತಿ ಕಾರ್ಯಗಳು :**

(i) "ಕನ್ನಡ ಸಾಹಿತ್ಯ ಹಿರಿಮೆ–ಗರಿಮೆಗಳಲ್ಲಿ ಯಾವ ಭಾರತೀಯ ಸಾಹಿತ್ಯಕ್ಕೂ ಕಡಿಮೆಯಾಗಿಲ್ಲ. ಅದರ ಮಹತ್ವವನ್ನು ಎತ್ತಿತೋರಿಸುವ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕಾಗಿದೆ, ಅಷ್ಟೇ" ಎಂಬುದಾಗಿ ಕುವೆಂಪು ಅವರು ಉದ್ಘೋಷಿಸಿದ್ದರು. ಈ ಹಿನ್ನೆಲೆಯಲ್ಲಿ ಶೈಕ್ಷಣಿಕ ಚಟುವಟಿಕೆಗಳ ಅಂಗವಾಗಿ ಅನುವಾದ, ತೌಲನಿಕ ಸಾಹಿತ್ಯ, ವಿದೇಶಿ ಭಾಷೆಗಳ ಶಿಕ್ಷಣಕ್ಕೆ ಸಂಬಂಧಿಸಿದಂತೆ, ಈ ಕೆಳಕಂಡ ಶಿಕ್ಷಣ ಕ್ರಮಗಳನ್ನು ಆರಂಭಿಸಬೇಕೆಂದು ಯೋಜಿಸಲಾಗಿದೆ :

(೧) ಭಾಷಾಂತರ ಡಿಪ್ಲೊಮಾ ಶಿಕ್ಷಣ – ಮೊದಲ ಹಂತದಲ್ಲಿ ಇಂಗ್ಲಿಷ್, ಹಿಂದೀ, ಕನ್ನಡ, ತೆಲುಗು, ತಮಿಳು, ಮಲಯಾಳಂ, ಬಂಗಾಳಿ, ಮರಾಠಿ ಭಾಷೆಗಳಲ್ಲಿ ವಿಶೇಷ ತರಬೇತಿಗೆ ಒತ್ತುಕೊಟ್ಟು ಈ ಶಿಕ್ಷಣವನ್ನು ಪ್ರಾರಂಭಿಸಲಾಗುತ್ತದೆ.

(೨) ಭಾಷಾಂತರದಲ್ಲಿ ಎಂ.ಫಿಲ್. ಶಿಕ್ಷಣ : ವಿಶೇಷ ವಿಷಯಕ್ಕೆ ಒತ್ತುಕೊಟ್ಟು

(೩) ಪತ್ರಿಕೋದ್ಯಮ ಮತ್ತು ಭಾಷಾಂತರ

(೪) ಕಾನೂನುಶಾಸ್ತ್ರ, ಆಡಳಿತ ಭಾಷೆ ಮತ್ತು ಭಾಷಾಂತರ

(೫) ವಿಜ್ಞಾನ ಮತ್ತು ಮಾನವಿಕಶಾಸ್ತ್ರ ಕೃತಿಗಳು ಮತ್ತು ಭಾಷಾಂತರ ; ಮತ್ತು

(೬) ತೌಲನಿಕ ಸಾಹಿತ್ಯ

(೭) ವಿದೇಶೀ ಭಾಷೆಗಳ ಶಿಕ್ಷಣ (ಸರ್ಟಿಫಿಕೇಟ್ ಮತ್ತು ಡಿಪ್ಲೊಮಾ)

(ii) ಕನ್ನಡ ಸಾಹಿತ್ಯವನ್ನು ವಿಶ್ವಸಾಹಿತ್ಯದ ಮಟ್ಟದಲ್ಲಿ ಪ್ರಚುರಪಡಿಸಬೇಕಾದರೆ – ಜಾಗತಿಕ ಪ್ರಾಚುರ್ಯದ ವಿದೇಶಿ ಭಾಷೆಗಳಿಗೆ ಕನ್ನಡದ ಶ್ರೇಷ್ಠ ಕೃತಿಗಳನ್ನು ಕೊಂಡೊಯ್ಯುವ ಮಹತ್ವದ ಕಾರ್ಯವನ್ನು ಕೈಗೊಳ್ಳಬೇಕಾಗುತ್ತದೆ. ಹೀಗಾಗಿ ಮೊದಲ ಹಂತದಲ್ಲಿ **ಸ್ಪ್ಯಾನಿಷ್, ಜಪಾನಿ, ಫ್ರೆಂಚ್, ರಷ್ಯನ್, ಜರ್ಮನ್, ಚೀಣೀ, ಆಫ್ರಿಕನ್** ಭಾಷೆಗಳು – ಈ ಎಲ್ಲ ಶಿಕ್ಷಣಗಳಿಗೆ ಸಂಬಂಧಿಸಿದಂತೆ, ತಜ್ಞರೊಂದಿಗೆ ಸಮಾಲೋಚಿಸಿ ಕಾರ್ಯಕ್ರಮಗಳನ್ನು ರೂಪಿಸುವುದು, ಶಿಕ್ಷಣಕ್ಕೆ ಮತ್ತು ತರಬೇತಿಗೆ ವ್ಯವಸ್ಥೆಯನ್ನು ಕಲ್ಪಿಸುವುದು ಮೊದಲಾದ ಕಾರ್ಯಗಳನ್ನು ಸಮರೋಪಾದಿಯಲ್ಲಿ ಕೈಗೊಳ್ಳಲಾಗುತ್ತದೆ. ವಿದೇಶಿ ದೂತಾವಾಸಗಳ ನೆರವಿನೊಂದಿಗೆ ಈ ಶಿಕ್ಷಣ ಕ್ರಮಗಳನ್ನು ಯೋಜಿಸಲಾಗುತ್ತದೆ.

ವಿವಿಧ ಭಾಷೆಗಳಲ್ಲಿ ಪರಿಣತಿಯನ್ನು ಪಡೆದಿರುವಂಥ ತರುಣ ಪ್ರತಿಭೆಗಳನ್ನು ಗುರುತಿಸಿ, ಅವರಿಗೆ ತರಬೇತಿ ನೀಡಿ ಪ್ರಕಟಣಾವಕಾಶಗಳನ್ನು ಕಲ್ಪಿಸಿಕೊಡಲು ಅನುಕೂಲವಾಗುವಂತೆ ವಿಚಾರಗೋಷ್ಠಿಗಳು, ವಿಚಾರಸಂಕಿರಣಗಳು, ಕಾರ್ಯಶಿಬಿರಗಳು ಮುಂತಾದ ವೈವಿಧ್ಯಮಯ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗುತ್ತದೆ.

ಶ್ರೀ ಕುವೆಂಪು ಅವರು ಸಾಹಿತ್ಯ ಮತ್ತು ವಿಜ್ಞಾನ–ತಂತ್ರಜ್ಞಾನಗಳನ್ನು ಮಾನವ ಸಂಸ್ಕೃತಿಯ ಕಣ್ಣುಗಳೆಂದೇ ಭಾವಿಸಿದ್ದವರು. ಹೀಗಾಗಿ, ಜ್ಞಾನದ ಇತರ ಕ್ಷೇತ್ರಗಳತ್ತಲೂ ಕುವೆಂಪು ಭಾಷಾಭಾರತಿ ಕೈಚಾಚಲಿದೆ. ಈ ದೃಷ್ಟಿಯಲ್ಲಿ ಕನ್ನಡವನ್ನು ಸರ್ವಾಂಗಸಮೃದ್ಧವಾಗಿ ಬೆಳೆಸುವ ಅವರ ಆಶಯ ಕಾರ್ಯರೂಪಕ್ಕೆ ಬರಬಹುದಾಗಿದೆ.

ಕೇಂದ್ರ ಸರ್ಕಾರದ ರಾಷ್ಟ್ರೀಯ ಅನುವಾದ ಮಿಷನ್ ಯೋಜನೆ ಕಾರ್ಯರೂಪಕ್ಕೆ ಬರಲಿರುವ ಹಿನ್ನೆಲೆಯಲ್ಲಿ, ಇಂಥ ಶಿಕ್ಷಣಗಳನ್ನು ಪ್ರಾರಂಭಿಸುವುದಕ್ಕೆ ಹೆಚ್ಚಿನ ಅರ್ಥ ಮತ್ತು ಔಚಿತ್ಯ ದೊರೆಯುವಂತಾಗುತ್ತದೆ.

(ಆ) **ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳು :**

ಕೇಂದ್ರ ಸಾಹಿತ್ಯ ಅಕಾಡೆಮಿ ರವೀಂದ್ರನಾಥ ಠಾಗೂರ್ ಅವರ ಪ್ರಾತಿನಿಧಿಕ ಸಂಕಲನಗಳನ್ನೊಳಗೊಂಡ 'ರವೀಂದ್ರ ಸಂಚಯ'ವನ್ನು ಹೊರತಂದಿರುವ ರೀತಿಯಲ್ಲಿಯೇ **'ಕುವೆಂಪು ಸಂಚಯ'** ಮತ್ತು **'ಪು.ತಿ.ನ ಸಂಚಯ'**ಗಳನ್ನು ಹೊರತರಲಾಗಿದೆ. ಇದೇ ರೀತಿಯಲ್ಲಿ **ಶಿವರಾಮ ಕಾರಂತ, ಮಾಸ್ತಿ, ವಿ.ಕೃ. ಗೋಕಾಕ್** ಮತ್ತು **ಜಿ.ಎಸ್. ಶಿವರುದ್ರಪ್ಪ** ಮೊದಲಾದ ಕನ್ನಡದ ಮಹತ್ವದ ಲೇಖಕರ ಸಂಕಲನಗಳನ್ನು ಹೊರತರಲಾಗುತ್ತಿದೆ. ಮುಂದಿನ ದಿನಗಳಲ್ಲಿ ಇತರ ಮಹತ್ವದ ಕನ್ನಡ ಲೇಖಕರ 'ಸಂಚಯ'ಗಳನ್ನು ಹೊರತರಲಾಗುತ್ತದೆ. ಮುಂದೆ ಇವುಗಳನ್ನು ಇಂಗ್ಲಿಷ್ ಮತ್ತು ಹಿಂದೀ ಭಾಷೆಗಳಲ್ಲಿ ಹೊರತರುವ ಯೋಜನೆಗಳನ್ನೂ ಹಾಕಿಕೊಳ್ಳಲಾಗುತ್ತಿದೆ. ಇದೇ ರೀತಿಯಲ್ಲಿ ಭಾರತೀಯ ಜ್ಞಾನಪೀಠ ಮತ್ತು ಇತರ ರಾಷ್ಟ್ರಮಟ್ಟದ ಪ್ರಶಸ್ತಿಗಳನ್ನು ಗಳಿಸಿರುವ ಶ್ರೇಷ್ಠ ಸಾಹಿತಿಗಳ ಪ್ರಾತಿನಿಧಿಕ ರಚನೆಗಳನ್ನು ಒಳಗೊಂಡ ಸಂಚಯ ಕೃತಿಗಳನ್ನು ಹೊರತರಲೂ ಕ್ರಮ ಕೈಗೊಳ್ಳಲಾಗುತ್ತದೆ. ಉದಾ: **ಮೈಥಿಲಿ ಶರಣಗುಪ್ತ ಸಂಚಯ, ಜಯಶಂಕರ ಪ್ರಸಾದ್ ಸಂಚಯ** (ಹಿಂದೀ), **ವಿಶ್ವನಾಥ ಸಂಚಯ** (ತೆಲುಗು), **ಆಶಾಪೂರ್ಣದೇವಿ ಸಂಚಯ** (ಬಂಗಾಳಿ), **ಶಿವಶಂಕರ ಪಿಳ್ಳೈ ಸಂಚಯ** ಮತ್ತು **ಎಂ.ಟಿ. ವಾಸುದೇವನ್ ನಾಯರ್ ಸಂಚಯ** (ಮಲಯಾಳಂ) ಇತ್ಯಾದಿ.



ಕನ್ನಡ ಸಾಹಿತ್ಯವನ್ನು ರಾಷ್ಟ್ರೀಯ ಮತ್ತು ಜಾಗತಿಕ ಸ್ತರಗಳಲ್ಲಿ ಪ್ರಚುರಪಡಿಸಲು ವಿಚಾರಗೋಷ್ಠಿಗಳನ್ನು, ಸಮಾರಂಭಗಳನ್ನು ಏರ್ಪಡಿಸುವಂತೆಯೇ, ಇತರ ಭಾರತೀಯ ಭಾಷಾಸಾಹಿತ್ಯ ಮತ್ತು ವಿಶ್ವಸಾಹಿತ್ಯಕ್ಕೆ ಸಂಬಂಧಪಟ್ಟಂತಹ ಇದೇ ಬಗೆಯ ಅರ್ಥಪೂರ್ಣ ಕಾರ್ಯಕ್ರಮಗಳನ್ನೂ ರೂಪಿಸಲಾಗುತ್ತದೆ.

ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ರಾಷ್ಟ್ರೀಯ ಧ್ಯೇಯೋದ್ದೇಶಗಳಿಗೆ ಪೂರಕವೂ–ಪ್ರೇರಕವೂ ಆಗುವಂತೆ, ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ರೂಪಿಸುತ್ತದೆ. ಅಂತೆಯೇ, ರಾಷ್ಟ್ರಮಟ್ಟದ ಸಾಹಿತ್ಯಿಕ ಸಂಘ–ಸಂಸ್ಥೆಗಳಾಗಿರುವ ಕೇಂದ್ರ ಸಾಹಿತ್ಯ ಅಕಾಡೆಮಿ, ನ್ಯಾಷನಲ್ ಬುಕ್ ಟ್ರಸ್ಟ್, ಬಿರ್ಲಾ ಪ್ರತಿಷ್ಠಾನ ಮೊದಲಾದವುಗಳಲ್ಲಿನ ಕಾರ್ಯಕ್ರಮಗಳ ಪುನರಾವರ್ತನೆಯಾಗದಂತೆ ವಿಶಿಷ್ಟ ರೀತಿಯಲ್ಲಿ ಕುವೆಂಪು ಭಾಷಾಭಾರತಿ ಕಾರ್ಯಯೋಜನೆಗಳನ್ನು ರೂಪಿಸಲಾಗುತ್ತದೆ.

**ರಾಷ್ಟ್ರೀಯ ಪ್ರಶಸ್ತಿ :** ರಾಷ್ಟ್ರಮಟ್ಟದಲ್ಲಿ ಕುವೆಂಪು ಅವರ ಹೆಸರಿನಲ್ಲಿ **ರಾಷ್ಟ್ರಮಟ್ಟದ ಪ್ರಶಸ್ತಿಯೊಂದನ್ನು** ಸ್ಥಾಪಿಸಿ, ನಾಡಿನ ಶ್ರೇಷ್ಠ ಸಾಹಿತಿಗಳನ್ನು ಗುರುತಿಸಿ ಸನ್ಮಾನಿಸಲು ಹಾಗೂ ಅಂತಹವರ ಪ್ರಮುಖ ಕೃತಿಗಳನ್ನು ಕನ್ನಡದಲ್ಲಿ ಹೊರತರಲು ಯೋಜನೆಗಳನ್ನು ರೂಪಿಸಲಾಗುತ್ತದೆ.

**ತರುಣ ಪ್ರತಿಭೆಗಳಿಗೆ ಪ್ರೋತ್ಸಾಹ** : ತರುಣ ಪ್ರತಿಭೆಗಳನ್ನು ಗುರುತಿಸಿ, ವಿವಿಧ ಭಾರತೀಯ ಭಾಷೆಗಳಲ್ಲಿ ವಿಶೇಷ ತರಬೇತಿ ಲಭ್ಯವಾಗುವಂತೆ ಮಾಡಿ, ಮುಂದೆ ಸಾಹಿತ್ಯಿಕ ಕೊಳು–ಕೊಡೆ ಕಾರ್ಯದಲ್ಲಿ ಅವರು ಸಕ್ರಿಯವಾಗಿ ಪಾಲ್ಗೊಳ್ಳುವಂತೆ ಮಾಡಲು ವಿವಿಧ ರಾಜ್ಯಸರ್ಕಾರಗಳ ನೆರವಿನೊಂದಿಗೆ ಶಿಷ್ಯವೇತನ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಬೇಕೆಂದು ಯೋಜಿಸಲಾಗಿದೆ.

(ಇ) **ಪ್ರಕಟಣೆಗಳು :**

'ಕುವೆಂಪು ಭಾಷಾ ಭಾರತಿ'ಯ ಅಂಗವಾಗಿ ಸ್ಥಾಪಿಸಲಾಗಿದ್ದ ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿಯ ಪ್ರಕಟಣೆಗಳೂ ಸೇರಿದಂತೆ ಇದುವರೆಗೆ ೮೦ಕ್ಕೂ ಹೆಚ್ಚು ಪುಸ್ತಕಗಳನ್ನು ಹೊರತರಲಾಗಿದೆ. ಮುಂದೆ ಹಮ್ಮಿಕೊಳ್ಳಲಿರುವ ಹಾಗೂ ಮುನ್ನಡೆಯುತ್ತಿರುವ ಮಹತ್ವದ ಯೋಜನೆಗಳಲ್ಲಿ ಜೆ.ಡಿ.ಬರ್ನಾಲ್

ಅವರ 'ಸೈನ್ಸ್ ಇನ್ ಹಿಸ್ಟರಿ' ಗ್ರಂಥದ ನಾಲ್ಕು ಸಂಪುಟಗಳು, ವಿಲ್ ಡ್ಯೂರಂಟ್ ಅವರ 'ಸ್ಟೋರಿ ಆಫ್ ಸಿವಿಲಿಸೇಷನ್'ನ ಉಳಿದ ಎಂಟು ಸಂಪುಟಗಳು (೪ ರಿಂದ ೧೧), ವಿಜ್ಞಾನ-ತಂತ್ರಜ್ಞಾನಗಳಿಗೆ ಸಂಬಂಧಿಸಿದ ಸುಮಾರು ೧೦೦ ಗ್ರಂಥಗಳು, ಸೋಮದೇವನ 'ಕಥಾಸರಿತ್ಸಾಗರ'ದ ಐದು ಸಂಪುಟಗಳು (೬ ರಿಂದ ೧೦) – ಇವನ್ನು ಮುಖ್ಯವಾಗಿ ಹೆಸರಿಸಬಹುದಾಗಿದೆ. 'ಭಾರತೀಯ ವಿಜ್ಞಾನ ಸಂಸ್ಥೆ'ಯಂಥ ಅಂತರರಾಷ್ಟ್ರೀಯ ಖ್ಯಾತಿಯ ಸಂಶೋಧನ ಸಂಸ್ಥೆಯ ಸಹಕಾರದೊಂದಿಗೆ ಇಂಗ್ಲಿಷ್ ಮತ್ತು ಜಾಪನೀಸ್ ಭಾಷೆಗಳಲ್ಲಿ ಮಾತ್ರ ಲಭ್ಯವಿರುವ 'ಷಾಕ್ ವೇವ್ಸ್'ನಂಥ ಗ್ರಂಥವೂ ಕನ್ನಡದಲ್ಲಿ ಹೊರಬರಲಿದೆ. 'ಅಂತರರಾಷ್ಟ್ರೀಯ ಕನಕದಾಸ ಮಿಷನ್' ಸಂಸ್ಥೆಯ ನೆರವಿನೊಂದಿಗೆ ಕನಕದಾಸರ ಸಾಹಿತ್ಯದ ಅನುವಾದ ಕಾರ್ಯವೂ ಆರಂಭಗೊಳ್ಳಲಿದೆ. ಹೀಗಾಗಿ, ಕನ್ನಡ ಪ್ರಕಾಶನದ ಕ್ಷೇತ್ರದಲ್ಲಿಯೂ, ಮಹತ್ವದ ಹೆಜ್ಜೆ-ಗುರುತುಗಳನ್ನು ಕುವೆಂಪು ಭಾಷಾ ಭಾರತಿ ಮೂಡಿಸುತ್ತ ಮುನ್ನಡೆಯಲಿದೆ.

**ಖಾಸಗಿ ಪ್ರಕಾಶಕರ ಸಹಭಾಗಿತ್ವ :** ಖಾಸಗಿ ಪ್ರಕಾಶಕರ ಸಹಾಯ-ಸಹಕಾರಗಳೊಂದಿಗೆ ಕನ್ನಡ ಸಾಹಿತ್ಯವನ್ನು ರಾಷ್ಟ್ರೀಯ ಮಟ್ಟದಲ್ಲಿ ಪ್ರಚುರಗೊಳಿಸುವ ಸಲುವಾಗಿ ರಾಜ್ಯ ಸರ್ಕಾರ **ವಿಶೇಷ ಯೋಜನೆ**ಯೊಂದಕ್ಕೆ ಅನುಮತಿ ನೀಡಿದೆ. ಅದರ ಮೇರೆಗೆ ಕನ್ನಡ ಸಾಹಿತ್ಯ ಕೃತಿಗಳನ್ನು ಇತರ ಭಾರತೀಯ ಮತ್ತು ವಿದೇಶೀ ಭಾಷೆಗಳಲ್ಲಿ ಹೊರತರುವ ಪ್ರತಿಷ್ಠಿತ ಪ್ರಕಾಶನ ಸಂಸ್ಥೆಗಳಿಗೆ ಪ್ರಕಟಣೆಯ ಮೂಲಧನವನ್ನು ಮುಂಗಡವಾಗಿ ನೀಡಿ, ಮೂರು ವರ್ಷಗಳಲ್ಲಿ ಅವರು ಈ ಮುಂಗಡ ಹಣವನ್ನು ಹಿಂದಿರುಗಿಸುವಂತೆ ಈ ಕಾರ್ಯಕ್ರಮ ರೂಪಿಸಲಾಗಿದೆ. ಇತರ ಕ್ಷೇತ್ರಗಳಿಗೆ ಸರ್ಕಾರಗಳು ಅನೇಕ ರೀತಿಯಲ್ಲಿ ನೆರವಾಗುತ್ತಿದ್ದರೂ, ಪ್ರಕಟಣ ಕ್ಷೇತ್ರಕ್ಕೆ ಈ ಬಗೆಯ ನೆರವು ಇರಲಿಲ್ಲವಾದ್ದರಿಂದ ಇದೊಂದು ಬಗೆಯ ವಿನೂತನ ಯೋಜನೆ ಆಗಿದೆ ಎಂದೂ, ಇಂಥ ಯೋಜನೆಯಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವುದಾಗಿಯೂ ಅನೇಕ ಪ್ರಕಾಶನ ಸಂಸ್ಥೆಗಳು ಈಗಾಗಲೇ ಮುಂದೆ ಬಂದಿವೆ. ಈ ದಿಕ್ಕಿನಲ್ಲಿ ವ್ಯವಸ್ಥಿತ ಕಾರ್ಯಕ್ರಮಗಳನ್ನು ರೂಪಿಸಲಾಗುತ್ತಿದೆ. ಹೀಗೆ ಪ್ರಕಟಣೆಯ ಕಾರ್ಯಕೈಗೊಳ್ಳುವ ಮೂಲಕ ಕನ್ನಡೇತರ ಭಾಷಾ-ಸಾಹಿತ್ಯವಲಯಗಳಲ್ಲಿ ಕನ್ನಡದ ಮೇರು ಕೃತಿಗಳು ಪರಿಚಯಗೊಳ್ಳಲೂ, ಜನಪ್ರಿಯವಾಗಲೂ ಸಹಾಯವಾಗುತ್ತದೆಂದು ನಂಬಲಾಗಿದೆ.

ಕರ್ನಾಟಕ ಸರ್ಕಾರದ ಉದಾರ ನೆರವಿನಿಂದ ಇಂಥ ಮಹತ್ವದ ಮತ್ತು ಬಹು ಆಯಾಮದ ಕಾರ್ಯಚಟುವಟಿಕೆಗಳನ್ನು ಕೈಗೊಳ್ಳುವ ಮೂಲಕ ಭಾರತೀಯ ಮತ್ತು ವಿದೇಶಿ ಭಾಷೆಗಳ ನಡುವೆ ಒಂದು ಸಾಂಸ್ಕೃತಿಕ ಸೇತುವೆಯಾಗಿ, ಮಿನಿ ವಿಶ್ವವಿದ್ಯಾನಿಲಯವಾಗಿ 'ಕುವೆಂಪು ಭಾಷಾ ಭಾರತಿ ಪ್ರಾಧಿಕಾರ' ಕಾರ್ಯ ನಿರ್ವಹಿಸಲಿದೆ. ನಾಡಿನ ಗಣ್ಯ ವಿದ್ವಾಂಸರ ಸಹಾಯ-ಸಹಕಾರಗಳನ್ನು ಪಡೆದುಕೊಂಡು ಈ ಕಾರ್ಯವನ್ನು ನಿರ್ವಹಿಸಲಾಗುತ್ತದೆ. ಹೀಗಾಗಿ, ಕುವೆಂಪು ಭಾಷಾ ಭಾರತಿ ಕನ್ನಡ ನಾಡಿನ ಇತಿಹಾಸದಲ್ಲಿ ಮಾತ್ರವಲ್ಲದೆ, ಭಾರತೀಯ



ಸಾಹಿತ್ಯಿಕ-ಸಾಂಸ್ಕೃತಿಕ ಕ್ಷೇತ್ರದಲ್ಲಿ ಒಂದು ಮಹತ್ವದ ಸಂಸ್ಥೆಯಾಗಿ ರೂಪುಗೊಳ್ಳಲಿದೆಯೆಂದೂ, ಕನ್ನಡ ನಾಡಿನ ವಿದ್ವದ್‌ವಲಯಕ್ಕೆ, ಸಾಹಿತ್ಯ ಪ್ರೇಮಿಗಳಿಗೆ, ಕುವೆಂಪು ಅವರ ಅಭಿಮಾನಿಗಳಿಗೆ ಇದು ಸಂತಸದ ಸಂಗತಿ ಆಗಲಿದೆ ಎಂದೂ ನಂಬಿದ್ದೇವೆ.

ಮಲಯಾಳಂ ಭಾಷೆಯ ಪ್ರಖ್ಯಾತ ಲೇಖಕರಲ್ಲಿ ಒಬ್ಬರಾಗಿರುವ ಶ್ರೀ ಉಣ್ಣಿ ಕೃಷ್ಣನ್ ತಿರುವಾಯಿಯೋಡ್ ಅವರ 'ದೃಕ್‌ಸಾಕ್ಷಿ' ಭಾರತದ ಪ್ರಧಾನ ಮಂತ್ರಿಗಳಾಗಿದ್ದು, ತಮ್ಮ ಅಂಗರಕ್ಷಕರಿಂದಲೇ ಹತ್ಯೆಗೊಳಗಾದ ಶ್ರೀಮತಿ ಇಂದಿರಾಗಾಂಧೀ ಅವರ ಬದುಕಿನ ಆ ದುರಂತದ ಬಳಿಕ ನಡೆದ ಸಿಖ್ಖರ ನರಮೇದದ ಹೃದಯ ವಿದ್ರಾವಕ ಘಟನೆಗಳನ್ನು ನಿರೂಪಿಸುವ ಕಾದಂಬರಿ. ಐತಿಹಾಸಿಕ ಪರಿಪ್ರೇಕ್ಷ್ಯದಲ್ಲಿ ಈ ಘಟನೆಯನ್ನು, ಅದಕ್ಕೆ ಕಾರಣವಾಗಿರುವ ಸಾಮಾಜಿಕ ಐತಿಹಾಸಿಕ ಮತ್ತು ಧಾರ್ಮಿಕ ವ್ಯವಸ್ಥೆಗಳನ್ನು ವಿಶ್ಲೇಷಿಸಿರುವುದು ಈ ಕೃಷಿಯ ಹೆಗ್ಗಳಿಕೆಯೇ ಆಗಿದೆ. ಇಂಥ ಒಂದು ಮಹತ್ವದ ಕೃತಿಯನ್ನು ಕನ್ನಡದಲ್ಲಿ ಹೊರತರಲು ಅವಕಾಶ ಮಾಡಿಕೊಟ್ಟಿರುವ ಶ್ರೀ ಉಣ್ಣಿಕೃಷ್ಣನ್ ಅವರಿಗೆ ಪ್ರಾಧಿಕಾರ ಕೃತಜ್ಞವಾಗಿದೆ.

ಮಲಯಾಳಂ ಮತ್ತು ಕನ್ನಡ ಭಾಷೆಗಳ ನಡುವೆ ಅರ್ಥಪೂರ್ಣ ರೀತಿಯಲ್ಲಿ ಕೊಳು-ಕೊಡೆಯ ಸಂಬಂಧವನ್ನು ನಡೆಸಿಕೊಂಡು ಹಾಗೂ ವಿಸ್ತರಿಸಿಕೊಂಡು ಬರುತ್ತಿರುವ ಶ್ರೀ ಕೆ.ಕೆ. ನಾಯರ್ ಅವರು ಈ ಕೃತಿಯನ್ನು ಸಮರ್ಥವಾಗಿ ಅನುವಾದಿಸಿಕೊಟ್ಟಿದ್ದಾರೆ. ಪ್ರಕಟಣೆಯ ಹಕ್ಕುಗಳನ್ನು ಪ್ರಾಧಿಕಾರಕ್ಕೆ ದೊರಕಿಸಿಕೊಡುವಲ್ಲಿಯೂ ಅವರು ನೆರವಾಗಿದ್ದಾರೆ. ಇದಕ್ಕಾಗಿ ಅವರಿಗೆ ನಮ್ಮ ವಿಶೇಷ ವಂದನೆಗಳು. 'ತರಂಗ ವಾರಪತ್ರಿಕೆ'ಯಲ್ಲಿ ಈ ಮೊದಲು ಧಾರಾವಾಹಿಯಾಗಿ ಪ್ರಕಟವಾಗಿದ್ದ ಈ ಕೃತಿ ಈಗ ಕೃತಿರೂಪದಲ್ಲಿ ಹೊರಬರುತ್ತಿರುವುದನ್ನು ಕನ್ನಡದ ಸಹೃದಯರು ಸ್ವಾಗತಿಸುತ್ತಾರೆಂದು ನಂಬಿದ್ದೇವೆ. ಇಂಥ ಕಾರ್ಯಗಳ ಮೂಲಕ ದಕ್ಷಿಣದ ಭಾಷೆಗಳ ನಡುವೆ ಪರಸ್ಪರ ಅರಿವು ಮತ್ತು ಸೌಹಾರ್ದತೆ ಬೆಳೆಯಲು ಸಹಾಯವಾಗುತ್ತದೆಂದೂ ನಂಬಿದ್ದೇವೆ.

ಈ ಕೃತಿಯ ಕರಡುಗಳನ್ನು ಪರಿಶೀಲಿಸುವಲ್ಲಿ ನೆರವಾಗಿರುವ ಪ್ರೊ॥ ಎಚ್.ಎಸ್. ಹರಿಶಂಕರ್ ಮತ್ತು ಶ್ರೀಮತಿ ಆರತಿ ನಾಗೇಶ್ ಅವರುಗಳಿಗೆ ನಮ್ಮ ವಂದನೆಗಳು. ಪ್ರಾಧಿಕಾರದ ಕೆಲಸ-ಕಾರ್ಯಗಳಲ್ಲಿ ಹಾಗೂ ಪ್ರಕಟಣೆಯ ವಿಚಾರದಲ್ಲಿ ಹೃತ್ಪೂರ್ವಕವಾಗಿ ತಮ್ಮನ್ನು ತೊಡಗಿಸಿಕೊಂಡಿರುವ ಪ್ರಾಧಿಕಾರದ ರಿಜಿಸ್ಟ್ರಾರ್ ಪಿ. ನಾರಾಯಣಸ್ವಾಮಿ ಮತ್ತು ಇತರ ಸಿಬ್ಬಂದಿ ವರ್ಗದವರಿಗೂ, ಸುಂದರವಾಗಿ ಮುದ್ರಿಸುವಲ್ಲಿ ಸಹಕರಿಸಿರುವ ಮೆ॥ ಮಂಯೂರ ಪ್ರಿಂಟ್ ಆಡ್ಸ್‌ನ ಶ್ರೀ ಬಿ.ಎಲ್. ಶ್ರೀನಿವಾಸ ಮತ್ತು ಅವರ ಸಿಬ್ಬಂದಿ ವರ್ಗದವರಿಗೂ ನಮ್ಮ ವಂದನೆಗಳು.

**ಪ್ರಧಾನ್ ಗುರುದತ್ತ**

**Blank**



## ಪರಿವಿಡಿ


| | |
|---|---|
| ಮೊದಲ ಮಾತು | v |
| ಶುಭಾಕಾಂಕ್ಷೆ | vi |
| ಹಾರೈಕೆ | vii |
| ಪ್ರಾಸ್ತಾವಿಕ ನುಡಿ | viii |
| ಪೀಠಿಕೆ | x |
| ಅಧ್ಯಾಯ ೧ ಪ್ರಧಾನಿಯ ಹತ್ಯೆ | ೧ |
| ಅಧ್ಯಾಯ ೨ ಪ್ರತೀಕಾರದ ಬಿಸಿ | ೧೨ |
| ಅಧ್ಯಾಯ ೩ ಮನಮೋಹನನ ಉಮ್ಮಳ | ೨೩ |
| ಅಧ್ಯಾಯ ೪ ಸಮಾಧಾನಿ ಹರ್‌ಭಜನ್ ಸಿಂಗ್ | ೩೬ |
| ಅಧ್ಯಾಯ ೫ ಮುಂದಿನ ಪ್ರಧಾನಿ ಯಾರು? | ೪೮ |
| ಅಧ್ಯಾಯ ೬ ಊರಿನಿಂದ ಬರಲಿರುವ ಇಂದಿರಾ | ೬೨ |
| ಅಧ್ಯಾಯ ೭ ಭುಗಿಲೆದ್ದ ಪ್ರತೀಕಾರದ ಕಿಡಿಗಳು | ೭೪ |
| ಅಧ್ಯಾಯ ೮ ಸರಳು, ದೊಣ್ಣೆಗಳನ್ನು ಹಿಡಿದ ಅಕ್ಟೋಪಸ್ | ೮೮ |
| ಅಧ್ಯಾಯ ೯ ಮನೀಂದರ್ ಮತ್ತು ಸುನೀಂದರ್ | ೧೦೨ |
| ಅಧ್ಯಾಯ ೧೦ ಗುರುದಯಾಳನ ಚರಂಡಿವಾಸ | ೧೧೨ |
| ಅಧ್ಯಾಯ ೧೧ ಗುರುದೇವ್ ಸಿಂಗ್ | ೧೨೫ |
| ಅಧ್ಯಾಯ ೧೨ ನೋವಿನಲ್ಲೂ ನಕ್ಕ ಮುಖ | ೧೩೨ |
| ಅಧ್ಯಾಯ ೧೩ ಸಂಶಯದ ಸುಳಿಗಳು | ೧೪೩ |
| ಅಧ್ಯಾಯ ೧೪ ಉಪಕಾರ್ ಸಿಂಗ್ | ೧೫೪ |
| ಅಧ್ಯಾಯ ೧೫ ದರ್ಶನಳ ಮೇಲೆ ಆಕ್ರಮಣ | ೧೬೪ |
| ಅಧ್ಯಾಯ ೧೬ ರಕಬ್‌ಗಂಜ್ ಗುರುದ್ವಾರದಲ್ಲಿ | ೧೭೨ |
| ಅಧ್ಯಾಯ ೧೭ ಅಡುಗೆ ಮನೆಯಲ್ಲಿ ಸಿಂಹಗಳು | ೧೮೦ |
| ಅಧ್ಯಾಯ ೧೮ ಇಂದುವಿನ ಇಂದಿರಾ ನೆನಪುಗಳು | ೧೯೦ |
| ಅಧ್ಯಾಯ ೧೯ ಗಡ್ಡ, ಮೀಸೆಗಳಿಗೆ ಕೊನೆಯ ನಮಸ್ಕಾರ | ೨೦೦ |

ಅಧ್ಯಾಯ ೨೦ ಉರಿದು ಹೋದ ತ್ರಿಲೋಕಪುರಿ ೨೦೮
ಅಧ್ಯಾಯ ೨೧ ಇಂದೂ ಕಂಡ ರಕ್ತಪಾತ ೨೧೮
ಅಧ್ಯಾಯ ೨೨ ಬಿಡುಗಡೆ ೨೩೦
ಅಧ್ಯಾಯ ೨೩ ಇಂದೂ ದೀದಿ ೨೩೯
ಅಧ್ಯಾಯ ೨೪ ಚೇತರಿಸಿಕೊಂಡ ಗುರುದೇವ್‌ಸಿಂಗ್ ೨೪೮
ಅಧ್ಯಾಯ ೨೫ ರವಿ ಕಂಡ ಇಂದೂ ೨೫೬
ಅಧ್ಯಾಯ ೨೬ ಸಯನೈಡ್ ಕ್ಯಾಪ್ಸೂಲ್‌ಗಳು ೨೬೪
ಅಧ್ಯಾಯ ೨೭ ರವಿಯ ಅಳಲು ೨೭೧
ಅಧ್ಯಾಯ ೨೮ ಇತಿಹಾಸದಲ್ಲಿ ಲೀನವಾದ ಇಂದಿರಾ ೨೭೭



# ಇಂದಿರಾಗಾಂಧಿ ಹತ್ಯೆಯ ಬಳಿಕ

## ಅಧ್ಯಾಯ ೧

# ಪ್ರಧಾನಿಯ ಹತ್ಯೆ

ಅಂದೂ ರವಿ ಹೊತ್ತಿಗೆ ತುಸು ಮುನ್ನವೆ ಆಫೀಸ್ ತಲುಪಿದ. ಅದೇ ಆತನ ರೂಢಿ. ಸಹೋದ್ಯೋಗಿಗಳು ಬಂದು ತಲುಪುವಷ್ಟರಲ್ಲಿ ಆ ದಿನ ಮಾಡಿ ಮುಗಿಸಬೇಕಾದ ಕೆಲಸಗಳ ಕುರಿತು ಒಂದು ಸಾಮಾನ್ಯ ರೂಪುರೇಷೆ ಮನಸ್ಸಿನಲ್ಲಿ ಸಿದ್ಧವಾಗಿರುತ್ತದೆ. ಕೆಳಗಿನ ಪ್ರತಿಯೊಂದು ಆಫೀಸ್‌ನಿಂದಲೂ ನಿರೀಕ್ಷಿಸಬೇಕಾದ ಫೈಲ್‌ಗಳ ಮತ್ತು ವರದಿಗಳ ಟಿಪ್ಪಣಿಯನ್ನು ಆತ ಪ್ಯಾಡ್‌ನಲ್ಲಿ ಬರೆದಿಡುವನು. ಮೇಲಿನವರೊಂದಿಗೆ ಚರ್ಚಿಸಬೇಕಾದ ಕಾರ್ಯಗಳಿಗೆ ಸಂಬಂಧಿಸಿದ ಟಿಪ್ಪಣಿಗಳನ್ನು ತಯಾರಿಸುವನು. ಡೆಸ್ಕ್ ಕ್ಯಾಲೆಂಡರ್‌ನಲ್ಲಿ ಅಂಕೆ ಹಾಕಿ ಬರೆದ ಕಾರ್ಯಗಳನ್ನು ಮತ್ತೊಮ್ಮೆ ಪರಿಶೀಲಿಸಿ ಪ್ರಾಮುಖ್ಯಕ್ಕನುಗುಣವಾಗಿ ಕ್ರಮೀಕರಿಸುವನು. ತನ್ನ ಪಿ.ಎ. ಬರುವಷ್ಟರಲ್ಲಿ ಡಿಕ್ಟೇಟ್ ಮಾಡಬೇಕಾದ ಫೈಲ್‌ಗಳನ್ನು ವರ್ಗೀಕರಿಸಿ ಇರಿಸುವನು.

ಆತ ಕ್ಯಾಲೆಂಡರ್ ನೋಡಿದ. ಅಕ್ಟೋಬರ್ ೩೧, ಬುಧವಾರ. ತಿಂಗಳ ಕೊನೆಯ ದಿನ; ಸಂಬಳದ ದಿನ. ಕೆಳಸ್ತರಗಳಲ್ಲಿ ಸಾಮಾನ್ಯವಾಗಿರುವ ಗೈರು ಹಾಜರಿ ಇಂದು ಕಡಿಮೆಯಾಗಿರುತ್ತದೆ. ಆದರೆ ಎರಡು ಗಂಟೆಯ ಅನಂತರ ಕ್ಯಾಶಿಯರ್ ಸಂಬಳ ಕೊಡಲು ಶುರು ಮಾಡುವಾಗಲೇ ಒಬ್ಬೊಬ್ಬರೇ ಕಾಣೆಯಾಗತೊಡಗುವರು. 'ಸಂಬಳ'ದ ದಿನದ ಉತ್ತರಾರ್ಧದಲ್ಲಿ ಕೆಲಸ ಮಾಡಬೇಕಾಗಿಲ್ಲ' ಎಂಬುದೂ ಸರಕಾರಿ ಕಚೇರಿಗಳ ಒಂದು ಅಲಿಖಿತ ನಿಯಮವೇ. ತುರ್ತಾಗಿ ಟೈಪ್ ಆಗಬೇಕಾದ ಕೆಲವು ಸ್ಟೇಟ್‌ಮೆಂಟ್‌ಗಳು ನೆನಪಿಗೆ ಬಂದವು. ಸೆಕ್ಷನ್ ಟೈಪಿಸ್ಟ್‌ಗಳಿಗೆಂದು ಪ್ರತ್ಯೇಕ ಗುರುತು ಹಾಕಿ ಮೂಲೆಯಲ್ಲಿ ಬರೆದ– 'ಇವತ್ತೇ ಟೈಪ್ ಮಾಡಿ. ತಾಳೆ ಮಾಡಿ ನೋಡಿ ಹಿಂತಿರುಗಿಸಬೇಕು'.

ಲೋಕಸಭೆಯಲ್ಲಿ ನೀಡಿದ್ದ ಭರವಸೆಗಳ ದೀರ್ಘ ಯಾದಿಯೊಂದು ಗಮನಕ್ಕೆ ಬಂತು. ಪಾರ್ಲಿಮೆಂಟ್ ಅಧಿವೇಶನಕ್ಕೆ ಇನ್ನೂ ಸಮಯವಿದೆ. ಆದರೆ, ಭರವಸೆಗಳನ್ನು ನೆರವೇರಿಸಲು ಅಗತ್ಯವಿರುವ ವಿವರಗಳನ್ನು ಇನ್ನೂರಕ್ಕಿಂತಲೂ ಹೆಚ್ಚು ಸಾರ್ವಜನಿಕ ವಲಯದ ಸಂಸ್ಥೆಗಳಿಂದ ಸಂಗ್ರಹಿಸಬೇಕಾಗಿದೆ. ಅನೇಕ ಸಂಸ್ಥೆಗಳು ದೇಶಾದ್ಯಂತ ಹರಡಿಕೊಂಡಿರುವ ತಮ್ಮ ಫೀಲ್ಡ್ ಯೂನಿಟ್‌ಗಳಿಂದ ವಿವರ ಸಂಗ್ರಹಿಸಬೇಕಾಗುತ್ತದೆ.

ಭರವಸೆಗಳನ್ನು ನೆರವೇರಿಸಲು ಕಾಲ ವಿಳಂಬ ಆಗಕೂಡದು. ಮಾನ್ಯ ಎಂ.ಪಿ.ಗಳಿಗೆ ಕೂಡ ತಾವು ಕೇಳುವ ಪ್ರಶ್ನೆಗಳಲ್ಲಿ ಹೆಚ್ಚಿನವುಗಳನ್ನು ಯಾಕಾಗಿ ಕೇಳುತ್ತೇವೆ ಎಂದು ಗೊತ್ತಿದೆಯೋ ಏನೋ? ಹೆಚ್ಚಿನವು ಪ್ರಶ್ನೆಗಾಗಿಯೇ ಇರುವ ಪ್ರಶ್ನೆಗಳೇ ಆಗಿರುತ್ತವೆ. ಕೆಲವು ಪಟ್ಟಭದ್ರ ಹಿತಾಸಕ್ತಿಗಳ ಸಂರಕ್ಷಣೆಯೇ ಆಗಿರುತ್ತದೆ ಕೆಲವು ಪ್ರಶ್ನೆಗಳ ಪರೋಕ್ಷ ಗುರಿ. ಎಂ.ಪಿ.ಗಳಿಗೆ ಮುಂದಿನ ಬಾರಿಯೂ ಚುನಾವಣೆಯಲ್ಲಿ ಸ್ಪರ್ಧಿಸಬೇಕಲ್ಲ. ಕಳೆದ ಐದು ವರ್ಷಗಳಲ್ಲಿ ಸಾರ್ವಜನಿಕ ವಲಯದಲ್ಲಿ ಲಾಭ ಗಳಿಸಿದ ಸಂಸ್ಥೆಗಳೆಷ್ಟು? ನಷ್ಟ ಉಂಟುಮಾಡಿದ ಸಂಸ್ಥೆಗಳೆಷ್ಟು? ಹೂಡಲಾದ ಬಂಡವಾಳದ ಮೊತ್ತ ಎಷ್ಟು? ಇಷ್ಟೇ ಬಂಡವಾಳವನ್ನು ಖಾಸಗಿ ವಲಯದಲ್ಲಿ ಹೂಡಿದ್ದರೆ ಸಾಮಾನ್ಯ ರೀತಿಯಲ್ಲಿ ಲಭ್ಯವಾಗುವ ಲಾಭವೆಷ್ಟು? ಸಾರ್ವಜನಿಕ ವಲಯದಲ್ಲಿ ಒಟ್ಟು ಕಾರ್ಮಿಕರು ಎಷ್ಟು ಮಂದಿ? ಅವರಲ್ಲಿ ಹಿಂದುಳಿದ ಜಾತಿ ಮತ್ತು ಪರಿಶಿಷ್ಟ ಪಂಗಡದವರು ಎಷ್ಟು ಮಂದಿ? ಸಾರ್ವಜನಿಕ ವಲಯದ ಸಂಸ್ಥೆಗಳು ಭೂಸ್ವಾಧೀನ ಮಾಡುವಾಗ ಹೊರ ಸಂಸ್ಥೆಗಳು ಭೂಸ್ವಾಧೀನ ಮಾಡುವಾಗ ಹೊರ ಹಾಕಲ್ಪಟ್ಟ ಬಡಪಾಯಿಗಳು ಎಷ್ಟು? ಅವರಲ್ಲಿ ಎಷ್ಟು ಮಂದಿಗೆ ಉದ್ಯೋಗ ನೀಡಲಾಗಿದೆ? ಸಾರ್ವಜನಿಕ ವಲಯದ ಕಂಪೆನಿಗಳು ಕಳೆದ ಐದು ವರ್ಷಗಳಲ್ಲಿ ನೀಡಿದ ಕನ್‌ಸಲ್‌ಟೇಷನ್ ಫೀ ಎಷ್ಟು? ಎಷ್ಟು ವಿದೇಶೀ ಕಂಪೆನಿಗಳೊಂದಿಗೆ ಪಾಲುಗಾರಿಕೆ ಒಪ್ಪಂದಕ್ಕೆ ಸಹಿ ಹಾಕಲಾಗಿದೆ? ಎಷ್ಟು ಕೋಟಿ ರೂಪಾಯಿ ವಹಿವಾಟಿಗೆ?

ಹೀಗೆ ಸಾಗುತ್ತಿವೆ ಪ್ರಶ್ನೆಗಳು–ಎಷ್ಟೋ ಬಾರಿ ಪುನರಾವರ್ತಿಸಲ್ಪಟ್ಟ ಪ್ರಶ್ನೆಗಳು. ಆತ ಪ್ರಶ್ನೆಗಳನ್ನು ವಿಷಯಗಳಿಗೆ ಅನುಗುಣವಾಗಿ ಸಂಬಂಧಿಸಿದ ಆಫೀಸರ್‌ಗಳಿಗೆಂದು ಗುರುತು ಹಾಕಿದ. ಅಗತ್ಯವಾದ ವಿವರಗಳನ್ನು ಸಂಗ್ರಹಿಸಲು ಎರಡು ವಾರಗಳ ಕಾಲಾವಕಾಶವನ್ನೂ ನೀಡಿದ.

ಡೆಸ್ಕ್ ಕ್ಯಾಲೆಂಡರ್‌ನಲ್ಲಿ ಅಡಿಗೆರೆ ಹಾಕಿದ್ದ ಮೊದಲ ವಿಷಯ ಪ್ರಧಾನಮಂತ್ರಿಗಳಿಗಾಗಿ ಸಿದ್ಧಗೊಳಿಸಬೇಕಾದ ಭಾಷಣ. ಸಾರ್ವಜನಿಕ ವಲಯದ ಮುಖ್ಯಸ್ಥರುಗಳ ದ್ವಿದಿನ ಸಮ್ಮೇಳನವನ್ನು ಪ್ರಧಾನಿ ಉದ್ಘಾಟಿಸಲಿರುವರು. ಸಮಾರಂಭ ಜರುಗಲಿರುವುದು ವಿಜ್ಞಾನ ಭವನದಲ್ಲಿ. ನವೆಂಬರ್ ೭ರಂದು. ಇವತ್ತೇ ಮೊದಲ ಕರಡು ತಯಾರಿಸಿದರೇನೇ ಕಾರ್ಯದರ್ಶಿ ಮತ್ತು ಸಚಿವರ ಅನುಮತಿ ಪಡೆದು ಪಿ.ಎಂ.ಆಫೀಸ್‌ಗೆ ಭಾಷಣವನ್ನು ನಿಶ್ಚಿತ ಸಮಯಕ್ಕೆ ತಲುಪಿಸಲು ಸಾಧ್ಯವಾದೀತು.

ಆತ ಎದ್ದ. ಕ್ಯಾಬಿನ್‌ನ ಬಾಗಿಲಿನ ಗಾಜಿನ ಮೂಲಕ ಪಿ.ಎ.ಯ ಕೋಣೆಯತ್ತ ದೃಷ್ಟಿ ಹಾಯಿಸಿದ. ಇಲ್ಲ. ಪಿ.ಎ. ಇನ್ನೂ ಬಂದಿಲ್ಲ. ಸೆಕ್ಷನ್‌ಗಳಲ್ಲಿ ಒಬ್ಬೊಬ್ಬರೆ ಬಂದು ತಲುಪುತ್ತಾ ಇರುವರಷ್ಟೇ. ಗಡಿಯಾರದತ್ತ ನೋಡಿದ. ಒಂಬತ್ತೂ ಐವತ್ತಷ್ಟೇ. ಸರಕಾರಿ ಕಚೇರಿ ವೇಳೆ ಶುರುವಾಗಲು ಇನ್ನೂ ಇಪ್ಪತ್ತೈದು ನಿಮಿಷ ಕಳೆಯಬೇಕು.



ತಾನು ತಾಳ್ಮೆಗೆಡುವುದರಲ್ಲಿ ಅರ್ಥವಿಲ್ಲವೆಂದು ತುಸು ಅಪರಾಧ ಪ್ರಜ್ಞೆಯೊಂದಿಗೇ ಅಂದುಕೊಂಡನಾತ.

ಕಿಟಕಿ ಪರದೆ ಸರಿಸಿ ಹೊರಕ್ಕೆ ದಿಟ್ಟಿಸಿದ. ಎತ್ತರವಾದ ಕಟ್ಟಡದ ನಾಲ್ಕನೆಯ ಮಹಡಿಯಿಂದ ಗೋಚರಿಸುವ ರಾಜಧಾನಿ ನಗರಿಯನ್ನು ವೀಕ್ಷಿಸಿದ. ಜಾಮುನ್ ಮರಗಳ ಮತ್ತು ಬೇವಿನ ಮರಗಳ ಹಸುರಿನ ಮೇಲ್ಗಡೆ ಅಲ್ಲಲ್ಲೆ ಎದ್ದು ತೋರುವ ಕಾಂಕ್ರೀಟ್ ಕಟ್ಟಡಗಳು. ಉಗ್ರವಾದ ಬೇಸಗೆಯ ಗರಿಗಳು ಉದುರಿವೆ. ಚಳಿಗಾಲ ಇನ್ನೂ ಸಮೀಪಿಸಿಲ್ಲ. ಆಕಾಶ ತುಸು ಮಬ್ಬಾಗಿದೆ. ಸೂರ್ಯನಿಗೆ ಒಂದು ಅಲ್ಯೂಮಿನಿಯಂ ಬಟ್ಟಲಿನ ಹೊಳಪಷ್ಟೇ ಇದೆ.

ದೂರದಲ್ಲಿ ಸೆಕ್ರೆಟರಿಯೇಟ್ ಕಟ್ಟಡಗಳ ರೂಪರೇಷೆಗಳು ಗೋಚರಿಸುತ್ತಿವೆ. ರಾಷ್ಟ್ರಪತಿ ಭವನದ ಎತ್ತರದ ಗೋಪುರದ ಧ್ವಜಸ್ತಂಭದ ಪತಾಕೆ ಕಾಣಿಸುತ್ತಿಲ್ಲ. ರಾಷ್ಟ್ರಪತಿ ಪ್ರವಾಸದಲ್ಲಿರಬಹುದು. ಹೌದು. ಮಧ್ಯಪೂರ್ವ ದೇಶಗಳಲ್ಲೆಲ್ಲೋ ಇರುವರೆಂದು ಪತ್ರಿಕೆಗಳಲ್ಲಿ ಕಂಡದ್ದು ನೆನಪಾಯಿತು. ಲುಟ್‌ನ ಕಲ್ಪನೆಯಲ್ಲಿ ರೂಪುಗೊಂಡ ಘನ ಗಂಭೀರ ಕಟ್ಟಡಗಳು. ಇಂಡಿಯಾ ಗೇಟಿನಿಂದ ರೆಯ್‌ಸಿಲಗುಡ್ಡದ ಕಡೆಗೆ ರಾಷ್ಟ್ರಪತಿ ಭವನದ ಕೆಂಪು ಮರಳು ಹಾಸಲಾದ ಪ್ರಾಂಗಣವನ್ನು ವಿಭಜಿಸುವ ರಾಜಪಥದಲ್ಲಿ ನಿಧಾನವಾಗಿ ಸರಿಯುತ್ತಿರುವ ಕಾರುಗಳು. ಈ ಎತ್ತರ ಮತ್ತು ದೂರದಿಂದ ಕಾಣುವಾಗ ಅವು ಅದೃಶ್ಯರಾಗಿರುವ ಯಾವುದೋ ಮಕ್ಕಳು ಆಡಲೆಂದು ಎಸೆದು ಕೊಟ್ಟ ಆಟಿಕೆಗಳೆಂದೇ ಅನ್ನಿಸುತ್ತದೆ.

ರಾಜಪಥದ ಪಕ್ಕದ ವಿಶಾಲವಾದ ವಿಜಯ್ ಚೌಕದ ಕೆಂಗಲ್ಲಿನ ದೀಪಗಳನ್ನು ನೆನಪಿಸುವ ಜಲಪಾತಗಳಲ್ಲಿ ಬಿಳಿಚಿದ ಸೂರ್ಯಕಿರಣಗಳು ಹೊಳೆಯುತ್ತಿವೆ. ಇಂಡಿಯಾ ಗೇಟಿನ ಕಮಾನುಗಳ ಕೆಳಗೆ ಶಿಲೆಯಲ್ಲಿ ಕೆತ್ತಲಾದ ಅನಶ್ವರ ಹೆಸರುಗಳು–ಯುದ್ಧದಲ್ಲಿ ಆಹುತಿಯಾದ ಜೀವಗಳು. ಎಷ್ಟೋ ಬಾರಿ ಗುಡುಗಿದ್ದ ಹಾಗೂ ಬಹಳಷ್ಟು ಜೀವಗಳನ್ನು ನಂದಿಸಿದ್ದ ಬಂದೂಕು ತಲೆಕೆಳಗಾಗಿ ನಿಂತುಕೊಂಡು ನಿರಂತರ ತಪಸ್ಸು ಮಾಡುತ್ತಾ ಇದೆ. ಅನಾಥವಾದ ಒಂದು ಹೆಲ್ಮೆಟ್ ಒಂದು ಬೇತಾಳದಂತೆ ನೇತಾಡುತ್ತಿದೆ.

ಮಬ್ಬಾಗಿರುವ ವಾತಾವರಣದಲ್ಲಿ, ದೂರದಲ್ಲಿ ಎಲ್ಲೊ ಸುರಿದ ಮಳೆಯ ತೇವವಿದೆ. ಯುದ್ಧದ, ರಕ್ತದ, ಮರಣದ ಹಾಗೂ ವೈಧವ್ಯದ ವ್ಯಥೆಗಳೊಂದಿಗೆ ಅಲ್ಲಿ ಆ ಜ್ವಾಲೆ ಈಗಲೂ ನಂದದೆಯೇ ಇದೆ. ಆ ಜ್ಯೋತಿಗೆ ಅದರದ್ದೇ ಆದ ಶಾಪವಿದೆ... ಯಾವತ್ತೂ ನಂದಬಾರದೆಂದೇ ಅದರ ವಿಧಿಯೋ ಏನೋ.

ಪಕ್ಕದಲ್ಲೆ ಟ್ರಾಫಿಕ್ ಕುದುರಿನ ಮಧ್ಯದಲ್ಲಿ ಕೆಂಪು ಶಿಲೆಯ ಶಂಖಗಳಿಂದ ಚಿಮ್ಮುವ ಕಾರಂಜಿಗಳಿಂದ ಸುತ್ತುವರಿಯಲ್ಪಟ್ಟ ಒಂದು ಅನಾಥ ಮಂಟಪ. ಆತ ಜ್ಞಾಪಕಕ್ಕೆ ತಂದುಕೊಂಡ. ವರ್ಷಗಳ ಹಿಂದೆ ಆತ ದೆಹಲಿಗೆ ತಲುಪಿದಾಗ

ಆ ಮಂಟಪ ಅನಾಥವಾಗಿರಲಿಲ್ಲ. ಅಲ್ಲಿ ಸೂರ್ಯ ಮುಳುಗದ ಸಾಮ್ರಾಜ್ಯದ ಕಿರೀಟ ಧರಿಸಿ ಕೈಯಲ್ಲಿ ಅಧಿಕಾರ ದಂಡ ಹಿಡಿದ ಸಾಮ್ರಾಟ ತಲೆಯೆತ್ತಿ ನೆಟ್ಟಗೆ ನಿಂತುಕೊಂಡಿದ್ದ. ಸ್ವರಾಜ್ಯ ಪಡೆದು ಬಹಳ ವರ್ಷ ಕಳೆದಿದ್ದರೂ ಆ ಪ್ರತಿಮೆಯನ್ನು ಸ್ಥಳಾಂತರಿಸಲು ಪ್ರಜಾ ಪ್ರತಿನಿಧಿಗಳಿಗೆ ಸಮಯ ಸಿಕ್ಕಿರಲಿಲ್ಲ. ಮುಂದೆ ಯಾವತ್ತೊ ಆ ಪ್ರತಿಮೆಯನ್ನು ಸ್ಥಳಾಂತರಿಸಲಾಯಿತು. ಆದರೆ ಅದರ ಬದಲು ಬೇರೊಂದು ಇನ್ನೂ ಅಲ್ಲಿ ಸ್ಥಾಪನೆಯಾಗಲಿಲ್ಲ. ಖಾಲಿ ಗರ್ಭಗುಡಿಗಳೂ ಪ್ರತಿಮಾ ಮಂಟಪಗಳೂ ಯಾವುದರದ್ದೊ ಪ್ರತೀಕಗಳಾಗಿ ಉಳಿದುಕೊಂಡಿವೆ.

ಆದರೆ, ಎಲ್ಲ ಗರ್ಭಗುಡಿಗಳೂ ಖಾಲಿಯಲ್ಲ. ಮೌಂಟ್‌ಬ್ಯಾಟನ್ ಮತ್ತು ಎಡಿನ ಪ್ರಾರ್ಥನೆಗೆ ತೆರಳುತ್ತಿದ್ದ ಇಗರ್ಜಿಯ ಕೆಂಪು ಗೋಪುರ ಮತ್ತು ಎತ್ತರದ ಗುರುದ್ವಾರದ ಸ್ವರ್ಣ ಕಳಶ ಮತ್ತು 'ಮಿನಾರ್'ಗಳು ಕೂಡ. ಅಮೃತಶಿಲೆಯಲ್ಲಿ ಕೆತ್ತಲಾದ ಸುಂದರಾಂಗಿಯರೂ ಸುಂದರಾಂಗರೂ ಆದ ದೇವಿಯರೂ ಮತ್ತು 'ದೇವ'ರುಗಳೂ ನೆಲೆಸಿರುವ ಬಿರ್ಲಾ ಮಂದಿರ–ಷಾಜಹಾನ್‌ನ ಕೆಂಪುಕೋಟೆ ಮತ್ತು ಜುಮ್ಮಾ ಮಸೀದಿಗಳಿರುವುದು ಆತನ ದೃಷ್ಟಿ ಪಥದಾಚೆಗೆ. ಬೇರೆಲ್ಲೊ ಜನ ಗಿಜಿಗುಟ್ಟುವ ಚಾಂದಿನಿ ಚೌಕದ ಜೈನ ಮಂದಿರವೂ ಆತನಿಗೆ ಕಾಣಿಸುತ್ತಾ ಇಲ್ಲ. ಆದರೆ, ಪಕ್ಕದಲ್ಲೆ ಕೆಳಗೆ ಹುಮಾಯೂನ್‌ನ ಕಬರ್ ಮತ್ತು ನಿಜಾಮುದ್ದಿನ್ ಅವುಲಿಯಾದ ದರ್ಗಾ ಆತನ ದೃಷ್ಟಿಯಳತೆಯಲ್ಲೆ ಇವೆ.

ಹೆಜ್ಜೆ ದನಿ ಕೇಳಿದಾಗ ಆತ ಹಿಂತಿರುಗಿ ನೋಡಿದ. ಕೈಯಲ್ಲಿ ಶಾರ್ಟ್ ಹ್ಯಾಂಡ್ ನೋಟ್ ಮತ್ತು ಚೂಪು ಮಾಡಲಾದ ಪೆನ್ಸಿಲ್ ಹಿಡಿದುಕೊಂಡ ದರ್ಶನ್ ಕೌರ್.

ದರ್ಶನ್ ಚೆಲುವೆ. ಗೋಧಿ ಬಣ್ಣದ ಅವಳಿಗೆ ಬೊಗಸೆ ಕಣ್ಣುಗಳಿವೆ. ಶರತ್ಕಾಲದ ಆಕಾಶದ ಹಾಗೆ ಆರ್ದ್ರತೆ ಸೂಸುವ ನೀಲಿ ಕಂಗಳು. ಕಾಫಿ ಬ್ರೌನ್ ಬಣ್ಣದಲ್ಲಿ ಪ್ರಿಂಟ್‌ಗಳಿರುವ ಸಲ್ವಾರ್ ಕಮೀಜ್ ಅವಳಿಗೆ ಚೆನ್ನಾಗಿ ಒಪ್ಪುತ್ತದೆ. ನಗ್ನವಾದ ಮುಂಗೈಗಳದ್ದು ನುಣುಪಾದ ಬಿಳುಪು. ಕಪ್ಪು ಸ್ಟ್ರಾಪ್‌ನ ಒಂದು ಕೈಗಡಿಯಾರದ ಹೊರತು ಅವಳು ಆಭರಣಗಳಾವುದನ್ನೂ ತೊಟ್ಟುಕೊಂಡಿಲ್ಲ. ಹಣೆಯಲ್ಲಿ ಬೊಟ್ಟಾಗಲಿ ಪ್ರಸಾಧನ ಮಾಡಿಕೊಂಡದ್ದಾಗಲಿ ಇಲ್ಲ. 'ಚುನ್ನಿ'ಯ ತುದಿಯಿಂದ ನಸು ಕೆಂಚನೆಯ ಕೂದಲನ್ನು ಮರೆಮಾಚಿರುವಳು.

ನಾಗಲಿಂಗಂ ರಜೆಯಲ್ಲಿ ಹೋದಾಗ ತಾತ್ಕಾಲಿಕವಾಗಿ ಬಂದವಳು ದರ್ಶನ್. ತಮಿಳು ಬ್ರಾಹ್ಮಣರ ಹಾಗೂ ಬಳಿಕ ಕೇರಳದಿಂದ ಬಂದ ಹುಡುಗಿಯರ ಗುತ್ತಿಗೆಯಾಗಿದ್ದ ಶೀಘ್ರಲಿಪಿ ಕ್ಷೇತ್ರದಲ್ಲಿ ಅಪರೂಪವಾಗಿ ಮಾತ್ರ ಕಂಡು ಬರುತ್ತಿರುವವರು ಸರದಾರಿಣಿಗಳು. ಹಾಗಾಗಿ ತುಸು ಸಂಕೋಚದೊಂದಿಗೇ ದರ್ಶನ್‌ಳನ್ನು ಸ್ವಾಗತಿಸಿದ್ದ.

ಆದರೆ ಅವಳು ಬಲು ಬೇಗನೆ ತನ್ನ ಕೆಲಸದಲ್ಲಿ ಪ್ರಾವೀಣ್ಯವನ್ನು



ಸಂಪಾದಿಸಿದಳು. ಅಷ್ಟೇ ಅಲ್ಲ, ಪುಸ್ತಕ ಓದುವಿಕೆ, ಕಸೂತಿ ಕೆಲಸ ಮುಂತಾದ ಹವ್ಯಾಸಗಳು ಅವಳಿಗಿರಲಿಲ್ಲ. ಮೊದಲ ದಿನ ಡಿಕ್ಟೇಶನ್‌ನಲ್ಲಿ ಅವಳು ಒಂದೇ ತಪ್ಪು ಉಂಟುಮಾಡಿದ್ದು. 'ಯಸ್ಟರ್ ಡೇ' ಎಂಬುದನ್ನು 'ಟುಮಾರೊ' ಎಂಬುದಾಗಿ ಟೈಪ್ ಮಾಡಿದ್ದಳು. ನಿನ್ನೆ ಮತ್ತು ನಾಳೆಗಳು ಪರಸ್ಪರ ಬದಲಾಗುವ ಕಾಲ ಸಮಸ್ಯೆಗಳೆಂದು ಆ ಬಳಿಕ ಅರ್ಥವಾಯಿತು ಅವಳಿಗೆ. ಹಿಂದಿ ಮತ್ತು ಪಂಜಾಬಿ ಭಾಷೆಗಳಲ್ಲಿ 'ಕಲ್' ಎಂಬ ಶಬ್ದ ಎರಡನ್ನೂ ಪ್ರತಿನಿಧೀಕರಿಸುತ್ತದೆ. ಆದುದರಿಂದಲೇ ಅವಳು ತ್ರಿಕಾಲವನ್ನು ಅಂಗೀಕರಿಸಲು ಸಿದ್ಧಳಿರಲಿಲ್ಲ. ಮುಂದೆ ಈ ಶಬ್ದಗಳನ್ನು ಬಳಸುವಾಗಲೆಲ್ಲ ಆತ ನೆನಪಿಸುತ್ತಿದ್ದ. ಅಂತಹ ಪದಗಳು ಬರುವಾಗಲೆಲ್ಲ ಅವಳು ತುಟಿಗಳನ್ನಮುಕಿ ನಗುತ್ತಿದ್ದಳು. ಕೆಂಪಡರುತ್ತಿದ್ದ ಕೆನ್ನೆಗಳಲ್ಲಿ ಅಸ್ಪಷ್ಟವಾಗಿ ಗುಳಿಗಳು ಮೂಡುತ್ತಲೂ ಇದ್ದವು.

ರವಿ ಡಿಕ್ಟೇಷನ್ ಆರಂಭಿಸಿದ. ಪ್ರಧಾನಿಯವರ ಭಾಷಣದಲ್ಲಿ ಅಡಕಗೊಳಿಸಬೇಕಾದ ವಿಷಯಗಳ ಕುರಿತು ಚಿಕ್ಕ ಟಿಪ್ಪಣಿಗಳನ್ನೂ ಮೊದಲೇ ಸಿದ್ಧಪಡಿಸಿ ಇಟ್ಟುಕೊಂಡಿದ್ದನಾತ. ಮೇನೇಜ್‌ಮೆಂಟ್ ಜಾರ್ಗನ್‌ಗಳೂ ಪಾರಿಭಾಷಿಕ ಕಾಪಟ್ಯಗಳೂ ಸೋಂಕದ ಹಾಗೆ, ಹೇಳಬೇಕಾದ ಸಂಗತಿಗಳನ್ನು ಸರಳವಾಗಿಯೂ ನೇರವಾಗಿಯೂ ಹೇಳಬೇಕು. ಹೆಚ್ಚಿನ ಸಾರ್ವಜನಿಕ ಸಂಸ್ಥಾ ಮುಖ್ಯಸ್ಥರುಗಳು ಸಂಬಳ, ಸವಲತ್ತುಗಳೆಂದು ಭಾರೀ ಮೊತ್ತಗಳನ್ನು ತಿಂದು ಕೊಬ್ಬಿದ ಬಿಳಿಯಾನೆಗಳೇ ಸರಿ. ಅವರನ್ನೊಮ್ಮೆ ಬಡಿದೆಚ್ಚರಿಸಿ ಕಾರ್ಯೋನ್ಮುಖರನ್ನಾಗಿ ಮಾಡಬೇಕು. ಅದೇ ವೇಳೆ ಇಲಾಖೆ ಕಾರ್ಯದರ್ಶಿಗಳ ಅನಗತ್ಯ ಹಸ್ತಕ್ಷೇಪಗಳನ್ನು ನಿಯಂತ್ರಿಸಬೇಕು. ಸರಕಾರ ಮತ್ತು ಸಾರ್ವಜನಿಕ ವಲಯಗಳ ನಡುವಿನ ಸಂಬಂಧವನ್ನು ಇನ್ನಷ್ಟು ಅರ್ಥಪೂರ್ಣಗೊಳಿಸಬೇಕು.

ಭಾಷಣವನ್ನು ಈ ರೀತಿ ಆರಂಭಿಸಬಹುದು. "ಸಾರ್ವಜನಿಕ ವಲಯದ ಒಡೆಯ ಸರಕಾರ: ಯೋಜಕ ಸರಕಾರ, ಬಂಡವಾಳ ಹೂಡುವುದು ಸರಕಾರ, ಬ್ಯಾಂಕ್ ಸಹ ಸರಕಾರವೇ. ಹತೋಟಿ ಸಂಪೂರ್ಣ ಸರಕಾರದ ವಶದಲ್ಲೇ. ಸಾರ್ವಜನಿಕ ವಲಯದ ಬಗ್ಗೆ ಲೋಕಸಭೆಯೊಂದಿಗಿರುವ ಉತ್ತರದಾಯಿತ್ವ ಕೂಡ ಸರಕಾರದ್ದೇ. ಆದರೆ, ಈ ಸರಕಾರ ಅಂದರೆ ಯಾವುದು? ಅನಿಯತವಾದ ವ್ಯಾಖ್ಯಾತೀತವಾದ 'ಸರಕಾರ' ಎಂಬ ಸಂಸ್ಥೆ ನೀವೇ. ವಿವಿಧ ಸ್ತರಗಳಲ್ಲಿರುವ ನೌಕರ ವರ್ಗವೇ. ಯಂತ್ರಗಳೊಂದಿಗೆ ಸೆಣಸಾಡುವ ಕಾರ್ಮಿಕರೆ. ವ್ಯಾಪಕವಾದ ಅರ್ಥದಲ್ಲಿ ಈ ಸಂಸ್ಥೆಗಳೆಲ್ಲ ಜನತೆಯದ್ದು. ಜನತೆಯೇ ನಿಮ್ಮ ಯಜಮಾನ. ನಾನೂ, ನೀವೂ ಜನತೆಯ ಸೇವಕರು ಮಾತ್ರ. ೨೨೧ ಸಾರ್ವಜನಿಕ ಸಂಸ್ಥೆಗಳಲ್ಲಿ ಹೂಡಲಾದ ೪೩.೦೦೦ ಕೋಟಿ ರೂಪಾಯಿಗಳು ಕಾರ್ಖಾನೆಗಳಲ್ಲೂ ಹೊಲದಲ್ಲೂ ದುಡಿಯುವ ಕಾರ್ಮಿಕರದ್ದು. ಅಷ್ಟೂ ಹಣವನ್ನು ರಸಗೊಬ್ಬರ, ಕುಡಿಯುವ

ನೀರು, ದುಡಿಮೆಯ ಉಪಕರಣಗಳು, ಯಂತ್ರ ಸಾಮಗ್ರಿಗಳು, ಆಹಾರದ ಪೊಟ್ಟಣಗಳು, ಪ್ರವಾಸಾನುಕೂಲತೆಗಳು, ಉಡುಪುಗಳು, ಔಷಧಿಗಳೇ ಮುಂತಾದುವುಗಳ ರೂಪದಲ್ಲಿ ಭಾರತದ ಪೌರನಿಗೆ ಬಡ್ಡಿಸಮೇತ ಹಿಂತಿರುಗಿಸಬೇಕಾಗಿದೆ. ಆದುದರಿಂದಲೆ ನಾವು ನೌಕೆಗಳನ್ನೂ ವಿಮಾನಗಳನ್ನೂ ಮಾತ್ರವಲ್ಲ, ಟ್ರ್ಯಾಕ್ಟರುಗಳನ್ನೂ ಗರ್ಭ ನಿರೋಧಕಗಳನ್ನೂ ಕೂಡ ನಿರ್ಮಿಸುತ್ತಿದ್ದೇವೆ. ಮೋಟಾರು ಕಾರುಗಳನ್ನು, ಪೆಟ್ರೋ ಕೆಮಿಕಲ್ಸ್‌ಗಳನ್ನು ಮಾತ್ರವಲ್ಲ ಬ್ರೆಡ್, ಬೈಸಿಕಲ್ಲುಗಳನ್ನೂ ನಿರ್ಮಿಸುತ್ತಿದ್ದೇವೆ. ಅದರಿಂದಾಗಿಯೇ ರೂರ್ಕೆಲಾ, ಆವಡಿ ಮುಂತಾದ ಭಾರೀ ಸ್ಥಾವರಗಳ ಜತೆಜತೆಯಲ್ಲೇ ಸೆಣಬು ನಾರಿನ ಹಾಗೂ ಹತ್ತಿ ನೂಲಿನ ವಸ್ತ್ರಗಳನ್ನು ತಯಾರಿಸುವ ಚಿಕ್ಕ ಗಿರಣಿಗಳೂ ಸಾರ್ವಜನಿಕ ವಲಯದಲ್ಲಿ ಉಳಿದುಕೊಂಡಿವೆ. ಅದರಿಂದಾಗಿಯೇ..."

ಬಾಗಿಲು ತಟ್ಟಿದ ಸದ್ದು ಕೇಳಿಸಿತು. ಅನುಮತಿ ದೊರೆಯುವ ಮೊದಲೇ ಒಬ್ಬಾತ ಬಾಗಿಲು ತಳ್ಳಿ ತೆರೆದ.

ಕಿಶನ್‌ಲಾಲ್ ಎಂಬ ಸೆಕ್ಷನ್ ಆಫೀಸರ್. ಆತ ತೀರ ಗಲಿಬಿಲಿಗೊಂಡಿದ್ದ. ಆತನ ಕಣ್ಣುಗಳು ತುಂಬಿದ್ದವು. ಬಿಕ್ಕಳಿಸುತ್ತಲೆ ಆತ ಹೇಳಿಮುಗಿಸಿದ....

"ಸರ್. ಮ್ಯಾಡಂ ಈಸ್ ಶಾಟ್ ಅಟ್...." ಯಾವ ಮ್ಯಾಡಂ ಎಂದು ರವಿ ಪ್ರಶ್ನಿಸಲಿಲ್ಲ. ದೆಹಲಿಯಲ್ಲಿ ಮ್ಯಾಡಂ ಒಬ್ಬರೇ ತಾನೆ? ಆತ ಎರಡು ಬಾರಿ ಪುನರಾವರ್ತಿಸಿದಾಗಲೂ ಅದರ ಪೂರ್ಣಭಾರ ಪ್ರಜ್ಞೆಗೆ ಇಳಿಯಲಿಲ್ಲ. ದರ್ಶನ್‌ಳ ಮುಖ ವಿವರ್ಣವಾಯಿತು. ಅವಳು ಹಣೆಗೆ ಅಂಗೈ ಅಮುಕುತ್ತ ಪಿಸುಗುಟ್ಟಿದಳು. 'ಓ! ಮೈ ಗಾಡ್..... ಓ ಮೈ ಗಾಡ್....." ಕಿಶನ್ ಲಾಲ್‌ಗೆ ಹೆಚ್ಚಿನ ವಿವರಗಳು ಗೊತ್ತಿಲ್ಲ. ಪ್ರಧಾನಿಯವರಿಗೆ ಗುಂಡು ಹಾಕಲಾಗಿದೆ ಎಂಬುದರ ಹೊರತು. ಯಾರೆಂಬುದಾಗಲಿ, ಎಷ್ಟರ ಮಟ್ಟಿಗೆ ಅಪಾಯಕಾರಿ ಎಂದಾಗಲಿ ಆತನಿಗೆ ಗೊತ್ತಿಲ್ಲ.

ಅಷ್ಟರಲ್ಲಿ ಇಂಟರ್‌ಕಾಂ ಸದ್ದು ಮಾಡಿತು. ಫೋನ್ ಎತ್ತತೊಡಗುವಷ್ಟರಲ್ಲಿ ಔಟ್‌ಸೈಡ್ ಫೋನ್ ಟ್ರಿಣ್ ಗುಟ್ಟಿತು. ಒಂದು ಕ್ಷಣದೊಳಗೆ ಹಾಟ್‌ಲೈನ್ ಸಹ ಶಬ್ದ ಮಾಡಿತು.

ಮೂರು ಟೆಲಿಫೋನ್‌ಗಳೂ ಒಮ್ಮೆಲೇ ಸದ್ದುಂಟು ಮಾಡತೊಡಗಿದಾಗ ನಿಶ್ಚಲಳಾಗಿ ಕುಳಿತಿದ್ದ ದರ್ಶನ್ ಪ್ರಾರ್ಥಿಸುತ್ತಾ ಇದ್ದಳು. "ದೇವರೇ, ಗುಂಡಿಟ್ಟದ್ದು ಯಾರೇ ಆದರೂ ಸರ್ದಾರ್ ಆಗದಿರಲಿ! ಇಂದಿರಾಜಿಗೆ ಏನೂ ಆಗದಿರಲಿ!"

ರವಿ ಮೊದಲು ಕೆಂಪು ಬಣ್ಣದ ಹಾಟ್‌ಲೈನ್ ಫೋನ್ ಎತ್ತಿಕೊಂಡ. ಕರೆದದ್ದು ಕಾರ್ಯದರ್ಶಿ.

"ಪ್ಲೀಸ್ ಕಂ ಕ್ವಿಕ್ಲಿ........."

ರವಿ ಎದ್ದ.



ದರ್ಶನ್ ಮೇಜಿನ ಮೇಲೆ ಮುಖ ಅಮುಕಿ ಬಿಕ್ಕಿ ಬಿಕ್ಕಿ ಅತ್ತಳು.

ಗಡಿಯಾರದಲ್ಲಿ ಗಂಟೆ ಹತ್ತು.

* * *

ಕಾರ್ಯದರ್ಶಿಯ ಕೋಣೆಯೊಳಗೆ ಹೆಪ್ಪುಗಟ್ಟಿಕೊಂಡಿದೆ ಮೌನ. ಮೇನೇಜ್‌ಮೆಂಟ್ ತಜ್ಞ ಮಿತ್ತಲ್ ಒಂದು ಪ್ರತಿಮೆಯ ಹಾಗೆ ಕುಳಿತಿದ್ದಾರೆ. ಕ್ರೈಸಿಸ್ ಮ್ಯಾನೇಜ್‌ಮೆಂಟ್ ಬಗ್ಗೆ ಗಂಟೆಗಟ್ಟಲೆ ರಸವತ್ತಾಗಿ ಭಾಷಣ ಮಾಡಬಲ್ಲ ವ್ಯಕ್ತಿ ಮಿತ್ತಲ್. ಕೆನಡಿಗೆ ಗುಂಡೇಟು ಬಿದ್ದಾಗ, ಜಗತ್ತಿನ ಅತ್ಯಂತ ನುರಿತ ಮೇನೇಜರ್ಸ್ ಎಂದು ಹೆಮ್ಮೆಪಟ್ಟುಕೊಳ್ಳುತ್ತಿದ್ದ ಅಮೆರಿಕನ್‌ರ ಗಲಿಬಿಲಿಯನ್ನು ತಾರುಮಾರಾದ ಸೆಕ್ಯುರಿಟಿಯಲ್ಲಿನ ಅವ್ಯವಸ್ಥೆಗಳನ್ನು, ಬಳಿಕ ಸಂಭವಿಸಿದ್ದ ದಿಗ್ಭ್ರಮೆಗಳನ್ನು ಲೈನ್ ಆಫ್ ಕಮಾಂಡ್‌ನಲ್ಲಿ ಕಾಣಿಸಿಕೊಂಡ ಸಮನ್ವಯದ ಅಭಾವವನ್ನು ಮಿತ್ತಲ್ ಮೆನೇಜ್‌ಮೆಂಟ್ ಇನ್‌ಸ್ಟಿಟ್ಯೂಟ್ ಟ್ರೈನಿಗಳಿಗೆ ವಿವರಿಸುತ್ತಿದ್ದರು. ಬಳಿಕ ನೆನಪಿಸುತ್ತಾರೆ: "ನನ್ನ ತರುಣ ಮಿತ್ರರೇ, ವಿಪತ್ಕಾಲ ನಿಭಾವಣೆಯ ಅತ್ಯುತ್ತಮ ನಿದರ್ಶನಗಳು ನಮ್ಮ ಪುರಾಣ ಮತ್ತು ಇತಿಹಾಸಗಳಲ್ಲಿ ಬಹಳಷ್ಟಿವೆ. ಕೈಕೇಯಿಯ ನೆನಪಿದೆಯೇ ನಿಮಗೆ? ಯುದ್ಧದ ಮಧ್ಯೆ ರಥ ಚಕ್ರದ ಕೀಲಿ ತಪ್ಪಿದಾಗ ಸ್ವಂತ ಬೆರಳನ್ನು ಕೀಲಿಯಾಗಿ ಬಳಸಿ ಒಂದು ದೊಡ್ಡ ಅನಾಹುತವನ್ನು ತಪ್ಪಿಸಿದ್ದಳವಳು. ಅಮೃತಕ್ಕಾಗಿ ಸಮುದ್ರ ಮಥನ ನಡೆದಾಗ ಆದಿಶೇಷ ಕಾರಿದ್ದ ಘೋರವಿಷವನ್ನು ನುಂಗಿದ್ದ ಶಿವನ ಗಂಟಲನ್ನು ಒತ್ತಿ ಹಿಡಿದು ಗಂಡನನ್ನು ಕಾಪಾಡಿದ್ದ ಪಾರ್ವತಿ, ಕ್ರೈಸಿಸ್ ಮೆನೇಜ್‌ಮೆಂಟ್‌ನ ಒಂದು ಒಳ್ಳೆಯ ಉದಾಹರಣೆಯಾಗಿರುವಳು. ಅಶ್ವತ್ಥಾಮನು ಸತ್ತನೆಂಬ ನಂಬಿಕೆ ಹುಟ್ಟಿಸಿ ದ್ರೋಣಾಚಾರ್ಯರನ್ನು ನಿಷ್ಕ್ರಿಯಗೊಳಿಸಿದ್ದ ಪಾಂಡವರ ಕೃತ್ಯ ನಿಜವಾದ ಡಿಸಾಸ್ಟರ್ ಮೆನೇಜ್‌ಮೆಂಟೇ ಸರಿ..." ಹೀಗೆ ಎಷ್ಟೆಷ್ಟೋ ಉದಾಹರಣೆಗಳನ್ನು ಹೇಳಿ ಕ್ಲಾಸ್‌ಗಳನ್ನು ಜೀವಂತಗೊಳಿಸುತ್ತಿದ್ದ ಮಿತ್ತಲ್ ಹಣೆಗೆ ಕೈಕೊಟ್ಟು ಮುದುಡಿ ಕುಳಿತಿರುವರು.

ಬೇರೊಂದು ಕುರ್ಚಿಯಲ್ಲಿ ಪಬ್ಲಿಕ್ ರಿಲೇಶನ್ಸ್‌ನ ಗುರು ಶೇಷಾದ್ರಿ, ಹಣೆಗೆ ಹಚ್ಚಲಾದ ವಿಭೂತಿಯ ದೊಡ್ಡನಾಮ ಸಂಪೂರ್ಣ ಬೆವರಿನಲ್ಲಿ ತೊಯ್ದಿದೆ. ಕೋಣೆಯೊಳಗೆ ಮೂರು ಏರ್ ಕಂಡೀಶನರ್‌ಗಳು ಗುಂಯ್‌ಗುಡುತ್ತಿದ್ದರೂ ಆತನ ಶರಟು ಬೆವರಿನಲ್ಲಿ ಒದ್ದೆಯಾಗಿದೆ. ಶೇಷಾದ್ರಿ ಏನೇನೋ ಲೆಕ್ಕ ಹಾಕುತ್ತ ತನ್ನಷ್ಟಕ್ಕೆ ಗೊಣಗುಟ್ಟುತ್ತ ಇರುವರು.

'ಷಿ ವಾಸ್ ಪಾಸಿಂಗ್ ತ್ರೂ ಎ ಸ್ಯಾಡ್ ಫೇಸ್, ಯಸ್ ದಾಟ್ ಸಡೆನ್... ಶನಿ.... ವಾಸ್ ಕಾಸ್ಟಿಂಗ್ ಇಟ್ಸ್ ಶಾಡೋ..." ಶೇಷಾದ್ರಿ, ಓರ್ವ ಖ್ಯಾತ ಜ್ಯೋತಿಷಿಯೂ ಹೌದು. ಓರ್ವ ಸ್ಟೆನೋಗ್ರಾಫರ್ ಆಗಿ ಒಳಹೊಕ್ಕ ಆತ ಈ ಹಂತಕ್ಕೆ ತಲುಪಿದ್ದು ಅಧಿಕಾರದಲ್ಲಿರುವವರ ಜ್ಯೋತಿರ್ಗೋಲ, ನಕ್ಷತ್ರ, ರಹಸ್ಯಗಳನ್ನು ಕುರಿತು ಆಗಾಗ

ಪೂರ್ವ ಸೂಚನೆ ಕೊಡುತ್ತಿರುವುದರಿಂದಲೆ ಎಂದು ಅನೇಕ ಮಂದಿ ಕುಹಕವಾಡುತ್ತಿದ್ದರು.

ಕಾರ್ಯದರ್ಶಿ ಶ್ರೀವಾಸ್ತವ ಸೇದುತ್ತಿದ್ದ ಸಿಗರೇಟ್ ಗುತ್ತಿ ನಂದಿಸಿ ಇನ್ನೊಂದಕ್ಕೆ ಬೆಂಕಿ ಹಚ್ಚಿದರು. ಅವರೂ ತನ್ನಷ್ಟಕ್ಕೇ ಎಂಬಂತೆ ಹೇಳುತ್ತಿದ್ದಾರೆ "ವಿ ಹ್ಯಾವ್ ನೋ ಡೀಟೈಲ್ಸ್. ವಿ ಓನ್ಲೀ ನೊ ಷಿ ಹ್ಯಾಸ್ ಬೀನ್ ಶಾಟ್ ಅಟ್. ಐ ಹೋಪ್ ಇಟ್ ಇಸ್ ನಾಟ್ ಫೇಟ್–ಲ್."

ಎಲ್ಲಿಂದಲೋ ಕೈಗೆತ್ತಿಕೊಂಡ ಒಂದು ಟ್ರಾನ್ಸಿಟ್ಟರ್ ರೇಡಿಯೊ ಸಹಿತ ರಾಯ್‌ಚೌಧುರಿ ಕೋಣೆಗೆ ಬಂದರು. ದೆಹಲಿ 'ಎ'ಯಿಂದ ಲತಾಮಂಗೇಶ್ಕರ್ ಎಂದೂ ದಣಿಯದ ತನ್ನ ಮಧುರ ಕಂಠದಲ್ಲಿ ಹಾಡುತ್ತಿದ್ದಾರೆ. ದೆಹಲಿ 'ಬಿ'ಯಲ್ಲಿ ಹಾಡುಗಳ ನಡುವೆ ಬಿತ್ತರಿಸಿದ್ದು ಯಾವುದೋ ಟೂತ್‌ಪೇಸ್ಟ್‌ನ ಜಾಹೀರಾತು!

ಎಲ್ಲರೂ ನೆಮ್ಮದಿ ತಾಳಿದರು. ಅಪಾಯವೇನೂ ಘಟಿಸಿರಲಿಕ್ಕಿಲ್ಲ. ಇದ್ದರೆ ಆಕಾಶವಾಣಿಯಲ್ಲಿ ಚಿತ್ರ ಗೀತೆಗಳನ್ನು ಬಿತ್ತರಿಸುವುದಿಲ್ಲ.

ರವಿಗೆ ಮಾತ್ರ ಯಾಕೊ ಅದನ್ನು ನಂಬಲಿಕ್ಕಾಗಲಿಲ್ಲ. ಆತ ಅದನ್ನು ಹೇಳಿಯೂ ಹೇಳಿದ: "ಅಯಾಂ ಅನೇಬಲ್ ಟು ಪರ್ಸ್ವೇಡ್ ಮೈ ಸೆಲ್ಫ್ ಟು ಬಿ ಓಪ್ಟಿಮಿಸ್ಟಿಕ್...."

ಶೇಷಾದ್ರಿ ಪುನಃ ಗ್ರಹ ಸ್ಥಿತಿ–ಗತಿಗಳ ವಿಶ್ಲೇಷಣೆಯಲ್ಲಿ ಮಗ್ನರಾದರು: ಇಲ್ಲ. ಕ್ಯಾಬಿನೆಟ್‌ನ ಸೀನಿಯರ್ ಸದಸ್ಯರಲ್ಲಿ ಯಾರಿಗೂ ರಾಜಯೋಗವಾಗಲಿ, ಉನ್ನತ ಸ್ಥಾನಲಬ್ಧಿಯ ಸಮಯವಾಗಲಿ ಸನ್ನಿಹಿತವಾಗಿಲ್ಲ. ಪ್ರಣಬ್ ಅವರ ಗ್ರಹಸ್ಥಿತಿ ಕಂಠಪಾಠವೆ ಹೌದು, ಶೇಷಾದ್ರಿಗೆ. ಪ್ರಧಾನಿ ವಿದೇಶಕ್ಕೆ ತೆರಳಿದಾಗ, ಸಂಪುಟ ಸಭೆಗಳ ಅಧ್ಯಕ್ಷತೆ ವಹಿಸುವುದರಿಂದಾಗಿ ಸಂಪುಟದಲ್ಲಿ ಎರಡನೆಯವರು ಪ್ರಣಬ್. ಸ್ವಂತ ನೆಲೆಯಲ್ಲಿ ಹತ್ತು ಓಟುಗಳನ್ನಾದರೂ ಗಳಿಸಲಾರದ ಆತನನ್ನು ಎರಡನೆಯವರನ್ನಾಗಿ ಮಾಡಿದುದರಲ್ಲಿನ ತಂತ್ರ ದೆಹಲಿಯ ರಾಜಕೀಯ ವಲಯಗಳಲ್ಲಿ ಗುಟ್ಟಾಗಿ ಉಳಿದಿಲ್ಲ. ಪ್ರಧಾನಿಯವರಿಗೆ ಸಮಾಧಾನದೊಂದಿಗೇ ಎಲ್ಲಿ ಬೇಕಾದರೂ ಹೋಗಬಹುದು. ಅಪಾಯವೇನಾದರೂ ಉಂಟುಮಾಡುವ ತಾಕತ್ತು ಪ್ರಣಬ್‌ರಿಗಿಲ್ಲ.

ಪ್ರಣಬ್‌ರ ಪತ್ನಿ ಶೇಷಾದ್ರಿಯನ್ನು ಕನ್‌ಸಲ್ಟ್ ಮಾಡದೆ ಏನನ್ನೂ ಮಾಡರು. ರಾಜೀವರ ಜತೆ ಬಂಗಾಳಕ್ಕೆ ಪ್ರವಾಸ ಹೋಗುವಾಗಲೂ ಶೇಷಾದ್ರಿ ಉಪದೇಶವಿತ್ತಿದ್ದರು. "ಪ್ರಯಾಣ, ಪೂರ್ವ ದಿಕ್ಕಿಗೆ ಆದುದರಿಂದ ಕೆಡುಕೇನಿಲ್ಲ; ಅದರಲ್ಲೂ ಉದಿಸಿ ಮೇಲೇರುತ್ತಿರುವ ಸೂರ್ಯನ ಜತೆಯಲ್ಲಿ" ಮತ್ತೊಮ್ಮೆ ಗುಣಿಸಿ ನೋಡಿದ್ದರು: "ಉನ್ನತ ಸ್ಥಾನಲಬ್ಧಿಗೆ ಗ್ರಹಗತಿ ಅನುಕೂಲವಾಗಿಲ್ಲ. ಮಾತ್ರವಲ್ಲ ಕೆಲವು ವಾರಗಳೊಳಗೆ ಸ್ಥಾನ ಚಲನೆಯ ಸಂಭಾವ್ಯತೆಯೂ ಇದೆ. ವಿಶ್ವಬ್ಯಾಂಕಿನ ಮಹಾ ನಿರ್ದೇಶಕ ಹುದ್ದೆ ಲಭಿಸಲಿದೆಯೋ ಏನೊ."

ನರಸಿಂಹರಾವ್ ಅವರ ಗ್ರಹಸ್ಥಿತಿ ತೃಪ್ತಿಕರವಾಗಿದೆ. ಲಂಗರು ಹಾಕಿರುವ



ಹಡಗೊಂದರ ಚಿತ್ತದಂತಿದೆ ಅದು. ಧಾವನ್‌ರ ಸ್ಥಿತಿ ಅಭದ್ರವೇ. ರಾಜೀವ್ ಹಾಗೂ ಕಂಪ್ಯೂಟರ್ ಯುವಕರು ಪ್ರಧಾನಿಯ ಕಚೇರಿಯ ಒಳಕೋಣೆಗಳಲ್ಲಿ ಸ್ಥಾನಗಿಟ್ಟಿಸಿದಾಗಿನಿಂದಲೇ ಆರಂಭವಾಗಿದೆ ಧಾವನ್‌ರ ಕಷ್ಟಕಾಲ. ಕಳೆದ ಬಾರಿ ಕಂಡಾಗ ಧಾವನ್‌ರಿಗೆ ಸೂಚಿಸಿದ್ದರು. "ಶ್ರೀ ರಾಮಚಂದ್ರ ವನವಾಸಕ್ಕೆ ತೆರಳಿದಾಗಿನ ಗ್ರಹಗತಿ ಇದೆಯಲ್ಲ, ಈಗ ತಮ್ಮ ಗ್ರಹಗತಿಯೂ ಅದೇನೇ".

ಅಲೆಕ್ಸಾಂಡರ್‌ರ ಜಾತಕದಲ್ಲೂ 'ಲಗ್ನಸ್ಥನಾಗಿರುವ ಕರ್ಮಾಧಿಪತಿ' ಮೌಢ್ಯದಲ್ಲಿರುವನು. ಅಪಕೀರ್ತಿ ಮತ್ತು ಸ್ಥಾನಭ್ರಂಶವೂ ಸಂಭಾವ್ಯವೇ.

ಹೌದು, ದಿಟ್ಟತನ ಹೊಂದಿರುವ ಯಾರಿಗೂ ಸ್ಥಾನೋನ್ನತಿ ಹೊಂದುವ ಸಾಧ್ಯತೆಯಿಲ್ಲ. ಇದರ ಅರ್ಥವೇನಿರಬಹುದು? ಶನಿಯ ಕಾಟವಿದ್ದರೂ ಪ್ರಧಾನಿಯ ಆಯುಷ್ಯಕ್ಕೆ ತಕರಾರಿಲ್ಲವೆಂಬುದೇ ಇರಬೇಕು. ಹೌದು. ಕ್ಷುಲ್ಲಕ ಗಾಯಗಳೊಂದಿಗೆ ಪಾರಾಗುತ್ತಾರೆ. ಸಾವಿನ ದವಡೆಯಿಂದ ರೇಗನ್‌ರನ್ನು ಪಾರುಮಾಡಬಹುದಾದರೆ, ಶನಿಯ ಕಾಟದಿಂದ ಇಂದಿರಾಜಿಗೂ ಬಿಡುಗಡೆ ದೊರೆಯಬಹುದು.

ಗೃಹಖಾತೆ ಕಾರ್ಯದರ್ಶಿಯನ್ನು ರ್‍ಯಾಕ್ಸ್‌ನಲ್ಲಿ ಕರೆದು ಕೇಳಿದರೇನು? ಶ್ರೀವಾಸ್ತವ ಮೊದಲು ಹಿಂಜರಿದರು. ಬಳಿಕ ರ್‍ಯಾಕ್ಸ್‌ನಲ್ಲಿ ಕರೆದರು. ಆ ಕಡೆಯಿಂದ ಪ್ರತಿಕ್ರಿಯೆ ಇರಲಿಲ್ಲ.

ಅಲೆಕ್ಸಾಂಡರ್ ಸ್ಥಳದಲ್ಲಿಲ್ಲ. ಮುಂಬಯಿಗೆ ತೆರಳಿದ್ದಾರೆ. ಸಂಪುಟ ಕಾರ್ಯದರ್ಶಿ ಕೂಡ. ಅಟಾಮಿಕ್ ಎನರ್ಜಿ ಕಮೀಶನ್‌ನ ಸಭೆಯಲ್ಲಿ ಪಾಲ್ಗೊಳ್ಳಲು ಮುಂಬಯಿಗೆ ಹೋಗಿರುವರು. ತ್ರಿಪಾಠಿ ಗಡಿಬಿಡಿಯಲ್ಲಿರುವರು.

ಪ್ರಧಾನಿ ಕಚೇರಿ ಹಾಗೂ ಸಂಪುಟ ಕಾರ್ಯಾಲಯಗಳಲ್ಲಿನ ಪರಿಚಯವಿರುವ ಹಲವಾರು ನಂಬ್ರಗಳಿಗೆ ಫೋನಿಸಿದರು. ಸ್ಪಷ್ಟ ವಿವರ ಒಂದೂ ಸಿಕ್ಕಲಿಲ್ಲ.

ಪಿ.ಟಿ.ಐ.ಯ ನಂಬರ್ ಎಂಗೇಜ್ ಆಗಿತ್ತು. ಪೊಲೀಸ್ ಹೆಡ್‌ಕ್ವಾರ್ಟರ್ಸ್‌ನ ಅನೇಕ ನಂಬ್ರಗಳಲ್ಲಿ ಗಂಟೆ ಬಡಿಯಲ್ಪಟ್ಟಿತ್ತಾದರೂ ಯಾರೂ ಫೋನ್ ಎತ್ತಲಿಲ್ಲ.

ಎಲ್ಲಾ ಪ್ರಯತ್ನಗಳೂ ವ್ಯರ್ಥವಾದಾಗ ಶ್ರೀವಾಸ್ತವ ಫೋನ್ ರವಿಯ ಕೈಗೆ ಕೊಟ್ಟರು.

"ಮಿಸ್ಟರ್ ರವಿಕುಮಾರ್.... ಪ್ಲೀಸ್ ಟ್ರೈ ಯುವರ್ ಸೋರ್ಸಸ್."

ರವಿ ಪ್ರಧಾನಿ ಕಚೇರಿಯ ಆರೋರಾರನ್ನು ಕರೆದ. ಸಿಕ್ಕಲಿಲ್ಲ. ಬಳಿಕ ಪಾರ್ಲಿಮೆಂಟ್ ಸ್ಟ್ರೀಟ್‌ನ ಎಸ್.ಎಚ್.ಓ. ಅನ್ನು ಕರೆದ.

"ಹೌದು ಗುಂಡು ತಗುಲಿದ್ದು ನಿಜ. ಆಸ್ಪತ್ರೆಗೆ ತಲುಪಿಸಲಾಗಿದೆ. ವೆಲಿಂಗ್‌ಟನ್ ಅಲ್ಲ. ಮೆಡಿಕಲ್ ಇನ್‌ಸ್ಟಿಟ್ಯೂಟ್. ಇತರ ವಿವರಗಳೊಂದೂ ತಿಳಿಯದು."

"ಅಟ್ಲೀಸ್ಟ್ ವಿ ನೊ ವೇರ್ ಷಿ ಈಸ್ ನೌ... ರವೀ.... ಹರಿ ಅಪ್ ಯು ಗೋ ಟು ದ ಇನ್‌ಸ್ಟಿಟ್ಯೂಟ್ ಆ್ಯಂಡ್ ಲೆಟ್ ಮಿ ನೊ ದ ಲೇಟೆಸ್ಟ್."

ರವಿ ಹೊರಹೊರಟ. ಡ್ರೈವರ್ ಹರ್‌ಭಜನ್‌ಸಿಂಗ್ ಕಾರಿನ ಬಾಗಿಲು ತೆರೆದು ವಿಧೇಯತೆಯಿಂದ ನಿಂತಿರುವವನು. ಆತನದು ಮ್ಯಾಚ್ ಇಲ್ಲದ ಬಿಳಿ ಸಫಾರಿ ಸೂಟ್. ಬಿಳಿ ಬಣ್ಣದ ಚೊಕ್ಕವಾಗಿ ಸುತ್ತಿಕಟ್ಟಿರುವ ಪಗಡಿ. ಗೋಂದು ಹಚ್ಚಿ, ಜಾಲಿಯೊಳಗೆ ಅಡಕಗೊಳಿಸಿದ್ದ ಗಡ್ಡ. ಪಾಲಿಶ್ ಮಾಡಿ ಹೊಳಪುಂಟು ಮಾಡಲಾದ ಶೂ–ಕರ್ತವ್ಯ ನಿಷ್ಠೆಯ ಇನ್ನೊಂದು ಹೆಸರು ಹರ್‌ಭಜನ್‌ಸಿಂಗ್. ಆತನ ಎಡಮೊಣಕಾಲಿನ ಕೆಳಭಾಗ ಕೃತಕ.

ಬಂಗ್ಲಾದೇಶ್ ಯುದ್ಧಕ್ಕೆ ಮುನ್ನೇ ಮುಕ್ತಿ ಬಾಹಿನಿಯ ಯೋಧರಿಗೆ ತರಬೇತಿ ನೀಡಲು ನಿಯೋಜಿಸಲ್ಪಟ್ಟವರಲ್ಲಿ ಒಬ್ಬಾತನಾಗಿದ್ದನು ಹರ್‌ಭಜನ್. ಪಗಡಿ ತೆಗೆದಿರಿಸಿ, ತಲೆಗೂದಲಿಗೆ ಮೇಣ ಸವರಿ ಜಟೆಯುಂಟು ಮಾಡಿ, ಕಾಷಾಯವಸ್ತ್ರ ಧರಿಸಿ, ರುದ್ರಾಕ್ಷಿ ಮಾಲೆ ತೊಟ್ಟು ಹರ್‌ಭಜನ್ ಪದ್ಮಾ ನದಿಯ ತೀರಗಳಲ್ಲಿ ರಹಸ್ಯ ಹೋರಾಟಗಾರರಿಗೆ ತರಬೇತಿ ನೀಡಿದ್ದ. ಜೆಸ್ಸೊರಾನಲ್ಲಿ ಪಾಕ್ ಸೇನೆಯನ್ನು ಎದುರಿಸಿದಾಗ ಒಂದು ಶೆಲ್ ಸ್ಫೋಟಗೊಂಡು ಆತನ ಎಡಗಾಲಿನ ಕೆಳಭಾಗ ತುಂಡಾಯಿತು. ಹರ್‌ಭಜನ್ ಈಗಲೂ ದುಃಖಿಸುತ್ತಿರುವುದು ಕಾಲು ಮುರಿದುದಕ್ಕಲ್ಲ. ಆ ಬಗ್ಗೆ ಆತನಿಗೆ ಸಾಕಷ್ಟು ಹೆಮ್ಮೆ. ಕೃತಕೃತ್ಯತೆ ಕೂಡ ಇದೆ. ಢಾಕ್ಕಾದಲ್ಲಿ ಪಾಕ್‌ಸೇನೆ ಭಾರತದ ಸೇನಾಪತಿಗೆ ಆಯುಧ ಒಪ್ಪಿಸಿ ಶರಣಾಗುವುದನ್ನು ನೋಡಲು ವಿಧಿ ಆತನನ್ನು ಬಿಡಲಿಲ್ಲ. ಅನೇಕ ಮೈಲು ದೂರದಲ್ಲಿ ಒಂದು ಡೇರೆಯೊಳಗೆ ಪ್ರಜ್ಞಾಹೀನ ಸ್ಥಿತಿಯಲ್ಲಿ ಬಿದ್ದುಕೊಂಡಿದ್ದನು ಆತ, ಆಗ.

ಕಾರ್ ಸ್ಟಾರ್ಟ್ ಮಾಡಿದಾಗ ರವಿ ಜ್ಞಾಪಿಸಿಕೊಂಡ. ಹರ್‌ಭಜನ್‌ನನ್ನು ಇಂಟರ್‌ವ್ಯೂ ಮಾಡಿದ್ದಾಗ ಆತನ ಕಾಲು ಕೃತಕವೆಂದು ತನಗೆ ಗೊತ್ತಿರಲಿಲ್ಲ. ಎಕ್ಸ್ ಸರ್ವಿಸ್‌ಮೆನ್ ಕೋಟಾದಲ್ಲಿ ಹರ್‌ಭಜನನನ್ನು ಸೆಲೆಕ್ಟ್ ಮಾಡಲು ಸ್ವಲ್ಪವೂ ತೊಡಕೆನಿಸಲಿಲ್ಲ. ಡ್ರೈವಿಂಗ್ ಲೈಸೆನ್ಸ್ ಹಾಗೂ ಇನ್ನಿತರ ಅರ್ಹತಾ ಪತ್ರಗಳನ್ನು ಆತ ಹಾಜರುಪಡಿಸಿಯೂ ಇದ್ದ.

ತಾನು ಅಂಗವಿಕಲ ಎಂಬ ಸತ್ಯವನ್ನು ಹರ್‌ಭಜನ್ ಬಹಿರಂಗಪಡಿಸಿದಾಗಿನ ಸನ್ನಿವೇಶದ ನೆನಪು ಈಗಲೂ ಇದೆ. ಪಂಜಾಬಿ ಮಿಶ್ರಿತ ಹಿಂದಿಯಲ್ಲಿ ಆತ ಹೇಳಿದ್ದ: "ನನ್ನನ್ನು ಆಯ್ಕೆ ಮಾಡುವುದಕ್ಕೆ ಮುನ್ನ ಒಂದು ಸಂಗತಿಯನ್ನು ಹೇಳಲು ನಾನು ಬಯಸುತ್ತೇನೆ. ಸಹಾನುಭೂತಿ ಗಿಟ್ಟಿಸಲು ಬಳಸಲಾದ ಒಂದು ತಂತ್ರವೆಂದು ಇದನ್ನು ಭಾವಿಸಬೇಡಿ. ಸತ್ಯವನ್ನು ಮರೆಮಾಚಿದ್ದೇಕೆ ಎಂದು ಮುಂದೆ ಪ್ರಶ್ನಿಸಲಿಕ್ಕೆಡೆ ಇರಬಾರದು. ಇಗೋ ನೋಡಿ ನನ್ನ ಕಾಲು. ಆತ ಪ್ಯಾಂಟ್ ಮೇಲಕ್ಕೆ ಸರಿಸಿ ಮರಕಾಲಿನ ತೊಗಲ ಪಟ್ಟಿ ಬಿಚ್ಚಿದ. ಒಂದು ಟಕ್ ಸದ್ದಿನೊಂದಿಗೆ ಅದು ನೆಲಕ್ಕುರುಳಿತು. ಒಂದು ಅಪರೂಪದ ಜೀವಿಯ ಹಾಗೆ ಆತನ ಮಂಡಿಯ ಕೆಳಭಾಗ ನೆಲ ಮುಟ್ಟದೆ ಇಳಿಬಿದ್ದು ಕೊಂಡಿತ್ತು. ಬಳಿಕ ಆಗ ಮರದ ಕಾಲನ್ನು ಸಿಕ್ಕಿಸಿ ಪ್ಯಾಂಟ್



ಸರಿಪಡಿಸಿದ ಅನಂತರ ಏನೂ ಸಂಭವಿಸಿಲ್ಲ ಎಂಬಂತೆ ನಡೆದು ದೂರವಾಗಿದ್ದ.

ಕಾರು ಡಿಫೆನ್ಸ್ ಕಾಲನಿ ದಾಟಿ ರಿಂಗ್ ರೋಡ್‌ನ ಮೂಲಕ ಇನ್‌ಸ್ಟಿಟ್ಯೂಟ್ ಕಡೆಗೆ ಧಾವಿಸುತ್ತಾ ಇದೆ. ಸೌತ್ ಎಕ್ಸ್‌ಟೆನ್‌ಶನ್ ಕ್ರಮಿಸುವಷ್ಟರಲ್ಲಿ ಜನಸಂದಣಿ ಮತ್ತು ವಾಹನಗಳ ನೂಕುನುಗ್ಗಲು ಶುರುವಾಗಿತ್ತು. ಅಂಗುಲ, ಅಂಗುಲವಾಗಿ ಸರಿಯುತ್ತಿದ್ದ ಕಾರಿನಲ್ಲಿ ಕುಳಿತು ರವಿಕುಮಾರ್ ಸಮಯ ನೋಡಿದ. 'ಗಂಟೆ ಹನ್ನೊಂದು'.

* * *

## ಅಧ್ಯಾಯ ೨

# ಪ್ರತೀಕಾರದ ಬಿಸಿ

ರಿಂಗ್ ರೋಡನ್ನು ಸಪ್ಧರ್‌ಜಂಗ್ ರೋಡ್ ಹಾದು ಹೋಗುವಲ್ಲಿಂದ ಎಡಕ್ಕೆ ತಿರುಗಬೇಕಾಗಿದೆ. ಆದರೆ ಜನಜಂಗುಳಿಯ ನೂಕು ನುಗ್ಗಲು ಮತ್ತು ಪೊಲೀಸರ ಹಸ್ತಕ್ಷೇಪಗಳಿಂದಾಗಿ ರವಿ ಆ ಕ್ರಾಸ್‌ನಲ್ಲೆ ಇಳಿದ. ಹರ್‌ಭಜನ್‌ಗೆ ಐ.ಎನ್.ಎ. ಮಾರ್ಕೆಟ್‌ನ ಮುಂದೆ ಕಾರ್ ಪಾರ್ಕ್ ಮಾಡಿ ಕಾದು ನಿಲ್ಲಲು ನಿರ್ದೇಶನ ನೀಡಿದ.

ಜನಸಂದಣಿಯನ್ನು ಭೇದಿಸುತ್ತ ರವಿ ಮುಖ್ಯ ಗೇಟಿನ ಬಳಿ ತಲುಪಿದ. ಮ್ಯಾಡಂ ಆಸ್ಪತ್ರೆಗೆ ತಲುಪಿರುವರು ಎಂಬುದರ ಹೊರತು ಬೇರೇನೂ ಯಾರಿಗೂ ತಿಳಿಯದು. ಒಂದು ಬಿಳಿಬಣ್ಣದ ಅಂಬಾಸಿಡರ್ ಕಾರ್‌ನಲ್ಲಿ ಧಾವನ್, ಪೋತೆದಾರ್ ಮತ್ತು ಸೋನಿಯಾ ಜತೆಯಾಗಿ ಆಸ್ಪತ್ರೆಗೆ ತಲುಪಿಸಿದ್ದರೆಂದು ಜನಜಂಗುಳಿಗೆ ಗೊತ್ತಾಗಿದೆ.

ಕಾರಿನಲ್ಲಿ ತಲುಪಿದ್ದಾದರೆ, ಘಟನೆ ಅಪಾಯಕಾರಿಯಾಗಿರಲಿಕ್ಕಿಲ್ಲ. ಪಿ.ಎಂ.ಹೌಸ್‌ನ ಹಿಂಭಾಗದಲ್ಲಿ ಸದಾ ಸಜ್ಜಾಗಿ ನಿಂತಿರುತ್ತಿದ್ದ ಆ್ಯಂಬುಲೆನ್ಸ್ ಬಗ್ಗೆ ದೆಹಲಿಯ ಯಾವನೇ ಬಾಬುವಿಗೂ, ಚಪ್ರಾಸಿಗೂ ಗೊತ್ತು. ಆಕ್ಸಿಜನ್ ಸಿಲಿಂಡರ್ ಮತ್ತು ಲೈಫ್ ಸೇವಿಂಗ್ ಸಾಮಗ್ರಿಗಳೆಲ್ಲವನ್ನೂ ಅಳವಡಿಸಿರುವ ಆ್ಯಂಬುಲೆನ್ಸ್ ಯಾವುದಾದರೂ ತುರ್ತು ಕಾರ್ಯಕ್ಕಾಗಿ ಕಾದುನಿಂತಿರುತ್ತದೆ. ತಜ್ಞ ವೈದ್ಯರ ಮತ್ತು ದಾದಿಯರ ಸೇವೆ ತತ್‌ಕ್ಷಣ ದೊರೆಯುತ್ತದೆ. ಹೀಗಿದ್ದೂ ಕಾರಿನಲ್ಲಿ ಆಸ್ಪತ್ರೆ ತಲುಪಿರುವುದರ ಅರ್ಥ ಮ್ಯಾಡಂ ಚಿಕ್ಕ ಪುಟ್ಟ ಗಾಯಗಳೊಂದಿಗೆ ಪಾರಾದರು ಎಂದೇ.

ನಿನ್ನೆಯಷ್ಟೇ ಪ್ರಿಯಾಂಕ ಮತ್ತು ರಾಹುಲ್ ಒಂದು ಅಪಾಯದಿಂದ ಪಾರಾಗಿದ್ದರು ಎಂಬುದನ್ನು ಜನರ ಗುಂಪು ಯೋಚಿಸುತ್ತಿದೆ. ಬ್ಲೂ ಸ್ಟಾರ್ ಆಪರೇಶನ್‌ನ ಬಳಿಕ ಮ್ಯಾಡಂ ಮತ್ತು ಕುಟುಂಬದ ಜೀವ ಅಪಾಯದಲ್ಲೇ ಇದೆ ಎಂದು ದೆಹಲಿಯ ಪ್ರತಿಯೊಂದು ಮಗುವಿಗೆ ಕೂಡ ಗೊತ್ತು. ಭದ್ರತಾ ವಿಭಾಗ ಸಾಕಷ್ಟು ಮುನ್ನೆಚ್ಚರಿಕೆಗಳನ್ನೂ ಸುರಕ್ಷಾ ಕ್ರಮವನ್ನೂ ತೆಗೆದುಕೊಂಡಿರಬಹುದು.



ಕ್ಯಾಜುವಲ್ಟಿಯಲ್ಲಿ ಪರಿಚಿತ ಡಾಕ್ಟರುಗಳಿದ್ದಾರೆ. ಶುಕ್ಲರೋ, ವೇಣುಗೋಪಾಲರೋ ಇದ್ದೇ ಇರುತ್ತಾರೆ. ರವಿ ನಡೆದ. ಒಂದೆರಡು ಸ್ಥಳಗಳಲ್ಲಿ ಪೊಲೀಸರು ರವಿಯನ್ನು ತಡೆದರು. ತನ್ನ ಹೆಂಡತಿ ಆಸ್ಪತ್ರೆಯಲ್ಲಿ ಸಾಯುವ ಸ್ಥಿತಿಯಲ್ಲಿರುವಳು ಎಂಬ ಸುಳ್ಳನ್ನು ಆತ ಸಮರ್ಥವಾಗಿ ಹೇಳಿದ. ಪ್ರತಿಸಲ ಸುಳ್ಳು ಹೇಳುವಾಗಲೂ, ತನ್ನ ಹೆಂಡತಿಯನ್ನಾಗಿ ಮಾಡಬಹುದಾಗಿದ್ದ ಹುಡುಗಿಯರ ಮುಖಗಳು ಆತನ ಮನಸ್ಸಿನಲ್ಲಿ ಹೊಳೆಯುತ್ತಲೂ ಇದ್ದುವು. ಕ್ಯಾಜುವಲ್ಟಿಯಲ್ಲಿ ನೆಲ ಮತ್ತು ಬೆಂಚುಗಳಲ್ಲಿ ಡಾಕ್ಟರುಗಳಿಗಾಗಿ ಕಾಯುತ್ತ ಕುಳಿತಿರುವ ರೋಗಿಗಳು. ಒಬ್ಬಾತ ತಲೆಗೆ ಗಾಯವಾಗಿ ಕಂಗಾಲಾಗಿರುವನು. ಆತನ ಗಾಯದೊಳಗೆ ರಕ್ತದಲ್ಲಿ ತೋಯ್ದ ಅರಿವೆಯನ್ನು ತುರುಕಿ ಇನ್ನೊಬ್ಬಾತ ಸಾಂತ್ವನ ಹೇಳುತ್ತಿರುವನು. ರಸ್ತೆ ಅಪಘಾತಕ್ಕೊಳಗಾದ ಮೂವರು ಪ್ರಾಥಮಿಕ ಶುಶ್ರೂಷೆಗಾಗಿ ಕಾದು ನಿಂತಿರುವರು. ಡಾಕ್ಟರುಗಳಾಗಲಿ, ನರ್ಸ್‌ಗಳಾಗಲಿ ಇಲ್ಲ. ಓರ್ವ ನರ್ಸ್ ಮಾತ್ರ ಒಂದು ರಿಜಿಸ್ಟರ್‌ನಲ್ಲಿ ಏನನ್ನೋ ಬರೆಯುತ್ತಿದ್ದಾಳೆ.

ಆಕೆಯ ಮುಖಭಾವ ಒಂದು ಸೌಹಾರ್ದ ಸಂಭಾಷಣೆಗೆ ಅನುಕೂಲವಲ್ಲವೆನಿಸಿತು–ಆಸ್ಪತ್ರೆ ಸಿಬ್ಬಂದಿಯ ಸ್ಥಾಯಿಯಾದ 'ಕುಡ್‌ನಾಟ್' 'ಕೇರ್‌ಲೆಸ್' ಮನೋಭಾವ. ಆದರೂ ಆ ಮಹಾಸಾಗರದಲ್ಲಿ ತಡಕಾಡುವುದಕ್ಕಿಂತಲೂ ಈ ಹುಲ್ಲು ಕಡ್ಡಿಯನ್ನು ಹಿಡಿಯುವುದೇ ವಾಸಿ ಎಂದುಕೊಂಡನು ರವಿ.

"ಸಿಸ್ಟರ್...... ಪಿ.ಎಂ. ಕಾ ಖಬರ್ ಕುಛ್ ಹೈ?" ಆಕೆ ಮುಖವೆತ್ತಿದಳು. ಪ್ರಶ್ನೆ ಕೇಳಿಸಲಿಲ್ಲವೇನೊ?

ಪ್ರತಿಕ್ರಿಯೆ ಇಲ್ಲವೆನಿಸಿದಾಗ ರವಿ ಹಿಂತಿರುಗಿ ನಡೆಯುವುದರಲ್ಲಿದ್ದ. ಆಗ ಆಕೆ ಹೇಳತೊಡಗಿದಳು "ಒಂದು ಒಂದೂವರೆ ತಾಸು ಮುನ್ನ ಅವರು ಇಲ್ಲಿ ತಲುಪಿದ್ದು; ರೆಕ್ಕೆ ಮುರಿದ ಒಂದು ಗಿಣಿಯ ಹಾಗೆ. ಶರೀರವಿಡೀ ರಕ್ತಮಯ. ಅವರನ್ನು ಟ್ರಾಲಿಯಲ್ಲಿ ಮಲಗಿಸಲು ನಾನೂ ನೆರವಾದೆ. ಕ್ಯಾಜುವಲ್ಟಿ ಕೊಠಡಿಯೊಳಗೆ ಅವರನ್ನು ಡಾಕ್ಟರ್ ಗುಲೇರಿಯ ಮತ್ತು ಡಾಕ್ಟರ್ ಬಲರಾಮ್ ತಪಾಸಣೆ ಮಾಡಿದರು. ಅವರ ಕಣ್ಣಗೊಂಬೆಗಳು ಚಲನೆ ಕಳೆದುಕೊಂಡು ದುರುಗುಟ್ಟುತ್ತಿದ್ದವು. ಪಲ್ಸ್ ಸ್ಥಗಿತವಾಗಿತ್ತು. ಕಾರ್ಡಿಯಾಕ್ ಮಸಾಜ್ ನಡೆಸಿತ್ತಾದರೂ ಪ್ರಯೋಜನವೇನೂ ಆಗಲಿಲ್ಲ. ಎಂಡೋ–ಟ್ರಾಕಿಯನ್ ಟ್ಯೂಬ್ ಮೂಲಕ ಆಕ್ಸಿಜನ್ ಪಂಪ್ ಮಾಡಲಾಯಿತು. ಅರ್ಧ ಗಂಟೆಯ ಪ್ರಯತ್ನದ ಬಳಿಕ ಇ.ಸಿ.ಜಿ.ಯಲ್ಲಿ ಸೂಕ್ಷ್ಮ ಚಲನೆ ಪ್ರಕಟಗೊಂಡಿತ್ತು. ಈ ಸಮಯದಲ್ಲೆಲ್ಲ ಬಹಳಷ್ಟು ರಕ್ತ ನಷ್ಟವಾಗುತ್ತಲೇ ಇತ್ತು. ಬ್ಲಡ್ ಟ್ರಾನ್ಸ್‌ಫ್ಯೂಶನ್‌ಗೆ ಬಹಳಷ್ಟು ರಕ್ತ ಬೇಕಾಗಿತ್ತು. ಅವರ ಮೆಡಿಕಲ್ ಹಿಸ್ಟರಿ ಶೀಟ್ ಇರುವುದು ವೆಲಿಂಗ್‌ಟನ್ ಆಸ್ಪತ್ರೆಯಲ್ಲಿ. ಅವರನ್ನು ಅಲ್ಲಿಗೇ ಒಯ್ಯಬೇಕಾಗಿತ್ತು. ಅದೇ ಹತ್ತಿರವೂ ಆಗಿತ್ತು. ರಕ್ತದ ಗ್ರೂಪ್ ಅರಿತುಕೊಳ್ಳಲು.

ಆದರೂ ಕಷ್ಟವಾಗಲಿಲ್ಲ. ಸೋನಿಯಾಗೆ ಅದು ಗೊತ್ತಿತ್ತು. ಒ.ಆರ್.ಎಚ್. ನೆಗೆಟಿವ್. ಅದೊಂದು ರೇರ್ ಗ್ರೂಪ್. ಡಜನುಗಟ್ಟಲೆ ಬಾಟಲ್ ರಕ್ತಕ್ಕಾಗಿ ನರ್ಸ್‌ಗಳು ಬ್ಲಡ್ ಬ್ಯಾಂಕ್‌ಗೆ ಓಡಿದರು. ಕಾರ್ಡಿಯೋಥೆರಾಪಿಕ್, ಸರ್ಜನ್‌ರುಗಳಾದ ವೇಣುಗೋಪಾಲ್ ಮತ್ತು ಸಂಪತ್‌ಕುಮಾರ್ ಅಷ್ಟರಲ್ಲೇ ತಲುಪಿದ್ದರು. ರೋಗಿಯನ್ನು ಎಂಟನೆಯ ಮಹಡಿಯ ಎರಡನೆಯ ನಂಬರ್ ಆಪರೇಶನ್ ಥಿಯೇಟರ್‌ನಲ್ಲಿ ಬಿಟ್ಟು ಈಗಷ್ಟೇ ನಾನು ಮರಳಿ ಬಂದದ್ದು.

ಇಷ್ಟೂ ಸಂಗತಿಯನ್ನು ಆಕೆ ಒಂದೇ ಉಸಿರಿನಲ್ಲಿ ಹೇಳಿ ಮುಗಿಸಿದಳು. ಇಷ್ಟೊಂದು ಮಹತ್ತ್ವದ ವಿಚಾರಗಳನ್ನು ತಿಳಿಯಲು ಯಾರೊಬ್ಬರೂ ಇಷ್ಟರ ತನಕ ಆಕೆಯನ್ನು ಸಮೀಪಿಸಿರಲಿಲ್ಲವೆಂದು ಅನಿಸಿತ್ತು ರವಿಗೆ.

ಪತ್ರಿಕಾಕರ್ತರು, ಟಿ.ವಿ.ಕ್ಯಾಮೆರಾದವರೂ ಇತರ ಯಾವ್ಯಾವುದೋ ಬಾಗಿಲುಗಳನ್ನು ಬಡಿದು ನೋಡುತ್ತಾ ಇರಬಹುದು; ಒಂದಕ್ಕೊಂದು ವಿರುದ್ಧವಾದ ಸಂಗತಿಗಳನ್ನು ಕೇಳಿಸಿಕೊಳ್ಳುತ್ತಲೂ ಇರಬಹುದು. ರವಿ ಆಶಾಭಾವನೆಯೊಂದಿಗೆ ಪ್ರಶ್ನಿಸಿದ: "ಎನಿ ಹೋಪ್?"

ನರ್ಸ್ ರಿಜಿಸ್ಟರಿನ ಅಂಕೆ–ಸಂಖ್ಯೆಗಳಲ್ಲಿ ತಲೆ ಹುದುಗಿಸಿದಳು. ಬಳಿಕ ಒಂದು ಮರ್ಮರದಂತೆ ನುಡಿದಳು: "ಎರಡು ಡಜನ್‌ಗಳಷ್ಟು ಕೋವಿ ಗುಂಡುಗಳು ಪಾಯಿಂಟ್ ಬ್ಲ್ಯಾಂಕ್ ರೇಂಜಿನಿಂದ ಬಂದೆರಗಿದಾಗ ಅವುಗಳಲ್ಲಿ ಹತ್ತು ಗುಂಡುಗಳಾದರೂ ಒಡಲು ಭೇದಿಸಿ ಹೊರಗೆ ಬಂದಿರಬಹುದು. ಕರುಳು, ಲಿವರ್, ಮುಂತಾದುವುಗಳು ಚದುರಿ ಹೊರನುಗ್ಗಿದ್ದವು." ಅವಳ ಕಣ್ಣೀರ ಹನಿಗಳು ಬಿದ್ದು ರಿಜಿಸ್ಟರ್‌ನಲ್ಲಿ ಕಲೆಗಳಾದವು.

ರವಿ ಅವಳ ಹೆಗಲು ತಟ್ಟಿ ಸಂತೈಸಿದ. ಬಿಕ್ಕಳಿಕೆಯ ನಡುವೆ ಅವಳು ಹೇಳುತ್ತಿದ್ದಳು: "ಬಹಳಷ್ಟು ಅಪಮೃತ್ಯುಗಳನ್ನು ಕಂಡಿದ್ದ ನನಗೆ ಇದನ್ನು ನೋಡುತ್ತ ನಿಲ್ಲಲು ಸಾಧ್ಯವಾಗಲಿಲ್ಲ... ತುಸು ಶಾಂತವಾದ ಮರಣವನ್ನು ಹೊಂದುವ ಅರ್ಹತೆ ಅವರಿಗಿಲ್ಲವೆ?"

ರವಿ ಅಲ್ಲಿಂದ ಹೊರಟ. ಎಂಟನೆಯ ಮಹಡಿಯ ಕಡೆಗಿರುವ ಬಾಗಿಲುಗಳನ್ನು ಪೊಲೀಸರು ಸೀಲ್ ಮಾಡಿದ್ದರು.

ಡಾಕ್ಟರ್‌ಗಳು ಅವರ ಪ್ರಯತ್ನ ಮುಂದುವರಿಸುತ್ತಿರಬಹುದು.

ಮಬ್ಬುಕವಿದ ವಾತಾವರಣ. ತಳಮಳಗೊಂಡ ಜನಸಂದಣಿ ಯಾವ ಕ್ಷಣದಲ್ಲೂ ಆಕ್ರಮಣಕ್ಕೆಳೆಸಬಹುದು.

ತಲೆತಗ್ಗಿಸಿ, ಜನಸಂದಣಿಯನ್ನು ಭೇದಿಸುತ್ತ ಮುಂದಕ್ಕೆ ಸಾಗುವಾಗ ರವಿಯನ್ನು ಅಪರಾಧ ಪ್ರಜ್ಞೆ ಬಳಲಿಸಿತು. ಉನ್ನತ ಗುಣಮಟ್ಟವನ್ನು ಕಾಪಾಡಿಕೊಂಡು ಬರುತ್ತಿರುವ ಸಶಸ್ತ್ರ ಪಡೆ ಅರ್ಪಣಾ ಮನೋಭಾವದ ಪೊಲೀಸ್ ಮತ್ತು ಸಿವಿಲ್ ಸರ್ವೀಸ್



ಇಷ್ಟೆಲ್ಲ ಇದ್ದು ಅಸಹಾಯಕ ಮಹಿಳೆಯೊಬ್ಬಳ ಜೀವ ಉಳಿಸಲು ಯಾರೊಬ್ಬರಿಗೂ ಸಾಧ್ಯವಾಗಲಿಲ್ಲ.

ಡಾಕ್ಟರ್‌ಗಳೂ, ಕಾರ್ಡಿಯೊ ಥೆರಾಪಿಕ್ ಸರ್ಜನ್‌ರುಗಳೂ ಮೆಡಿಕೊ ಲೀಗಲ್ ತಜ್ಞರುಗಳೂ ಆಕೆಯ ಮರಣ ಸಮಯದ ಕುರಿತೂ ಮರಣಕ್ಕೆ ಕಾರಣವಾದ ಬಂದೂಕು ಗುಂಡಿನ ಕುರಿತೂ ಗಂಟೆಗಟ್ಟಲೆ ಕಾಲ ವಾದ ಹೂಡಬಹುದು. ಎದೆಬಡಿತ ಎರಡು ನಿಮಿಷಗಳ ತನಕ ಸ್ಥಗಿತಗೊಂಡ ನಿರ್ದಿಷ್ಟ ಸಮಯ ಯಾವುದು? ಮಿದುಳಿನ ನಿಷ್ಕ್ರಿಯಗೊಂಡ ನಿಮಿಷ ಯಾವುದು? ಕಣ್ಣಿಗೆ ಬೆಳಕು ಬೀಳುವಾಗ ಕಣ್ಣುಗೊಂಬೆಗಳ ಪ್ರತಿಕ್ರಿಯೆ ಇಲ್ಲವಾದದ್ದು ಯಾವ ನಿಮಿಷದಲ್ಲಿ? ಮೈಯೊಳಗೆ ನುಗ್ಗಿದ್ದ ಬಹಳಷ್ಟು ಗುಂಡುಗಳಲ್ಲಿ ಮರಣಕ್ಕೆ ಕಾರಣವಾದ ಗುಂಡು ಯಾವುದು? ಆ ನಿರ್ದಿಷ್ಟ ಗುಂಡು ಸ್ಫೋಟಗೊಂಡ ಬಂದೂಕಿನ ಕುದುರೆಯನ್ನೆಳೆದ ಬೆರಳಿನ ಒಡೆಯ ಯಾರು?

ಆ ಒಡೆಯ ಯಾವ ಮತಕ್ಕೆ ಸೇರಿದವನೆಂದು ಜನಸಂದಣಿ ಇಷ್ಟರಲ್ಲೆ ತಿಳಿದುಕೊಂಡಾಗಿತ್ತು.

ಇಲ್ಲವಾದರೆ, ತ್ರೀವೀಲರ್‌ನಲ್ಲಿ ಬಂದ ಓರ್ವ ಸರ್ದಾರ್ಜಿಯನ್ನು ತಡೆದು ನಿಲ್ಲಿಸಿ ಅವರು ಅಮಾನವೀಯವಾಗಿ ಹೊಡೆದು ಜಜ್ಜುತ್ತಿರಲಿಲ್ಲವಲ್ಲ. ಮತ್ತೊಬ್ಬ ಸರ್ದಾರ್ಜಿಯ ಪಗಡಿ ಕಿತ್ತು ಚೆಂಡಾಟವಾಡುತ್ತಿರಲಿಲ್ಲವಲ್ಲ.

ರವಿಗೆ ಥಟ್ಟನೆ ಹರ್‌ಭಜನ್‌ನ ನೆನಪಾಯಿತು. ಓ ಮೈ ಗಾಡ್. ನಾನು ಈ ಸಂಗತಿಯನ್ನು ಯಾಕೆ ಯೋಚಿಸಲಿಲ್ಲ?

ಆತ ಐ.ಎನ್.ಎ. ಮಾರ್ಕೆಟಿನ ಕಡೆಗೆ ನಡೆದ. ಜನಸಂದಣಿ ಅಸ್ವಸ್ಥವಾಗಿತ್ತು. ಹಿಂದಿ, ಪಂಜಾಬಿ ಮತ್ತು ಇಂಗ್ಲಿಷ್‌ಗಳಲ್ಲಿ ಶಾಪೋಕ್ತಿಗಳು ಕೇಳಿ ಬರುತ್ತಿದ್ದವು. ರವಿ ಸುತ್ತಲೂ ನೋಡಿದ. ಇಲ್ಲ, ಪಗಡಿ ಸುತ್ತಿದ ತಲೆಗಳು ಎಲ್ಲೂ ಇಲ್ಲ. ದರ್ಶನ್‌ಳ ಪ್ರಾರ್ಥನೆ ಫಲಿಸಲಿಲ್ಲ. ಅವಳು ಆತಂಕಪಟ್ಟಂತೆ, ಪ್ರಧಾನಿಗೆ ಗುಂಡಿಟ್ಟವರು ಸರ್ದಾರ್ಜಿಯವರೇ ಆಗಿದ್ದರು. ಜನ ಸಂದಣಿಗೆ ಅವರ ಹೆಸರು ಕೂಡ ಗೊತ್ತಾಗಿಬಿಟ್ಟಿದೆ ಸತ್‌ವಂತ್ ಸಿಂಗ್ ಮತ್ತು ಬಿಯಾಂತ್ ಸಿಂಗ್.

ಪಗಡಿ ಸುತ್ತಿರುವ ತಲೆಗಳನ್ನರಸುತ್ತ ಜನರ ಗುಂಪುಗಳು ನಾಲ್ದೆಸೆಗಳಿಗೂ ಧಾವಿಸುತ್ತಿವೆ.

ಗಾಂಧೀಜಿಗೆ ಗುಂಡಿಟ್ಟರೆಂದು ಕೇಳಿದಾಗ ಅನೇಕ ಮಂದಿ ಪ್ರಾರ್ಥಿಸಿದ್ದರು–ಕೊಂದದ್ದು ಯಾರೇ ಆದರೂ ಆತ ಮುಸ್ಲಿಂ ಆಗದಿರಲಿ ಎಂದು. ಆ ಪ್ರಾರ್ಥನೆಯನ್ನು ಈಡೇರಿಸಿದ್ದ ದೇವರು ದರ್ಶನ್‌ಳ ಪ್ರಾರ್ಥನೆಗೆ ಯಾಕೆ ಕಿವಿಗೊಡಲಿಲ್ಲ?

ಟ್ರಾಫಿಕ್ ಕ್ರಾಸಿಂಗ್ ದಾಟಿ ರವಿ ಸೀದಾ ನಡೆದ. ಸಫ್ದರ್‌ಜಂಗ್ ಏರ್‌ಪೋರ್ಟ್‌ನ ಮುಂಭಾಗದ ಓವರ್ ಬ್ರಿಜ್‌ನ ಈಚೆ ತುದಿಯ ಸಮೀಪದಲ್ಲಿ

ಚಾಕ್ಲೆಟ್ ಬ್ರೌನ್ ಬಣ್ಣದ ಅಂಬಾಸಿಡರ್ ನಿಂತಿರುವುದು ಆತನಿಗೆ ದೂರದಿಂದಲೇ ಕಾಣಿಸಿತು.

ಹತ್ತಿರ ತಲುಪುತ್ತಲೆ ಆತ ಗಮನಿಸಿದ. ಅದರ ವಿಂಡ್ ಸ್ಕ್ರೀನ್ ಒಡೆದಿದ್ದಾರೆ. ಬೈಕ್ ಲೈಟ್ ಪುಡಿಪುಡಿಯಾಗಿ ಚದುರಿ ಬಿದ್ದಿದೆ. ಪಕ್ಕದ ಫುಟ್‌ಪಾತ್‌ನಲ್ಲಿ ಒಂದು ಕೊಳೆಬಟ್ಟೆಗಳ ಮೂಟೆಯಂತೆ ಹರ್‌ಭಜನ್‌ಸಿಂಗ್. ಆತನ ಹಣೆಯಿಂದ ರಕ್ತ ಸುರಿಯುತ್ತಿದೆ. ಆತನ ಕೃತಕ ಕಾಲು ತುಸು ದೂರದಲ್ಲಿ ಬಿದ್ದುಕೊಂಡಿದೆ. ಅಚ್ಚಬಿಳಿಯ ಸಫಾರಿಸೂಟಿನಲ್ಲಿ ರಕ್ತವೂ, ಮಣ್ಣೂ ಮೆತ್ತಿಕೊಂಡಿದೆ.

ರವಿ ಹತ್ತಿರ ಹೋಗಿ ಹರ್‌ಭಜನ್‌ನನ್ನು ಕರೆದ. ನಾಡಿ ಹಿಡಿದ. ಎದೆಗೆ ಕಿವಿಯೊತ್ತಿ ಆಲಿಸಿದ. ಕಣ್ಣುರೆಪ್ಪೆಗಳನ್ನು ಬಿಡಿಸಿ ನೋಡಿದ. ಇಲ್ಲ, ಹರ್‌ಭಜನ್ ಸಾಯಲಿಲ್ಲ. ಬಲಿಷ್ಠವಾದ ಆ ಶರೀರದಲ್ಲಿ ಜೀವ ಮಿಡುಕಾಡುತ್ತಿದೆ.

ರವಿ ಆತನನ್ನು ಹಿಂಬದಿಯ ಸೀಟಿನಲ್ಲಿ ಮಲಗಿಸಿದ. ಒಡೆದು ಬಿದ್ದಿರುವ ಗಾಜಿನ ಚೂರುಗಳನ್ನು ಕೈಯಿಂದ ಸರಿಸಿ ಆತ ಡ್ರೈವಿಂಗ್ ಸೀಟಿನಲ್ಲಿ ಕುಳಿತುಕೊಂಡ. ಕಾರ್ ಇಂಜಿನ್ ಒಂದಿಷ್ಟು ಗುರುಗುಟ್ಟಿತ್ತಾದರೂ ನಿಧಾನವಾಗಿ ಸ್ಟಾರ್ಟ್ ಆಯಿತು. ಜನಜಂಗುಳಿಯನ್ನು ಭೇದಿಸಿ ಮೆಡಿಕಲ್ ಇನ್‌ಸ್ಟಿಟ್ಯೂಟ್‌ಗಾಗಲಿ, ಸಫ್ದರ್‌ಜಂಗ್ ಹಾಸ್ಪಿಟಲಿಗಾಗಲಿ ಹರ್‌ಭಜನ್‌ನನ್ನು ತಲುಪಿಸುವುದು ಸುಲಭವಲ್ಲ. ಮಾನಸಿಕ ಗೊಂದಲಕ್ಕೆ ರವಿ ಒಂದು ಕ್ಷಣ ಪಕ್ಕಾದ. ತಾನು ತಿಳಿದುಕೊಂಡ ಸಂಗತಿಗಳನ್ನು ಶ್ರೀವಾಸ್ತವರಿಗೆ ತಿಳಿಸಬೇಕಾಗಿದೆ. ಹೊಡೆದು ಪುಡಿ ಮಾಡಲಾದ ಕಾರಿನಲ್ಲಿ ಗಾಯಗೊಂಡು ಪ್ರಜ್ಞಾಹೀನನಾಗಿರುವ ಒಬ್ಬಾತನನ್ನು ಕರೆದೊಯ್ಯುವಾಗ ಸಹಜವಾಗಿಯೆ ಅಹಿತಕರ ಪ್ರಶ್ನೆಗಳು ಎದುರಾಗುತ್ತವೆ. ಹರ್‌ಭಜನ್‌ಗೆ ಪ್ರಥಮ ಶುಶ್ರೂಷೆಯನ್ನಾದರೂ ತತ್‌ಕ್ಷಣ ಒದಗಿಸಬೇಕಾಗಿದೆ.

ರವಿ ಓವರ್‌ಬ್ರಿಜ್‌ನ ಮೂಲಕ ಕಾರ್ ನಡೆಸಿದ. ಕಪ್ಪು ಬಣ್ಣ ಬಳಿಯಲಾದ ಲೈಟ್ ಕಂಬಗಳು ಸಾಯುಧ ಸೈನಿಕರಂತೆ ಕಾವಲು ನಿಂತಿವೆ. ಪೃಥ್ವೀರಾಜ್ ಮಾರ್ಗದ ಮೂಲಕ ಇಂಡಿಯಾಗೇಟ್‌ಗೆ ಬಲಬಂದು ರಾಜೇಂದ್ರ ಪ್ರಸಾದ್ ರೋಡ್ ಹಾದು ಚರ್ಚ್ ರೋಡ್ ಕ್ರಮಿಸಿ ನಾರ್ತ್ ಅವೆನ್ಯೂ ಮೂಲಕ ರಾಮಮನೋಹರ್ ಲೋಹಿಯಾ ಹಾಸ್ಪಿಟಲ್‌ನತ್ತ ಸಾಗಿದ.

ಒಡೆದು ಪುಡಿಪುಡಿಯಾಗಿದ್ದ ವಿಂಡ್ ಸ್ಕ್ರೀನ್‌ನ ಮೂಲಕ ಬಲವಾಗಿ ಬೀಸಿದ ಗಾಳಿಯಲ್ಲಿ ಒಂದೊಂದು ಮಳೆಹನಿಗಳು. ಆಗಸದಲ್ಲಿ ಮಬ್ಬು ಕವಿದಿದೆ. ಶಾಸ್ತ್ರಿ ಭವನ್, ಕೃಷಿಭವನ್ ಹಾಗೂ ನಾರ್ತ್ ಬ್ಲಾಕ್‌ಗಳ ಪರಿಸರದಲ್ಲಿ ಸರಕಾರಿ ಕಚೇರಿಗಳ ಗುಮಾಸ್ತ ಸಮೂಹ ಅಲ್ಲಲ್ಲಿ ಗುಂಪುಕೂಡಿ ನಿಂತುಕೊಂಡಿದೆ. ಕೆಲವರ ಕೈಯಲ್ಲಿ ಟ್ರಾನ್ಸಿಸ್ಟರ್‌ಗಳಿವೆ. ಲತಾಮಂಗೇಶ್ಕರ್ ಮತ್ತು ಮಹಮ್ಮದ್ ರಫಿ ಸರದಿಗನುಗುಣವಾಗಿ ಹಾಡುತ್ತಿರುವರು. ನಡು ನಡುವೆ ನಿರ್ದಿಷ್ಟ ಬ್ರಾಂಡಿನ



ಡಿಟರ್ಜೆಂಟ್ ಪುಡಿಗಳು, ಟೂತ್‌ಪೇಸ್ಟ್, ಪ್ರೆಶರ್ ಕುಕ್ಕರ್, ನೂಡಲ್ಸ್ ಹಾಗೂ ಸೀರೆಗಳ ಜಾಹೀರಾತುಗಳು. ಭಾರತದಲ್ಲಿ ಗ್ರಾಹಕ ಸಂಸ್ಕೃತಿಯ ಹೊಸ ಆಯಾಮಗಳ ಬಗ್ಗೆ ತಿಳಿಯಲು ಜಾಹೀರಾತುಗಳನ್ನಷ್ಟೇ ಗಮನಿಸಿದರೆ ಸಾಕಾಗುತ್ತದೆ.

ಆಗಲೂ ಪ್ರಧಾನಿಯವರ ಕಳೇಬರ ಎ.ಐ.ಐ.ಎಂ.ಎಸ್.ನ ಎಂಟನೆಯ ಅಂತಸ್ತಿನ ಎರಡನೆಯ ನಂಬರ್ ಆಪರೇಶನ್ ಥಿಯೇಟರ್‌ನಲ್ಲೇ ಬಿದ್ದು ಕೊಂಡಿದೆ ಎಂಬುದನ್ನು ರವಿ ಜ್ಞಾಪಿಸಿಕೊಂಡ. ಹತ್ತಾರು ಗಾಯಗಳ ಮೂಲಕ ಹರಿದುಹೋದ ರಕ್ತಕ್ಕೆ ಬದಲಾಗಿ, ಆಸ್ಪತ್ರೆಗಳಲ್ಲಿ ಸಾಮಾನ್ಯವಾಗಿ ಎಮರ್ಜೆನ್ಸಿಗಾಗಿ ಕಾದಿರಿಸುತ್ತಿದ್ದ ಒ.ಆರ್.ಎಚ್. ನೆಗೆಟಿವ್‌ನ ನಾಲ್ಕು ಬಾಟಲಿ ರಕ್ತ ಸಾಕಾಗುತ್ತದೆಯೆ ಎಂದು ಆತ ಅಚ್ಚರಿಪಟ್ಟ. ಪಾಯಿಂಟ್ ಬ್ಲ್ಯಾಂಕ್ ರೇಂಜಿನಿಂದ ಗುಂಡು ಹಾರಿಸಿದಾಗ ಸಹಜವಾಗಿಯೇ ಗುಂಡುಗಳು ಒಂದು ಬದಿಯಿಂದ ಒಳಹೊಕ್ಕು ಇನ್ನೊಂದು ಬದಿಯಿಂದ ಹೊರನುಗ್ಗುತ್ತವೆ. ಎರಡು ಡಜನುಗಳಷ್ಟು ಗುಂಡುಗಳು ನಾಟಿದ ರಂಧ್ರಗಳನ್ನು ದಾದಿಯೇ ಲೆಕ್ಕ ಮಾಡಿದ್ದಳು. ಜಗತ್ತಿನ ಅತ್ಯಧಿಕ ಅಧಿಕಾರ ಬಲಹೊಂದಿರುವ ಮಹಿಳೆ, ಇಂಡಿಯನ್ ಕ್ಯಾಬಿನೆಟ್‌ನಲ್ಲಿರುವ ಏಕಮಾತ್ರ ಪುರುಷ ಎಂಬ ವಿಶೇಷಣಕ್ಕೊಳಗಾದ ಸ್ತ್ರೀ. ಹುಲಿಯ ಬೆನ್ನಮೇಲೆ ಕುಳಿತು ಬಿಜಯಂಗೈಯುವ ದುರ್ಗೆಯಾಗಿ ಚಿತ್ರಿಸಲ್ಪಟ್ಟಿರುವ ಭಾರತದ ಪ್ರಧಾನ ಮಂತ್ರಿ ಬಹಳಷ್ಟು ತೂತುಗಳಿಂದ ಒಂದು ಜರಡೆಯಾಗಿ ಆಪರೇಶನ್ ಟೇಬಲ್ ಮೇಲೆ ಬಿದ್ದು ಕೊಂಡಿದ್ದಾರೆ. ಆನಂದ ಭವನ್‌ನಲ್ಲಿ ಮೋತಿಲಾಲರ ಮಡಿಲಿನಲ್ಲಿ ಆಡುತ್ತ ಬೆಳೆದ, ಜವಾಹರಲಾಲರ ಪುತ್ರಿ, ಮಹಾತ್ಮಾ ಗಾಂಧೀಜಿಯ ಪ್ರಿಯದರ್ಶಿನಿ, ಕಮಲಾ ಅವರ ಮುದ್ದು ಮಗಳು, ಫಿರೋಜ್‌ರ ಸಹಧರ್ಮಿಣಿ. ನಿಜಕ್ಕೂ ಇನ್ನಷ್ಟು ಶಾಂತವಾದ ಒಂದು ಅಂತ್ಯಕ್ಕೆ ಅರ್ಹರಿದ್ದರು. ಅವರಿಗೆ ಯಾಕೆ ಅದು ದೊರೆಯಲಿಲ್ಲ? ಗಾಂಧೀಜಿಯ, ಕೆನಡಿಯ, ವಂಗಬಂಧುವಿನ ಹಾಗೂ ಲಿಂಕನ್‌ನ ಸಾಲಿಗೆ ಮತ್ತೋರ್ವ ಹುತಾತ್ಮರಾಗಿ ಸೇರಿದರು.

ಹಿಂಬದಿಯಿಂದ ನರಳಿಕೆ ಕೇಳಿದಾಗ ರವಿ ಹರ್‌ಭಜನ್‌ನನ್ನು ಕುರಿತು ಯೋಚಿಸಿದ. ಪ್ರಧಾನಿಯ ಬಗ್ಗೆ ಯೋಚಿಸಲಿಕ್ಕೂ ಸೂಕ್ತ ಕಾರ್ಯಗಳನ್ನು ನಿರ್ವಹಿಸಲಿಕ್ಕೂ ಅಧಿಕಾರದಲ್ಲಿರುವ ಬಹಳಷ್ಟು ಜನ ಇದ್ದಾರೆಂದು ಆತ ಅಂದುಕೊಂಡ. ತನ್ನ ಮಾನವೀಯ ಕರ್ತವ್ಯವಿರುವುದು ಈಗ ಹರ್‌ಭಜನ್‌ನ ಬಗ್ಗೆಯೇ. ತಿಳಿಗೇಡಿಗಳಾದ ಎರಡೋ, ಮೂರೋ ಮಂದಿಯ ದುರುಳತನ ಒಂದು ಜನ ಸಮೂಹವನ್ನೇ ಸಂಪೂರ್ಣ ಏಕಾಂಗಿಯಾಗಿ ಮಾಡಿಬಿಟ್ಟಿದೆ. ಪಗಡಿ ಸುತ್ತಿದ ಪ್ರತಿಯೊಬ್ಬ ವ್ಯಕ್ತಿಯೂ ದೆಹಲಿಯ ಗಲ್ಲಿಗಳಲ್ಲಿ, ಅಧಿಕಾರದ ಕಾರಿಡಾರ್‌ಗಳಲ್ಲಿ, ಭೂಸೇನೆಯ ತುಕಡಿಗಳಲ್ಲಿ, ವಿಮಾನಗಳ ಕಾಕ್‌ಪಿಟ್‌ಗಳಲ್ಲಿ, ನೌಕೆಗಳ ಡೆಕ್‌ಗಳಲ್ಲೆಲ್ಲ ಶಂಕಿಸಲ್ಪಡುತ್ತಿದ್ದಾನೆ. ಅವರ ಪ್ರಾಮಾಣಿಕತೆಯನ್ನು ಸಮರ್ಪಣಾ ಪ್ರಜ್ಞೆಯನ್ನು, ಸಾಬೀತುಪಡಿಸಲು ಅವರಿಗೆ ಸಾಧ್ಯವಾದೀತೆ? ವಿಭಜನೆಯ ದಿನಗಳಲ್ಲಿ ಹಿಂದೂ–

ಮುಸ್ಲಿಂ ಮತಾಭಿಮಾನಿಗಳು ಪರಸ್ಪರ ರಕ್ತ ಚೆಲ್ಲಿದ್ದಾಗ ಸಿಕ್ಖರು ಹಿಂದೂಗಳೊಂದಿಗೆ ಸ್ನೇಹದಿಂದ ಇದ್ದರು. ಸಿಕ್ಖ್ ಮತವನ್ನು ಹಿಂದೂ ಧರ್ಮದ ಉಪಶಾಖೆಯೆಂದೇ ಹತ್ತು ಮಂದಿ ಸಿಕ್ಖ್ ಗುರುಗಳೂ ಭಾವಿಸಿದ್ದರು. ಒಂದು ಕುಟುಂಬದಲ್ಲೆ ತಂದೆ ಸಿಕ್ಖ್. ತಾಯಿ ಹಿಂದೂ. ಹಿರಿಯ ಮಗ ಸಿಕ್ಖ್. ಮಿಕ್ಕವರೆಲ್ಲರೂ ಹಿಂದೂ – ಇಂತಹ ಎಷ್ಟೊಂದು ಕುಟುಂಬಗಳಿಲ್ಲ ಭಾರತದಲ್ಲಿ!

ಹರ್‌ಭಜನ್‌ನ ಹಾಗೆ ಎಷ್ಟೆಷ್ಟು ಮಂದಿ ಸಿಕ್ಖರು ಈದಿನ ಬೀದಿಗಳಲ್ಲಿ ಅಪಮಾನಿತರಾಗಿರಲಿಕ್ಕಿಲ್ಲ? ಎಷ್ಟು ಮಂದಿ ಈದಿನ ಹಲ್ಲೆಗೊಳಗಾಗಿರಲಿಕ್ಕಿಲ್ಲ? ಹರ್‌ಭಜನ್‌ನ ಹೆಂಡತಿ ಮನೆಯಲ್ಲಿ ಕಾದು ಕುಳಿತಿರುವುದು ಸಿಕ್ಖನಾಗಿರುವ ಹರ್‌ಭಜನ್‌ನನ್ನಲ್ಲ; ತನ್ನ ಗಂಡನನ್ನು. ಇಡೀ ದೆಹಲಿಯೇ ಒಂದು ಖೂನಿ ಸ್ಥಳವಾಗಿ ಮಾರ್ಪಡುತ್ತಿರುವುದನ್ನು ನೆನೆದು ರವಿ ಬೆಚ್ಚಿದ.

ಮೈನ್ ರೋಡ್‌ನಿಂದ ವೆಲ್ಲಿಂಗ್‌ಟನ್ ಆಸ್ಪತ್ರೆಯತ್ತಣದ ಡ್ರೈವ್ ಇನ್‌ಗೆ ತಲಪಿದಾಗ ಆತ ಸುತ್ತಲೂ ಕಣ್ಣುಹಾಯಿಸಿದ. ಇದೊಂದು ಆಸ್ಪತ್ರೆಯಲ್ಲ; ಸೇನಾ ಶಿಬಿರ ಎಂದೆನಿಸಿತು ರವಿಗೆ. ಬಯನೆಟ್ ಅಳವಡಿಸಲಾದ ಬಂದೂಕು ಹಿಡಿದ ಹೆಲ್ಮೆಟ್‌ಧಾರಿ ಸಿ.ಆರ್.ಪಿ. ಜವಾನರು. ಕ್ರಾಸ್ ಬೆಲ್ಟಿನಲ್ಲಿ ಪೋಣಿಸಲಾದ ತೋಟಾಗಳ ಹಿತ್ತಾಳೆ ಕ್ಯಾಪ್‌ಗಳು. ಸೆಕ್ಯೂರಿಟಿಯಲ್ಲಿ ಸಂಭವಿಸಿದ್ದ ಭೀಕರ ಸೋಲಿಗಾಗಿ ಸೇಡು ತೀರಿಸುತ್ತಿದ್ದಾರೆ ಅಧಿಕಾರಿ ವರ್ಗ.

ಕಾರು ನಿಂತೊಡನೆ ಓರ್ವ ಜವಾನ ಹತ್ತಿರಕ್ಕೆ ಬಂದು ತುಸು ಗಡುಸಾಗಿಯೇ ಹೇಳಿದ: "ಒಳಗೆ ಪ್ರವೇಶವಿಲ್ಲ."

ರವಿ ಹಿಂದಿನ ಸೀಟಿನಲ್ಲಿ ಪ್ರಜ್ಞೆಯಿಲ್ಲದೆ ಬಿದ್ದುಕೊಂಡಿರುವ ಹರ್‌ಭಜನ್‌ನನ್ನು ಬೆರಳು ಮಾಡಿ ತೋರಿಸುತ್ತ ಹೇಳಿ: "ಸೀರಿಯಸ್ ಕೇಸ್. ಕೂಡಲೇ ಶುಶ್ರೂಷೆ ಸಿಕ್ಕದೆ ಹೋದರೆ ಅಪಾಯ ಸಂಭವಿಸೀತು."

ಜವಾನ, ಒಡೆದ ಗಾಜಿನ ಮೂಲಕ ಒಳಗಡೆ ಸೂಕ್ಷ್ಮವಾಗಿ ದಿಟ್ಟಿಸಿದ. ಸರ್ದಾರ್ ಎಂದು ಗೊತ್ತಾದಾಗ ತಿರಸ್ಕಾರದಿಂದ ಜವಾನ ಹೇಳಿದ: "ಯೆ ತೋ ಆದ್ಮಿ ನಹಿ. ಸರ್ದಾರ್ ಹೈ."

ಬೇರೊಂದು ಸಂದರ್ಭದಲ್ಲಾಗಿದ್ದರೆ ಜವಾನನ ತಮಾಷೆಯಲ್ಲಿ ಪಾಲ್ಗೊಳ್ಳುತ್ತಿದ್ದ. ಆದರೆ ಹರ್‌ಭಜನ್‌ನ ಜೀವದ ಜವಾಬ್ದಾರಿ ತನ್ನ ಹೆಗಲ ಮೇಲಿದೆ. ಸರ್ದಾರ್ ಮನುಷ್ಯನಲ್ಲ ಎಂಬ ವಾದವನ್ನು ಬಲಪಡಿಸುವುದರಲ್ಲಿನ ಭಯಾನಕತೆ ರವಿಯನ್ನು ಬೆಚ್ಚಿಸಿತು. ಜವಾನನಿಗೆ ತಿಳಿಹೇಳಿ ಮನವರಿಕೆ ಮಾಡಿಸಲು ಆತ ಪ್ರಯತ್ನಿಸಿದ;

"ನೋಡಿ, ಜನ ಗುಂಪುಗೂಡಿ ಅವನನ್ನು ಹೊಡೆದು ಕಂಗಾಲು ಮಾಡಿದ್ದಾರೆ. ತತ್‌ಕ್ಷಣ ಚಿಕಿತ್ಸೆ ನೀಡಬೇಕಾಗಿದೆ. ಕ್ಯಾಜುವಲ್ಟಿಯಲ್ಲಿ ಕೂಡಲೆ ಅಡ್ಮಿಟ್ ಮಾಡಬೇಕು."

ಸಮೀಪದಲ್ಲೇ ಪಾರ್ಕ್ ಮಾಡಿದ್ದ ಆ್ಯಂಬುಲೆನ್ಸ್ ಬೊಟ್ಟುಮಾಡಿ ತೋರಿಸುತ್ತ



ಜವಾನ ಮುಂದುವರಿಸಿದ; "ಆ ಆ್ಯಂಬುಲೆನ್ಸ್‌ನಲ್ಲಿ ಎರಡು ಜಂತುಗಳು ಈಗ ತಲುಪಿದ್ದಷ್ಟೇ. ಸಾಲಾ.... ಹೌದು. ಅವರೇ. ಮ್ಯಾಡಂಗೆ ಗುಂಡಿಟ್ಟವರು. ಒಬ್ಬನನ್ನು ಐ.ಟಿ.ಬಿ.ಎಸ್.ನವರು ಮುಗಿಸಿಬಿಟ್ಟಿದ್ದಾರೆ. ಇನ್ನೊಬ್ಬನಿಗೂ ಗಂಭೀರ ಗಾಯಗಳಾಗಿವೆ. ಬಚಾವಾಗುವುದು ಅನುಮಾನಾಸ್ಪದವೇ. ಮ್ಯಾಡಂಗೆ ಗುಂಡು ಹೊಡೆದು ಅವರು ಕುಣಿಯುತ್ತಿರುವಾಗಲೇ ಇಂಡೋ–ಟಿಬಿಟಿಯನ್ ಬಾರ್ಡರ್ ಸೆಕ್ಯೂರಿಟಿಯವರು ಗುಂಡಿಟ್ಟದ್ದು."

ಕಾರಿನಲ್ಲಿ ಮಲಗಿರುವ ಸರ್ದಾರ್‌ನನ್ನು ನೋಡುತ್ತ ಜವಾನ ಪುನಃ ಅಬ್ಬರಿಸಿದ; "ತೆಗೆದುಕೊಂಡು ಹೋಗು. ನಿಗಂಬೋಧ್ ಘಾಟ್‌ನ ಮಸಣಕ್ಕೊಯ್ದು ಬಿಸಾಡು."

"ತಲೆಗೆ ಪಗಡಿ ಸುತ್ತಿರುವ ಒಬ್ಬನೇ ಒಬ್ಬ ಸರ್ದಾರನೂ ದೆಹಲಿಯಲ್ಲಿ ಜೀವಂತ ಇರಕೂಡದು."

ಅಷ್ಟರಲ್ಲೆ ಇನ್ನಷ್ಟು ಶಸ್ತ್ರಧಾರಿ ಜವಾನರುಗಳು ಸುತ್ತಲೂ ಜಮಾಯಿಸಿದರು. ಶಿಲಾಗೋಡೆಯೊಂದಕ್ಕೆ ತಲೆಬಡಿದುಕೊಳ್ಳುವುದರಿಂದ ಪ್ರಯೋಜನವಿಲ್ಲವೆಂದು ಅನ್ನಿಸಿತು ರವಿಗೆ. ಆತ ಹೇಳಿದ: "ಆಗಲಿ ಮಿತ್ರಾ, ನಾನು ಈತನನ್ನು ಮಸಣದಲ್ಲಿ ಬಿಸಾಡುತ್ತೇನೆ. ನನ್ನನ್ನು ಇಲ್ಲಿಂದ ಹೋಗಗೊಡಿ."

ರವಿ ಕಾರ್ ಹತ್ತಿದ. ರಿವರ್ಸ್ ತೆಗೆಯುವಾಗ ಆ್ಯಂಬುಲೆನ್ಸ್ ವ್ಯಾನನ್ನು ವಿಶೇಷವಾಗಿ ಗಮನಿಸಿದ. ಹೌದು, ಸಫ್ದರ್‌ಜಂಗ್‌ನ ಒಂದನೆಯ ನಂಬ್ರ ಫ್ಲ್ಯಾಟ್‌ನ ಹುಡಿಕಲ್ಲ ರಸ್ತೆಯಲ್ಲಿ ಎಲ್ಲಾ ಜೀವ ರಕ್ಷಕ ಸಾಮಗ್ರಿಗಳ ಸಮೇತ ಸಜ್ಜಾಗಿ ನಿಂತಿರುತ್ತಿದ್ದ ಆ್ಯಂಬುಲೆನ್ಸ್. ಪ್ರಧಾನಿಗೆ ಏನಾದರೂ ಸಂಭವಿಸಿದರೆ ಆಸ್ಪತ್ರೆಗೆ ತಲಪಿಸಬೇಕಾದದ್ದು ಈ ಆ್ಯಂಬುಲೆನ್ಸ್‌ನಲ್ಲಿ. ಎಷ್ಟೋ ರಿಹರ್ಸಲ್‌ಗಳನ್ನೂ ಎಷ್ಟೋ ಟ್ರಯಲ್‌ಗಳನ್ನೂ ನಡೆಸಬೇಕಾಗಿತ್ತು ಈ ಬಗ್ಗೆ. ಆದರೆ ಪ್ರಧಾನಿಗೆ ಅಪಾಯ ಸಂಭವಿಸಿದಾಗ, ಯಾರೂ ಆ್ಯಂಬುಲೆನ್ಸ್‌ನ್ನು ನೆನೆಯಲಿಲ್ಲ. ಹಗಲೂ ಇರುಳೂ ಸಜ್ಜಾಗಿ ನಿಂತಿರುತ್ತಿದ್ದ ಡಾಕ್ಟರುಗಳ, ನರ್ಸ್‌ಗಳ ಸೇವೆಯಾಗಲೀ, ಪರಿಣತರ ಸೇವೆಯಾಗಲಿ ಪ್ರಧಾನಿಗೆ ಲಭಿಸಲಿಲ್ಲ. ಸಾರ್ವಜನಿಕ ವೇದಿಕೆಗಳಲ್ಲಿ ಟಿ.ವಿ. ಕ್ಯಾಮೆರಾಗಳ ಫ್ಲ್ಯಾಶ್ ಸೆಟ್‌ಗಳ ಮುಂದೆ ಯಾವಾಗಲೂ ಕಾಣಿಸಿಕೊಳ್ಳುತ್ತಿದ್ದ ಧವನ್, ಮಖನ್‌ಲಾಲ್, ನಾಥುರಾಂ ಪ್ರಭೃತಿಗಳು ಗುಂಡು ಹಾರುವ ಹೊತ್ತು ಸಮೀಪಿಸಿದ್ದಾಗ ಎಲ್ಲಿದ್ದರೊ ಏನೊ? ಶಸ್ತ್ರಧಾರಿಗಳಾದ ಪರ್ಸನಲ್ ಸೆಕ್ಯೂರಿಟಿ ಗಾರ್ಡ್‌ಗಳೂ ಅವರ ಕರ್ತವ್ಯವನ್ನು ಮರೆತುಬಿಟ್ಟರು.

ಅಂತೂ ಆ ಆ್ಯಂಬುಲೆನ್ಸ್ ವ್ಯಾನ್‌ನಿಂದ ಪ್ರಯೋಜನವಾದದ್ದು ಪ್ರಧಾನಿಯನ್ನು ಗುಂಡಿಟ್ಟು ಕೊಂದ ಸ್ವಾಮಿ ದ್ರೋಹಿಗಳನ್ನು ಆಸ್ಪತ್ರೆಗೆ ತಲಪಿಸುವುದಕ್ಕೇ. ಸಬ್ ಇನ್ಸ್‌ಪೆಕ್ಟರ್, ಬಿಯಾಂತ್ ಸಿಂಗ್‌ನನ್ನೂ ಕಾನ್ಸ್‌ಟೇಬಲ್ – ಸತ್‌ವಂತ್ ಸಿಂಗ್‌ನನ್ನೂ ಆಸ್ಪತ್ರೆಗೆ ತಲಪಿಸಲಿಕ್ಕೆ. ಸಿ.ಆರ್.ಪಿ. ಜವಾನರು ಹೇಳಿದ್ದು ನಿಜವಾಗಿದ್ದರೆ ಬಿಯಾಂತ್

ಸಿಂಗನು ಸಿ.ಬಿ.ಐ.ಯ, ರಾದ (RAW) ಮತ್ತು ಪೋಲೀಸರ ಇರಿಯುವ ಪ್ರಶ್ನಾವಳಿಗೂ ಕ್ರೂರ ದಂಡನೆಗಳಿಗೂ ಎದುರಾಗದ ಜಗತ್ತಿಗೆ ತಲಪಿರುತ್ತಾನೆ. ಇಷ್ಟರಲ್ಲೇ ಸತ್‌ವಂತ್ ಸಿಂಗ್ ಬಚಾವ್ ಆದನೆಂದರೆ ಆತ ಮೊತ್ತಮೊದಲು ಈ ಆ್ಯಂಬುಲೆನ್ಸ್ ವ್ಯಾನ್‌ಗೇ ಶಾಪ ಹಾಕಿಯಾನು.

ರವಿ ಒ.ಪಿ.ಡಿ. ವಾರ್ಡ್‌ಗೆ ಬಲ ಬಂದು ಮುಖ್ಯ ರಸ್ತೆಗೆ ಕಾರ್ ತಿರುಗಿಸಿದ. ಹರ್‌ಭಜನ್‌ನ ನರಳಿಕೆ ಹೆಚ್ಚಾಗಿದೆ. ಹಣೆಯ ಗಾಯದಿಂದ ರಕ್ತ ಒಸರುವುದು ನಿಂತಿದೆ.

ಇನ್ನು ಎಲ್ಲಿಗೆ ಎಂಬುದೇ ರವಿಯ ಈಗಿನ ಚಿಂತೆ. ಯಾವುದಾದರೂ ಖಾಸಗಿ ವೈದ್ಯರನ್ನು ಸಮೀಪಿಸಲೆ? ಮೆಡಿಕೊ ಲೀಗಲ್ ಕೇಸ್ ಆಗಿರುವುದರಿಂದ ಯಾರೂ ಚಿಕಿತ್ಸೆಗೆ ಒಪ್ಪುವುದಿಲ್ಲ. ಥಟ್ಟನೆ ಮುಲ್‌ಚಂದ್ ಹಾಸ್ಪಿಟಲ್ ನೆನಪಿಗೆ ಬಂತು. ಅಲ್ಲಿನ ಮೆಡಿಕಲ್ ಸುಪರಿಂಟೆಂಡೆಂಟ್‌ರ ಪರಿಚಯವಿದೆ ರವಿಗೆ.

ರೇಕಾಬ್‌ಗಂಜ್ ಗುರುದ್ವಾರದ ಮುಂಭಾಗದ ಮಾರ್ಗ ಕ್ರಮಿಸಿದ ಬಳಿಕ ಪಟೇಲ್ ಚೌಕ್‌ಗೆ ತಿರುಗಲು ರವಿ ಕಾರ್‌ನ ವೇಗ ಹೆಚ್ಚಿಸಿದ. ಮೂರಾಳು ಎತ್ತರದ ಗೋಡೆಯೆಬ್ಬಿಸಿ ಭರ್ಜಿ ಮೊನೆಗಳನ್ನೂರಿದ್ದ ಗುರುದ್ವಾರ ಗತ ಶತಮಾನದ ಕೋಟೆಯೊಂದನ್ನು ನೆನಪಿಸಿತು.

ಎತ್ತರದ ಕಳಶಕ್ಕೆ ಅಳವಡಿಸಲಾದ ಚಿನ್ನದ ಹಾಳೆಗಳು ಮಸುಕಾದ ಬಿಸಿಲಿನಲ್ಲೂ ಥಳಗುಟ್ಟುತ್ತಿವೆ. ಸಿಕ್ಖರ ಮಟ್ಟಿಗೆ ಗುರುದ್ವಾರವು ಪ್ರಾರ್ಥನಾ ಮಂದಿರ ಅಷ್ಟೇ ಅಲ್ಲ. ಅಲ್ಲಿನ 'ಲಂಕಾರು'ಗಳಲ್ಲಿ ಅವರಿಗೆ ಉಚಿತವಾಗಿ ಊಟವು ಲಭಿಸುತ್ತದೆ. ಅಲ್ಲಿನ 'ಪಿಯಾವೊ'ಗಳಲ್ಲಿ ಪಾನಕ ದೊರೆಯುತ್ತದೆ. ಎಲ್ಲಕ್ಕಿಂತ ಮಿಗಿಲಾಗಿ ಗುರುದ್ವಾರದ ನೆಲಮನೆಗಳಲ್ಲಿ ಜೋಪಾನವಾಗಿರಿಸಲಾದ ಆಯುಧಗಳು ಅವರನ್ನು ಶತ್ರುಗಳಿಂದ ಕಾಪಾಡುತ್ತವೆ. ಕಾಲ ಬದಲಾಗುವುದಕ್ಕನುಗುಣವಾಗಿ ಅವರ ಶತ್ರುಗಳೂ ಬದಲಾಗುತ್ತಾರೆ. ಗುರುಗೋವಿಂದ ಸಿಂಗರ ಕಾಲದಲ್ಲಿ ಮೊಗಲರು ಮತ್ತು ಮುಸ್ಲಿಮರೇ ಪ್ರಧಾನ ಶತ್ರುಗಳಾಗಿದ್ದರು. ಭಾರತ ವಿಭಜಿಸಲ್ಪಟ್ಟಾಗಲೂ, ಬಂಗ್ಲಾದೇಶ್ ವಿಮೋಚಿಸಲ್ಪಟ್ಟಾಗಲೂ ಆ ಶತ್ರುತ್ವ ಕಡಿಮೆಯಾಗಲಿಲ್ಲ. ಹಿಂದೂವನ್ನು ಯಾವತ್ತೂ ಅವರು ಶತ್ರುವೆಂದು ಭಾವಿಸಲಿಲ್ಲ. ಗುರುದ್ವಾರದ ಲಂಕಾರುಗಳು ಯಾವತ್ತೂ ಹಿಂದುಗಳಿಗಾಗಿ ತೆರೆದಿಟ್ಟಿತ್ತು. 'ಗುರುಗ್ರಂಥ ಸಾಹಿಬ್'ನಲ್ಲಿ ಜಯದೇವನ, ನಾಮದೇವನ ಹಾಗೂ ರವಿದಾಸನ ಶ್ಲೋಕಗಳನ್ನೂ ಸೇರಿಸಲಾಗಿದೆ. ಮೀರಾಳ ಭಜನೆಗಳಿವೆ: ಕಬೀರ್ ಮತ್ತು ಶೇಕ್ ಫರೀದ್‌ರ ದೋಹಗಳಿವೆ. ಎಲ್ಲ ಗುರುವರ್ಯರೂ ಹಿಂದೂ ದೇವರುಗಳನ್ನು ಅಂಗೀಕರಿಸಿದ್ದಾರೆ. ಒಡಹುಟ್ಟಿದವರು, ಕೈಹಿಡಿದವರು, ಸಂಬಂಧಿಕರು ಎಂಬೀ ನೆಲೆಗಳಲ್ಲಿ ಹಿಂದೂ ಮತ್ತು ಸಿಕ್ಖರು ಒಂದೇ ಸೂರಿನಡಿಯಲ್ಲಿ ಜೀವಿಸುತ್ತಿದ್ದಾರೆ.



ಧೀರೇಂದ್ರ ಬ್ರಹ್ಮಚಾರಿಯ ಯೋಗಾಶ್ರಮ ದಾಟಿ, ಗೋಲ್ಡಾಕ್‌ಖಾನ್ ಬಳಸಿ, ಗುರುದ್ವಾರದೆದುರು ತಲಪಿದಾಗ ಎಂದೂ ಇಲ್ಲದಂಥ ಜನಸಂದಣಿ. ರವಿ ಕಾರಿನ ವೇಗ ತಗ್ಗಿಸಿದ. ಸಿಕ್ಖ ಯುವಕರು ಬಾಂಗ್ಡಾ, ನೃತ್ಯ ಮಾಡುತ್ತಿರುವರು. ದೋಲಕ್‌ಗಳ ಭಾರೀ ಸದ್ದು. ರಿಂಗಣ ಸುತ್ತುತ್ತಿರುವ ಕುಣಿತಕ್ಕೆ ಚುರುಕಿನ ಹಾಗೂ ತೀವ್ರಗತಿಯ ತಾಳ, ಲಯಗಳು.

ರವಿ ನೆನಪಿಗೆ ತಂದುಕೊಳ್ಳಲು ಯತ್ನಿಸಿದ. ಇವತ್ತು ಸಿಕ್ಖ ಧರ್ಮೀಯರ ಯಾವುದಾದರೂ ಪವಿತ್ರ ದಿನವೆ? ಯಾವುದಾದರೂ ಗುರುವಿನ ಪುಣ್ಯ ತಿಥಿಯೆ? ಪ್ರಾಯಶಃ ಕೂಗಳತೆ ದೂರದಲ್ಲಿ ದೇಶದ ಪ್ರಧಾನಿಯವರಿಗೆ, ಮೈಮರೆತು ನರ್ತಿಸುತ್ತಿರುವ ಇವರ ಸೋದರರಿಬ್ಬರು ಗುಂಡಿಟ್ಟ ಸಂಗತಿ ಇವರಿಗೆ ತಿಳಿದಿರಲಿಕ್ಕಿಲ್ಲ. ನರ್ತನ ಅಷ್ಟೇ ಅಲ್ಲ. ಚೂಡಿದಾರ್, ಕಮೀಸ್ ಮತ್ತು ದುಪ್ಪಟಧಾರಿಣಿಯರಾದ ಸಿಕ್ಖ ಸುಂದರಿಯರೂ ಲಾಡು ಮತ್ತು ಬರ್ಫಿಗಳನ್ನು ಹಂಚುತ್ತಲೂ ಇದ್ದಾರೆ. ಶ್ವೇತಛತ್ರ ತಳೆದ ಕುದುರೆಯಾಗಲಿ, ಬ್ಯಾಂಡ್ ವಾದ್ಯದವರಾಗಲಿ ಕಾಣಿಸಲಿಲ್ಲ. ಮದುವೆ ಸಮಾರಂಭವಂತೂ ಅಲ್ಲ ಎನಿಸುತ್ತದೆ.

ಕಾರು ನಿಲ್ಲಿಸಿ ಪ್ರಧಾನಿಯವರ ನಿಧನ ವಾರ್ತೆಯನ್ನು ಇವರಿಗೆ ತಿಳಿಸಿದರೇನು? ನರ್ತನಕ್ಕೆ ಹಿಮ್ಮೇಳ ಒದಗಿಸುತ್ತಿರುವ ಮಾತುಗಳನ್ನು ರವಿ ಗಮನಿಸಿದ್ದು ಆಗಷ್ಟೇ "ಖಾಲಿಸ್ಥಾನ್‌ಗೆ ಇನ್ನು ಹೆಚ್ಚು ದೂರವಿಲ್ಲ. ವಾಹ್ ಗುರುವಿನ ಅನುಗ್ರಹದಿಂದ ಖಾಲ್ಸಾ ರಾಜ್ಯಭಾರ ಮಾಡುವುದೂ ಖಚಿತವೇ. ಸ್ವರ್ಣ ಮಂದಿರದಲ್ಲಿ ಚೆಲ್ಲಿದ ರಕ್ತಕ್ಕೆ ತಕ್ಕ ಬೆಲೆಯನ್ನೂ ನಾವು ಕೇಳುವೆವು." ಹರಿತವಾದ ಒಂದು ಕತ್ತಿ ಕರುಳಿಗಿಳಿಯುತ್ತಿರುವ ಹಾಗೆ. ರವಿ ಆ ಸತ್ಯವನ್ನು ಅರಿತ ಸಿಕ್ಖರು ಪ್ರಧಾನಮಂತ್ರಿ ಕೊಲೆಯಾದ ಬಗ್ಗೆ ಸಂತಸಾಚರಣೆ ಮಾಡುತ್ತಿದ್ದಾರೆ! ಸ್ವರ್ಣ ಮಂದಿರಕ್ಕೆ ಸೇನೆಯನ್ನು ನುಗ್ಗಿಸಿದ ಪ್ರಧಾನಿಯನ್ನು ಮುಗಿಸಿ ಬಿಟ್ಟ ಬಗ್ಗೆ ಅವರು ಎಲ್ಲವನ್ನೂ ಮರೆತು ಸಂತೋಷ ಪಡುತ್ತಿದ್ದಾರೆ. ಅವರ ಮಟ್ಟಿಗೆ ನಿರಾಯುಧಳೂ, ಅಸಹಾಯಕಳೂ ಆದ ಓರ್ವ ಮಹಿಳೆಯಲ್ಲ ಇಂದಿರಾ; ಖಾಲಿಸ್ಥಾನ್ ಎಂಬ ಕನಸನ್ನು ನನಸು ಮಾಡಲು ಬಿಡದ, ಸ್ವರ್ಣ ಮಂದಿರದ ಪರಿಪಾವನತ್ವವನ್ನು ನಾಶಮಾಡಿದ್ದ ಹೆಂಗಸು ಆಕೆ.

ರವಿ ಹಿಂದಿನ ಸೀಟಿನಲ್ಲಿ ನರಳುತ್ತ ಬಿದ್ದುಕೊಂಡಿರುವ ಹರ್‌ಭಜನ್‌ನನ್ನು ಯಾವುದೋ ಕರಾಳ ಭಾವಾವೇಶದ ಗುಲಾಮರಾಗಿ ಮೈಮರೆತು ನರ್ತಿಸುತ್ತಿರುವ ಸಿಕ್ಖರನ್ನು ಸರದಿಯಂತೆ ದಿಟ್ಟಿಸಿದನು. ಕೆಲವೇ ನಿಮಿಷಗಳ ಹಿಂದೆ ಎಲ್ಲಾ ಸರ್ದಾರ್‌ಗಳನ್ನೂ ನಿರ್ನಾಮ ಮಾಡಬೇಕು ಎಂದು ಅಬ್ಬರಿಸಿದ್ದ ಸಿ.ಆರ್.ಪಿ. ಜವಾನನನ್ನೂ ಜ್ಞಾಪಿಸಿಕೊಂಡನು.

ಹೌದು, ದೆಹಲಿಯ ಗಲ್ಲಿಗಳಲ್ಲಿ, ಮನೆಗಳಲ್ಲಿ, ಆಫೀಸ್‌ಗಳಲ್ಲಿ, ಚೌಕ್‌ಗಳಲ್ಲಿ

ಎಲ್ಲಕ್ಕಿಂತ ಹೆಚ್ಚಾಗಿ ಕುಟುಂಬಗಳಲ್ಲಿ ಮತವೈರದ ಬಿರುಕುಗಳು ಹುಟ್ಟಿಕೊಂಡಿವೆ.

ಹುಚ್ಚೆದ್ದ ಜನಸಂದಣಿಯ ಮಧ್ಯದಲ್ಲಿ ಓರ್ವ ಗಾಯಗೊಂಡ ಸಿಕ್ಖನೊಂದಿಗೆ ಹಾನಿಗೊಂಡ ಕಾರಿನಲ್ಲಿ ಕುಳಿತಿರುವುದರಲ್ಲಿಯ ಅಪಾಯ ರವಿಯನ್ನು ಎಚ್ಚರಗೊಳಿಸಿತು.

ಆತ ಆಕ್ಸಿಲೇಟರ್‌ನಲ್ಲಿ ಕಾಲೊತ್ತಿದ. ಪಟೇಲ್ ಚೌಕ್ ದಾಟಿ ಜನ್‌ಪಥ್‌ಗುಂಟ ಷಾಜಹಾನ್ ರೋಡ್‌ನತ್ತ ಕಾರ್ ನಡೆಸಿದ. ಗೋಲ್ಫ್‌ಲಿಂಕ್ ದಾಟಿ ಮಥುರಾ ರೋಡ್‌ಗೆ ಪ್ರವೇಶಿಸಿದಾಗ ಪುರಾಣ ಕಾಲದ ಎತ್ತರವಾದ ಆವರಣ ಗೋಡೆಗಳು ಕಾಣಿಸಿದವು. ಇಂದ್ರಪ್ರಸ್ಥದ ಗಾಳಿಯಲ್ಲಿ ಭೀಮನ ಮತ್ತು ದುರ್ಯೋಧನನ ಗರ್ಜನೆಗಳು. ಆದರೆ ರವಿಯನ್ನು ಕಂಗೆಡಿಸಿದ್ದು ಗಾಂಧಾರಿ, ದುಶ್ಶಲೆ, ಉತ್ತರೆಯರ ದೀನ ರೋದನಗಳಾಗಿದ್ದವು.

* * *



## ಅಧ್ಯಾಯ ೩

# ಮನಮೋಹನನ ಉಮ್ಮಳ

ಡಿಫೆನ್ಸ್ ಕಾಲನಿಯ ಫ್ಲೈ ಓವರ್‌ನ ಮೇಲ್ಗಡೆ ವಾಹನಗಳ ಓಡಾಟ ವಾಡಿಕೆಗಿಂತ ಹೆಚ್ಚಾಗಿದೆ. ದೂರದಲ್ಲಿ ನೆಹರು ಸ್ಟೇಡಿಯಮ್‌ನ ಭೀಮಗಾತ್ರದ ಲೈಟ್ ಟವರುಗಳು. ಬೋಗನ್‌ವಿಲ್ಲಾಗಳ ಸಿಮೆಂಟ್ ಚಟ್ಟಿಗಳು ಸಮನಾದ ಅಂತರಗಳಲ್ಲಿದ್ದು ಸೊಬಗು ಹೆಚ್ಚಿಸಲಾದ ಫ್ಲೈ ಓವರ್‌ನ ಬೆನ್ನ ಮೇಲೆ ತಲುಪಿದಾಗ, ದೂರದಲ್ಲಿರುವ ಮೂಲ್‌ಚಂದ್ ಹಾಸ್ಪಿಟಲ್‌ನ ಉನ್ನತವಾದ ಟವರ್ ಕ್ಲಾಕ್‌ನಲ್ಲಿ ಗಂಟೆ ಒಂದು ಕಳೆದಿತ್ತು.

ಕೆಂಪು ಬಣ್ಣ ಬಳಿದಿರುವ ಆಸ್ಪತ್ರೆಯ ಕ್ಯಾಜುವಲ್ಟಿಯಲ್ಲಿ ಹೆಚ್ಚಿನ ಗಜಿಬಿಜಿ ಇರಲಿಲ್ಲ. ಹಾನಿಗೀಡಾದ ಕಾರ್ ಮತ್ತು ಗಾಯಗೊಂಡ ಸರ್ದಾರ್‌ಜಿ ಕಾಣಿಸಿಕೊಂಡಾಗ, ದೂರದಲ್ಲಿ ಒಂದು ಫೋಲ್ಡಿಂಗ್ ಕುರ್ಚಿಯಲ್ಲಿ ಕುಳಿತು ಆಕಳಿಸುತ್ತಿದ್ದ ಕಾನ್‌ಸ್ಟೇಬಲ್ ಬಳಿಗೆ ಬಂದ.

ಕಾನ್‌ಸ್ಟೇಬಲ್ ಜತೆ ಸಂಭಾಷಣೆ ಮೆಡಿಕಲ್ ಸೂಪರಿಂಟೆಂಡೆಂಟರನ್ನು ಕಂಡ ಬಳಿಕ ಸಾಕು ಎಂದುಕೊಂಡನು ರವಿ. ಎಂ.ಎಸ್.ರ ಕೋಣೆಯಲ್ಲಿ ಅವರು ಒಬ್ಬರೇ ಇದ್ದರು. ಓವರ್ ಕೋಟ್ ಕಳಚಿ ಲಂಚ್‌ಗೆ ಹೊರಡುವವರಿದ್ದರವರು. ತುಟಿಯಲ್ಲಿರಿಸಿದ್ದ ಪೈಪ್‌ಗೆ ಬೆಂಕಿ ಹಚ್ಚುತ್ತ ಅವರು ಪ್ರಶ್ನಿಸಿದರು: "ಏನಾದದ್ದು?" ಆದದ್ದನ್ನು ರವಿ ಸಂಕ್ಷೇಪಿಸಿ ಹೇಳಿದ. ಕ್ಯಾಜುವಲ್ಟಿಗೆ ಅವರೂ ಜತೆಯಲ್ಲಿ ಬಂದರು. ಅಷ್ಟರಲ್ಲೇ ಡ್ಯೂಟಿಯಲ್ಲಿದ್ದ ಡಾಕ್ಟರ್ ಹರ್‌ಭಜನ್‌ನನ್ನು ತಪಾಸಣೆ ಮಾಡಿ ವಾರ್ಡ್‌ಗೆ ಕಳುಹಿಸಿದ್ದರು. ಡ್ಯೂಟಿ ಡಾಕ್ಟರ್ ತಪಾಸಣೆಯ ಫಲಿತಾಂಶ ತಿಳಿಸಿದರು.

"ತಲೆಗೆ ಆದ ಗಾಯ ಕ್ಷುಲ್ಲಕ. ಎಡಗೈಯ ಒಂದು ಮೂಳೆ ಮುರಿದಿದೆ. ಬಾಯಿಯೊಳಗಿನ ಮೂರು ಹಲ್ಲುಗಳು ನಷ್ಟವಾಗಿವೆ. ಹೀ ಈಸ್ ಇನ್ ಶಾಕ್. ಬಟ್ ಹಿ ವಿಲ್ ಕಂ ತ್ರೂ... ಶಾರೀರಿಕ ಗಾಯಗಳಿಗಿಂತಲೂ ಮಾನಸಿಕ ಆಘಾತವೇ ಆತನನ್ನು ಹೆಚ್ಚು ಕಂಗೆಡಿಸಿದೆ."

ನರ್ಸ್ ಹರ್‌ಭಜನ್‌ನ ಗಾಯಗಳನ್ನು ಡ್ರೆಸ್ ಮಾಡಿದಳು. ಕೈಗೆ ಬ್ಯಾಂಡೇಜ್ ಸುತ್ತಿ ಕಟ್ಟಿ, ನಿದ್ರೆಯ ಇಂಜೆಕ್ಷನ್ ಕೊಡಲಾಯಿತು. "ಲೆಟ್ ಹಿಂ ಸ್ಲೀಪ್... ನಥಿಂಗ್ ಟು ವರಿ."

ಎಂ.ಎಸ್.ರಿಗೂ ಡ್ಯೂಟಿ ಡಾಕ್ಟರರಿಗೂ ವಂದನೆ ಹೇಳಿ ರವಿ ಹೊರ ನಡೆದ. ಆಫೀಸ್‌ಗೆ ತೆರಳಿ ಶ್ರೀವಾಸ್ತವರಿಗೆ ಸುದ್ದಿ ತಿಳಿಸಬೇಕು. ಪ್ರಾಯಶಃ ಇಷ್ಟರಲ್ಲೇ ನಿಜಸ್ಥಿತಿ ಅವರಿಗೆ ತಿಳಿದಿರಬಹುದು. ತ್ರಿಪಾಠಿ ಅಥವಾ ಬೇರೆ ಯಾರಾದರೂ ಫೋನ್‌ನಲ್ಲಿ ಸಿಕ್ಕಿರಬಹುದು. ಹರ್‌ಭಜನ್ ಎಚ್ಚರಗೊಳ್ಳುವಷ್ಟರಲ್ಲಿ ಆತನ ಕುಟುಂಬದ ಸದಸ್ಯರನ್ನು ಆಸ್ಪತ್ರೆಗೆ ತಲಪಿಸುವ ಬಗ್ಗೆ ವ್ಯವಸ್ಥೆ ಮಾಡಬೇಕು. ಕಾರ್ ವರ್ಕ್‌ಶಾಪ್‌ಗೆ ಕಳುಹಿಸಬೇಕು. ಆಫೀಸ್‌ನ ಇನ್ನಿತರ ತರಾತುರಿ ಕೆಲಸಗಳನ್ನು ಸದ್ಯ ಮುಂದೂಡಬೇಕು. ಪ್ರಧಾನ ಮಂತ್ರಿಗಳಿಗಾಗಿ ಸಿದ್ಧಗೊಳಿಸಬೇಕಾದ ಭಾಷಣದ ಮಟ್ಟಿಗೆ ಇನ್ನು ಅವಸರವಿಲ್ಲ. ಥಟ್ಟನೆ ರವಿಯ ಯೋಚನೆ ಬೇರೊಂದು ದಾರಿ ಹಿಡಿಯಿತು. ಯಾರಾಗಿರಬಹುದು ಮುಂದಿನ ಪ್ರಧಾನಿ? ಕಾಂಗ್ರೆಸ್ ಸಂಸತ್ ಮಂಡಲಿ ಮುಂದಿನ ನಾಯಕನನ್ನು ಆಯ್ಕೆ ಮಾಡಲು ವಿಳಂಬವಾದೀತು. ಸಂಪುಟದಲ್ಲಿ ಸರ್ವಾನುಮತಿಯ ಎರಡನೆಯ ವ್ಯಕ್ತಿ ಇಲ್ಲದ ಕಾರಣ ರಾಷ್ಟ್ರಪತಿ ಓರ್ವ ಮಧ್ಯಾವಧಿ ಪ್ರಧಾನಿಯನ್ನು ನೇಮಿಸುವ ಸಾಧ್ಯತೆ ಇದೆ.

ಶ್ರೀವಾಸ್ತವರ ಕೋಣೆಯಲ್ಲಿ ಎಲ್ಲರೂ ಕಾತರದಿಂದ ಕಾಯುತ್ತ ಕುಳಿತಿದ್ದಾರೆ. ಇಲ್ಲ, ಇವರಿಗೆ ಸ್ಪಷ್ಟ ಸುದ್ದಿ ಯಾವುದೂ ಸಿಕ್ಕಿಲ್ಲ. ಹಲವೆಡೆಗಳಿಂದ ಊಹೆಗಳನ್ನು ರೂಮರ್‌ಗಳನ್ನು ಕೇಳಿದ್ದರು. ಗುಂಡು ನಾಟಿದ್ದು ಪ್ರಧಾನಿಗಲ್ಲ. ಪ್ರಧಾನಿಯ ಡ್ಯೂಪ್‌ಗೆ ಎಂಬುದಾಗಿತ್ತು, ಒಂದು ವದಂತಿ. ಅದೂ ಆಪರೇಶನ್ ಬ್ಲೂ ಸ್ಟಾರ್‌ನ ಬಳಿಕ ಸೆಕ್ಯೂರಿಟಿಯ ಅಂಶವಾಗಿ ದೆಹಲಿಯ ಪೊಲೀಸರು ಹಮ್ಮಿಕೊಂಡ ಮನೋರಂಜನೆಗಳಲ್ಲಿ ಒಂದಾಗಿತ್ತು. ಪ್ರಧಾನಿಯ ಕಾರ್ಯಕ್ರಮಗಳನ್ನು ಪ್ರಯಾಣ ಪಥಗಳನ್ನು ಅಂತಿಮ ಕ್ಷಣದ ತನಕ ಗೋಪ್ಯವಾಗಿರಿಸುವುದು. ಅದರ ಅನಂತರ ತಪ್ಪು ಗ್ರಹಿಕೆ ಉಂಟು ಮಾಡುವಂತೆ ಪ್ರಧಾನಿಯ ಹಾಗೆ ವೇಷ ತೊಟ್ಟ ಸ್ತ್ರೀಯರನ್ನು ಬಿಳಿ ಬಣ್ಣದ ಅಂಬಾಸಿಡರ್ ಕಾರ್‌ಗಳಲ್ಲಿ ಎಸ್ಕಾರ್ಟ್ ಸಹಿತ ರಾಜ ಮಾರ್ಗಗಳ ಮೂಲಕ ಮೆರವಣಿಗೆ ಮಾಡಿಸುವುದು. ಬುಲ್ಲೆಟ್ ಪ್ರೂಫ್ ವೆಸ್ಟ್ ತೊಟ್ಟುಕೊಳ್ಳುತ್ತಿದ್ದ ಪ್ರಧಾನಿಗೆ ಗುಂಡು ತಾಗಿದರೂ ಏನೂ ಸಂಭವಿಸಲಾರದೆಂದೇ ಎಲ್ಲರ ಗ್ರಹಿಕೆಯೂ ಆಗಿತ್ತು.

ರಾಯ್ ಚೌಧರಿಯ ಟ್ರಾನ್ಸಿಸ್ಟರ್‌ನಲ್ಲಿ ಅನುರಾಧ ಪೊದುವಾಲ್ ಹಾಗೂ ಸುರೇಶ್ ವಾಡ್ಕರ್ ಜತೆಯಾಗಿ ಹಾಡುತ್ತಿರುವ ಯುಗಳ ಗೀತೆಯ ಮೆಲುವಾದರೂ ದ್ರುತ ತಾಳದ ಗಾಯನ.

ಶ್ರೀವಾಸ್ತವರ ಕಾತರ. ಮಾತುಗಳಲ್ಲಿ ಪ್ರಕಟವಾಗಿತ್ತು: "ಕಮಾನ್ ರವಿ, ವಾಟೀಸ್ ದ ಲೇಟೆಸ್ಟ್?"

ಮಾತುಗಳಿಗೆ ಬಣ್ಣ ಹಚ್ಚಿ ಚಂದಗೊಳಿಸಬೇಕಾದ ಸಮಯವಲ್ಲ ಅದೆಂದು ರವಿಗೆ ಗೊತ್ತು. ಆತ ಚುಟುಕಾಗಿ ಹೇಳಿದ: "ಪಿ.ಎಂ. ಈಸ್ ಡೆಡ್. ಅಸಾಸಿನೇಟೆಡ್



ಬೈ ಹರ್ ಓನ್ ಸೆಕ್ಯೂರಿಟಿ ಗಾರ್ಡ್ಸ್." ಕೋಣೆಯೊಳಗೆ ಒಂದು ನಿಮಿಷದ ತನಕ ಯಾರೂ ದನಿಯೆತ್ತಲಿಲ್ಲ. ರಾಯ್ ಚೌಧರಿ ಟ್ರಾನ್ಸಿಸ್ಟರ್ ಆಫ್ ಮಾಡಿದ. ಎ.ಸಿ.ಯ ಕಿರು ಮರ್ಮರವಷ್ಟೇ ಕೋಣೆಯಲ್ಲಿ ಉಳಿದಿದೆ. ಶ್ರೀವಾಸ್ತವ ಅರ್ಧವೂ ಸೇದಿರದ ಸಿಗರೇಟ್ ಕುಕ್ಕಿ ನಂದಿಸಿದರು. ಬಳಿಕ ಬೇರೊಂದು ಯೋಚನೆಯ ಅಧೀನಕ್ಕೊಳಗಾದವರ ಹಾಗೆ ಮತ್ತೊಂದು ಸಿಗರೇಟ್ ಹಚ್ಚಿದರು.

ಕ್ರೈಸಿಸ್ ಮೆನೇಜ್‌ಮೆಂಟ್‌ನ ಪ್ರಾಥಮಿಕ ಪಾಠಗಳನ್ನು ಮರೆತ ಮಿತ್ತಲ್ ಯಾವ ಕಾರಣವೂ ಇಲ್ಲದೆ ಕುಳಿತಲ್ಲಿಂದ ಎದ್ದರು. ಬಳಿಕ ಪುನಃ ಕುಳಿತರು. ಫೋನ್ ಎತ್ತಿ ಡಯಲ್ ಮಾಡತೊಡಗಿದರು. ಪುನಃ ಬೇಡವೆಂದುಕೊಂಡು ಫೋನ್ ಕೆಳಗಿಟ್ಟರು. ಏನೋ ಮಾಡಬೇಕಾಗಿತ್ತು. ಏನು ಮಾಡಲೂ ಸಾಧ್ಯವಾಗುತ್ತ ಇಲ್ಲ, ಎಂಬಂತೆ.

ಶೇಷಾದ್ರಿಯ ಶರಟು ಬೆವರಿನಲ್ಲಿ ತೊಯ್ದಿದೆ. ಆತ ಸೋಡಾ ಬಾಟ್ಲಿಯ ಗಾಜಿನಂತಹ ಕನ್ನಡಕದ ಮಸೂರಗಳನ್ನು ಶರಟಿನ ಅಂಚಿನಿಂದ ಒತ್ತಿ ಒರೆಸಿದರು. ಪ್ರಧಾನಿಯ ರಕ್ಷಣೆಗೆ ಒದಗದೆ ಹೋದ ಜ್ಯೋತಿರ್ಗೋಲಗಳಿಗೆ ಆತ ಮನಸ್ಸಿನಲ್ಲೇ ಶಾಪ ಹಾಕುತ್ತಿದ್ದರು.

ಕೇಡಿಗನಾದ ಶನಿಯನ್ನು ಹದ್ದಿನಲ್ಲಿರಿಸುವ ಮಟ್ಟಿಗೆ ಇತರ ಗ್ರಹಗಳು ಪರಾಭವ ಹೊಂದಿವೆ.

ಶ್ರೀವಾಸ್ತವ ಕಾಲಿಂಗ್ ಬೆಲ್ ಒತ್ತಿದರು. ಮೋತಿಲಾಲ್ ಎಂಬ ದಫ್ತರಿ ಖದ್ದರ್ ಟೋಪಿ ಸರಿಯಾಗಿರಿಸುತ್ತ ಒಳಗೆ ಬಂದ.

"ಠಂಡಾ ಪಾನೀ."

ತಂಪು ನೀರಿನ ಟ್ರೇ ಹಿಡಿದುಕೊಂಡು ಮೋತಿಲಾಲ್ ಪುನಃ ಬಂದ. ಶೇಷಾದ್ರಿ ಮೂರು ಲೋಟ ನೀರು ಒಂದೇ ಸಮನೆ ಕುಡಿದರು. ತಂಪು ನೀರನ್ನು ಗುಟುಕರಿಸುವುದರ ನಡುವೆ ಶ್ರೀವಾಸ್ತವ ಹೇಳಿದರು: "ಅನದರ್ ಬ್ಯಾನಿಯನ್ ಟ್ರೀ ಹ್ಯಾಸ್ ಫಾಲನ್...."

ಮೌನ ಮುತ್ತಿಗೆ ಹಾಕಿದಾಗ, ಅವರೆಲ್ಲ ಮಾತುಗಳ ಅಕ್ಷೌಹಿಣಿಯೊಳಗೆ ಅಭಯವನ್ನರಿಸಿದರು. ರವಿ ತನಗೆ ಗೊತ್ತಿರುವಷ್ಟು ಸಂಗತಿಗಳನ್ನು ವಿವರಿಸಿದ. ಪಿ.ಎಂ. ನಿಧನರಾದರು ಎಂಬ ಸತ್ಯದೊಂದಿಗೆ ಹೊಂದಿಕೊಳ್ಳಲು ಬ್ಯೂರೋಕ್ರಸಿ ಇನ್ನಷ್ಟು ವೇಳೆ ತೆಗೆದುಕೊಂಡಿತು. ಈ ಹೊತ್ತಿನಲ್ಲಿ ಭಾರತವನ್ನಾಳುತ್ತಿರುವುದೂ ಬ್ಯೂರೋ ಕ್ರಾಟ್‌ಗಳೇ. ರಾಷ್ಟ್ರನಾಯಕತ್ವ ಅನಿಶ್ಚಿತವಾದಾಗಲೆಲ್ಲ ಬ್ಯೂರೋಕ್ರಾಟ್‌ಗಳು ಆ ಸ್ಥಾನವನ್ನು ಆಕ್ರಮಿಸಲು ಯತ್ನಿಸಿದ್ದಾರೆ. ಸದ್ಯ ಕೃಷ್ಣಸ್ವಾಮಿರಾವ್ ಸಾಹೇಬ್ ಮತ್ತು ಅಲೆಕ್ಸಾಂಡರ್ ಇರುವುದು ಮುಂಬಯಿಯಲ್ಲಿ. ಧಾವನ್ ಶಾಕ್‌ನಿಂದ ಬಿಡುಗಡೆ ಹೊಂದಿಲ್ಲ. ನೇಪಥ್ಯದಿಂದ ಸೂತ್ರವೆಳೆಯುತ್ತಿರುವುದು ತ್ರಿಪಾಠಿ. ರಾಷ್ಟ್ರಪತಿ ಇನ್ನೂ

ಮರಳಿ ಬಂದಿಲ್ಲ. ರಾಜೀವ್ ಮತ್ತು ಪ್ರಣಬ್ ಪಶ್ಚಿಮ ಬಂಗಾಲದ ಯಾವುದೋ ಸ್ಥಳದಿಂದ ಮರಳಿ ಹೊರಟಿರಬಹುದು.

ರಾಷ್ಟ್ರಪತಿ ಬಂದ ಬಳಿಕವೇ ಮಧ್ಯಾವಧಿ ಪ್ರಧಾನ ಮಂತ್ರಿಯ ಬಗ್ಗೆ ನಿರ್ಧಾರವಾದೀತು.

ಶ್ರೀವಾಸ್ತವ, ಹಿಂದಿನ ಎರಡು ಸಂದರ್ಭಗಳಲ್ಲೂ ಪ್ರಧಾನ ಮಂತ್ರಿಗಳ ನಿಧನಾನಂತರ ರೂಪುಗೊಂಡ ಬದಲಿ ವ್ಯವಸ್ಥೆಯನ್ನು ನೆನಪಿಸಿದರು.

"ಪಂಡಿತ್‌ಜಿ ಮಡಿದಾಗಲೂ, ತಾಷ್ಕೆಂಟಿನಲ್ಲಿ ಶಾಸ್ತ್ರೀಜಿ ಮಡಿದಾಗಲೂ, ಗೃಹ ಸಚಿವ ನಂದಾ ಅವರೇ ಆ ಸ್ಥಾನವನ್ನು ಹೊಂದಿದ್ದರು. ಸಂಪ್ರದಾಯದ ಪ್ರಕಾರ ನರಸಿಂಹರಾಯರ ಸರದಿ ಈಗ."

ರಾಯ್ ಚೌಧರಿ ಭಿನ್ನಮತ ವ್ಯಕ್ತಪಡಿಸಿದರು: ಸಂಪುಟದಲ್ಲಿ ದ್ವಿತೀಯ ಸ್ಥಾನಿಯಾಗಿರುವವರು ಅರ್ಥ ಸಚಿವರಾದುದರಿಂದ ಅವರಿಗೆ ಆದ್ಯತೆ. ಶೇಷಾದ್ರಿಯೂ ಆತನನ್ನು ಬೆಂಬಲಿಸಿದರು. "ದಟ್ ಗೋಸ್ ವಿದೌಟ್ ಸೇಯಿಂಗ್." ಬಂಗಾಳಿಯೇ ಆಗಿರುವ ಚೌಧರಿಯೂ ಶ್ರೀಮತಿ ಪ್ರಣಬ್‌ರ ಸಂಗೀತ, ನೃತ್ಯ ಸಭೆಗಳನ್ನು ಸಂಯೋಜಿಸುವ ಶೇಷಾದ್ರಿಯೂ ಪ್ರಣಬ್ ಬಗ್ಗೆ ಆಸಕ್ತಿ ಹೊಂದುವುದರಲ್ಲಿ ಅಚ್ಚರಿ ಪಡಬೇಕಿಲ್ಲ.

ಶ್ರೀವಾಸ್ತವ ವಿಷಯ ಬದಲಾಯಿಸಿದರು: "ರವಿ, ಯು ಇನ್‌ಫಾರ್ಮ್ ಹರ್‌ಭಜನ್‌ಸ್ ಫ್ಯಾಮಿಲಿ."

ರವಿ ತನ್ನ ಕೊಠಡಿಗೇ ಮರಳಿದ. ಟೆಲಿಫೋನ್ ಸಂದೇಶಗಳನ್ನು ಬರೆದಿಟ್ಟಿದ್ದ ಪ್ಯಾಡ್ ಸಹಿತ ದರ್ಶನ್ ಬಂದಳು. ರವಿ ಯಾವ ಪ್ರಶ್ನೆಯನ್ನೂ ಕೇಳಲಿಲ್ಲ. ಕಣ್ಣುಗಳ ಆರ್ದ್ರತೆಯಲ್ಲೇ ಅವಳ ಎಲ್ಲಾ ಪ್ರಶ್ನೆಗಳನ್ನೂ ಓದಲು ಆತನಿಗೆ ಸಾಧ್ಯವಾಯಿತು.

"ಸಾರಿ ದರ್ಶನ್, ನಿನ್ನ ಬೇಡಿಕೆಗೆ ದೇವರು ಕಿವಿಗೊಡಲಿಲ್ಲ. ಮ್ಯಾಡಮ್‌ಗೆ ಸ್ಟೆನ್‌ಗನ್‌ಗಳಿಂದ ಗುಂಡಿಟ್ಟದ್ದು ಇಬ್ಬರು ದಾರಿ ತಪ್ಪಿದ್ದ ಸರ್ದಾರ್‌ಗಳೇ, ಅವರ ಶರೀರಕ್ಕೆ ಒಂದು ತರಚುಗಾಯ ಕೂಡ ಆಗದ ಹಾಗೆ ಸಂರಕ್ಷಿಸುವ ಹೊಣೆ ಹೊತ್ತವರೇ."

ಅವಳ ಮುಖ ವಿವರ್ಣವಾಯಿತು. ಕಣ್ಣುಗಳು ತುಂಬಿದವು. ತನ್ನಷ್ಟಕ್ಕೇ ಎಂಬಂತೆ ಪ್ರಶ್ನಿಸಿದಳು. "ವೈ ಡಿಡ್ ದೆ ಡು ಇಟ್? ನಮಕ್ ಹರಾಮ್... ಎ ಬ್ರೀಚ್ ಆಫ್ ಟ್ರಸ್ಟ್. ಗುರುಗೋವಿಂದ್ ಸಿಂಗ್, ಅವರನ್ನು ಕ್ಷಮಿಸರು. ಓರ್ವ ಹೆಣ್ಣಿಗೆದುರಾಗಿ ಯಾವತ್ತೂ ಆಯುಧ ಎತ್ತಕೂಡದೆಂದು ಗುರುಗೋವಿಂದ್ ಸಿಂಗ್ ಎಷ್ಟೋ ಬಾರಿ ಹೇಳಿರುವರು."

"ಕಾಂ ಡೌನ್ ದರ್ಶನ್. ದೆ ಆರ್ ಜಸ್ಟ್ ಎ ಕಪ್‌ಲ್ ಆಫ್ ಮಿಸ್‌ಗೈಡೆಡ್



ಬಾಯ್ಸ್."

ಅವಳು ಒಂದು ಕ್ಷಣ ದಂಗಾಗಿ ಕುಳಿತಳು. ಬಳಿಕ ತನಗೇ ಎಂಬಂತೆ: "ಐ ಶಡರ್ ಟು ಥಿಂಕ್ ಆಫ್ ದ ಕಾನ್ಸಿಕ್ವೆನ್ಸಸ್. ನಿರಾಯುಧರನ್ನು ಹಿಂಸಿಸಬಾರದು. ಓರ್ವ ಸ್ತ್ರೀಯನ್ನು ಯಾವತ್ತೂ ಹಿಂಸಿಸಬಾರದು. ಆಕೆಯ ಜೀವರಕ್ಷಣೆಯ ಹೊಣೆ ಹೊತ್ತವರೇ ಮೂರು ಮಹಾಪರಾಧಗಳನ್ನೂ ಮಾಡಿರುವರು."

"ತಲೆಗೆ ರುಮಾಲು ಸುತ್ತಿದವರೆಲ್ಲರೂ ಶಂಕಿಲಸ್ಪಡುವರು. ಗುರುದ್ವಾರಗಳೆಲ್ಲವೂ ಸೇನಾಶಿಬಿರಗಳಾಗಿ ಮಾರ್ಪಡುವವು. ಕೂದಲು ಬಿಟ್ಟ ಹುಡುಗರು ಶಾಲೆಗಳಲ್ಲಿ ಅಪಹಾಸ್ಯಕ್ಕೆ ಗುರಿಯಾಗುವರು. ಒಂದು ಇಡೀ ಸಮಾಜವೇ ಬಹಿಷ್ಕೃತವಾಗುತ್ತದೆ."

ಆತ ಆಕೆಯ ಹೆಗಲ ಮೇಲೆ ಕೈಯಿರಿಸಿದ. "ಟೇಕ್ ಇಟ್ ಈಸೀ. ಮನುಷ್ಯನ ಮೂಲಭೂತವಾದ ಮಾನವೀಯತೆಯಲ್ಲಿ ನಾವು ನಂಬಿಕೆಯನ್ನಿರಿಸೋಣ."

"ಹರ್‌ಭಜನ್ ಆಸ್ಪತ್ರೆಯಲ್ಲಿರುವನು. ಆತನ ಮನೆಯವರಿಗೆ ವಿಷಯ ತಿಳಿಸಬೇಕು."

ರವಿ ಸೆಕ್ಷನ್‌ನಿಂದ ಹರ್‌ಭಜನ್‌ನ ಮನೆ ವಿಳಾಸ ಹುಡುಕಿ ತೆಗೆದ. ಹೆಚ್ಚೇನೂ ದೂರದಲ್ಲಿಲ್ಲ ಅಮರ್ ಕಾಲನಿ. ಮೂಲ್‌ಚಂದ್ ಹಾಸ್ಪಿಟಲ್ ದಾಟಿ ರಿಂಗ್ ರೋಡ್‌ನಲ್ಲಿ ಬಲಕ್ಕೆ ತಿರುಗಿದರೆ ಲಜ್ಪತ್ ನಗರ್, ಎದುರು ಬದಿಯಲ್ಲಿ ಆಶ್ರಮದ ಹಾಗೂ ಆ್ಯಂಡ್ರೂಸ್ ಗಂಜ್‌ಗಳ ನಡುವೆ ಹಬ್ಬಿಕೊಂಡಿರುವುದೇ ಅಮರ್ ಕಾಲನಿ. ನಾಲ್ವತ್ತೇಳರಲ್ಲಿ ಕೋಮು ಗಲಭೆ ಸ್ಫೋಟಗೊಂಡಾಗ ಎಲ್ಲವನ್ನೂ ಬಿಟ್ಟು ಬಿಟ್ಟು ಓಡಿ ಬಂದ ನಿರಾಶ್ರಿತರ ಪೈಕಿ ಅನೇಕ ಮಂದಿಯನ್ನು ನೆಲೆಗೊಳಿಸಿದ್ದು ಇಲ್ಲಿ. ಲಾಹೋರ್‌ನಿಂದ, ಗುರುದಾಸ್‌ಪುರ್‌ನಿಂದ ಫಿರೋಜ್‌ಪುರ್‌ನಿಂದ, ಲೂಧಿಯಾನದಿಂದ ಎಲ್ಲವನ್ನೂ ಬಿಸುಟುಬಿಟ್ಟು ಜೀವ ಹಿಡಿದುಕೊಂಡು ಓಡಿ ಬಂದವರವರು. ಅವರ ಆಪ್ತರೂ ಸಂಬಂಧಿಕರೂ ಕೂಡ ಹಾದಿಯಲ್ಲಿ ಕೊಲೆಗೈಯಲ್ಪಟ್ಟಿದ್ದರು. ಹೆಂಡತಿಯೂ, ಸೋದರಿಯರೂ, ಹೆಣ್ಣು ಮಕ್ಕಳೂ ಬಲಾತ್ಕಾರದಿಂದ ಭೋಗಿಸಲ್ಪಟ್ಟಿದ್ದರು. ನಿಡಿದಾದ ಹಾದಿಗಳನ್ನು ತೆವಳುತ್ತ ಹಾದು ಬಂದ ಬಂಡಿಗಳಲ್ಲಿ ಮಡುಗಟ್ಟಿದ್ದ ರಕ್ತದ ಹಾಗೂ ಆಪ್ತೇಷ್ಟರ ಹೆಣದ ರಾಶಿಗಳೆಡೆಯಿಂದಲೇ ಪಾರಾಗಿದ್ದರವರು. ನಿರಾಶ್ರಿತ ಶಿಬಿರಗಳಲ್ಲಿ ಕಳೆದಿದ್ದ ದಿನಗಳು ಭಯಾನಕವಾಗಿದ್ದವು; ದಾರುಣವಾಗಿದ್ದವು. ಅವರಿಗೆ ಸರಕಾರ ದಾಖಲಿಸಿಕೊಟ್ಟ ನೂರು ಗಜ ಸ್ಥಳ ಮತ್ತು ಸಾವಿರ ರೂಪಾಯಿ ನೆರವಿನಿಂದ ಅವರೊಂದು ಹೊಸ ಜೀವನವನ್ನು ಆರಂಭಿಸಿದ್ದರು. ಚಿಕ್ಕ ಪುಟ್ಟ ವ್ಯಾಪಾರ: ಮಾರ್ಗದ ಬದಿಯಲ್ಲಿ ಆಟೋ ರಿಪೇರಿ; ಪಾನ್ ಶಾಪ್, ದಾಲ್, ರೋಟಿ, ಸಬ್ಜಿಗಳನ್ನು ಮಾರುವ ಧಾಬಾಗಳು. ಚಾಟ್ ಮಸಾಲ ಮಾರುವ ತಳ್ಳುವ ಗಾಡಿಗಳು. ಕೆಲವರೆಲ್ಲ ತಮ್ಮ ಅದೃಷ್ಟ ಪರೀಕ್ಷೆಗೆ ಸದರ್ ಬಜಾರ್ ಹಾಗೂ ಚಾಂದ್ನೀ ಚೌಕ್‌ಗಳಿಗೆ ತೆರಳಿದ್ದರು.

ಕಳೆದ ನಲುವತ್ತು ವರ್ಷಗಳ ಅವಧಿಯಲ್ಲಿ ಅವರು ಸುರಿಸಿದ್ದ ಬೆವರು ವ್ಯರ್ಥವಾಗಲಿಲ್ಲ. ಫಟ್‌ಫಟ್ ಮತ್ತು ಆಟೋ ರಿಕ್ಷಾಗಳಿಂದ ಕಾಯಕವನ್ನು ಆರಂಭಿಸಿದ್ದವರಿಗೆ ಈಗ ಸ್ವತಂದ್ದೇ ಆದ ಡಿ.ಎಲ್.ವೈ ಕಾರುಗಳನ್ನೂ, ಡಿ.ಎಲ್.ಝಡ್ ಕಾರುಗಳನ್ನೂ ಒಳಗೊಂಡ ಟ್ಯಾಕ್ಸಿ ಸ್ಟ್ಯಾಂಡ್‌ಗಳಿವೆ. ಹಾದಿ ಬದಿಯ ಆಟೋ ರಿಪೇರರ್‌ಗಳು ಅಭಿವೃದ್ಧಿ ಹೊಂದಿ ಸ್ವಂತದ್ದೇ ಆದ ಆಧುನಿಕ ಯಂತ್ರ ಸಾಮಗ್ರಿಗಳನ್ನೊಳಗೊಂಡ ವರ್ಕ್‌ಶಾಪ್‌ಗಳ ಮಾಲಿಕರಾಗಿದ್ದಾರೆ. ದಾರಿ ಬದಿಯಲ್ಲಿ ಠಂಡಾ ಪಾನೀ ಮಾರುತ್ತಿದ್ದವರಿಗೆ ಈಗ ಸಾಫ್ಟ್ ಡ್ರಿಂಕ್ ಫ್ಯಾಕ್ಟರಿಗಳಿವೆ. ಧಾಬಾಗಳನ್ನು ನಡೆಸಿಕೊಂಡಿದ್ದ ಕೆಲವರಾದರೂ ಪಂಚತಾರಾ ಹೊಟೇಲುಗಳ ಮಾಲಕರಾಗಿರುವರು. ಮದುವೆ ಮತ್ತಿತರ ಸಮಾರಂಭಗಳಿಗೆ ಪಾತ್ರೆಗಳನ್ನು, ತೋರಣಗಳನ್ನು, ಶಾಮಿಯಾನಗಳನ್ನು ಬಾಡಿಗೆಗೆ ಒದಗಿಸುತ್ತಿದ್ದವರು ಪ್ರೆಶರ್ ಕುಕ್ಕರ್, ಫ್ಯಾನ್, ಡೆಸರ್ಟ್ ಕೂಲರ್ ಮುಂತಾದುವುಗಳನ್ನು ತಯಾರಿಸುವ ಫ್ಯಾಕ್ಟರಿಗಳ ಮಾಲೀಕರಾಗಿದ್ದಾರೆ.

ಐಶ್ವರ್ಯದ ಸಾಧನೆಯಲ್ಲೇ ಅವರು ತಮ್ಮ ವಿಭಜನೆಯ ಕಹಿ ಅನುಭವಗಳನ್ನು ಮರೆಯಲು ಯತ್ನಿಸುತ್ತಿರುವರು. ನೂರುಗಜ ಜಾಗದಲ್ಲಿ ಒಂದೇ ಕೋಣೆಯಾಗಿ ಶುರು ಮಾಡಲಾದ ಮನೆಗಳು ಮೇಲಕ್ಕೇರುತ್ತಾ ಇವೆ. ಮೂರು ಕೋಣೆಗಳ ಫ್ಲ್ಯಾಟ್‌ಗಳಿಗಿರುವ ಎರಡಂತಸ್ತಿನ ಕಟ್ಟಡಗಳು. ಮೂರನೆಯ ಅಂತಸ್ತಿನಲ್ಲಿ ಬರ್ಸಾತಿ ಎಂಬ ತ್ರಿಶಂಕು. ಪಂಚವಾರ್ಷಿಕ ಯೋಜನೆಗಳ ಮೂಲಕ ನಗರ ಅಭಿವೃದ್ಧಿ ಹೊಂದುತ್ತ ಬಂದಾಗ ಬಾಡಿಗೆ ಮೂಲದ ವರಮಾನವೂ ವೃದ್ಧಿಸತೊಡಗಿತ್ತು.

ಅಮರ್ ಕಾಲನಿಗೆ ನಿರಾಶ್ರಿತರ ಕಾಲನಿ ಎಂಬ ಹೆಸರು ಮರೆಯಾಯಿತು. ಮಧ್ಯಮ ಮಟ್ಟದ ಬಿಸಿನೆಸ್‌ವಾಲಾಗಳ, ಮಿಡ್‌ಲ್ ಲೆವೆಲ್ ಎಕ್ಸಿಕ್ಯೂಟಿವ್‌ಗಳ, ವಿದೇಶೀ ದೂತಾವಾಸಗಳ, ಪ್ರೈವೇಟ್ ಕಂಪೆನಿಗಳ, ಮಧ್ಯಮ ವರ್ಗದ ಸರಕಾರಿ ನೌಕರರೇ ಮುಂತಾದವರ ವಾಸಸ್ಥಳವಾಯಿತು.

ರಿಂಗ್ ರೋಡ್‌ನಿಂದ ಅಮರ್ ಕಾಲನಿಗೆ ಪ್ರವೇಶಿಸುವ ಮಾರ್ಗದಲ್ಲೇ ಇದೆ ವರ್ಕ್‌ಶಾಪ್. ಟ್ರಿಮ್ ಮಾಡಲಾದ ಗಡ್ಡ ನೀವುತ್ತ ಸರ್ದಾರ್‌ಜಿ ಸಮೀಪಕ್ಕೆ ಬಂದ. ವಿಂಡ್ ಸ್ಕ್ರೀನ್ ಪುಡಿಯಾಗಿರುವ, ಬಾನೆಟ್ ಜಜ್ಜಲ್ಪಟ್ಟ, ಡೋರ್‌ಗಳು ಜಾಂ ಆಗಿರುವ ಕಾರನ್ನು ಆತ ಒಮ್ಮೆ ಇಡಿಯಾಗಿ ಅವಲೋಕಿಸಿದ.

"ಹರ್‌ಭಜನ್‌ನದ್ದಲ್ಲವೆ ಸಾರ್ ಈ ಕಾರು?"

"ಹೌದು!"

"ಹರ್‌ಭಜನ್ ಕಿಥೇ?"

"ಆಸ್ಪತ್ರೆಯಲ್ಲಿ."

ನಲುವತ್ತು ಮೀಟರ್ ಮೀರದ ಹರ್‌ಭಜನ್‌ಗೆ ಅಪಘಾತ ಸಂಭವಿಸಿತೆಂದು ನಂಬಲು ಸರ್ದಾರ್‌ಜಿಗೆ ಸಾಧ್ಯವಾಗಲಿಲ್ಲ. ನಡು ಮಧ್ಯಾಹ್ನ ಹನ್ನೆರಡು ಗಂಟೆಗೆ



ಸರ್ದಾರ್‌ಗಳನ್ನು ಬಾಧಿಸುತ್ತದೆ ಎಂದು ಹಾಸ್ಯ ಮಾಡಲಾಗುತ್ತಿರುವ "ಮಧ್ಯಾಹ್ನದ ಹುಚ್ಚು" ಹರ್‌ಭಜನ್‌ನನ್ನು ಬಾಧಿಸಿರಬಹುದು ಎಂದುಕೊಂಡನಾತ.

"ನಾಳೆಗೆ ಕಾರ್ ದುರಸ್ತಿ ಮಾಡಿರುತ್ತೇನೆ." ಸರ್ದಾರ್‌ಜಿ ಭರವಸೆಯಿತ್ತ. ರವಿ ನಡೆದು ಮುಂದೆ ಸಾಗುತ್ತಿರುವಾಗ ಸರ್ದಾರ್‌ಜಿ ಕೂಗಿ ಹೇಳಿದ: ಹರ್‌ಭಜನ್‌ಗೆ ಹೆಚ್ಚಿನ ಗಾಯವೇನೂ ಆಗಿಲ್ಲವಲ್ಲ? ಇಲ್ಲವೆಂದು ರವಿ ತಲೆಯಾಡಿಸಿದ. ಜೇಬಿನಲ್ಲಿರಿಸಿದ್ದ ಹರ್‌ಭಜನ್‌ನ ಮನೆ ವಿಳಾಸ ನೋಡಿದ. ಮನೆಯಿರುವ ಸ್ಥಳ ಎರಡು ಬ್ಲಾಕ್‌ಗಳಾಚೆಗೆ. ಆತ ನಡೆದ. ಹೊರಗೆ ಚಾರ್ಪಾಯ್‌ಗಳು ಖಾಲಿ ಬಿದ್ದುಕೊಂಡಿವೆ. ಬದಿಯಲ್ಲಿ ಮೂರು ಟ್ಯಾಕ್ಸಿ ಕಾರುಗಳು ಮತ್ತು ಒಂದು ಫಟ್‌ಫಟನ್ನು ಅಡಕವಾಗಿರಿಸಲಾಗಿದೆ. ಹರ್‌ಭಜನ್‌ನ ಮನೆಯವರು ಒಳಗಡೆ ಮಧ್ಯಾಹ್ನದ ಊಟದ ಅವಸರದಲ್ಲಿರುವಂತೆ ಅನ್ನಿಸಿತ್ತು ಆತನಿಗೆ.

ಆತ ಡೋರ್ ಬೆಲ್‌ನಲ್ಲಿ ಬೆರಳೊತ್ತಿದ, ನೆತ್ತಿಯ ಮೇಲೆ ಸುತ್ತಿದ್ದ ಕೂದಲನ್ನು ಒಂದು ಕರವಸ್ತ್ರದಿಂದ ಅಡಕವಾಗಿ ಕಟ್ಟಿಕೊಂಡಿದ್ದ ಹನ್ನೆರಡು ವರ್ಷದ ಹುಡುಗನೊಬ್ಬ ಬಾಗಿಲು ತೆರೆದ. ಅಪರಿಚಿತನನ್ನು ಕಂಡಾಗ ಕುಳಿತುಕೊಳ್ಳಲು ಹೇಳಿ ಅವನು ಒಳಗಡೆ ಓಟಕಿತ್ತ. ಚೊಕ್ಕವಾದ ಎಂಬ್ರಾಯಡರಿಗಳಿಂದ ಕೂಡಿದ್ದ ಬಿಳಿಯ ಕವರ್ ಹಾಕಿರುವ ಸೋಫಾದಲ್ಲಿ ಆತ ಕುಳಿತುಕೊಂಡ. ಸ್ವಾಗತ ಕೊಠಡಿ ಚಿಕ್ಕದು. ಸೋಫಾ ಮತ್ತು ಟೀಪಾಯ್‌ಗಳನ್ನು ದಿವಾನ್ ಮತ್ತು ಮೂಡಗಳಾಗಿ ವಿಂಗಡಿಸಲಾದ ಕೊಠಡಿ. ಭಿತ್ತಿಯಲ್ಲಿ, ಬಿಳಿ ಕುದುರೆಯ ಮೇಲೆ ಕುಳಿತಿರುವ ಗುರುಗೋವಿಂದ್ ಸಿಂಗ್‌ರ ಕಟ್ಟು ಹಾಕಿದ್ದ ಚಿತ್ರ. ಅಕ್ಕಪಕ್ಕಗಳಲ್ಲಿ ಒಂದೇ ಗಾತ್ರದ, ಕಟ್ಟುಹಾಕಲಾದ ಇತರ ಚಿತ್ರಗಳನ್ನೂ ರವಿ ಗಮನಿಸಿದ. ಬಿಗಿದ ಎದೆಯೊಳಗೆ ಶ್ರೀರಾಮಚಂದ್ರನನ್ನು ಅಡಗಿಸಿಟ್ಟಿರುವ ಭಕ್ತ ಹನುಮಂತ! ಅಭಯ ಮುದ್ರೆಯ ಸಂತೋಷಿ ಮಾತೆ. ಯಮುನಾ ತೀರದಲ್ಲಿ ರಾಸಲೀಲೆಯಾಡುತ್ತಿರುವ ರಾಧಾಕೃಷ್ಣರು. ಇಂಡಿಯನ್ ಆರ್ಮಿಯ ಯುನಿಫಾರಂ ತೊಟ್ಟಿರುವ ಚಿಕ್ಕ ಪ್ರಾಯದ ಹರ್‌ಭಜನ್‌ನ ಸಾಕಷ್ಟು ದೊಡ್ಡ ಗಾತ್ರದ ಒಂದು ಚಿತ್ರವನ್ನು ಟೀಪಾಯ್ ಮೇಲೆ ಇರಿಸಲಾಗಿದೆ.

ಆತ ತಳಮಳಕ್ಕೊಳಗಾದ. ಏನು ತಪ್ಪು ಮಾಡಿದ್ದಾನೆ ಹರ್‌ಭಜನ್? ಹೆಜ್ಜೆಯ ದನಿ ಕೇಳಿ ಆತ ಹಿಂತಿರುಗಿ ನೋಡಿದ. ಸಲ್ವಾರ್ ಕಮೀಜ್ ತೊಟ್ಟು ದುಪಟ್ಟಾದಿಂದ ತಲೆಗೆ ಮುಸುಕೆಳೆದುಕೊಂಡಿರುವ ಓರ್ವ ಹೆಂಗಸು. ಹರ್‌ಭಜನ್‌ನ ತಾಯಿಯಿರಬಹುದು. ಖಾಕಿ ಶರಟುಧಾರಿಗಳಾದ ಇಬ್ಬರು ಸರ್ದಾರ್‌ಗಳು. ಇಬ್ಬರೂ ಚಿಕ್ಕ ಪ್ರಾಯದವರು. ಹರ್‌ಭಜನ್‌ನ ತಮ್ಮಂದಿರಿರಬಹುದು. ಹೊರಗೆ ನಿಂತಿರುವ ಟ್ಯಾಕ್ಸಿಗಳು ಇವರದ್ದಿರಬಹುದು. ಅಲ್ಲದೆ ಇಬ್ಬರು ಹುಡುಗರು ಹತ್ತೊ ಹನ್ನೆರಡೋ ವರ್ಷ ಪ್ರಾಯದವರು.

ಆತ ಗಂಟಲು ಸರಿಪಡಿಸಿಕೊಂಡ. ಹೇಗೆ ಶುರು ಮಾಡುವುದೆಂದು ಒಂದು

ಕ್ಷಣ ಅನುಮಾನಿಸಿದ. ಬಳಿಕ ಮಾತುಗಳು ಉದುರಿದವು.

* * *

ದರ್ಶನ್ ಎರಡು ಗಂಟೆಗೆ ಕಚೇರಿಯಿಂದ ಹೊರಟಳು. ಪ್ರಧಾನಮಂತ್ರಿಗಳ ನಿಧನ ವಾರ್ತೆಯನ್ನು ಇನ್ನೂ ಅಧಿಕೃತವಾಗಿ ಘೋಷಿಸಲಿಲ್ಲ. ಆದರೆ ದೆಹಲಿಯ ಪ್ರತಿಯೊಂದು ಮಗುವಿಗೆ ಕೂಡ ಅದು ಗೊತ್ತಾಗಿತ್ತು. ಪ್ರಧಾನಿ ಕ್ರೂರವಾಗಿ ಕೊಲೆಗೈಯಲ್ಪಟ್ಟಿದ್ದಾರೆ ಎಂದು. ಬಿ.ಬಿ.ಸಿ.ಯಲ್ಲಿ ಫ್ಲಾಷ್ ಮಾಡಲಾದ ವಾರ್ತೆಯನ್ನು ಆಕಾಶವಾಣಿಯಲ್ಲಿ ಉದ್ಯೋಗದಲ್ಲಿರುವ ಗೆಳತಿ ದರ್ಶನ್‌ಗೆ ತಿಳಿಸಿದ್ದಳು. 'ಟೈಮ್ಸ್ ಆಫ್ ಇಂಡಿಯಾ'ದ ಸ್ಪೋರ್ಟ್–ನ್ಯೂಸ್‌ನಲ್ಲಿ ಪ್ರಧಾನಿಯ ಕೊಲೆಯಾಗಿದೆ ಎಂದು ಮೊದಲು ತೋರಿಸಲಾಗಿತ್ತು. ಬಳಿಕ ಅದನ್ನು ಪ್ರಧಾನಿಗೆ ಗುಂಡು ಹೊಡೆಯಲಾಗಿದೆ ಎಂಬುದಾಗಿ ಬದಲಾಯಿಸಿದ್ದರು.

ಬಸ್‌ಸ್ಟಾಂಡಿನಲ್ಲಿ ಎಂದಿನದಕ್ಕಿಂತಲೂ ಹೆಚ್ಚು ನೂಕು ನುಗ್ಗಲಿದೆ. ರಜಾದಿನವೆಂದು ಘೋಷಿಸಿಲ್ಲವಾದರೂ ಇಂತಹ ಅಪೂರ್ವ ದಿನಗಳಲ್ಲಿ ಸೆಕ್ರೆಟರಿಯೇಟಿನ ಬಾಬುಗಳು ಸ್ವತಃ ಹಾಲಿಡೇ ಘೋಷಿಸಲು ಮುಂದಾಗುತ್ತಾರೆ.

ಬಸ್ಸಿನೊಳಗೆ ನೂಕುನುಗ್ಗಲಿನಲ್ಲಿ ಪಗಡೀಧಾರಿಗಳು ಯಾರೂ ಇಲ್ಲವೆಂಬುದನ್ನು ದರ್ಶನ್ ಗಮನಿಸಿದಳು. ಪ್ರಯಾಣಿಕರು ಅದುಮಿ ಹಿಡಿದ ದನಿಯಲ್ಲಿ ಚರ್ಚಿಸುತ್ತಿರುವರು. ಎಲ್ಲವೂ ಊಹೆಗಳು ಮತ್ತು ಕಲ್ಪನೆಗಳೇ. ವಾತಾವರಣದಲ್ಲಿ ಅನಿಶ್ಚಿತತೆ ಮತ್ತು ಬಿಗುಮಾನ ಬೆರೆತಿದ್ದವು. ಯಾರೋ ಹೇಳುವುದು ಕೇಳಿಸಿತು– "ಬ್ಲೂ ಸ್ಟಾರ್‌ನ ಬಳಿಕ ಪೆಟ್ಟು ತಿಂದ ಸರ್ಪದ ಹಾಗಾಗಿತ್ತು ಸಿಕ್ಖ್ ಸಮಾಜ. ಅದು ಸಂದರ್ಭಕ್ಕಾಗಿ ಕಾದುಕೊಂಡಿತ್ತು. ಸಂದರ್ಭ ಸಿಕ್ಕಿದಾಗ ರಪ್ಪನೆ ಕುಟುಕಿತು." ಒಬ್ಬ ಮೋನ– ಅಂದರೆ ಕೇಶ ಮತ್ತು ಗಡ್ಡ ಬಿಡದ ಸಿಕ್ಖ್.

ಮನಮೋಹನ್ ಸಿಕ್ಖ್ ಮತದ ವಿಧಿಗಳಿಗನುಗುಣವಾಗಿ ಕೂದಲು ಮತ್ತು ಗಡ್ಡ ಬಿಟ್ಟ: ಪಗಡಿ ಮತ್ತು ಜಾಲಿಗಳನ್ನು ಧರಿಸಿದ. ಕಕಾರದಿಂದ ಶುರುವಾಗುವ ಐದು ಲಾಂಛನಗಳನ್ನು ಕೇಶ, ಕಂಖ, ಕೃಪಾಣ, ಕಚ್ಛ, ಕಡಗಗಳನ್ನು ಧರಿಸಿದ. "ವಾಹ್ ಗುರೂಜಿ ಕಾ ಖಾಲ್ಸಾ. ವಾಹ್ ಗುರೂಜಿ ಕಾ ಫಾಕಾ..." ಎಂದು ಜಪ ಮಾಡಿದ. ತಂಬಾಕು ಮತ್ತು ಸಿಗರೇಟನ್ನು ವರ್ಜಿಸಿದ.

ದರ್ಶನ್‌ಳ ಮನೆಯಲ್ಲಿ ಗುರು ಗ್ರಂಥ ಸಾಹಿಬ್‌ನ ಜತೆಯಲ್ಲೆ ರಾಮಾಯಣ. ಮಹಾಭಾರತ, ಭಗವದ್ ಗೀತೆಗಳನ್ನು ಪಾರಾಯಣ ಮಾಡುತ್ತಿದ್ದರು. ಗುರುದ್ವಾರಗಳಿಗೆ ಹೋಗುವ ಅವೇ ಭಕ್ತ್ಯಾದರಗಳೊಂದಿಗೆ ಅವರು ಹಿಂದೂ ದೇಗುಲಗಳನ್ನು ದರ್ಶಿಸುತ್ತಿದ್ದರು. ಹರಿದ್ವಾರ, ಹೃಷಿಕೇಶ, ವೈಷ್ಣೋದೇವಿಗಳಲ್ಲೆಲ್ಲ ತೀರ್ಥಯಾತ್ರೆ ಮಾಡುತ್ತಿದ್ದು, ಶ್ರೀಕೃಷ್ಣ ಜಯಂತಿ, ಶ್ರೀರಾಮ ನವಮಿಗಳನ್ನು ಆಚರಿಸುತ್ತಿದ್ದರು. ಸತ್ಯ ನಾರಾಯಣ ಪೂಜೆ ಮಾಡುತ್ತಿದ್ದರು. ಸಂತೋಷಿ ಮಾತೆಯ ವ್ರತವನ್ನು



ಆಚರಿಸುತ್ತಿದ್ದರು. ಕೃಷ್ಣಾಷ್ಟಮಿಯಂದು ಲಕ್ಷ್ಮೀನಾರಾಯಣ ದೇವಾಲಯವನ್ನೂ, ಶಿವರಾತ್ರಿಯಂದು ಚಾಂದ್ನೀಚೌಕ್‌ನ ಗೌರೀಶಂಕರ ಮಂದಿರವನ್ನೂ ಸಂದರ್ಶಿಸುತ್ತಿದ್ದರು. ಗುರುವಾಣಿಯಲ್ಲಿರುವ ನಾನಕ್ ದೇವನ ಶ್ರೀಕೃಷ್ಣನ ಕೀರ್ತನೆಗಳೆಲ್ಲವೂ ದರ್ಶನ್‌ಗಳಿಗೆ ಕಂಠಪಾಠವೇ.

ಅವಳ ಅಮ್ಮನ ಮೂವರು ಅಕ್ಕಂದಿರಲ್ಲಿ ಇಬ್ಬರನ್ನು ಮದುವೆಯಾಗಿರುವುದು ಹಿಂದೂಗಳು. ಓರ್ವ ತಂಗಿಯನ್ನು ಕೊಟ್ಟಿರುವುದು ಸಿಕ್ಖ್ ಕುಟುಂಬಸ್ಥನಿಗೇ ಆಗಿದ್ದರೂ ಆತ ಕೇಶ, ಗಡ್ಡಗಳನ್ನು ಬೆಳೆಸಿರಲಿಲ್ಲ.

ಯಾವತ್ತೂ ಇದೊಂದು ಸಮಸ್ಯೆಯಾಗಿರಲಿಲ್ಲ. ಮದುವೆಗಾಗಲಿ, ಇತರ ವಿಧಿಗಳಿಗಾಗಲಿ, ಈ ಸಮ್ಮಿಶ್ರ ಬಾಳ್ವೆ ಯಾವ ಅಡಚಣೆಯನ್ನೂ ಉಂಟುಮಾಡಲಿಲ್ಲ.

ಅವಳು ಯೋಚಿಸಿದಳು: "ಮೊದಲ ಘರ್ಷಣೆ ಯಾವತ್ತು ಶುರುವಾದದ್ದು? ಅಪಸ್ವರಗಳು ಯಾವತ್ತು ಕೇಳಿಸತೊಡಗಿದ್ದು?"

ಕಾಲದ ಒಂದು ನಿರ್ದಿಷ್ಟ ಕ್ಷಣದೊಂದಿಗೆ ಅಂತಹ ಅಪಸ್ವರಗಳನ್ನು ತಳಕು ಹಾಕಲು ಅವಳಿಗೆ ಸಾಧ್ಯವಾಗಲಿಲ್ಲ. ಎಲ್ಲೆಲ್ಲೊ ಸಂಭವಿಸಿದ್ದ ಚಿಕ್ಕಪುಟ್ಟ ಘಟನೆಗಳಿಗೂ ಬಣ್ಣ, ಬೆಡಗುಗಳು ಹುಟ್ಟಿಕೊಂಡವು. ಒಂದು ಹೊಡೆದಾಟ; ಒಂದು ಕಿಚ್ಚಿಡುವಿಕೆ; ಒಂದು ಗುಂಪು ಗಲಭೆ–ಹೀಗೇ ಆ ಬೆಂಕಿ ಕಿಡಿ ಹೆಚ್ಚುತ್ತಲೇ ಬಂದಿದೆ. ಸಿಕ್ಖ್ ಚರಿತ್ರೆಯಿಡೀ ಯಾತನೆಗಳ, ತ್ಯಾಗಗಳ, ಪಲಾಯನಗಳ, ಹೋರಾಟಗಳ, ಹುತಾತ್ಮತನಗಳ ಕತೆಗಳೇ ಎಂಬುದನ್ನು ಅವಳು ಜ್ಞಾಪಿಸಿಕೊಂಡಳು.

ಮನಮೋಹನ್‌ನ ತಳಮಳದ ಉಗಮವನ್ನು ಹುಡುಕುತ್ತ ಹೆಚ್ಚು ದೂರ ಹೋಗಬೇಕಾಗಿರಲಿಲ್ಲ. ಅವನ ಪ್ರಾಯದ ಪ್ರತಿಯೊಬ್ಬ ಸಿಕ್ಖ್ ಯುವಕನೂ ತಳಮಳಕ್ಕೊಳಗಾಗಿಯೇ ಇರುವನಲ್ಲ! ಗುರುದ್ವಾರಕ್ಕೆ ಮನಮೋಹನ್ ಎಂದಾದರೊಮ್ಮೆ ಮಾತ್ರ ಹೋಗುತ್ತಿದ್ದ. ಅದೂ ಅಮ್ಮನ ಒತ್ತಾಯಕ್ಕೆ ಕಟ್ಟುಬಿದ್ದು. ಮುಂದೆ ಒಂದು ಅನುಷ್ಠಾನದ ನಿಷ್ಠೆಯೊಂದಿಗೇ ಗುರುದ್ವಾರಕ್ಕೆ ಹೋಗತೊಡಗಿದ. ಅಲ್ಲಿನ 'ಪರಿಶ್ರಮ'ದಲ್ಲೂ 'ಲಂಗರ್'ನಲ್ಲೂ ಅವನು ಸೇವೆ ಮಾಡಿದ. ಪಾತ್ರೆಗಳನ್ನು ತೊಳೆದ. ಪಾದರಕ್ಷೆಗಳನ್ನು ಒರೆಸಿದ. ವಾರದಲ್ಲಿ ಎರಡು ಬಾರಿಯಾದರೂ ಅವನು ಬಾಂಗ್ಲಾ ಸಾಹಿಬ್ ಗುರುದ್ವಾರಕ್ಕೆ ಹೋಗದಿರಲಾರ. ಮುಂಚೆ ಯಾವಾಗಲೂ ಅಪ್ಪನ ಫರ್ನೀಚರ್ ಶಾಪಿನಲ್ಲಿದ್ದುಕೊಂಡು ಸಹಾಯ ಮಾಡುತ್ತಿದ್ದ. ಮುಂದೆ ಹಂತ ಹಂತವಾಗಿ ಅವನು ಶಾಪ್‌ಗೆ ಹೋಗುವುದನ್ನೇ ನಿಲ್ಲಿಸಿಬಿಟ್ಟ. ಅಪ್ಪ ಕೆಲವೊಮ್ಮೆ ಗದರುವ ಧ್ವನಿಯಲ್ಲಿ ಕೇಳುತ್ತಿದ್ದರು. "ಏನಾಗಿದೆ ನಿನಗೆ?"

ಓರ್ವ ಸಂಭಾಷಣಾಪ್ರಿಯನಾಗಿದ್ದ ಅವನು ಮುಂದೆ ಮಾತುಗಳಿಗೆ ಹೆದರುತ್ತಿರುವಂತೆ ಅನ್ನಿಸಿತು. ಯಾವ್ಯಾವುದೋ ಅರಿವಿನ ನೋವುಗಳು ಅವನನ್ನು ಕೊರೆಯುತ್ತಿರುವ ಹಾಗೆ. ಆಗೊಮ್ಮೆ, ಈಗೊಮ್ಮೆ ಅವನನ್ನು ಮಾತಿಗೆಳೆಯಲು

ಹವಣಿಸಿದರೆ ಅವನು ಉದ್ವಿಗ್ನನಾಗುತ್ತಾನೆ, ಯಾರ್ಯಾರ ಕುರಿತೋ ರೇಗುವವನ ಹಾಗೆ.

ಕಳೆದ ಏಪ್ರಿಲ್‌ನಲ್ಲಿ ಇರಬೇಕು. ಯಾವತ್ತೂ ಬಸ್ಸಿನಲ್ಲಿ ಪ್ರಯಾಣಿಸಬೇಕಾದ ತನಗೆ ಚಿಲ್ಲರೆಯಾಗಿಯೇ ಒಂದಿಷ್ಟು ಹಣದ ಅಗತ್ಯವಿರುತ್ತದೆ.

ಒಂದು ರೂಪಾಯಿಯಾಗಲಿ, ಎರಡು ರೂಪಾಯಿಯಾಗಲಿ ಕೊಟ್ಟರೆ ಚಿಲ್ಲರೆ ಇಲ್ಲ ಎಂಬುದೇ ಕಂಡಕ್ಟರ್‌ನ ಖಾಯಂ ಪಲ್ಲವಿಯಾಗಿರುತ್ತದೆ. ಡಿ.ಟಿ.ಯ ಸಂಪತ್ತು ಹೆಚ್ಚಿಸುವುದು ತನಗೆ ಇಷ್ಟವಾಗಿರಲಿಲ್ಲ. ಅಂದು ತನ್ನ ಹತ್ತಿರ ಇಪ್ಪತ್ತೈದು ಪೈಸೆಯ ನಾಣ್ಯಗಳಿದ್ದಿದ್ದರೂ ಹತ್ತರ ಮತ್ತು ಐದರ ನಾಣ್ಯಗಳಿರಲಿಲ್ಲ. ಅಮ್ಮನ ಮರದ ಪೆಟ್ಟಿಗೆಯಲ್ಲೂ ಅಪ್ಪನ ಮೇಜಿನ ಸೆಳೆಖಾನೆಯಲ್ಲೂ ತಡಕಾಡಿದೆನಾದರೂ ಚಿಲ್ಲರೆ ಸಿಕ್ಕಲಿಲ್ಲ. ಮನಮೋಹನ್ ಹಣ ಇರಿಸುವುದು ಅವನ ಚಾರ್ಪಾಯಿಯ ಶೀಟ್‌ನ ಅಡಿಯಲ್ಲಿ. ಶೀಟ್ ಮೇಲಕ್ಕೆತ್ತಿದಾಗ ಚಿಲ್ಲರೆಯೇನೂ ಕಾಣಿಸಲಿಲ್ಲ. ಆದರೆ, ಗುರುಮುಖಿಯಲ್ಲಿ ಬರೆಯಲಾದ ಬಹಳಷ್ಟು ಕರಪತ್ರಗಳನ್ನು ಕಂಡು ತಾನು ಬೆರಗಾಗಿ ಬಿಟ್ಟೆ. ಅಲ್ಲದೆ, ಕುಟುಂಬ ಚರ್ಚೆಗಳಲ್ಲೂ, ಗುರುದ್ವಾರಗಳಲ್ಲೂ ಆಗಲೇ ಪರಿಚಿತವಾಗಿದ್ದ ಒಂದಷ್ಟು ಫೋಟೋಗಳ ಅಗ್ಗ ಬೆಲೆಯ ಪ್ರತಿಗಳು ಕೂಡ. ಹೌದು, ಅವೆಲ್ಲ ದಂದಮಿ ತಕ್ಸಾಲ್‌ನ ಗುರು ಭಿಂದ್ರನ್‌ವಾಲೆಯದ್ದೇ. ಫರೀದ್‌ಕೋಟ್ ಜಿಲ್ಲೆಯ ಮೋಗ, ಭಿಂದ್ರನ್‌ವಾಲೆಯ ಸ್ಥಳ. ತನ್ನ ತಾಯಿಯ ಸಹೋದರರಿಗೆ ಅಲ್ಲಿ ಗೋಧಿಯ ಹೊಲಗಳಿವೆ. ಭಿಂದ್ರನ್‌ವಾಲೆಯ ಭಯೋತ್ಪಾದಕ ಚಟುವಟಿಕೆಗಳನ್ನು ಮನಮೋಹನ್ ತುಂಬ ಭಕ್ತ್ಯಾದರಗಳೊಂದಿಗೆ ವೀಕ್ಷಿಸುತ್ತಿದ್ದಾಗಲೆಲ್ಲ ಅಪ್ಪ ಅವನಿಗೆ ಬುದ್ಧಿವಾದ ಹೇಳುತ್ತಿದ್ದರು: "ಪುತ್ತರ್, ಪಾಗಲ್ ಪನ್ ಛೋಡ್ ದೋ. ಹಿಂದುಸ್ಥಾನದ ಗಡಿಗಳನ್ನು ನಾವು ಯಾವತ್ತು ಗೌರವಿಸುವುದಿಲ್ಲವೊ ಅವತ್ತೇ ಖಾಲ್ಸಾದ ಕಷ್ಟಕಾಲ ಶುರುವಾಗುತ್ತದೆ ಎಂಬುದು ನೆನಪಿರಲಿ. ಹಿಂದೂಸ್ಥಾನವನ್ನು ದುರ್ಬಲಗೊಳಿಸಲು ಪಾಕಿಸ್ತಾನ್ ನಿರ್ಮಿಸುವ ಬಲೆಯಲ್ಲಿ ನಾವು ಹೋಗಿ ಬೀಳುವುದು ತಿಳಿಗೇಡಿತನ. ಒಂದು ತಲೆಮಾರನ್ನು ಪೂರ್ತಿ ಬಲಿಗೊಟ್ಟು ಖಾಲಿಸ್ಥಾನ್ ಗಿಟ್ಟಿಸಿದರು ಕೂಡ ಅದರ ಇರುವಿಕೆ ಭದ್ರವಲ್ಲ."

"ಸ್ವರ್ಣ ಮಂದಿರದ ಸುತ್ತಣದ ಕೆಲವು ಮೈಲು ಸ್ಥಳ ಹಿಂದುಸ್ಥಾನ್ ಮತ್ತು ಪಾಕಿಸ್ತಾನಗಳ ಮಧ್ಯದಲ್ಲಿ ತೀರಾ ದುರ್ಬಲವಾದ ಒಂದು ಸ್ವತಂತ್ರ ರಾಷ್ಟ್ರವಷ್ಟೇ ಆದೀತು. ಅದರ ಗಡಿಗಳು ಜಲರೇಖೆಗಳೇ ಆಗಿ ಬಿಡುತ್ತವೆ. ಖಾಲಿಸ್ಥಾನ್ ನೀರಿನಲ್ಲಿ ಬಿದ್ದ ಒಂದು ಉಪ್ಪು ಹರಳಿನ ಹಾಗೆ ಆದೀತು. ನೋಡು ನೋಡುತ್ತಿದ್ದಂತೆಯೇ ಅದು ಕರಗಿ ಮಾಯವಾಗುತ್ತದೆ. ಅದಕ್ಕೆ ಕಾರಣವಾಗುವುದು ಪಾಕಿಸ್ತಾನವೊ, ಹಿಂದೂಸ್ಥಾನವೊ ಎಂಬುದನ್ನು ಕಾಲವೇ ನಿರ್ಧರಿಸುತ್ತದೆ. ಆದರೆ ಮಗನೇ, ನೆನಪಿರಲಿ, ಖಾಲಿಸ್ಥಾನ್ ಹುಟ್ಟುವ ಮೊದಲೇ ಹೆಣವಾಗಿರುತ್ತದೆ."



ಮನಮೋಹನ್ ಏನನ್ನೂ ಹೇಳುವುದಿಲ್ಲ. ಆದರೆ ಅವನ ಕಣ್ಣುಗಳು ಯಾವುದೋ ತೀವ್ರಭಾವನೆಯಿಂದ ಜ್ವಲಿಸುತ್ತವೆ.

ಮುಂದೆ ಚಿಲ್ಲರೆ ತಡಕಾಡುವಾಗಲೆಲ್ಲ ಅವನ ಚಾರ್ಪಾಯಿಯಿಂದ ಹೊಸ ಹೊಸ ಹೆಸರುಗಳ ಪರಿಚಯವಾಗುತ್ತಿತ್ತು. 'ನಂಕಣ ಸಾಹಿಬ್' ಪ್ಲಾಂಟೇಶನ್‌ನ ಪ್ರೆಸಿಡೆಂಟ್ ಗಂಗಾಸಿಂಗ್ ಧಿಲ್ಲೋನ್, ಕ್ಯಾಲಿಫೋರ್ನಿಯಾದ ೩೦,೦೦೦ ಎಕರೆಗಳಿಗಿಂತಲೂ ಹೆಚ್ಚು ವಿಸ್ತೀರ್ಣದ ಹಣ್ಣಿನ ತೋಟಗಳ ಮಾಲಿಕ ದೀದಾರ್‌ಸಿಂಗ್ ಚೆಯನ್ಸ್, ಖಾಲಿಸ್ಥಾನ್ ಪ್ರೆಸಿಡೆಂಟ್ ಜಗತ್‌ಸಿಂಗ್ ಚೌಹಾನ್, ಅಖಿಲ ಭಾರತ ಸಿಕ್ಖ್ ವಿದ್ಯಾರ್ಥಿ ಫೆಡರೇಶನ್ ಕಾರ್ಯದರ್ಶಿ ಹರ್‌ಮಂದಿರ್ ಸಿಂಗ್... ಗುರುಮುಖಿಯಲ್ಲಿ ಸೈಕ್ಲೋಸ್ಟೈಲ್ ಮಾಡಲಾದ ಕರಪತ್ರಗಳು–ಖಾಲ್ಸಾ ಅಪಾಯದಲ್ಲಿದೆಯೆಂದೂ, ಸಿಕ್ಖ್ ಮತ ಕವಲುದಾರಿಯಲ್ಲಿದೆಯೆಂದೂ ಸಾರುವಂಥವು. ಗುರುದ್ವಾರಗಳಲ್ಲಿ, ಕಡಿದು ತೆಗೆಯಲಾದ ದನದ ತಲೆಗಳನ್ನಿರಿಸಿ ಅವುಗಳ ಪಾವಿತ್ರ್ಯ ಕೆಡಿಸಲು ಪ್ರಯತ್ನಿಸುತ್ತಿದ್ದಾರೆ ಧೋತಿವಾಲಾಗಳಾದ ಹಿಂದೂಗಳು. ಕೇಂದ್ರ ಸರಕಾರ ಪಂಜಾಬಿಗಳನ್ನು ದಮನಿಸಿ ಬಗ್ಗು ಬಡಿಯುತ್ತಿದೆ; ಅಪಮಾನಿಸುತ್ತಿದೆ; ಸ್ತ್ರೀಯರ ಮಾನಹರಣ ಮಾಡುತ್ತಿದೆ. ಸಿಕ್ಖರನ್ನು ಬೇಟೆ ನಾಯಿಗಳಂತೆ ಬೇಟೆಯಾಡಲು ಕೇಂದ್ರ ಸರಕಾರ ಪ್ಯಾರಾ–ಮಿಲಿಟರಿ ಫೋರ್ಸ್‌ಗಳನ್ನೂ, ಆರ್ಮಿಯನ್ನೂ ಬಳಸುತ್ತಿದೆ. ಕೇಂದ್ರ ಸರ್ಕಾರ ಎಂದರೆ ತಲೆತಿರುಕ ಹಿಂದೂಗಳೆಂದೇ ಅರ್ಥ. ಖಾಲಿಸ್ಥಾನ್ ಸ್ವತಂತ್ರವಾಗುವ ತನಕ, ಒಬ್ಬನೇ ಒಬ್ಬ ಸಿಕ್ಖ್‌ನೂ ನಿದ್ರಿಸಕೂಡದು. ರಾಜ್ಯಭಾರವೂ ಖಲ್ಸಾದ ನಿರ್ದೇಶನಗಳಲ್ಲೊಂದು. ಹಿಂದೆ ಈ ಹಕ್ಕನ್ನು ಕಸಿದುಕೊಂಡದ್ದು ಮುಸ್ಲಿಮರು. ಆದರೆ ಈಗ ಕಸಿದುಕೊಂಡಿರುವುದು ಹಿಂದೂಗಳೇ.

ಕಳೆದ ಜೂನ್ ತಿಂಗಳಲ್ಲಿ ಸ್ವರ್ಣ ಮಂದಿರದೊಳಗೆ ಸೇನೆ ಪ್ರವೇಶಿಸಿತೆಂಬ ಸುದ್ದಿ ಕೇಳಿದ ದಿನ ಮನೆಯಲ್ಲಿ ಯಾರೂ ಆಹಾರ ಸೇವಿಸಲಿಲ್ಲ. ಅಮ್ಮ ಮೂರುದಿನ ನೀರು ಕೂಡ ಕುಡಿಯಲಿಲ್ಲ. ಮತೀಯ ಸಂಗತಿಗಳಲ್ಲಿ ನಿಷ್ಕ್ರಿಯರಾಗಿರುತ್ತಿದ್ದ ಅಪ್ಪ ಕೂಡ ಆಹಾರವೇನನ್ನೂ ಸೇವಿಸದೆ, ವ್ಯಗ್ರರಾಗಿಯೂ ನೋವುಂಡವರಂತೆಯೂ ಕಂಡುಬಂದಿದ್ದರು. ಮನಮೋಹನ್ ಪಂಜರದೊಳಗೆ ಬಂಧಿತವಾದ ಒಂದು ಹುಲಿಯಂತೆ ಆಗಿಬಿಟ್ಟಿದ್ದ. ಅವನೂ ಬಡಬಡಿಸುತ್ತಿದ್ದ; ಇಂಡಿಯಾದ ಗಡಿಗಳನ್ನು ಕಾಯುವ ಜವಾನರುಗಳಲ್ಲಿ ಒಂದು ಗಣ್ಯ ವಿಭಾಗ ಸಿಕ್ಖರದು ಎಂಬ ಸಂಗತಿಯನ್ನು, "ಸೇನೆಯನ್ನು ಸ್ವರ್ಣ ಮಂದಿರಕ್ಕೆ ನಡೆಸುವ ಮುನ್ನ ಬೀವಿಯನ್ನು ನೆನೆಯಬೇಕಾಗಿತ್ತು. ಇಂಡಿಯಾದ ಸುಪ್ರೀಂ ಕಮಾಂಡರ್ ಆಗಿರುವ ಜೈಲ್‌ಸಿಂಗ್ ರಾಷ್ಟ್ರಪತಿ ಭವನ್ ಎಂಬ ಜೈಲ್‌ನಲ್ಲೇ ಸೆರೆಯಾಳಾಗಿದ್ದಿರಬೇಕು. ರಾಷ್ಟ್ರಪತಿ ಹುದ್ದೆಗೆ ರಾಜೀನಾಮೆ ಕೊಡತಕ್ಕ ದಿಟ್ಟತನ ತೋರದ ಆ ಮುದುಕನೇ ಖಾಲ್ಸಾದ ಪ್ರಥಮ ವೈರಿ. ಇಲ್ಲ, ಸಿಕ್ಖರಿಗೆ ಇದನ್ನು ಸಹಿಸಲು ಸಾಧ್ಯವಾಗುವುದಿಲ್ಲ."

ಇಂತಹ ಸಿಡಿತಗಳ ವೇಳೆ ರಾಜಿಯ, ಸಂಯಮದ ಭಾಷೆಯಲ್ಲಿ ಅಪ್ಪ ಗದರುವುದು ವಾಡಿಕೆಯಾಗಿತ್ತು. ಆದರೆ ಅಂದು ಹಾಗೆ ಮಾಡಲಿಲ್ಲವೆಂಬುದನ್ನು ಅವಳು ಗಮನಿಸಿದ್ದಳು. ಅಮ್ಮ ಮಾತ್ರ ದೇವರ ಕೊಠಡಿಯಲ್ಲಿ ಗುರುಗ್ರಂಥ ಸಾಹಿಬ್‌ನಿಂದ ಕೀರ್ತನೆಗಳನ್ನು ಹೇಳುತ್ತಿದ್ದರು. ಆ ಗಂಟಲು ಕಟ್ಟುತ್ತಿತ್ತು. ಆ ಕಂಗಳು ತುಂಬಿ ಹರಿಯುತ್ತಿದ್ದುವು.

ಸ್ವರ್ಣ ಮಂದಿರ ಪ್ರತಿಯೊಬ್ಬ ಸಿಕ್ಖನ ಅಭಿಮಾನವಾಗಿದೆ. ಪ್ರಾಣವೇ ಆಗಿದೆ. ಅದರ ಪರಿಶುದ್ಧಿಯನ್ನು, ಪಾವನತ್ವವನ್ನು ಕಾಪಾಡಲು ಅವನು ಬದ್ಧನಾಗಿರುವವನು. ಜೂನ್ ಮೂರನೆಯ ತೇದಿ ಗುರು ಅರ್ಜುನ್ ದೇವ್ ಹುತಾತ್ಮರಾಗಿದ್ದ ಅದೇ ದಿನ ಇಂಡಿಯನ್ ಆರ್ಮಿ ಸ್ವರ್ಣ ಮಂದಿರದಲ್ಲಿ ವಿಧ್ವಂಸಕ ಕೃತ್ಯವೆಸಗಿದೆ.

ಒಂದು ದಿನ ಮನಮೋಹನ್ ಒಂದು ಪತ್ರದ ಪ್ರತಿ ಕೊಡುತ್ತಾ ಹೇಳಿದ್ದ: "ದೀದಿ, ಈ ಪತ್ರ ಸ್ಟೆನ್ಸಿಲ್ ಮಾಡಿಕೊಡ್ಬೇಕು." ಫರೀದ್‌ಕೋಟ್ ಪೋಲೀಸ್ ಸೂಪರಿಂಟೆಂಡೆಂಟ್ ಆಗಿದ್ದ ಮಾನ್‌ರ ಪತ್ರವಾಗಿತ್ತು ಅದು. ಸ್ವರ್ಣ ಮಂದಿರದಲ್ಲಿ ಸೇನೆ ಪ್ರವೇಶಿಸಿರುವುದನ್ನು ಪ್ರತಿಭಟಿಸಿ ರಾಜೀನಾಮೆ ನೀಡಿದ್ದ ಮಾನ್, ರಾಷ್ಟ್ರಪತಿಗೆ ಬರೆದಿದ್ದ ಬಹಿರಂಗ ಪತ್ರ. ಅವಳು ಪತ್ರವನ್ನೊಮ್ಮೆ ಮೇಲಿಂದ ಮೇಲೆ ಓದಿದಳು. ಸ್ವರ್ಣ ಮಂದಿರವೂ ಒಳಗೊಂಡಂತೆ ಎಂಬತ್ತನಾಲ್ಕು ಗುರುದ್ವಾರಗಳಲ್ಲಿ ಸೇವೆ ನಡೆಸಿದ್ದ ಸಾಮೂಹಿಕ ಹತ್ಯಾಕಾಂಡಗಳ ಬೆಚ್ಚಿಸುವ ವಿವರಣೆಗಳಿದ್ದವು ಅದರಲ್ಲಿ. ಗುರುದ್ವಾರದ ಪ್ರಾಂಗಣದಲ್ಲಿ ಸಾಲಾಗಿ ನಿಲ್ಲಿಸಲಾದ ನೂರಾರು ಯುವಕರೊಡನೆ ಸೇನಾಧಿಕಾರಿ ಪ್ರಶ್ನಿಸಿದ್ದ. "ಖಾಲಿಸ್ಥಾನ್ ಬೇಕೋ, ಜೀವ ಬೇಕೋ? ಒಬ್ಬೊಬ್ಬ ಯುವಕನೂ ಮೇಲಕ್ಕೆ ದೃಷ್ಟಿ ಹಾಯಿಸಿದ್ದ–ಗುರುನಾನಕರ ದಿವ್ಯವಾಣಿಗೋ ಎಂಬಂತೆ. ಬಳಿಕ ಆವೇಶದೊಂದಿಗೇ ಹೇಳಿದ್ದ: ಜೋ ಬೋಲೇ ಸೋ ನಿಹಾಲ್" ಸಡಗರದಿಂದ ಏರು ಸ್ವರದಲ್ಲಿ ಪ್ರತ್ಯುತ್ತರ ಹೊರಬಿತ್ತು: "ಸತ್ ಶ್ರೀ ಅಕಾಲ್."

ಪ್ರತಿಬಾರಿಯೂ ಸೇನೆಯ ಕೋವಿಗಳು ಸದ್ದುಂಟು ಮಾಡಿದುವು. "ಧೀರರಾದ ಆ ಯುವಕರು ಸಿಕ್ಖ್ ಮತದ ಆದರ್ಶಗಳನ್ನು ಎತ್ತಿಹಿಡಿದು ಸೈನಿಕರ ಗುಂಡುಗಳಿಗೆ ಬಲಿಯಾಗುವಾಗ ರಾಷ್ಟ್ರಪತಿ ಭವನದ ವೈಭವಗಳಲ್ಲಿ ಮುಳುಗಿರುತ್ತಾ ತಾವು, ಪ್ರಧಾನಮಂತ್ರಿ ಗೀಚಿಕೊಡುತ್ತಿದ್ದ ಆದೇಶಗಳಿಗೆಲ್ಲ ಸಹಿ ಹಾಕುತ್ತಾ ಇದ್ದೀರಿ. ಗುರುದ್ವಾರಗಳಲ್ಲಿ ಸದಾ ಕಂಡುಬರುತ್ತಿದ್ದ ಪಾರಿವಾಳಗಳ ಬದಲು ಈಗ ಹದ್ದುಗಳು ಮತ್ತು ಕಾಗೆಗಳೇ ಹಾರಾಡಿಕೊಂಡಿವೆ. ಅವು ಕುಕ್ಕಿ ತಿನ್ನುತ್ತಿರುವುದು ಸಿಕ್ಖ್ ಮತದ ಬಲಿಪೀಠದಲ್ಲಿ ಆತ್ಮಾಹುತಿ ಮಾಡಿರುವ ಯುವಕರ ಕಳೇಬರಗಳಾಗಿವೆ. ಹಿಟ್ಲರ್ ಮತ್ತು ಮುಸೊಲಿನಿ ಕೂಡ ಮಾಡಲು ಹಿಂಜರಿದ ಭೀಕರತೆಯನ್ನೇ ತಮ್ಮ ಮೂಗಿನ ಕೆಳಗೇ ಇದ್ದುಕೊಂಡು ಆ ಹೆಂಗಸು ಮಾಡುತ್ತಿದ್ದಾಳೆ...."

ಪತ್ರದ ಒಕ್ಕಣೆಗಳು ಬೆಂಕಿ ಕಿಡಿಗಳಾದವು. ಪತ್ರವನ್ನು ಹಿಂತಿರುಗಿಸಲು



ಹವಣಿಸಿದಾಗ ಮನಮೋಹನ್ ತುಸು ಸಿಟ್ಟಿನಿಂದಲೇ ಹೇಳಿದ: "ಅದನ್ನು ಸ್ಟೆನ್ಸಿಲ್ ಮಾಡಿ ದೆಹಲಿಯ ಪ್ರತಿಯೊಂದು ಸಿಕ್ಖ್ ವಸತಿಗೂ ತಲಪಿಸುವುದಾಗಿ ನಾನು ಪ್ರತಿಜ್ಞೆ ಮಾಡಿದ್ದೇನೆ. ತುಸು ದೂರದಲ್ಲಿ ಕುಳಿತು ಎಲ್ಲವನ್ನು ಗಮನಿಸುತ್ತಲೇ ಇದ್ದ ಅಪ್ಪನತ್ತ ನೋಡಿದ್ದೆ. ಅಪ್ಪ ತಲೆತಗ್ಗಿಸಿದರೇ ಹೊರತು ಮಗನನ್ನು ತಡೆಯಲಿಲ್ಲ.

ಅದನ್ನು ತೆಗೆದುಕೊಳ್ಳದಿರಲು ತನಗೆ ಸಾಧ್ಯವಾಗಲಿಲ್ಲ. ಆಫೀಸ್‌ನಲ್ಲಿ ಕುಳಿತು ತಾನದನ್ನು ಟೈಪ್ ಮಾಡಿ ಸಂಜೆ ಹಿಂತಿರುಗಿಸಿದ್ದೆ.

ಬಸ್‌ನಿಂದ ಇಳಿದಾಗ ಬೀದಿಗಳು ನಿರ್ಜನವಾಗಿದ್ದವು. ಅವಳು ಡೋರ್ ಬೆಲ್ ಒತ್ತಿದಳು. ರೂಢಿಗೆ ವಿರುದ್ಧವಾಗಿ ಬಾಗಿಲು ತೆರೆದವನು ಮನಮೋಹನ್. ಆತನು ಉಲ್ಲಸಿತನಾಗಿದ್ದ.

"ಆಜ್ ಮೈ ದೀದೀ ಕಾ ಮುಂಹ್ ಮೀಠಾ ಕರ್ ದೂಂಗಾ."

ಅವನು ಅವಳ ಬಾಯೊಳಗೆ ಒಂದು ಲಾಡು ತುರುಕಿದ. ಅವಳಿಗೆ ಅದನ್ನು ತಿನ್ನಲಿಕ್ಕಾಗಲಿ, ಉಗುಳಲಿಕ್ಕಾಗಲಿ ಸಾಧ್ಯವಾಗಲಿಲ್ಲ.

* * *

## ಅಧ್ಯಾಯ ೪

# ಸಮಾಧಾನಿ ಹರ್‌ಭಜನ್ ಸಿಂಗ್

ಮನಮೋಹನ್‌ನ ಉಲ್ಲಾಸದಲ್ಲಿ ಪಾಲ್ಗೊಳ್ಳಲು ದರ್ಶನ್‌ಗಾಗಲಿ, ಅಮ್ಮನಿಗಾಗಲಿ ಸಾಧ್ಯವಾಗಲಿಲ್ಲ. ನಿರಾಯುಧಳು, ನಿಸ್ಸಹಾಯಕಳೂ ಆದ ಓರ್ವ ಸ್ತ್ರೀಯನ್ನು ತಮ್ಮ ಜೀವವನ್ನು ಒತ್ತೆಯಿಟ್ಟು ಕಾಪಾಡುವ ಹೊಣೆ ಹೊತ್ತ ಇಬ್ಬರು ಸಿಕ್ಖರು ಕ್ರೂರವಾಗಿ ಗುಂಡಿಟ್ಟು ಕೊಂದದ್ದನ್ನು ಸಮರ್ಥಿಸಲು ಆ ಅಮ್ಮನಿಂದಾಗಲಿಲ್ಲ – ಇದು ಹೇಡಿತನ ಮಗನೇ. ನಮ್ಮ ಹತ್ತು ಮಂದಿ ಗುರುವರ್ಯರೂ ಇಂಥಾದ್ದನ್ನು ಒಪ್ಪುತ್ತಿರಲಿಲ್ಲ.

ಮನಮೋಹನ್ ಸಿಡುಕಿದ: ಸ್ವರ್ಣ ಮಂದಿರದೊಳಗೆ ಮಿಲಿಟರಿಯನ್ನು ನುಗ್ಗಿಸಿದ್ದನ್ನು, ಭಿಂದ್ರನ್‌ವಾಲಾರನ್ನು, ಸಂಗಡಿಗರನ್ನು ಹೆಂಗಸರು ಮಕ್ಕಳ ಸಹಿತ ಎಷ್ಟೋ ಮಂದಿ ತೀರ್ಥಾಟಕರನ್ನು ಮುಗಿಸಿಬಿಟ್ಟಿದ್ದನ್ನು ಆ ಆಚಾರ್ಯರುಗಳು ಒಪ್ಪುತ್ತಿದ್ದರೇನು? ಎಲ್ಲಕ್ಕೂ ನಮ್ಮ ಹಿರಿಯರನ್ನೇ ದೂರಬೇಕಾಗುತ್ತದೆ. ಸ್ವಾತಂತ್ರ್ಯ ದೊರೆತಾಗ ಸಿಕ್ಖರು ಸ್ವತಂತ್ರ ರಾಷ್ಟ್ರವೊಂದನ್ನು ಒತ್ತಾಯ ಪೂರ್ವಕ ವಶಪಡಿಸಬೇಕಾಗಿತ್ತು. ಆ ವಿಚಾರದಲ್ಲಿ ಜಿನ್ನಾರನ್ನೇ ನಾವು ಅನುಸರಿಸಬೇಕಾಗಿತ್ತು. ಗಾಂಧಿ ಮತ್ತು ನೆಹರೂರವರ ಸಕ್ಕರೆ ಮಾತುಗಳಿಗೆ ಮರುಳಾಗಲಿಕ್ಕಷ್ಟೇ ಅಂದು ಬಲವಂತ್‌ಸಿಂಗ್ ಮತ್ತು ಸಂಗಡಿಗರಿಗೆ ಸಾಧ್ಯವಾದದ್ದು. ಸಿಪಾಯಿದಂಗೆ ತೀವ್ರಗೊಂಡಾಗ ಇಸ್ಲಾಂ ಮತ್ತು ಹಿಂದೂಗಳು ಬಿಳಿಯರ ವಿರುದ್ಧ ತಿರುಗಿ ಬಿದ್ದಾಗ, ದೆಹಲಿಯನ್ನು ಮರಳಿ ವಶಪಡಿಸಲು ಬಿಳಿಯರಿಗೆ ನೆರವಾದದ್ದು ಸಿಕ್ಖರು ಎಂಬ ಚಾರಿತ್ರಿಕ ಸತ್ಯವನ್ನು ಮೌಂಟ್‌ಬ್ಯಾಟನ್ ಮತ್ತು ಸಂಗಡಿಗರು ಸಂಪೂರ್ಣ ಮರೆತುಬಿಟ್ಟರು. ಹೌದು. ಅಮ್ಮಾ ನಾವು ಸಿಕ್ಖರು ಯಾವತ್ತೂ ತಪ್ಪಾದ ಬಣಕ್ಕೇ ನೆರವಿತ್ತೆವು. ಲೆಕ್ಕ ಹೇಳಿ ಹಕ್ಕುಗಳನ್ನು ಒಗ್ಗಟ್ಟಿನಿಂದ ಕಿತ್ತುಕೊಳ್ಳಬೇಕಾದ ವೇಳೆ ಒಡೆದು ನಿಂತೆವು. ಅಂದು ಬಲದೇವ್‌ಸಿಂಗ್, ಮಾಸ್ಟರ್ ತಾರಾಸಿಂಗ್ ಹಾಗೂ ಜ್ಞಾನಿ ಕರ್ತಾರ್ ಸಿಂಗ್‌ರು ಆಗ್ರಹಿಸಿದ್ದರೆ ಸಿಕ್ಖಿಸ್ಥಾನ್ ಒಂದು ಯಥಾರ್ಥವಾಗುತ್ತಿತ್ತು. ರಾವಿ ಮತ್ತು ಸಟ್‌ಲಜ್‌ಗಳ ಮಧ್ಯದಲ್ಲಿರುವ ಪಂಜಾಬ್ ಸಿಕ್ಖರಿಗೆ ಪ್ರತ್ಯೇಕವಾಗಿ ದೊರೆಯುತ್ತಿತ್ತು. ಕ್ಯಾಬಿನೆಟ್ ಮಿಷನ್ ಮತ್ತು ಮೌಂಟ್‌ಬ್ಯಾಟನ್ ಸಿಕ್ಖರನ್ನು



ಅಲಕ್ಷಿಸಿದ್ದರು. ರಾವಿ ಮತ್ತು ಸಟ್‌ಲಜ್ ನಡುವಿನ ನೆಲ ಸಂಪೂರ್ಣ ಸಿಕ್ಖರದ್ದಾಗಿತ್ತು. ಆದರೆ ಅಲ್ಲಿನ ಹೆಚ್ಚಿನ ಜನ ಮುಸ್ಲಿಮರು. ಅಂದು ಲಿಯಾಕತ್ ಅಲಿಖಾನ್ ಮತ್ತು ಜಿನ್ನಾ ಸಿಕ್ಖರು ಪಾಕಿಸ್ಥಾನದ ಜತೆಯಲ್ಲಿರುವುದಾದರೆ ಹೆಚ್ಚಿನ ಸ್ಥಾನಮಾನಗಳನ್ನು ನೀಡಲು ಒಪ್ಪಿದ್ದರು. ಅಂದು ಪಾಟಿಯಾಲ ಮಹಾರಾಜರು ಮತ್ತು ಬಲದೇವ್ ಸಿಂಗ್, ಭೂಮಿಯ ಮಾಲಕತ್ವವನ್ನು ಬುನಾದಿಯಾಗಿಟ್ಟುಕೊಂಡು ಪಂಜಾಬನ್ನು ವಿಭಜಿಸಲು ಒತ್ತಾಯಿಸಿದ್ದರೂ ಮೌಂಟ್‌ಬ್ಯಾಟನ್ ಒಪ್ಪಲಿಲ್ಲ. ವಿಭಜನೆಯ ವೇಳೆ ಇದ್ದ ನಲುವತ್ತು ಕೋಟಿ ಜನರ ಪೈಕಿ ಅರುವತ್ತು ಲಕ್ಷ ಮಂದಿಯಷ್ಟೇ ಸಿಕ್ಖರು ಇದ್ದರು. ಪಂಜಾಬ್‌ನಲ್ಲಿ ಒಂದೇ ಒಂದು ಜಿಲ್ಲೆಯಲ್ಲಿ ಕೂಡ ಸಿಕ್ಖರಿಗೆ ಬಹುಮತವಿರಲಿಲ್ಲ. ಸಿಕ್ಖಸ್ಥಾನ್ ಎಂಬ ಕನಸನ್ನು ಮೌಂಟ್‌ಬ್ಯಾಟನ್ ಬರಿಯ ಅಂಕೆ–ಸಂಖ್ಯೆಗಳನ್ನೇ ತೋರಿಸಿ ತಳ್ಳಿಹಾಕಿದ್ದರು. 'ನಂಕಣ್ ಸಾಹಿಬ್' ಅನ್ನು ವ್ಯಾಟಿಕನ್‌ನ ಮಾದರಿಯಲ್ಲಾದರೂ ಸ್ವತಂತ್ರವಾಗಿ ಉಳಿಸಲು ಬಲದೇವ್‌ಸಿಂಗ್ ಮತ್ತು ಸಂಗಡಿಗರು ಒತ್ತಾಯಿಸಲಿಲ್ಲ."

ಅಮ್ಮ ಅವನನ್ನು ಸಾಂತ್ವನಗೊಳಿಸಲು ಯತ್ನಿಸಿದ್ದಳು: "ಪುತ್ತರ್.... ನೀನು ಹೀಗೆ ರೇಗಾಡುವುದು ಬೇಡ. ಲೆಕ್ಕ ಹೇಳಿ ಕಿತ್ತುಕೊಳ್ಳಲಾದ ಪಾಕಿಸ್ತಾನ್ ಪೂರ್ವ, ಪಶ್ಚಿಮಗಳೆಂದು ಎರಡಾಗಿ ಬೇರ್ಪಟ್ಟಿತ್ತು. ಪ್ರಾಯಶಃ ಹೆಚ್ಚು ವಿಳಂಬಿಸದೆಯೇ 'ಸಂಧಿ' ಕೂಡ ಬೇರ್ಪಡಬಹುದು. ಇಂಡಿಯಾದೊಂದಿಗೆ ಸೇರ್ಪಡೆ ಹೊಂದಿದ್ದರಿಂದ ನಮಗೆ ಯಾವ ಕೊರತೆಯೂ ಸಂಭವಿಸಲಿಲ್ಲ. ಇಂಡಿಯಾದ ಮಹತ್ತ್ವದ ಸ್ಥಾನದಲ್ಲಿ ಕುಳಿತಿರುವ ರಾಷ್ಟ್ರಪತಿ ಕೂಡ ಸಿಕ್ಖನೇ."

"ಇಷ್ಟೊಂದು ಹೆಮ್ಮೆ ಪಡಲಿಕ್ಕೆ ಏನಿದೆ ಅದರಲ್ಲಿ?" ಮನಮೋಹನ್ ಸಿಡುಕಿದ. "ಇಬ್ಬರು ಮುಸ್ಲಿಮರು ಇಲ್ಲಿ ರಾಷ್ಟ್ರಪತಿ ಆಗಿರಲಿಲ್ಲವೆ? ರಂಜಿತ್ ಸಿಂಗ್‌ನ ಆಡಳಿತ ಕಾಲದಲ್ಲಿ ಇಂದಿನ ಧೋತಿವಾಲಗಳ ಮತ್ತು ಟೋಪಿವಾಲಗಳ ಸೆಕ್ಯುಲರಿಸಂಗಿಂತಲೂ ಉನ್ನತ ಮೌಲ್ಯಗಳು ಅನುಷ್ಠಾನದಲ್ಲಿ ಇದ್ದಿದ್ದವು. ಅಮ್ಮನಿಗೆ ಗೊತ್ತೇ. ಮಹಾರಾಜ ರಂಜಿತ್ ಸಿಂಗ್‌ನ ಮುಖ್ಯಮಂತ್ರಿ ಮುಸ್ಲಿಮನಾಗಿದ್ದ – ಫಕೀರ್ ಅಸಿಸ್‌ಮದ್ದೀನ್. ಮತ್ತೊಬ್ಬ ಮಂತ್ರಿ ದೀನಾನಾಥ ಎಂಬ ಹಿಂದೂ. ಪ್ರಧಾನ ವೈದ್ಯ ಫಕೀರ್ ನೂರುದ್ದೀನ್ ಎಂಬ ಮುಸ್ಲಿಮ್. ಚೇಂಬರ್‌ಲೇನ್ ಜಮಾದಾರ್, ವುಶಾಲ್‌ಸಿಂಗ್ ಎಂಬ ಹಿಂದೂ – ಫಿರಂಗಿ ಪಡೆಯ ಚೀಫ್ ಜನರಲ್ ಇಲಾಹಿ ಬಕ್ಷ್. ಡೋಗ್ರರೂ ಗೂರ್ಖರೂ, ಆತನ ಸೇನೆಯಲ್ಲಿ ಇದ್ದರು. ಈಗ ಕಾಣಿಸುವುದೆಲ್ಲ, ಸಿಕ್ಖನ ಕಣ್ಣಿಗೆ ಮಣ್ಣೆರಚುವ ತಂತ್ರಗಳಷ್ಟೇ ಮಾತಾಜೀ. ಭಾರತದ ಅಧ್ಯಕ್ಷರಿಗೆ ಸಲೀಸಾಗಿ ಉಸಿರಾಡಬೇಕಾದರೂ ಪ್ರಧಾನಿಯ ಅನುಮತಿ ಬೇಕಾಗುತ್ತದೆ ಎಂಬುದು ಗೊತ್ತೆ ಅಮ್ಮ ನಿನಗೆ?"

ಅಮ್ಮ ಹೆಚ್ಚಿನ ವಾದಕ್ಕೆ ನಿಲ್ಲಲಿಲ್ಲ. ಆಕೆ ದೇವರ ಕೋಣೆಯ ಸುರಕ್ಷಿತತ್ವದತ್ತ ತನ್ನನ್ನು ಸೆಳೆದುಕೊಂಡಳು. ಯಾವುದೋ ವಿಪತ್ತಿನ ಬಗೆಗಿನ ಗುಮಾನಿಗಳು

ಆಕೆಯನ್ನು ಕಾಡುತ್ತಿದ್ದುವು. ವಿಭಜನಾವಧಿಯ ದುರಂತಗಳ ಕುರಿತು ಆಕೆ ಬಹಳಷ್ಟು ಕೇಳಿದ್ದಳು. ಒಂದೇ ಓಣಿಯಲ್ಲಿ ಜತೆಯಾಗಿ ಆಡುತ್ತ ಬೆಳೆದವರು. ಒಂದೇ ಬಟ್ಟಲಿನಿಂದ ಜತೆಗೂಡಿ ಉಂಡವರು, ಈದ್, ಹೋಳಿ, ದೀಪಾವಳಿ ಹಬ್ಬಗಳ ದಿನಗಳಲ್ಲಿ ಸಿಹಿ ತಿಂಡಿಗಳನ್ನು ಪರಸ್ಪರರಿಗೆ ಹಂಚಿದವರು ಇದ್ದಕ್ಕಿದ್ದಂತೆ ಅಪರಿಚಿತರಾಗಿ ಬಿಟ್ಟಿದ್ದರು. ಆ ಬಳಿಕ ಪರಸ್ಪರ ಶತ್ರುಗಳೂ ಆಗಿಬಿಟ್ಟರು. ಪರಸ್ಪರರ ರಕ್ತದಿಂದ ಓಕುಳಿಯಾಡಿದರು. ರಕ್ಷಾಬಂಧನ ಕಟ್ಟಿದ್ದ ಕೈಗಳಿಂದಲೇ ಕೈ ಬಳೆಗಳನ್ನು ಒಡೆದು ಪುಡಿ ಮಾಡಿದ್ದರು. ಓ! ದೇವರೇ! ಅಂಥ ಘಟನೆಗಳು ಮರುಕಳಿಸದಿರಲಿ!

ಮನಮೋಹನ್ ಹೋಗಿ ಚಾರ್ಪಾಯಿಯಲ್ಲಿ ಬಿದ್ದುಕೊಂಡ. ಅವನೂ ಯೋಚಿಸುತ್ತಲೇ ಇದ್ದ. ಬೀದಿಗಳಲ್ಲಿ, ಬಸ್‌ಗಳಲ್ಲಿ, ಮಾರ್ಕೆಟ್‌ಗಳಲ್ಲೆಲ್ಲ ಅದುಮಿ ಹಿಡಿದ ಮಾತುಗಳೇ. ನೋಟದಲ್ಲಿ ಹಗೆತನ. ಒಂದು ಕಿಡಿ ಸಾಕು–ಎಲ್ಲವೂ ಹೊತ್ತಿ ಭುಗಿಲೇಳಲು. ಅರ್ಥವಿಲ್ಲದ ಒಂದು ಮಾತು, ಅಚಾನಕವಾದ ಒಂದು ನೋಟ, ಅರಿಯದೆ ಹೊರ ಬಿದ್ದ ಒಂದು ಏರುಸ್ವರ–ಇಷ್ಟೇ ಸಾಕು ಎಲ್ಲವೂ ಸ್ಫೋಟಗೊಳ್ಳಲು.

ವಿಧಿಯ ಕ್ರೂರ ವಿನೋದಗಳ ಕುರಿತು ಯೋಚಿಸದಿರಲು ಆತನಿಗೆ ಸಾಧ್ಯವಾಗಲಿಲ್ಲ. ಹಿಂದೂ ಮತದ ನಾಶೋನ್ಮುಖತೆಯನ್ನು ತಡೆಗಟ್ಟಲು ಕೆಲಮಟ್ಟಿಗೆ ಕಾರಣವಾದದ್ದು ಸಿಕ್ಖ್ ಮತದ ಆರಂಭವಾಗಿತ್ತು. ಹದಿನೈದನೆಯ ಶತಮಾನದ, ಇಸ್ಲಾಮಿನ ಮುನ್ನಡೆ, ಖೈಬರ್ ಕಣಿವೆಯನ್ನಿಳಿದು ಬಂದ ಕತ್ತರಿಗಿಳಿ–ಮಿಡತೆ–ಗಳ ಬಲಾತ್ಕಾರದ ಮತಾಂತರಿಸುವಿಕೆಯನ್ನು ಅಸಹಾಯಕತೆಯಿಂದಾಗಿ ಹಿಂದೂಗಳು ಒಪ್ಪಿಕೊಳ್ಳಬೇಕಾಗಿತ್ತು. ಆ ಅಪಾಯವನ್ನು ಎದುರಿಸಲು ಅವರಿಗೆ ಸಾಧ್ಯವಾದದ್ದು ಗುರುನಾನಕರ ನಾಯಕತ್ವದಿಂದಾಗಿ. ಅವತ್ತು ಆ ಹಿಂದುಗಳೇ ಸಿಕ್ಖರನ್ನು ಜನ್ಮವೈರಿಗಳಂತೆ ಭಾವಿಸುವುದರಲ್ಲಿನ ವೈಪರೀತ್ಯ ನಡುಕ ಹುಟ್ಟಿಸುತ್ತದೆ.

ಎಲ್ಲಿಂದ ಶುರು ಮಾಡಲಿ? ಘಸ್ನಿಯ ಸುಲ್ತಾನ್ ಸಾಹಬ್ ವಿಲ್ದೀನನು ಅಜ್ಮೀರ್‌ನ ಪೃಥ್ವಿರಾಜನನ್ನು ನಿಷ್ಕರುಣೆಯಿಂದ ವಧಿಸಿದ. ಅಜ್ಮೀರ್‌ನ ಸಾವಿರಗಟ್ಟಲೆ ಸೈನಿಕರನ್ನೂ, ಪ್ರಜೆಗಳನ್ನೂ ಕೊಂದು ನಿರ್ನಾಮ ಮಾಡಿದ. ಕುತುಬುದ್ದೀನ್ ಐಬಕ್ ಮೀರತ್‌ನ್ನು ಗೆದ್ದುಕೊಂಡ. ಹಿಂದೂ ದೇವಾಲಯಗಳೆಲ್ಲವನ್ನೂ ಧ್ವಂಸ ಮಾಡಿ, ಪ್ರತಿಯಾಗಿ ಮಸೀದಿ ನಿರ್ಮಿಸಿದ. ಅಲಿಗಢ್‌ನಲ್ಲಿ ಕುತುಬುದ್ದೀನ್ ಐಬಕ್ ನಡೆಸಿದ್ದ ವಿಜಯ ಯಾತ್ರೆ ವಿಚಿತ್ರವಾಗಿತ್ತು. ಮತಾಂಧರು ಖಡ್ಗ ಎತ್ತಿದಾಗಲೆಲ್ಲ ಒಂದೋ–ಒಂದು ಅಂಗಾಂಗ ಅಲ್ಲವಾದರೆ ಒಂದು ತಲೆ ಛೇದಿಸಲ್ಪಡುತ್ತಿತ್ತು. ಸುನ್ನತಿಗೆ ಒಪ್ಪದವರ ಕುತ್ತಿಗೆಗೆ ಕತ್ತಿ ಬೀಳುತ್ತಿತ್ತು.

ಕಲಿಂಜರ್ ನಗರ ಒಂದರಲ್ಲಿ ಐಬಕ್ ೧೧೦೩ ಹಿಂದೂ ದೇಗುಲಗಳನ್ನು ಧ್ವಂಸ ಮಾಡಿದ್ದ; ಆರು ಸಾವಿರ ಹಿಂದೂಗಳನ್ನು ಕೊಂದಿದ್ದ; ಐವತ್ತು ಸಾವಿರ ಪ್ರಜೆಗಳನ್ನು ಗುಲಾಮರನ್ನಾಗಿ ಮಾಡಿದ್ದ.



ಮಹಮ್ಮದ್ ಬಕ್ತಿಯಾರ್ ಖಿಲ್ಜಿ, ಬಿಹಾರನ್ನು ವಶಪಡಿಸಿದಾಗ ಕೊಲೆಯಾದದ್ದು ಒಂದು ಲಕ್ಷ ಬ್ರಾಹ್ಮಣರು. ಅಲ್ಲಾವುದ್ದೀನ್ ಖಿಲ್ಜಿ ಇಪ್ಪತ್ತು ಸಾವಿರ ಹಿಂದೂ ಸ್ತ್ರೀಯರನ್ನು ತನ್ನ ಉಪಪತ್ನಿಯರನ್ನಾಗಿ ಮಾಡಿದ್ದ.

ಈ ಯಾದಿಯನ್ನು ಎಷ್ಟು ಬೇಕಾದರೂ ವಿಸ್ತರಿಸಬಹುದು. ಅಲ್ಲಾವುದ್ದೀನ್, ಹಿಂದೂಗಳನ್ನು ಹುಳುಗಳು ಎಂದಷ್ಟೇ ಭಾವಿಸಿದ್ದ. ಮಹಮ್ಮದ್‌ಬಿನ್ ತುಘಲಕ್ ಹಿಂದೂಗಳೊಡನೆ ತೋರಿದ್ದ ಕ್ರೌರ್ಯಕ್ಕೆ ಮಿತಿಯಿಲ್ಲ. ಫಿರೋಜ್ ಶಾ ತುಘಲಕ್ ಭೋಪಾಲ್‌ನ್ನು ವಶಪಡಿಸಿ ದೇವಾಲಯಗಳೆಲ್ಲವನ್ನು ನಾಶ ಮಾಡಿದ್ದ. ದೇವಿ, ದೇವರುಗಳ ವಿಗ್ರಹಗಳನ್ನು ತನ್ನ ಅರಮನೆಯ ಪ್ರಾಂಗಣದಲ್ಲಿ ನೆಲೆಗೊಳಿಸಿದ್ದ. ಪ್ರತಿದಿನವೂ ಅವಕ್ಕೆ ಸಾವಿರ ಹಿಂದೂಗಳ ರಕ್ತಾಭಿಷೇಕ ಮಾಡುತ್ತಿರುವುದನ್ನು ತಾರಸಿಯಲ್ಲಿ ನಿಂತು ನೋಡುತ್ತ ಸಂತೋಷಪಡುತ್ತಿದ್ದನಾತ.

ಮೊಗಲರ ಕಾಲದಲ್ಲೂ ಸ್ಥಿತಿ ಭಿನ್ನವಾಗಿರಲಿಲ್ಲ. ಬಾಬರ್ ಸೈದ್‌ಪೂರ್ ಹಿಂದೂಗಳೊಡನೆ ತೋರ್ಪಡಿಸಿದ್ದ ಅನ್ಯಾಯಗಳಿಗೆ ಗುರುನಾನಕ್ ಸಾಕ್ಷಿಯಾಗಿದ್ದರು. ಕಟುಕನ ಕತ್ತಿಯಾಗಿತ್ತು ಬಾದಷಾನ ನ್ಯಾಯ. ಏಳು ಸೊಬಗುಗಳು ಅರಳಿದ್ದ ನೂರ್ಜಹಾನಳನ್ನು ವರಿಸಿದ್ದ ಜಹಾಂಗೀರ್ ಕೂಡ ಕ್ರೌರ್ಯದಲ್ಲಿ ಒಂದಿಷ್ಟೂ ಹಿಂದೆ ಬೀಳಲಿಲ್ಲ. ನೂರ್ಜಹಾನಳನ್ನು ವಶಪಡಿಸಲು ಅವಳ ಗಂಡನನ್ನು ಆನೆಯಿಂದ ಕೊಲ್ಲಿಸಿದವನು ಜಹಾಂಗೀರ್ ತಾನೆ?

ಅಂತಃಪುರದಿಂದ ಹೊರಹಾಕಲಾದ ಓರ್ವ ಹಿಂದೂ ಸ್ತ್ರೀಯನ್ನು ಚುಂಬಿಸಿದ್ದಕ್ಕೆ ಹಿಜಡಕ್ಕೆ ಕೊಟ್ಟ ಶಿಕ್ಷೆ ವಿಚಿತ್ರವಾಗಿತ್ತು. ಆ ಸ್ತ್ರೀಯನ್ನು ಬತ್ತಲೆಗೊಳಿಸಿ ಕುತ್ತಿಗೆ ತನಕ ಮಣ್ಣಿನಲ್ಲಿ ಹೂಳಲಾಯಿತು. ಆ ಬಳಿಕ ನಪುಂಸಕನನ್ನು ಅವಳ ಕಣ್ಣೆದುರೇ ಕರಕರನೆ ಕಡಿದು ಚೂರು ಚೂರು ಮಾಡಲಾಯಿತು.

ಪರಸ್ಪರ ಸಂಬಂಧವಿಲ್ಲದೆ ಚಾರಿತ್ರಿಕ ಘಟನೆಗಳು ಒಂದೊಂದೇ ಆಗಿ ಸ್ಮರಣೆಯಲ್ಲಿ ಮೂಡಿದವು. ಪ್ರಾಯಶಃ ಐನೂರ ಹದಿನೈದು ವರ್ಷಗಳ ಹಿಂದೆ, ಲಾಹೋರ್‌ನಿಂದ ಮೂವತ್ತು ಮೈಲುಗಳಷ್ಟು ನೈಋತ್ಯದಲ್ಲಿ, ವೈಶಾಖಮಾಸದ ಮೂರನೆಯ ದಿನ. ಖತ್ರಿ ವಂಶದ ಓರ್ವ ಸಾಮಾನ್ಯ ರೈತನ ಮಗನಾಗಿ ನಾನಕ್ ಹುಟ್ಟಿರದಿದ್ದರೆ ಇವತ್ತು ಟೊಳ್ಳು ವಾದಗಳನ್ನು ಮೊಳಗಿಸುತ್ತಿರುವ ಧೋತಿವಾಲಗಳಷ್ಟೂ ಶೆರ್ವಾನಿ ಮತ್ತು ಟರ್ಕಿ ಟೋಪಿಗಳನ್ನು ಧರಿಸಿ ಉರ್ದು ಮಾತನಾಡುವ ಮುಸ್ಲಿಮರೇ ಆಗಿರುತ್ತಿದ್ದರು. ಉತ್ತರ ಹಿಂದೂಸ್ಥಾನದಲ್ಲಿ ಕುಂಟ ತೈಮೂರ್ ಕೊಳ್ಳೆ, ಕೊಲೆ, ಕಿಚ್ಚಿಡುವಿಕೆಯನ್ನು ಒಂದು ಕಲೆಯನ್ನಾಗಿ ಮಾರ್ಪಡಿಸಿದ್ದ ಕಾಲವಾಗಿತ್ತು ಅದು. ಮಹಮ್ಮದ್‌ನಬಿಯ ವಂಶಸ್ಥರಾದ ಸಯ್ಯದ್‌ಗಳು ದೆಹಲಿಯನ್ನು ವಶಪಡಿಸಿದ್ದರು. ಸಯ್ಯದ್ ವಂಶದ ಕೊನೆಯ ಕೊಂಡಿ ಅಲ್ಲಾವುದ್ದೀನ್. ದೆಹಲಿಯ ಭವಿಷ್ಯವನ್ನು ಬಾಲೋಲ್‌ಖಾನ್ ಲೋಡಿಗೆ ಒಪ್ಪಿಸಿದ ಬಳಿಕ ಬಡಾನ್ ನಗರದ ಪ್ರಶಾಂತಿಯತ್ತ

ನಿರ್ಗಮಿಸಿದ್ದ. ಗುರುನಾನಕ್ ಜನ್ಮವೆತ್ತಿದ್ದು ಬಾಲೋಲ್‌ಖಾನ್ ಲೋಡಿಯ ರಾಜ್ಯಭಾರದ ಅವಧಿಯಲ್ಲಿ. ಪಂಜಾಬ್ ಮುಸ್ಲಿಂ ಆಡಳಿತಕ್ಕೆ ಒಳಪಟ್ಟಿತ್ತು. ರಾಯಿಬುಹಾರ್ ಎಂಬ ಮುಸ್ಲಿಂ ಜಮೀನ್‌ದಾರ್‌ನ ಅಧೀನದಲ್ಲಾಗಿತ್ತು ಅಂದು ತಾಲ್ವಂಡಿ.

ಇಂಡೋ–ಪಾಕ್ ಸಂಬಂಧ ಸುಧಾರಿಸಿದ್ದಾಗ ತನಗೆ ನಾನಕರ ಜನ್ಮಸ್ಥಳದಲ್ಲಿರುವ 'ನಂಕಣ್ ಸಾಹಿಬ್' ದರ್ಶಿಸಲು ಅವಕಾಶ ದೊರೆತಿತ್ತು. 'ನಂಕಣ್'ದಲ್ಲಿ ಗುರುನಾನಕರೊಂದಿಗೆ ಸಂಬಂಧ ಹೊಂದಿದ್ದ ಸ್ಥಳಗಳು ಈಗಲೂ ಪರಿಶುದ್ಧವಾಗಿ ಉಳಿದುಕೊಂಡಿವೆ. ಗುರುನಾನಕ್ ಈಜಾಡಿ ಸ್ನಾನ ಮಾಡಿದ್ದ ಕೆರೆಯನ್ನು ವಿಶಾಲಗೊಳಿಸಲಾಗಿದೆ. ಪುಟ್ಟ ನಾನಕ್ ಆಟವಾಡಿದ್ದ ಸ್ಥಳ 'ಬಾಲಕ್ರೀಡೆ'ಯಾಗಿ ಪರಿವರ್ತನೆ ಹೊಂದಿದೆ.

ಹೆಜ್ಜೆ ದನಿ ಕೇಳಿ ಅವನು ಹಿಂತಿರುಗಿ ನೋಡಿದ. ಬಂದವಳು ದರ್ಶನ್. ಅವನು ದೀದಿಯನ್ನು ಗಮನಿಸಿದ. ಅವಳ ಮುಖ ಬಾಡಿದೆ. ಕಣ್ಣುಗಳು ಒದ್ದೆಯಾಗಿವೆ. ಆಫೀಸಿನಿಂದ ಬಂದ ಬಳಿಕ ಅವಳು ಉಡುಗೆ ಬದಲಾಯಿಸಿರುವಳು. ಮೊಣಕಾಲಿನಿಂದ ಬಹಳಷ್ಟು ಕೆಳಗೆ ತಲಪುವ ಕಮೀಜ್‌ನ ಅಂಚುಗಳಲ್ಲೂ, ತೋಳುಗಳ ತುದಿಗಳಲ್ಲೂ ಚೂಡಿದಾರ್‌ಗೆ ಮ್ಯಾಚ್ ಆಗುವ ಬ್ರೌನ್‌ಲೈನಿಂಗ್ ಇದೆ. ಹರವಿಕೊಂಡಿದ್ದ ತಲೆಗೂದಲನ್ನು ಭಾಗಶಃ ಮರೆಮಾಡುತ್ತ ನಿರ್ಲಕ್ಷ್ಯವಾಗಿ ಬಿದ್ದುಕೊಂಡಿದೆ ದುಪಟ್ಟಾ. ದುಪಟ್ಟಾ, ಫ್ಯಾಶನ್ ಅಲ್ಲವಾಗಿದ್ದರೂ ದೀದಿ ಸಿಕ್ಖ್ ಮತ ಬೋಧಿಸುವಂತೆ ಶಿರಮುಚ್ಚಲು ಯಾವತ್ತೂ ಮರೆಯುವುದಿಲ್ಲವೆಂದು ತುಸು ಅಭಿಮಾನದೊಂದಿಗೇ ಅವನು ಅಂದುಕೊಂಡ. ಆದರೂ, ಈಗ ಅತ್ತು ಬಿಡುವೆ ಎನ್ನುವಂತಿದ್ದ ಅವಳ ಮುಖಭಾವ ಅವನನ್ನು ಸಿಟ್ಟಿಗೆಬ್ಬಿಸಿತು: "ಯಾಕೆ ದೀದಿ ಈ ಅಳು ಮೋರೆ? ಬೀವಿಜಿಯ ಹತ್ಯೆ ಇಂದಲ್ಲವಾದರೆ ಇನ್ನೊಂದು ದಿನವಾದರೂ ಅನಿವಾರ್ಯವೇ. ಸ್ವರ್ಣಮಂದಿರದೊಳಗೆ ಸೇನೆ ಹೊಕ್ಕ ಬಳಿಕ ಇಷ್ಟೊಂದು ದಿನ ತಡವಾದುದಕ್ಕೇ ನಾವು ದುಃಖಿಸಬೇಕಾಗುತ್ತದೆ."

ಅವಳ ಶೋಕ ರೋಷವಾಗಿ ಮಾರ್ಪಟ್ಟಿತು. "ನೀನು ಬೇರೆ ಯಾರಿಂದಲೋ ಎರವಲು ಪಡೆದ ಮಾತುಗಳನ್ನೇ ಆಡುತ್ತಿದ್ದೀಯೇ ತಮ್ಮ. ಗುರುನಾನಕ್ ಅನುಯಾಯಿಗಳಿಗೆ ಬೋಧಿಸಿದ್ದು ಸಹನೆಯಿಂದ ಬಾಳಿರಿ ಎಂದು. ಕೊಲೆ, ಖೂನಿಗಳು ಅವರ ನಿಘಂಟುವಿನಲ್ಲಿರಲಿಲ್ಲ."

ಮನಮೋಹನ್ ತನ್ನ ಚಾರ್ಪಾಯಿಯಿಂದ ಎದ್ದು ಕುಳಿತುಕೊಂಡ. ಹೆಚ್ಚೇನೂ ಮಾತನಾಡುವ ಸ್ವಭಾವದವಳಲ್ಲ ದೀದಿ. ಇವತ್ತು ತುಸು ಫಿಲಾಸಫಿಕ್ ರೀತಿಯಲ್ಲೇ ಆರಂಭಿಸಿರುವಳಲ್ಲ. ಅವನು ಹೇಳಿದ: ಅಕ್ಕಾ... ನಮಗೆ ಗುರುಗಳು ಹತ್ತು ಮಂದಿ ಇದ್ದರು. ಖಲ್ಸಾದ ಅಸ್ತಿತ್ವ ಅಪಾಯಕ್ಕೆ ಗುರಿಯಾದಾಗ ನಮ್ಮ ಗುರುಗಳು ಆಯುಧ



ಎತ್ತಿದ್ದಾರೆ. ಗುರುಗೋವಿಂದ್ ಸಿಂಗ್ ಜ್ಞಾನಿಯಾದ ವೀರಭಟ ಎಂದೇ ಖ್ಯಾತರಾಗಿದ್ದಾರೆ. ವಾಯವ್ಯ ದಿಕ್ಕಿನ ಘಾಟಿಗಳನ್ನು ದಾಟಿ ಬಂದ ಮುಸ್ಲಿಂ ಆಕ್ರಮಣಗಾರರ ಬೀಭತ್ಸವೂ, ಕ್ರೂರವೂ ಆದ ಮತಪರಿವರ್ತನೆಯ ದಂಡನ ಪ್ರಕ್ರಿಯೆಗಳಿಗೆದುರಾಗಿ ಖಡ್ಗವೆತ್ತಲು ಸಿಕ್ಖ್ ಧರ್ಮದ ರಕ್ಷಣೆಗಾಗಿ ರುದ್ರಾಕ್ಷದೊಂದಿಗೆ ಖಡ್ಗವನ್ನೂ ಧರಿಸಲು ಅವರು ಆಹ್ವಾನ ಮಾಡಿದ್ದರು. ಅಕಾಲ್‌ತಖ್ತ್‌ನ ನಾಯಕತ್ವವನ್ನು ವಹಿಸಿಕೊಳ್ಳುವಾಗ ಅವರು ಎರಡು ಖಡ್ಗಗಳನ್ನು ಧರಿಸಿದ್ದರು. ಪಿರಿ ಮತ್ತು ಮಿರಿ: ದೇಗ್ ಮತ್ತು ತೇಗ್–ಆಶ್ರಿತರಿಗೆ ಮತ್ತು ಅನುಯಾಯಿಗಳಿಗೋಸ್ಕರ ಆಹಾರ; ಶತ್ರುಗಳಿಗಾಗಿ ಖಡ್ಗ.

ಮನಮೋಹನ್ ಮಾತು ನಿಲ್ಲಿಸಿದ. ದರ್ಶನ್ ಅವನ ಮಾತುಗಳನ್ನು ಗಮನಿಸುತ್ತಿಲ್ಲವೊ ಏನೋ! ಅವಳು ದೂರದಲ್ಲೆಲ್ಲೊ ದಿಟ್ಟಿಸುತ್ತಿರುವಳು. ಕಣ್ಣುಗಳಿಂದ ಉದುರಿದ ಕಣ್ಣೀರ ಹನಿಗಳು ಅವಳ ಕೆಂಪಗಿನ ಕೆನ್ನೆಗಳ ಮೂಲಕ ಹರಿದು ಎದೆಯ ಮೇಲೆ ಕಮೀಜ್‌ನಲ್ಲಿ ಉದುರಿಬೀಳುತ್ತಿರುವುದನ್ನು ಅವನು ಕಂಡ.

ಒಂದು ಮರ್ಮರದಂತೆ ಅವಳೆಂದಳು: "ನಿನಗೆ ಹೇಳಲಿಕ್ಕಿರುವುದು ಮುಗಿಯಿತೇ? ಮುಗಿದರೆ ನನಗೊಂದು ಪ್ರಶ್ನೆ ಕೇಳಲಿಕ್ಕಿದೆ."

"ಇಲ್ಲ, ನಾನು ಶುರು ಮಾಡಿದ್ದಷ್ಟೆ. ಸಿಕ್ಖ್ ಮತದ ಸಂರಕ್ಷಣೆಗಾಗಿ ಏಳುನೂರ ಕುದುರೆಗಳನ್ನೂ ಮುನ್ನೂರು ಕಾಲಾಳುಗಳನ್ನೂ ಅರುವತ್ತು ಕೋವಿಗಳನ್ನೂ ಒಳಗೊಂಡದ್ದು ಮೊದಲನೆಯ ಸಿಕ್ಖ್ ಸೇನೆ. ಇದನ್ನು ರೂಪಿಸಿದವರು ಗುರು ಹರ್‌ಗೋವಿಂದ್ ಸಿಂಗ್‌ರು. ಷಾಜಹಾನನ ವಿರುದ್ಧವಾಗಿತ್ತು. ಅವರ ಮೊದಲನೆಯ ಯುದ್ಧ. ದೀದಿ, ಆಗ ಕೇಳಿದ್ದ ಪ್ರಶ್ನೆಯನ್ನೇ ಸಾಮಂತ ರಾಮದಾಸ್, ಗುರು ಗೋವಿಂದ್‌ರೊಡನೆ ಕೇಳಿದ್ದ: ಸರ್ವವನ್ನೂ ತ್ಯಜಿಸಿದ್ದ ನಾನಕ್‌ನ ಉತ್ತರಾಧಿಕಾರಿ ಖಡ್ಗ ಹಿಡಿದು ಕುದುರೆ ಮೇಲೆ ಕುಳಿತು ಸೇನೆಯನ್ನು ನಡೆಸುತ್ತೀರಲ್ಲ. ನೀವು ಸುಲ್ತಾನರೋ ಸಾಧುವೊ?"

ಗುರುಗೋವಿಂದ್ ಸಿಂಗ್ ಉತ್ತರವಿತ್ತರು: ಬಾತರ್ ಫಕೀರಿ: ಜಾಗರ್ ಅಮೀರಿ (ಹೊರಗೆ ಸಮ್ರಾಟ; ಒಳಗೆ ಸಂನ್ಯಾಸಿ...)

ಅವಳು ದುಪಟ್ಟಾದಿಂದ ಮುಖವನ್ನು ಒತ್ತಿ ಒರೆಸಿದಳು. ಬಳಿಕ ಅವನ ಕಣ್ಣುಗಳಲ್ಲೆ ದಿಟ್ಟಿಸಿದಳು. "ನಿನ್ನ ಭಾಷಣ ಮುಗಿಯಿತೇನು?"

ಅವನು ಒಂದು ಕ್ಷಣ ಅನುಮಾನಿಸಿದ. ಕೆಲವು ತಿಂಗಳುಗಳಿಂದಲೂ ತಾನು ಸಿಕ್ಖ್‌ರ ಚರಿತ್ರೆಯನ್ನು ಪ್ರಜ್ಞಾಪೂರ್ವಕ ಅಧ್ಯಯನ ಮಾಡುತ್ತ ಬಂದಿದ್ದೇನೆ. ಪ್ರತಿಯೊಬ್ಬ ಗುರುವಿನ ಪ್ರಭಾಷಣಗಳನ್ನೂ, ಭವಿಷ್ಯೋಕ್ತಿಗಳನ್ನೂ ಶ್ರದ್ಧಾಪೂರ್ವಕ ಮನನ ಮಾಡುತ್ತಿದ್ದೇನೆ. ಎಲ್ಲಕ್ಕಿಂತ ಮಿಗಿಲಾಗಿ "ಗುರುಗ್ರಂಥ ಸಾಹಿಬ್"ನ್ನು ಒಂದು ನಿತ್ಯವಿಧಿಯೆಂಬಂತೆ ಪಾರಾಯಣ ಮಾಡುತ್ತಿದ್ದೇನೆ. ಒಂದು ಮಹಾನಗರದ ಹಾಗಿದೆ

ಗುರುಗ್ರಂಥ ಸಾಹಿಬ್. ಒಬ್ಬೊಬ್ಬ ಗುರುವೂ ಅದರೊಳಗಿನ ಬೇರೆ ಬೇರೆ ಮಹಲುಗಳನ್ನು ನಿರ್ಮಿಸಿದ್ದರು. ಗುರುಗೋವಿಂದ್ ಸಿಂಗ್‌ರ ಜಪ್‌ಜಿ, ಅಕಾಲ್ ಉಸ್ತಾತ್, ವಿಚಿತ್ರ ನಾಟಕ ಯುದ್ಧ ದೇವತೆಯಾಗಿರುವ ದುರ್ಗೆಯನ್ನು ಹಾಡಿಹೊಗಳುವ ದೇವಿ ಮಹಾತ್ಮ್ಯೆ, ಜ್ಞಾನ ಪ್ರಬೋಧ ಅಲ್ಲದೆ ಮಧ್ಯಕಾಲೀನ ಮಹಾತ್ಮರುಗಳ, ಸಂನ್ಯಾಸಿಗಳ ಮತ್ತು ಫಕೀರ್‌ಗಳ ದೇಹಗಳು ಮತ್ತು ದಿವ್ಯವಾಣಿಗಳು...

"ಕೇಳು ದೀದಿ. ಆಗ ಹೇಳಿದ್ದಿಯಲ್ಲ ದೀದಿಗೆ ಏನೋ ಪ್ರಶ್ನಿಸಲಿಕ್ಕಿದೆ ಅಂತ. ಪ್ರಶ್ನಿಸು, ಕೇಳ್ತೇನೆ."

ಅವಳು ಮನಮೋಹನ್‌ನ ಚಾರ್ಪಾಯಿಯಲ್ಲಿ ಕುಳಿತಳು. ಬಳಿಕ ತಗ್ಗಿದ ದನಿಯಲ್ಲಿ ಪ್ರಶ್ನಿಸಿದಳು: "ಅರುವತ್ತು ದಾಟಿದ ಓರ್ವ ವೃದ್ಧೆಯನ್ನು, ಆಕೆಯ ಸುರಕ್ಷೆಯನ್ನು ದೃಢಪಡಿಸಲು ಜವಾಬ್ದಾರರಾದ ಬಿಸಿ ನೆತ್ತರಿನ ಯುವಕರು ಮೆಷಿನ್‌ಗನ್‌ಗಳಿಂದ ಎಷ್ಟೋ ಸುತ್ತು ಗುಂಡು ಹಾರಿಸಿ ನಾಶಗೈದ ಹೀನಕೃತ್ಯವನ್ನು, ನಮ್ಮ ಗುರುಗಳು ಧೀರತನವೆಂದು ಭಾವಿಸುವರೇನು?..."

ಅವನು ಅವಳ ಮುಖದಿಂದ ದೃಷ್ಟಿ ಹಿಂತೆಗೆದುಕೊಂಡ. ಅವಳ ಮಾತುಗಳ ಹರಿತ ಆತನಿಗೆ ಕಿರಿಕಿರಿಯನ್ನುಂಟು ಮಾಡಿತು. ಅವನು ಆ ಕೃತ್ಯವನ್ನು ವ್ಯಾಖ್ಯಾನಿಸಲು ಬಯಸಿದ. ಆಕೆ ರಕ್ತ ಮಾಂಸಗಳಿರುವ ಓರ್ವ ಸ್ತ್ರೀಯಲ್ಲ. ಅದೊಂದು ಪ್ರತೀಕವಷ್ಟೇ– ದಬ್ಬಾಳಿಕೆಯ ಅಸಹನೆಯ; ಇಂಡಿಯನ್ ಮಿಲಿಟ್ರಿಯ; ಹಿಂದೂ ಫಂಡಮೆಂಟಲಿಸಂನ ಪ್ರತೀಕ.

ಆದರೆ ಮಾತುಗಳು ಅವನಿಗೆ ವಶವಾಗಲಿಲ್ಲ. ಅವನು ಎದ್ದು ಕಿಟಕಿಯ ಮೂಲಕ ಹೊರಗೆ ದಿಟ್ಟಿಸಿದ. ಸೂರ್ಯ ಕಾರ್ಮೋಡಗಳಿಂದ ಮರೆಯಾಗಿದ್ದ. ಯಾವುದೋ ವಿಪತ್ತಿನ ವಿಭ್ರಾಂತಿಗಳು ಗಾಳಿಯಲ್ಲಿ ಅಪೂರ್ವ ಚಿತ್ರಗಳನ್ನು ಬಿಡಿಸುತ್ತಿವೆಯೆ? ಪಕ್ಕದ ಮನೆಯ ಟ್ರಾನ್ಸಿಸ್ಟರ್‌ನಲ್ಲಿ ಮುಖೇಶ್ ಹಾಡುತ್ತಿರುವನು.

ಇಲ್ಲ, ಭಾರತ ಸರಕಾರಕ್ಕೆ ಇನ್ನೂ ಪ್ರಧಾನಮಂತ್ರಿಯ ನಿಧನದ ಅರಿವಾಗಿಲ್ಲ.

ವಾಚ್ ನೋಡಿದ. ಗಂಟೆ ನಾಲ್ಕಾಗುವುದರಲ್ಲಿದೆ. ಈ ಸಂಜೆಯನ್ನು ಹೇಗೆ ಕಳೆಯಲಿ? 'ಬಂಗ್ಲಾ ಸಾಹಿಬ್'ಗೆ ಹೋಗಿ ಗೆಳೆಯರ ಜತೆಯಲ್ಲಿ ಈ ಐತಿಹಾಸಿಕ ಘಟನೆಯನ್ನು ಸೆಲೆಬ್ರೇಟ್ ಮಾಡಿದರೇನು? ಸುಮಾರು ದಿನಗಳಿಂದ ಶೋ ರೂಮ್‌ಗೆ ಹೋಗಿಲ್ಲ. ಅಲ್ಲಿಗೇ ಹೋಗಲೆ? ಅಂಗಡಿಗಳೆಲ್ಲ ಈದಿನ ಬೇಗನೆ ಮುಚ್ಚಲ್ಪಡುವ ಸಾಧ್ಯತೆ ಇದೆ. ಅವನು ತಿರುಗಿ ನೋಡಿದ. ದರ್ಶನ್ ಒಳಗಡೆ ಹೋಗಿಯಾಗಿತ್ತು.

ಅವನು ಚಾರ್ಪಾಯಿಯಲ್ಲಿ ನಿಡಿದಾಗಿ ಬಿದ್ದುಕೊಂಡ. ದೀದಿಯ ಪ್ರಶ್ನೆ ಅವನಿಗೆ ಕಿರಿಕಿರಿಯುಂಟು ಮಾಡತೊಡಗಿದೆ.

ಹರ್‌ಭಜನ್ ಮಂಪರಿನಿಂದ ನಿಧಾನವಾಗಿ ಎಚ್ಚರಗೊಂಡ. ಸ್ಥಳ, ಕಾಲಪ್ರಜ್ಞೆಯನ್ನು ಮರಳಿ ಪಡೆಯಲು ಒಂದು ನಿಮಿಷ ಹಿಡಿಯಿತು. ಆತ ಕಣ್ಣುಬಿಟ್ಟ.



ತಲೆ ಭಾರವಾಗಿರುವಂತೆ ಅನಿಸಿತು. ಅಲುಗಾಡಿದಾಗ ಬ್ಯಾಂಡೇಜ್ ಸುತ್ತಿದ್ದ ಕೈ ತೀವ್ರವಾಗಿ ನೋವಾಯ್ತು. ತಲೆಯ ಗಾಯಕ್ಕೆ ಬ್ಯಾಂಡೇಜ್ ಹಾಕಿ ಕಟ್ಟಲಾಗಿದೆ. ಕೆನ್ನೆಗಳು ಊದಿಕೊಂಡಿವೆ. ಹಲ್ಲುಗಳು ಕಿತ್ತು ಹೋದುದರಿಂದ ವಸಡುಗಳೂ ಬಾತಿವೆ. ಆತಂಕದಿಂದ ದಿಟ್ಟಿಸುತ್ತ ಸುತ್ತಲೂ ಕುಳಿತಿರುವ ಮನೆ ಮಂದಿಯತ್ತ ನೋಡಿದ. ಹೆಂಡತಿ ಪ್ರೀತಮ್‌ಕೌರ್, ತಮ್ಮ ಸತ್‌ವೀರ್, ಕಿರಿಯ ತಮ್ಮ ಪಪ್ಪು ಎಂದು ಕರೆಯಲ್ಪಡುತ್ತಿರುವ ಕರ್ತಾರ್ ಸಿಂಗ್, ಮಕ್ಕಳು ಸುನೀಂದರ್ ಸಿಂಗ್ ಮತ್ತು ಮನೀಂದರ್ ಸಿಂಗ್. ಸುನೀಂದರ್ ಮತ್ತು ಮನೀಂದರ್ ನಡುವೆ ಒಂದು ವರ್ಷದ ಅಂತರವಿದೆಯೆಂದು ಯಾರಿಗೂ ಅನ್ನಿಸದು. ನೋಡಲು ಅವಳಿ ಜವಳಿಗಳ ಹಾಗೆಯೇ ಇದ್ದಾರೆ. ಯಾರು ಅಣ್ಣ, ಯಾರು ತಮ್ಮ–ಎಂದು ಗುರುತಿಸಲು ಕಷ್ಟವಾದೀತು. ಅವರಿಬ್ಬರಿಗೂ ಪ್ರೀತಂಳ ಕಣ್ಣುಗಳೂ, ಹುಬ್ಬುಗಳೂ ಯಥಾವತ್ತಾಗಿ ಸಿಕ್ಕಿವೆ ಎಂಬುದನ್ನು ಆತ ಗಮನಿಸಿದ. ಈ ಸಂಗತಿಯನ್ನು ತಾನು ಗಮನಿಸಲೇ ಇಲ್ಲವೆ? ಮಕ್ಕಳ ಜತೆ ಹೆಚ್ಚಿಗೆ ವೇಳೆ ಕಳೆಯಲು ತನಗೆ ಸಾಧ್ಯವಾಗುತ್ತಿರಲಿಲ್ಲ. ರಾತ್ರಿಯೂ ಹಗಲೂ ಡ್ಯೂಟಿ ಇರುತ್ತದೆ. ಅಲ್ಲದಿದ್ದರೂ ಅಮ್ಮನ ಮಕ್ಕಳಾಗಿಯೇ ಅವರು ಬೆಳೆಯುತ್ತಿರುವರು.

ಆತ ಪ್ರಜ್ಞಾಹೀನತೆಯಿಂದ ಅರೆಪ್ರಜ್ಞೆಗೂ ಆ ಬಳಿಕ ಪೂರ್ಣ ಪ್ರಜ್ಞೆಗೂ ಮರಳುತ್ತಾ ಇದ್ದ ಅವಧಿಯಲ್ಲಿ ಒಂದು ಸಂಗತಿಯನ್ನು ಗಮನಿಸಿದ್ದ–ತನ್ನನ್ನು ನೋಡಲು ಬಂದಿರುವ ಮನೆಮಂದಿಯ ಮುಖದಲ್ಲಿ ಶೋಕಕ್ಕಿಂತಲೂ ತನಗೆ ಪೆಟ್ಟುಬಿದ್ದ ಬಗೆಗಿನ ವ್ಯಥೆಗಿಂತಲೂ ಹೆಚ್ಚು ಹಗೆ ಮತ್ತು ದ್ವೇಷ ಭಾವಗಳೇ ಕಾಣಿಸುತ್ತಿವೆ ಎಂಬ ಸಂಗತಿಯನ್ನು, ಪ್ರೀತಮ್‌ಳ ಕಣ್ಣುಗಳು ಒದ್ದೆಯಾಗಿವೆಯಾದರೂ ಅವಳು ಆಗಾಗ ಉರು ಹೊಡೆಯುತ್ತಿರುವುದು ಯಾವ ದ್ರೋಹಿಗಳು ಹೀಗೆ ಮಾಡಿದ್ದು ಎಂದು. ಸತ್‌ವೀರ್ ಕೈಗಳನ್ನು ಒಟ್ಟುಮಾಡಿ ಹಿಸುಕುತ್ತ, ಪಂಜರದೊಳಗಿನ ಪುಣುಗು ಬೆಕ್ಕಿನ ಹಾಗೆ ಠಳಾಯಿಸುತ್ತಿರುವನು. ಕಿರಿಯ ತಮ್ಮ ಹಲ್ಲು ಕಡಿಯುತ್ತ ತನ್ನಷ್ಟಕ್ಕೇ ಎಂಬಂತೆ ಹೇಳಿದ. ಇನ್ನು ನಾವು ಸುಮ್ಮನಿರಕೂಡದು. ಏನೂ ಅರಿಯದೆ ದಿಗಿಲು ಬಿದ್ದಿದ್ದಾರೆ ಸುನೀಂದರ್ ಮತ್ತು ಮನೀಂದರ್. ಆದರೂ ಅವರ ಕಣ್ಣುಗಳಲ್ಲೂ ಕೂಡ ಯಾವುದೋ ಉಗ್ರಭಾವನೆಯ ಕೆಂಡಗಳು ಹೊಳೆಯುತ್ತಿವೆ.

ಏನು ಸಂಭವಿಸಿದ್ದೆಂದು ತನ್ನೊಡನೆ ಯಾರೂ ವಿಚಾರಿಸಲಿಲ್ಲವೆಂದು ಹರ್‌ಭಜನ್ ಚಡಪಡಿಸಿದ. ಪ್ರಾಯಶಃ ರವಿಕುಮಾರ್ ಸಾಬ್ ಎಲ್ಲವನ್ನೂ ಹೇಳಿರಬಹುದು.

ಯಾವ ಮಾತನ್ನೂ ವಿನಿಮಯ ಮಾಡಿಕೊಳ್ಳಲಿಲ್ಲವಾದರೂ ಒಬ್ಬೊಬ್ಬರ ಮನಸ್ಸಿನಲ್ಲಿ ಹೊತ್ತಿ ಹೊಗೆಯಾಡುತ್ತಿರುವ ಭಾವನೆಗಳೇ ಪರಸ್ಪರ ಸಂವಹನ

ಮಾಡಿಕೊಂಡಿರಬಹುದು. ಯಾರೊಬ್ಬರಿಗೂ ಏನನ್ನೂ ಕೇಳಲಿಕ್ಕಾಗಲಿ, ಹೇಳಲಿಕ್ಕಾಗಲಿ, ಇಲ್ಲದಂಥ ಪರಿಸ್ಥಿತಿ.

ಪ್ರೀತಂ ಹರ್‌ಭಜನ್‌ನ ತುಂಡಾಗಿರುವ ಕಾಲು ತಡವುತ್ತ ಕುಳಿತಳು. ಕೆಳಗೆ ಬಿದ್ದಿರುವ ಕೃತಕ ಕಾಲನ್ನೆತ್ತಿ ಮನೀಂದರ್ ತಾಯಿಯ ಕಡೆಗೆ ಚಾಚಿದ. ಆಕೆ ಅದನ್ನು ಇಸಿದುಕೊಂಡಳು. ಮೆಲ್ಲಗೆ ಹರ್‌ಭಜನ್‌ನ ಮೊಣಕಾಲಿಗೆ ಫಿಟ್ ಮಾಡಿಯೂ ಕೊಟ್ಟಳು.

ಆಗಲೂ ತಾನು ಡ್ರೈವರ್‌ನ ಬಿಳಿ ವರ್ದಿಂಯುನ್ನೇ ತೊಟ್ಟುಕೊಂಡಿರುವೆನೆಂಬುದನ್ನು ಹರ್‌ಭಜನ್ ಗಮನಿಸಿದ. ಅದರಲ್ಲಿ ಅಲ್ಲಲ್ಲೇ ಕೊಳೆ ಮತ್ತು ರಕ್ತ ಮೆತ್ತಿಕೊಂಡಿವೆ. ಸತ್‌ವೀರ್ ಆತನಿಗೆ ಮೆಲ್ಲಗೆ ಏಳಲು ನೆರವಾದ. ಪಪ್ಪು ಹೆಗಲ ಚೀಲದಲ್ಲಿ ತಂದಿದ್ದ. ಪೈಜಾಮ ಮತ್ತು ಕುರ್ತಾ ಧರಿಸಲು ಆತನಿಗೆ ಸಹಾಯ ಮಾಡಿದ. ಸತ್‌ವೀರ್ ಮತ್ತು ಕರ್ತಾರ್‌ನ ಹೆಗಲು ಹಿಡಿದುಕೊಂಡು ಆತ ಟಾಯ್‌ಲೆಟ್‌ಗೆ ಹೋದ. ತಣ್ಣಗಿನ ನೀರಿನಲ್ಲಿ ಮುಖ ತೊಳೆದ. ಕನ್ನಡಿ ನೋಡಿದ. ಮೆಲ್ಲಗೆ ಬಾಯಿ ತೆರೆದು ತಡಕಾಡಿದ. ಎಷ್ಟು ಹಲ್ಲುಗಳು ನಷ್ಟವಾಗಿವೆ ಎಂದು ಆತನಿಗೆ ಖಚಿತವಾಗಲಿಲ್ಲ. ಸ್ಲಿಂಗ್‌ನಲ್ಲಿ ಬಿದ್ದುಕೊಂಡಿರುವ ಕೈಯ ನೋವು ತುಸು ತಗ್ಗಿದೆಯೆಂದೆನಿಸಿತು. ಬಿಚ್ಚಿಕೊಂಡಿದ್ದ ಕೂದಲನ್ನು ಆತ ಒಂದೇ ಕೈಯಿಂದ ಸುತ್ತಿ ನೆತ್ತಿಯಲ್ಲಿರಿಸಿದ. ಜನರ ಗುಂಪು ಮೊದಲು ಕೈ ಹಾಕಿದ್ದು ಪಗಡಿಗೆ ಎಂಬುದನ್ನು ಆತ ಥಟ್ಟನೆ ಜ್ಞಾಪಿಸಿಕೊಂಡ. ಯಾಕೋ ಅತನಿಗೆ ಆ ಬಗ್ಗೆ ಸ್ವಲ್ಪವೂ ಸಿಟ್ಟುಂಟಾಗಲಿಲ್ಲ. ಮಾತ್ರ ಹೃದಯಾಂತರಾಳದಲ್ಲಿ ವ್ಯಥೆಯನುಭವಿಸಿದ. ಈ ಮನುಷ್ಯರಿಗೆ ಆದದ್ದಾದರೂ ಏನು ಎಂದನ್ನಿಸಿತು ಆತನಿಗೆ. ಈ ಹುಚ್ಚಿಗೆ ಏನಿದೆ ಮದ್ದು?

ಮರಳಿ ಬಂದು ಆತ ಮಂಚದ ಮೇಲೆ ಒರಗಿದ. ಮಾತಿಲ್ಲದ ಕಾರಣ ವಾತಾವರಣದ ಬಿಗಿತನ ಹೆಚ್ಚುತ್ತಲೇ ಇದೆ. ಆತನಿಗೆ ವಿಪರೀತ ಬಾಯಾರಿಕೆಯೆನಿಸಿತು. ಆತ ಹೆಂಡತಿಯ ಮುಖ ನೋಡಿದ. ಆಕೆ ಎದ್ದು ಹೂಜಿಯಿಂದ ಲೋಟಕ್ಕೆ ನೀರು ಸುರಿದಳು. ಬಳಿಕ ಆತನ ತುಟಿಗೆ ಲೋಟವನ್ನು ಹಿಡಿದಳು.

ನೀರು ಕುಡಿದಾಗ ಆತನಿಗೆ ವಿವರಿಸಲಾರದಷ್ಟು ಹಾಯೆನಿಸಿತು. ಯಾರೂ ಇನ್ನೂ ಏನನ್ನೂ ಮಾತನಾಡಲಿಲ್ಲವೆಂಬ ಸಂಗತಿ ಆತನಲ್ಲಿ ವ್ಯಥೆ ಮೂಡಿಸಿತು. ಆದರೂ ಮೌನದ ಮೊಟ್ಟೆಗಳನ್ನು ತಿವಿದೊಡೆಯಲು ಆತನಿಗೆ ಸಾಧ್ಯವಾಗಲಿಲ್ಲ. ಕೊನೆಗೊಮ್ಮೆ ಮೌನ ಭೇದಿಸಿದವನು ಮನೀಂದರ್. ಹಿರಿಯರ ಮುಂದೆ ಅವನೆಂದೂ ಸರದಿ ಮೀರುತ್ತಿರಲಿಲ್ಲ. ಏನನ್ನಾದರೂ ಕೇಳಿದರೆ ತಲೆತಗ್ಗಿಸಿಯೇ ಉತ್ತರಿಸುವವನು. ಆ ಹದಿನಾಲ್ಕರವನ ಮನಸ್ಸಿನಲ್ಲಿ ಏನೇನೋ ಸಂಶಯಗಳು ಹೊತ್ತಿ ಹೊಗೆಯಾಡುತ್ತಿರಬಹುದು. ತರಗತಿ ಕೋಣೆಗಳಲ್ಲೂ ಗುರುದ್ವಾರದಲ್ಲೂ



ಅವನು ಅನೇಕ ಸಂಗತಿಗಳನ್ನು ಕಾಣುತ್ತಲೂ, ಕೇಳುತ್ತಲೂ ಇರಬಹುದು. ಅವನು ಅನುಮಾನಿಸುತ್ತಲೇ, ಅಳುಕುತ್ತಲೇ ಮಾತನ್ನು ಹೊರಬಿಟ್ಟಿದ್ದ... ಕೇವಲ ನಾಲ್ಕೇ ಶಬ್ದಗಳು.

"ನಾವು ಏನು ಅಪರಾಧ ಮಾಡಿದ್ದೇವೆ?"

ಪ್ರೀತಮ್‌ಕೌರ್ ಆ ಪ್ರಶ್ನೆ ಕೇಳಿ ಬೆಚ್ಚಿದಳು. ಆಕೆ ಕೆಳಜಾರಿದ್ದ ದುಪಟ್ಟಾವನ್ನು ಸರಿಪಡಿಸುತ್ತ ಮಗನತ್ತ ನೋಡಿದಳು. ಆ ನೋಟದಲ್ಲಿ ಗದರಿಕೆ ಹಾಗೂ ತಡೆಯಾಜ್ಞೆಗಳಿದ್ದುವು. ಸತ್‌ವೀರ್ ಮತ್ತು ಕರ್ತಾರ್ ಪರಸ್ಪರ ನೋಡಿಕೊಂಡರು. ಬಳಿಕ ಅಸಾಮಾನ್ಯ ಶಾಂತತೆಯೊಂದಿಗೆ ಹರ್‌ಭಜನ್‌ನತ್ತ ದಿಟ್ಟಿಸಿದರು. ಹರ್‌ಭಜನ್ ಮನೀಂದರ್ ಮತ್ತು ಸುನೀಂದರರನ್ನು ಕರೆದು ಪಕ್ಕದಲ್ಲಿ ಕುಳ್ಳಿರಿಸಿದ. ಬಳಿಕ ಅವರಿಗಷ್ಟೇ ಕೇಳಲಿಕ್ಕೆಂಬಂತೆ ಹೇಳಿದ: ಇಲ್ಲ ಮಕ್ಕಳೇ, ನಾವು ಅಪರಾಧ ಮಾಡಲಿಲ್ಲ. ಒಂದರ್ಥದಲ್ಲಿ ಯಾರೂ ಅಪರಾಧ ಮಾಡಲಿಲ್ಲ. ಈಗ ಮಾತನಾಡದಿರಲು ಸುನೀಂದರ್‌ಗೆ ಸಾಧ್ಯವಾಗಲಿಲ್ಲ.

"ಈ ದೇಶಕ್ಕಾಗಿ ಡ್ಯಾಡಿಯ ಕಾಲು ಬಲಿದಾನವಾಯಿತು. ತಾತಾ ಪ್ರಾಣತೆತ್ತದ್ದೂ ಈ ದೇಶಕ್ಕಾಗಿಯೇ. ಈ ದೇಶದ ಗಡಿಗಳನ್ನು ರಕ್ಷಿಸಲಿಕ್ಕಾಗಿ ಎಷ್ಟೋ ಮಂದಿ ಸಿಕ್ಖರು ಜೀವವನ್ನು ಬಲಿಗೈದಿದ್ದರು. ಹೀಗಿದ್ದೂ ನಮ್ಮನ್ನು ಬೇಟೆಯಾಡುತ್ತಿರುವರಲ್ಲ ಯಾಕೆ?"

ಹರ್‌ಭಜನ್ ಇದೇ ಮೊದಲ ಬಾರಿ ಒಂದು ಸಂಗತಿಯನ್ನು ಗಮನಿಸಿದ. ಸುನೀಂದರ್ ಮತ್ತು ಮನೀಂದರ್ ಈಗ ಚಿಕ್ಕ ಹುಡುಗರಲ್ಲ. ಅವರು ಬೆಳೆದಿರುವರು. ಪ್ರಾಯಶಃ ಸುತ್ತಲೂ ವಿಜೃಂಭಿಸುತ್ತಿರುವ ಹುಚ್ಚು ಘಟನೆಗಳ ಬೆಳವಣಿಗೆಗಳಿಂದಲೂ ಇಂದಿನ ತಲೆಮಾರು ಬಲು ಬೇಗನೆ ಬೆಳವಣಿಗೆ ಹೊಂದುತ್ತಿರಬಹುದು.

ಅವರ ತಲೆ ತಡವುತ್ತ ಹರ್‌ಭಜನ್ ಹೇಳಿದ: ಮಕ್ಕಳೆ, ನಿಮಗೆ ಆಹಾರ, ವಸ್ತ್ರ ಹಾಗೂ ಇತರ ಅವಶ್ಯಕತೆಗಳನ್ನು ಪಡೆಯುವ ಗಡಿಬಿಡಿಯಲ್ಲಿ ನಿಮಗೆ ಕತೆ ಹೇಳಲು ಡ್ಯಾಡಿಗೆ ವೇಳೆ ಇರಲಿಲ್ಲ. ನಿಮ್ಮಮ್ಮನಿಗಾದರೂ ರೊಟ್ಟಿ, ಸಬ್ಜಿಗಳನ್ನು ಮಾಡಲಿಕ್ಕೂ ಸೋಜಿಯಿಂದ ಹಲ್ವ ತಯಾರಿಸಲಿಕ್ಕೂ, ಒಡೆದ ಹಾಲಿನಿಂದ ಪನೀರ್ ಮಾಡಲಿಕ್ಕೂ ಅಲ್ಲದೆ ಒಂದು ಮಣ್ಣಂಗಟ್ಟಿ ಕೂಡ ಗೊತ್ತಿಲ್ಲ...

ವಾತಾವರಣ ಥಟ್ಟನೆ ಸಡಿಲಾಯಿತು. ಪ್ರೀತಮ್‌ಕೌರಳ ಬಿಳಿಚಿಕೊಂಡಿದ್ದ ಮುಖ ಕೆಂಪಡರಿತು. ಅಳುವುದರಲ್ಲಿದ್ದ ಆಕೆಯ ತುಟಿಗಳಲ್ಲಿ ಒಂದು ನವುರಾದ ಮುಗುಳ್ನಗೆಯ ಪಕಳೆಗಳರಳಿದವು. ಹರ್‌ಭಜನ್ ಕತೆಯನ್ನು ಮುಂದುವರಿಸಿದ: ಗುರುನಾನಕರು ಸಯೀದ್‌ಪುರಿಯಲ್ಲಿದ್ದಾಗ ಬಾಬರ್, ನಗರವನ್ನು ಆಕ್ರಮಿಸಿ ನಗರಕ್ಕೆ ಭಾರೀ ನಾಶನಷ್ಟಗಳನ್ನುಂಟು ಮಾಡಿದ. ದೇಗುಲಗಳೆಲ್ಲ ಧ್ವಂಸವಾದವು. ಆಬಾಲವೃದ್ಧ ಜನರು ಕೊಲ್ಲಲ್ಪಟ್ಟರು. ಆದರೂ ಗುರುನಾನಕರ ವಿಶಿಷ್ಟ ಸಿದ್ಧಿಗಳ

ಕುರಿತು ಕೇಳಿ ತಿಳಿದಿದ್ದ ಬಾಬರ್, ನಾನಕ್‌ರನ್ನೂ ಅವನ ಸೇವಕ ಮರ್ದಾನ್‌ನನ್ನೂ ಕೊಲ್ಲಲಿಲ್ಲ. ಅವರನ್ನು ಜೈಲಿಗೆ ಹಾಕಿದ್ದ.

ಅವರಿಂದ ಬಲು ಕಷ್ಟದ ಕೆಲಸಗಳನ್ನು ಮಾಡಿಸಲು ಬಾಬರ್ ಆಜ್ಞಾಪಿಸಿದ. ಮೀರ್‌ಖಾನ್ ಎಂಬ ಸೇನಾಪತಿ ಗುರುನಾನಕ್‌ರನ್ನು ಹೊರೆಹೊರಲಿಕ್ಕೂ, ಮರ್ದಾನನನ್ನು ಕುದುರೆಗಳಿಗೆ ಮೇವುಣಿಸಿ ಸಾಕಲಿಕ್ಕೂ ನಿಯೋಜಿಸಿದನು.

"ಒಮ್ಮೆ ಮೀರ್‌ಖಾನ್ ಜೈಲಿಗೆ ಭೇಟಿಯಿತ್ತಾಗ ಕಂಡ ದೃಶ್ಯ ಸೋಜಿಗ ಪಡಿಸುವಂಥದ್ದಾಗಿತ್ತು. ಗುರುನಾನಕ್ ಹೊರಬೇಕಾಗಿದ್ದದ್ದು ಬೃಹತ್ ಗಾತ್ರದ ಒಂದು ಕಲ್ಲು. ಕಲ್ಲಿನ ಭಾರ ಗುರುದೇವನಿಗೆ ಗೊತ್ತಾಗಲೇ ಇಲ್ಲ. ಕಲ್ಲಿದ್ದದ್ದು ಗುರುವಿನ ತಲೆಯ ಮೇಲ್ಗಡೆ ಗಾಳಿಯಲ್ಲಿ! ಮರ್ದಾನನು ಮೇವುಣಿಸಿ ಸಾಕಬೇಕಾಗಿದ್ದ ಕುದುರೆಗಳು ಹೊಟ್ಟೆ ತುಂಬ ಹುಲ್ಲು ತಿಂದು ವಿಶ್ರಾಂತಿ ಪಡೆಯುತ್ತಿದ್ದವು. ನಾನಕ್‌ರು ಕಣ್ಣುಗಳನ್ನು ಅರೆಮುಚ್ಚಿ ಭಕ್ತಿಯಲ್ಲಿ ಮೈಮರೆತು ಹಾಡುತ್ತಿದ್ದರು."

"ಮೀರ್‌ಖಾನ್, ಗುರುನಾನಕ್‌ರ ಅದ್ಭುತಕಾರ್ಯಗಳನ್ನು ಬಾಬರ್‌ಗೆ ತಿಳಿಸಿದ. ಗುರುನಾನಕ್‌ರನ್ನು ಹೊರೆ ಹೊರುವುದಕ್ಕೆ ಬದಲಾಗಿ, ಮೀರ್‌ಖಾನ್ ಸೆರೆಯಲ್ಲಿರಿಸಿದ್ದ. ಅಮಿತ ಸಂಖ್ಯೆಯ ಹಿಂದೂ ಹೆಂಗಸರ ಜತೆ ಭೀಮಗಾತ್ರದ ಬೀಸುಗಲ್ಲಿನಲ್ಲಿ ಗೋಧಿ ಬೀಸಲು ಹೇಳಲಾಯಿತು. ನಾನಕ್‌ರ ಚಮತ್ಕಾರಗಳನ್ನು ಬಾಬರ್ ಸ್ವತಃ ಪರೀಕ್ಷಿಸಲು ಪರಿವಾರ ಸಮೇತನಾಗಿ ಜೈಲಿಗೆ ಭೇಟಿ ಇತ್ತ. ಪಠಾನ್ ಹೆಂಗಸರೂ ಹಿಂದೂ ಹೆಂಗಸರೂ, ಏದುಸಿರು ಬಿಡುತ್ತಾ ಬೀಸುಗಲ್ಲಿನಲ್ಲಿ ಗೋಧಿ ಬೀಸುತ್ತಿದ್ದಾರೆ. ನಾನಕ್‌ರ ಮುಂದೆಯೂ ಒಂದು ಬೀಸುವ ಕಲ್ಲು ಇದೆ. ನಾನಕ್‌ರ ಕೈಗಳು ನಿಶ್ಚಲವಾಗಿದ್ದೂ ಆ ಬೀಸುಕಲ್ಲು ತನ್ನಷ್ಟಕ್ಕೆ ತಿರುಗುತ್ತಲೇ ಇದೆ! ಯೋಗ ಭಂಗಿಯಲ್ಲಿ ಕುಳಿತಿರುವ ಗುರುನಾನಕ್‌ರ ಕಾಲಿಗೆರಗಿದನು ಬಾಬರ್...."

ಗುರುವಿನ ಇಂಗಿತಕ್ಕೆ ಅನುಗುಣವಾಗಿ ಸೆರೆಯಾಳುಗಳನ್ನೆಲ್ಲ ಬಿಡುಗಡೆ ಮಾಡಲಾಯಿತು. ಗುರು ಮತ್ತು ಮರ್ದಾನ, ಮರಳಿ ಸಯೀದ್‌ಪುರಿಗೆ ತಲುಪಿದರು. ನಗರದ ಗಡಿಯಲ್ಲೆ ಅಸಹನೀಯವಾದ ದುರ್ನಾತ ಗುರುದೇವನನ್ನು ಎದುರ್ಗೊಂಡಿತು. ಬಾಬರ್‌ನ ಸೇನೆ ನಗರದ ಗಂಡಸರನ್ನು ಸಂಪೂರ್ಣ ಮುಗಿಸಿಬಿಟ್ಟಿತ್ತು ಆಗಲೇ. ಎಲ್ಲೆಲ್ಲೂ ಹೆಣದ ರಾಶಿಗಳೇ ತುಂಬಿದ್ದವು.

"ಸ್ತ್ರೀಯರು ಎದೆ, ಎದೆ ಬಡಿಯುತ್ತಾ ಬೊಬ್ಬಿಟ್ಟರು. ಎಲ್ಲವನ್ನೂ ಕಂಡು ಸಂಕಟಕ್ಕೊಳಗಾದ ಮರ್ದಾನ ಗುರುನಾನಕ್‌ರೊಡನೆ ಪ್ರಶ್ನಿಸಿದ:"

"ಇಷ್ಟು ದೊಡ್ಡ ಶಿಕ್ಷೆಗೆ ಸಯೀದ್‌ಪುರಿಯ ಜನರು ಏನು ಅಪರಾಧ ಮಾಡಿದ್ದಾರೆ? ಬೆರಳೆಣಿಕೆಯ ಮಂದಿ ಅಪರಾಧ ಮಾಡಿರಬಹುದು. ಅದರ ನೆಪದಲ್ಲಿ, ಇಷ್ಟು ವಿಪುಲವಾದ ಜೀವಹಾನಿ ಮತ್ತು ನಾಶ–ನಷ್ಟಗಳನ್ನು ಹೇಗೆ ಸಮರ್ಥಿಸುವುದು? ಮೇಲೆ ಕುಳಿತು ಎಲ್ಲವನ್ನೂ ನೋಡುತ್ತಿರುವುದಾಗಿ ಹೇಳುತ್ತಿರುವ ದೇವರು ಇದಕ್ಕೆ



ಆಸ್ಪದವಿತ್ತದ್ದಾದರೂ ಹೇಗೆ? ಗುರುನಾನಕ್, ಮರ್ದಾನನ ಪ್ರಶ್ನೆ ಕೇಳಿ ಒಂದು ನಿಮಿಷ ಧ್ಯಾನಮಗ್ನರಾದರು. ಬಳಿಕ ಮರ್ದಾನನೊಡನೆ ದೂರದಲ್ಲಿ ಕಾಣಿಸುತ್ತಿರುವ ಮರದ ಬುಡದಲ್ಲಿ ಹೋಗಿ ಕುಳಿತಿರಲು ಹೇಳಿದರು. ಗುರುವಿನ ಆಜ್ಞೆಯಂತೆ ಮರ್ದಾನ್ ಹೋಗಿ ಮರದ ಬುಡದಲ್ಲಿ ಕುಳಿತುಕೊಂಡನು. ಕಡು ಬೇಸಗೆ ಕಾಲವಾಗಿತ್ತು ಅದು. ಮಧ್ಯಾಹ್ನದ ಧಗೆಗೆ ಬಳಲಿದ್ದ ಮರ್ದಾನ್ ಮರದ ಬುಡದಲ್ಲಿ ನಿದ್ರೆ ಹೋಗಿಬಿಟ್ಟ.

ಆ ಕಾಡುಮರದ ಮೇಲೆ ಹಬ್ಬಿಕೊಂಡಿದ್ದ ಬಳ್ಳಿಯಲ್ಲಿ ಹೇರಳವಾಗಿ ಬಣ್ಣ ಬಣ್ಣದ ಹೂವುಗಳಿದ್ದವು. ಹೂವಿನಿಂದ ಒಂದು ಹನಿಜೇನು, ನಿದ್ರಿಸುತ್ತಿರುವ ಮರ್ದಾನನ ಮೈಮೇಲೆ ಬಿದ್ದಿತ್ತು. ಜೇನು ಹೀರಲು ಇರುವೆಗಳು ಹರಿದು ಬಂದು ಅವನ ಮೈಮೇಲೆ ಹತ್ತಿದವು. ಒಂದಲ್ಲ ಎರಡಲ್ಲ, ಬಹಳಷ್ಟು ಇರುವೆಗಳು. ಅವುಗಳಲ್ಲೊಂದು ಆತನನ್ನು ಕಚ್ಚಿತ್ತು. ನಿದ್ರೆಯಲ್ಲಿ ಆತ ಇರುವೆಗಳನ್ನು ಹಿಸುಕಿ ಕೊಂದ. ಬಹಳಷ್ಟು ಇರುವೆಗಳು ಸತ್ತು ಹೋದವು.

"ನಿದ್ರೆ ಮುಗಿಸಿ ಎದ್ದ ಮರ್ದಾನನಿಗೆ ಗುರು, ಸತ್ತು ಬಿದ್ದಿರುವ ಬಹಳಷ್ಟು ಇರುವೆಗಳನ್ನು ತೋರಿಸಿ ಕೊಟ್ಟರು. ಇವುಗಳಲ್ಲಿ ನಿನ್ನನ್ನು ಕಚ್ಚಿದ್ದು ಒಂದೇ ಇರುವೆ. ಆದರೆ, ಅದರಿಂದಾಗಿ ಎಷ್ಟೋ ಇರುವೆಗಳು, ನಿರಪರಾಧಿಗಳು ಶಿಕ್ಷೆ ಅನುಭವಿಸಿದವು. ಇದು ಪ್ರಕೃತಿ ನಿಯಮ. ಇದರಲ್ಲಿ ಅಸಾಮಾನ್ಯವಾದುದೇನೂ ಇಲ್ಲ."

ಹರ್‌ಭಜನ್ ಕತೆ ಮುಗಿಸಿದ.

ಬಳಿಕ ಮನೀಂದರ್‌ನ ಹೆಗಲು ತಟ್ಟಿ ಹೇಳಿದ: ಮಗನೇ ನಿನ್ನ ಪ್ರಶ್ನೆಗಿರುವ ಉತ್ತರವೂ ಅದೇನೇ. ಸಯೀದ್‌ಪುರಿಯ ಚರಿತ್ರೆ ಅನೇಕ ಕಡೆಗಳಲ್ಲಿ ಪುನರಾವರ್ತನೆಗೊಂಡಿದೆ–ಕಾಶ್ಮೀರದಲ್ಲಿ, ಅಮೃತಸರದಲ್ಲಿ, ಕೊರಿಯಾದಲ್ಲಿ, ವಿಯೆಟ್ನಾಮಿನಲ್ಲಿ, ಇರಾನ್‌ನಲ್ಲಿ...

"ದೆಹಲಿಯಲ್ಲಿ ಇದು ಬಹಳಷ್ಟು ಬಾರಿ ಆವರ್ತಿಸಲ್ಪಟ್ಟಿದೆ. ಇವತ್ತು ಮೆಡಿಕಲ್ ಇನ್‌ಸ್ಟಿಟ್ಯೂಟ್‌ನೆದುರು ಸಂಭವಿಸಿದ್ದೂ ನಿನ್ನ ಅಪ್ಪ ಅನುಭವಿಸಿದ್ದೂ ಮತ್ತೊಂದಲ್ಲ."

ಆತ ಮಾತು ನಿಲ್ಲಿಸಿದ. ಬಳಿಕ ಒಂದು ಮರು ಚಿಂತನೆಗೆ ಗುರಿಯಾದವನ ಹಾಗೆ ಪುನಃ ಹೇಳಿದ: ಮಕ್ಕಳೇ ಬೆಂಕಿಯಲ್ಲಿ ಮೊಳೆತವರು ನಾವು ಎಳೆಬಿಸಿಲು ತಾಗಿದೊಡನೆ ನಾವು ಬಾಡಿ ಬೆಂಡಾಗಕೂಡದು...

ಅನಂತರ ಆತ ಹೆಂಡತಿಯನ್ನು ಕರೆದು: ಓ ಪ್ರೀತಮ್ ತೇರಿ ಡಿಬ್ಬಾ ಕಿಥೇ.... ಮೇರೆ ಕೊ ಭೂಖ್ ಲಗ್ ರಹೀ ಹೈ...

ಪ್ರೀತಮ್‌ಕೌರ್ ಚೀಲದಿಂದ ಡಬ್ಬ ಹೊರತೆಗೆದಳು. ತುಪ್ಪದಲ್ಲಿ ಕಾಯಿಸಲಾದ ಮೆತ್ತಗಿನ ಪರೋಟಾಗಳು. ಬೇಂಗನ್ ಕಾ ಬುರ್ತ ಆಮ್‌ಕಿ ಅಚ್ಚಾರ್.

ಹರ್‌ಭಜನ್ ಆಸೆಯಿಂದ ದಿಟ್ಟಿಸಿದಾಗ ಪ್ರೀತಮ್‌ಳ ತುಟಿಗಳಲ್ಲಿ ನಗೆ ಅರಳಿತು.

## ಅಧ್ಯಾಯ ೫

# ಮುಂದಿನ ಪ್ರಧಾನಿ ಯಾರು?

ಹರ್‌ಭಜನ್‌ನ ಮನೆಯವರನ್ನು ಆಸ್ಪತ್ರೆ ತಲಪಿಸಿದ ಬಳಿಕ ರವಿಕುಮಾರ್ ಪುನಃ ಆಫೀಸಿಗೆ ಬಂದ. ಕ್ಯಾಬಿನೆಟ್ ಸೆಕ್ರೆಟರಿಯೆಟ್‌ನಿಂದ ಮುಂದಿನ ರಾಜಕೀಯ ಬೆಳವಣಿಗೆಗಳಿಗೆ ಸಂಬಂಧಿಸಿದ ಸೂಚನೆಗಳು ಲಭಿಸಿದ್ದರಿಂದ ಶ್ರೀವಾಸ್ತವ ಆಫೀಸ್‌ನಿಂದ ಅಷ್ಟರಲ್ಲೇ ಹೊರ ಬಿದ್ದಿದ್ದರು. ಅವರನ್ನು ಫೈನಾನ್ಸ್ ಮಿನಿಸ್ಟರ್‌ರ ಆಫೀಸ್‌ನಲ್ಲಾಗಲಿ, ಕ್ಯಾಬಿನೆಟ್ ಸೆಕ್ರೆಟರಿಯೆಟ್‌ನಲ್ಲಾಗಲಿ ಸಂಪರ್ಕಿಸಲು ರವಿಗೆ ನಿರ್ದೇಶನ ಲಭಿಸಿತು. ಎರಡು ಸ್ಥಳಕ್ಕೂ ಫೋನ್ ಮಾಡಲು ಪ್ರಯತ್ನಿಸಿದರೂ ಸಂಪರ್ಕ ಸಿಕ್ಕಲಿಲ್ಲ. ದೆಹಲಿಯಲ್ಲಿ ಎಲ್ಲಾ ಫೋನ್‌ಗಳೂ ಇವತ್ತು ಎಂಗೇಜೇ.

ಮುಂದೆ ಏನು ಮಾಡುವುದೆಂದು ತೋಚದೆ ರವಿ ಕ್ಷಣ ಹೊತ್ತು ಅನುಮಾನಿಸುತ್ತ ಕುಳಿತುಕೊಂಡ–ಅಷ್ಟರಲ್ಲಿ ಫೋನ್ ರಿಂಗ್ ಆಯಿತು. ಕರೆದದ್ದು ವಾಶಿಂಗ್‌ಟನ್‌ನಲ್ಲಿ ಇಕನಾಮಿಕ್ ಕೌನ್ಸಿಲರ್ ಆಫೀಸಿನಲ್ಲಿ ಅಧಿಕಾರಿಯಾಗಿರುವ ಸೈಗಲ್.

ವಾಟೀಸ್ ಹ್ಯಾಪನಿಂಗ್?

ಆತನ ಪ್ರಶ್ನೆಯಲ್ಲಿ ಉದ್ವಿಗ್ನತೆಯಿದ್ದಿತ್ತು: "ಇಲ್ಲಿ ನಾಲ್ಕೈದು ತಾಸುಗಳ ಮುನ್ನವೇ ಸುದ್ದಿ ಸಿಕ್ಕಿದೆ ಬಿ.ಬಿ.ಸಿ.ಯಿಂದ. ಎಂಬೆಸಿಯ ಧ್ವಜಗಳು ಹಾಫ್ ಮಾಸ್ಟಿನಲ್ಲಿವೆ. ಕಂ ಆನ್ ಫಿಲ್ ಮಿ ವಿತ್ ಡೀಟೈಲ್ಸ್."

ರವಿ ತನಗೆ ದೊರೆತಷ್ಟು ವಿವರಗಳನ್ನು ಹೇಳಿದ. ಅಧಿಕೃತ ಹೇಳಿಕೆಗಳಾವುದೂ ಹೊರಬಿದ್ದಿಲ್ಲವೆಂದೂ ತಿಳಿಸಿದ. ಅಷ್ಟೇ ಅಲ್ಲ, ದೂರದಲ್ಲಿರುವ ಸೆಕ್ರೆಟರಿಯೆಟ್ ಕಟ್ಟಡಗಳ ಮಿನಾರ್‌ಗಳಲ್ಲಿನ ಧ್ವಜಗಳನ್ನು ಇನ್ನೂ ಇಳಿಸಿಲ್ಲ ಎಂದೂ ತಿಳಿಸಿದ.

ಸೈಗಲ್‌ಗೆ ರೇಗಿತು: "ಪ್ರೆಸಿಡೆಂಟ್ ರೇಗನ್ ಕಳಿಸಿದ್ದ ಶೋಕ ಸಂದೇಶದ ಪ್ರತಿಯನ್ನು ಕೂಡ ಇಲ್ಲಿನ ಮೀಡಿಯಾಗಳು ಫ್ಲಾಶ್ ಮಾಡಿವೆ."

"ಇಲ್ಲ, ಮಿತ್ರ, ಆಕಾಶವಾಣಿಯಲ್ಲಿ ಈಗಲೂ ತಲತ್ ಮಹಮ್ಮದ್, ಉಷಾ ಖನ್ನಾ ಮತ್ತು ಕಿಶೋರ್ ಕುಮಾರ್ ಪಟ್ಟು ಹಿಡಿದು ಹಾಡುತ್ತ ಸಂಭ್ರಮಿಸುತ್ತಿದ್ದಾರೆ. ಭಾರತ ಸರಕಾರ ಪಿ.ಎಂ.ನ ನಿಧನವನ್ನು ಇನ್ನೂ ಅಂಗೀಕರಿಸಿಲ್ಲ."



"ಯಾರು ಆದಾರು ಹಂಗಾಮಿ ಪಿ.ಎಂ.?" ರವಿಗೆ ಗೊತ್ತಿಲ್ಲ. ಊಹಾಪೋಹಗಳಲ್ಲದೆ ಯಾವುದೂ ಸ್ಪಷ್ಟವಾಗಿಲ್ಲ.

ಪ್ರಣವ್ ಮುಖರ್ಜಿ ರಾಜೀವ್ ಜತೆ ಬಂಗಾಳದ ಮಿಡ್ನಾಪುರ್ ಜಿಲ್ಲೆಯಲ್ಲಿ ಪ್ರವಾಸ ಮಾಡುತ್ತಾ ಇದ್ದರು. ಅವರನ್ನು ಒಳಗೊಂಡ ವಿಮಾನ ಸುಮಾರು ಒಂದು ಗಂಟೆಮುನ್ನ ಪಾಲಂನಲ್ಲಿ ಇಳಿಯುತ್ತಲೇ ಅವರು ನೇರವಾಗಿ ಎ.ಐ.ಐ.ಎಂ.ಎಸ್.ಗೆ ತೆರಳಿದರು ಎಂಬುದೇ ಲೇಟೆಸ್ಟ್."

"ಆದರೆ, ಕೇವಲ ರಾಜ್ಯ ಸಭಾಸದಸ್ಯ ಆಗಿರುವ ಬಂಗಾಳಿ ಬಾಬುಗೆ ಪ್ರಧಾನಮಂತ್ರಿ ಹುದ್ದೆ ನೀಡಲು ಪಾರ್ಲಿಮೆಂಟರಿ ಕಮಿಟಿ ಒಪ್ಪಬಹುದೆ?" ಸೈಗಲ್‌ಗೆ ಅನುಮಾನ.

ಇಂದಿರಾಜಿ ಪಿ.ಎಂ. ಆದಾಗಲೂ ರಾಜ್ಯಸಭಾ ಸದಸ್ಯೆಯಷ್ಟೇ ಆಗಿದ್ದರಲ್ಲ.... ರವಿ ನೆನಪಿಸಿದ.

"ಹಿಂದಿನ ಎರಡು ಬಾರಿಯೂ–ನೆಹರು ನಿಧನರಾದಾಗಲೂ ಶಾಸ್ತ್ರಿ ನಿಧನರಾದಾಗಲೂ–ಗೃಹ ಮಂತ್ರಿಯೆ ತಾನೆ ಪ್ರಧಾನ ಮಂತ್ರಿಯಾದದ್ದು?"

"ರೂಢಿ ನೋಡಿದಾಗ ನರಸಿಂಹರಾಯರ ಸರದಿಯೇ. ಆದರೆ, ಮಿಸ್ಟರ್ ಸೈಗಲ್, ಪ್ರಧಾನಮಂತ್ರಿಗೆ ಸೂಕ್ತ ರಕ್ಷಣೆ ಒದಗಿಸಲಾರದೆ ಹೋದ ಗೃಹಮಂತ್ರಿ ರಾಜೀನಾಮೆ ಕೊಡಬೇಕೆಂದೇ ಅನೇಕ ಮಂದಿ ಅಭಿಪ್ರಾಯ ಪಡುತ್ತಿದ್ದಾರೆ."

ಆದರೆ ಪ್ರಧಾನಿಯ ಭದ್ರತೆಯ ಹೊಣೆ ಕ್ಯಾಬಿನೆಟ್ ಸೆಕ್ರೆಟರಿಯೆಟ್‌ನದ್ದಲ್ಲವೆ? ಪಾಪ ಹೋಮ್ ಮಿನಿಸ್ಟರ್ ಏನು ತಪ್ಪು ಮಾಡಿದ್ದಾರೆ?

"ನರಸಿಂಹರಾಯರಿಗೆ ರಾಜೀನಾಮೆಯಿಂದ ಪಾರಾಗಲಿಕ್ಕಿರುವ ಹುಲ್ಲುಕಡ್ಡಿ ಅದೇನೇ. ಅಂತೂ ಅವರು ಕೂಡ ದೂರದ ಆಂಧ್ರಪ್ರದೇಶದ ಪ್ರವಾಸದಲ್ಲಿದ್ದಾರೆ."

"ನಮ್ಮ ವರಿಷ್ಠರಿಗೆ ಆದದ್ದಾದರೂ ಏನು? ರಾಷ್ಟ್ರಪತಿ ಮಿಡ್ಲ್ ಈಸ್ಟ್‌ನಿಂದ ಮರಳಿ ಬಂದರೆ?"

ಹೌದು. ಕೆಲವೇ ನಿಮಿಷಗಳ ಮುನ್ನ ಯೆಮನ್‌ನಿಂದ ಬಂದ ರಾಷ್ಟ್ರಪತಿ ನೇರವಾಗಿ ಆಸ್ಪತ್ರೆಗೇ ಹೋಗಿದ್ದಾರೆ. ಆಸ್ಪತ್ರೆಯತ್ತ ತಿರುಗುವುದಕ್ಕೆ ಮುನ್ನ ಅವರ ಕಾರಿಗೆ ಕಲ್ಲೆಸೆಯಲೂ ಜನರ ಗುಂಪು ಮರೆಯಲಿಲ್ಲ.

"ಹಾಗಾದರೆ, ಅವರನ್ನು ಸಿಕ್ಖ್ ಮತದಿಂದ ಉಚ್ಚಾಟಿಸಿದ ಸಂಗತಿ, ಸ್ವರ್ಣ ಮಂದಿರದ ಮತ ಪಂಡಿತರು ಅವರನ್ನು ಭ್ರಷ್ಟನನ್ನಾಗಿ ಮಾಡಿದ್ದ ಸಂಗತಿ–ಯಾರ ನೆನಪಿಗೂ ಬರಲಿಲ್ಲವೆ?"

ಯೂ ನೋ ಮಿಸ್ಟರ್ ಸೈಗಲ್, ಇನ್ ಎ ವರ್ಕಿಂಗ್ ಡೆಮಾಕ್ರಸಿ ಮೆಮೊರಿ ಈಸ್ ವೆರಿ ಶಾರ್ಟ್. ಪಾಪ! ರಾಷ್ಟ್ರಪತಿ! ತಾನೋರ್ವ ಮತಾತೀತ ರಾಷ್ಟ್ರಪತಿ ಎಂದೂ ನಿಷ್ಠಾವಂತ ಸಿಕ್ಖ್‌ನೆಂದೂ ರುಜುವಾತು ಪಡಿಸಲು ಅವರು ಎರಡು

ಬಾರಿ ಹಿಂದಕ್ಕೆ ಬಾಗಬೇಕಾಯಿತು.

"ಫಲಿತಾಂಶವೇನಾಯ್ತು? ಜನತೆ ಅವರನ್ನು ಶಂಕಿಸುತ್ತಾರೆ: ಸಿಕ್ಖರು ಕೂಡ. ಓ.ಕೆ.ಬಾಯ್, ನಾನು ಆಮೇಲೆ ಕರೆಯುವೆ."

"ಪ್ಲೀಸ್ ಡು. ಘಟನೆಗಳ ಮಧ್ಯದಲ್ಲೆ ನಾನಿರುವೆನಾದರೂ ಅವುಗಳ ಬಗೆಗಿನ ಹೊಚ್ಚ ಹೊಸ ಸುದ್ದಿಗಳಿಗಾಗಿ ನಾವು ವಾಷಿಂಗ್‌ಟನ್ನನ್ನೊ ಲಂಡನ್ನನ್ನೊ ಅವಲಂಬಿಸಬೇಕಾಗಿದೆ!"

ಸೈಗಲ್ ಫೋನ್ ಡಿಸ್‌ಕನೆಕ್ಟ್ ಮಾಡಿದರು.

ರವಿ ಮತ್ತೊಮ್ಮೆ ಕ್ಯಾಬಿನೆಟ್ ಕಾರ್ಯಾಲಯ ಹಾಗೂ ವಿತ್ತಮಂತ್ರಿಯ ಆಫೀಸ್‌ಗೆ ಟ್ರೈ ಮಾಡಿದ. ಆದರೂ ಸಂಪರ್ಕ ಸಿಕ್ಕಲಿಲ್ಲ.

ಮಹಡಿಯಿಂದಿಳಿದಾಗ, ಸ್ವಂತ ಕಾರ್ ತೆಗೆಯಬೇಕೆ, ಸ್ಟಾಫ್ ಕಾರ್ ಬಳಸಬೇಕೆ ಎಂದು ಅನುಮಾನಿಸಿದ. ಸರಕಾರಿ ವಾಹನವೇ ಸೂಕ್ತವೆನಿಸಿತು. ದೆಹಲಿಯ ಮಾರ್ಗಗಳಲ್ಲಿ ಈಗ ಶಸ್ತ್ರ ಸಜ್ಜಿತ ಪೊಲೀಸರ ಹಾಗೂ ಪಾರಾಮಿಲಿಟರಿಯ ವಿಪರೀತ ಒತ್ತಡವಿರಬಹುದು. ಆತ ಗ್ಯಾರೇಜ್ ಕಡೆ ನೋಡಿದ. ಡ್ರೈವರ್ ಲಕ್ಷ್ಮಣ್‌ದಾಸ್ ಕಾರಿನ ಮುಂದಿನ ಸೀಟಿನಲ್ಲಿ ಕುಳಿತು ನಿದ್ರಿಸುತ್ತಿರುವನು. ರವಿ ಆತನನ್ನು ತಟ್ಟಿ ಎಬ್ಬಿಸಿದ. ಮೊದಲು ನಾರ್ತ್ ಬ್ಲಾಕ್‌ಗೆ ಹೋಗಿ ವಿತ್ತಸಚಿವರ ಆಫೀಸ್‌ನಲ್ಲಿ ವಿಚಾರಿಸುವುದು. ಗಂಟೆ ಐದೂವರೆ ಆದದ್ದಷ್ಟೇ ಆದರೂ ಮಾರ್ಗಗಳೆಲ್ಲ ಬಹುಮಟ್ಟಿಗೆ ನಿರ್ಜನವಾಗಿವೆ. ದೆಹಲಿ ಒಂದು ಪ್ರೇತ ನಗರಿಯಂತೆ ಭಾಸವಾಗುತ್ತಿದೆ. ಈ ಹೊತ್ತಿನಲ್ಲಿ ಮಾರ್ಗಗಳು ಆಫೀಸ್ ಬಿಟ್ಟು ಬರುವವರಿಂದ ತುಂಬಿರಬೇಕಾಗಿತ್ತು. ಮಾರ್ಗಗಳಲ್ಲಿ ವಾಹನಗಳೂ ಕಡಿಮೆ. ಟಿ.ಡಿ.ಪಿ. ಬಸ್‌ಗಳ ಸಂಖ್ಯೆಯೂ ಕಡಿಮೆಯೇ. ಸೈಕಲ್‌ಗಳು ಇಲ್ಲವೆಂದೇ ಹೇಳಬಹುದು. ಟಿ.ವಿ.ಯಲ್ಲಿ ಬಾಬಿಯಂತಹ ಸಿನಿಮಾಗಳು ಪ್ರದರ್ಶಿಸಲ್ಪಡುವಾಗಲಷ್ಟೇ ದೆಹಲಿಯ ಬೀದಿಗಳು ಹೀಗೆ ಬರಿದಾಗುತ್ತಿದ್ದದ್ದು ಎಂಬುದನ್ನು ಆತ ಜ್ಞಾಪಿಸಿಕೊಂಡ.

ತುಘಲಕ್ ಕ್ರೆಸೆಂಟ್‌ನಲ್ಲೂ ಸಫ್ದರ್‌ಜಂಗ್ ರೋಡ್‌ನಲ್ಲೂ ದೊಡ್ಡ ಹಗ್ಗಗಳಿಂದಲೂ ಕಲ್ಲೆಸೆತವನ್ನೆದುರಿಸುವಾಗ ಮರೆಯಾಗಿ ಬಳಸಲ್ಪಡುವ ಬಿದಿರಿನಿಂದ ಹೆಣೆಯಲಾದ ಶೀಲ್ಡ್‌ಗಳಿಂದಲೂ ಸಜ್ಜಾಗಿ ಸಶಸ್ತ್ರ ಪೊಲೀಸರು ಅಲ್ಲಲ್ಲೇ ಗುಂಪುಗೂಡಿ ನಿಂತಿರುವರು. ವಿಜಯ್ ಚೌಕ್ ಮತ್ತು ರಾಜಪಥ ಬಹುಮಟ್ಟಿಗೆ ನಿರ್ಜನವೇ. ಸಿ.ಡಿ.ನಂಬರ್ ಪ್ಲೇಟ್ ಹೊಂದಿರುವ ಡಿಪ್ಲೊಮಾಟ್‌ಗಳ ವಿದೇಶೀ ಕಾರುಗಳು ಮಾತ್ರ ಹೆಚ್ಚಿನ ಸಂಖ್ಯೆಯಲ್ಲಿ ಕಂಡು ಬರುತ್ತಿವೆ.

ಈ ದಿನ ನಾರ್ತ್ ಬ್ಲಾಕ್‌ನ ಎರಡನೆಯ ನಂಬರ್ ಗೇಟಿನಲ್ಲಿ ಎಂದಿನ ಸೆಕ್ಯೂರಿಟಿ ಕೂಡ ಇಲ್ಲವೆಂಬುದನ್ನು ಆತ ಗಮನಿಸಿದ. ಈ ಗೇಟ್‌ಗಳು ಸೆಂಟ್ರಲ್ ಸೆಕ್ರೆಟರಿಯೆಟ್ ಸೆಕ್ಯೂರಿಟಿ ಗಾರ್ಡ್‌ಗಳ ನಾಮ ಮಾತ್ರ ಜವಾಬ್ದಾರಿಕೆಗೆ



ಒಳಪಟ್ಟವುಗಳು. ಆದರೆ ಇವತ್ತು ಸೆಕ್ಯೂರಿಟಿಯಲ್ಲಿ ಭಾರೀ ದೊಡ್ಡ ವೈಫಲ್ಯವೊಂದು ಸಂಭವಿಸಿದ ಬಳಿಕವೂ ವಿಶೇಷ ಬದಲಾವಣೆಯೇನೂ ಆಗಲಿಲ್ಲ.

ಕೆಂಪು ಕಲ್ಲು ಹಾಸಲಾದ ಮೆಟ್ಟಿಲುಗಳನ್ನು ಹತ್ತಿ ಹುರಿ ಹಗ್ಗದ ಕಾರ್ಪೆಟ್ ಹಾಸಲಾದ ಕಾರಿಡಾರ್ ಗುಂಟ ಆತ ನಡೆದ. ಅಧಿಕಾರದ ಕಾರಿಡಾರ್ ನಿರ್ಜನವಾಗಿ ಬಿಟ್ಟಿದೆ ಈ ದಿನ. ಅಲ್ಲಲ್ಲೇ ಸುತ್ತಿ, ಸುಳಿಯುತ್ತಾ ಇರುತ್ತಿದ್ದ ನಾಲ್ಕನೆಯ ದರ್ಜೆಯ ನೌಕರರೂ ಆಗಲೇ ಸ್ಥಳ ಖಾಲಿ ಮಾಡಿರುವರು.

ವಿತ್ತ ಸಚಿವರ ಆಫೀಸ್‌ನಲ್ಲಿ ಓರ್ವ ಜ್ಯೂನಿಯರ್ ಪಿ.ಎ.ಯಷ್ಟೇ ಇದ್ದಾನೆ. ಶ್ರೀವಾಸ್ತವ ಬಂದಿದ್ದರೆಂದೂ, ಫೈನಾನ್ಸ್ ಸೆಕ್ರೆಟರಿ ಹಾಗೂ ಇಕನಾಮಿಕ್ ಸೆಕ್ರೆಟರಿಗಳ ಜತೆಗೂಡಿ ಸೆಕ್ರೆಟರಿಯೆಟ್‌ಗೆ ಹೋದರೆಂದೂ ಆತ ಹೇಳಿದ.

ವಿತ್ತ ಸಚಿವರು ರಾಜೀವರ ಜತೆ ಆಸ್ಪತ್ರೆ ತಲಪಿರುವರು. ಅಲೆಕ್ಸಾಂಡರ್ ಮತ್ತು ಕೃಷ್ಣ ಸ್ವಾಮಿರಾವ್ ಸಾಹೇಬ್ ಮುಂಬಯಿಯಿಂದ ಮರಳಿ ತಲಪಿರುವರು.

ಕಾಂಗ್ರೆಸ್ ಸಂಸತ್ ಸಮಿತಿ ಸದಸ್ಯರಲ್ಲಿ ಅನೇಕ ಮಂದಿ ಸ್ಥಳದಲ್ಲಿರಲಿಲ್ಲ. ನರಸಿಂಹರಾವ್ ಮತ್ತು ಪ್ರಣವ್ ಮುಖರ್ಜಿ ಸ್ಥಳಕ್ಕೆ ತಲಪಿರುವರು. ಪಕ್ಷಾಧ್ಯಕ್ಷೆ ಇಂದಿರಾಗಾಂಧಿ ಹೆಣವಾಗಿ ಬಿದ್ದಿರುವರು. ಯು.ಪಿ. ಪ್ರವಾಸದಲ್ಲಿದ್ದ ಕಾರ್ಯಾಧ್ಯಕ್ಷ ಕಮಲಾಪತಿ ತ್ರಿಪಾಠಿ ಇನ್ನೂ ಮರಳಿ ತಲಪಿಲ್ಲ. ಇನ್ನೋರ್ವ ಸದಸ್ಯೆ ಮರಕತಂ ಚಂದ್ರಶೇಖರ್ ಸಹ ಸ್ಥಳಕ್ಕೆ ತಲಪಿಲ್ಲ.

ಪಕ್ಷದಲ್ಲಾಗಲಿ ಸರಕಾರದಲ್ಲಾಗಲಿ, ಔನ್ನತ್ಯದಲ್ಲೂ ಜನಪ್ರಿಯತೆಯಲ್ಲೂ ಎತ್ತಿ ಹೇಳಬಹುದಾದ ದ್ವಿತೀಯ ಸಾಲಿನ ನಾಯಕರೇ ಇಲ್ಲವೆಂಬುದು ಒಂದು ಅದ್ಭುತ ಸಂಗತಿಯೇ ಆಗಿ ಉಳಿದುಕೊಂಡಿದೆ. ಜಗತ್ತಿನ ಅತಿದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರದ ರಾಜ್ಯಭಾರದ ಹಕ್ಕನ್ನು ಮುಂದಿಡಲಿಕ್ಕಾದರೂ ಅರುವತ್ತು ಕೋಟಿ ಜನರಲ್ಲಿ ಒಬ್ಬ ವ್ಯಕ್ತಿ ಕೂಡ ಇಲ್ಲವಾದದ್ದು ಶೋಚನೀಯವೇ. ನೆಹರು ಮಡಿದಾಗಲೂ, ಶಾಸ್ತ್ರಿ ಮಡಿದಾಗಲೂ ಪ್ರಚಂಡರಾದ ಮೊರಾರ್ಜಿ ಹಕ್ಕೊತ್ತಾಯವನ್ನು ಮುಂದಿಟ್ಟಿದ್ದರು. ಆ ಎರಡು ಸಂದರ್ಭಗಳಲ್ಲೂ ಅಧಿಕಾರ ಹಸ್ತಾಂತರದ ಪೌರೋಹಿತ್ಯವನ್ನು ನಿರ್ವಹಿಸಲು ಕಾಮರಾಜರಂಥ ಅಖಿಲ ಭಾರತ ಮಟ್ಟದ ಓರ್ವ ಜನ ನಾಯಕ ಇದ್ದರು.

ಇವತ್ತು? ಧವನ್ ಸೂಚಿಸಿದರಂತೆ, "ಪ್ರಧಾನಿಯ ಅನುಪಸ್ಥಿತಿಯ ವೇಳೆ ಸಂಪುಟ ಸಭೆಯ ಅಧ್ಯಕ್ಷತೆ ವಹಿಸುತ್ತಿದ್ದ ಪ್ರಣವರೇ ಆಗಬಹುದಲ್ಲ ಹಂಗಾಮಿ ಪ್ರಧಾನಮಂತ್ರಿ" ಎಂದು. ಆಗ ಯಾರೋ ನೆನಪಿಸಿದರು–ಹಿಂದಿನ ಎರಡು ಬಾರಿಯೂ ಗೃಹಮಂತ್ರಿಗಳೇ ಹಂಗಾಮಿ ಪ್ರಧಾನಿ ಆಗಿದ್ದರು. ಈ ಬಾರಿಯೂ ಹಾಗೆಯೇ ಆಗಲಿ ಎಂದು. ಪ್ರಣವ್ ಕೇವಲ ರಾಜ್ಯ ಸಭಾಸದಸ್ಯರಷ್ಟೇ ಎಂದು ನರಸಿಂಹರಾವ್ ಬೊಟ್ಟು ಮಾಡಿ ತೋರಿಸಿದ್ದರು. ಕೊನೆಗೆ ಬೆಳವಣಿಗೆಗಳೆಲ್ಲದರ ನಿಯಂತ್ರಣವನ್ನು

ಪೂರ್ಣಪ್ರಮಾಣದಲ್ಲಿ ಹಿಡಿತದಲ್ಲಿರಿಸಿಕೊಂಡದ್ದು ಓರ್ವ ಬ್ಯೂರೊಕ್ರಾಟ್ ಮಾತ್ರವಾಗಿರುವ ತ್ರಿಪಾಠಿ, ರಾಜೀವರ ಕಸಿನ್ ಅರುಣ್ ನೆಹರು ಹಾಗೂ ಸಹಪಾಠಿ ಅರುಣ್‌ಸಿಂಗ್. ಅರುವತ್ತು ಕೋಟಿ ಜನರ ಭವಿಷ್ಯವನ್ನು ನಿರ್ಧರಿಸಲು ಯಾವ ಅರ್ಹತೆ ಇದೆ ಇವರಿಗೆ? ಅನಂತರ ನಡೆಸಲಾದ ರಾಜಕೀಯ ಚದುರಂಗದಾಟದ ಸಂವಿಧಾನ ಬದ್ಧತೆಯಾದರೂ ಏನು? ಯಾರೂ ಅದಾವುದನ್ನೂ ಗಂಭೀರವಾಗಿ ಪರಿಗಣಿಸಲಿಲ್ಲ. ಉಪರಾಷ್ಟ್ರಪತಿ, ಪಾರ್ಲಿಮೆಂಟರಿ ವ್ಯವಹಾರಗಳನ್ನು ನೋಡಿಕೊಳ್ಳುತ್ತಿದ್ದ ಬೂಟಾಸಿಂಗ್ ಹಾಗೂ ಕಾಂಗ್ರೆಸ್ ಖಜಾಂಚಿ ಸೀತಾರಾಮ ಕೇಸರಿಯವರೂ ಆಗಾಗ ಚರ್ಚೆಗಳಲ್ಲಿ ಪಾಲ್ಗೊಳ್ಳುತ್ತಿದ್ದರು.

ಕಾಮರಾಜರ ವಿದೂರ ಸಾನ್ನಿಧ್ಯವೂ ಎ.ಐ.ಐ.ಎಂ.ಎಸ್.ನ ಎಂಟನೆಯ ಮಹಡಿಯಲ್ಲಿ ಇದ್ದಿತ್ತು–ಸಂಸತ್ ಸಮಿತಿಯ ಕಾರ್ಯದರ್ಶಿ ಮೂಪನಾರ್ ಕಾಮರಾಜರ ಶಿಷ್ಯನೂ ಅನುಯಾಯಿಯೂ ಆಗಿದ್ದು, ಹೊಸ ಪೀಠಾರೋಹಣದ ಪುರೋಹಿತನಾಗಿ ಸ್ಥಳದಲ್ಲಿದ್ದರು. ನೆಹರೂ ಅನಂತರ ಯಾರು–ಎಂಬ ಪ್ರಶ್ನೆಯನ್ನು ಬಹಳ ಕಾಲ ಪತ್ರಿಕೆಗಳೂ ಬುದ್ಧಿಜೀವಿಗಳೂ ನೆಹರು ಜೀವಿಸಿರುವಾಗಲೇ ಚರ್ಚಿಸಿದ್ದರು. ಇಂದಿರಾ ಅದಕ್ಕೆ ಆಸ್ಪದ ಕೊಡಲಿಲ್ಲ. ಮೊದಲು ಎರಡನೆಯ ಮಗನನ್ನು ಆತನ ಅಪಮೃತ್ಯುವಿನ ಬಳಿಕ ಹಿರಿಯ ಮಗನನ್ನು ಸಿದ್ಧಗೊಳಿಸುವ ಮಟ್ಟಿಗೆ ಆಕೆ ಹೆಚ್ಚು ಕಡಿಮೆ ನಿರ್ಲಜ್ಜವಾಗಿಯೇ ಮುಂದಾಳ್ತನ ವಹಿಸಿದ್ದರು. ಕಾಂಗ್ರೆಸ್ ಪಕ್ಷವೂ ಇಂದಿರಾರ ಆಸೆ ಈಡೇರಿಸುವುದಕ್ಕೆ ಹಿಂಜರಿಯಲಿಲ್ಲ. ೧೯೭೫ರಲ್ಲಿ ಸಂಜಯರನ್ನು ಪಕ್ಷದ ಎರಡನೆಯ ನಾಯಕನನ್ನಾಗಿ ಅಂಗೀಕರಿಸಿದ್ದ ಪಕ್ಷ ೧೯೮೧ರಲ್ಲಿ ರಾಜೀವರನ್ನೂ ವಾರಸುದಾರರನ್ನಾಗಿ ಒಪ್ಪಿಕೊಂಡಿತ್ತು.

ಎ.ಐ.ಐ.ಎಂ.ಎಸ್.ನ ಕಾನ್‌ಫರೆನ್ಸ್ ರೂಮ್‌ನಲ್ಲೇ ವಾರಸುದಾರ ಯಾರಾಗಬೇಕು ಎಂಬುದರ ಕುರಿತು ಗುಪ್ತ ಹಾಗೂ ಬಹಿರಂಗ ಚರ್ಚೆಗಳು ನಡೆದಿದ್ದುವು. ರಾಷ್ಟ್ರಪತಿ, ರಾಜೀವ್‌ಗಾಂಧಿ, ನರಸಿಂಹರಾವ್ ಮುಂತಾದವರು ಸ್ಥಳಕ್ಕೆ ತಲಪುವುದಕ್ಕೆ ಬಹಳಷ್ಟು ಮುಂಚಿತವಾಗಿಯೇ ಬೂಟಾಸಿಂಗ್ ಮತ್ತು ಸೀತಾರಾಮ ಕೇಸರಿ ರಾಜೀವರ ಪರವಾಗಿ ದೆಹಲಿಯಲ್ಲಿದ್ದ ಸಾಂಸದಿಕರ ಸಹಿಯನ್ನು ಸಂಗ್ರಹಿಸತೊಡಗಿದ್ದರು.

ಒಂದನೆಯ ನಂಬರ್ ಅಕ್ಬರ್ ರೋಡ್‌ನಲ್ಲಿ ರಾಜೀವರ ಉಪಸ್ಥಿತಿಯಲ್ಲಿ ಚರ್ಚೆಗಳು ಮುಂದುವರಿದವು. ಯಾರಾದರೂ ಸೀನಿಯರ್ ಸಚಿವರೊಬ್ಬರು ಹಂಗಾಮಿ ಪ್ರಧಾನಿಯಾಗಲಿ ಎಂಬ ರಾಜೀವರ ಸಲಹೆಗೆ ಬೆಂಬಲ ದೊರೆಯಲಿಲ್ಲ. ಕೊನೆಗೆ ಸುತ್ತು ಬಳಸದೆ ವಿಷಯವನ್ನು ಸ್ಪಷ್ಟವಾಗಿ ಹೇಳಿದ್ದು ವಸಂತ ಸಾಠೆ. "ಶ್ರೀಮತಿ ಗಾಂಧಿಯವರ ಇಚ್ಛೆ ರಾಜೀವ್‌ಗಾಂಧಿ ತನ್ನ ಬಳಿಕ ಪ್ರಧಾನಿಯಾಗಬೇಕು ಎಂಬುದಾಗಿತ್ತು. ಪಕ್ಷ ಈ ಕಾರ್ಯವನ್ನು ಪರೋಕ್ಷವಾಗಿ ಅಂಗೀಕರಿಸಿದೆ ಕೂಡ.



ಆದುದರಿಂದ ಓರ್ವ ಹಂಗಾಮಿ ಪ್ರಧಾನಿಯ ಅಗತ್ಯವಿಲ್ಲ. ರಾಜೀವರೇ ಪ್ರಧಾನಿಯಾಗಲಿ."

ಈ ಸೂಚನೆ ಎಲ್ಲರಿಗೂ ಒಪ್ಪಿಗೆಯಾಗಿತ್ತೊ, ಇಲ್ಲವೋ ಆದರೆ ಯಾರೂ ಅದನ್ನು ವಿರೋಧಿಸಲಿಲ್ಲ. ತ್ರಿಪಾಠಿ ಎಂಬ ಬ್ಯೂರೋಕ್ರಾಟ್ ಹೇಳುತ್ತ ಹೋದಂತೆ ಕಾಮರಾಜರ ನೆಚ್ಚಿನ ಶಿಷ್ಯ ಮೂಪನಾರ್ ಬಿಳಿ ಹಾಳೆಯಲ್ಲಿ ಸ್ವಹಸ್ತಾಕ್ಷರದಲ್ಲಿ ಭಾರತದ ರಾಷ್ಟ್ರಪತಿಗೆ ಬರೆದ ಈ ಚಿತ್ರ ಬರಲಿರುವ ಭವಿಷ್ಯದ ಪ್ರತೀಕವೆ?– ರಾಷ್ಟ್ರನಾಯಕತ್ವಕ್ಕೆ ಓರ್ವ ಜ್ಯೂನಿಯರ್ ಬ್ಯೂರೋಕ್ರಾಟ್ ಡಿಕ್ಟೇಟ್ ಮಾಡುವುದು? ರಾಜ್ಯಭಾರ ಈತನಕ ನಡೆಸಿದ್ದೂ ಬ್ಯೂರೋಕ್ರಾಟ್‌ಗಳೇ. ಆದರೂ ಪ್ರಶ್ನಾತೀತವಾದ ನಾಯಕರಿದ್ದರು–ನೆಹರು, ಪಟೇಲ್, ಆಜಾದ್, ಪಂತ್ ಮತ್ತು ಇಂದಿರಾ. ಇನ್ನು ಮುಂದೆ ತ್ರಿಪಾಠಿಗಳೂ, ಆರೋರಾಗಳೂ, ಧಾವನ್‌ಗಳೂ ಮುಕ್ತವಾಗಿ ರಾಜ್ಯಭಾರವನ್ನಾರಂಭಿಸುತ್ತಾರೆ. ಅಂತೂ ಈ ದಿನ ಕಾಂಗ್ರೆಸ್ ಪಾರ್ಲಿಮೆಂಟ್ ಬೋರ್ಡ್, ಇಂದಿರಾಗಾಂಧಿಯ ನಿಧನಾನಂತರ ಕಾಂಗ್ರೆಸ್(ಐ) ಪಾರ್ಲಿಮೆಂಟರಿ ಪಾರ್ಟಿಯ ನಾಯಕನಾಗಿ ರಾಜೀವ್ ಗಾಂಧಿಯನ್ನು ಆಯ್ಕೆ ಮಾಡಿತು.

ರವಿ ತನ್ನ ಪಿ.ಎ.ಯ ಮೇಜಿನ ಮೇಲಿರುವ ಟ್ರಾನ್ಸಿಸ್ಟರ್ ಆನ್ ಮಾಡಿದ. ಗೋಡೆ ಮೇಲಿರುವ ಗಡಿಯಾರದಲ್ಲಿ ಆರು ಗಂಟೆಯಾಗಲು ಕೆಲವು ಸೆಕೆಂಡುಗಳಿವೆ.

ತಡವಾಗಿಯಾದರೂ ಭಾರತ ಸರಕಾರ ಪ್ರಧಾನಮಂತ್ರಿಯ ನಿಧನವಾರ್ತೆಯನ್ನು ಜನತೆಗೆ ತಿಳಿಸಲು ನಿರ್ಧರಿಸಿದೆ. ಪ್ರಧಾನಿಯವರು ಅವರ ಅಂಗರಕ್ಷಕರಿಂದಲೆ ಕೊಲೆಯಾದ ಸುದ್ದಿಯನ್ನು ಆಕಾಶವಾಣಿ ಬಿತ್ತರಿಸಿತ್ತು.

ರವಿ ಏಣಿ ಮೆಟ್ಟಿಲುಗಳಿಳಿದ. ರಾಜಪಥದಿಂದ ರಾಷ್ಟ್ರಪತಿ ಭವನದ ಕಡೆಗಿರುವ ದೊಡ್ಡಗೇಟು ತೆರೆದುಕೊಂಡಿದೆ. ದೂರದ ವಿಜಯ್ ಚೌಕಿನಿಂದ ಕಾರುಗಳ ಒಂದು ಉದ್ದನೆಯ ಸಾಲು, ನಾರ್ತ್ ಬ್ಲಾಕ್ ಮತ್ತು ಸೌತ್‌ಬ್ಲಾಕ್‌ಗಳ ಮಿನಾರ್‌ಗಳ ಮಧ್ಯದಿಂದ ಮುನ್ನುಗ್ಗುವ ಟಾರ್ ರಸ್ತೆ ಗುಂಟ ಆಗಮಿಸುತ್ತಿದೆ. ಮೋಟಾರ್ ಸೈಕಲ್‌ಗಳ, ಪೊಲೀಸ್ ಜೀಪ್‌ಗಳ ಬೆಂಗಾವಲಿನೊಂದಿಗೆ ರಾಷ್ಟ್ರಪತಿಗಳ ಮತ್ತು ಉಪರಾಷ್ಟ್ರ ಪತಿಗಳ ಕಾರುಗಳನ್ನು ಆತ ಗುರುತಿಸಿದ. ಹಿಂದಿನಿಂದ ಬಹಳಷ್ಟು ಅಂಬಾಸಿಡರ್‌ಗಳು. ವಿಂಡ್‌ಸ್ಕ್ರೀನ್‌ನ ಮೂಲಕ ಕೆಲವು ಮುಖಗಳ ರೂಪುರೇಖೆಗಳು ಕಾಣಿಸಿದುವು– ರಾಜೀವ್, ಶಿವಶಂಕರ್, ಅರುಣ್ ನೆಹರು, ಸಾಠೆ, ಪ್ರಣವ್, ನರಸಿಂಹರಾವ್ ಮುಂತಾದವರದ್ದು.

ಸ್ಟಾರ್ಟ್ ಮಾಡಿದ್ದ ಸ್ಟಾಫ್ ಕಾರ್‌ನಲ್ಲಿ ರವಿ ಹತ್ತಿದ. ರಾಷ್ಟ್ರಪತಿಭವನದ ಹರಳುಕಲ್ಲು ಹಾಸಲಾದ ಪ್ರಾಂಗಣದ ಕಡೆಗೆ ಸಾಗುತ್ತಿರುವ ಮೋಟಾರ್ ಕಾರ್‌ಗಳ ನಿಡಿದಾದ ಸಾಲಿನಲ್ಲಿ ತೀರಾ ಹಿಂದಿನದಾಗಿ ಆತನ ಕಾರು ಸರಿಯ ತೊಡಗಿತ್ತು.

ವಿಂಡ್‌ಸ್ಕ್ರೀನ್ ಮತ್ತು ಹೆಡ್‌ಲೈಟ್‌ಗಳನ್ನು ಚಚ್ಚಿ ಪುಡಿಮಾಡಿದ್ದ ಕಾರನ್ನು

ರವಿಕುಮಾರ್ ವರ್ಕ್‌ಶಾಪ್‌ಗೆ ಒಪ್ಪಿಸುವಾಗ ವರ್ಕ್‌ಶಾಪ್‌ನ ಹಿಂಬದಿಯಲ್ಲಿದ್ದ ಕೆಲವು ಕಾರುಗಳ ಮರೆಯಲ್ಲಿ ಜಾಕ್‌ಗಳ ಮೇಲೆ ನಿಲ್ಲಿಸಿ ಬಾನಟ್ ತೆರೆದಿಡಲಾದ ಕಾರೊಂದರ ಅಡಿಯಲ್ಲಿ ಅಂಗಾತ ಮಲಗಿಕೊಂಡಿದ್ದನು, ಉಪಕಾರ್‌ಸಿಂಗ್. ಆತನ ಸೊಂಟದ ಮೇಲ್ಭಾಗವಿದ್ದದ್ದು ಜಾಕ್‌ನ ಮೇಲೆ ನಿಲ್ಲಿಸಲಾದ ಕಾರಿನ ಅಡಿಯಲ್ಲೂ ಉಳಿದ ಭಾಗ ಹೊರಗೂ ಇತ್ತು. ಗ್ರೀಸ್ ಮತ್ತು ಮಸಿ ಮೆತ್ತಿಕೊಂಡಿರುವ ಮಾಸಿದ ಒಂದು ಪ್ಯಾಂಟ್ ಮತ್ತು ಶರಟನ್ನು ತೊಟ್ಟುಕೊಂಡಿದ್ದನಾತ. ಯಾರಾದರೂ ಬಂದು ನೋಡಿದಾಗ ಆತ ತೆರೆದಿಟ್ಟ ಕಾರ್‌ನ ಯಾವುದೋ ಕೆಟ್ಟುಹೋದ ಭಾಗವನ್ನು ದುರಸ್ತಿ ಮಾಡುತ್ತಿರುವನೆಂದೇ ಅನ್ನಿಸೀತು. ನಿಜಸಂಗತಿ ಏನೆಂದರೆ, ಆತನ ಮಸ್ತಿಷ್ಕದ ಹೊರತು ಬೇರಾವುದೂ ಆಗ ಕೆಲಸ ಮಾಡುತ್ತಿರಲಿಲ್ಲ. ಅದಾದರೋ ಜೂನ್ ತಿಂಗಳಲ್ಲಿ ಸ್ವರ್ಣ ಮಂದಿರದೊಳಗೆ ಸೇನಾ ಪ್ರವೇಶವಾದಂದಿನಿಂದ ನಿರಂತರ ಕೆಲಸ ಮಾಡುತ್ತಲೇ ಇದೆ. ಮಸ್ತಿಷ್ಕದ ಜತೆ ಕೆಲಸ ಮಾಡಿಕೊಂಡೇ ಇದ್ದ ಇನ್ನೊಂದು ಅವಯವ ಆತನ ಕಾಲುಗಳು. ಜೂನ್ ಮೂರರಂದು ಸೇನೆ ಆಕ್ರಮಣ ಮಾಡಿದ್ದಾಗ ಸ್ವರ್ಣ ಮಂದಿರದಿಂದ ಗುಪ್ತ ಮಾರ್ಗದ ಮೂಲಕ ತಪ್ಪಿಸಿಕೊಂಡ ಕೆಲವೇ ಮಂದಿಯಲ್ಲಿ ಆತನೂ ಒಬ್ಬ. ಭಿಂದ್ರನ್‌ವಾಲರ ಜತೆಯಲ್ಲಿ ಭಯೋತ್ಪಾದಕ ಚಟುವಟಿಕೆಗಳಲ್ಲಿ ನಿರತರಾಗಿದ್ದ ಬಹಳಷ್ಟು ಮಂದಿ ಕೊಲೆಯಾದರು. ಆತನೊಂದಿಗೆ ಪಾಕ್ ಸೇನೆಯಿಂದ ವಿಧ್ವಂಸಕ ಚಟುವಟಿಕೆಗಳಲ್ಲಿ ತರಬೇತಿ ಹೊಂದಿದ್ದ ಬಹಳಷ್ಟು ಉಗ್ರರು ಭಿಂದ್ರನ್‌ವಾಲರ ಜತೆ ಸಾವನ್ನಪ್ಪಿದ್ದರು. ಕೊಲೆಯಾದವರ ಗುಂಪಿನಲ್ಲಿ ಆತನ ಸೋದರ ಹರ್‌ಮಿಂದರ್ ಕೂಡ ಇದ್ದ.

ಸೇನೆ ಸ್ವರ್ಣ ಮಂದಿರದ ಕಡೆಗೆ ಆಕ್ರಮಣ ನಡೆಸೀತು ಎಂಬ ನಿರೀಕ್ಷೆ ಸ್ವರ್ಣ ಮಂದಿರದಲ್ಲಿ ಅವಿತುಕೊಂಡಿದ್ದ ಸೈನಿಕರಲ್ಲಿ ಇದ್ದೇ ಇತ್ತು. ದೆಹಲಿಯ ಹಾಗೂ ಚಂಡೀಗಢದ ಪೊಲೀಸ್ ಹೆಡ್‌ಕ್ವಾರ್ಟರ್ಸ್‌ಗಳಲ್ಲಿದ್ದ ವಿದ್ರೋಹಿಗಳು ಸೇನೆಯ ಪ್ರತಿಯೊಂದು ಚಲನೆಯನ್ನು, ಉನ್ನತ ಸ್ತರಗಳಲ್ಲಿ ನಡೆಯುತ್ತಿದ್ದ ಸಮಾಲೋಚನೆಗಳ ಸ್ವರೂಪವನ್ನು ಕುರಿತು ಆಗಾಗ ಚರ್ಚಿಸುತ್ತಲೇ ಇದ್ದರು. ಪ್ರತಿಸಲ ಸೇನಾಕಾರ್ಯಾಚರಣೆಗೆ ಸಂಬಂಧಿಸಿದ ಫೈಲ್ ಮೇಲೆ ಹೋದಾಗಲೂ ವೇಳೆಯಾಗಲಿಲ್ಲವೆಂಬ ಸೂಚನೆಯೊಂದಿಗೆ ಫೈಲ್ ವಾಪಸ್ ಬಂದಿತ್ತು. ಈ ಹಿನ್ನೆಲೆಯಲ್ಲೇ ಸ್ವರ್ಣ ಮಂದಿರದ ಚಿನ್ನದ ಗುಂಬಜ್‌ನ ಮೇಲೆ ಖಾಲಿಸ್ಥಾನ್ ಧ್ವಜ ಹಾರಿಸಲು ಭಿಂದ್ರನ್‌ವಾಲ ಕರೆಯುತ್ತಿದ್ದರು. ಧ್ವಜ ಹಾರಿಸಿದ ದಿನ ಭಿಂದ್ರನ್‌ವಾಲ ಪ್ರಾರ್ಥನಾ ಸಭೆಯಲ್ಲಿ ಬಹಿರಂಗವಾಗಿಯೇ ಹೀನೈಸಿದರು: "ಸಿಂಹದ ಜಟೆ ಹಿಡಿದೆಳೆದರೂ ಚಲಿಸುವ ಸೂಚನೆ ಕಾಣಿಸುತ್ತಾ ಇಲ್ಲ. ಧೋತಿವಾಲಗಳನ್ನು ಕೆರಳಿಸಲು ಇವೆಲ್ಲ ಸಾಲದೆನಿಸುತ್ತದೆ. ಹೆಂಬೇಡಿಗಳು. ಅವರ ಕಣ್ಣೆದುರಿನಲ್ಲೆ ತಾಯಂದಿರ ಹಾಗೂ ಅಕ್ಕಂದಿರ ಮತ್ತು ತಂಗಿಯರ ಮಾನಹರಣ ಮಾಡಿದರೂ



ಅವರ ಗಂಡಸುತನ ಎದ್ದೇಳದು. ರಾಷ್ಟ್ರಪತಿ ಭವನವನ್ನು ಆಕ್ರಮಿಸಿದರೂ ಮತ ಸಾಮರಸ್ಯದ ಮರೆಯಲ್ಲಿ ಅವಿತಿರಲಿಕ್ಕಷ್ಟೇ ಅವರಿಂದ ಸಾಧ್ಯ. ಓರ್ವ ವಿಧವೆ ಆಳುವ ದೇಶದ ಗಂಡಸರಿಂದ ಇದಕ್ಕಿಂತ ಹೆಚ್ಚು ಏನು ತಾನೆ ನಿರೀಕ್ಷಿಸಲು ಸಾಧ್ಯ?"

ಅಂದಿನ ಗುಪ್ತ ಚರ್ಚೆಯ ವೇಳೆ, ಗುಪ್ತಚಾರರಿಂದ ದೊರೆತ ಮಾಹಿತಿಗಳನ್ನು ವಿಶ್ಲೇಷಿಸುವಾಗ, ಸೇನಾ ಕಾರ್ಯಾಚರಣೆ ನಡೆಯಲಿದೆಯೆಂಬ ಸೂಚನೆ ದೊರೆತಿತ್ತು. ಭಾರತದ ಇತರ ರಾಜ್ಯಗಳಿಂದ ರಹಸ್ಯವಾಗಿ ಸೇನಾ ತುಕಡಿಗಳ ಪ್ರವಾಹ ಶುರುವಾಗಿ ತಿಂಗಳುಗಳೇ ಸಂದಿವೆ. ಸುಪ್ರೀಂ ಕಮಾಂಡರ್ ಎಂಬ ನೆಲೆಯಲ್ಲಿ ರಾಷ್ಟ್ರಪತಿ, ಸ್ವರ್ಣ ಮಂದಿರದೊಳಗೆ ಸೇನೆಯ ಪ್ರವೇಶ ಮಾಡಿಸಬಾರದೆಂದೂ ಮಾಡಿಸಿದ್ದೇ ಆದರೆ ತಾನು ರಾಷ್ಟ್ರಪತಿ ಹುದ್ದೆಗೆ ರಾಜೀನಾಮೆ ಕೊಡುವೆನೆಂದೂ ಬೆದರಿಸಿಯಾರೆಂದು ಭಿಂದ್ರನ್‌ವಾಲ ನಿರೀಕ್ಷಿಸಿದ್ದರು. ಭಿಂದ್ರನ್‌ವಾಲ ಒಂದು ಪ್ರಾರ್ಥನಾ ಸಭೆಯಲ್ಲಿ ಅಪಹಾಸ್ಯದೊಂದಿಗೆ ಹೇಳಿದ್ದರು. ಒಂದೋ ಇಂಡಿಯಾದ ಪ್ರೆಸಿಡೆಂಟ್ ಆಗಿಯೇ ಇರುವುದು ಇಲ್ಲವೇ ಸಿಕ್ಖರ ಮುಖಂಡನಾಗುವುದು. ಈ ಎರಡೂ ಬಗೆಯ ಷಂಡತನವನ್ನಂತೂ ಕೊನೆಗೊಳಿಸಲೇಬೇಕು!" ಆದರೂ ಸೇನೆ ಸುವರ್ಣ ಮಂದಿರವನ್ನು ಆಕ್ರಮಿಸಿಯೇ ಬಿಟ್ಟಿತ್ತು. ಪಾರಾಗಲು ಸಾಧ್ಯವಾದವರಲ್ಲಿ ಒಬ್ಬೊಬ್ಬನೂ ಕಾರ್ಯಗತಗೊಳಿಸಲೇಬೇಕಾದ ಕಂಟಿನ್‌ಜೆನ್ಸಿ ಪ್ಲಾನ್‌ಗಳನ್ನು ಮೊದಲೇ ಸಿದ್ಧಗೊಳಿಸಿದ್ದನು. ಒಬ್ಬೊಬ್ಬನೂ ಯಾರ್ಯಾರನ್ನು ಸಂಪರ್ಕಿಸಬೇಕು, ಏನೆಲ್ಲ ನಿರ್ವಹಿಸಬೇಕೆಂಬ ಬಗ್ಗೆ ಕಟ್ಟುನಿಟ್ಟಾದ ಆಜ್ಞೆಗಳಿದ್ದವು.

'ಇಂಡಿಯನ್ ಬೋರ್ಡರ್ ಪೆಟ್ರೋಲ್'ಅನ್ನು ಮೋಸಗೊಳಿಸುವುದು ಸುಲಭವಲ್ಲ. ಆದರೂ ಉಪಕಾರ್ ಸಿಂಗ್ ಕತ್ತಲೆಯ ಮರೆಯಲ್ಲಿ ಗಡಿ ದಾಟಿದ್ದಾನೆ. ಪಾಕಿಸ್ತಾನ್ ಬೋರ್ಡರ್ ಪೊಲೀಸ್‌ನ ನಿರ್ದಿಷ್ಟ ಅಧಿಕಾರಿಯನ್ನು ಕಂಡು ಕೋಡ್‌ವರ್ಡ್ ಗಾಮ ಎಂದು ಉರು ಹೊಡೆದಿದ್ದಾನೆ. ಒಂದು ಮಿಲಿಟ್ರಿ ಟ್ರಕ್ ಆತನನ್ನು ಸಿಯಾಲ್‌ಕೋಟ್‌ನ ಒಂದು ಮನೆಗೆ ತಲಪಿಸಿತ್ತು. ಪಾಕಿಸ್ತಾನ್ ಮಿಲಿಟರಿ ಇಂಟಲಿಜೆನ್ಸ್‌ನ ಒಬ್ಬ ಅಧಿಕಾರಿ ಆತನನ್ನು ಪ್ರಶ್ನೆಗೆ ಗುರಿಪಡಿಸಿದ್ದ. ಕೇಣಲ್ ಮುಸ್ತಫಾ ಎಂದು ಅಧಿಕಾರಿ ಸ್ವತಃ ಪರಿಚಯಿಸಿಕೊಂಡಿದ್ದ. ಅದು ಅವನ ನಿಜವಾದ ಹೆಸರಾಗಿರಲಿಕ್ಕಿಲ್ಲ. ಉಪಕಾರ್‌ಸಿಂಗ್ ಆತನಿಗೆ ಗೊತ್ತಿರುವ ಎಲ್ಲಾ ವಿವರಗಳನ್ನು– ಸೇನೆ ಸ್ವರ್ಣ ಮಂದಿರದೊಳಗೆ ಪ್ರವೇಶಿಸಿದ್ದು, ಭಿಂದ್ರನ್‌ವಾಲ ಕೊಲೆಯಾದದ್ದು, ಆತನೊಂದಿಗೆ ಕೊಲ್ಲಲ್ಪಟ್ಟ ಇತರ ಭಯೋತ್ಪಾದಕರ ಬಗೆಗಿನ ಮಾಹಿತಿಗಳು, ಜೀವ ಸಹಿತ ಪಾರಾಗಿದ್ದವರ ವಿವರ–ಕೇಣಲ್ ಮುಸ್ತಫಾ ಸೂಕ್ಷ್ಮವಾಗಿ ವಿಚಾರಿಸಿದ್ದ. ಯಾವುದನ್ನೆಲ್ಲ ಹೇಳಬೇಕು ಯಾವುದನ್ನೆಲ್ಲ ಮರೆ ಮಾಡಬೇಕೆಂಬುದರ ಬಗ್ಗೆ ಉಪಕಾರ್‌ಗೆ ಸ್ಪಷ್ಟ ನಿರ್ದೇಶನಗಳಿದ್ದುವು. ಪಾರಾಗಿರುವ ಭಯೋತ್ಪಾದಕರ

ವಿವರಗಳಾವುದನ್ನೂ ಹೊರಗೆಡಹಲಿಲ್ಲ. ಕೆದಕಿ ಪ್ರಶ್ನಿಸುತ್ತಾ, ವಿವರಗಳನ್ನು ದೊರಕಿಸಲು ನಿದ್ರೆ ಕೆಡಿಸುವಿಕೆ, ಡ್ರಗ್, ಬೆದರಿಕೆ ಮುಂತಾದುವುಗಳನ್ನೆಲ್ಲ ಕೇಣಲ್ ಮುಸ್ತಫಾ ಬಳಸಿದ್ದ. ಹಾಗಾಗಿ ಉಪಕಾರ್ ಹಲವಾರು ಮಂದಿಯ ಹೆಸರುಗಳನ್ನು ಬಹಿರಂಗ ಪಡಿಸಿದ್ದ. ಆದರೂ ಅವಾವೂ ನಿಜವಾದ ಹೆಸರುಗಳಾಗಿರಲಿಲ್ಲ. ಮಾಹಿತಿಗಳನ್ನು ಸಂಗ್ರಹಿಸಿ ಆದ ಬಳಿಕ ಬ್ರೈನ್‌ವಾಷ್ ಶುರುಮಾಡಿದ್ದರು. ಭಿಂದ್ರನ್‌ವಾಲ ಸಾಯಲಿಲ್ಲವೆಂದೂ ಸ್ವರ್ಣ ಮಂದಿರದಲ್ಲಿ ಕೊಲೆಯಾದದ್ದು ಆತನ ಡ್ಯೂಪ್ ಎಂದೂ ಆಗಿತ್ತು ಮೊದಲ ಪಾಠ. ನಿಜವಾದ ಭಿಂದ್ರನ್‌ವಾಲ, ಪಾಕ್ ಸೇನೆಯ ಅತಿಥಿಯಾಗಿ ಸುರಕ್ಷಿತರಾಗಿದ್ದಾರೆ. ಸಹಜವಾಗಿಯೆ ಅದನ್ನು ನಂಬಲು ಉಪಕಾರ್‌ಗೆ ಸಾಧ್ಯವಾಗಲಿಲ್ಲ. ಭಿಂದ್ರನ್‌ವಾಲರನ್ನು ಕೊಂದದ್ದು ಇಂಡಿಯನ್ ಸೇನೆಯಲ್ಲವೆಂದೂ ತನ್ನ ಖಾಸಾ ಸಹೋದರನೂ ಭಿಂದ್ರನ್‌ವಾಲರ ಬಲಗೈಯೂ ಆಗಿದ್ದ ಹರ್‌ಮಿಂದರ್ ಸಿಂಗ್ ಎಂದೂ ಆತ ಹೇಳಿದ್ದ. ಸೇನೆ ಸುತ್ತಲೂ ಮುತ್ತಿಕೊಂಡಾಗ ಉಗ್ರರು ಸಾಧ್ಯವಾದಷ್ಟು ನಾಶನಷ್ಟಗಳನ್ನುಂಟು ಮಾಡಿದ್ದರು. ಶರಣಾಗಲೇ ಬೇಕಾದ ಸಂದರ್ಭ ಬಂದಾಗ ಪರಸ್ಪರ ಗುಂಡಿಟ್ಟು ಕೊಲ್ಲಬೇಕೆಂಬುದಾಗಿತ್ತು ಮೊದಲಿನಿಂದಲೂ ತೆಗೆದುಕೊಂಡಿದ್ದ ನಿರ್ಧಾರ; ಆತನ ಅಪನಂಬಿಕೆಯನ್ನು ತೊಡೆದು ಹಾಕಲು ಮುಸ್ತಫಾ, ಭಿಂದ್ರನ್‌ವಾಲರ ಸ್ವಂತ ಹೇಳಿಕೆಯ ಟೇಪ್ ಬಿತ್ತರಿಸಿದ; ಖಾಲಿಸ್ತಾನ ಒಂದು ವಾಸ್ತವವಾದ ಬಳಿಕ ಸಿಕ್ಖನ ಅಂತಿಮಗುರಿಯಾದ ಸಚ್ಚ್‌ಖಂಡ್‌ಗೆ ಪ್ರವೇಶಿಸುವೆ, ಸಂಗಾತಿಗಳೇ ಎಚ್ಚರದಿಂದಿರಿ. ನಾನು ಕೊಲ್ಲಲ್ಪಟ್ಟಿರುವೆನೆಂದು ಹೇಳಿ ಇಂಡಿಯನ್ ಸೇನೆ ನಿಮ್ಮ ಕೆಚ್ಚನ್ನು ಕೆಡಿಸಬಹುದು. ಕೂಡದು; ಅದನ್ನು ನಂಬಕೂಡದು. ನಾನು ಒಂದು ಗುಪ್ತ ಸ್ಥಳದಲ್ಲಿ ಕುಳಿತು ಎಲ್ಲವನ್ನೂ ನೋಡುತ್ತಿದ್ದೇನೆ: ಎಲ್ಲವನ್ನೂ ನಿಯಂತ್ರಿಸುತ್ತಿದ್ದೇನೆ. ವಾಹ್ ಗುರೂಜೀ ಕಾ ಖಲ್ಸಾ–ವಾಹ್ ಗುರೂಜಿ ಕಾ ಫಾತಾ...."

ಕೆಲವು ದಿನಗಳ ಬಳಿಕ, ಭಿಂದ್ರನ್‌ವಾಲರ ಟೇಪ್ ಮಾಡಲಾದ ಇನ್ನೊಂದು ಸಂದೇಶವನ್ನು ಆತನಿಗೆ ಕೇಳಿಸಲಾಯಿತು. ನೀನು ಗಡಿದಾಟಿ ಅಮೃತಸರಕ್ಕೆ ಹೋಗಬೇಕು. ಕೇಣಲ್ ಮುಸ್ತಫಾ ನಿನಗೆ ಮೂರು ಜನರ ವಿಳಾಸ ಕೊಡುವರು. ಅವರು ಮೂವರೂ ನನ್ನ ನಿಷ್ಠಾವಂತ ಅನುಯಾಯಿಗಳಿರುವರು. ಮಸಾಲೆ ಮತ್ತು ಇತರ ಸಾಮಗ್ರಿಗಳನ್ನು ಒಳಗೊಂಡ ಒಂದು ಪೆಟ್ಟಿಗೆಯನ್ನು ಮುಸ್ತಫಾ ನಿನಗೆ ಕೊಡುವರು. ಅವುಗಳಿಂದ ಆ ಮೂರು ಮಂದಿಯ ನೆರವಿನೊಂದಿಗೆ ನೀನು ಸ್ವರ್ಣ ಮಂದಿರದಲ್ಲಿ ಇಂಡಿಯನ್ ಸೇನೆಯ ಬಲವಂತಕ್ಕೆ ಮಣಿದು ಕಾರ್ ಸೇವೆ ಮಾಡುತ್ತಿರುವ ಬಾಬಾ ಸಂತ್‌ಸಿಂಗ್‌ನನ್ನು ಮುಗಿಸತಕ್ಕದ್ದು."

ಗ್ರೆನೇಡ್‌ಗಳೂ ಡೈನಾಮೈಟ್‌ಗಳೂ ಒಳಗೊಂಡ ಒಂದು ಪೆಟ್ಟಿಗೆ ಮತ್ತು ಸ್ಟೆನ್‌ಗನ್‌ಗಳನ್ನು ಉಡುಗೊರೆಯಾಗಿ ಕೊಟ್ಟು ಕೇಣಲ್ ಮುಸ್ತಫಾ ಪ್ರಯಾಣಕ್ಕೆ



ಅನುಮತಿಯಿತ್ತ. ಪಾಕ್ ಸೇನೆಯ ಬೆಂಗಾವಲಿನೊಂದಿಗೆ ಉಪಕಾರ್‌ಸಿಂಗ್ ನಿರ್ಜನವಾದ ಗಡಿಗೆ ತಲಪಿದ. ಆತನ ಪಲಾಯನ ಆರಂಭವಾದದ್ದು ಹಾಗೆ. ಗೋಧಿ ಹೊಲಗಳ ಮರೆ ಪಡೆಯುತ್ತ ಇಂಡಿಯನ್ ಪೆಟ್ರೋಲ್‌ನ ಕಣ್ಣಿಗೆ ಮಣ್ಣೆರಚುತ್ತ ಅಮೃತಸರದ ಕಡೆಗೆ ನಡೆದ. ಆದರೆ ಬಿ.ಎಸ್.ಎಫ್. ಸಿ.ಆರ್.ಪಿ. ಮತ್ತು ಮದ್ರಾಸ್ ರೆಜಿಮೆಂಟ್ ಒಳಗೊಂಡ ಬಲವತ್ತಾದ ಆ ಕಾವಲುದಳದಿಂದ ತಪ್ಪಿಸಿಕೊಳ್ಳುವುದು ಸುಲಭವಾಗಿರಲಿಲ್ಲ. ನಾಲ್ಕೋ, ಐದೋ ಬಾರಿ ಆತ ಅವರ ಕೈಗೆ ಸಿಕ್ಕಿಬಿದ್ದಿದ್ದ.

ಆದರೂ ಪ್ರತಿಬಾರಿಯೂ ಪಾರಾದದ್ದು ಗುರುಕೃಪೆಯಿಂದಲೇ ಎಂದುಕೊಂಡನಾತ. ಟ್ರಾಕ್ಟರ್ ಮತ್ತು ಟ್ರಕ್‌ಗಳಲ್ಲಿ ಪ್ರತಿದಿನವೂ ರಾತ್ರಿವೇಳೆ ಕೆಲವು ಮೈಲುಗಳನ್ನು ಕ್ರಮಿಸುತ್ತಿದ್ದ. ಸಿಕ್ಖ್ ಚಳವಳಿಯ ಬಗ್ಗೆ ಸಹಾನುಭೂತಿ ಹೊಂದಿದ್ದ ಧಾಬಾಗಳಲ್ಲಿ ಹಗಲು ಕಳೆಯುತ್ತಿದ್ದ. ಕತ್ತಲೆಯ ಮರೆಯಲ್ಲಿ ಪುನಃ ಪ್ರಯಾಣ, ಸಂಸ್ಥೆಯ ವರಿಷ್ಠರು ಆತನನ್ನು ತನ್ಮಧ್ಯೆ ಎರಡೋ ಮೂರೋ ಬಾರಿ ಸಂಪರ್ಕಿಸಿದ್ದರು. ಕೊನೆಗೆ ದೆಹಲಿಗೆ ತಲಪಬೇಕೆಂದು ಆಜ್ಞೆ ದೊರೆಯಿತು. ದೆಹಲಿಗೆ ತಲಪಿ ಆಗಲೇ ಎರಡು ವಾರ ಕಳೆಯಿತು.

ಸ್ವರ್ಣ ಮಂದಿರದಿಂದ ತಪ್ಪಿಸಿಕೊಂಡವರಲ್ಲಿ ಕೆಲವರನ್ನು ಆತ ಪಲಾಯನದ ತಂಗುದಾಣಗಳಲ್ಲಿ ಪುನಃ ಸಂಧಿಸಿದ್ದ. ಜಲಂಧರ್‌ನ ಫಕೀರ್‌ಸಿಂಗ್, ಗುರುದಾಸ್‌ಪೂರ್‌ನ ಜೋಗಿಂದರ್ ಸಿಂಗ್, ದೇರಾ ಬಾಬಾನಾನಕ್‌ನಿಂದ ಬಂದ ನಾರಾಯಣಸಿಂಗ್, ಹೋಶಿಯಾರ್‌ಪೂರ್‌ನ ದರ್ಶನ್‌ಸಿಂಗ್ ಮತ್ತು ದಿಲ್‌ಭಗ್‌ಸಿಂಗ್, ಅಮೃತಸರದವನೇ ಆದ ಅವತಾರ್ ಸಿಂಗ್, ಜಮ್ಮುವಿನ ಸುರ್ಜಿತ್‌ಸಿಂಗ್, ಲುಧಿಯಾನದ ಸುರೀಂದು, ಫಿರೋಜ್‌ಪುರ್‌ನ ಬಲ್‌ವೀಂದರ್...

ಪ್ರತಿಸಲ ಚರ್ಚೆ ನಡೆದಾಗಲೂ ಪ್ರತಿಯೊಬ್ಬರೂ ಒಂದು ಸಂಗತಿಯನ್ನು ಖಚಿತವಾಗಿ ಹೇಳಿದ್ದರು: ಸ್ವಾಭಿಮಾನವಿರುವ ಯಾವ ಸಿಕ್ಖನಿಗೂ ಧೋತಿವಾಲಗಳಾದ ಹಿಂದೂಗಳ ಇಂಡಿಯಾದಲ್ಲಿ ಬಾಳಲು ಸಾಧ್ಯವಾಗದು. ಗುರುಗೋವಿಂದ್‌ಸಿಂಗರಿಗೆ ಕೊನೆಯ ದಿನಗಳಲ್ಲಿ ಎದುರಾಗಿದ್ದಂಥ ದುರಂತಾನುಭವಗಳು ಈಗ ನೂರುಪಟ್ಟು ಹೆಚ್ಚಾಗುತ್ತಿವೆ. ಅಂದು ಅವರು ಖಲ್ಸವನ್ನು ನೆನಪಿಸಿದ್ದರು: ಸತ್‌ನಾಂ ಸ್ಮರಿಸಿರಿ. ನಿಜವಾದ ನಾಮವನ್ನು ಉರು ಹೊಡೆಯಿರಿ. ಗುರುವಿನ ಮಾತುಗಳನ್ನು ಅನುಸರಿಸಿರಿ. ಗುರುಗ್ರಂಥ ಸಾಹಿಬ್ ಪಾರಾಯಣ ಮಾಡಿರಿ."

"ಇನ್ನು ಮುಂದೆ ಖಲ್ಸ ಗುರುವೂ, ಗುರು ಖಲ್ಸವೂ ಹೌದು. ನನ್ನ ಶಾರೀರಕವೂ ಮಾನಸಿಕವೂ ಆಧ್ಯಾತ್ಮಿಕವೂ ಆದ ಬಲಗಳಷ್ಟನ್ನೂ ನಾನು ಗುರುಗ್ರಂಥ ಸಾಹಿಬ್ ಮತ್ತು ಖಲ್ಸಗಳಿಗೆ ಧಾರೆಯೆರೆಯುತ್ತೇನೆ." ಜ್ಞಾನ ಸ್ನಾನ ಮಾಡಿಸಿ ಶುದ್ಧಗೊಳಿಸಲಾದ ಹೊಸ ಖಲ್ಸವನ್ನು ಆರಂಭಿಸಿದ್ದು ಅವರೇ. ಸ್ವಾರ್ಥ ಹಿತಾಸಕ್ತಿಗಳಿಲ್ಲದ, ರಾಷ್ಟ್ರಕ್ಕಾಗಿ, ಸಮೂಹಕ್ಕಾಗಿ, ಧರ್ಮಕ್ಕಾಗಿ ಯಾವ ಕಾರ್ಯವನ್ನೂ ಮಾಡಲು ಸಿದ್ಧರಿರುವ,

ಧೀರ ಜನರು ಖಲ್ಸ ಹಿಂದೂ ಧರ್ಮಕ್ಕೆ ಶಾಪವಾಗಿರುವ ಚಾತುರ್ವರ್ಣ್ಯವನ್ನು ನಿವಾರಿಸಲೆಂದೇ ಅವರು ಜ್ಞಾನ ಸ್ನಾನ ಮಾಡಿಸುತ್ತಿದ್ದರು.

ಆದರೆ ಗುರುಗೋವಿಂದ್‌ಸಿಂಗ್‌ರ ಉದ್ದೇಶದ ಪ್ರಾಮಾಣಿಕತೆಯನ್ನು ಶಿವಾಲಿಕ್ ಬೆಟ್ಟಗಳಲ್ಲಿನ ಗಿರಿರಾಜರುಗಳೂ, ದೆಹಲಿಯ ಮೊಗಲರೂ ಶಂಕಿಸಿದರು. ಔರಂಗಜೇಬನ ಆಜ್ಞಾನುಸಾರ ಸಿರ್‌ಹಿಂದ್‌ನ ಗವರ್ನರ್‌ನು ಗೋವಿಂದ್‌ಸಿಂಗರನ್ನು ನಿರಂತರ ಆಕ್ರಮಿಸಿದ್ದ. ಗುರು ಧೀರತನದಿಂದ ಹೋರಾಡುತ್ತಲೇ ಇದ್ದರು. ಆದರೂ ಹನ್ನೆರಡು ಯುದ್ಧಗಳು ನಡೆದ ಬಳಿಕ ಅವರಿಗೆ ಎದುರಿಸಿನಿಲ್ಲಲು ಸಾಧ್ಯವಾಗಲಿಲ್ಲ.

ಅವರು ಆನಂದ್‌ಪೂರ್‌ನಲ್ಲಿ ಪಿತ್ರಾರ್ಜಿತವಾಗಿ ದೊರೆತಿದ್ದ ಆಸ್ತಿಪಾಸ್ತಿಗಳನ್ನೆಲ್ಲ ತೊರೆದು ಸಟ್ಲಜ್ ದಕ್ಷಿಣದಲ್ಲಿರುವ ಮಾಳ್ವಕ್ಕೆ ತೆರಳಿದರು. ಅವರ ಇಬ್ಬರು ಪುತ್ರರು ಕಾರ್ ಯುದ್ಧಭೂಮಿಯಲ್ಲಿ ವೀರಮರಣವನ್ನಪ್ಪಿದರು. ಎಂಟೋ, ಆರೋ ವರ್ಷಗಳಷ್ಟೇ ಪ್ರಾಯದವರಾಗಿದ್ದ ಕಿರಿಯ ಪುತ್ರರು, ಗವರ್ನರ್‌ನ ಆಜ್ಞಾನುಸಾರ ಸೇವಕನೊಬ್ಬನ ವಂಚನೆಯಿಂದ ಕೊಲೆಯಾದರು. ನಿಖರವಾಗಿ ೨೮೦ ವರ್ಷಗಳ ಹಿಂದೆ ಆ ಕಿಶೋರರು ಕ್ರೂರವಾಗಿ ವಧೆಗೈಯ್ಯಲ್ಪಟ್ಟರು. ಬೆದರಿಕೆಗೆ ಬಗ್ಗದೆ ಖಲ್ಸದ ನಂಬಿಕೆಗಳಲ್ಲಿ ಅಚಂಚಲವಾಗಿದ್ದುಕೊಂಡು ಅವರು ವೀರಮರಣವನ್ನು ವರಿಸಿದರು. ಅವರ ಸುತ್ತಲೂ ಒಂದೊಂದು ಇಟ್ಟಿಗೆ ಕಟ್ಟಿದಾಗಲೂ ಪ್ರಶ್ನೆ ಆಮಿಷಗಳ ಪುನರಾವರ್ತನೆಯಾಗುತ್ತಲೇ ಇದ್ದವು–ಸುನ್ನತಿ ಮಾಡಿಸಿಕೊಂಡು ಇಸ್ಲಾಂ ಆಗಿರಿ. ಬೆಳ್ಳಿ ಬಂಗಾರಗಳಷ್ಟೇ ಅಲ್ಲ ಈ ರಾಜ್ಯ ಕೂಡ ನಿಮಗೆ ಮರಳಿ ಸಿಕ್ಕುತ್ತದೆ–ಆದರೆ ಅವರು ಎಲ್ಲವನ್ನೂ ವಿರೋಧಿಸಿ ನಿಂತರು. ಕೊನೆಗೆ ಉಸಿರುಕಟ್ಟಿ ವಿಲವಿಲನೆ ನೆಲಕ್ಕುರುಳಿದಾಗ ಮೊಗಲರ ಆಳುಗಳು ಅವರನ್ನು ಕತ್ತರಿಸಿ ಕೊಲೆಗೈದರು.

೨೭೬ ವರ್ಷಗಳ ಮುನ್ನ ಒಂದು ಅಕ್ಟೋಬರ್ ತಿಂಗಳಲ್ಲೆ ಗುರುಗೋವಿಂದ್‌ಸಿಂಗರು ಸಹ ಕೊಲೆ ಗೈಯ್ಯಲ್ಪಟ್ಟಿದ್ದರು. ಡೆಕ್ಕಾನ್‌ನಲ್ಲಿ ಮರಣ ಶಯ್ಯೆಯಲ್ಲಿದ್ದ ಔರಂಗಜೇಬನ ಆಹ್ವಾನದ ಮೇರೆಗೆ ಪಂಜಾಬ್ ಸಮಸ್ಯೆಗೆ ಪರಿಹಾರ ಸೂತ್ರವನ್ನು ಕಂಡುಕೊಳ್ಳುವ ಒಡಂಬಡಿಕೆಯ ಚರ್ಚೆಗಾಗಿ ಹೊರಟದ್ದಾಗಿತ್ತು ಅವರು. ಆದರೆ, ಅದಕ್ಕೂ ಮುನ್ನವೇ ಔರಂಗಜೇಬ ತೀರಿಕೊಂಡ. ತನ್ನ ಮಕ್ಕಳನ್ನು ಕೊಲೆಗೈದ ಔರಂಗಜೇಬನ ಮೇಲೆ ಗುರುಗೋವಿಂದ ಸಿಂಗರು ಬೇಕೆನಿಸಿದ್ದರೆ ಸೇಡು ತೀರಿಸಬಹುದಾಗಿತ್ತು. ಆದರೆ, ಅವರು ಅದಕ್ಕೆ ಹವಣಿಸಲಿಲ್ಲ. ಅದರ ಬದಲು ಗುರು ಯಥಾರ್ಥ ಉತ್ತರಾಧಿಕಾರಿಯಾಗಿರುವ ಮು ಅಸ್ಸಂ ಬಹದೂರ್ ಶಾಗೆ ರಾಜ್ಯಭಾರ ವಹಿಸಿಕೊಳ್ಳಲು ಅಗತ್ಯವಾದ ಬೆಂಬಲ ನೀಡಿದರು. ಪಂಜಾಬ್ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಲು ಸಾಧ್ಯವಾಗುವ ಮುನ್ನವೇ ಬಹದೂರ್ ಶಾ, ತನ್ನ ತಮ್ಮ ಕಾಂಬಕ್ಷ್ ಹುಟ್ಟು ಹಾಕಿದ್ದ ಬಂಡಾಯವನ್ನು ಬಗ್ಗು ಬಡಿಯಲು ದಕ್ಷಿಣದ ಕಡೆಗೆ ಹೋಗಬೇಕಾಗಿ ಬಂತು. ಗುರು ಸಹ ಬಹದೂರ್ ಶಾನ ಜತೆ ಡೆಕ್ಕಾನ್‌ಗೆ ಅನುಗಮಿಸಿದರು. ಆದರೆ, ನಾಂದೇಡ್ ತಲಪಿದಾಗ ಸಿರ್‌ಹಿಂದ್‌ನ ನವಾಬನ



ಕಡೆಯವರು ಗುರುವನ್ನು ಮೋಸದಿಂದ ಗಾಯಗೊಳಿಸಿದರು. ಗೂರ್ತ್‌ಖಾನ್‌ನು, ಗುರುವನ್ನು ಎರಡು ಬಾರಿ ತಿವಿದನು. ಪ್ರಾಯಶಃ ಬಹದೂರ್ ಶಾನೇ ಈ ಕೊಲೆಯ ನಿಯೋಜಕನಿರಲೂಬಹುದು. ಪಂಜಾಬ್ ಸಮಸ್ಯೆಯನ್ನು ಬಿಡಿಸಲು ಹೊರಟವರೆಲ್ಲರೂ ದಾರುಣವಾಗಿ ಕೊಲ್ಲಲ್ಪಟ್ಟರೆಂಬುದನ್ನು ಉಪಕಾರ್‌ಸಿಂಗ್ ತುಸು ತಳಮಳದೊಂದಿಗೆ ಜ್ಞಾಪಿಸಿಕೊಂಡನು.

ಇಂದಿರಾಗಾಂಧಿ ಕೊಲೆಯಾದರು ಎಂಬ ವಾರ್ತೆ ತನ್ನ ಪಾಕೆಟ್ ಟ್ರಾನ್ಸಿಸ್ಟರ್‌ಗೆ ತಲಪಿದಾಗ ಉಪಕಾರ್ ಸಿಂಗ್ ಇಷ್ಟನ್ನು ಜ್ಞಾಪಿಸಿಕೊಂಡ. ಹೌದು, ಪಂಜಾಬನ್ನು ಸ್ಪರ್ಶಿಸಿದ್ದಕ್ಕೆ ಬೀವಿಜಿಯೂ ಶಿಕ್ಷೆ ಅನುಭವಿಸಿದರು. ಸ್ವರ್ಣ ಮಂದಿರವನ್ನು ಅಪವಿತ್ರಗೊಳಿಸಿದ್ದ ಯಾರನ್ನೂ ಖಲ್ಸ ಸುಮ್ಮಗೆ ಬಿಡಲಿಲ್ಲ.

ಒಂದು ತಾಸು ಮುಂಚೆ ವಾರ್ತೆ ಆಲಿಸಿದಾಗ ಮೊದಲು ಅವನ ಅನುಭವಕ್ಕೆ ಬಂದದ್ದು ಅನಿರ್ವಚನೀಯವಾದ ಆಹ್ಲಾದವಾಗಿತ್ತು. ಹಿಟ್‌ಲಿಸ್ಟ್‌ನ ಒಂದನೆಯ ನಂಬರ್ ಶತ್ರು ನಾಶವಾಯಿತು. ಆ ಯಾದಿ ಇನ್ನಷ್ಟು ಉದ್ದದ್ದು–ಗ್ಯಾನಿ ಜೈಲ್‌ಸಿಂಗ್, ಸಂತ್ ಲೋಂಗೋವಾಲ್, ಬಾಬಾಸಂತ್‌ಸಿಂಗ್, ಜನರಲ್ ವೈದ್ಯ, ಜನರಲ್ ಸುಂದರ್‌ಸಿಂಗ್, ಬೂಟಾಸಿಂಗ್. ಬಲರಾಂ ಜಾಕಡ್... ಹೀಗೆ ಖಲ್ಸವನ್ನು ಸ್ಪರ್ಶಿಸಿದ್ದ ಯಾರನ್ನೂ ಖಲ್ಸ ಕ್ಷಮಿಸಲಿಲ್ಲ. ಇವತ್ತಲ್ಲವಾದರೆ ನಾಳೆ–

ಆತನಿಗೆ ಯಾರೊಂದಿಗಾದರೂ ತನ್ನ ಸಂತಸವನ್ನು ಹಂಚಿಕೊಳ್ಳಬೇಕೆಂದೆನಿಸಿತ್ತು. ಯಾರನ್ನಾದರೂ ಅಪ್ಪಿಹಿಡಿದು 'ರಾಜ್ ಕರೇಗಾ ಖಲ್ಸಾ' ಎಂದು ಗಟ್ಟಿಯಾಗಿ ಕೂಗಿ ಹೇಳಬೇಕೆಂದು ಅನ್ನಿಸಿತ್ತು. ಈ ವರ್ಕ್‌ಶಾಪ್‌ನ ಇಕ್ಕಟ್ಟಾದ ಹಟ್ಟಿಯೊಳಗಿನಿಂದ ಪಾರಾಗಿ ನಡುರಸ್ತೆಯಲ್ಲಿ, ಜನಜಂಗುಳಿಯ ಮಧ್ಯದಲ್ಲಿ, ನಿಂತು ಭಾಂಗ್ಡಾ ಕುಣಿತ ಕುಣಿಯಬೇಕೆಂದೂ ಅನ್ನಿಸಿತ್ತು.

ಆದರೆ ಖಲ್ಸ ಆತನಿಗೂ ಹೊಣೆಗಳನ್ನು ವಹಿಸಿಕೊಟ್ಟಿದೆ. ಹಿಟ್‌ಲಿಸ್ಟ್‌ನ ಒಬ್ಬಾತನನ್ನು ಮುಗಿಸಬೇಕಾದ ಹೊಣೆ ಆತನದಾಗಿತ್ತು. ಆದರೆ ಎರಡು ವಾರಗಳ ಹಿಂದೆ....

ಆ ಸಂಗತಿ ನೆನಪಿಗೆ ಬರುತ್ತಲೇ ಆತ ಬೆಚ್ಚಿದ. ಗಲಿಬಿಲಿಗೊಂಡು ಥಟ್ಟನೆ ಎದ್ದೂ ಬಿಟ್ಟಿದ್ದ. ತಲೆಯ ಮೇಲ್ಗಡೆ ಜಾಕ್‌ಗಳ ಮೇಲೆ ನಿಂತಿದ್ದ ಕಾರಿನ ಸೈಲೆನ್ಸರ್‌ಗೆ ಹಣೆ ತಾಗಿತ್ತು; ವಿಪರೀತ ನೋವಾಯಿತು.

"ಬೇಗಂ ಚೂತ್" ಎಂದು ಶಪಿಸುತ್ತ ಆತ ಅಂಗಾತ ಮಲಗಿದ. ಆತನ ಮಿದುಳಿನಲ್ಲಿ ದುಂಬಿಗಳು ಗುಂಯಿಗುಟ್ಟಿದವು. ಎಲ್ಲೋ ಯಾವುದೋ ತಪ್ಪು ಘಟಿಸಿದೆ. ಎರಡು ವಾರಗಳ ಹಿಂದೆ ವರಿಷ್ಠರು ತೆಗೆದುಕೊಂಡ ಮುಖ್ಯ ನಿರ್ಧಾರಗಳಲ್ಲಿ ಒಂದು ಹಿಟ್‌ಲಿಸ್ಟ್ ನಿಷ್ಕ್ರಿಯಗೊಳಿಸಬೇಕು ಎಂಬುದಾಗಿತ್ತು. ಖಲ್ಸ ಮಾಡುತ್ತಿರುವ ಪ್ರತಿಯೊಂದು ಕೊಲೆಯೂ ಖಲ್ಸದ ಸಹಸ್ರಾರು ಸಕ್ರಿಯ ಸದಸ್ಯರ ಕೊಲೆಗೆ ಕಾರಣವಾಗುತ್ತಿದೆ. ಪೊಲೀಸರೂ ಸೈನಿಕರೂ ಪ್ರತೀಕಾರ ತೃಷೆಯೊಂದಿಗೆ ಕೈಗೆ

ಸಿಕ್ಕಿದವರನ್ನೆಲ್ಲ ಮುಗಿಸಿ ಬಿಡುತ್ತಾರೆ. ಅಷ್ಟೇ ಅಲ್ಲದೆ ಪಂಜಾಬ್‌ನಲ್ಲಿ ಓರ್ವ ಹಿಂದು ಕೊಲೆಯಾದರೆ, ದೆಹಲಿ, ಗುಜರಾತ್, ಲಕ್‌ನೌ, ಹರಿಯಾನ, ಬಿಹಾರ್‌ನಲ್ಲೆಲ್ಲ ಡಜನ್‌ಗಟ್ಟಲೆ ಸಿಕ್ಖರು ಕೊಲೆಗೈಯ್ಯಲ್ಪಡುತ್ತಾರೆ.

ಈ ಹಿನ್ನೆಲೆಯಲ್ಲಿ ವರಿಷ್ಠರು ಕೊಲೆಗಳನ್ನು ಸದ್ಯ ರದ್ದುಗೊಳಿಸುವ ನಿರ್ದೇಶನ ನೀಡಿದ್ದರು. ಬದಲಿಯಾಗಿ, ಬ್ಯಾಂಕ್ ಲೂಟಿ ಮಾಡಿ ಖಲ್ಸಾದ ಸಂಪತ್ತನ್ನು ಹೆಚ್ಚಿಸಬೇಕು ಎಂಬುದಾಗಿತ್ತು. ಹೊಸ ಸೂಚನೆ ಖಾಲ್ಸದ ವರಿಷ್ಠರೊಳಗೆ ಗಂಭೀರವಾದ ಅಭಿಪ್ರಾಯ ಭೇದ ಹುಟ್ಟಿಕೊಂಡಿದೆ. ಇತ್ತೀಚೆಗೆ ಖಲ್ಸಾದ ಕೇಂದ್ರಕ್ಕೆ ದೊರೆತ ಕೆಲವು ಮಾಹಿತಿಗಳು ಬೆಚ್ಚಿಸುವಂಥವುಗಳಾಗಿವೆ. ಸಂತ್ ಲೋಂಗೋವಾಲ್ ಧಾವನ್‌ರಿಗೆ ಬರೆದಿರುವ ಒಂದು ಪತ್ರ ಖಲ್ಸದ ಉಗ್ರವಾದಿಗಳು ಕಂಡಿದ್ದರು. ಸ್ವರ್ಣ ಮಂದಿರಕ್ಕೆ ಸೇನೆಯನ್ನು ಕಳುಹಿಸಬೇಕಾದ ಸಂದರ್ಭ ಇದೇ ಎಂದೂ ಸೇನೆಯನ್ನು ಕಾಣುತ್ತಲೇ ಭಿಂದ್ರನ್‌ವಾಲ ಮತ್ತು ಹಿಂಬಾಲಕರು ಪಲಾಯನ ಮಾಡಿ ಬಚ್ಚಿಟ್ಟುಕೊಳ್ಳುವರೆಂದೂ ಆ ಪತ್ರದಲ್ಲಿ ಹೇಳಲಾಗಿತ್ತು. ಬ್ಲೂ ಸ್ಟಾರ್‌ನ ಆಪರೇಶನ್ ಯೋಜನೆಯ ಸಿದ್ಧಗೊಳಿಸಿದ್ದು ಸಂತ್ ಲೋಂಗೋವಾಲ್ ಮತ್ತು ಅನುಯಾಯಿಗಳ ಅನುಮೋದನೆಯೊಂದಿಗೆ ಎಂದೂ ಆ ಪತ್ರದಿಂದ ಸ್ಪಷ್ಟವಾಗಿತ್ತು. ಪ್ರಕಾಶ್‌ಸಿಂಗ್ ಬಾದಲ್‌ರ ಸಹಕಾರವು ಈ ಕಾರ್ಯದಲ್ಲಿ ಸರಕಾರಕ್ಕೆ ಎಂಬುದಾಗಿತ್ತು.

ಆ ಪತ್ರದಲ್ಲಿ ಪ್ರಸ್ತಾವಿಸಲ್ಪಟ್ಟವರು ಲೋಂಗೋವಾಲ್ ಮತ್ತು ಬಾದಲ್ ಮಾತ್ರವೇ ಆಗಿದ್ದರೆ ಚಿಂತೆ ಇರಲಿಲ್ಲ. ಆದರೆ, ಖಾಲಿಸ್ಥಾನ್ ಪ್ರೆಸಿಡೆಂಟ್ ಎಂದು ಸ್ವಯಂ ಘೋಷಿಸಿದ್ದ ಜಗಜಿತ್ ಸೋಹನ್ ಹಾಗೂ ದೀದರ್‌ಸಿಂಗ್ ಅಮೆರಿಕೆಗೆ ಹೋಗುವರೆಂದೂ ಇನ್ನು ಮುಂದೆ ಪಂಜಾಬ್ ರಾಜಕೀಯದಲ್ಲಿ ಹಸ್ತಕ್ಷೇಪ ಮಾಡುವುದಿಲ್ಲವೆಂದೂ ಭರವಸೆ ನೀಡಿದ್ದರು. ಈ ಮುಂದಾಳುಗಳಿಗೆ ಭಾರೀ ಮೊತ್ತದ ಹಣವನ್ನು ಭಾರತ ಸರಕಾರ ಹಸ್ತಾಂತರಿಸಿದೆ. ಗಂಗಾಸಿಂಗ್ ಧಿಲ್ಲಾನ್ ಸಹ ಇನ್ನು ಮುಂದೆ ವಿದೇಶಗಳಲ್ಲಿರುವ ಸಿಕ್ಖರನ್ನು ಭಾರತದ ವಿರುದ್ಧ ಎತ್ತಿಕಟ್ಟುವ ತಂತ್ರವನ್ನು ಬಿಟ್ಟು ಬಿಡುವುದಾಗಿಯೂ ಪತ್ರದಲ್ಲಿ ಹೇಳಲಾಗಿದೆ. ಈ ಪತ್ರ ಖಲ್ಸದ ಉಗ್ರವಾದಿಗಳಲ್ಲಿ ಗಲಿಬಿಲಿಯನ್ನುಂಟು ಮಾಡಿತ್ತು. ಖಲ್ಸದ ವರಿಷ್ಠರೇ ಸಿಕ್ಖರ ವಿರುದ್ಧ ತಿರುಗುತ್ತಿರುವರೆ? ಸಿಕ್ಖ್ ಸ್ಥಾನ್ ಎಂಬ ಕನಸು ಕೈಗೆಟಕುವ ಹಂತಕ್ಕೆ ಬಂದಾಗ ಸಿಕ್ಖರೇ ಅದನ್ನು ಹೀಯಾಳಿಸುತ್ತಿರುವರೆ? ಭಿಂದ್ರನ್‌ವಾಲ ಮತ್ತು ಒಂದು ಮುಷ್ಟಿ ಅನುಯಾಯಿಗಳ ಹೊರತು ಯಾರಿಗೂ ಖಾಲಿಸ್ಥಾನ್ ಬಗ್ಗೆ ಆಸಕ್ತಿ ಇಲ್ಲವೆಂದೇ ಕಾಣುತ್ತದೆ.

ಪತ್ರದ ಬಗೆಗಿನ ಚರ್ಚೆಯ ನಡುವೆ ಅನೇಕ ಅಭಿಪ್ರಾಯಗಳು ಹೊರಬಂದುವು. ಅದು ಸುಳ್ಳು ಪತ್ರ, ರಾ ಮತ್ತು ಐ.ಬಿ.ಯ ಕಾಲ್ಪನಿಕ ಸಂತತಿ ಎಂಬುದಾಗಿತ್ತು. ಒಂದು ವಾದ–ಆದರೆ ಅದು ಎಸ್.ಜಿ.ಪಿ.ಎಸ್. ಆಫೀಸ್‌ನ ಟೈಪ್‌ರೈಟರ್‌ನಲ್ಲಿ ಟೈಪ್ ಮಾಡಲ್ಪಟ್ಟ ಪತ್ರ ಎಂಬ ಬಗ್ಗೆ ಯಾರಿಗೂ ಅನುಮಾನವಿರಲಿಲ್ಲ. ಅಷ್ಟೇ



ಅಲ್ಲ, ಸಂತ್ ಲೋಂಗೋವಾಲರ ಸಹಿ ಸುಳ್ಳೆಂದು ಖಚಿತವಾಗಿ ಹೇಳಲು ಯಾರಿಗೂ ಸಾಧ್ಯವಾಗಲಿಲ್ಲ. ಬ್ರಿಟನ್‌ನಲ್ಲೂ, ಕೆನಡಾದಲ್ಲೂ ಕಾರ್ಯಪ್ರವೃತ್ತರಾಗಿರುವ ಉಗ್ರವಾದಿಗಳ ನಡುವೆ ಗೊಂದಲವನ್ನು ನಿರ್ಮಿಸಲಿರುವ ಒಂದು ಕುಕೃತ್ಯವಾಗಿಯೂ ಆ ಪತ್ರವನ್ನು ವ್ಯಾಖ್ಯಾನಿಸಲಾಯಿತು. ಚೌಹಾನ್ ಮತ್ತು ಧಿಲ್ಲಾನರನ್ನು ಖಾಲ್ಸಾದ ವಂಚಕರೆಂದು ತೋರಿಸಿಕೊಡುವ ಒಂದು ಕರಪತ್ರವನ್ನು ಭಾರತದ ದೂತಾವಾಸಗಳು ಹಂಚಿದ್ದವು. ಈ ಹಿಂದೆ, ಇದಾರೋ ಸಹಿ ಹಾಕಿದ್ದ ಒಂದು ಪತ್ರವೇ ರಾ ಮತ್ತು ಐ.ಬಿ.ಗಳಷ್ಟೇ ಅಲ್ಲ, ಕೆ.ಜಿ.ಬಿ., ಸಿ.ಐ.ಎ. ಮುಂತಾದವುಗಳೆಲ್ಲ, ಸಿಕ್ಖರ ನಡುವಿನ ಉಗ್ರವಾದಿಗಳನ್ನು ಪಳಗಿಸಿ ಒಲಿಸಲು ಪ್ರಯತ್ನಿಸುತ್ತಿರುವ ವಿಚಾರ, ಖಾಲ್ಸಾದಲ್ಲಿ ಗುಟ್ಟಾಗಿ ಪ್ರಯತ್ನಿಸುತ್ತಿರುವ ವಿಚಾರ ಖಲ್ಸದಲ್ಲಿ ಗುಟ್ಟಾಗಿ ಉಳಿದಿಲ್ಲ. ಪ್ರಸ್ತುತ ಏಜೆನ್ಸಿಗಳಿಂದೆಲ್ಲ ಭರ್ಜರಿ ಮೊತ್ತಗಳನ್ನು ಖಲ್ಸದ ವಿವಿಧ ಮುಂದಾಳುಗಳು ಆಗಾಗ ಪಡೆದಿರುವರು. ಅಪರೂಪಕ್ಕೆ ಜರುಗುವ ಬ್ಯಾಂಕ್ ಲೂಟಿಗಳಿಂದಲೇ ಇಷ್ಟು ದೊಡ್ಡ ಒಂದು ಚಳವಳಿಯನ್ನು ಮುಂದುವರಿಸಿಕೊಂಡು ಬರುವುದು ಸಾಧ್ಯವಿಲ್ಲವಲ್ಲ.

ಈ ಹಿನ್ನೆಲೆಯಲ್ಲಿ ವರಿಷ್ಠ ಗುಂಪು ದೀರ್ಘ ಸಮಾಲೋಚನೆಗಳ ಬಳಿಕ ಹೀಗೊಂದು ನಿರ್ಧಾರ ತೆಗೆದುಕೊಂಡಿತು: ಮುಂದಿನ ಸೂಚನೆ ನೀಡುವ ತನಕ ಕೊಲೆ ಯೋಜನೆಗಳನ್ನು ನಿಷ್ಕ್ರಿಯಗೊಳಿಸತಕ್ಕದ್ದು.

ಮುಂದಿನ ಸೂಚನೆ ಇನ್ನೂ ನೀಡಿಲ್ಲವೆಂಬುದನ್ನು ಉಪಕಾರ್‌ಸಿಂಗ್ ಜ್ಞಾಪಿಸಿಕೊಂಡ. ಅಥವಾ ಆ ಸೂಚನೆ ತನಗೆ ಸಿಕ್ಕದೆ ಹೋಗಿರಬಹುದೆ? ಅದು ಅಸಂಭಾವ್ಯ.

ಹಾಗಾದರೆ ಬೀವಿಜಿಯನ್ನು ಕೊಂದದ್ದು ಯಾರು? ಖಲ್ಸ ಇದನ್ನು ಮಾಡದಿದ್ದರೆ ಯಾರು ಈ ಕ್ರೂರಕೃತ್ಯವನ್ನು ನಿರ್ವಹಿಸಿದವರು? ಯಾರೇ ಆದರೂ, ಇಬ್ಬರು ಸಿಕ್ಖ್ ಯುವಕರು ಸಿಕ್ಕಿ ಬಿದ್ದಿರುವುದರಿಂದ–ಒಬ್ಬ ಜೀವಂತ, ಇನ್ನೊಬ್ಬ ಹೆಣವಾಗಿ–ಈ ಕೊಲೆಯ ಹೊಣೆ ಖಲ್ಸದ ಹೆಗಲ ಮೇಲೆಯೇ ಹೇರಲ್ಪಡುತ್ತದೆ. ಖಲ್ಸ ಅಲ್ಲವಾದರೆ ಮತ್ತೆ ಯಾರು ಈ ಕೊಲೆಯ ಹಿಂದೆ?

ಈ ಇಂದ್ರಪ್ರಸ್ಥದಲ್ಲಿ ಪ್ರತಿಯೊಂದು ಕೊಲೆಯನ್ನು ಮಾಡಿಸಿದವರು ಅರಮನೆಯ ಒಳಗಿನವರೇ. ದೆಹಲಿಯನ್ನಾಳಿದ್ದ ಏಳು ಸಾಮ್ರಾಜ್ಯಗಳಲ್ಲಿ ಎಷ್ಟೆಷ್ಟೋ ಮಕ್ಕಳೂ, ಒಡಹುಟ್ಟಿದವರೂ, ತಾಯ್ತಂದೆಯರೂ, ಮೊಮ್ಮಕ್ಕಳೂ ಅಧಿಕಾರದ ಬಲಿಪೀಠಕ್ಕೆ ಬಲಿಪಶುಗಳಾಗಿರಲಿಲ್ಲ! ಒಂದಕ್ಕಿಂತ ಹೆಚ್ಚೇ ತನಿಖಾ ಆಯೋಗಗಳು ನೇಮಿಸಲ್ಪಡಬಹುದು. ಆದರೆ ನಿಜವಾದ ಕೊಲೆಗಡುಕ ಯಾರೆಂದು ಯಾವತ್ತೂ ಶಂಕಾತೀತವಾಗಿ ಸಾಬೀತಾಗಲಾರದು!

* * *

## ಅಧ್ಯಾಯ ೬

# ಊರಿನಿಂದ ಬರಲಿರುವ ಇಂದಿರಾ

ಸ್ವತಂತ್ರ ಭಾರತದ ಮೂರನೆಯ ಪ್ರಧಾನ ಮಂತ್ರಿ ಪ್ರಮಾಣವಚನ ಸ್ವಕಾರ ಮಾಡುತ್ತಿರುವುದನ್ನು ರಾಜಕೀಯ ನಾಯಕರುಗಳ, ಸರಕಾರಿ ಅಧಿಕಾರಿಗಳ, ವಿದೇಶೀ ರಾಯಭಾರಿಗಳ ಮಧ್ಯದಲ್ಲಿ ಕುಳಿತು ರವಿ ವೀಕ್ಷಿಸಿದ. ನಿಜವಾದ ಅರ್ಥದಲ್ಲಿ ಮೂರನೆಯ ಪ್ರಧಾನಮಂತ್ರಿ ಅಲ್ಲ; ಏಳನೆಯ ಪ್ರಧಾನ ಮಂತ್ರಿ. ಶಾಸ್ತ್ರಿಯವರನ್ನು, ಮೊರಾರ್ಜಿಯವರನ್ನು, ಚರಣ್ ಸಿಂಗ್‌ರನ್ನು ಕೆಲವೇ ದಿನಗಳ ಮಟ್ಟಿಗಾದರೂ ಎರಡು ಬಾರಿ ಪ್ರಧಾನಿ ಹುದ್ದೆಯನ್ನು ಪಡೆಯುವ ಅದೃಷ್ಟ ಹೊಂದಿದ್ದ ನಂದಾರನ್ನು, ಲೆಕ್ಕಕ್ಕೆ ತೆಗೆದುಕೊಳ್ಳದೆ ಇರಬಾರದಲ್ಲ. ಆದರೆ, ಮಾಜಿ ಪ್ರಧಾನಿಗಳ ಹೆಸರನ್ನು ಜ್ಞಾಪಿಸಿಕೊಂಡಾಗ ಮುಂದಿನ ಪೀಳಿಗೆ ನೆಹರೂರನ್ನು, ಇಂದಿರಾರನ್ನು, ಪ್ರಾಯಶಃ ರಾಜೀವರನ್ನು ಮಾತ್ರ ಜ್ಞಾಪಿಸಿಕೊಂಡೀತು. ಮೊಗಲ ಸಾಮ್ರಾಜ್ಯದ ಬಳಿಕ, ದೆಹಲಿಯಲ್ಲಿ ಅಧಿಕಾರ ವಹಿಸಿಕೊಳ್ಳುತ್ತಿರುವ ನೆಹರೂ ವಂಶದ ಮೂರನೆಯ ಪೀಳಿಗೆ ರಾಜೀವ್. ಅಷ್ಟೇ ಅಲ್ಲ, ಮೊಗಲ ವಂಶದೊಂದಿಗಿನ ಸಾದೃಶ್ಯ–ಪ್ರತಿ ಬಾರಿಯೂ ಮಯೂರ ಸಿಂಹಾಸನಕ್ಕೆ ಹೊಸ ಹಕ್ಕುದಾರರು ಹುಟ್ಟಿಕೊಂಡಾಗ ಅರಮನೆಯ ಒಳಗೂ ಹೊರಗೂ ಬಹಳಷ್ಟು ರಕ್ತಪಾತ ಸಂಭವಿಸಿದೆ. ಹಕ್ಕು ಭದ್ರ ಪಡಿಸಲು ತಂದೆಯನ್ನೂ ಮಕ್ಕಳನ್ನೂ ರಕ್ತ ಸಂಬಂಧಿಗಳಾದ ಇತರ ಅನೇಕ ಮಂದಿಯನ್ನು ಕ್ರೂರವಾಗಿ ಹತ್ಯೆಗೈಯಲಾಗಿದೆ.

ರಾಷ್ಟ್ರಪತಿ ಭವನದಿಂದ ಕೇವಲ ಎಂಟು ಕಿಲೋ ಮೀಟರ್ ದೂರದಲ್ಲಿ ಬಹಳಷ್ಟು ಗುಂಡುಗಳು ನಾಟಿರುವ ಮಾಜಿ ಪ್ರಧಾನಿಯ ತಣ್ಣಗಾದ ಕಳೇಬರ ಅನಾಥವಾಗಿ ಬಿದ್ದುಕೊಂಡಿದೆ. ಅಧಿಕಾರ ವಹಿಸಿಕೊಳ್ಳುವ ಹೊಸ ಪ್ರಧಾನಿ ಆಕೆಯ ಮಗ ಎಂಬುದು ಒಂದು ಆಕಸ್ಮಿಕ ಘಟನೆಯಾಗಿರಲೂಬಹುದು. ಜಗತ್ತಿನ ಅತಿದೊಡ್ಡ ಪ್ರಜಾಪ್ರಭುತ್ವ ಸರಕಾರದ ರಚನೆಗಾಗಿ ಎಪ್ಪತ್ತು ಕೋಟಿ ಜನರಿರುವ ಪುಣ್ಯಭಾರತ ಭೂಮಿಯಲ್ಲಿ, ಇಪ್ಪತ್ತು ಕೋಟಿ ಕುಟುಂಬಗಳಿರುವ ಈ ಉಪಭೂಖಂಡದಲ್ಲಿ ಮೂರನೆಯ ಬಾರಿಯೂ ಪ್ರಧಾನಿಯಾಗಲು ನೆಹರೂ ಕುಟುಂಬದಿಂದಲೇ ಓರ್ವ ವ್ಯಕ್ತಿಯನ್ನು ಆಯ್ಕೆ ಮಾಡಲಾಗಿದೆ! ಸಂವಿಧಾನ ನಿರ್ದೇಶಿಸುವ ವಿಧಿಗಳನ್ನೆಲ್ಲ



ಅಕ್ಷರಶಃ ಪಾಲಿಸಲಾಗಿದೆಯೆಂಬುದೂ ನಿಜವೇ. ಆಡಳಿತ ಪಕ್ಷದ ನಿಲುವು ಮತ್ತು ಕಾರ್ಯಕ್ರಮಗಳನ್ನು ರೂಪಿಸುವ ಕಾಂಗ್ರೆಸ್ ಪಾರ್ಲಿಮೆಂಟರಿ ಬೋರ್ಡ್‌ನಲ್ಲಿ ಒಂಬತ್ತು ಮಂದಿ ಸದಸ್ಯರಿರುತ್ತಾರೆ. ಆದರೆ, ಕೊಲೆಯಾದ ಇಂದಿರಾರನ್ನು ಹೊರತುಪಡಿಸಿದ ಬಳಿಕ ಈಗ ಉಳಿದಿರುವುದು ನಾಲ್ಕೇ ಮಂದಿ–ತೆರವಾಗಿದ್ದ ನಾಲ್ಕು ಸ್ಥಾನಗಳನ್ನು ಅನುಕೂಲಕ್ಕನುಗುಣವಾಗಿ ಭರ್ತಿ ಮಾಡಿರಲಿಲ್ಲ. ಉಳಿದಿರುವ ನಾಲ್ವರು ಸದಸ್ಯರಲ್ಲಿ ಪ್ರಣಬ್ ಮತ್ತು ನರಸಿಂಹರಾವ್ ಮಾತ್ರವೇ ದೆಹಲಿಯಲ್ಲಿದ್ದಾರೆ. ಮರಕತಂ ಚಂದ್ರಶೇಖರ್ ಮತ್ತು ಕಮಲಾಪತಿ ತ್ರಿಪಾಠಿ ಸ್ಥಳದಲ್ಲಿಲ್ಲ. ಒಟ್ಟಿನಲ್ಲಿ, ನರಸಿಂಹರಾವ್ ಮತ್ತು ಪ್ರಣಬರ ಬೆಂಬಲದ ಆಧಾರದಿಂದಲೇ ಮೂಪನಾರರು ರಾಜೀವ್ ಆಡಳಿತ ಪಕ್ಷದ ನಾಯಕನಾಗಿ ಆಯ್ಕೆಯಾಗಿರುವರೆಂದೂ ಅವರನ್ನು ಪ್ರಧಾನ ಮಂತ್ರಿಗಳನ್ನಾಗಿ ನೇಮಕ ಮಾಡಬೇಕೆಂದೂ ರಾಷ್ಟ್ರಪತಿಗಳನ್ನು ವಿನಂತಿಸಿದ್ದಾರೆ. ಪರದೆಯ ಹಿಂದೆ ಇದ್ದುಕೊಂಡು ರಾಯ್‌ಬರೇಲಿಯ ಎಂ.ಪಿ. ಅರುಣ್ ನೆಹರು ಮತ್ತು ಅರುಣ್ ಸಿಂಗ್ ದಾಳ ಸರಿಸಿದ್ದ ಸಂಗತಿಯೇನೂ ಗುಟ್ಟಾಗಿ ಉಳಿದಿಲ್ಲ.

ರವಿ ಸುತ್ತಲೂ ಕಣ್ಣುಹಾಯಿಸಿದ. ನಾಯಕರುಗಳ ಸಾಲಿನಲ್ಲಿ ಹಲವರದ್ದೆಲ್ಲ ಗುರುತು ಸಿಕ್ಕಿತು. ಟಿ.ವಿ.ಯಲ್ಲೂ ಪತ್ರಿಕೆ, ಮ್ಯಾಗಜಿನ್‌ಗಳ ಪುಟಗಳಲ್ಲೂ ಆ ಮುಖಗಳನ್ನು ಆಗಾಗ ನೋಡುತ್ತಾ ಇದ್ದನಲ್ಲ. ರಾಷ್ಟ್ರಪತಿಗಳೇ ಅಲ್ಲದೆ ನರಸಿಂಹರಾವ್ ಪ್ರಣಬ್ ಮುಖರ್ಜಿ, ವಸಂತ ಸಾಠೆ, ಸೀತಾರಾಂ ಕೇಸರಿ, ಅರ್ಜುನ್ ಸಿಂಗ್, ಪಿಸಿಸೇಠಿ. ಓರ್ವ ಸಿಕ್ಖನಾಗಿರುವ ರಾಷ್ಟ್ರಪತಿಗಳ ಮನಸ್ಸಿನಲ್ಲಿ ನಡೆಯುತ್ತಿರುವ ಧರ್ಮಸಂಕಟಗಳು ತಕ್ಕಮಟ್ಟಿಗೆ ಆ ಮುಖದಲ್ಲೂ ಕಾಣಿಸಿಕೊಳ್ಳುತ್ತಿವೆ. ತನ್ನನ್ನು ಈ ರಾಷ್ಟ್ರಪತಿ ಭವನದ ನಿವಾಸಿಯನ್ನಾಗಿ ಮಾಡಿರುವ ಬಗ್ಗೆ ಅವರು ಇಂದಿರಾಜಿಗೆ ಋಣಿಯಾಗಿರುವರೆಂಬುದು ರಹಸ್ಯವೇನೂ ಅಲ್ಲ. ಇಂದಿರಾಜಿ ಆಜ್ಞಾಪಿಸುವುದಾದರೆ ಚರಂಡಿಗಳನ್ನೂ, ಬೀದಿಗಳನ್ನೂ ಗುಡಿಸಿ ಚೊಕ್ಕ ಮಾಡಲಿಕ್ಕೂ ತಾನು ಸಿದ್ಧನಿರುವೆನೆಂದು ಅವರು ರಾಷ್ಟ್ರಪತಿ ಹುದ್ದೆ ವಹಿಸಿಕೊಳ್ಳುತ್ತ ಬಹಿರಂಗವಾಗಿಯೇ ಹೇಳಿದ್ದರಲ್ಲ. ಆ ಇಂದಿರಾಜಿಯನ್ನು, ತನ್ನ ಮತದ ಇಬ್ಬರು ಯುವಕರು ಕ್ರೂರವಾಗಿ ಕೊಲೆ ಮಾಡಿರುವ ಬಗ್ಗೆ ಅವರಿಗೆ ದುಃಖವೂ, ತುಸು ಅಪರಾಧ ಪ್ರಜ್ಞೆಯೂ ಇದೆ. ಪ್ರಾಯಶಃ ಇಂದಿರಾಜಿ ತನಗೆ ಮಾಡಿರುವುದಕ್ಕೆ ಪ್ರತ್ಯುಪಕಾರವೋ ಎಂಬಂತೆ ತನ್ನ ಮತಬಾಂಧವರು, ಅವರಿಗೆ ಮಾಡಲಾದ ನಂಬಿಕೆ ದ್ರೋಹಕ್ಕೆ ಪ್ರಾಯಶ್ಚಿತ್ತದ ನೆಲೆಯಲ್ಲೂ ಇರಬಹುದು–ಅವರು ಎ.ಐ.ಐ. ಎಂ.ಎಸ್.ನಲ್ಲಿ ಇಂದಿರಾರ ಕಳೇಬರದ ಬಳಿ ತಲಪಿದ ಕೆಲವೇ ನಿಮಿಷಗಳೊಳಗೆ ಇಂದಿರಾರ ಹಿರಿಯ ಮಗನನ್ನು ಪ್ರಧಾನ ಮಂತ್ರಿಯಾಗಲು ಆಹ್ವಾನಿಸಿದ್ದು ಕೂಡ. ಅವರು ಆಸ್ಪತ್ರೆ ತಲಪಿದ್ದು ಐದೂವರೆ ಗಂಟೆಗೆ. ಗೊಂಚಲು ದೀಪಗಳು ತೂಗಾಡುತ್ತಿರುವ ಹಾಲ್‌ನ ಗಡಿಯಾರದಲ್ಲಿ ಈಗ ಆರುಮುಕ್ಕಾಲು ಆದದ್ದಷ್ಟೇ.

ಎಪ್ಪತ್ತು ಕೋಟಿ ಜನರನ್ನು ಮುನ್ನಡೆಸಬೇಕಾದದ್ದು ಯಾರು ಎಂಬ ಅತ್ಯಂತ ಮಹತ್ತ್ವದ ನಿರ್ಧಾರ ತೆಗೆದುಕೊಳ್ಳಲು ಕೆಲವು ನಿಮಿಷಗಳೇ ಸಾಕಾಯಿತು ರಾಷ್ಟ್ರಪತಿಗಳಿಗೆ. ಮುಂದೆ ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಹಾಗೂ ಐದುನೂರ ಐದು ಸದಸ್ಯರನ್ನು ಹೊಂದಿರುವ ಕಾಂಗ್ರೆಸ್ ಸಂಸದೀಯ ಪಕ್ಷ ರಾಷ್ಟ್ರಪತಿಯ ನಿರ್ಧಾರ ತಪ್ಪಾಗಲಿಲ್ಲವೆಂದು ರುಜು ಪಡಿಸಲೂಬಹುದು. ರವಿ ಇನ್ನೊಮ್ಮೆ ಸುತ್ತಲೂ ಕಣ್ಣುಹಾಯಿಸಿದ. ರಾಜೀವರಿಗಿಂತಲೂ ಅರ್ಹತೆ ಹೊಂದಿರುವ ಯಾವನಾದರೂ ವ್ಯಕ್ತಿ ಈ ಗುಂಪಿನಲ್ಲಿರುವನೆ? ನಡು ವಯಸ್ಸು ದಾಟಿರುವ, ವೃದ್ಧಾಪ್ಯದ ಸೀಳು ದಾರಿಗಳಲ್ಲಿ ದಂಗಾಗಿ ನಿಂತಿರುವ ಅನೇಕ ಮುಖಗಳು. ಅವನದ್ದೇ ಆದ ಪೊಳ್ಳು ಬಾವಿಗಳಲ್ಲಷ್ಟೇ ಅಸ್ತಿತ್ವವನ್ನು, ಅಂಗೀಕಾರವನ್ನು ಹೊಂದಿರುವ ರಾಜಕೀಯ ಮಂಡೂಕಗಳು. ಯಾವುದೇ ಧ್ಯೇಯದ ಸೃಜನಾತ್ಮಕ ಕಾರ್ಯಕ್ರಮದ ಬೆಂಬಲವಿಲ್ಲದವರು; ರಾಜಕೀಯವನ್ನು ಕೇವಲ ಜೀವನ ವೃತ್ತಿಯನ್ನಾಗಿ ಮಾಡಿಕೊಂಡ ಪವರ್ ಬ್ರೋಕರ್‌ಗಳು. ಅಂಥವರ ನಡುವೆ ಅಚ್ಚ ಬಿಳಿಯ ಪೈಜಾಮ ಮತ್ತು ಕುರ್ತಾಗಳನ್ನು ತೊಟ್ಟುಕೊಂಡಿರುವ ರಾಜೀವ್. ಸ್ವತಂತ್ರ ಭಾರತದಲ್ಲಿ ಬೆಳೆದು ಬಂದ ಆ ಯುವಕನಿಗೆ ರಾಜಕೀಯ ಭೂತಕಾಲವೊಂದರ ಭಾರವಿಲ್ಲ. ಕೇಂದ್ರದಲ್ಲಾಗಲಿ, ರಾಜ್ಯಗಳಲ್ಲಾಗಲಿ, ಸಚಿವ ಪದವಿಯನ್ನು ಅಲಂಕರಿಸಿದುದರ ಕಲಂಕಗಳು ಆತನನ್ನು ಬೇಟೆಯಾಡಲಾರವು. ನಾಲ್ಕು ವರ್ಷಗಳ ಹಿಂದೆ ವಿಮಾನಾಪಘಾತದಲ್ಲಿ ತಮ್ಮ ಮರಣ ಹೊಂದಿರದಿದ್ದರೆ ಇವತ್ತು ಪ್ರಮಾಣ ವಚನ ಸ್ವೀಕಾರ ಮಾಡುತ್ತಿದ್ದದ್ದು ರಾಜೀವರಾಗಿರಲಿಕ್ಕಿಲ್ಲ. ಇಟಲಿಯವಳಾದ ಪತ್ನಿಯೂ ಇಬ್ಬರು ಮಕ್ಕಳೂ ಒಳಗೊಂಡ ಸಂತೃಪ್ತ ಕುಟುಂಬ ಹಾಗೂ ವಿಮಾನಗಳ ಹಾರಿಸುವಿಕೆಯೊಂದಿಗೆ, ರಾಜಕೀಯದ ಗೂಢಾರಣ್ಯಗಳಿಂದ ಬಹಳಷ್ಟು ದೂರವಿದ್ದು ನಿರಾಡಂಬರವಾಗಿ ಬಾಳುವವರಿದ್ದರು, ಈ ಯುವಕ. ಕಳೆದ ಎರಡು ವರ್ಷಗಳ ಅವಧಿಯಲ್ಲಿ ಭಾರತದ ಹಳ್ಳಿಗಳ ಹಾಗೂ ಪಟ್ಟಣಗಳಲ್ಲಿನ ಜನಕೋಟಿಗಳ ಗಮನವನ್ನು ಈ ಯುವಕ ತನ್ನೆಡೆಗೆ ಸೆಳೆದುಕೊಂಡಿರುವನು. ಹಾಗಾಗಿ ಯಾರು ಈ ರಾಜೀವ್ ಎಂಬ ಪ್ರಶ್ನೆ ಅತಿದೂರದ ಹಳ್ಳಿಗಳಲ್ಲೂ ಕೂಡ ಏಳಲಾರದೆಂಬ ಸಂಗತಿ ಗಮನಾರ್ಹವೇ.

ರಾಷ್ಟ್ರಪತಿಗಳು ಮರಳಿ ತಲಪಿದ ಬಳಿಕ ಕಾರ್ಯಗಳು ಬಲು ತ್ವರಿತ ಗತಿಯಲ್ಲಿ ಸಾಗಿತ್ತಾದರೂ, ಪ್ರಧಾನಿಯ ನಿಧನ ಮತ್ತು ಹೊಸ ಪ್ರಧಾನಿಯ ಸ್ಥಾನಾರೋಹಣಗಳ ನಡುವೆ ಮಹತ್ತ್ವದ ಒಂಬತ್ತು ತಾಸುಗಳು ವ್ಯರ್ಥವಾಗಿವೆ ಎಂಬುದನ್ನು ಮರೆಯುವಂತಿಲ್ಲ. ಇಷ್ಟು ಕಾಲವಿಳಂಬ ಹಿಂದಿನ ಸಂದರ್ಭಗಳಲ್ಲಿ ಒಮ್ಮೆಯೂ ಸಂಭವಿಸಿರಲಿಲ್ಲ ಎಂಬುದನ್ನು ಜ್ಞಾಪಿಸಿಕೊಂಡನು ರವಿ.

ನೆಹರು ತೀರಿಕೊಂಡದ್ದು ೧೯೬೪ ಮೇ ೨೭ರಂದು ಎರಡು ಗಂಟೆಯಾಗಿತ್ತು.



ಎರಡೇ ತಾಸುಗಳೊಳಗೆ ಗುಲ್ಜಾರಿಲಾಲ್ ನಂದಾ ಹಂಗಾಮಿ ಪ್ರಧಾನಿಯಾಗಿ ಪ್ರಮಾಣವಚನ ಸ್ವೀಕರಿಸಿದ್ದರು. ೧೯೬೬ ಜನವರಿ ೧೧ರಂದು ತಾಶ್ಕೆಂಟ್‌ನಲ್ಲಿ ಲಾಲ್‌ಬಹಾದೂರ್ ಶಾಸ್ತ್ರಿ ನಿಧನರಾದದ್ದು ಬೆಳಗ್ಗೆ ೨.೦೨ಕ್ಕೆ. ಬೆಳಗ್ಗೆ ೩.೧೫ಕ್ಕೆ ನಂದಾ ಮತ್ತೊಮ್ಮೆ ಪ್ರಧಾನಿಯಾಗಿ ಪ್ರಮಾಣವಚನ ಸ್ವೀಕರಿಸಿದ್ದರು. ಇವತ್ತಾದರೋ ಬೆಳಗ್ಗೆ ಒಂಬತ್ತು ಗಂಟೆಗೇ ಎಲ್ಲಾ ಅರ್ಥದಲ್ಲೂ ಮರಣ ಹೊಂದಿದ್ದ ಪ್ರಧಾನಮಂತ್ರಿಯ ನಿಧನ ವಾರ್ತೆಯನ್ನು ಬಿತ್ತರಿಸಲಿಕ್ಕೇನೇ ಅನೇಕ ಗಂಟೆಗಳಷ್ಟು ಕಾಲ ವಿಳಂಬವಾಗಿತ್ತು. ಈ ವಿಳಂಬವೇ ಅಪಾಯಕಾರಿಯಾದ ಅನೇಕ ಬೆಳವಣಿಗೆಗಳಿಗೆ ನಾಂದಿಯಾಗುತ್ತಿತ್ತು.

ರವಿ ಪುನಃ ಚಾರಿತ್ರಿಕ ಮಹತ್ತ್ವದ ಈ ಮುಹೂರ್ತದ ಪ್ರಧಾನ ನಟರನ್ನು ಗಮನಿಸಿದ. ರಾಜೀವರ ಹೆಗಲ ಮೇಲೆ ಪಿತೃಭಾವದೊಂದಿಗೆ ಕೈಯಿರಿಸಿ ಏನೋ ಮಾತನಾಡುತ್ತಿದ್ದಾರೆ ಜೈಲ್ ಸಿಂಗ್. ರಾಜೀವರ ಮುಖ ಮ್ಲಾನವಾಗಿದ್ದರೂ ಈ ಮುಹೂರ್ತದ ಗಾಂಭೀರ್ಯವಷ್ಟೂ ಪ್ರೌಢವಾದ ಆ ಮುಖದಲ್ಲಿ ಪ್ರತಿಫಲಿಸುತ್ತಿದೆ. ತಾಯಿಯ ದಾರುಣ ಮರಣ ಅವರನ್ನು ವ್ಯಥಿತ ಹೃದಯಿಯನ್ನಾಗಿ ಮಾಡಿದೆ. ಆದರೂ ಪೂರ್ಣ ಸಂಯಮದೊಂದಿಗೆ ಅವರು ಆ ದುಃಖವನ್ನು ಅದುಮಿ ಹಿಡಿದಿರುವರು. ತಾನು, ಕೊಲೆಯಾದ ತಾಯಿಯ ಮಗನಷ್ಟೇ ಅಲ್ಲವೆಂದೂ, ಎಪ್ಪತ್ತು ಕೋಟಿ ಜನರ ಭವಿಷ್ಯವಷ್ಟೂ ತನ್ನ ಹೆಗಲ ಮೇಲೆ ಅರ್ಪಿತವಾಗುತ್ತಿದೆ ಎಂದೂ ಈ ಮುಹೂರ್ತ ಕೇವಲ ತನ್ನೊಬ್ಬನದ್ದಷ್ಟೇ ಅಲ್ಲವೆಂದೂ ಬರಲಿರುವ ಪೀಳಿಗೆಗಳು ಕೂಡ ಈ ನಿಮಿಷಾರ್ಧವನ್ನು ಕಾಲದ ಟೆಲಿಸ್ಕೋಪ್ ಮೂಲಕ ವರ್ಷಗಳ ಬಳಿಕವೂ ನೋಡಿ ಮೌಲ್ಯಮಾಪನ ಮಾಡಲಿದೆಯೆಂದೂ ಅವರಿಗೆ ಪೂರ್ಣ ನಂಬಿಕೆಯಿತ್ತು. ತನ್ನಲ್ಲಿ ಅರ್ಪಿತವಾದ ಜವಾಬ್ದಾರಿಗಳನ್ನು ಸಮರ್ಪಕವಾಗಿ ನಿರ್ವಹಿಸಲು ತನಗೆ ಸಾಧ್ಯವಾಗಲಿ ಎಂದು ಅವರು ಮೌನವಾಗಿ ಪ್ರಾರ್ಥಿಸುತ್ತಿರಬಹುದು. ಕೋಮುವಾದಗಳ, ಜಾತಿವಾದಗಳ ಹುಚ್ಚೆದ್ದ ಗಲಭೆಗಳಿಂದಾಗಿ ತನಗೂ ತನ್ನ ಅತ್ಯಂತ ಪ್ರೀತಿಯ ಕುಟುಂಬಕ್ಕೂ, ತನ್ನ ಅಮ್ಮನಿಗಾದ ಅದೇ ದುರಂತ ಸಂಭವಿಸಬಹುದೇನೊ ಎಂಬ ಭಯ ಅವರನ್ನು ಕಾಡುತ್ತಿರಲೂ ಬಹುದು. ತನ್ನ ತಾಯಿ ಮತ್ತು ತಾತ ಅನೇಕ ವರ್ಷಗಳ ಕಾಲ ಆಳಿಕೊಂಡಿದ್ದ ಈ ಸ್ಥಾನ ತನ್ನ ಕೈಗಳಲ್ಲಿ ಸುರಕ್ಷಿತವಾದೀತೆ ಎಂಬ ಆತಂಕ ಅವರ ಮುಖದಲ್ಲಿ ಗೋಚರಿಸುತ್ತಿತ್ತು.

ಪಿಸು ಧ್ವನಿಯಲ್ಲಿ ಮಾತನಾಡಿಕೊಂಡಿದ್ದ ವಿ.ಐ.ಪಿ.ಗಳೆಡೆಯಲ್ಲಿ ಶಿವಶಂಕರರನ್ನೂ ಬೂಟಾಸಿಂಗರನ್ನೂ ಘನಿಖಾನ್ ಚೌಧುರಿಯವರನ್ನೂ ಸೀತಾರಾಂ ಕೇಸರಿಯವರನ್ನೂ ಅರುಣ್ ಸಿಂಗರನ್ನೂ ಬಲರಾಂ ಜಾಖಡ್‌ರನ್ನೂ ರವಿ ಗುರುತಿಸಿದ. ಸಿಬ್ಬಂದಿ ಪ್ರಮುಖರಲ್ಲೂ ಪರಿಚಿತ ಮುಖಗಳನ್ನು ಗಮನಿಸಿದ.

ಕ್ಯಾಬಿನೆಟ್ ಸೆಕ್ರೆಟರಿ ಕೃಷ್ಣರಾವ್ ಸಾಹಿಬ್, ಪ್ರಧಾನಿಯ ಪ್ರಧಾನ ಕಾರ್ಯದರ್ಶಿ ಅಲೆಕ್ಸಾಂಡರ್, ಗೃಹ ಕಾರ್ಯದರ್ಶಿ ವಾಲಿ, ರಾಷ್ಟ್ರಪತಿಗಳ ಕಾರ್ಯದರ್ಶಿ ಬಂದೋಪಾಧ್ಯಾಯ, ಧವನ್, ಇಕಾನಾಮಿಕ್ ಸೆಕ್ರೆಟರಿ, ಫೈನಾನ್ಸ್ ಸೆಕ್ರೆಟರಿ, ಫಾರಿನ್ ಸೆಕ್ರೆಟರಿ ಮತ್ತು ವಿಜಯಶಂಕರ್ ತ್ರಿಪಾಠಿ.

ಇಂದಿರಾರಿಗೆ ತೀರಾ ನಿಕಟವಾಗಿದ್ದ ಜನಗಳು ಇನ್ನೂ ಗಲಿಬಿಲಿಯಿಂದ ಮುಕ್ತರಾಗಿಲ್ಲ. ಇಂದಿರಾರ ಅಗಲಿಕೆ ಅವರ ಅಸ್ತಿತ್ವವನ್ನೇ ಪ್ರಶ್ನಿಸುವಂತಿದೆ. ಹೊಸ ಅಧಿಕಾರ ಕೇಂದ್ರದ ಸುತ್ತ ಹೊಸ ಪೂಜಾರಿಗಳ ಪ್ರವೇಶವಾಗುವುದು ಸಹಜವೇ. ಅಲೆಕ್ಸಾಂಡರ್ ಮತ್ತು ಧವನ್ ಯಾರದ್ದೋ ಬೆರಳ ತುದಿಯಿಂದ ಚಲಿಸಲ್ಪಡುವ ಸೂತ್ರದ ಬೊಂಬೆಗಳಂತೆ ಕಂಡು ಬಂದರು.

ರಾಷ್ಟ್ರಪತಿ ಭವನದ ದರ್ಬಾರ್ ಹಾಲ್ ಆಗಲೇ ಬಹುಮಟ್ಟಿಗೆ ತುಂಬಿದೆ. ಎತ್ತರದಲ್ಲಿ ತೂಗಾಡುತ್ತಿರುವ ಗೊಂಚಲು ದೀಪಗಳಿಂದ ಬೆಳಕು ತುಳುಕಿತ್ತು. ವಿ.ಐ.ಪಿ.ಗಳ ಚಿಕ್ಕಪುಟ್ಟ ಗುಂಪುಗಳು ಅಲ್ಲಲ್ಲೆ ನಿಂತು ತಗ್ಗಿದ ದನಿಯಲ್ಲಿ ಮಾತಾಡುತ್ತಿವೆ. ಅವರನ್ನೆಲ್ಲ ಕಾಡುತ್ತಿರುವ ಪ್ರಶ್ನೆಗಳು ಬಹುಮಟ್ಟಿಗೆ ಏಕಪ್ರಕಾರದ್ದೇ–ಹೊಸ ರಾಜ್ಯಭಾರದ ಏರ್ಪಾಟು ಯಾವ ರೀತಿಯದ್ದಿರಬಹುದು; ಹೊಸ ಮಂತ್ರಿ ಮಂಡಲದಲ್ಲಿ ಯಾರ್ಯಾರಿರುತ್ತಾರೆ? ರಾಜಕೀಯ ಕ್ಷೇತ್ರದಿಂದ ಸಂಜಯ್ ನಿಷ್ಕ್ರಮಿಸಿದ ಬಳಿಕ ಅಧಿಕಾರದ ಒಳಕೊಠಡಿಗಳಲ್ಲಿ ನೆಲೆಯೂರಿದ್ದ ರಾಜೀವ್ ಮತ್ತು ಸಂಗಡಿಗರು ಹಳೇ ಪೀಳಿಗೆಯನ್ನು ತಳಮಳಗೊಳಿಸಿದ್ದು ಅಷ್ಟಿಷ್ಟಲ್ಲ. ಕಂಪ್ಯೂಟರ್ ಬಾಯ್ಸ್ ಎಂಬ ಅಡ್ಡ ಹೆಸರಿನಲ್ಲಿ ಅವರು ಗುರುತಿಸಲ್ಪಟ್ಟರು. ಧೋತಿಯುಟ್ಟು, ಟೋಪಿ ತೊಟ್ಟು, ಪಾನ್ ಜಗಿವ ಡೊಳ್ಳು ಹೊಟ್ಟೆಯ ಹಳಬರು ಹಂತಹಂತವಾಗಿ ಅವಗಣಿಸಲ್ಪಟ್ಟರು. ಆದರೂ ಅವರ ಹಿತಾಸಕ್ತಿಗಳನ್ನು ಸಂರಕ್ಷಿಸುವ ಮಟ್ಟಿಗೆ ಇಂದಿರಾ ಪರೋಕ್ಷವಾಗಿ ಸಹಾಯ ಮಾಡುತ್ತಿದ್ದರು. ಆಕೆಯ ಅಗಲಿಕೆಯೊಂದಿಗೆ ದೆಹಲಿಯ ರಾಜಕೀಯ ಕ್ಷೇತ್ರ ಸಂಪೂರ್ಣ ಬದಲಾಗಲಿದೆ ಎಂಬುದು ನಿಸ್ಸಂಶಯ. ಈತನಕ ನೇಪಥ್ಯದೊಳಗೆ ಮುದುಡಿಕೊಂಡಿದ್ದ ಹುಡುಗರು ಮುಕ್ತವಾದ ದಿಟ್ಟತನದೊಂದಿಗೆ ರಂಗಸ್ಥಳದ ಸೀಮಿತ ಸ್ಥಳದಲ್ಲಿ ತಮ್ಮ ಸ್ಥಾನ ಭದ್ರಪಡಿಸಲಿದ್ದಾರೆ.

ಗೋಡೆ ಗಡಿಯಾರದಲ್ಲಿ ೬.೫೭. ಯಾವುದೋ ಅದೃಶ್ಯ ಹಸ್ತ ನೀಡಿದ್ದ ಸೂಚನೆಯಿಂದೆಂಬಂತೆ ಹಾಲ್‌ನಲ್ಲಿ ಇದ್ದಕ್ಕಿದ್ದಂತೆ ಮೌನ ಹಬ್ಬಿತ್ತು. ಆ ನಿಶ್ಶಬ್ದತೆಯಲ್ಲಿ ರಾಜೀವರ ಶಾಂತಸ್ವರ ಹೊಮ್ಮಿತು. ಐ ರಾಜೀವ ಗಾಂಧಿ... ಟೆಲಿವಿಷನ್ ಕ್ಯಾಮೆರಾಗಳ ಕಣ್ಣು ಕುಕ್ಕಿಸುವ ಬೆಳಕು. ಪ್ರೆಸ್ ಫೋಟೋಗ್ರಾಫರ್‌ಗಳು ಅನುಕೂಲವಾದ ಆ್ಯಂಗಲ್ ಫೋಟೋಗಳಿಗಾಗಿ ಅಲ್ಪಸ್ವಲ್ಪ ಬಲ ಪ್ರದರ್ಶನಕ್ಕೂ ಮುಂದಾದರು. ಚರಿತ್ರೆಯ ಪುಟಗಳಿಗೋಸ್ಕರ ಕಾದಿರಿಸಲು ಈ ಅಪೂರ್ವ ಕ್ಷಣದ ಚಿತ್ರಗಳಿಗಾಗಿ ಅವರು ಕಚ್ಚಾಡುತ್ತಿರುವರು.



ರವಿಗೆ ನೆನೆಯದಿರಲು ಸಾಧ್ಯವಾಗಲಿಲ್ಲ–ಇಂದಿರಾಗಾಂಧಿ ಪ್ರಥಮ ಬಾರಿ ಪ್ರಧಾನ ಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಿದ್ದ ದಿನ. ಅಂದು ವಾತಾವರಣ ಬಹಳಷ್ಟು ಸಂತಸಪ್ರದವಾಗಿತ್ತು. ಅಶೋಕ ಹಾಲ್‌ನ ಗೊಂಚಲು ದೀಪಗಳು ಇಂದಿಗಿಂತಲೂ ಹೆಚ್ಚು ಬೆಳಕಿನ ಹೊನಲನ್ನು ಹರಿಸಿದ್ದವು. ಪ್ರಮಾಣವಚನ ಬೋಧಿಸಿದ್ದ ಡಾಕ್ಟರ್ ರಾಧಾಕೃಷ್ಣನ್‌ರ ಮುಖ ಜೈಲ್ ಸಿಂಗರ ಮುಖದ ಹಾಗೆ ಮ್ಲಾನವಾಗಿರಲಿಲ್ಲ. ಇಂದಿರಾರ ಮುಖವಾದರೊ ಮೊಗಲ್ ಗಾರ್ಡನ್‌ನಿಂದ ಆಗತಾನೆ ಕಿತ್ತ ಗುಲಾಬಿ ಹೂವಿನಂತೆ ಸುಂದರವೂ, ಶೋಭಾಯಮಾನವೂ ಆಗಿತ್ತು.

ಇಂದಿರಾ ಅವರು ರಾಜೀವರ ಹಾಗೆ ಭಾರತದ, ರಾಜಕೀಯದ ಶಿಶುವಾಗಿರಲಿಲ್ಲ. ೧೯೫೯ರಲ್ಲೆ ಆಕೆ ಕಾಂಗ್ರೆಸ್ ಅಧ್ಯಕ್ಷೆಯಾಗಿದ್ದರಲ್ಲ. ಸ್ವರಾಜ್ಯ ಪ್ರಾಪ್ತಿಗೆ ಮುನ್ನ ಮೂವರು ಮಹಿಳೆಯರು ನ್ಯಾಶನಲ್ ಕಾಂಗ್ರೆಸ್‌ನ ಅಧ್ಯಕ್ಷೆಯರಾಗಿದ್ದರು. ಆದರೆ, ೧೯೪೭ರ ಬಳಿಕ ಕಾಂಗ್ರೆಸ್ ಅಧ್ಯಕ್ಷೆಯಾಗಿ ಆಯ್ಕೆಯಾಗಿದ್ದ ಮಹಿಳೆ ಇಂದಿರಾ ಒಬ್ಬರೇ–ಜವಾಹರಲಾಲರ ಮಗಳಾಗಿದ್ದರು ಇಂದಿರಾ ಎಂಬುದು ಆ ಹುದ್ದೆ ಗಳಿಕೆಗೆ ಬಹಳಷ್ಟು ನೆರವಾಗಿದೆ ಎಂಬುದು ಖಚಿತ. ಆದರೆ ಅದಷ್ಟೇ ಆಗಿತ್ತು ಆ ಪದವಿ ಪಡೆಯಲು ಆಕೆ ಹೊಂದಿದ್ದ ಅರ್ಹತೆ ಎನ್ನುವಂತಿಲ್ಲ. ಜವಾಹರ್‌ಲಾಲರ ಹೋಸ್ಟಸ್ ಆಗಿ ಅನೇಕ ವರ್ಷಗಳ ಕಾಲ, ರಾಷ್ಟ್ರದ ಅದೃಷ್ಟ ನಿರ್ಣಯಿಸಲಿರುವ ನಿರ್ಣಾಯಕ ನಿಮಿಷಗಳಲ್ಲಿ ಇಂದಿರಾ ರಂಗದ ಮಧ್ಯದಲ್ಲೆ ಇದ್ದಿದ್ದರಲ್ಲ. ಹದಿನೇಳು ವರ್ಷಗಳ ತನಕ ಜವಾಹರಲಾಲರು ಪ್ರಧಾನಿ ಹುದ್ದೆಯನ್ನು ಅಲಂಕರಿಸಿದ್ದರು. ಭಾರತದ ಅದೃಷ್ಟ ನಿರ್ಣಯಿಸುವುದರಲ್ಲಿ ಜವಾಹರಲಾಲರು ನಿರ್ವಹಿಸಿದ್ದ ಪಾಲು ಸಾಟಿಯಿಲ್ಲದ್ದು. ಭಾರತದ ವಿದೇಶಾಂಗ ನೀತಿಯನ್ನು ರೂಪಿಸುವುದರಲ್ಲಿ, ಪಂಚ ವಾರ್ಷಿಕ ಯೋಜನೆಗಳ ಮೂಲಕ ಭಾರತದ ಆರ್ಥಿಕ ವ್ಯವಸ್ಥೆಯನ್ನು ಕಟ್ಟುವುದರಲ್ಲಿ, ಸಾರ್ವಜನಿಕ ಕ್ಷೇತ್ರ ಮತ್ತು ಖಾಸಗಿ ಕ್ಷೇತ್ರಗಳ ಸಮಂಜಸವಾದ ಸಾಮರಸ್ಯದಿಂದ ಕೂಡಿದ್ದ ಪರಸ್ಪರ ಸಂಬಂಧದ ಮೂಲಕ ಭಾರತದ ಆರ್ಥಿಕ ವ್ಯವಸ್ಥೆಗೆ ತಳಪಾಯ ಹಾಕುವುದರಲ್ಲೆಲ್ಲ ಅವರಿತ್ತ ಕೊಡುಗೆಯನ್ನು ಮರೆಯುವಂತಿಲ್ಲ. ಕೊನೆಗೆ ಚೌ ಎನ್ ಲಾಯ್ ಅವರ ಚೀನಾ ಅವರನ್ನು ಬೆನ್ನ ಹಿಂದಿನಿಂದ ಇರಿಯದೆ ಇರುತ್ತಿದ್ದರೆ ಅವರ ಅಂತಿಮ ದಿನಗಳು ಇನ್ನಷ್ಟು ಉಲ್ಲಾಸಪೂರ್ಣವಾಗಿರುತ್ತಿತ್ತು.

ಜವಾಹರಲಾಲರ ನಿಧನಾನಂತರ ಶಾಸ್ತ್ರಿ ಪ್ರಧಾನಮಂತ್ರಿಯಾದಾಗ ಅವರ ಒತ್ತಾಯಕ್ಕೆ ಮಣಿದು ಐ ಆ್ಯಂಡ್ ಬಿ ಸಚಿವಾಲಯದ ಹೊಣೆಯನ್ನು ಇಂದಿರಾ ವಹಿಸಿಕೊಂಡಿದ್ದರು. ೧೯೬೬ ಜನವರಿ ೧೧ರಂದು ತಾಶ್ಕೆಂಟಿನಲ್ಲಿ ಶಾಸ್ತ್ರಿ ನಿಧನರಾದರು. ಅವರು ಕೇವಲ ಹತ್ತೊಂಬತ್ತು ತಿಂಗಳಷ್ಟೇ ಪ್ರಧಾನಿ ಹುದ್ದೆಯನ್ನು ನಿರ್ವಹಿಸಿದ್ದರು.

ಶಾಸ್ತ್ರಿ ಮಡಿದು ಒಂಬತ್ತು ದಿನಗಳ ಅನಂತರ ಇಂದಿರಾ ಪ್ರಧಾನಿಯಾದರು. ಆಗ ದೆಹಲಿಯ ಹಿಮಗಾಲ ಅದರ ಅಂತಿಮ ಹಂತಕ್ಕೆ ತಲಪಿತ್ತು. ಪ್ರಜಾಪ್ರಭುತ್ವ ದಿನಾಚರಣೆಗೆ ಸಜ್ಜಾಗುತ್ತಾ ಇತ್ತು ದೆಹಲಿ. ರಾಜಪಥದ ಇಬ್ಬದಿಗಳಲ್ಲೂ ಹಸುರು ಬಣ್ಣ ಬಳಿದ ಗ್ಯಾಲರಿಗಳು ಎದ್ದಿದ್ದವು. ಲೈಟ್ ಕಂಬಗಳೂ, ರೈಲಿಂಗ್‌ಗಳೂ, ಹೊಸ ಬಣ್ಣ ತಳೆದಿದ್ದವು. ರಾಜಪಥದ ಎರಡೂ ಪಾರ್ಶ್ವಗಳಲ್ಲೂ ತೋರಣಗಳು; ನಿಶಾನೆಗಳು. ಹೌದು ಅಷ್ಟರಲ್ಲೇ ಶಾಸ್ತ್ರೀಯವರ ನಿಧನವನ್ನು ಒಂದು ದುಃಸ್ವಪ್ನವೆಂಬಂತೆ ಭಾರತದ ಜನತೆ ಮರೆತಿತ್ತು. ಮುಂಜಾನೆಯ ಎಳೆ ಬಿಸಿಲಿನಲ್ಲಿ ನವುರಾದ ಮುಸುಕು ಮಂಜಿನ ಬುರುಖ ತೊಟ್ಟ ಒಂದು ಹೊಸ ಹೂವಿನ ಹಾಗಿದ್ದ ಇಂದಿರಾ ಪ್ರಮಾಣವಚನ ಸ್ವೀಕಾರ ಮಾಡಿದ್ದು ೧೯೬೬ ಜನವರಿ ೨೪ರಂದಾಗಿತ್ತು.

ಇಂದಿರಾಜಿಗೆ ಮೊದಲು ಶ್ರೀಲಂಕಾದ ಸಿರಿಮಾವೊ ಒಬ್ಬರೇ ಒಂದು ರಾಷ್ಟ್ರವನ್ನು ಆಳಿದ್ದ ಜಗತ್ತಿನ ಏಕ ಮಾತ್ರ ಮಹಿಳಾ ಪ್ರಧಾನಿಯಾಗಿದ್ದರು.

ಇಂದಿರಾಜಿ ಡಾಕ್ಟರ್ ರಾಧಾಕೃಷ್ಣನ್ ಹೇಳಿಕೊಡುತ್ತಾ ಇದ್ದ ಪ್ರಮಾಣವಚನವನ್ನು ತಡವರಿಸದೆ ದೃಢಸ್ವರದಲ್ಲಿ ಪುನರುಚ್ಚರಿಸುತ್ತಾ ಇದ್ದ ದೃಶ್ಯ ಈಗಲೂ ಕಣ್ಣಮುಂದೆ ಇದೆ. ಬೆಳ್ಳಿ ಜರಿಯ ಕೇಸರಿ ಅಂಚುಗಳ ಬಿಳಿ ರೇಶಿಮೆ ಸೀರೆ ಉಟ್ಟಿದ್ದವರು. ಕಿರುಗಾತ್ರದ ರುದ್ರಾಕ್ಷಿಗಳ ಸರ, ಕೈಗಡಿಯಾರ, ಬಾಬ್ ಮಾಡಲಾದ ನರೆ–ಇವಿಷ್ಟೇ ಅವರ ಆಭರಣಗಳಾಗಿದ್ದುವು. ಅರಳಿದ ನಗೆಯಲ್ಲಿ ಪ್ರಧಾನಿ ಹುದ್ದೆ ದೊಡ್ಡ ಹೊರೆಯೇನೂ ಅಲ್ಲವೆಂಬ ತುಂಟತನ.

ರಾಜೀವರ ಸ್ವರ ಸ್ಪಷ್ಟವೂ ಭಾವರಹಿತವೂ ಆಗಿತ್ತು, ಒಂದೊಂದು ಶಬ್ದವನ್ನು ಉಚ್ಚರಿಸುವಾಗಲೂ ತಡವರಿಸದಿರಲು ಪ್ರಜ್ಞಾಪೂರ್ವಕ ಪ್ರಯತ್ನಿಸುತ್ತಿರುವಂತೆ. ಆದರೂ ಶಾಂತವೂ ದೃಢವೂ ಆಗಿತ್ತು ಆ ಸ್ವರ. ತಾತ ಮತ್ತು ತಾಯಿ ಅಲಂಕರಿಸಿದ್ದ ಸ್ಥಾನವನ್ನು ವಹಿಸಿಕೊಳ್ಳುವ ಮುಹೂರ್ತದಲ್ಲಿ ಪ್ರಮಾಣ ವಚನದ ಉತ್ತರಾರ್ಧಕ್ಕೆ ತಲಪಿದಾಗ ಆ ಮಾತುಗಳು ಅದುರಿದ್ದವೇ? ತನ್ನ ಅನಿಸಿಕೆಯಿರಬಹುದು. ಬಳಿಕ ರಿಜಿಸ್ಟರ್‌ನಲ್ಲಿ ರುಜು ಹಾಕುವಾಗ ಆ ಬೆರಳುಗಳಲ್ಲಿ ನವುರಾದ ಕಂಪನದ ಅನುಭವವಾಗಿತ್ತು.

ಅಮ್ಮನಲ್ಲಿದ್ದ ಅನುಭವದ ಶ್ರೀಮಂತಿಕೆ ತನ್ನಲ್ಲಿಲ್ಲವೆಂದು ರಾಜೀವ್ ಒಂದು ಕ್ಷಣ ಯೋಚಿಸಿರಬಹುದು. ೧೯೮೨ ಜೂನ್‌ನಿಂದ ಅಮೇಠಿಯ ಎಂ.ಪಿ.ಯೂ ೧೯೮೩ ಫೆಬ್ರವರಿಯಿಂದ ಕಾಂಗ್ರೆಸ್‌ನ ಏಳು ಮಂದಿ ಜನರಲ್ ಸೆಕ್ರೆಟರಿಗಳಲ್ಲಿ ಓರ್ವನೂ ಆಗಿರುವನೆಂಬ ಅರ್ಹತೆ ಜಗತ್ತಿನ ಅತಿದೊಡ್ಡ ಪ್ರಜಾಪ್ರಭುತ್ವದ ಪ್ರಧಾನಮಂತ್ರಿ ಸ್ಥಾನಕ್ಕೆ ಧಾರಾಳ ಸಾಕೆಂದು ಸ್ವತಃ ರಾಜೀವರೂ ಹೇಳಲಾರರು. ಪ್ರಣಬ್, ನರಸಿಂಹ ರಾವ್ ಮತ್ತು ಬೂಟಾ ಸಿಂಗ್ ಸಹ ರಾಜೀವರ ಜತೆ ಪ್ರಮಾಣವಚನ ಸ್ವೀಕರಿಸಿದರು. ಪ್ರಧಾನ ಮಂತ್ರಿಯನ್ನು ಕೊಂದದ್ದು ಸಿಕ್ಖರು ಎಂಬ



ಕಾರಣಕ್ಕಾಗಿಯೇ ಸಿಕ್ಖನೇ ಆಗಿರುವ ಬೂಟಾ ಸಿಂಗರನ್ನು ಮೊದಲ ಸಲವೇ ಸಚಿವ ಸಂಪುಟಕ್ಕೆ ಸೇರಿಸಿದ್ದಿರಬಹುದೆ? ರೊಚ್ಚಿಗೆದ್ದಿರುವ ಸಿಕ್ಖರಲ್ಲಿ ಸಮಾಧಾನವನ್ನರಸುವದರ ಸೂಚನೆ ಇರಬಹುದು ಇದು.

ಸಮಾರಂಭ ಮುಗಿದ ಬಳಿಕ ರಾಷ್ಟ್ರಪತಿ ಭವನದಿಂದ ಹೊರಬಿದ್ದಾಗ ಹವೆಯಲ್ಲಿ ಚಳಿಯ ನವುರಾದ ಮುಳ್ಳುಗಳು. ಬೀದಿ ದೀಪಗಳ ಸುತ್ತಲೂ ಮಂಜಿನ ಪ್ರಭಾವಳಿಗಳು.

ದೆಹಲಿಯಲ್ಲಿ ಶಿಶಿರ ಶುರುವಾಗಿದೆ.

ಇನ್ನೂ ತನ್ನ ಉಣ್ಣೆ ವಸ್ತ್ರಗಳನ್ನು ಡ್ರೈ ಕ್ಲೀನರ್‌ನಿಂದ ಮರಳಿ ಪಡೆಯಲಿಲ್ಲವೆಂದು ರವಿ ವಿಷಾದದೊಂದಿಗೆ ಜ್ಞಾಪಿಸಿಕೊಂಡನು. ಶೈತ್ಯ ಹೆಪ್ಪುಗಟ್ಟಿಸುವ ಇನ್ನೊಂದು ಶಿಶಿರದ ನಾಂದಿಯನ್ನು ಬರೆಯುತ್ತಿದೆ: ಶೀತಲಗಾಳಿ.

ಆತ ಕಿಟಕಿ ಗಾಜುಗಳನ್ನು ಮೇಲೆ ಮಾಡಿದ. ಬೀದಿ ದೀಪಗಳ ಬೆಳಕಿನಲ್ಲಿ ಒಂದು ಮೃತ್ಯು ರೇಖೆಯಾಗಿ ಬಿದ್ದುಕೊಂಡಿರುವ ರಾಜಪಥದ ಗುಂಟ ಕಾರು ಧಾವಿಸುತ್ತಾ ಇದೆ. ಇದ್ದಕ್ಕಿದ್ದಂತೆ ಆತನಿಗೆ ಆಯಾಸ ಮತ್ತು ಹಸಿವೆ ಅನುಭವಕ್ಕೆ ಬಂದವು. ಬೆಳಗ್ಗೆ ತಾನು ತಿಂದದ್ದು ಎರಡು ಸ್ಲೈಸ್ ಬ್ರೆಡ್ ಮತ್ತು ಒಂದು ಮೊಟ್ಟೆ ಮಾತ್ರ ಎಂಬುದನ್ನು ಆತ ಜ್ಞಾಪಿಸಿಕೊಂಡ. ಬಳಿಕ ಒಂದು ಬಟ್ಟಲು ಚಹಾ ಕುಡಿಯಲಿಕ್ಕೆ ಕೂಡ ಸಮಯಾವಕಾಶ ಸಿಕ್ಕಲಿಲ್ಲವಲ್ಲ.

* * *

ರವಿ ಫ್ಲ್ಯಾಟ್‌ಗೆ ಮರಳಿ ತಲಪಿದಾಗ ಗಂಟೆ ಎಂಟು ಕಳೆದಿತ್ತು. ಎಂತಹ ದಿನ! ಪ್ಯಾಂಟ್, ಶರ್ಟ್‌ಗಳನ್ನು ಕಳಚಿ ಹಾಕಿ ಲುಂಗಿ ಸುತ್ತಿಕೊಂಡ. ಬಚ್ಚಲು ಮನೆಗೆ ಹೋಗಿ ಗೀಸರ್ ಆನ್ ಮಾಡಿದ. ಬಿಸಿ ನೀರಿನಲ್ಲಿ ಮಿಂದು ಒಳಗಿರುವ ಕಫೆಟರಿಯಿಂದ ಏನಾದರೂ ಸೇವಿಸಬಹುದು ಎಂದುಕೊಂಡ. ನೀರು ಬಿಸಿಯಾಗುವದಕ್ಕೆ ಕಾಯುತ್ತ, ದಿಂಬುಗಳಿಗೊರಗಿ ಸುಮ್ಮಗೆ ಕುಳಿತುಕೊಂಡ. ಅರ್ಧ ಓದಿ ನಿಲ್ಲಿಸಿದ್ದ 'ಸಿಡ್ನಿ ಶೆಲ್ಡನ್' ಕೈಗೆತ್ತಿಕೊಂಡ. ಎರಡು ಪುಟಗಳನ್ನು ಓದಿದ. ಇಲ್ಲ, ಯಾವುದೂ ಮನಸ್ಸಿಗೆ ಹತ್ತುತ್ತ ಇಲ್ಲ. ಫಕ್ಕನೆ ಜ್ಞಾಪಿಸಿಕೊಂಡ ಲೆಟರ್ ಬಾಕ್ಸ್ ನೋಡಲಿಲ್ಲ. ವಾರದಲ್ಲಿ ಎರಡೋ ಮೂರೋ ಬಾರಿ ಮಾತ್ರ ಪೆಟ್ಟಿಗೆ ತೆರೆದು ನೋಡುತ್ತಿದ್ದ. ಮಹತ್ತ್ವದ ಸಂಗತಿಗಳಾವುದನ್ನೂ ಪತ್ರದ ಮೂಲಕ ನಿರೀಕ್ಷಿಸುತ್ತಾ ಇಲ್ಲ... ಕಾಂಪ್ಲಿಮೆಂಟರಿಯಾಗಿ ದೊರೆಯುವ ಮ್ಯಾಗಜಿನ್‌ಗಳೇ ಹೆಚ್ಚಾಗಿರುತ್ತವೆ. ತನ್ನ ಏಜೆಂಟ್ ಕಳುಹಿಸುತ್ತಿದ್ದ, ಹಣಕಾಸು ಸಂಸ್ಥೆಗಳ ಶೇರ್‌ನ ಅರ್ಜಿ ಪತ್ರಗಳು, ಶೇರ್ ಲಭ್ಯವಾಗದೆ ಮರಳಿ ಬರುತ್ತಿದ್ದ ಚೆಕ್‌ಗಳು. ಕೆಲವೊಮ್ಮೆ ಒಂದು ಲಾಟರಿಯ ಹಾಗೆ ಅಪರೂಪವಾಗಿ ಮಾತ್ರ ಯಾವುದಾದರು ಬ್ಲೂ–ಚಿಪ್ ಕಂಪೆನಿಯ ಶೇರ್ ಸರ್ಟಿಫಿಕೇಟ್‌ಗಳು, ಇಂಟರೆಸ್ಟ್ ವಾರಂಟ್‌ಗಳು. ಇವೆಲ್ಲ ಎರಡೋ ಮೂರೋ

ದಿನಗಳ ತನಕ ಲೆಟರ್ ಬಾಕ್ಸ್‌ನಲ್ಲೇ ಬಿದ್ದುಕೊಂಡರೂ ಅನಾಹುತವೇನೂ ಸಂಭವಿಸಲಾರದು.

ಆತ ಎದ್ದು ಲೆಟರ್ ಬಾಕ್ಸ್ ತೆರೆದ. ಹೌದು. ನಿರೀಕ್ಷಿಸಲ್ಪಟ್ಟವುಗಳೇ. ಸಾರ್ವಜನಿಕ ಕ್ಷೇತ್ರದ ಎರಡು ಕಂಪೆನಿಗಳಿಂದ, ಬಾಂಡ್ ಪಡೆಯಲಿಕ್ಕಿರುವ ಅರ್ಜಿ ನಮೂನೆಗಳು. ನಗರದಲ್ಲಿ ಹೊಸತಾಗಿ ಆರಂಭಿಸಲಾದ ಮಾಸಿಕೆಯೊಂದರ ಕಾಂಪ್ಲಿಮೆಂಟರಿ ಕಾಪಿ. ಇನ್ಷೂರೆನ್ಸ್‌ನ ಪ್ರೀಮಿಯಂ ನೋಟೀಸ್, ಯಾವನೋ ಒಬ್ಬ ಆಸಾಮಿ ಕಳುಹಿಸಿರುವ ಒಂದು ಬೆದರಿಕೆ ಪತ್ರ. ಅಪಾಯಕಾರಿಯೇನೂ ಅಲ್ಲ. ಯಾವನೋ ಬಾಬಾನ ಗುಣಾತಿಶಯಗಳನ್ನು ವಿವರಿಸುತ್ತ ಇಪ್ಪತ್ತು ಮಂದಿಯ ವಿಳಾಸಕ್ಕೆ ಪತ್ರ ಬರೆಯಬೇಕು. ಇಲ್ಲವಾದರೆ.........

ಓ, ಇನ್ನೊಂದು ಪತ್ರ ಕೂಡ ಇದೆ. ಉರುಟುರುಟಾದ ಹಸ್ತಾಕ್ಷರದಲ್ಲಿ ವಿಳಾಸ ಬರೆಯಲಾಗಿದೆ. ತೆರೆದು ನೋಡಿದ. ಅಮ್ಮನ ಪತ್ರ. ನಾಲ್ಕೇ ಪಂಕ್ತಿಗಳಿವೆ. "ಇಂದು ಗೊತ್ತಲ್ಲವೆ ನಿನಗೆ? ಅವಳು ಈ ತಿಂಗಳ ಮೂವತ್ತರಂದು ಕೇರಳಾದಿಂದ ಅಲ್ಲಿಗೆ ಹೊರಡುತ್ತಾಳೆ. ನೀನು ನಿಲ್ದಾಣದಲ್ಲಿ ಕಾದು ನಿಲ್ಲಬೇಕು. ಹೆಚ್ಚಿನ ವಿವರಗಳನ್ನು ಅವಳೇ ಬರೆಯುತ್ತಾಳೆ. ನಿನ್ನ ಅಮ್ಮ."

ಅಮ್ಮನ ಪತ್ರಗಳು ಯಾವತ್ತೂ ಅಗತ್ಯ ವಿಷಯಗಳನ್ನಷ್ಟೇ ಒಳಗೊಂಡಿರುತ್ತವೆ. ಅನಗತ್ಯವಾಗಿ ಪತ್ರ ಬರೆಯುವ ಪರಿಪಾಠವಿಲ್ಲ. ಮೊದಲೆಲ್ಲ, ವಾರಕ್ಕೊಮ್ಮೆಯಾದರೂ ಪತ್ರ ಬರೆಯಬೇಕೆಂದು ಒತ್ತಾಯಿಸುತ್ತಿದ್ದಳು ಅಮ್ಮ. ಆ ವಿಚಾರದಲ್ಲಿ ತಾನು ಯಾವತ್ತೂ ಸೋಮಾರಿಯಾಗಿದ್ದೆ. ಓರ್ವ ತಾಯಿಗೆ ಮಗ ವಾರ ವಾರವೂ ಬರೆಯುವುದಾದರೂ ಏನನ್ನು? ಇಲ್ಲಿ ನಾನು ಸೌಖ್ಯ. ಅಲ್ಲಿ ಅಮ್ಮನೂ ಸೌಖ್ಯವೆಂದು ಅಂದು ಕೊಂಡಿದ್ದೇನೆ. ಮಳೆಯೆಲ್ಲ ಚೆನ್ನಾಗಿರಬಹುದೆಂದು ನಂಬುತ್ತೇನೆ. ಇದಕ್ಕೆ ಬರೆದ ಮರುಪತ್ರದಲ್ಲಿ ಅಮ್ಮ ಎತ್ತಿ ತೋರಿಸಿದ್ದಳು: ಮಗನೇ ಇದು ಕುಂಭ ಮಾಸ: ಕಡು ಬೇಸಗೆ ಕಾಲ; ಈ ಕಾಲದಲ್ಲಿ ಇಲ್ಲಿ ಮಳೆ ಸುರಿಯಲಾರದೆಂದೂ ನಿನಗೆ ಗೊತ್ತಿಲ್ಲವೆ? ಬೇರೊಂದು ಸಂದರ್ಭದಲ್ಲೂ ಸಂಭವಿಸಿತ್ತು ತನ್ನಿಂದ ಅಚಾತುರ್ಯ; ಪರಿಯಾನದ ಉತ್ಸವವೆಲ್ಲ ಚೆನ್ನಾಗಿ ನಡೆದಿತ್ತಲ್ಲವೆ ಅಮ್ಮ ಈ ವರ್ಷ? ಹೀಗೆ ಕೊನೆಗೊಂಡ ತನ್ನ ಪತ್ರಕ್ಕೆ ಉತ್ತರವಾಗಿ ಅಮ್ಮ ಬರೆದಿದ್ದಳು: ಪರಿಯಾನ ಉತ್ಸವ ಜರಗಿ ಒಂಬತ್ತು ತಿಂಗಳುಗಳಾದವು. ಕುಂಭ ಮಾಸ, ಏಳರಂದೇ ಪ್ರತಿವರ್ಷವೂ ಅದು ನಡೆಯುತ್ತದೆ. ಇನ್ನು ಮೂರು ತಿಂಗಳು ಕಳೀಬೇಕು ಮುಂದಿನ ಉತ್ಸವಕ್ಕೆ.... ಮುಂದೆ ಕಾಲಕಳೆದಂತೆ ಪತ್ರಗಳ ಮಧ್ಯಾಂತರ ವೇಳೆ ಹೆಚ್ಚುತ್ತಾ ಹೋಯಿತು. ಅಮ್ಮ ಮುನಿದುಕೊಳ್ಳಲಿಲ್ಲ. ಯಾವುದೋ ಒಂದು ಪತ್ರದಲ್ಲಿ ಬರೆದೂ ಇದ್ದಳು: ಪತ್ರ ಬಾರದಿದ್ದರೆ ಗಾಬರಿಯಾಗದೆ ಇರಲು ನಾನು ರೂಢಿಸಿಕೊಂಡಿದ್ದೇನೆ, ಈಗ.



ಇಂದುವಿನ ಪತ್ರ. ಒಳ್ಳೆಯ ಹಸ್ತಾಕ್ಷರ, ಕ್ರೀಂ ಕಲರ್‌ನ ಲೆಟರ್‌ಹೆಡ್‌ನ ಬಲ ಬದಿಯ ಮೂಲೆಯಲ್ಲಿ ಒಂದು ನವಿಲುಗರಿಯ ಚಿತ್ರವಿದೆ. ಯಾವ ಸಂಬೋಧನೆಯೂ ಇಲ್ಲ–ಅವಳು ಬರೆದಿರುವುದು: ಕ್ಯಾಲಿಫೋರ್ನಿಯಾ ಯೂನಿವರ್ಸಿಟಿಯಲ್ಲಿ ಒಂದು ಸ್ಕಾಲರ್‌ಶಿಪ್ ಸಿಕ್ಕಿದೆ. ನನ್ನ ಸಂಶೋಧನಾ ವಿಷಯ ಯಾವುದು ಗೊತ್ತೆ? ವೃದ್ಧಾಪ್ಯ. ಹೌದು. ಏಜಿಂಗ್. ವೃದ್ಧಾಪ್ಯದ ರಹಸ್ಯವೇನೆಂದು ತಿಳಿದುಕೊಳ್ಳುವುದು ನನ್ನ ಉದ್ದೇಶ. ನಾನು ದೆಹಲಿಯಲ್ಲಿ ಕೆಲವು ದಿನ ತಂಗಬೇಕಾಗುತ್ತದೆ. ಇಂಡಿಯಾ ಇನ್ಸ್‌ಸ್ಟಿಟ್ಯೂಟ್ ಆಫ್ ಮೆಡಿಕಲ್ ಸೈನ್ಸ್, ಸ್ವಾಸ್ಥ್ಯ ಸಚಿವಾಲಯ, ಶಿಕ್ಷಣ ಇಲಾಖೆಗಳಲ್ಲೆಲ್ಲ ಇರುವ ಕೆಲವರನ್ನು ಕಾಣಬೇಕಾಗಿದೆ. ಅಲ್ಲದೆ, ವೀಸಾ ವಗೈರೆಗಳನ್ನೂ ಸರಿಪಡಿಸಬೇಕಾಗುತ್ತದೆ. ನಾನು ನವೆಂಬರ್ ಒಂದರಂದು ಅಲ್ಲಿ ತಲಪುತ್ತೇನೆ. ನಿಜಾಮುದ್ದೀನ್‌ನಲ್ಲೇ ಇಳಿಯುವುದು ಅನುಕೂಲವೆಂದು ಅಮ್ಮ ಹೇಳುತ್ತಿದ್ದಾರೆ. ನನ್ನ ಗುರುತು ಹಿಡಿಯಲು ಸಾಧ್ಯವಾದೀತೊ ಏನೋ? ವರ್ಷಗಳ ಹಿಂದೆ ನನ್ನನ್ನು ಕಂಡಿರಬಹುದು. ಅದೇನಿದ್ದರೂ ಕಾಫಿ ಬ್ರೌನ್ ಬಣ್ಣದಲ್ಲಿ ಬಿಳಿ ಚೌಕಗಳಿರುವ ರೇಶಿಮೆ ಸೀರೆ ಉಟ್ಟುಕೊಂಡಿರುವ, ಕಿವಿಗಳಲ್ಲಿ ದೊಡ್ಡ ರಿಂಗ್‌ಗಳಿರುವ ಓರ್ವ ಸಾದಾ ಮೈಬಣ್ಣದವಳನ್ನು ಕೇರಳಾ ಎಕ್ಸ್‌ಪ್ರೆಸ್‌ನ ಏರ್‌ಕಂಡೀಷನ್ ಕೋಚ್‌ನ ಹೊರಬದಿಯಲ್ಲಿ ಕಂಡರೆ ಅದು ನಾನೇ ಎಂದು ತಿಳಿದುಕೊಳ್ಳಿ. ಮಿಕ್ಕೆಲ್ಲವೂ ಮುಖತಃ.

ಬಿಸಿ ನೀರನ್ನು ಸುರಿಯುವ ಶವರಿನಡಿಯಲ್ಲಿ ನಿಂತಾಗ ನೆನಪಿಗೆ ತಂದುಕೊಳ್ಳಲು ಪ್ರಯತ್ನಿಸಿದ. ವರ್ಷಗಳ ಹಿಂದೆ ಅಮ್ಮನ ಪತ್ರಗಳಲ್ಲಿ ತಪ್ಪದೆ ಕಾಣಿಸುತ್ತಿದ್ದ ಒಂದು ಹೆಸರಾಗಿತ್ತು ಇಂದು–ಇಂದು ಈಗ ಇಲ್ಲೇ ಇರುವುದರಿಂದ ಮಾತಾಡಿಕೊಂಡಿರಲು ಒಂದು ಜನ ಸಿಕ್ಕಿದ ಹಾಗಾಯ್ತು... ಇಂದು ಪ್ರೀ ಡಿಗ್ರಿ ಪಾಸ್ ಆದಳು. ಕ್ಲಾಸ್ ಇದೆ... ಇಂದು ಬಿ.ಎಸ್.ಸಿ.ಗೆ ಸೇರಿದ್ದಾಳೆ. ಓದುತ್ತಿರುವುದು ಪಶು ವಿಜ್ಞಾನವಂತೆ. ಹಾಸ್ಟೆಲ್‌ನಲ್ಲಿರುತ್ತಾಳೆ.ಶನಿವಾರ ಬಂದು ಭಾನುವಾರವೂ ಇಲ್ಲೇ ಇರುತ್ತಾಳೆ.. ಈಗ ಕಾಲೇಜಿಗೆ ಬಿಡುವು. ಇಂದು ಇಲ್ಲೇ ಇರುವುದರಿಂದ ತುಂಬ ಹಿತವೆನಿಸುತ್ತದೆ... ಇಂದು ಎಂ.ಎಸ್‌ಸಿ.ಗೆ ಸೇರಿದ್ದಾಳೆ. ಅವಳಿಗೆ ಬಿ.ಎಸ್‌ಸಿ.ಗೆ ಚಿನ್ನದ ಪದಕ ಸಿಕ್ಕಿರುವುದನ್ನು ನಾನು ಬರೆದಿದ್ದೇನೆ...

ಹೌದು. ಇಂದುವಿನ ಬಗ್ಗೆ ಗೊತ್ತಿರುವುದು ಇಷ್ಟೇ. ಅಮ್ಮನ ದೂರದ ಸೋದರ ಮಾವನೊಬ್ಬನ ಸಂಬಂಧದ ಹುಡುಗಿ ಅವಳು. ಆರ್ಥಿಕ ಅಡಚಣೆಯಿಂದಾಗಿಯೊ ಅಥವಾ ಆ ಕುಟುಂಬದ ಬಗ್ಗೆ ಅಮ್ಮನಿಗೆ ವಿಶೇಷ ಮಮಕಾರವಿದ್ದುದರಿಂದಲೋ ಇಂದು ಅಮ್ಮನ ಸಂರಕ್ಷಣೆಯಲ್ಲೆ ಬೆಳೆದಿರುವಳು. ಎಂದಾದರೊಮ್ಮೆ ವ್ಯಾವಹಾರಿಕ ಪ್ರಯಾಣದ ಸಂದರ್ಭದಲ್ಲಿ ಮನೆಗೂ ತೆರಳಿ ಅಮ್ಮನನ್ನು ಕಂಡು ಮರಳುತ್ತಿದ್ದ ತನಗೆ ಇಂದುವನ್ನು ಕಾಣುವ ಅವಕಾಶ ದೊರೆತದ್ದು ಒಂದೋ, ಎರಡೋ ಬಾರಿ ಮಾತ್ರ. ಲಂಗ ಕುಪ್ಪಸಗಳನ್ನು ತೊಟ್ಟುಕೊಂಡಿರುವ

ಕೊರಳಲ್ಲಿ ಗುರುವಾಯೂರಪ್ಪನ ಕೆತ್ತನೆಯಿರುವ ಪದಕದ ಸರ ಹಾಕಿಕೊಂಡಿರುವ ಓರ್ವ ಕಿಶೋರಿ. ಮತ್ತೊಂದು ಬಾರಿ ಅವಳು ಮಿಂಚಿನಂತೆ ಕಣ್ಣಿಗೆ ಬಿದ್ದಾಗ ದಾವಣಿಧಾರಿಯಾಗಿ ಬೆಳೆದಿದ್ದಳು. ಎರಡು ಬಾರಿಯೂ ಗಮನ ಸೆಳೆದದ್ದು ಅವಳ ಬೊಗಸೆ ಕಣ್ಣುಗಳು ಮತ್ತು ಸೊಂಟವನ್ನು ಮರೆಮಾಚುವಂತೆ ಹರವಿಕೊಂಡಿದ್ದ ತಲೆಗೂದಲು.

ಥಟ್ಟನೆ ಜ್ಞಾಪಿಸಿಕೊಂಡ. ನಾಳೆ ನವೆಂಬರ್ ಒಂದು. ಇವತ್ತು ಲೆಟರ್ ಬಾಕ್ಸ್ ತೆರೆಯದೆ ಇರುತ್ತಿದ್ದರೆ ಪತ್ರ ನೋಡುತ್ತಿರಲಿಲ್ಲ.

ನಿಜಾಮುದ್ದೀನ್ ನಿಲ್ದಾಣದ ಫ್ಲಾಟ್‌ಫಾರ್ಮಿನಲ್ಲಿ, ಬ್ರೌನ್ ಬಣ್ಣದಲ್ಲಿ ಬಿಳಿ ಚೌಕಗಳಿರುವ ಸೀರೆಯುಟ್ಟಿರುವ, ಕಿವಿಗಳಲ್ಲಿ ದೊಡ್ಡ ಗಾತ್ರದ ರಿಂಗ್ ತೊಟ್ಟಿರುವ ಸಾದಾ ಬಣ್ಣದಾಕೆ. ಕಾದು, ಕಾದು ಬೇಸರ ತಾಳುತ್ತಾಳೆ. ಕೊನೆಗೂ ತಾನು ಕಾಣಿಸದ ಕಾರಣ ಪ್ರಾಯಶಃ ವಿಳಾಸ ನೋಡಿ ಫ್ಲ್ಯಾಟ್‌ಗೆ ಬರುತ್ತಾಳೆ. ಅಲ್ಲವಾದರೆ ಸಿಟ್ಟು ಮಾಡಿಕೊಂಡು ವೈ.ಡಬ್ಲ್ಯೂ.ಸಿ.ಎ.ಯಲ್ಲಾಗಲಿ. ಎ.ಐ.ಐ.ಎಂ.ಸಿ.ಯ ಹಾಸ್ಟೆಲ್ಲಿನಲ್ಲಾಗಲಿ ಇಳಿದುಕೊಳ್ಳುತ್ತಾಳೆ. ಅಂತೂ ನಾಳೆ ಸ್ಟೇಶನ್‌ಗೆ ಹೋಗುತ್ತೇನೆ. ಕಿವಿಗಳಲ್ಲಿ ದೊಡ್ಡ ಗಾತ್ರದ ರಿಂಗ್‌ಗಳಿರುವ ಸಾದಾ ಬಣ್ಣದಾಕೆಯನ್ನು ಬರಮಾಡಿಕೊಳ್ಳುತ್ತೇನೆ.

ಥಟ್ಟನೆ ತನ್ನ ಫ್ಲ್ಯಾಟ್‌ನ ಅಸ್ತವ್ಯಸ್ತತೆಯ ನೆನಪಾಯಿತು. ರವಿಗೆ. ಒಂದಿಷ್ಟೂ ಒಪ್ಪ, ಓರಣಗಳಿಲ್ಲದೆ ಎಲ್ಲವೂ ಅಲ್ಲಲ್ಲಿ ಹರಡಿಕೊಂಡಿವೆ. ಮ್ಯಾಗಜಿನ್‌ಗಳು, ದೈನಿಕಗಳು ಮತ್ತು ಪುಸ್ತಕಗಳು. ಕುಶನ್ ಕವರ್‌ಗಳೂ ಸೋಫಾ ಕವರ್‌ಗಳೂ ಮಾಸಿವೆ. ಸಿಗರೇಟ್ ತುಂಡುಗಳು ಆ್ಯಶ್‌ಟ್ರೇ ತುಂಬಿ ಟೀಪಾಯಿ ಮೇಲೂ ಹರಡಿವೆ. ಕರ್ಟನ್‌ಗಳು, ಡ್ರೈಕ್ಲೀನ್ ಮಾಡಿಸಲೂ ಕಾರ್ಪೆಟ್ ಬ್ರಶ್ ಮಾಡಿಸಲೂ ಈಗಾಗಲೇ ತಡವಾಗಿದೆ. ಎಲ್ಲವನ್ನೂ ಒಮ್ಮೆ ಅಚ್ಚುಕಟ್ಟಾಗಿ ಜೋಡಿಸಿಡಬೇಕು. ಕಫೆಟರಿಗೆ ಹೋಗಿ ಆಹಾರ ತೆಗೆದುಕೊಳ್ಳುವ ಯೋಜನೆಯನ್ನು ಬಿಟ್ಟುಬಿಟ್ಟು ಬದಲಾಗಿ ಅಲ್ಲಿಗೆ ಫೋನ್ ಮಾಡಿದ. ಒಂದಿಷ್ಟು ಸಲಾಡ್, ಅನ್ನ ಮೊಸರು ಮತ್ತು ಯಾವುದಾದರೂ ವೆಜಿಟೆಬಲ್ ಪದಾರ್ಥವನ್ನು ಕಳುಹಿಸಲು ಹೇಳಿದ.

ಟಿ.ವಿ.ಯಲ್ಲಿ ನ್ಯೂಸ್‌ನ ವೇಳೆಯಾಗಿದೆ. ಟಿ.ವಿ. ಆನ್ ಮಾಡಿದ. ಹೊಸ ಸುದ್ದಿ ಏನನ್ನೂ ದೂರದರ್ಶನ ತಿಳಿಸಲಿಲ್ಲ. ದೆಹಲಿಯ ನಗರವಾಸಿಗಳಿಗೆ ಗೊತ್ತಿಲ್ಲದ ಯಾವುದೂ ನ್ಯೂಸ್ ರೀಡರ್‌ಗೆ ಹೇಳಲಿಕ್ಕಿರಲಿಲ್ಲ.

ಒಂದು ಸಂಗತಿ ಮಾತ್ರ ಸ್ಪಷ್ಟವಾಯಿತು. ಇಂದಿರಾರ ಕಳೇಬರ ಈಗಲೂ ಆಸ್ಪತ್ರೆಯಲ್ಲೇ ಇದೆ. ವಿದೇಶೀ ರಾಷ್ಟ್ರಗಳ ವರಿಷ್ಠರು ಮತ್ತು ದೆಹಲಿ ನಗರ ನಿವಾಸಿಗಳಿಗೆ, ಶ್ರದ್ಧಾಂಜಲಿಯರ್ಪಿಸಲು ಅನುಕೂಲವಾಗುವಂತೆ ಕಳೇಬರವನ್ನು ಪ್ರದರ್ಶಿಸಲು ಸಜ್ಜುಗೊಳಿಸುತ್ತಿರಬಹುದು. ಮಡಿದ ಬಳಿಕವಾದರೂ ಆಕೆಗೆ ಒಂದಿಷ್ಟು ಪ್ರೈವೆಸಿ



ಹೊಂದಲು ಅನುಯಾಯಿಗಳು ಬಿಡುವ ಹಾಗೆ ಕಾಣಿಸುತ್ತಾ ಇಲ್ಲ. ಬಹಳಷ್ಟು ಗುಂಡುಗಳು ತಗುಲಿ ತೂತುಬಿದ್ದ ಶರೀರವನ್ನು ಹೊಲಿದು, ಬಿಗಿದು ಫಾರ್ಮಲಿನ್ ತುಂಬಿ ಮೂರೋ, ನಾಲ್ಕೋ ದಿನಗಳ ತನಕ ಕೊಳೆತು ನಾರದ ಹಾಗೆ, ರೂಪಾಂತರ ಹೊಂದದ ಹಾಗೆ ಕಾದಿರಿಸಲು ಮೋರ್ಟಶ್ಯನ್‌ದ ನುರಿತ ಹಸ್ತಗಳು ಪ್ರವರ್ತಿಸುತ್ತಿರಬಹುದು. ಪ್ರಾಯಶಃ ಹವಾನಿಯಂತ್ರಿತ ಕೊಠಡಿಯಲ್ಲಿ ದೊಡ್ಡ ಮಂಜುಗಡ್ಡೆಗಳ ಮೇಲ್ಗಡೆ ಇರಿಸಿದರೆ ಕೆಲವು ದಿನಗಳ ತನಕ ರೂಪ ವ್ಯತ್ಯಯ ಬಾರದೆ ಇರಲೂಬಹುದು.

* * *

## ಅಧ್ಯಾಯ ೭

# ಭುಗಿಲೆದ್ದ ಪ್ರತೀಕಾರದ ಕಿಡಿಗಳು

ಆತ ಮೊದಲ ಬಾರಿ ಇಂದಿರಾ ಎಂಬ ವ್ಯಕ್ತಿಯ ಕುರಿತು ಯೋಚಿಸಿದ. ಉನ್ನತಿಯೂ ಅವನತಿಯೂ ಬಿರುಗಾಳಿಯೂ ಕಡುಬೇಗೆಯೂ ಜಡಿಮಳೆಯೂ ತುಂಬಿಕೊಂಡಿದ್ದ ತರಾತುರಿಯ ಜೀವನ, ಬಹಳಷ್ಟು ಆದರಿಸಲ್ಪಟ್ಟ, ಬಹಳಷ್ಟು ವಿಮರ್ಶಿಸಲ್ಪಟ್ಟ, ಬಹಳವಾಗಿ ತಪ್ಪುಗ್ರಹಿಕೆಗೆ ಗುರಿಯಾದ ಓರ್ವ ಮಹಿಳೆ, ಚರಿತ್ರೆ ಕಂಡದ್ದರಲ್ಲೇ ಅತ್ಯಂತ ಬಲಾಢ್ಯೆಯಾದ ಮಹಿಳೆ ಅಧಿಕಾರದ ಅತ್ಯುನ್ನತಿಯಲ್ಲಿದ್ದಾಗಲೂ ಅತ್ಯಂತ ಜನಪ್ರಿಯತೆ ಗಳಿಸಿದ್ದಾಗಲೂ ಅಧಿಕಾರದಿಂದ ಹೊರಬಿದ್ದಾಗಲೂ ಬಹಳಷ್ಟು ಖಂಡಿಸಲ್ಪಟ್ಟಾಗಲೂ ಅವರನ್ನು ಸಾಕಷ್ಟು ಸಮೀಪದಿಂದ ವೀಕ್ಷಿಸಲು ಅವಕಾಶಗಳು ದೊರೆತಿವೆ. ವಿಪರೀತ ಪರಿಸ್ಥಿತಿಗಳಲ್ಲೇ ಆ ವ್ಯಕ್ತಿತ್ವಕ್ಕೆ ಹೆಚ್ಚಿನ ಕಳೆಕಟ್ಟಿದೆ ಎಂದೂ ಅನೇಕ ಬಾರಿ ಅನ್ನಿಸಿದೆ. ಎಷ್ಟೆಷ್ಟೋ ದೃಶ್ಯಗಳೂ ಘಟನೆಗಳೂ ಮನಸ್ಸಿಗೆ ನುಗ್ಗಿ ಬರುತ್ತಾ ಇವೆ. ೧೯೭೭ರ ಬೇಸಗೆ. ಅಂದು ಮೊರಾರ್ಜಿ ಪ್ರಧಾನಿ. ಹರಿಜನರ ಪ್ರತ್ಯಕ್ಷ ದೇವರು ಜಗಜೀವನ್ ರಾಮ್ ಉಪಪ್ರಧಾನಿ. ಬಿಹಾರ್‌ನಲ್ಲಿ ನಾಗರಿಕತೆಗೆ ತಲಪಲು ಸಾಧ್ಯವಾಗದ ದೂರದ ಹಳ್ಳಿ–ಬೆಲ್ಚಿ. ಅಲ್ಲಿ ಬಹಳಷ್ಟು ಹರಿಜನರು ಜೀವಂತ ಸುಡಲ್ಪಟ್ಟರು. ಭಾರತದ ಶಾಪವಾಗಿರುವ ಜಾತಿ ಮತ ವಿದ್ವೇಷದ ಮತ್ತೊಂದು ಆಹುತಿ. ಮೇಲ್ಜಾತಿಯ ಶ್ರೀಮಂತ ಜಮೀನ್ದಾರರು ಸಮೂಹ ಹತ್ಯೆಯ ಕಾರಣಕರ್ತರು. ಅತಿ ಹತ್ತಿರದ ಪೊಲೀಸ್ ಠಾಣೆಯಿರುವುದು ಇಪ್ಪತ್ತು ಮೈಲುಗಳ ಅಂತರದಲ್ಲಿ. ಅಲ್ಲಿ ತಲಪಲು ರಸ್ತೆಯಿಲ್ಲ; ಹೊಲಗದ್ದೆ ಮತ್ತು ಕುರುಚಲು ಕಾಡುಗಳನ್ನು ಹಾದು ಒಂದು ಹೊಳೆಯನ್ನು ಇಳಿದು ದಾಟಬೇಕು ಅಲ್ಲಿ ತಲಪಲು.

ಅಂದು ಇಂದಿರಾ ಯಾರೂ ಅಲ್ಲ. ೧೯೭೭ರ ಪರಾಭವದ ಬಳಿಕ ಅವರನ್ನೂ ಅವರ ಕುಟುಂಬವನ್ನೂ ಜನತಾ ಸರಕಾರ ಬೇಟೆಯಾಡುತ್ತಿದ್ದ ಕಾಲ. ಬಿಹಾರ್‌ನ ೫೪ ಲೋಕಸಭಾ ಸ್ಥಾನಗಳಲ್ಲಿ ಒಂದು ಕೂಡ ಕಾಂಗ್ರೆಸ್‌ಗೆ ದೊರೆತಿರಲಿಲ್ಲ. ಆದರೂ ಅವರು ಹರಿಜನ ಕುಟುಂಬದವರನ್ನು ಸಾಂತ್ವನಗೊಳಿಸಲು ಬೆಲ್ಚಿಗೆ ಹೊರಟರು. ಇದರಲ್ಲಿ ರಾಜಕೀಯ ಉದ್ದೇಶಗಳಾವುದನ್ನು ಆರೋಪಿಸಲಿಕ್ಕಾಗುವುದಿಲ್ಲ. ಅದೂ ಭವಿಷ್ಯದಲ್ಲಿ ತಾನು ಅಧಿಕಾರಕ್ಕೆ ಮರಳಿಯೇನೆಂದು ಅವರು ಕೂಡ



ಕಲ್ಪಿಸಲಾರದ ಆ ದಿನದಲ್ಲಿ. ಆದರೂ ಅವರು ಹೊರಟರು. ಕ್ರೀಂ ಕಲರ್‌ನ ಖಾದಿ ಸೀರೆ, ತುಂಬು ತೋಳಿನ ಕುಪ್ಪಸ, ರುದ್ರಾಕ್ಷಿ ಮಾಲೆ, ರಬ್ಬರ್ ಚಪ್ಪಲಿ, ಹೆಗಲಲ್ಲಿ ನೇತಾಡುವ ಬಟ್ಟೆಯ ಚೀಲ. ಪಾಟ್ನಾ ತಲಪಿದ್ದು ಇಂಡಿಯನ್ ಏರ್‌ಲೈನ್ಸ್‌ನ ವಿಮಾನದಲ್ಲಿ. ಅಲ್ಲಿಂದ ಬಿಹಾರ್ ಶರೀಫ್‌ಗೆ ತಲಪಿದ್ದು ಬಿಳಿ ಅಂಬಾಸಿಡರ್ ಕಾರ್‌ನಲ್ಲಿ. ಅಷ್ಟರಲ್ಲಿ ಮಳೆ ಬೇರೆ. ಇಂದಿರಾರನ್ನು ಸ್ವಾಗತಿಸಲು ಬೆಲ್ಚಿಯ ಕಡೆಗಿರುವ ಕೆಮ್ಮಣ್ಣು ರಸ್ತೆಯಲ್ಲಿ ಜನದಟ್ಟಣೆ. ಮಂಡಿಯ ತನಕ ಮಡುಗಟ್ಟಿಕೊಂಡಿತ್ತು ನೀರು ಮತ್ತು ಕೆಸರು.

ಎಲ್ಲರೂ ಆಕೆಯನ್ನು ತಡೆಯಲೆತ್ನಿಸಿದರು–ಬೇಡಿ, ಅತ್ತ ಹೋಗಬೇಡಿ. ಕೆಟ್ಟ ಹವಾಮಾನ ಅಷ್ಟೇ ಅಲ್ಲ ಅಲ್ಲಿನ ಶ್ರೀಮಂತ ಬಂಟರು ಅಪಾಯವನ್ನುಂಟು ಮಾಡಿಯಾರು.... ಆದರೆ ಆಕೆ ಹೆದರಲಿಲ್ಲ. ಮುಖ್ಯ ರಸ್ತೆಯಿಂದ ಮಣ್ಣು ರಸ್ತೆಗೆ ತಲಪಿದಾಗ ಕಾರು ಮುಂದಕ್ಕೆ ಸರಿಯದಾಯಿತು. ಧಾರೆ ಮುರಿಯದೆ ಸುರಿಯುತ್ತಿತ್ತು ಮಳೆ. ಆಕೆ ಜೀಪ್ ಹತ್ತಿದರು; ಜೀಪನ್ನೆಳೆಯಲು ಒಂದು ಟ್ರಾಕ್ಟರ್, ಬೆಲ್ಚಿಯ ಎಂಟು ಮೈಲು ಸಮೀಪಕ್ಕೆ ತಲಪಿದಾಗ ಟ್ರ್ಯಾಕ್ಟರ್ ಸಹ ಸರಿಯದಾಯಿತು. ಆಕೆ ಜೀಪ್‌ನಿಂದ ಇಳಿದರು. ರಬ್ಬರ್ ಚಪ್ಪಲಿ ಕಳಚಿ ಕೈಯಲ್ಲಿ ಹಿಡಿದುಕೊಂಡರು. ಸೀರೆಯ ನೆರಿಗೆಗಳನ್ನು ತುಸು ಎತ್ತಿ ಹಿಡಿದು ಆಕೆ ನಡೆಯತೊಡಗಿದರು. ಕೆಸರಿನಲ್ಲೆ, ಮಳೆಯಲ್ಲೆ, ನೀರಿನಲ್ಲೇ. ಸಫಾರಿ ಸೂಟ್ ತೊಟ್ಟುಕೊಂಡಿದ್ದ ಅನುಯಾಯಿಗಳಿಗೆ ಆಕೆಯ ಜತೆ ತಲಪುವುದೇ ಕಷ್ಟವಾಯಿತು. ನಾಲ್ಕು ಕಿಲೋ ಮೀಟರ್ ನಡೆದಿರಬಹುದು. ಸಂಗಡಿಗರು ಬಳಲಿದ್ದರೂ ಆಕೆ ಒಂದಿಷ್ಟೂ ಅಳುಕಲಿಲ್ಲ. ಎದುರಿಗೆ ಬರುತ್ತಿತ್ತು ಒಂದು ಆನೆ–ದಟ್ಟವಾಗಿ ಸುರಿಯುತ್ತಿರುವ ಮಳೆಯಲ್ಲಿ ಥಟ್ಟನೆ ಭೂಮಿಗೆ ಉದುರಿ ಬಿದ್ದ ಒಂದು ಕಾರ್ಮೋಡದ ಹಾಗೆ. ಅದರ ಬೆನ್ನ ಮೇಲೆ ಹರಕು ಮುರುಕು ಕೊಡೆಯೊಂದನ್ನು ಹಿಡಿದುಕೊಂಡು ಮಾವುತನೂ ಇದ್ದ. ಅನುಯಾಯಿಗಳಲ್ಲಿ ಯಾರೋ ಮಾವುತನೊಡನೆ ಕುಶಲ ವಿಚಾರಿಸಿದರು. ಆನೆಯನ್ನು ಹಿಂದಕ್ಕೇ ನಡೆಸಬಹುದೆ ಎಂದು ಪ್ರಶ್ನಿಇದರು. ಆತ ಒಪ್ಪಿದ. ಮೋತಿ ಎಂಬ ಆ ಆನೆ ಬಗ್ಗಿ ನಿಂತಿತ್ತು. ಓರ್ವ ಶಾಲಾ ಬಾಲಕಿಯ ಚಾಲಾಕಿನೊಂದಿಗೆ ಇಂದಿರಾ, ಬಗ್ಗಿಕೊಂಡಿದ್ದ ಆನೆಯ ಮಡಚಿದ್ದ ಕಾಲು ಮೆಟ್ಟಿ ಅದರ ಬೆನ್ನ ಮೇಲೆ ಹತ್ತಿದರು. ಯಾರೋ ಎಸೆದುಕೊಟ್ಟ ಕಂಬಳಿ ಮಡಚಿ ಹಾಕಿ ಆಕೆ ಆನೆಯ ಮೇಲೆ ಕುಳಿತರು. ಹೌದು, ಒಂದು ಬೋಯಿಂಗ್ ವಿಮಾನದ ಫಸ್ಟ್‌ಕ್ಲಾಸ್‌ನಲ್ಲಿ ಕುಳಿತಿರುವ ಅದೇ ಮನೋಭಾವದೊಂದಿಗೆ! ಆನೆ ಬೆಲ್ಚಿಯತ್ತ ನಡೆಯಿತು. ಅಂದು ಕೇಳಿದ್ದ ಎರಡು ಘೋಷಣೆಗಳು ಈಗಲೂ ನೆನಪಿವೆ. ಇಂದಿರಾ ತೇರೆ ಅಭಾವ್ ಮೆ ಹರಿಜನ್ ಜಿಂದಾ ಜಲಾಯೇ ಜಾತೆ ಹೈ... ಆಧೀ ರೊಟ್ಟಿ ಖಾಯೇಂಗೆ.... ಇಂದಿರಾ ತೊ ಲೌಟಾಯೇಂಗೆ...

ಆನೆಯ ಮೇಲೆ ಬಿರುಮಳೆಯಲ್ಲಿ ಒದ್ದೆ ಕಂಬಳಿ ಹೊದ್ದು ಕುಳಿತ ಇಂದಿರಾರ ಚಿತ್ರ ಮರೆಯಲಸಾಧ್ಯ. ಅಧಿಕಾರದ ಪ್ರಭಾವಳಿ ಇಲ್ಲದೆಯೇ ಆ ವ್ಯಕ್ತಿತ್ವ ಜ್ವಲಿಸುತ್ತಿತ್ತು. ಸಂದರ್ಭ ಸಾಧಕರ ಹಾಗೂ ದಲ್ಲಾಳಿಗರ ಕೃತಕ ಕಾಲುಗಳಿಲ್ಲದೆಯೇ ಆಕೆಗೆ ಸಾಕಷ್ಟು ಔನ್ನತ್ಯವಿದ್ದಿತ್ತು.

ಇಂತಹ ಥಳಗುಟ್ಟುವ ಚಿತ್ರಗಳು ಇನ್ನೂ ಕೆಲವು ನೆನಪಿಗೆ ಬರುತ್ತಲಿವೆ. ವಿಷಮಸ್ಥಿತಿ ಹೇರಿದ್ದು ಒಂದು ಅಚಾತುರ್ಯವಾಗಿತ್ತೆಂದು ಆಕೆ ಒಪ್ಪಿಕೊಂಡರು. ೧೯೭೭ರ ಮಾರ್ಚ್‌ನಲ್ಲಿ ಜರುಗಿದ್ದ ಲೋಕಸಭಾ ಚುನಾವಣೆಯಲ್ಲಿ ಜನತಾ ಪಕ್ಷಕ್ಕೆ ೨೯೫ ಸ್ಥಾನಗಳು ಲಭಿಸಿದಾಗ ಕಾಂಗ್ರೆಸ್‌ಗೆ ದೊರೆತದ್ದು ೧೫೧ ಸ್ಥಾನಗಳು ಮಾತ್ರ. ರಾಯ್‌ಬರೇಲಿಯಲ್ಲಿ ನಡೆದ ಹೋರಾಟದಲ್ಲಿ ರಾಜ್‌ನಾರಾಯಣ್ ಇಂದಿರಾರನ್ನು ೫೫,೦೦೦ ಓಟುಗಳ ಅಂತರದೊಂದಿಗೆ ಸೋಲಿಸಿದ್ದರು. ಇದ್ದಕ್ಕಿದ್ದಂತೆ ಆಕೆ ಭಾರತದ ರಾಜಕೀಯದಲ್ಲಿ ಏನೂ ಅಲ್ಲವಾದರು. ಫಲಿತಾಂಶ ಪ್ರಕಟವಾದ ಮರುದಿನ ವಿಷಮ ಸ್ಥಿತಿ ಹಿಂತೆಗೆದುಕೊಳ್ಳಲಾಯಿತು. ಮಾರ್ಚ್ ೨೨ರಂದು ಆಕೆ ಪ್ರಧಾನಿ ಹುದ್ದೆಗೆ ರಾಜೀನಾಮೆ ನೀಡಿದರು. ಆಕೆ ಯಾರೂ ಅಲ್ಲವಾದರು. ಕಾಂಗ್ರೆಸ್ ಅಧ್ಯಕ್ಷೆ ಎಂಬ ಸ್ಥಾನ ಕೂಡ ಆಕೆಗಿರಲಿಲ್ಲ. ರಾಯ್‌ಬರೇಲಿಯಲ್ಲಿ ಗೆದ್ದಿದ್ದರೆ ಪ್ರತಿಪಕ್ಷ ನಾಯಕಿ ಎಂಬ ಗೌರವವಾದರೂ ದೊರೆಯುತ್ತಿತ್ತು. ಇಲ್ಲ. ಒಂದು ಸುಪ್ರಭಾತದಲ್ಲಿ ಆಕೆ ಇಂದಿರಾ ಪ್ರಿಯದರ್ಶಿನಿ ನೆಹರೂ ಗಾಂಧಿ ಅಷ್ಟೇ ಆಗಿದ್ದರು. ಇತರ ಯಾವುದೇ ವ್ಯಕ್ತಿಯ ಹಾಗೆ ಓರ್ವ ಭಾರತೀಯ ನಾಗರಿಕಳು ಅಷ್ಟೇ.

ಆದರೆ ಸೋಲಿನಲ್ಲೂ ಆಕೆ ತಲೆಯೆತ್ತಿ ನಿಂತರು. ಯಾವುದೋ ಒಂದು ಹೊರೆ ತಲೆಯಿಂದಿಳಿದಂಥ ನೆಮ್ಮದಿಯಾಗಿತ್ತು ಆಕೆಗೆ. ಆಕೆ ಇದನ್ನು ಹಲವು ಬಾರಿ ಹೇಳಿಯೂ ಇದ್ದರು. ಜನತಾ ಸರಕಾರ ಆಕೆಯ ವಿರುದ್ಧ ಬೇಟೆಯಾಡುವ ಧೋರಣೆ ವಹಿಸದೆ ಇರುತ್ತಿದ್ದರೆ ಆಕೆ ಹಿಮಾಲಯ ಶಿಖರಗಳ ಸಮೀಪ ಪ್ರದೇಶದಲ್ಲಿರುವ ಯಾವುದಾದರೊಂದು ಆಶ್ರಮದಲ್ಲಿ ವಿಶ್ರಾಂತಿ ಜೀವನ ಸಾಗಿಸುತ್ತಿದ್ದರು. ದೂರದ ಬೆಟ್ಟಗಳ ಸಾಲುಗಳ ನೀಲಿಮೆಯಲ್ಲಿ ತೇಲಾಡುವ ಮುಗಿಲ ತುಣುಕುಗಳನ್ನು ವೀಕ್ಷಿಸುತ್ತ ಮಂಜುಬೆಟ್ಟಗಳ ಶುಭ್ರತೆಯಲ್ಲಿ ಹಬ್ಬುವ ಬಿಸಿಲ ಸೀಳುಗಳನ್ನು ನೋಡುತ್ತ ಆಕೆ ತನ್ನ ಶಿಷ್ಯ ಜೀವನವನ್ನು ಸಾರ್ಥಕಗೊಳಿಸುತ್ತಿದ್ದರು. ಆದರೆ ಆಕೆಗೂ ಆಕೆಯ ಬಹುಮಟ್ಟಿಗೆ ದಾರಿತಪ್ಪಿದ್ದ ಎರಡನೆಯ ಮಗನಿಗೂ ಉಳಿಗಾಲ ಇಲ್ಲದಂತೆ ಮಾಡಿದ್ದರು ಮೊರಾರ್ಜಿ ಮತ್ತು ಸಂಗಡಿಗರು. ಎಷ್ಟೆಷ್ಟು ಆಯೋಗಗಳು! ಎಷ್ಟೆಲ್ಲ ದಾವೆಗಳು! ಠಕ್ಕರ್ ಆಯೋಗದಿಂದ ಮೊದಲ್ಗೊಂಡು ಶಾ ಆಯೋಗದ ತನಕ ಕ್ರಿಮಿನಲ್ ಮೊಕದ್ದಮೆಗಳು ಮತ್ತು ಸಿ.ಬಿ.ಐ. ತನಿಖೆಗಳು. ಅಧಿಕಾರದಲ್ಲಿ ಪಾಲುಪಡೆದು ತುರ್ತು ಪರಿಸ್ಥಿತಿಯ ವೇಳೆ ಪರಮಾವಧಿ ಲಾಭ ಪಡೆದು ಜತೆಯಲ್ಲಿ ನಿಂತವರೆಲ್ಲರೂ



ಆಕೆಯ ವಿರುದ್ಧ ತಿರುಗಿ ಬಿದ್ದರು. ಬರುವಾ, ಚವಾಣ್, ರಜನಿ ಪಟೇಲ್, ಸಿದ್ಧಾರ್ಥ ಶಂಕರ್, ಬ್ರಹ್ಮಾನಂದ ರೆಡ್ಡಿ ಯಾರೂ ಆಕೆಯನ್ನು ಗುರುತಿಸದಾದರು. ಒಂದು ಕಾಲದಲ್ಲಿ ಹಿಂಗಾಲುಗಳೆಡೆಯಲ್ಲಿ ಬಾಲ ತುರುಕಿಕೊಂಡು ಆಕೆಯ ಸುತ್ತ ಅಧಿಕಾರ ಸ್ಥಾನಗಳ ಎಂಜಲು ಮೂಸತ್ತ ಓಡಾಡಿದ್ದ ಮಂದಿ, ಇಂದಿರಾ ತೇರಿ ಸುಬಹ್ ಕಿ ಜಯ್, ತೇರಿ ಶಾಮ ಕಿ ಜಯ್, ತೇರಿ ನಾಂ ಕಿ ಜಯ್, ತೇರಿ ಕಾಂ ಕಿ ಜಯ್ ಎಂದು ಜಪಿಸುತ್ತ ಓಡಾಡಿಕೊಂಡಿದ್ದ ಮಂದಿ ಆಕೆಗೆ ವಿರುದ್ಧವಾಗಿ ಸಾಕ್ಷ್ಯ ನುಡಿದರು.

ಮತ್ತೊಂದು ನವೆಂಬರ್ ತಿಂಗಳ ಪೂರ್ವಾಹ್ನ ನೆನಪಾಗುತ್ತಿದೆ. ವೃತ್ತಾಕಾರದ ಪಾರ್ಲಿಮೆಂಟ್ ಹೌಸ್‌ನ ಒಂದನೆಯ ನಂಬರ್ ಗೇಟ್. ಹೊರಗಿನ ಹಸುರು ಹುಲ್ಲು ಹಬ್ಬಿದ್ದ ಲಾನ್‌ನಲ್ಲಿ ಶಿಶಿರದ ಸೊರಗಿನ ಬಿಸಿಲು. ಹನ್ನೊಂದು ಗಂಟೆಯಾಗುತ್ತಾ ಇತ್ತು ಅಷ್ಟೇ. ಗೇಟಿನ ಇಬ್ಬದಿಗಳಲ್ಲೂ ಆಶಾಭಾವದೊಂದಿಗೆ ಕಾದು ನಿಂತಿರುವ ಜನರ ಗುಂಪು. ಹೌದು, ಚಿಕ್ಕಮಗಳೂರಿನಿಂದ ವಿಜಯಿಯಾದ ಇಂದಿರಾ ಪುನಃ ಲೋಕಸಭೆಗೆ ಬರುತ್ತಾರೆ. ಇಂದೇ ಅವರು ಪ್ರಮಾಣವಚನ ಸ್ವೀಕರಿಸುತ್ತಾರೆ. ಶೆಲ್‌ವೈಟ್ ಬಣ್ಣದ ಅಂಬಾಸಿಡರ್ ಕಾರ್‌ನಿಂದ ಅವರು ಕೆಳಗಿಳಿದರು. ಆಕೆ ಲಂಡನ್ ಸಂದರ್ಶನ ಮುಗಿಸಿ ಆಗಷ್ಟೇ ಮರಳಿ ತಲಪಿದ್ದರು. ಬಾಬ್ ಮಾಡಲಾದ ಕೂದಲಿನಲ್ಲಿ ಬೈತಲೆ ತೆಗೆದಂತೆ ಬಿಳಿಗೆರೆ. ಅರಳಿದ ನಗೆ. ಶ್ವೇತಛತ್ರಧಾರಿಯಾದ ಕುದುರೆಗಳ ಸೊಬಗು. ಫೋಕಲ್ ಪ್ರಿಂಟ್ ಮಾಡಲಾದ ತಿಳಿಬಣ್ಣದ ರೇಶಿಮೆ ಸೀರೆ. ಸೆರಗಿನಿಂದ ಕೂದಲು ಮತ್ತು ತಲೆಯನ್ನು ಭಾಗಶಃ ಮರೆಮಾಡಲಾಗಿದೆ. ಕಾಲ ಆಕೆಯ ತಿಳಿನಗೆಯ ಮರೆಯಲ್ಲೆಲ್ಲೊ ಮುದುಡಿ ನಿಂತುಕೊಂಡಂತೆ ಅನ್ನಿಸಿತ್ತು. ಹೆಮ್ಮೆಯೊಂದಿಗೇ ಆಕೆ ಲೋಕಸಭೆಯನ್ನು ಪ್ರವೇಶಿಸಿದರು. ಜನತಾ ಎಂ.ಪಿ.ಗಳೂ. ಕಮ್ಯೂನಿಸ್ಟ್ ಎಂ.ಪಿ.ಗಳೂ ಶೇಮ್ ಶೇಮ್ ಎಂದು ಬೊಬ್ಬೆ ಹೊಡೆದರು. ತನ್ಮಧ್ಯೆ ಒಬ್ಬಾತ ಗಟ್ಟಿಯಾಗಿ ಕೂಗಿ ಹೇಳಿದ. ದ ಈಗಲ್... ಇಂದಿರಾ ಮುಖದಲ್ಲಿ ಅರಳಿದ ನಗೆಯನ್ನು ಉಳಿಸಿಕೊಂಡೇ ಗಡ್ಡಬಿಟ್ಟು ಖಾದಿತೊಟ್ಟುಕೊಂಡಿದ್ದ ಆ ಯುವಕನನ್ನು–ಇಂದಿರಾ ವಿರುದ್ಧ ಎದ್ದ ಅಲೆಯಲ್ಲಿ ಮಧ್ಯ ಪ್ರದೇಶದಿಂದ ಲೋಕಸಭೆಗೆ ತಲಪಿದ್ದ ಓರ್ವ ಜನತಾ ಎಂ.ಪಿ. ಆತ–ಲಕ್ಷ್ಯವಿಟ್ಟು ನೋಡಿದರು. ಕುರ್ಚಿ ಮೇಲೆ ಒರಗಿ ಕುಳಿತು ಮೊಣಕಾಲುಗಳನ್ನು ಡೆಸ್ಕ್‌ನ ಅಂಚಿಗೆ ಒತ್ತಿಕೊಂಡಿದ್ದ ಆ ಯುವಕನ ಕಣ್ಣುಗಳಲ್ಲಿ ಏನೋ ಥಟ್ಟನೆ ಮಿಂಚಿ ಮರೆಯಾಯಿತು; ಅದು ಭಯವೋ? ಗೌರವವೊ? ಕೀಳರಿಮೆಯೊ? ಇಂದಿರಾರ ನೋಟ ಎರಡು ಸೆಕೆಂಡುಗಳ ತನಕ ಕೀಲದೇ ನಿಂತಿತು. ಆತ ಎದ್ದು ನಿಂತ, ಕೈಮುಗಿದ. ಆತ ಉರು ಹೊಡೆಯುತ್ತ ಇದ್ದ–ವೆಲ್ಕಂ..... ವೆಲ್ಕಂ..... ಒಂದು ಮಿನಿಟ್ ಮುಂಚೆ ಹದ್ದು ಪುನಃ ಬಂತು ಎಂದು ಬೊಬ್ಬಿಟ್ಟದ್ದು ಆತನೇ.

ಆಕೆ ಮುಂದಿನ ಸಾಲಿನ್ ಸೀಟ್‌ನಲ್ಲೇ ಆಸೀನರಾದರು. ಕಾಂಗ್ರೆಸ್ಸಿಗರ

ಸಾಲುಗಳಿಂದ ಅನೇಕ ಮಂದಿ ಇಂದಿರಾಗಾಂಧಿ ಜಿಂದಾಬಾದ್ ಎಂದು ಕೂಗುತ್ತ ಇದ್ದರು. ಆಕೆ ಬೆರಳು ತುಟಿಯ ಮೇಲಿರಿಸಿ ಸದ್ದೆಬ್ಬಿಸದಿರಲು ಸನ್ನೆ ಮಾಡಿದರು. ಆಕೆಯ ಆಜ್ಞಾಬಲ ಥಟ್ಟನೆ ಮನ್ನಣೆ ಪಡೆಯಿತು. ಸಭಾಪತಿಗಳು ಪ್ರಮಾಣ ವಚನ ಸ್ವೀಕಾರಕ್ಕೆ ಆಕೆಯ ಹೆಸರು ಕರೆದಾಗ ಇದ್ದಕ್ಕಿದ್ದಂತೆ ಮೌನ ಆವರಿಸಿತು–ಆಡಳಿತ ಪಕ್ಷದ ಸದಸ್ಯರು ಆಕೆಯ ವಿರುದ್ಧ ಘೋಷಣೆ ಕೂಗಲು ಒಂದು ಕ್ಷಣ ಮರೆತಂತೆ.

ಅಂದು ಆಕೆ ಪ್ರಮಾಣವಚನ ಮಾಡಿದ್ದು ಕನ್ನಡದಲ್ಲಾಗಿತ್ತು. ಹೌದು, ಯಾವುದೇ ಪ್ರಾಂತ್ಯದ ಜನರೊಡನೆಯಾದರೂ ಬೆರೆತು ಒಂದಾಗಲು ಆಕೆಗಿದ್ದ ಸಾಮರ್ಥ್ಯ ಅಸದೃಶವಾಗಿತ್ತು. ಕಾಶ್ಮೀರದಲ್ಲಿರುವಾಗ ಕಾಶ್ಮೀರಿಗಳ ಹಾಗೆ. ಫೇರತೊಟ್ಟು ತಲೆಗೆ ಸ್ಕಾರ್ಫ್ ಕಟ್ಟುತ್ತಾರೆ. ಗುಜರಾತ್‌ನಲ್ಲಿರುವಾಗ ಸೀರೆಯ ಸೆರಗನ್ನು ನೆತ್ತಿಯಿಂದ ಹೆಗಲ ಮೂಲಕ ಮುಂಭಾಗಕ್ಕಿಳಿಸುತ್ತಾರೆ. ಒಂದೊಂದು ಭಾನುವಾರವೂ ಆಕೆ ಒಂದೊಂದು ಪ್ರಾಂತ್ಯದ ಉಡುಗೆ ಧರಿಸುತ್ತಿದ್ದರು. ಪಂಜಾಬ್‌ನಲ್ಲಿರುವಾಗ ಕುರ್ತಾ ಪೈಜಾಮ. ಕೇರಳದಲ್ಲಿ ಅಡ್ಡ ಮುಂಡು ಅಂಗವಸ್ತ್ರ. ಅಸ್ಸಾಂಗೆ ಹೋದಾಗ ಅಲ್ಲಿನವರದ್ದಷ್ಟೇ ಆಗಿರುವ ಮೇಖಲ ಮತ್ತು ರಿಹ ತೊಟ್ಟು ಕೊಳ್ಳುವರು. ಮಣಿಪುರ, ಬಸ್ತಾರ್, ನಾಗಾಲ್ಯಾಂಡ್‌ಗಳಲ್ಲಿನ ಗಿರಿವರ್ಗಗಳ ಜತೆಯಲ್ಲಿ ಆಕೆ ನರ್ತಿಸುತ್ತಿದ್ದರು. ಜನರ ಹೃದಯ ಸ್ಪಂದನವನ್ನರಿತುಕೊಳ್ಳಲು ಆಕೆಗಿದ್ದ ಒಳದೃಷ್ಟಿ ಮತ್ತು ಸಾಮರ್ಥ್ಯ ಅಪಾರವಾಗಿತ್ತು. ಎಲ್ಲಾ ಸೋಲುಗಳನ್ನೂ ಆಕೆ ವಿಜಯದ ಸೋಪಾನಗಳನ್ನಾಗಿ ಮಾರ್ಪಡಿಸಿದ್ದರು. ಗ್ರೀಕ್ ಪುರಾಣಗಳಲ್ಲಿನ ವೀರರಿಗಷ್ಟೇ ಮೀಸಲಾಗಿದ್ದ ತನ್ನ ಮೂಗಿಗೆ ಕಲ್ಲೇಟು ಬಿದ್ದಾಗ ಆಕೆ ಅದನ್ನೊಂದು ಪ್ರತೀಕವನ್ನಾಗಿ ಮಾರ್ಪಡಿಸಿದ್ದರು. ಪ್ಲಾಸ್ಟರ್ ಹಚ್ಚಿದ್ದ ಆ ಮೂಗು ಒಂದೇ ಎಷ್ಟು ಲಕ್ಷ ಮತಗಳನ್ನು ಗಳಿಸಿದೆಯೊ ಏನೊ?

ಜನತಾ ಸರಕಾರ ಆಕೆಯನ್ನು ಜೈಲೊಳಗೆ ಹಾಕಲು ಅನೇಕ ಯೋಜನೆಗಳನ್ನು ಸಿದ್ಧಗೊಳಿಸಿತ್ತು. ೧೯೭೭ ಅಕ್ಟೋಬರ್ ೩ರಂದು ರಾತ್ರಿ ಹತ್ತೂವರೆ ಗಂಟೆಗೆ ತಾನು ವಾಸವಾಗಿದ್ದ ೧೨ನೆಯ ನಂಬರ್ ವೆಲ್ಲಿಂಗ್ ಟನ್ ಕ್ರೆಸೆಂಟಿನಿಂದ ಆಕೆ ಅರೆಸ್ಟ್ ಮಾಡಲ್ಪಟ್ಟರು. ಆದರೂ ಮರುದಿನ ಮ್ಯಾಜಿಸ್ಟ್ರೇಟರ ಆಜ್ಞೆಗನುಗುಣವಾಗಿ ಆಕೆ ನಿಶ್ಯರ್ತ ಬಿಡುಗಡೆ ಮಾಡಲ್ಪಟ್ಟರು. ಆದರೂ ಸರಕಾರ ತನ್ನ ಪ್ರಯತ್ನ ಮುಂದುವರಿಸುತ್ತಲೇ ಇತ್ತು. ೧೯೭೮ ಜನವರಿಯಲ್ಲಿ ಪಾರ್ಲಿಮೆಂಟ್‌ನ ಪ್ರಿವಿಲೆಜ್ ಕಮಿಟಿಯ ಮುಂದೆ ವಿಚಾರಣೆಗೆಂದು ಆಕೆಯನ್ನು ಹಾಜರುಪಡಿಸಿತ್ತು. ಏನಾಗಿದ್ದವು ಆಕೆಯ ಮೇಲಿನ ಆರೋಪಗಳು? ಸರಿಯಾಗಿ ನೆನಪಾಗುತ್ತ ಇಲ್ಲ. ಚಾರ್ಜ್‌ಶೀಟ್‌ನ ಕೆಲವು ಶಬ್ದಗಳಷ್ಟೇ ನೆನಪಿನಲ್ಲಿ ಉಳಿದಿವೆ.

ಲೋಕಸಭೆಯಲ್ಲಿನ ಆಕೆಯ ಭಾಷಣದಲ್ಲಿನ ಮಾತುಗಳು ಈಗಲೂ ಕಿವಿಗಳಲ್ಲಿ ಉಳಿದುಕೊಂಡಿವೆ–ಪ್ರಿವಿಲೆಜ್ ಕಮಿಟಿಯ ವರದಿ ಪರಿಶೀಲಿಸುವುದಕ್ಕೂ ಮೊದಲೇ



ಆಡಳಿತ ಪಕ್ಷ, ನಾನು ಅಪರಾಧಿ ಎಂದು ತೀರ್ಪು ನೀಡಿಯಾಗಿದೆ. ಆಡಳಿತ ಪಕ್ಷ ಈ ಸಂಸತ್ ಸಭೆಯನ್ನು ಮಧ್ಯ ಕಾಲದ ಸೆರೆಮನೆಯನ್ನಾಗಿ ಮಾರ್ಪಡಿಸುವ ಹವಣಿಕೆಯಲ್ಲಿದೆ. ನನ್ನನ್ನು ಬೇಟೆಯಾಡುವುದರ ಹೊರತು ಈ ಸರಕಾರ ಬೇರೇನನ್ನೂ ಮಾಡುತ್ತ ಇಲ್ಲ. ಆದರೆ, ನಾನು ಮನಃಪೂರ್ವಕ ಹೇಳುತ್ತಿದ್ದೇನೆ. ನಾನು ಈ ಲೋಕಸಭಾ ಸದಸ್ಯತ್ವ ಮಾತ್ರವಲ್ಲ ನನ್ನ ಪ್ರಾಣವನ್ನೂ ರಾಷ್ಟ್ರಕ್ಕಾಗಿ ಬಲಿಕೊಡಲು ಸಿದ್ಧಳಿದ್ದೇನೆ.

ಹೌದು. ಇಂದಿರಾ ತನ್ನ ಮಾತನ್ನು ಉಳಿಸಿರುವರು. ಆರು ವರ್ಷಗಳ ಬಳಿಕ ಆಕೆ ರಾಷ್ಟ್ರಕ್ಕಾಗಿ ತನ್ನ ಪ್ರಾಣವನ್ನು ಬಲಿ ಕೊಟ್ಟಿರುವರು.

ಟಿ.ವಿ.ಯ ಚಿತ್ರಗಳಲ್ಲಿ ಚಟುವಟಿಕೆ ಕಾಣಿಸತೊಡಗಿದವು. ತ್ರಿವರ್ಣ ಪತಾಕೆಯಲ್ಲಿ ಸುತ್ತಲಾದ ಇಂದಿರಾರ ಪಾರ್ಥಿವ ಶರೀರ ಗನ್‌ಕ್ಯಾರಿಯೇಜ್‌ನಲ್ಲಿ ತೀನ್ ಮೂರ್ತಿ ಭವನಕ್ಕೆ ತಲುಪಿದೆ.

ಹೌದು, ತಂದೆಯ ಹೋಸ್ಟಸ್ ಆಗಿ ಆಕೆ ಈ ತೀನ್ ಮೂರ್ತಿ ಭವನದಲ್ಲಿ ಬಹಳಷ್ಟು ವರ್ಷಗಳನ್ನು ಕಳೆದಿದ್ದರು. ಪ್ರಾಯಶಃ ಸ್ವಂತ ಪತಿಯ ಬಗೆಗಿನ ಕರ್ತವ್ಯಗಳನ್ನು ಮರೆತು ಪಿತನ ಸೇವೆ ಮಾಡುವುದರಲ್ಲಿ ಆಕೆ ಧನ್ಯತೆಯನ್ನು ದರ್ಶಿಸಿರಬಹುದು. ಅದು ಗಂಡನಿಂದ ದೂರವಾಗಲಿಕ್ಕೆ ಒಂದು ಆಲೈಬಿಯಾಗಿತ್ತೇ? ಅಥವಾ ತಂದೆಯ ಬಗೆಗಿನ ಆದರ ಮತ್ತು ಆಕರ್ಷಣೆಗಳಾಗಿದ್ದುವೆ? ಅದೂ ಅಲ್ಲವಾದರೆ ರಾಷ್ಟ್ರ ನಿರ್ಮಾಣದ ಅತ್ಯುನ್ನತ ಮಟ್ಟದ ಕಾರ್ಯಗಳನ್ನು ಆಯೋಜಿಸುವ ಅಧಿಕಾರ ಸ್ಥಾನಗಳ ಮಧ್ಯದಲ್ಲಿ ಅಧಿಕಾರ ಮತ್ತು ಸಾಮರ್ಥ್ಯಗಳನ್ನು ಚಲಾಯಿಸುವುದರಲ್ಲಿ ಪಾಲ್ಗೊಳ್ಳಬೇಕೆಂಬ ತುಡಿತವಾಗಿತ್ತೆ? ಪ್ರಾಯಶಃ ಅವೆಲ್ಲದರ ಅಂಶಗಳೂ ಆ ಮನೋಭಾವದ ಹಿಂದೆ ಇದ್ದಿರಬಹುದು. ಒಂದು ಸಂಗತಿಯಂತು ಖಚಿತ. ಜವಾಹರ್‌ಲಾಲ್‌ರ ಪ್ರತಿಬಿಂಬಿತ ಪ್ರಕಾಶದಲ್ಲೆ ಬೆಳೆಯದೆ ಹೋಗಿದ್ದರೆ ಇಂದಿರಾ, ಇಂದಿರಾ ಆಗುತ್ತಿರಲಿಲ್ಲ.

ಸೀರೆಯ ಸೆರಗಿನಿಂದ ಭಾಗಶಃ ಶಿರವನ್ನು ಮರೆಮಾಡಿ ಪುಷ್ಪಮಾಲೆಗಳಿಂದ ಅಲಂಕೃತವಾದ ಆಕೆಯ ಮುಖ. ಇಲ್ಲಿ, ವಿಶ್ವಾಸ ಘಾತಕರ ಗುಂಡುಗಳು ಆಕೆಯ ಸುಂದರ ಹಾಗೂ ಆಕರ್ಷಕ ಮುಖವನ್ನು ವಿರೂಪ ಗೊಳಿಸಲಿಲ್ಲ. ಮರಣದ ತಣ್ಣನೆಯ ಬೆರಳುಗಳಿಗೆ ಕೂಡ ಆಕೆಯ ಮುಖದ ಪ್ರಕಾಶವನ್ನು ನಂದಿಸಲು ಸಾಧ್ಯವಾಗಲಿಲ್ಲ.

ಆರು ವರ್ಷಗಳ ಮುನ್ನ; ಖಚಿತವಾಗಿ ದಿನಾಂಕ ಕೂಡ ನೆನಪಾಗುತ್ತಿದೆ. ಸಾವಿರದ ಒಂಬೈನೂರ ಎಪ್ಪತ್ತೆಂಟು ಡಿಸೆಂಬರ್ ಹತ್ತೊಂಬತ್ತು. ಮಬ್ಬು ಕವಿದ ಆಕಾಶ. ಚಳಿಯ ಚೂಪಾದ ಮುಳ್ಳುಗಳನ್ನು ಬಚ್ಚಿಟ್ಟು ಕೊಂಡಿದ್ದ ಗಾಳಿಯ ಝೇಂಕಾರ. ಪ್ರಿವಿಲೆಜ್ ಕಮಿಟಿಯ ವರದಿಯನ್ನು ಅಂಗೀಕರಿಸಲು ಮೊರಾರ್ಜಿ ಗೊತ್ತುವಳಿ

ಮಂಡಿಸಿದರು–ಇಂದಿರಾ ಗಾಂಧಿಯನ್ನು ಲೋಕಸಭೆಯಿಂದ ಉಚ್ಚಾಟಿಸುವುದು. ಲೋಕಸಭೆ ಪ್ರೊರೋಗ್ ಮಾಡುವ ತನಕ ಆಕೆಯನ್ನು ಜೈಲಿಗೆ ಹಾಕುವುದು. ಲೋಕಸಭೆಯ ಸಭಾಪತಿ ಕೆ.ಎಸ್.ಹೆಗ್ಡೆ. ಗೊತ್ತುವಳಿ ಅಂಗೀಕೃತವಾಯಿತು. ಇಂದಿರಾ ಗಾಂಧಿ ಏನೋ ಹೇಳಲಿಕ್ಕೆಂದು ಎದ್ದರು. ಯಾವುದೋ ಮರು ಚಿಂತನೆಗೆ ಒಳಗಾದವರಂತೆ ಪುನಃ ಕುಳಿತುಕೊಂಡರು.

ಪಾರ್ಲಿಮೆಂಟ್ ಹೌಸ್‌ನ ಸುತ್ತಲೂ ಜನಸಾಗರವಿತ್ತು. ಲೋಕಸಭೆಯ ನಿರ್ಧಾರ ಜನಸಾಮಾನ್ಯರು ನಿರೀಕ್ಷಿಸಿದ್ದೇ ಆಗಿದ್ದರೂ ಅವರ ಮನಸ್ಸಿನಲ್ಲಿ ಜನತಾ ಸರಕಾರದ ವಿರುದ್ಧ ಸಿಟ್ಟಿನ, ದ್ವೇಷದ ಬೀಜಗಳು ಬಿದ್ದದ್ದು ಅವತ್ತಾಗಿತ್ತು. ಸಂಸತ್ ಸದಸ್ಯತ್ವ ನಿಷೇಧಿಸಿದ್ದ ಕುರಿತಾಗಿರಲಿಲ್ಲ ಅವರ ಪ್ರತಿಭಟನೆ. ಆ ಮುದುಕರೆಲ್ಲ ಒಟ್ಟಾಗಿ ಅಸಹಾಯ ಹೆಂಗಸೊಬ್ಬಳನ್ನು ಹದ್ದುಬಸ್ತಿನಲ್ಲಿಡಲು ನಿರ್ಧರಿಸಿದ್ದೇ ಅವರನ್ನು ರೊಚ್ಚಿಗೆಬ್ಬಿಸಿದ್ದು. ವಾಟರ್ ಗೇಟ್ ಪ್ರಕರಣದ ಬಳಿಕ ನಿಕ್ಸನ್‌ಗೆ ಕೂಡ ಈ ಅವಸ್ಥೆ ಬಂದಿರಲಿಲ್ಲ. ಇಂದಿರಾ ಎಂಬ ಸೋಜಿಗ ಇದರೊಂದಿಗೇ ಕೊನೆಗೊಂಡೀತೆ? ಬುಟ್ಟೋಗಾದ ಅವಸ್ಥೆ ಇಂದಿರಾರಿಗೂ ಆದೀತೆ?

ಜೈಲುವಾಸ ಆಕೆಗೆ ಹೊಸದಾಗಿರಲಿಲ್ಲ. ೧೯೪೨ರಲ್ಲಿ ಸುಮಾರು ಆರು ತಿಂಗಳುಗಳ ಕಾಲ ಆಕೆ ಜೈಲ್‌ನಲ್ಲಿ ಕಳೆದಿದ್ದರು.

ಆದರೆ ಜನತಾ ಸರಕಾರ ಆಕೆಯನ್ನು ಜೈಲಿನಲ್ಲಿರಿಸಿದ್ದು ಏಳು ದಿನಗಳ ತನಕವಷ್ಟೇ. ನಿಖರವಾಗಿ ಹೇಳುವುದಾದರೆ ೧೬೫ ತಾಸು ಮತ್ತು ೨೫ ನಿಮಿಷಗಳು.

ಜೈಲ್‌ನಿಂದ ಬಿಡುಗಡೆಯಾದಾಗ ನಡೆಸಿದ್ದ ಪತ್ರಿಕಾ ಗೋಷ್ಠಿಯಲ್ಲಿ ಆಕೆ ಓರ್ವ ನವವಧುವಿನಂತೆ ಉಲ್ಲಾಸವತಿಯಾಗಿದ್ದರು. ಮದುವೆಯಾದ ಬಳಿಕ ಮೊದಲ ಬಾರಿ ತವರಿಗೆ ಸತ್ಕಾರ ಸ್ವೀಕಾರಕ್ಕಾಗಿ ಬಂದಂಥ ಆಹ್ಲಾದ. ಆಕೆ ನಗುತ್ತ ಹೇಳಿದರು: "ಬಹಳ ಕಾಲದ ಬಳಿಕ ನನಗೆ ವಿಶ್ರಾಂತಿಗೆ ಅವಕಾಶ ಕಲ್ಪಿಸಿಕೊಟ್ಟ ಜನತಾ ಸರಕಾರದ ಬಗ್ಗೆ ನನಗೆ ಕೃತಜ್ಞತೆ ಇದೆ. ಓದುತ್ತ, ಉಣ್ಣುತ್ತ, ನಿದ್ರಿಸುತ್ತ ನಾನು ಜೈಲಿನಲ್ಲಿ ಹೊತ್ತು ಕಳೆದೆ."

ಬ್ರೌನ್ ಬಣ್ಣದಲ್ಲಿ ಪ್ರಿಂಟ್‌ಗಳಿರುವ ಕಾಟನ್‌ಸೀರೆ, ಬ್ರೌನ್ ಬಣ್ಣದ ಶಾಲುಗಳನ್ನು ಧರಿಸಿರುವ, ತಿಹಾರ್ ಜೈಲ್‌ನ ಗೇಟ್ ದಾಟಿ ಹೊರಗೆ ಬಂದ ಇಂದಿರಾರನ್ನು ಕಂಡಾಗ ನಾನು ಮನಸ್ಸಿನಲ್ಲಿ ಅಂದುಕೊಂಡೆ, ಆಕೆ ಮರಳಿ ಬಂದಿರುವರು, ಆಡಳಿತೆಯ ಚುಕ್ಕಾಣಿ ಹಿಡಿಯಲು ಈಕೆ ಮರಳಿ ಬಂದಿರುವರು.

ಬಾಗಿಲು ಬಡಿದ ಸದ್ದು ಕೇಳಿಸಿತು.

ಕೆಫೆಟೇರಿಯಾದಿಂದ ಊಟ ತಂದಿದ್ದಾನೆ ಮಾಣಿ.

ಮೇಜಿನ ಮೇಲೆ ಟ್ರೇ ಇರಿಸಿ ಅವನು ಹೊರಟು ಹೋದ. ಆಸೆಬುರುಕನಂತೆ ರವಿ ಊಟ ಮಾಡಿದ. ಕೈ ತೊಳೆಯಲು ಬಚ್ಚಲಿನತ್ತ ನಡೆಯುವಾಗ ಅಂದು



ಕೊಂಡ. ಇವತ್ತು ಬೇಗ ಮಲಗಬೇಕು. ತುಂಬ ಆಯಾಸವಾಗಿದೆ.

ಅಷ್ಟರಲ್ಲಿ ಫೋನ್ ದನಿಗೈದಿತ್ತು. ಮುಂದಿನ ೪೮ ತಾಸುಗಳೂ ತನಗೆ ನಿದ್ರಿಸಲು ಸಾಧ್ಯವಾಗುವುದಿಲ್ಲವೆಂದು ಫೋನ್ ಎತ್ತಿಕೊಳ್ಳುವಾಗ ಆತ ಅಂದುಕೊಂಡಿರಲಿಲ್ಲ.

* * *

ಜಾಕಿಗಳ ಮೇಲೆ ನಿಲ್ಲಿಸಲಾದ ಕಾರ್‌ನ ಅಡಿಯಲ್ಲಿ ಅಂಗಾತ ಮಲಗಿದ್ದುಕೊಂಡೇ ಉಪಕಾರ್‌ಸಿಂಗ್ ತನ್ನ ಕಾರ್ಯ ಯೋಜನೆಗಳನ್ನು ಹೊಸ ಸನ್ನಿವೇಶದಲ್ಲಿ ಒಮ್ಮೆ ಕಳಚಿ ಜೋಡಿಸಿದ. ವರ್ಕ್‌ಶಾಪ್‌ನ ಮಾಲಿಕ ನರೋತ್ತಮ್‌ಸಿಂಗ್‌ನಿಂದ ಆಗಾಗ ಸುದ್ದಿಗಳು ಸಿಕ್ಕುತ್ತಲೇ ಇವೆ. ಟ್ರಾನ್ಸಿಸ್ಟರ್‌ನಲ್ಲಿ ಆಕಾಶವಾಣಿಯಿಂದ ಬಂದ ಸುದ್ದಿಗಳು ಪೂರ್ತಿ ನಿಜವಾಗಿರಬೇಕೆಂದಿಲ್ಲ. ಬಿ.ಬಿ.ಸಿ.ಯ ವರದಿಯಿಂದ ಕೊಲೆಗಾರರಲ್ಲಿ ಒಬ್ಬ ಕೊಲೆಯಾಗಿರುವನೆಂದೂ ಮತ್ತೊಬ್ಬ ಅಪಾಯಕರವಾಗಿ ಗಾಯಗೊಂಡಿರುವನೆಂದೂ ಮೂರನೆಯವನೊಬ್ಬ ತಪ್ಪಿಸಿಕೊಂಡಿರುವನೆಂದೂ ಗೊತ್ತಾಯಿತು. ಯಾರು ಮೂರನೆಯವನು? ಸಿಕ್ಕಿಬಿದ್ದ ಇಬ್ಬರೂ ಸಿಕ್ಖರೆಂದೂ ತಪ್ಪಿಸಿಕೊಂಡವನು ಪಗಡಿ ಇಲ್ಲದ ಗಡ್ಡಮೀಸೆಗಳನ್ನು ಬಿಟ್ಟಿರದ ಒಬ್ಬಾತನೆಂದೂ ನರೋತ್ತಮ್ ಸಿಂಗ್ ತಂದಿದ್ದ ಸಂಜೆ ಪತ್ರಿಕೆಯಲ್ಲಿ ಸೂಚನೆಗಳಿದ್ದವು. ಗುಂಡಿಟ್ಟದ್ದು ಸಬ್‌ಇನ್ಸ್‌ಪೆಕ್ಟರ್ ಬಿಯಂತ್‌ಸಿಂಗ್, ಆತನ ೩೨ ಸರ್ವೀಸ್ ರಿವಾಲ್ವರ್‌ನಿಂದ ಹಾಗೂ ಕಾನ್‌ಸ್ಟೇಬಲ್ ಸತ್‌ವಂತ್‌ಸಿಂಗ್ ಆತನ ಸ್ಟೆನ್‌ಗನ್ನಿನಿಂದ. ಮೂರನೆಯವನು ಭಯೋತ್ಪಾದಕರ ಸಂಘಟನೆಯವನಿರಬಹುದೆ? ಅಥವಾ ಬೇರಾವುದೋ ಅಂತಾರಾಷ್ಟ್ರ ಸಂಘಟನೆಯವನೊ, ಅರಮನೆಯೊಳಗೇ ಇರುವ ವಿಶ್ವಾಸಘಾತಕರ ಕೈಯಾಳೊಏನೊ. ಸಿಕ್ಖರ ಭಯೋತ್ಪಾದಕರೆಡೆಯಲ್ಲೆ ಜುಟ್ಟು, ಗಡ್ಡಗಳನ್ನು ಬೋಳಿಸಿ ರುಮಾಲು ಧರಿಸಿದ ಬಹಳಷ್ಟು ಮೋನಗಳು ಅರ್ಪಣಾ ಭಾವದೊಂದಿಗೆ ಸೇರಿಕೊಂಡಿದ್ದಾರೆ. ಶಂಕೆಗೆಡೆಕೊಡದ ಹಾಗೆ ಹಿಂದೂಗಳ ಹಾಗೂ ಮುಸ್ಲಿಮರೆಡೆಯಲ್ಲಿ ನುಸುಳಲಿಕ್ಕೂ ಕಾರ್ಯ ನಿರ್ವಹಣೆಯ ಬಳಿಕ ಸಂದೇಹಾಸ್ಪದವೀಯದ ಹಾಗೆ ಸ್ಥಳ ಬಿಡಲಿಕ್ಕೂ ಜನಸಂದಣಿಯೊಳಗೆ ಕರಗಿ ಬಿಡಲಿಕ್ಕೂ ಅವರಿಗೆ ಸಾಧ್ಯವಾಗುತ್ತದೆ. ಆದರೆ ತಾನು ಸಕ್ರಿಯ ಸದಸ್ಯನಾಗಿರುವ ಆ ಸಂಘಟನೆ ಕೊಲೆ, ಖೂನಿಗಳನ್ನು ಸ್ಥಗಿತಗೊಳಿಸಿರುವುದಾಗಿ ಘೋಷಿಸಿದ ಬಳಿಕ ಇದು ಹೇಗೆ ಸಂಭವಿಸಿದ್ದು?

ಪ್ರಧಾನಿಯ ನಿವಾಸವಿರುವ ಒಂದನೆಯ ನಂಬರ್ ಸಫ್ದರ್‌ಜಂಗ್ ಮಾರ್ಗ, ಅವರ ಆಫೀಸ್ ಕಟ್ಟಡವಿರುವ ಒಂದನೆಯ ನಂಬರ್ ಅಕ್ಬರ್ ಮಾರ್ಗ ಹಾಗೂ ಮನೆಯಿಂದ ಆಫೀಸ್ ಕಡೆಗಿರುವ ಕೆಂಗಲ್ಲು ಹಾಸಲಾದ ಕಾಲುಹಾದಿ ಮುಂತಾದುವುಗಳೆಲ್ಲ ಅಂಗೈಯಲ್ಲಿನ ರೇಖೆಗಳ ಹಾಗೆ ಭಯೋತ್ಪಾದಕರಿಗೆ

ಗೊತ್ತಿದ್ದುವು. ರೇಸ್‌ಕೋರ್ಸ್ ರೋಡ್, ತೀನ್‌ಮೂರ್ತಿ ಮಾರ್ಗ, ರಾಜಾಜಿ ಮಾರ್ಗ, ಸಫ್ದರ್‌ಜಂಗ್ ಮಾರ್ಗ ಹಾಗೂ ಅಕ್ಬರ್ ರೋಡ್‌ಗಳು ಸಂಧಿಸುವ ಟ್ರಾಫಿಕ್ ವೃತ್ತದ ಹುಲ್ಲು ನೆಲದಲ್ಲಿ ತಾನೇ ಅನೇಕ ಸಾಯಾಹ್ನಗಳನ್ನು ಕಳೆದಿದ್ದೆ. ಆ ವೃತ್ತದಲ್ಲಿ ಕುಳಿತು ನೋಡಿದರೆ, ಯಾವತ್ತೂ ಬೆಳಗ್ಗೆ ದರ್ಶನ ನೀಡುವ ಲಾನ್ ಕಾಣಿಸುತ್ತದೆ; ಲಾನ್‌ನ ಸುತ್ತಲೂ ಇರುವ ತಂತಿ ಬೇಲಿಗಳ ಒತ್ತಿನಲ್ಲಿ ಎತ್ತರಕ್ಕೆ ಬೆಳೆದಿರುವ ಸರ್ವೆ ಮರಗಳ ಮೇಲಿನ ಮರ್ಮರ ಕೇಳಿಸುತ್ತದೆ. ಜಿಮ್ಖಾನ ಕ್ಲಬ್‌ನ ಎದುರಿನಲ್ಲಿ ಒಂದನೆಯ ನಂಬರ್ ಸಫ್ದರ್ ಜಂಗ್ ರೋಡ್‌ಗೆ ಪ್ರವೇಶಿಸುವ ಮಾರ್ಗ ಕೊನೆಗೊಳ್ಳುವುದು ಕಾರ್ ಪಾರ್ಕ್ ಮಾಡಲಾಗುತ್ತಿರುವ ಗ್ಯಾರೇಜ್‌ನಲ್ಲಿ. ಮನೆಯಿಂದ ಆಫೀಸ್ ಕಡೆಗಿರುವ ಕಾಲುಹಾದಿ ಈ ಮಾರ್ಗವನ್ನು ಅಡ್ಡಕ್ಕೆ ಹಾದು ಹೋಗುತ್ತದೆ. ಒಳಬೇಲಿಯಾಗಿ, ಹೂ ಬಳ್ಳಿಗಳು, ಮದರಂಗಿ ಗಿಡಗಳು ಮತ್ತು ಕೆಂಪು ಹಾಗೂ ನೇರಳೆ ಬಣ್ಣಗಳ ಹೂಬಿಡುವ ಬೋಗನ್‌ವಿಲ್ಲಾಗಳು. ಹೌದು, ಕೊಲೆ ನಡೆದದ್ದು ಆ ವಿಕೆಟ್‌ಗೇಟ್‌ನಲ್ಲೇ. ಗೇಟ್‌ನ ಎಡಬದಿಯಲ್ಲಿ ಬಿಯಂತ್ ಸಿಂಗ್ ಮತ್ತು ಬಲಬದಿಯಲ್ಲಿ ಸತ್‌ವಂತ್ ಸಿಂಗ್ ನಿಂತುಕೊಂಡಿದ್ದಿರಬಹುದು; ಪ್ರಧಾನಿಯ ಬೆನ್ನಹಿಂದೆ ಸನಿಹದಲ್ಲೆ ಕೊಡೆಹಿಡಿದುಕೊಂಡಿದ್ದ ನಾರಾಯಣ್ ಸಿಂಗ್, ಹಿಂದೆಯೇ ನಡೆಯುತ್ತಿದ್ದ ರಾಮೇಶ್ವರ್‌ದಾಸ್, ಧವನ್ ಮತ್ತು ನಾಥುರಾಮ್ ಕೊಲೆಯಾಗದೆ ಪಾರಾದದ್ದು ಹೆಚ್ಚಿನ ಪ್ರಶ್ನೆಗಳನ್ನೆಬ್ಬಿಸುತ್ತವೆ. ಬೋಗನ್‌ವಿಲ್ಲಾದ ಕಮಾನುಗಳಲ್ಲಿ ರಕ್ತರಂಗಿನ ಹೂವುಗಳೇ ಇಂದು ಕಾಣಿಸಿಕೊಂಡಿರಬಹುದು. ಲಾನ್‌ನ ಮಧ್ಯದ ನೈದಿಲೆಕೊಳದ ತುಂಬು ಬಹುವರ್ಣದ ಹೂವುಗಳು ಅರಳಿರಬಹುದು.

ಪ್ರಾಯಶಃ ಕೆಲವು ಪ್ರಶ್ನೆಗಳಿಗೆ ಯಾವತ್ತೂ ಉತ್ತರ ಪತ್ತೆಯಾಗದೆ ಹೋಗಬಹುದು. ಕೆನಡಿಯ ಕೊಲೆಗೆ ಸಂಬಂಧಿಸಿದ್ದ ಪ್ರಶ್ನೆಗಳಿಗೆ ಇನ್ನೂ ಕೂಡ, ನಂಬಲರ್ಹ ಉತ್ತರಗಳು ಪತ್ತೆಯಾಗಲಿಲ್ಲವಲ್ಲ?

ಆತ ಗ್ಯಾರೇಜ್‌ನ ಮಬ್ಬು ಬೆಳಕಿನಲ್ಲಿ ಸಂಜೆ ಪತ್ರಿಕೆಯನ್ನು ಬಿಡಿಸಿ ಓದಿದ. ಎರಡು ಬಾರಿ ಆದ್ಯಂತ ಆಗಲೇ ಓದಿದ್ದ. ಆದರೂ ಹೆಡ್‌ಕ್ವಾರ್ಟರ್ಸ್‌ನಿಂದ ಯಾವ ನಿರ್ದೇಶನವೂ ಸಿಕ್ಕಲಿಲ್ಲವಾದುದರಿಂದ ಬೇರೇನೂ ಮಾಡತಕ್ಕದ್ದಿಲ್ಲ. ಆತನ ದೃಷ್ಟಿಯೆದುರೇ ಇರುವ ವಿಂಡ್‌ಸ್ಕ್ರೀನ್ ಚುಚ್ಚಿ ಪುಡಿಮಾಡಲಾದ ಸರಕಾರದ ಸ್ಟಾಫ್‌ಕಾರ್ ಎಂದು ಬರೆಯಲಾದ ಚಾಕೊಲೆಟ್ ಬ್ರೌನ್ ಬಣ್ಣದ ಅಂಬಾಸಿಡರ್ ಕಾರ್ ಹೊಸ ಆಶಯಗಳನ್ನು ಮೂಡಿಸಿದುವು. ಚಳವಳಿಯ ತಿಜೋರಿ ಬರಿದಾಗಿದೆಯೆಂದೂ ಕಾರ್ಯಕಲಾಪಗಳಿಗಾಗಿ ಲಕ್ಷಗಟ್ಟಲೆ ರೂಪಾಯಿಗಳ ಅಗತ್ಯವಿದೆಯೆಂದೂ ಪ್ರತಿಯೊಬ್ಬ ಸದಸ್ಯನಿಗೂ ಗೊತ್ತು. ಯಾವ ಸರಕಾರದ ವಿರುದ್ಧ ಯುದ್ಧ ಸಿದ್ಧತೆ ನಡೆಸಲಾಗುತ್ತಿದೆಯೊ ಅದೇ ಸರಕಾರದ ಖಜಾನೆಯಿಂದಲೇ



ಚಿನ್ನ ಮತ್ತು ಹಣವನ್ನು ದೋಚಬೇಕಾಗುತ್ತದೆ. ನಾಡಿನ ಉದ್ದಗಲಕ್ಕೂ ಹರಡಿಕೊಂಡಿರುವ ಚಳವಳಿಯ ಘಟಕ ಸಂಸ್ಥೆಗಳು ಹಣದ ಅಭಾವದ ಬಗ್ಗೆ ಎತ್ತಿ ಹೇಳುವಾಗ ಭಿಂದ್ರನ್‌ವಾಲ ತಮಾಷೆಯಾಗಿ ಹೇಳುತ್ತಾ ಇದ್ದರು; ಭಾರತ ಸರಕಾರದ ಬ್ಯಾಂಕುಗಳಿಗೆ ನಾನು ಎಲ್ಲವನ್ನೂ ವಹಿಸಿಕೊಟ್ಟಿದ್ದೇನೆ. ಲಾಕರ್‌ಗಳಲ್ಲಿ ಚಿನ್ನ ಮತ್ತು ಚಿನ್ನಾಭರಣಗಳೂ ವಾಲ್ಟ್‌ಗಳಲ್ಲಿ ಕೋಟಿಗಟ್ಟಲೆ ಕರೆನ್ಸಿ ನೋಟ್‌ಗಳೂ ಇವೆ. ಹುಡುಗರಿರಾ... ಆ ಹಣ, ಚಿನ್ನ, ಒಡವೆ ಎಲ್ಲವೂ ನಿಮ್ಮದೇ.

ಅನಂತರ, ಆತ ತಾನು ಪ್ರಾರ್ಥನಾ ಸಭೆಗಳಲ್ಲಿ ಹೇಳುತ್ತಾ ಇದ್ದ ಆ ಹಳೆಯ ಕತೆಯನ್ನು ಪುನರಾವರ್ತಿಸುವರು. ಹೌದು, ನಾದಿರ್‌ಷಾ ಜಗತ್ತಿನ ಅತಿದೊಡ್ಡ ದರೋಡೆಕೋರನಾಗಿದ್ದನು. ಅವನು ಮೊಗಲರ ರಾಜಧಾನಿ ದೆಹಲಿಯನ್ನು ಲೂಟಿ ಮಾಡಿ ಮರಳಿ ಹೋಗುತ್ತಾ ಇದ್ದ. ಆಗ ಸಿಕ್ಖರು ಮೊಗಲರ ಕ್ರೂರ ಚಿತ್ರಹಿಂಸೆಗಳಿಗೆ ಹೆದರಿ ಶಿವಾಲಿಕ್ ಗುಡ್ಡಗಳಲ್ಲಿ ಬಚ್ಚಿಟ್ಟುಕೊಂಡೇ ದಿನಗಳೆಯುತ್ತಿದ್ದರು. ಅವರು, ಧೀರನಾಗಿದ್ದ ತಮ್ಮ ನಾಯಕ ಬಂದಾಸಿಂಗನ ಕೊಲೆಯಾದಾಗಿನಿಂದ ಕಂಗಾಲಾಗಿ ಬಿಟ್ಟಿದ್ದರು. ಅಲ್ಲದೆ, ಫರೂಕ್ ಸಿಯಾರನು ಸಿಕ್ಖರನ್ನು ಶಿರಚ್ಛೇದನಕ್ಕೆ ಗುರಿಪಡಿಸಲು ಆಜ್ಞೆಯನ್ನು ಹೊರಡಿಸಿದ್ದನು. ಆದುದರಿಂದಲೆ ಸಿಕ್ಖರು ಶಿವಾಲಿಕ್ ಗುಡ್ಡಗಳಲ್ಲಿ ತಲೆಮರೆಸಿಕೊಂಡು ಸೂಕ್ತ ಸಂದರ್ಭಕ್ಕಾಗಿ ತಮ್ಮ ಸಹಜವಾದ ಧೈರ್ಯದೊಂದಿಗೆ ಕಾಯುತ್ತ ಇದ್ದರು. ಆಗಲೇ ಅದೇ ದಾರಿಯಾಗಿ ನಾದಿರ್‌ಷಾನು, ತಾನು ಕೊಳ್ಳೆಹೊಡೆದಿದ್ದ ಮೊಗಲ ಸಾಮ್ರಾಜ್ಯದ ಅಮೂಲ್ಯ ಸಂಪತ್ತಿನೊಂದಿಗೆ ಜಯಭೇರಿ ಮೊಳಗಿಸುತ್ತ ಸ್ವದೇಶಕ್ಕೆ ಮರಳುತಿದ್ದನು. ಚಿನ್ನ, ಬೆಳ್ಳಿ, ವಜ್ರಗಳೇ ಅಲ್ಲದೆ ಕೊಹಿನೂರ್ ರತ್ನ, ಮಯೂರ ಸಿಂಹಾಸನಗಳೂ ಕೊಳ್ಳೆ ಮಾಲುಗಳಲ್ಲಿ ಒಳಗೊಂಡಿದ್ದವು. ಈ ಸಂದರ್ಭವನ್ನು ಗುಡ್ಡದಲ್ಲಿ ತಲೆ ಮರೆಸಿಕೊಂಡಿದ್ದ ಸಿಕ್ಖರು ಚೆನ್ನಾಗಿ ಬಳಸಿಕೊಂಡರು. ಅವರು ನಾದಿರ್‌ಷಾನ ದಂಡನ್ನು ಬೆಂಗಡೆಯಿಂದ ಆಕ್ರಮಿಸಿದರು. ವಿಜಯೋತ್ಸಾಹದಲ್ಲಿ ಎಲ್ಲವನ್ನೂ ಮರೆತು ಕುಡಿದು ಕುಣಿಯುತ್ತಾ ಇದ್ದ ನಾದಿರ್‌ಷಾನ ಸೇನೆ ಆ ಆಕ್ರಮಣವನ್ನು ಸ್ವಲ್ಪವೂ ನಿರೀಕ್ಷಿಸಿರಲಿಲ್ಲ. ಸದಸ್ಯ ಸಂಖ್ಯೆಯಲ್ಲೂ ಶಸ್ತ್ರ ಸಂಗ್ರಹದಲ್ಲೂ ಬಹಳಷ್ಟು ಮೇಲ್ಪಟ್ಟದ್ದಾಗಿತ್ತು ನಾದಿರ್‌ಷಾನ ಸೈನ್ಯ. ಸಿಕ್ಖರಾದರೊ ಎಷ್ಟೋ ದಿನಗಳಿಂದ ಸಾಕಷ್ಟು ಆಹಾರವಿಲ್ಲದೆ, ಶಸ್ತ್ರಾಸ್ತ್ರಗಳಿಲ್ಲದೆ ಕ್ಷೀಣವಾಗಿದ್ದರು. ಹೀಗಿದ್ದೂ ನಾದಿರ್‌ಷಾನ ಸೇನೆಯನ್ನು ಗೆರಿಲ್ಲಾ ಯುದ್ಧ ತಂತ್ರದಿಂದ ಗಲಿಬಿಲಿಗೊಳಿಸಲು ಸಿಕ್ಖರು ಸಮರ್ಥರಾದರು. ಹಿಂದೂಸ್ಥಾನದಿಂದ ಸಾಗಿಸಲು ಯತ್ನಿಸಿದ್ದ ಧನದ ಒಂದು ಮುಖ್ಯ ಭಾಗವನ್ನು ನಮ್ಮ ಖಲ್ಸ ವಶಪಡಿಸಿತ್ತು. ಹಿಂದೂಸ್ಥಾನದ ಮಾನ ಕಾಪಾಡಲು, ಹಿಂದೂಸ್ಥಾನದ ದೇಗುಲಗಳಿಂದ ಮೊಗಲರು ವಶಪಡಿಸಿದ್ದ ಕೊಳ್ಳೆ ಸ್ವತ್ತುಗಳು ಹಿಂದೂಸ್ಥಾನದ ಗಡಿದಾಟುವುದನ್ನು ತಡೆಗಟ್ಟಲು ಅಂದೂ ಸಿಕ್ಖನಷ್ಟೇ ಇದ್ದನು. ಈ ಧೋತಿವಾಲಗಳು ಕಾಲುಗಳ ಸಂದಿಯಲ್ಲಿ

ಬಾಲ ತುರುಕಿ ಹೆದರಿ ಕಂಗಾಲಾಗಿ ಕುಳಿತಿದ್ದರು ಅಂದು. ನಮ್ಮ ತಾತ ಮುತ್ತಾತಂದಿರು ಮೊಗಲರ ವಿರುದ್ಧ ಜೀವಾಹುತಿ ನಡೆಸುತ್ತಿದ್ದಾಗಲೂ ಇಲ್ಲಿನ ಬ್ರಾಹ್ಮಣರೂ ವೈಶ್ಯರೂ ಶೂದ್ರರೂ ಮೊಗಲರಿಗೆ ಸ್ತುತಿಗೀತೆ ಹಾಡುತ್ತಿದ್ದರು.

ಬಳಿಕ ಭಿಂದ್ರನ್‌ವಾಲ ಆ ಕತೆ ಹೇಳುವರು. ಇಂದಿರಾಗಾಂಧಿ, ರಾಷ್ಟ್ರದ ಸಲುವಾಗಿ ನೆಹರೂ ಕುಟುಂಬ ಸಲ್ಲಿಸಿದ್ದ ಸೇವೆಯ ಕುರಿತು ಹೇಳುವಾಗಲೆಲ್ಲ ಜವಾಹರ್‌ಲಾಲ್ ಮತ್ತು ಮೋತಿಲಾಲರ ತ್ಯಾಗಗಳ ಕುರಿತು ಕೊಚ್ಚುತ್ತಲೇ ಇರುತ್ತಾರೆ. ರಾಷ್ಟ್ರಕ್ಕಾಗಿ ಅವರು ತಮ್ಮ ಸರ್ವಸ್ವವನ್ನೂ ತ್ಯಾಗ ಮಾಡಿದ್ದರೆಂದು; ಜೈಲುವಾಸ ಅನುಭವಿಸಿದ್ದರೆಂದು. ಆದರೆ ಬೀವಿಜಿ ಒಮ್ಮೆ ಕೂಡ ಮೋತಿಲಾಲರ ಆಚೆಗಿನ ಪೂರ್ವಿಕರ ಕುರಿತು ಹೇಳುತ್ತಿರಲಿಲ್ಲ. ಭಿಂದ್ರನ್‌ವಾಲ ಗಡ್ಡ ನೇವರಿಸುತ್ತ, ಕಣ್ಣು ಕಿರಿದುಗೊಳಿಸುತ್ತ ತುಂಟತನ ತುಂಬಿದ್ದ ಭಾವದೊಂದಿಗೆ ದನಿ ತಗ್ಗಿಸಿ ಹೇಳುವರು. ಮೋತಿಲಾಲರಿಗೆ ತಂದೆ, ತಂದೆಗೆ ತಂದೆ ಇರಲಿಲ್ಲವೆಂಬ ಸೋಗು ಆಕೆಯದ್ದು. ಬಳಿಕ ಭಿಂದ್ರನ್‌ವಾಲ ಧ್ವನಿಯೇರಿಸಿ ಆವೇಶದೊಂದಿಗೆ ಹೇಳುವರು. ಇದ್ದರು, ಮೋತಿಲಾಲರಿಗೆ ಒಬ್ಬ ತಂದೆ ಇದ್ದರು. ಆ ತಂದೆಗೂ ಮತ್ತೊಬ್ಬ ತಂದೆ ಇದ್ದರು. ಆದರೆ ಅವರು ದೇಶಕ್ಕಾಗಿ ತ್ಯಾಗ ಮಾಡುತ್ತ ಇದ್ದಿರಲಿಲ್ಲ; ಮೊಗಲರ ಜೈಲ್‌ನಲ್ಲಿ ಬಂಧಿತರಾಗಿರಲಿಲ್ಲ. ಗುರುನಾನಕರ ಅನುಯಾಯಿಗಳು ಪಂಜಾಬನ್ನು ಮೊಗಲರಿಂದ ಬಿಡಿಸಿಕೊಳ್ಳುವ ಪ್ರಯತ್ನದಲ್ಲಿ ಸಾವಿರಗಟ್ಟಲೆಯಲ್ಲಿ ಆತ್ಮಾಹುತಿ ಮಾಡುತ್ತಿದ್ದಾಗ, ಸಿರ್‌ಹಿಂದ್‌ನ ಗವರ್ನರ್ ವಜೀರ್‌ಖಾನ್‌ನನ್ನು ಕೊಂದು ಗೋವಿಂದ್ ಸಿಂಗರ ಮಕ್ಕಳನ್ನು ಕೊಂದದ್ದರ ಸೇಡು ತೀರಿಸುತ್ತಿದ್ದಾಗ, ಕರ್ಣಾಲ್‌ನಿಂದ ಲೂಧಿಯಾನದವರೆಗಿನ ಪ್ರದೇಶಗಳನ್ನು ಖಲ್ಸ ವಶಪಡಿಸುತ್ತಿದ್ದಾಗ, ಬಂದಾಸಿಂಗರು ಮುಖಳೀಸ್‌ಗರ್‌ನ ಹಳೆಯ ಕೋಟೆಯನ್ನು ವಶಪಡಿಸಿದ ಬಳಿಕ ದುರಸ್ತಿ ಮಾಡಿಸಿ ಲೋಹ್‌ಗರ್ ಎಂಬ ಹೆಸರಿಟ್ಟು ಖಾಲ್ಸದ ಹೆಸರಿನಲ್ಲಿ ಪಂಜಾಬನ್ನು ಆಳುತ್ತಿದ್ದಾಗಲೆಲ್ಲ ನಮ್ಮ ಇಂದಿರಾ ಗಾಂಧಿ–ನೆಹರೂಗಳ ಪೂರ್ವಿಕರು ಕಾಶ್ಮೀರದಲ್ಲಿ ಸುಖ ಜೀವನ ನಡೆಸುತ್ತಾ ಇದ್ದರು. ಖಾಲ್ಸಾದ ಮಟ್ಟಿಗೆ ಪವಿತ್ರವಾದುದು ಜ್ಞಾನ, ಅರಿವು ಮುಂತಾದುವುಗಳು. ಜ್ಞಾನವನ್ನು ಬೋಧಿಸಿ ಪ್ರತಿಫಲ ಪಡೆಯುವಂಥ ಸಂಕುಚಿತತನವನ್ನು ನಮ್ಮ ಗುರುಗಳಲ್ಲಿ ಯಾರೊಬ್ಬರೂ ತೋರ್ಪಡಿಸಲಿಲ್ಲ. ಇವತ್ತು ಕೂಡ ನಮ್ಮ ಗುರುದ್ವಾರಗಳಲ್ಲಿನ ಜ್ಞಾನಿಗಳೂ ಗ್ರಂಥಿಗಳೂ ನಮ್ಮ ಪವಿತ್ರವಾದ ಗುರುವಾಣಿಯನ್ನು ಉರುಹೊಡೆಯುತ್ತ ಗುರುಗ್ರಂಥ ಸಾಹಿಬ್‌ನಿಂದ ಪುಸ್ತಕ ಭಾಗಗಳನ್ನು ವಾಚಿಸಿ ಭಕ್ತ ಜನರ ಜ್ಞಾನವನ್ನು ವೃದ್ಧಿಪಡಿಸುತ್ತಿರುವರು. ಅದಕ್ಕೆ ಪ್ರತಿಯಾಗಿ ಅವರು ಏನನ್ನು ಕೇಳುವುದಿಲ್ಲ. ಜ್ಞಾನವನ್ನರಸುತ್ತ ಬರುವವರ ಹಸಿವೆ ಇಂಗಿಸಲು, ನೀರಡಿಕೆ ನೀಗಿಸಲು ನಮ್ಮ ಲಂಕಾರ್‌ಗಳಲ್ಲಿ ಉಚಿತವಾಗಿ ಭೋಜನ, ಪಾನೀಯಗಳು ಯಾವಾಗಲೂ ದೊರೆಯುತ್ತವೆ. ಆದರೆ ಹಿಂದೂಗಳಲ್ಲಿನ



ಬ್ರಾಹ್ಮಣರನ್ನು ನೋಡಿರಲ್ಲ–ಅವರು ವೈಶ್ಯರಿಗಿಂತಲೂ ಹೆಚ್ಚು ದುರಾಸೆಯವರು. ನೀವು ಕಾಶಿಗೆ ಹೋಗಿದ್ದಿರಾ? ಜನಿವಾರಧಾರಿ ಪಂಡಾಗಳು ನಿಮ್ಮನ್ನು ಜೀವ ಸಹಿತ ಸ್ವರ್ಗಕ್ಕೆ ತಲಪಿಸುವರು. ಆದರೆ ಅದಕ್ಕೂ ಮುನ್ನ ಜೇಬ್ ಖಾಲಿ ಮಾಡುತ್ತಾರೆ.

ಇಂದಿರಾಳ ಮುತ್ತಾತ ಪಂಡಿತ್ ಕೌಲ್ ಹುಟ್ಟಿದ್ದೂ ಅಂತಹ ಒಂದು ಬ್ರಾಹ್ಮಣ ಕುಟುಂಬದಲ್ಲೆ. ಸಂಸ್ಕೃತದಲ್ಲೂ ಪಾರ್ಸಿಯಲ್ಲೂ ಪಾಂಡಿತ್ಯ ಹೊಂದಿದ್ದನಂತೆ ಆತ. ಹದಿನೇಳನೆಯ ಶತಮಾನದ ಆದಿಯಲ್ಲಿ ಶಾ ಆಲಮಿನ್‌ನ ಮರಣಾನಂತರ ಮೊಗಲರ ಸಾಮ್ರಾಜ್ಯ ಅಸ್ತವಾಗತೊಡಗಿತ್ತು. ಶಾ ಆಲಮಿನ್‌ನ ಹಿರಿಯ ಮಗ ಪೂರ್ತಿ ಒಂದುವರ್ಷ ಕೂಡ ರಾಜ್ಯಭಾರ ಮಾಡಲಿಲ್ಲ. ಅದಕ್ಕೂ ಮೊದಲೇ ಆತನನ್ನು ಆತನ ಸೋದರ ಫರೂಕ್ ಸಿಯಾರನು ಕೊಲೆಮಾಡಿಸಿದ್ದ. ಕೊಲೆ ಮಾಡಿಸಿದ್ದು ಜುಲ್ಫಿಕರ್‌ಖಾನ್ ಎಂಬ ಮಂತ್ರಿಯಿಂದ. ಫರೂಕ್ ಸಿಯಾರ್ ಚಕ್ರವರ್ತಿಯಾಗಿ ಸ್ನಾನಾರೋಹಣ ಮಾಡಿದ ಬಳಿಕ ಮಾಡಿದ್ದ ಮೊದಲ ಕೃತ್ಯ ಜುಲ್ಫಿಕರ್ ಖಾನನನ್ನು ಕೊಲ್ಲುವುದಾಗಿತ್ತು. ಫರೂಕ್ ಸಿಯಾರ್‌ನ ಸೇನೆ ಲಾಹೋರ್ ವಶಪಡಿಸಿ ಸಿಕ್ಖರನ್ನು ಕಾಡಿಗೆ ಓಡಿಸಿತ್ತು. ಹುಲ್ಲು ಮತ್ತು ಎಲೆಗಳನ್ನು ಮಾತ್ರ ತಿಂದು ಸಿಕ್ಖರು ಕಾಡುಗಳಲ್ಲಿ ಬಚ್ಚಿಟ್ಟುಕೊಂಡರು. ಮೂಳೆ ಚಕ್ಕಳಗಳು ಮಾತ್ರವಾದ ಅವರಲ್ಲಿ ೭೪೦ ಮಂದಿಯನ್ನು ಫರೂಕ್ ಸಿಯಾರನು ದೆಹಲಿಗೆ ತರಿಸಿ ಪ್ರತಿದಿನವೂ ನೂರು ನೂರು ಮಂದಿಯನ್ನು ಕೊಲ್ಲಿಸಿದ. ಸಿಕ್ಕರೊಡನೆ ಇಷ್ಟು ಕ್ರೂರವಾಗಿ ವರ್ತಿಸಿದ್ದ ಫರೂಕ್ ಸಿಯಾರನೇ ಪಂಡಿತ್ ಕೌಲ್‌ನನ್ನು ಕಾಶ್ಮೀರದಿಂದ ದೆಹಲಿಗೆ ಬರಮಾಡಿಕೊಂಡಿದ್ದ. ಸಂಸ್ಕೃತದಲ್ಲಷ್ಟೇ ಅಲ್ಲ ಪಾರ್ಸಿಯಲ್ಲೂ ವಿದ್ವಾಂಸನಾಗಿದ್ದನಲ್ಲ ಪಂಡಿತ್ ಕೌಲ್!

ಸರೋವರಗಳೂ ಮಂಜುಬೆಟ್ಟಗಳೂ ತುಂಬಿಕೊಂಡಿರುವ ಕಾಶ್ಮೀರದ ತಂಪಿನಿಂದ ಕೌಲ್ ಕುಟುಂಬ ದೆಹಲಿಯ ಧೂಳೇಳುವ ಬರಡು ವಾತಾವರಣಕ್ಕೆ ಬರಲು ನಿರ್ಬಂಧಿತವಾಯಿತು. ಅದೇ ನಾನು ಹೇಳಿದ್ದು. ಭಿಂದ್ರನ್‌ವಾಲ ಆವೇಶದೊಂದಿಗೆ ಮುಂದುವರಿಸುತ್ತಿದ್ದರು. "ಖಾಲ್ಸಾವನ್ನು ಒಂದು ಅನುಷ್ಠಾನ ಕರ್ಮ ನಿಷ್ಠೆಯೊಂದಿಗೆ ಧ್ವಂಸ ಮಾಡಿದ್ದ ಫರೂಕ್ ಸಿಯಾರ್, ಕೌಲ್‌ನನ್ನು ಜಹಗೀರಿತ್ತು ಗೌರವಿಸಿದ. ಮಹಮ್ಮದೀಯನು ಕೊಟ್ಟ ನೀರೂ ಕುಡಿಯದ ಬ್ರಾಹ್ಮಣ, ಅವನು ಮುಂದೆ ಚಾಚಿದ್ದ ಎಂಜಲನ್ನು ಸ್ವಾದದೊಂದಿಗೇ ಸವಿದ. ಕೆಲವು ಗ್ರಾಮಗಳನ್ನು, ಚಾಂದ್ನಿಚೌಕ್‌ನಲ್ಲೇ ಒಂದು ಮಹಡಿ ಮನೆಯನ್ನು ಕೌಲ್ ಜಹಗೀರಾಗಿ ಪಡೆದ. ಅಲಹಾಬಾದಿನ ಆನಂದಭವನವನ್ನು ರಾಷ್ಟ್ರಕ್ಕೆ ನೀಡಿದ್ದ ತನ್ನ ಕುಟುಂಬ ದೇಶಕ್ಕೆ ಕೊಟ್ಟ ಕೊಡುಗೆಗಳ ಯಾದಿ ತೋರಿಸಿ ಬೀಗುತ್ತಿರುವ ಇಂದಿರಾ ಒಂದು ಸಂಗತಿಯನ್ನು ಮರೆತು ಬಿಡುತ್ತಾರೆ. ಅಂದು ಮೊಗಲರು ನೀಡಿದ್ದ ಜಹಗೀರಿನ ಮರಳಿಸುವಿಕೆಯನ್ನಷ್ಟೇ ಅವರು ಮಾಡಿದ್ದು. ಇಷ್ಟು ಬೀಗಲಿಕ್ಕೆ ಏನಿದೆ ಅದರಲ್ಲಿ?

ಮೋತಿಲಾಲ್, ಜವಾಹರ ಲಾಲ್, ಕಮಲಾ, ಇಂದಿರಾ–ಇವರೆಲ್ಲ ಬ್ರಿಟಿಷರ ಜೈಲ್‌ಗಳಲ್ಲಿ ಕಳೆದಿದ್ದ ಕತೆಯನ್ನು ಉಪ್ಪು ಖಾರ ಹಚ್ಚಿ ಆತ್ಮಕತೆಗಳಲ್ಲೂ ಕೂಲಿ ಲೇಖಕರು ಬರೆಯುವ ಜೀವನ ಚರಿತ್ರೆಗಳಲ್ಲೂ ದಾಖಲಿಸುತ್ತಿರುವ ಅವರು ಒಂದು ಸಂಗತಿಯನ್ನು ದಾಖಲಿಸಲು ಮರೆಯುತ್ತಾರೆ. ಸಿಕ್ಖರು ಮೊಗಲರೆದುರು ಬಲಿಪಶುಗಳಾಗಿದ್ದಾಗ ಮೋತಿಲಾಲರ ಮುತ್ತಾತಂದಿರು ಮೊಗಲರ ಬೆಳ್ಳಿ ತಟ್ಟೆಯಿಂದ ಎಂಜಲು ಉಣ್ಣುತ್ತ ಇದ್ದರು. ಸಿಪಾಯಿ ದಂಗೆಯ ಕಾಲದಲ್ಲಿ ನೆಹರೂ ಕುಟುಂಬದ ಹಿರಿಯ ಲಕ್ಷ್ಮೀನಾರಾಯಣ್ ನೆಹರೂ ಈಸ್ಟ್ ಇಂಡಿಯಾ ಕಂಪೆನಿಯ ವಕೀಲ್ ಗುಮಾಸ್ತೆಯಾಗಿದ್ದ."

ಸಂಜೆ ಪತ್ರಿಕೆಯ ಒಳಪುಟದಲ್ಲಿ ನೆಹರೂ ಕುಟುಂಬ ರಾಷ್ಟ್ರಕ್ಕೆ ಸಲ್ಲಿಸಿದ್ದ ಸೇವೆಗಳ, ತ್ಯಾಗಗಳ ಉಜ್ವಲ ವಿವರಣೆಗಳಿವೆ. ಭಿಂದ್ರನ್‌ವಾಲ ಹೇಳಿದ ಹಾಗೆ ಮೋತಿಲಾಲ್ ನೆಹರೂಗಳಾಚೆಗಿನವರನ್ನು ಅಲ್ಲೂ ಅನುಕೂಲಕ್ಕಾಗಿಯೇ ಮರೆಯಲಾಗಿದೆ. ಅಲ್ಲದಿದ್ದರೂ ಭಿಂದ್ರನ್‌ವಾಲರಿಗೆ ಬ್ರಾಹ್ಮಣರ ಕುರಿತು ತಿರಸ್ಕಾರವಿದ್ದು ಅವರನ್ನು ಹೀಯಾಳಿಸುತ್ತಿದ್ದರು. ಆತ ಯಾವತ್ತೂ ಹೇಳುತ್ತಿದ್ದಂತೆ ಗುರುನಾನಕ್ ಬಗೆಗಿನ ಕತೆಯನ್ನು ಉಪಕಾರ್‌ಸಿಂಗ್ ಜ್ಞಾಪಿಸಿಕೊಂಡ.

ಹುಡುಗ ನಾನಕ್‌ಗೆ ಒಂಬತ್ತು ತುಂಬಿದಾಗ ಆತನ ಜನಿವಾರಧಾರಣೆಯ ಸಿದ್ಧತೆಗಳು ಜರಗಿದವು. ಆಮಂತ್ರಿತರೂ ನೆರೆದರು. ಪುರೋಹಿತನು ಮಂತ್ರಪಠನಗಳೊಂದಿಗೆ ನಾನಕರಿಗೆ ಜನಿವಾರಧಾರಣೆ ಮಾಡಿಸುವ ಕ್ರಿಯೆಗಳನ್ನಾರಂಭಿಸಿದ್ದನು. ನಾನಕ್ ಪ್ರಶ್ನಿಸಿದರು; ಈ ಜನಿವಾರ ಧರಿಸುವುದೇಕೆ? ಪುರೋಹಿತನು ವಿವರಿಸಿದ; ಹಿಂದೂ ಧರ್ಮದ ಲಾಂಛನ ಇದು. ಜನಿವಾರ ಧರಿಸದವನು ಕೇವಲ ಶೂದ್ರ. ಅವನಿಗೆ ಇಹದಲ್ಲೂ ಪರದಲ್ಲೂ ಮುಕ್ತಿಯಿಲ್ಲ.

ನಾನಕ್ ಪುರೋಹಿತನಿಗೆ ಬೋಧಿಸಿದರು; ದಯೆ ನಿಮ್ಮ ಹತ್ತಿಯಾಗಲಿ. ಸಂತೃಪ್ತಿಯೊಂದಿಗೆ ಅದನ್ನು ನೂಲುತ್ತಾ ಇರಿ. ಸತ್ಯ ಅದರ ಎಳೆಯಾಗಲಿ. ಪಾವಿತ್ರ್ಯ ಅದರ ಗಂಟಾಗಿರಲಿ. ಅಂತಹ ಜನಿವಾರ ಇದೆಯೇ? ನಿಮ್ಮ ಕೈಯಲ್ಲಿ? ಇದ್ದರೆ ನನಗೆ ತೊಡಿಸಿ. ಅದು ತುಂಡಾಗುವುದಿಲ್ಲ; ಕೊಳೆಯಾಗುವುದಿಲ್ಲ; ಉರಿಯುವುದಿಲ್ಲ; ಕಳೆದು ಹೋಗುವುದಿಲ್ಲ. ಮನುಷ್ಯ ಸಾಯುತ್ತಾನೆ. ಚಿತೆಯಲ್ಲಿ ಜನಿವಾರವೂ ಸುಟ್ಟು ಬೂದಿಯಾಗುತ್ತದೆ. ಆತ್ಮವಾದರೂ ಜನಿವಾರದ ಭಾರವಿಲ್ಲದೆ ಸ್ವರ್ಗಕ್ಕೆ ಹೊಮ್ಮುತ್ತದೆ.

ಹೊರಗಿನಿಂದ ಥಟ್ಟನೆ ಗದ್ದಲ ಕೇಳಿ ಬಂದದ್ದರಿಂದ ಉಪಕಾರ್ ಸಿಂಗ್ ತನ್ನ ಚಿಂತೆಯಿಂದ ಎಚ್ಚೆತ್ತ. ಆತ ಮಗ್ಗುಲಾಗಿ ಮಲಗುತ್ತ, ಎತ್ತಿ ನಿಲ್ಲಿಸಲಾದ ಗಾಲಿಯ ಕೆಳಗಡೆಯಿಂದ ದೃಷ್ಟಿ ಹಾಯಿಸಿದ. ವರ್ಕ್‌ಶಾಪ್‌ನ ಕಡೆಗಿರುವ ಮಣ್ಣುರಸ್ತೆಯಲ್ಲಿ ಜನರ ಗುಂಪು. ಅವರ ಕೈಯಲ್ಲಿ ಬಡಿಗೆಗಳು, ಭರ್ಜಿಗಳು, ಕಬ್ಬಿಣದ ಸರಳುಗಳು, ಕತ್ತಿಗಳು, ಕುಡುಗೋಲುಗಳೇ ಮುಂತಾದುವುಗಳು. ಅವರು



ಒದರುತ್ತಾ ಇದ್ದಾರೆ;

ರಕ್ತಕ್ಕೆ ಪ್ರತಿಯಾಗಿ ರಕ್ತವೇ!

ಕೊಲೆಗೆ ಪ್ರತಿಯಾಗಿ ಕೊಲೆಯೇ!

ಅವರ ಕಣ್ಣುಗಳಲ್ಲಿ ದ್ವೇಷದ ಪ್ರತೀಕಾರದ ಕಿಡಿಗಳು. ಅವರು, ಕಾರ್ ಒಂದರ ಬಾನೆಟ್ ತೆರೆದು ಅದರ ಕಾರ್ಬರೇಟರ್‌ನ ಯಾವುದೋ ದೋಷ ನಿವಾರಿಸುತ್ತಿದ್ದ ನರೋತ್ತಮ್‌ಸಿಂಗ್‌ನನ್ನು ಹಿಡಿದರು.

ಉಪಕಾರ್‌ಸಿಂಗ್ ಒಂದು ನಿಮಿಷ ಶಂಕಿಸಿದ. ತನ್ನ ಹಿಪ್ ಪಾಕೆಟ್‌ನಲ್ಲಿ ಇರಿಸಿಕೊಂಡಿದ್ದ ಪಿಸ್ತೂಲನ್ನು ಕೈಗೆ ತೆಗೆದುಕೊಂಡ. ಆದರೆ, ಸಮುದ್ರದ ತೆರೆಗಳ ಹಾಗೆ ನುಗ್ಗಿ ಬರುತ್ತಲೇ ಇರುವ ಜನಜಂಗುಳಿಯ ಎದುರು ಆಯುಧಗಳು ಅಪ್ರಸ್ತುತ ಎಂದುಕೊಂಡ.

ಮುಖಗಳಿಲ್ಲದ ಜನಗುಂಪು, ಅಷ್ಟರಲ್ಲೇ ಆಕ್ರಮಣ ಶುರುಮಾಡಿತ್ತು. ಕಾರುಗಳ ಪೆಟ್ರೋಲ್ ಟ್ಯಾಂಕ್‌ಗಳಿಂದ ಪೆಟ್ರೋಲ್ ತೆಗೆದು ಸುತ್ತಲೂ ಸುರಿದು ಕಡ್ಡಿಗೀರಿ ಎಸೆಯಿತು.

ವಿರೋಧಿಸಲು ನರೋತ್ತಮ್‌ಸಿಂಗ್ ಆದಷ್ಟು ಯತ್ನಿಸಿದ. ಆದರೆ ಅನೇಕಾನೇಕ ಕೈಗಳು ಆತನನ್ನು ಹದಮಾಡಿದವು. ಅನೇಕಾನೇಕ ಕಾಲುಗಳು ಆತನ ಶರೀರವನ್ನು ಒದ್ದವು. ಅಂಕೆಯಲ್ಲದೆ ಹುಚ್ಚೆದ್ದ ಜನರ ಗುಂಪು ದೈತ್ಯಗಾತ್ರದ ಒಂದು ಆಕ್ಟೋಪಸ್ ಆಗಿ ಮಾರ್ಪಟ್ಟಿತು. ಕೈಗಳು ಮತ್ತು ಕಾಲುಗಳಷ್ಟೇ ಇರುವ ಆಕ್ಟೋಪಸ್.

ಯಾರೋ ಒಬ್ಬಾತ ನರೋತ್ತಮ್‌ಸಿಂಗನನ್ನು ಎತ್ತಿ ಬಾನೆಟ್‌ಗೆ ಒರಗಿಸಿ ನಿಲ್ಲಿಸಿದ. ನರೋತ್ತಮ್‌ಸಿಂಗನನ್ನು ಆತನ ಸ್ವಂತ ರುಮಾಲಿನಿಂದಲೇ ಬಿಗಿದುಕಟ್ಟಲಾಯಿತು.

ಗುಂಪು ಆತನ ಮೈಮೇಲೆ ಪೆಟ್ರೋಲ್ ಸುರಿಯಿತು. ಗುಂಪಿನ ಬೆರಳುಗಳು ಕಡ್ಡಿಗೀರಿದುವು. ಆ ಪುಟ್ಟ ಬೆಂಕಿಯೆಸಳುಗಳು ದೊಡ್ಡ ಜ್ವಾಲೆಯಾಗಿ ಮಾರ್ಪಟ್ಟವು ಅದರ ಕೆಂಚನೆಯ ಅಸ್ಪಷ್ಟ ಪಾರದರ್ಶಕತೆಯ ಮೂಲಕ ನರೋತ್ತಮ್‌ಸಿಂಗನ ಒಡಲು ಇದ್ದಲಿಯ ಬಣ್ಣಕ್ಕೆ ತಿರುಗುವುದನ್ನು ಉಪಕಾರ್‌ಸಿಂಗ್ ಕಂಡ. ಆತ ತನ್ನ ಪಿಸ್ತೂಲ್ ಮೇಲಿನ ಹಿಡಿತವನ್ನು ಬಿಗಿಗೊಳಿಸಿದ. ದೆಹಲಿಯ ಸಿಕ್ಖರ ಜೀವ ಮತ್ತು ಸ್ವತ್ತುಗಳಿಗೆ ರಕ್ಷಣೆಯೇ ಇಲ್ಲವಾಗಿದೆ. ಫರೂಕ್ ಸಿಯಾರ್‌ನ ದೆಹಲಿ ಮರು ಹುಟ್ಟು ಪಡೆಯುತ್ತಾ ಇದೆ.

ದೆಹಲಿಯ ಸಿಕ್ಖರ ಬೇಟೆಯಾಗುತ್ತಾ ಇದೆ. ಉಪಕಾರ್ ಸಿಂಗ್ ಮೆಲ್ಲಗೆ ಎದ್ದ. ಕತ್ತಲೆ ಮುತ್ತಿಕೊಂಡಿರುವ ಗಲ್ಲಿಯತ್ತ ಹಿಂಬಾಗಿಲಿನ ಮೂಲಕ ಹೆಜ್ಜೆ ಹಾಕಿದ.

* * *

# ಅಧ್ಯಾಯ ೮

# ಸರಳು, ದೊಣ್ಣೆಗಳನ್ನು ಹಿಡಿದ ಅಕ್ಟೋಪಸ್

ಎತ್ತರದ ಕಟ್ಟಡಗಳ ಮರೆ ಬಳಸಿ ಗಲ್ಲಿಗಳ ಮೂಲಕವೇ ಉಪಕಾರ್ ಸಿಂಗ್ ದಾಪುಗಾಲು ಹಾಕಿ ನಡೆದ. ಗಡ್ಡ, ಜುಟ್ಟುಗಳನ್ನು ಬಿಟ್ಟು ಪಗಡಿ ಧರಿಸಿರುವ ಸಿಕ್ಖರಿಗೆ ದೆಹಲಿ ಸುರಕ್ಷಿತ ಸ್ಥಳವಲ್ಲವೆಂದು ಗುಂಪುಗಳು ಬೊಬ್ಬೆಗಳಿಂದ ಅರಿತುಕೊಂಡನಾತ. ಆದುದರಿಂದ ಗಲ್ಲಿಗಳಿಂದಲೂ ಹೆಚ್ಚು ಸುರಕ್ಷಿತ ಸ್ಥಳ ಮುಖ್ಯಬೀದಿಗಳಾಗಿರಲಾರವೇ ಎಂದು ಯೋಚಿಸಿದ. ಬೆಂಕಿ ಜ್ವಾಲೆಗಳಲ್ಲಿ ಆಹುತಿ ಮಾಡಲ್ಪಟ್ಟ ನರೋತ್ತಂ ಸಿಂಗನ ಚಿತ್ರ ಪುನಃ ಪುನಃ ಮನಸ್ಸಿನಲ್ಲಿ ಮೂಡಿತು. ಅಂತಹ ಸಾವು ಸಿಕ್ಖರ ಮಟ್ಟಿಗೆ ಹೊಸತೇನೂ ಅಲ್ಲ. ಸಮೂಹ ಹತ್ಯೆಗೆ ಗುರಿಯಾಗುತ್ತ ಬಂದುದರಿಂದಲೇ ಸಿಕ್ಖ್ ಮತ ಇಂದು ಇಷ್ಟು ಬಲಿಷ್ಠವಾಗಿದೆ.

ದೆಹಲಿಯಲ್ಲೆ ಎಷ್ಟೆಷ್ಟು ಬಾರಿ ಸಿಕ್ಖರ ಆಹುತಿಯಾಗಲಿಲ್ಲ. ಗುರು ತೇಜ್ ಬಹಾದೂರರ ಅನುಯಾಯಿಗಳಾಗಿದ್ದ ಹಾಯಿಮಾತಿದಾಸನನ್ನು, ಭಾಯಿ ದಯಾಲ್‌ನನ್ನು, ಸತಿದಾಸ್‌ನನ್ನು ಔರಂಗಜೇಬನು ಚಿತ್ರಹಿಂಸೆಗೆ ಗುರಿಪಡಿಸಿ ಕೊಂದದ್ದು ದೆಹಲಿಯಲ್ಲೇ. ಗುರು ತೇಜ್ ಬಹಾದೂರರು ಹುತಾತ್ಮರಾದದ್ದೂ ಇಲ್ಲೇ.

ಆತ ಗಲ್ಲಿಯಿಂದ ಪ್ರಧಾನ ಮಾರ್ಗದತ್ತ ಸಾಗಿದ. ಮಾರ್ಗ ನಿರ್ಜನವಾಗಿತ್ತು. ನವುರಾದ ಮಂಜು ಮುಸುಕಿರುವುದರಿಂದ ಬೀದಿದೀಪಗಳು ಶವವಸ್ತ್ರದಿಂದ ಮುಚ್ಚಲ್ಪಟ್ಟಂತೆ ಕಾಣಿಸಿದವು. ಮುಖ್ಯ ಮಾರ್ಗಕ್ಕೆ ತಲಪಿದಾಗ ಅನುಮಾನಕ್ಕೊಳಗಾದ. ಚಿಕ್ಕ ಗುರುದ್ವಾರವಿದೆ. ಅಲ್ಲಿ ತಲಪಿ ಬಿಟ್ಟರೆ ತಾನು ಪರಾಗಬಹುದು. ಆದರೆ, ಜನಸಂಘದ ಹಾಗೂ ಆರ್.ಎಸ್.ಎಸ್.ನ ಸಕ್ರಿಯ ಕಾರ್ಯಕರ್ತರು ವಾಸಿಸುತ್ತಿರುವ ಬೀದಿಗಳನ್ನು ಹಾದು ಹೋಗುವುದರಲ್ಲಿ ಅಪಾಯವಿದೆ. ಆತ ಎಡಕ್ಕೆ ತಿರುಗಿದ. ತುಸು ನಡೆದಾಗ ರಿಂಗ್‌ರೋಡ್ ಸಿಕ್ಕಿತ್ತು. ಎಂದಿನಂತಾಗಿದ್ದರೆ ಇನ್ನೂ ಟ್ರಾಫಿಕ್ ನೆಲೆಸುವ ವೇಳೆಯಾಗಿಲ್ಲ. ಆದರೆ ಇವತ್ತು ರಿಂಗ್‌ರೋಡ್‌ನಲ್ಲಿ ಹೆಚ್ಚು ವಾಹನಗಳಿಲ್ಲ. ಗಾಯಗೊಂಡ ಹೆಬ್ಬೆರಳಿನ ಹಾಗೆ ಮೂಲ್‌ಚಂದ್ ಹಾಸ್ಪಿಟಲ್‌ನ ಟವರ್ ಕ್ಲಾಕ್ ಮಾತ್ರ ಎದ್ದು ತೋರುತ್ತಿದೆ. ಆತ ದಾಪುಗಾಲು ಹಾಕಿದ. ಒಂದು ಮಾರುತಿಕಾರ್



ಎದುರಿನಿಂದ ಬರುತ್ತಾ ಇದೆ. ಕಾರ್ ವೇಗವಾಗಿ ಧಾವಿಸಿ ದೂರವಾಯಿತು. ಆತ ಮಾರ್ಗವನ್ನು ಅಡ್ಡಕ್ಕೆ ದಾಟಿದ. ಒಂದು ವೆಸ್ಪಾ ಸ್ಕೂಟರ್ ಹಾಗೂ ಬಳಿಕ ಒಂದು ಅಂಬಾಸಿಡರ್ ಕಾರ್ ಹಾದು ಹೋದವು. ಹಾಸ್ಪಿಟಲನ್ನು ಬಳಸಿ ನಡೆಯುವಾಗ ಆತನಿಗೆ ನಿರ್ದಿಷ್ಟ ಉದ್ದೇಶವೇನೂ ಇರಲಿಲ್ಲ. ದೂರದಲ್ಲಿ ನೆಹರೂ ಸ್ಟೇಡಿಯಂನ ಭರ್ಜರಿ ಸ್ತಂಭಗಳು ಗೋಚರಿಸುತ್ತಿದ್ದವು. ಅಫ್‌ಘಾನಿಸ್ಥಾನದಿಂದ ಬಂದ ಆಕ್ರಮಣಗಾರರನ್ನು ಓಡಿಸಿ ಐದು ನದಿಗಳ ನಾಡಾಗಿರುವ ಪಂಜಾಬನ್ನು ವಶಪಡಿಸಿಕೊಂಡ ಬಳಿಕ ಖಲ್ಸ ಮೊಗಲರೊಡನೆ ಯುದ್ಧ ಮಾಡಲು ಯಮುನೆಯನ್ನು ದಾಟಿ ದೆಹಲಿಗೆ ತಲಪಿತ್ತು. ನೆಹರೂ ಸ್ಟೇಡಿಯಂ ನೆಲಸಿರುವ ಸ್ಥಳದಲ್ಲಿ ಸರ್ದಾರ್ ಭಗತ್‌ಸಿಂಗನ ನಾಯಕತ್ವದಲ್ಲಿದ್ದ ಸಿಕ್ಖ್ ಸೇನೆ ಮತ್ತು ಮೊಗಲ ಸೇನೆಗಳ ನಡುವೆ ಯುದ್ಧ ನಡೆಯಿತು. ಭಾರೀ ಭೀಕರ ಕದನ. ನ್ಯಾಯವಾಗಿ ಎರಡು ಸ್ಥಳಗಳಲ್ಲೂ ಗುರುದ್ವಾರಗಳು ತಲೆಯೆತ್ತಬೇಕಾಗಿತ್ತು. ಆದರೆ, ಇಂದಿರಾಗಾಂಧಿ ಅಲ್ಲಿ ಭಾರೀ ಸ್ಟೇಡಿಯಂಗಳನ್ನು ನಿರ್ಮಿಸಿ ಪಕ್ಷಕ್ಕೆ ಹಣ ಮಾಡಿದ್ದರು.

ಆತನ ಆಲೋಚನೆ ಆಗಲೂ ಸುತ್ತಿ ಸುಳಿಯುತ್ತಾ ಇದ್ದದ್ದು ಹಂತ ಹಂತವಾಗಿ ಬಲಗೊಂಡ, ಖಲ್ಸದ ಉಗ್ರವಾದಿ ಸಂಘಗಳು ಪರಸ್ಪರ ಸಂಬಂಧವೇನೂ ಇಲ್ಲವೆಂದೆನ್ನಿಸಬಹುದಾದರೂ ಒಂದೇ ಗುರಿಯ ಈಡೇರಿಕೆಗಾಗಿ ಜೀವ ತೆರಲು ತಯಾರಿರುವರು; ಸಮಾನ ಶತ್ರುಗಳನ್ನು ಲೆಕ್ಕವಿಟ್ಟು ಕೊಚ್ಚಿ ಹಾಕಲು ಟೊಂಕ ಕಟ್ಟಿ ಹೊರಟವರು. ಅವರು ವಿವಿಧ ಹೆಸರುಗಳಲ್ಲಿ ಅರಿಯಲ್ಪಟ್ಟವರು. ದಂದಮಿ ತಕ್ಸಲ್, ಖಾಲಿಸ್ಥಾನ್ ಲಿಬರೇಶನ್ ಆರ್ಮಿ, ಖಾಲಿಸ್ಥಾನ್ ಕಮಾಂಡೋ ಫೋರ್ಸ್. ೧೯೧೯ರ ಜಲಿಯನ್‌ವಾಲಾಬಾಗ್ ಹತ್ಯಾಕಾಂಡದ ಹೊಣೆಗಾರ ಪಂಜಾಬ್ ಗವರ್ನರ್ ಮೈಕಲ್ ಡಯರನನ್ನು ವಧಿಸಿ ಶಹೀದ್ ಆಗಿ ಮಾರ್ಪಟ್ಟ ಉಧಂಸಿಂಗನ ಹಾಗೆ ಹುತಾತ್ಮರಾಗಲು ಸಿದ್ಧರಾದವರು... ಯಾರಾಗಿದ್ದರು ಉಗ್ರವಾದಿಗಳು ಮೊದಲ ಬಲಿ? ನೆನಪಿಗೆ ತಂದುಕೊಳ್ಳಲು ಯತ್ನಿಸಿದ. ಸ್ವರ್ಣ ಮಂದಿರದ ಮುಂಭಾಗದ ಮಾರ್ಬಲ್ ಮೆಟ್ಟಿಲುಗಳ ಮೇಲಿದ್ದಾಗ ಕೊಲ್ಲಲ್ಪಟ್ಟ ಪಂಜಾಬ್ ಅಸಿಸ್ಟೆಂಟ್ ಇನ್ಸ್‌ಪೆಕ್ಟರ್ ಜನರಲ್ ಅತ್‌ವಾಲ್ ಇದ್ದಿರಬೇಕು. ಮೊದಲ ಬಲಿ ಅನ್ನಿಸುತ್ತದೆ. ಕಳೆದ ವರ್ಷ ಏಪ್ರಿಲ್‌ನಲ್ಲಿ ಅದು ನಡೆದದ್ದು. ಅವತಾರ್‌ಸಿಂಗ್ ಅತ್‌ವಾಲ್ ಗಡ್ಡ, ಜುಟ್ಟುಗಳನ್ನು ಬಿಟ್ಟು ಪಗಡಿ ಕಟ್ಟುತ್ತಿದ್ದ. ಸಿಕ್ಖ್ ಮತಕ್ಕೆ ಸಂಬಂಧಿಸಿದ ಎಲ್ಲಾ ನಂಬಿಕೆಗಳನ್ನು ಅನುಸರಿಸುತ್ತಿದ್ದ ಸಿಕ್ಖನಾಗಿದ್ದ. ಸ್ವರ್ಣ ಮಂದಿರದಿಂದ, ಗೋಧಿಹಿಟ್ಟು, ಸಕ್ಕರೆ ಮತ್ತು ತುಪ್ಪಗಳನ್ನು ಸಮ ಪ್ರಮಾಣದಲ್ಲಿ ಮಿಶ್ರಣ ಮಾಡಿ ತಯಾರಿಸಲಾದ ಪ್ರಸಾದವನ್ನು ಕಂಕಣ ತೊಟ್ಟ ಕೈಗಳಲ್ಲಿ ಭಕ್ತಿಪೂರ್ವಕ ಪಡೆದು ಹೊರಬರುವಾಗಲೇ ಆತನ ಒಡಲ ತುಂಬ ಗುಂಡುಗಳ ಸುರಿಮಳೆಯಾಗಿತ್ತು. ಅತ್ಯಂತ ಬಲಿಷ್ಠವಾಗಿದ್ದ ಭಯೋತ್ಪಾದಕ ಸಂಘಟನೆಯೊಳಗೆ ನುಸುಳಿ ಗುಪ್ತ ಸಂಘಟನೆಗಳ ಕಾರ್ಯ

ಯೋಜನೆಗಳ ಕುರಿತು ಸರಕಾರದ ಪರವಾಗಿ ಬೇಹುಗಾರಿಕೆ ನಡೆಸಿದ್ದಕ್ಕೇ ಅತ್‌ವಾಲ್ ವಧಿಸಲ್ಪಟ್ಟಿದ್ದರು. ಕೊಲೆಗಾರರು ಸ್ವರ್ಣಮಂದಿರದ್ದೇ ಅಸಂಖ್ಯ ಕೋಣೆಗಳಲ್ಲೆಲ್ಲೋ ಆಗಲೇ ಮರೆಯಾಗಿಯೂ ಬಿಟ್ಟಿದ್ದರು. ಭಿಂದ್ರನ್‌ವಾಲ ಸಹಿತ ಅನೇಕ ಮಂದಿ ಸಿಕ್ಖ ಮುಂದಾಳುಗಳು ಆ ಕೊಲೆಯನ್ನು ಖಂಡಿಸಿದ್ದರು ಕೂಡ. ಆದರೆ ಭಿಂದ್ರನ್‌ವಾಲರೇ ಆ ಕೊಲೆಯನ್ನು ನಿಯೋಜಿಸಿದ್ದರೆಂಬುದು ಸರಕಾರಕ್ಕೆ ಕೂಡ ಗೊತ್ತಿದ್ದ ಗೋಪ್ಯವಾಗಿತ್ತು.

ಉಗ್ರವಾದಿಗಳ ಸಂಘಟನೆಗಳ ಎರಡನೆಯ ಬೇಟೆ ಕೂಡ ದಾಡಿ, ಮುಡಿಗಳನ್ನು ಬೆಳೆಸಿದ್ದ, ಪಗಡಿ ಧರಿಸಿದ್ದ ಸಿಕ್ಖನೇ ಆಗಿದ್ದ. ಹೌದು, ಆ ದಿನಾಂಕ ಕೂಡ ನೆನಪಿದೆ– ೨೮ ಮಾರ್ಚ್ ೧೯೮೫. ದೆಹಲಿ ಗುರುದ್ವಾರ ಸಮಿತಿಯ ಅಧ್ಯಕ್ಷ ಹರ್ಬನ್ಸ್‌ಸಿಂಗ್ ಮಾನ್‌ಚಂದ್. ಕಾಂಗ್ರೆಸ್‌ನ ಕೈಗೊಂಬೆಯಾಗಿ ಅಕಾಲಿಗಳನ್ನು ನಿರ್ವೀರ್ಯರನ್ನಾಗಿಸಲು ಮಾನ್‌ಚಂದ್ ಪ್ರಯತ್ನಿಸಿದ್ದೇ ಆತನ ಹತ್ಯೆಗೆ ಪ್ರೇರಣೆಯಾಗಿತ್ತು. ತಿಲಕ್ ನಗರ್ ಸೇತುವೆ ಬಳಿಯ ಟ್ರಾಫಿಕ್ ಲೈಟ್‌ನ ಸಮೀಪ ಮಾನ್‌ಚಂದ್‌ನ ಕಾರ್ ನಿಲ್ಲಿಸಲ್ಪಟ್ಟಾಗ ಬೇರೊಂದು ಕಾರ್‌ನಲ್ಲಿ ಬೆನ್ನಟ್ಟಿ ಬಂದಿದ್ದ ಉಗ್ರವಾದಿಗಳು ಕೋವಿಗಳಿಂದ ಗುಂಡು ಹಾರಿಸಿದ್ದರು.

ನಿಖರವಾಗಿ ಐದು ದಿನಗಳ ಬಳಿಕ ಮತ್ತೊಂದು ಹತ್ಯೆ. ಈ ಸಲದ ಬೇಟೆ ಸಿಕ್ಖನಾಗಿರಲಿಲ್ಲ. ಸ್ಥಳ ಅಮೃತಸರ. ಕೊಲೆಗೈಯ್ಯಲ್ಪಟ್ಟಿದ್ದು ಭಾರತೀಯ ಜನತಾ ಪಕ್ಷದ ಅಮೃತಸರದ ಘಟಕದ ಅಧ್ಯಕ್ಷ ಹರ್‌ಬನ್ಸ್ ಲಾಲ್ ಖನ್ನ. ತನ್ನ ಔಷಧಿಯಂಗಡಿಯಲ್ಲಿ ಕುಳಿತಿರುವಲ್ಲೇ ಆತನಿಗೆ ದಶ್‌ಮೇಶ್ ರೆಜಿಮೆಂಟಿನ ಸದಸ್ಯರು ಗುಂಡಿಟ್ಟಿದ್ದರು. ಆತನ ಅಂಗರಕ್ಷಕ ಕೂಡ ಕೊಲೆಯಾಗಿದ್ದ. ಅಂಗರಕ್ಷಕನ ಸ್ಟೆನ್‌ಗನ್ನನ್ನು ಕೊಲೆಗಾರರು ಒಂದು ಸ್ಮರಣಿಕೆಯಂತೆ ಎತ್ತಿಕೊಂಡು ಒಯ್ದರು. ಭಿಂದ್ರನ್‌ವಾಲರು ಸ್ವರ್ಣಮಂದಿರದಿಂದ ಹೊರಟು ಹೋಗಬೇಕೆಂದು ಕರೆಯಿತ್ತದ್ದೇ ಮಾನ್‌ಚಂದರ್ ಅಪರಾಧವಾಗಿತ್ತು.

ಮರುದಿನವೂ ಗನ್ನುಗಳು ಗುಡುಗಿದ್ದವು. ಕೊಲೆಗೈಯ್ಯಲ್ಪಟ್ಟದ್ದು ಓರ್ವ ರಾಜ್ಯಸಭಾ ಸದಸ್ಯ ವಿಶ್ವನಾಥ್ ತಿವಾರಿ; ಚಂಡೀಗಢದಲ್ಲಿ.

ಆ ಬಳಿಕ, ಅಧಿಕಾರಸ್ಥಾನದಲ್ಲಿರುವ ಎಲ್ಲರಿಗೂ ಎಚ್ಚರಿಕೆ ಕೊಡಲಾಯಿತು– ಗುರುಮುಖಿಯಲ್ಲಿ ಬರೆದ ಕರಪತ್ರಗಳ ಮೂಲಕ ಮತ್ತು ಫೋನ್ ಮೂಲಕ. ಸ್ವರ್ಣಮಂದಿರದೊಂದಿಗೆ ಚೆಲ್ಲಾಟ ಆಡಬಾರದು; ಆಡಿದರೆ ಅಸಂಖ್ಯ ತಿವಾರಿಗಳೂ ಮಾನ್‌ಚಂದ್‌ಗಳೂ ಖನ್ನಗಳೂ ಅತ್‌ವಾಲಗಳೂ ವಿಲವಿಲನೇ ಹೊರಳಾಡಿ ಸಾಯುವರು. ನೆನಪಿರಲಿ. ಖಲ್ಸ ಯಾವತ್ತೂ ಶರಣಾದದ್ದಿಲ್ಲ.

ನಿಜಕ್ಕೂ ಉಗ್ರವಾದಿಗಳು ರಕ್ತಪಾತಕ್ಕೆ ಹಿಂಜರಿಯರೆಂದು ಅತ್‌ವಾಲ ಕೊಲೆಗೂ ಮೊದಲೇ ರುಜು ಪಡಿಸಿದ್ದರಲ್ಲ. ಹಿಂದೂ ಸಮಾಚಾರ್‌ನ ಲಾಲಾ



ಜಗತ್ ನಾರಾಯಣ್ ಕೊಲೆಯಾದದ್ದು ಮೂರು ವರ್ಷಗಳ ಹಿಂದೆ. ಹೌದು, ೧೯೮೧ ಸಪ್ಟೆಂಬರ್ ೧ರಂದು ಜರ್ನೈಲ್‌ಸಿಂಗ್ ಭಿಂದ್ರನ್‌ವಾಲರಿಗೆ ಅಧಿಕಾರಿ ವರ್ಗ ಹೆದರತೊಡಗಿದ್ದು ಅಂದಿನಿಂದ. ಆ ಕೊಲೆಯ ಕಾರಣಕರ್ತನೆಂದು ಭಿಂದ್ರನ್‌ವಾಲ ಬಂಧಿಸಲ್ಪಟ್ಟರು. ಆದರೆ ರಾಜಿ ಸಂವಾದಗಳ ಪೂರ್ವೋಪಾದಿಯಾಗಿ ಭಿಂದ್ರನ್‌ವಾಲರನ್ನು ಬಿಟ್ಟುಬಿಟ್ಟರು. ಕೆಲವೇ ದಿನಗಳಲ್ಲಿ ಲಾಲಾ ಜಗತ್ ನಾರಾಯಣ್‌ರ ಮಗ ರಮೇಶ್ ಚಂದ್ ಸಹ ಕೊಲೆಯಾದ.

ಉಗ್ರವಾದಿಗಳ ರಕ್ತಸಿಕ್ತ ತಾಕೀತುಗಳನ್ನು, ಸ್ವರ್ಣ ಮಂದಿರದೊಂದಿಗೆ ಚೆಲ್ಲಾಟ ಆಡಕೂಡದೆಂಬ ಮುನ್ನೆಚ್ಚರಿಕೆಗಳನ್ನು ಇಂದಿರಾಗಾಂಧಿ ಕಿವಿಗೆ ಹಾಕಿಕೊಳ್ಳಲಿಲ್ಲ. ಹಾಕಿಕೊಂಡಿದ್ದರೆ ಆಕೆ ಜೂನ್ ತಿಂಗಳಲ್ಲಿ ಸ್ವರ್ಣ ಮಂದಿರದ ಪಾವಿತ್ರ್ಯವನ್ನು ಕಡೆಗಣಿಸಿ ಅಲ್ಲಿಗೆ ಸೇನೆಯನ್ನು ಕಳುಹಿಸುತ್ತಿರಲಿಲ್ಲ. ಪ್ರಾಯಶಃ ಆಕೆಗೆ ಈದಿನ ಮರಣ ವಾರಂಟ್ ಕೂಡ ಲಭಿಸುತ್ತಿರಲಿಲ್ಲ.

ಇಷ್ಟರಲ್ಲೇ ಉಪಕಾರ್ ಸಿಂಗ್ ಒಂದಷ್ಟು ದೂರ ಕ್ರಮಿಸಿದ್ದ. ಏಷ್ಯನ್ ಗೇಮ್ಸ್‌ನ ಸಲುವಾಗಿ ನಿರ್ಮಿಸಲಾದ ಮತ್ತೊಂದು ಓವರ್‌ಬ್ರಿಡ್ಜ್–ಎಡಬದಿಯಲ್ಲಿ ಲೋಧಿ ಹೊಟೇಲ್. ಬಲಬದಿಯಲ್ಲಿ ಮಸಣ. ಮಸಣದ ಕಮಾನು ಆಕೃತಿಯ ಗೇಟಿನ ಕೆಳಗೆ ಚಿಕ್ಕ ಒಂದು ಜನಗುಂಪು. ಸ್ವಂತದ ಯಾರದ್ದೋ ಹೆಣವನ್ನು ಸುಟ್ಟು ಮರಳುತ್ತಿರಬೇಕು. ಎತ್ತರದ ಆವರಣ ಗೋಡೆಗಳ ಆಚೆ ಚಿತೆಗಳಿಂದೇಳುತ್ತಿರುವ ಬೆಳ್ಳಗಿನ ಹೊಗೆ ಸುರುಳಿಗಳು. ಮಂಜಿನ ಬಿಳುಪಿನಲ್ಲಿ ಕರ್ರಗಿನ ಚಿತ್ರಗಳನ್ನು ಬಿಡಿಸುತ್ತಿವೆ. ಮಂಜು ಮತ್ತು ಹೊಗೆ ಸುರುಳಿಗಳು ಪರಸ್ಪರ ಹೆಣೆದುಕೊಳ್ಳುತ್ತಾ ಇವೆ; ಯಾವುದೋ ವನ್ಯಜೀವಿಗಳ ಹಾಗೆ.

ಉಪಕಾರ್ ಸಿಂಗ್ ಗುರುದ್ವಾರದ ಎತ್ತರದ ಗುಂಬಸ್ ಅನ್ನು ಗುರಿಯಾಗಿಟ್ಟುಕೊಂಡು ನಿರ್ಜನವಾಗಿರುವ ಮಾರ್ಗದಗುಂಟ ನಡೆದ. ಮರಗಳ ನೆರಳು ಬಿದ್ದಿರುವ ಮಾರ್ಗದ ಇಬ್ಬದಿಗಳಲ್ಲೂ, ಫುಟ್‌ಪಾತ್‌ಗಳಲ್ಲಿ ಹೆಂಗಸರೂ ಮಕ್ಕಳೂ ಗಂಡಸರೂ ನಿದ್ರಿಸುತ್ತಿರುವರು; ಅವರೆಲ್ಲ ದೂರ ದೇಶಗಳಿಂದ ಬಂದ ನಿರಾಶ್ರಿತರಿರಬಹುದು ಅಥವಾ ನಿಜಾಮುದ್ದೀನ್ ಅವುಲಿಯ ಕಾರ್ಬಾಕ್ಕೆ ಯಾಂತ್ರಿಕವಾಗಿ ಬಂದ ತೀರ್ಥಾಟಕರಿರಬಹುದು. ಷಾಜಹಾನನ ರೂಪಸಿಯಾದ ಪುತ್ರಿ ಜಹಾನರಾ ಬೇಗಂ ಚಿರವಿಶ್ರಾಂತಿ ಪಡೆಯುತ್ತಿರುವ ಮಸೀದಿ ಕೂಡ ಅಲ್ಲೇ ಎಂಬುದನ್ನು ಜ್ಞಾಪಿಸಿಕೊಂಡನಾತ.

ಥಟ್ಟನೆ ಯಾವುದೋ ಗದ್ದಲ ಕೇಳಿ ಆತ ಯೋಚನೆಗಳಿಂದ ಎಚ್ಚೆತ್ತ. ಗುರುದ್ವಾರದ ವಿಶಾಲವಾದ ಅಂಗಳದ ಒಂದು ನೋಟ ಸ್ಪಷ್ಟವಾಗಿ ಆತನಿಗೆ ಕಾಣಿಸುತ್ತಾ ಇದೆ. ಆ ಅಂಗಳದಲ್ಲಿ ಕೊಲೆ ಕುಣಿತ ಕುಣಿಯುತ್ತಿರುವ ಕೈಗಳು ಮತ್ತು ಕಾಲುಗಳಷ್ಟೇ ಇರುವ ಆಕ್ಟೋಪಸ್‌ನ್ನು ಗುರುತಿಸಿದನಾತ. ಕಬ್ಬಿಣದ

ಸರಳುಗಳನ್ನೂ ದೊಣ್ಣೆಗಳನ್ನೂ ಉರುಟು ಕಲ್ಲುಗಳನ್ನೂ ಕೆರೋಸಿನ್ ಡಬ್ಬಗಳನ್ನೂ ಕಡ್ಡಿ ಪೆಟ್ಟಿಗೆಯನ್ನೂ ಕೈಗಳಲ್ಲಿ ಹಿಡಿದುಕೊಂಡಿರುವ ಅಕ್ಟೋಪಸ್!

ಕಣ್ಣು ಕಿವಿಯೇ ಇಲ್ಲದ, ಕೈಕಾಲುಗಳಷ್ಟೇ ಇರುವ ಅಕ್ಟೋಪಸ್ ಕರುಳೂ ಕರುಣೆಯೂ ಇಲ್ಲದ, ಕೈಗಳೂ ಕಾಲುಗಳೂ ಮಾತ್ರವೆ ಇರುವ ಜನಜಂಗುಳಿ.

ಹಿಪ್ ಪಾಕೆಟ್‌ನಲ್ಲಿ ತುರುಕಿದ್ದ ಪಿಸ್ತೂಲನ್ನು ಆತನ ಬೆರಳುಗಳು ಅಮುಕಿದವು. ಆದರೆ ಸಾವಿರ ಕೈಗಳೂ, ಕಾಲುಗಳೂ ಇರುವ ಹುಚ್ಚೆದ್ದ ಆ ಜಂತುವನ್ನು ಎದುರಿಸಲು ಈ ಚಿಕ್ಕ ಆಯುಧಕ್ಕೆ ಸಾಧ್ಯವಾಗದು. ಆತ ಫುಟ್‌ಪಾತಿನಲ್ಲಿ ಕುಸಿದು ಕುಳಿತ.

ಗುರುದ್ವಾರದ ಬಾಗಿಲುಗಳಲ್ಲಿ ಹೊಗೆ ಸುರುಳಿಗಳೆದ್ದವು. ಎತ್ತರದಲ್ಲಿ ಶವವಸ್ತ್ರದಂತಿರುವ ಮಂಜಿನೊಳಗೆ ಮಸಣದಿಂದೆದ್ದ ಹೊಗೆಯೊಂದಿಗೆ ಅದೂ ಮರೆಯಾಯಿತು.

* * *

ರವಿಗೆ ಫೋನ್ ಮಾಡಿದ್ದು ಶ್ರೀವಾಸ್ತವ. ನಿಧನರಾದ ಪ್ರಧಾನಿಯ ಅಂತ್ಯವಿಧಿಗಳಲ್ಲಿ ಪಾಲ್ಗೊಳ್ಳಲು ಜಗತ್ತಿನ ನಾನಾ ಭಾಗಗಳಿಂದ ವಿ.ಐ.ಪಿ.ಗಳು ದೆಹಲಿಗೆ ಬರುತ್ತಿರುವರು. ಅವರನ್ನು ಬರಮಾಡಿಕೊಳ್ಳತಕ್ಕ ಏರ್ಪಾಟುಗಳೊಂದಿಗೆ ಅವರ ವಾಸ್ತವ್ಯ ಮತ್ತು ಭದ್ರತೆಗಳ ಬಗ್ಗೆಯೂ ಸೂಕ್ತ ವ್ಯವಸ್ಥೆಗಳನ್ನು ಮಾಡಬೇಕಾಗಿದೆ. ಪ್ರೆಸಿಡೆಂಟರುಗಳೂ ಪ್ರೈಂ ಮಿನಿಸ್ಟರುಗಳೂ ಚಕ್ರವರ್ತಿಗಳೂ ಶೇಕ್‌ಗಳೂ ಅವರಲ್ಲಿ ಒಬ್ಬೊಬ್ಬರೊಂದಿಗೂ ಬರುವ ಅಧಿಕಾರಿ ತಂಡಗಳು ಮುಂತಾದುವುಗಳು ಒಟ್ಟು ಸೇರಿ ಉಂಟು ಮಾಡುವ ಪ್ರೋಟೊಕಾಲ್ ಸಮಸ್ಯೆಗಳು ಬಹಳಷ್ಟು ಜಟಿಲವಾಗಿರುತ್ತವೆ. ಪ್ರೋಟೊಕಾಲ್‌ನ ಉಸ್ತುವಾರಿ ವಿದೇಶಾಂಗ ಸಚಿವಾಲಯದ ತೇಜರದ್ದು. ತೇಜರು ರವಿಯ ಸೇವೆಯನ್ನು ಕೇಳಿರುವರು. ಈ ಹಿಂದೆ ಕೂಡ ಎರಡೊ, ಮೂರೊ ಬಾರಿ ಅಂತಾರಾಷ್ಟ್ರೀಯ ಗೋಷ್ಠಿಗಳನ್ನು ದೆಹಲಿಯಲ್ಲೇರ್ಪಡಿಸಬೇಕಾಗಿ ಬಂದಾಗ ತೇಜ, ರವಿಯ ಸೇವೆಯನ್ನು ಕೇಳಿಕೊಂಡಿದ್ದರು. ಅಂಕ್ಟಾಡ್, ನಾಮ್, ಚೋಗ್–ಮುಂತಾದವುಗಳಿಗೆ ಇಂಡೋ–ಫ್ರೆಂಚ್ ಸೆಮಿನಾರ್, ಇಂಡೋ–ರಶ್ಯನ್ ಸಮ್ಮೇಳನಗಳಲ್ಲೂ ರವಿ ತೇಜರ ಜತೆ ನಿಕಟವಾಗಿ ಸಹಕರಿಸಿ ಕೆಲಸ ನಿರ್ವಹಿಸಿದ್ದ. ಶ್ರೀವಾಸ್ತವ ಹೇಳಿದ್ದಕ್ಕನುಗುಣವಾಗಿ ರವಿ ತೇಜರಿಗೆ ಫೋನ್ ಮಾಡಿದ. ತೇಜ ಕುಶಲೋಪರಿಗೆ ಕಾಯದೆ ನೇರವಾಗಿ ವಿಷಯ ಪ್ರಸ್ತಾಪಿಸಿದರು. ಹೌ ಕ್ವಿಕ್ಲೀ ಕ್ಯಾನ್ ಯೂ ಜಾಯಿನ್ ಮಿ ಇನ್ ಮೈ ಆಫೀಸ್?

"ಇನ್ ಎಬೌಟ್ ಟೆನ್ ಮಿನಿಟ್ಸ್."

"ಮೇಕ್ ಇಟ್ ಫಾಸ್ಟರ್.

ತೇಜ ಸಮಸ್ಯೆಗಳ ಮಧ್ಯದಲ್ಲಿರುವರೆಂದು ಮಾತಿನ ಜಿಪುಣತನಿಂದಲೇ



ವೇದ್ಯವಾಯ್ತು ರವಿಗೆ. ಭಾರತೀಯ ವಿದೇಶಾಂಗ ಖಾತೆಯ ಓರ್ವ ಸೀನಿಯರ್ ಅಧಿಕಾರಿ ತೇಜ. ಓರ್ವ ಡಿಪ್ಲೋಮ್ಯಾಟ್‌ನ ನಯಗಾರಿಕೆಯಾಗಲಿ, ಮಾತುಕತೆಯಾಗಲಿ ಆತನಲ್ಲಿದ್ದಂತಿಲ್ಲ. ಓರ್ವ ಸಮರ್ಥ ಅಡ್ಮಿನಿಸ್ಟ್ರೇಟರ್ ಆತ. ತರಾತುರಿಗಳ ಮಧ್ಯದಲ್ಲಿ ಯಾವತ್ತೊ ಅನಿರೀಕ್ಷಿತವಾಗಿ ದೊರೆತ ಒಂದು ಬಿಡುವಿನ ವೇಳೆಯಲ್ಲಿ ಆರುವುದರಲ್ಲಿದ್ದ ಪೈಪ್‌ನಲ್ಲಿ ತಂಬಾಕು ತುಂಬುತ್ತ ಹೇಳಿದ್ದು ಜ್ಞಾಪಕಕ್ಕೆ ಬಂತು ರವಿಗೆ. ಐ ಆಪ್ಲೈಡ್ ಫಾರ್ ದ ರಾಂಗ್ ಸರ್ವೀಸ್. ನಾನೊಬ್ಬ ಡಿಪ್ಲೊಮ್ಯಾಟ್ ಆಗಬೇಕೆಂದು ಒಮ್ಮೆಯೂ ಬಯಸಿರಲಿಲ್ಲ. ತ್ರೀ ನನ್ಸ್‌ನ ಡಬ್ಬದಿಂದ ತಂಬಾಕು ತೆಗೆಯುತ್ತ ಆತನೊಡನೆ ತೇಜ ಹೇಳಿದ್ದರು. ನನ್ನ ನೌಕರಿ ನನ್ನ ಬಾಳ್ವೆಯನ್ನು ಬಾಧಿಸುತ್ತದೆಯೆಂದು ನಾನೆಂದೂ ಅಂದುಕೊಂಡಿರಲಿಲ್ಲ. ನಾನು ಓರ್ವ ಹುಡುಗಿಯನ್ನು ಪ್ರೀತಿಸಿದ್ದೆ. ಆದರೆ ಇಂಡ್ಯನ್ ಫಾರಿನ್ ಸರ್ವೀಸ್ ರೂಲ್ಸ್‌ನ ಎಂಟನೆಯ ಖಾತೆಯ ಸೂಜಿ ತೂತಿನೊಳಗೆ ನುಸುಳಲು ನಮಗೆ ಸಾಧ್ಯವಾಗುವುದಿಲ್ಲ. ನಾನು ಮೆಚ್ಚಿದ ಹುಡುಗಿ ಭಾರತೀಯಳಲ್ಲ. ಭಾರತದ ವಿದೇಶಾಂಗ ಖಾತೆಯ ನೌಕರರು ವಿದೇಶಿಗಳನ್ನು ವಿವಾಹ ಮಾಡಿಕೊಳ್ಳುವುದಕ್ಕೆ ನಿಷೇಧವಿದೆ. ಭಾರತದ ಪ್ರಧಾನಿಯ ಮಗ ವಿದೇಶೀಯಳನ್ನು ವರಿಸಬಹುದು. ರಾಷ್ಟ್ರದ ರಹಸ್ಯ ರಕ್ಷಣೆಗೆ ಅದು ಬಾಧಕವಾಗುವುದಿಲ್ಲ. ವಾಯುಪಡೆ, ನಾವಿಕ ಸೇನೆ, ಭೂಸೇನೆಗಳ ವರಿಷ್ಠರೂ ವಿದೇಶೀ ಹೆಂಡಂದಿರನ್ನು ಹೊಂದಬಹುದು. ಐ.ಎ.ಎಸ್. ನವರೂ ವಿದೇಶಿಗಳನ್ನು ಮದುವೆಯಾಗುವುದಕ್ಕೆ ಯಾವ ಅಡ್ಡಿಯೂ ಇಲ್ಲ. ನಾನು ಐಲಿನ್‌ಳನ್ನು ಮೊದಲ ಬಾರಿ ಕಂಡದ್ದು ಲಂಡನ್‌ನ ಇಂಡ್ಯಾ ಹೌಸ್‌ನಲ್ಲಿ ಓರ್ವ ಜ್ಯೂನಿಯರ್ ಡಿಪ್ಲೊಮ್ಯಾಟ್ ಆಗಿ ನೌಕರಿ ಮಾಡುತ್ತಿದ್ದಾಗ. ಬಂಗಾರ ಬಣ್ಣದ ಕೂದಲೂ ನೀಲಿ ಕಂಗಳೂ ಇರುವ ಐಲಿನ್ ಚೆಲುವೆಯಾಗಿದ್ದಳು. ಥೇಮ್ಸ್ ನದಿಯ ದಂಡೆಗುಂಟ ಪರಸ್ಪರ ಕೈ ಕೈ ಪೋಣಿಸಿಕೊಂಡು ನಾವು ಸುಮ್ಮಗೆ ಅಡ್ಡಾಡುತ್ತಿದ್ದೆವು. ಟ್ರಿಫಲ್‌ಘರ್ ಸ್ಕ್ವೇರ್‌ನಲ್ಲಿ ಪಾರಿವಾಳಗಳಿಗೆ ಜೋಳದ ಅರಳನ್ನು ಎಸೆದುಕೊಡುತ್ತ ನಾವು ಸುಮ್ಮಗೆ ಕುಳಿತಿರುತ್ತಿದ್ದೆವು. ಪಬ್‌ಗಳಲ್ಲಿ ಕುಳಿತು ಶಾಂಪೇನ್ ಚಪ್ಪರಿಸುತ್ತ ಸವಿಯುತ್ತಿದ್ದೆವು. ಒಬ್ಬರನ್ನೊಬ್ಬರು ನೋಡುತ್ತ, ಒಬ್ಬರನ್ನೊಬ್ಬರು ಆಸ್ವಾದನೆ ಮಾಡುತ್ತ, ನಾವು ಪರಸ್ಪರ ಪ್ರೇಮಿಸುತ್ತಿರುವೆವೆಂದು ತಿಳಿಯಲು ಹೆಚ್ಚು ದಿನ ಹಿಡಿಯಲಿಲ್ಲ. ಒಮ್ಮೆ ಅವಳು ನನ್ನನ್ನು ಅವಳ ಮನೆಗೆ ಆಹ್ವಾನಿಸಿದಳು. ಅವಳ ತಾಯ್ತಂದೆಯರು ನನ್ನನ್ನು ಪ್ರೀತಿಯಿಂದ ಬರಮಾಡಿಕೊಂಡರು.

ಐಲಿನ್‌ಳನ್ನು ಮದುವೆಯಾಗಬೇಕೆಂಬ ನನ್ನ ಇಚ್ಛೆಯನ್ನು ನಾನು ಅಧಿಕಾರ ಕೇಂದ್ರಗಳಿಗೆ ತಿಳಿಸಿದೆ. ನನ್ನ ಮನವಿಯಲ್ಲಿ ಹಿಂದಿನ ದಿನಗಳಲ್ಲಿ ವಿದೇಶಿಗಳನ್ನು ಮದುವೆಯಾಗಿದ್ದ ಕೆಲವರ ಹೆಸರು ಮತ್ತು ಮಾಹಿತಿಗಳನ್ನು ನಮೂದಿಸಿದ್ದೆ. ಫರೂಕ್ ಅಬ್ದುಲ್ಲ, ಮದುವೆ ಮಾಡಿಕೊಂಡಿರುವುದು ಓರ್ವ ಬ್ರಿಟಿಷಳನ್ನು, ಬಿ.ಕೆ.

ನೆಹರೂರರ ಶ್ರೀಮತಿ ಹಂಗೇರಿಯವಳು. ಭಾರತದ ವಿದೇಶಾಂಗ ಖಾತೆಯಲ್ಲೇ ಇರುವ ಕೆ.ಆರ್.ನಾರಾಯಣನ್ ಮದುವೆಯಾಗಿರುವುದು ಓರ್ವ ಬರ್ಮೀಯಳನ್ನು, ಈಜಿಪ್ತಿನ ಭಾರತೀಯ ರಾಯಭಾರಿ ಭುಟಾನಿಯಾರ ಪತ್ನಿ ಓರ್ವ ಇಂಗ್ಲಿಷರವಳು. ಅಯರ್‌ಲ್ಯಾಂಡ್‌ನ ಅಂಬಾಸಿಡರ್ ಪ್ರೇಮ ಶಂಕರರ ಪತ್ನಿ ಫ್ರೆಂಚ್ ಮಹಿಳೆ. ಟುನಿಶಿಯಾದಲ್ಲಿನ ಭಾರತದ ರಾಯಭಾರಿ ರಂಗರಾಜನ್ ಓರ್ವ ಇಂಗ್ಲಿಷರವಳನ್ನೇ ಮದುವೆಯಾಗಿದ್ದಾರೆ. ಯಾದಿಯನ್ನು ಇನ್ನೂ ವಿಸ್ತರಿಸಬಹುದು. ಕೃಷ್ಣ ವರಿಸಿದ್ದು ಸ್ಪೆಯಿನ್ ದೇಶದವಳನ್ನು, ರಘುನಾಥ್ ಅಮೆರಿಕನಳನ್ನು, ಪಿಳ್ಳೆ ಬ್ರಿಟಿಷಳನ್ನು. ಇಷ್ಟೇ ಅಲ್ಲ. ಆರ್ಮಿ ಚೀಫ್ ಆಗಿದ್ದ ಜನರಲ್ ರೈನಾ ಮದುವೆಯಾದದ್ದು ಫ್ರೆಂಚಳನ್ನು. ಏರ್ ಮಾರ್ಷಲ್ ಗೋಯಲ್ ಇಂಗ್ಲಿಷರವಳನ್ನು ಮದುವೆಯಾಗಿದ್ದರೆ ಜನರಲ್ ವಸಾಲಿಯಾ ಬೆಲ್ಜಿಯಮ್‌ನವಳನ್ನು ವಿವಾಹ ಮಾಡಿಕೊಂಡಿರುವರು.

ಸರಕಾರ ಅನುಮತಿ ನೀಡಬಹುದೆಂದು ಬಹುಮಟ್ಟಿಗೆ ಭರವಸೆ ಇದ್ದುದರಿಂದ ನಾನು ಐಲಿನ್‌ಳ ಜನ್ಮ ದಿನದಂದು ಅವಳಿಗೆ ಒಂದು ವಜ್ರಖಚಿತ ಉಂಗುರವನ್ನು ಉಡುಗೊರೆ ಕೊಟ್ಟಿದ್ದೆ. ಆಕಾಶ ನೀಲಿಮೆಯಲ್ಲಿ ತೇಲಾಡುತ್ತಿರುವ ಎರಡು ಮುಗಿಲ ತುಣುಕುಗಳಂತೆ ನಾವು ಹಾಯಾಗಿದ್ದೆವು.

ಆದರೆ ನಮ್ಮ ಕನಸುಗಳನ್ನು ಧ್ವಂಸ ಮಾಡುತ್ತ ದೆಹಲಿಯ ಸೌತ್ ಬ್ಲಾಕ್‌ನಿಂದ ತನಿಖೆಗಳು ನಡೆದವು. ಐಲಿನ್‌ಳ ತಾಯಿಯ ಸಹೋದರ ಅಯರ್‌ಲ್ಯಾಂಡಿನ ಓರ್ವ ಉಗ್ರವಾದಿಯೆಂದೂ ಈ ಮದುವೆಗೆ ಅನುಮತಿ ನೀಡಿದರೆ ಹತ್ತನೆಯ ನಂಬರ್ ಡೌನಿಂಗ್ ಸ್ಟ್ರೀಟ್ ಅದನ್ನು ಸಹಿಸಲಾರದೆಂದೂ ಆಗಿತ್ತು ತನಿಖೆಯ ಫಲಿತಾಂಶ. ಕೆಲವೇ ವಾರದೊಳಗೆ ನನ್ನನ್ನು ಪೀಕಿಂಗ್‌ಗೆ ವರ್ಗಾಯಿಸಿದರು. ಹೌದು. ಆಗಿನ ಅಲ್ಲಿನ ಭಾರತದ ರಾಯಭಾರಿ ನಾರಾಯಣ್‌ರೇ ಆಗಿದ್ದರು. ಐಲಿನ್‌ಳನ್ನು ಮದುವೆಯಾಗಲು ಸಾಧ್ಯವಾಗದ ಬಗ್ಗೆ ನಾರಾಯಣ್ ಹಾಗೂ ಬರ್ಮೀಯಳಾದ ಪತ್ನಿ ಸಹಾನುಭೂತಿ ಸೂಚಿಸಲು ಮಾತ್ರ ಮರೆಯಲಿಲ್ಲ.

ಸಿಗಾರನ್ನು ಆ್ಯಶ್‌ಟ್ರೇಯಲ್ಲಿ ಕುಕ್ಕಿ ನಂದಿಸುತ್ತ ತೇಜ ನಿಟ್ಟುಸಿರುಬಿಟ್ಟರು.

ನಾನು ಆ ಬಳಿಕ ಮದುವೆಯ ಕುರಿತು ಯೋಚಿಸಲಿಲ್ಲ. ಐಲಿನ್ ಸಹ ವಿವಾಹವಾಗದೆ ಆಫ್ರಿಕನ್ ವನಾಂತರಗಳಲ್ಲೆಲ್ಲೋ ಇರುವ ಮೃಗಾಲಯವೊಂದರ ಕ್ಯೂರೇಟರಾಗಿ ಬದುಕು ಸಾಗಿಸುತ್ತಿದ್ದಾಳೆ. ಜಿಯಾಗ್ರಫಿಕಲ್ ಮ್ಯಾಗಜಿನ್‌ನ ಹಳೆಯ ಸಂಚಿಕೆಯೊಂದನ್ನು ಡ್ರಾವರ್‌ನಿಂದ ಹೊರ ತೆಗೆದು ತೇಜ ರವಿಯತ್ತ ಚಾಚಿದರು. ಅದರ ಒಳಪುಟವೊಂದರಲ್ಲಿ ಸಿಂಹದ ಮತ್ತು ಹುಲಿಯ ಮಿಶ್ರ ತಳಿಯ ಮರಿಗೆ ಹಾಲುಣಿಸುತ್ತಿರುವ ಐಲಿನ್‌ಳ ಚಿತ್ರ. ಸ್ವರ್ಣವರ್ಣದ ಕೂದಲೂ ನೀಲಿ ಕಣ್ಣುಗಳೂ ಇರುವ ಐಲಿನ್.

ಸೌತ್ ಬ್ಲಾಕ್ ಮತ್ತು ನಾರ್ತ್ ಬ್ಲಾಕ್‌ಗಳಲ್ಲಿ ಅಲ್ಲಲ್ಲಿ ಬೆಳಕಿನ ಚೌಕಗಳು



ಕಾಣಿಸುತ್ತಿವೆ. ಬ್ಯೂರಾಕ್ರಸಿಯ ಮಧ್ಯಮ ಹಂತ ಹಾಗೂ ಉನ್ನತ ಹಂತಗಳು, ರಾಷ್ಟ್ರಕ್ಕೆ ಎದುರಾಗಿರುವ ಸಂದಿಗ್ಧತೆಯನ್ನೆದುರಿಸಲು ಸಜ್ಜಾಗುತ್ತಿರಬಹುದು ಎಂದುಕೊಂಡನು ರವಿ. ನಾರ್ತ್ ಬ್ಲಾಕ್‌ನಲ್ಲಿ ಗೃಹ ಸಚಿವಾಲಯದ ಅಧಿಕಾರಿಗಳು ಕಂಚು ಕರಗಿಸಿದ ಕಂಚುಗಾರನ ಹಾಗೆ ಗಲಿಬಿಲಿಗೊಳ್ಳುತ್ತಿರಬಹುದು. ಸ್ಫೋಟನಾತ್ಮಕ ವಿದ್ಯಮಾನ. ಸ್ವತಂತ್ರ ಭಾರತದ ಅತಿದೊಡ್ಡ ಭದ್ರತಾ ವೈಫಲ್ಯ. ಸೌತ್ ಬ್ಲಾಕ್‌ನಲ್ಲಿ ನೆಹರೂ ನಿಧನರಾದಾಗಲೂ ಶಾಸ್ತ್ರಿ ನಿಧನರಾದಾಗಲೂ ಜಾಗತಿಕ ರಾಷ್ಟ್ರಗಳ ವರಿಷ್ಠರು ದೆಹಲಿಗೆ ಬಂದಿದ್ದರು. ನಾಮ್‌ಗೆ ಬಹಳ ಮಂದಿ ಜಾಗತಿಕ ನಾಯಕರುಗಳ ಯೋಗಕ್ಷೇಮವನ್ನು ಏಕಕಾಲದಲ್ಲಿ ನೋಡಿಕೊಳ್ಳಬೇಕಾಗಿ ಬಂದಿತಲ್ಲ.

ಸೌತ್ ಬ್ಲಾಕ್‌ನ ಕಮಾನಾಕೃತಿಯ ಮುಖ್ಯ ಗೇಟಿನಲ್ಲಿ ಶಸ್ತ್ರಧಾರಿಗಳಾದ ಇಬ್ಬರು ಸೆಕ್ಯೂರಿಟಿ ಗಾರ್ಡ್‌ಗಳನ್ನು ಕಂಡ ಸುರಕ್ಷೆಯ ಬಗೆಗಿನ ಜಾಗರೂಕತೆ, ತುಕ್ಕು ಹಿಡಿದ ಬ್ಯೂರೋಕ್ರಸಿ ಯಂತ್ರದ ಗಾಲಿಗಳಲ್ಲಿ ಚಲನೆಯನ್ನುಂಟು ಮಾಡಲು ಶುರುವಾಗಿದೆಯಷ್ಟೆ.

ತೇಜರ ಕೋಣೆಯೊಳಗೆ ಏಳೆಂಟು ಮಂದಿ ಇದ್ದಾರೆ. ಪರಿಚಿತ ಮುಖಗಳೇ. ಜಾಯಿಂಟ್ ಸೆಕ್ರೆಟರಿಗಳು, ಡೈರೆಕ್ಟರುಗಳು, ಡೆಪ್ಯೂಟಿ ಸೆಕ್ರೆಟರಿಗಳು.

ತೇಜ ಒಂದು ಖಾಲಿ ಕುರ್ಚಿಯ ಕಡೆಗೆ ಪೈಪ್ ತೋರಿಸಿ ರವಿಯನ್ನು ಕುಳಿತುಕೊಳ್ಳಲು ಆಹ್ವಾನಿಸಿದರು.

ಪೀಠಿಕೆಗೇನೂ ಹೊರಡದೆ ತೇಜ ಕಾರ್ಯಕ್ಕೇ ಪ್ರವೇಶಿಸಿದರು. ಜಗತ್ತಿನ ಉದ್ದಗಲಕ್ಕೂ ಹಬ್ಬಿಕೊಂಡಿರುವ ಭಾರತೀಯ ದೂತಾವಾಸ ಕಚೇರಿಗಳೊಂದಿಗೆ ಸಂಪರ್ಕ ಬೆಳೆಸುವ ಹಾಗೂ ಅಲ್ಲಿಂದೆಲ್ಲ ಅಂತಿಮ ವಿಧಿಗಳಲ್ಲಿ ಪಾಲ್ಗೊಳ್ಳಲಿರುವವರ ಕುರಿತು ಸ್ಪಷ್ಟ ಮಾಹಿತಿಗಳನ್ನು ತಿಳಿದುಕೊಳ್ಳುವ ಜವಾಬ್ದಾರಿಯನ್ನು ಆಯಾಯ ಡೆಸ್ಕ್‌ಗಳ ಹೊಣೆ ವಹಿಸುತ್ತಿರುವ ಅಧಿಕಾರಿಗಳಿಗೆ ಒಪ್ಪಿಸಿದರು. ಪೂರ್ವ ಯೂರೋಪ್ ಡಿವಿಜನ್, ಪಶ್ಚಿಮ ಯುರೋಪ್ ಡಿವಿಜನ್, ಗಲ್ಫ್ ಡಿವಿಜನ್, ಆಫ್ರಿಕಾ ಡಿವಿಜನ್ ಹಾಗೂ ಈಸ್ಟ್ ಏಷ್ಯಾ ಡಿವಿಜನ್‌ಗಳು ತಂತಮ್ಮ ಕ್ಷೇತ್ರಕ್ಕೆ ಒಳಪಟ್ಟು ವಿದೇಶೀ ರಾಷ್ಟ್ರಗಳ ಇಲ್ಲಿನ ದೂತಾವಾಸಗಳನ್ನು ತತ್‌ಕ್ಷಣ ಸಂಪರ್ಕಿಸಬೇಕಲ್ಲದೆ ಮುಖ್ಯ ಅತಿಥಿಗಳು ಆಗಮಿಸುವ ವೇಳೆ ಮತ್ತು ಇತರ ವಿವರಗಳನ್ನು ತಿಳಿದುಕೊಳ್ಳಬೇಕು. ಟೆಲೆಕ್ಸ್‌ಗಳೂ ಟೆಲಿಫೋನ್‌ಗಳೂ ನಿರಂತರ ಕಾರ್ಯನಿರತವಾಗಬೇಕು. ಕೆಲವೇ ತಾಸುಗಳೊಳಗೆ ವಿಶದಾಂಶಗಳು ಗೊತ್ತಾದರೇನೇ ಪ್ರೋಟೋಕಾಲ್ ಡಿವಿಜನ್‌ಗೆ ಅತಿಥಿಗಳ ಸ್ವಾಗತದ ವ್ಯವಸ್ಥೆ ಮಾಡಲು ಸಾಧ್ಯವಾದೀತು. ಅಶೋಕ್ ಹೊಟೇಲ್‌ನ ಎಲ್ಲಾ ಸೂಟ್ ಮುಖ್ಯ ಅತಿಥಿಗಳಿಗಾಗಿ ರಿಸರ್ವ್ ಮಡಲು ಐ.ಟಿ.ಡಿ.ಸಿ.ಗೆ ಆರ್ಡರ್ ಕೊಟ್ಟಾಗಿದೆ. ಅಶೋಕ್ ಹೊಟೇಲಿನಲ್ಲೂ ಇನ್ನಿತರ ಪಂಚತಾರಾ ಹೊಟೇಲ್‌ಗಳಲ್ಲೂ ಭದ್ರತಾ ವ್ಯವಸ್ಥೆಯನ್ನು ಅತ್ಯಂತ ಬಿಗಿಗೊಳಿಸಲು

ಹೋಂ ಮಿನಿಸ್ಟ್ರಿಯ ಪ್ರತಿನಿಧಿ ಕಾರ್ಯೋನ್ಮುಖನಾದ. ಕೊನೆಯಲ್ಲಿ ಬಂತು ರವಿಯ ಸರದಿ. ತೇಜ ಮಾತುಗಳನ್ನು ಅಪವ್ಯಯ ಮಾಡಲಿಲ್ಲ. ಆ್ಯಂಡ್ ರವೀ... ಯೂ ಆರ್ ಇನ್‌ಚಾರ್ಜ್ ಆಫ್ ಮೊಬಿಲಿಟಿ. ಅಕ್ವಯರ್ ಆ್ಯಸ್ ಮೆನಿ ಕಾರ್ಸ್ ಆ್ಯಂಡ್ ಜೀಪ್ಸ್ ಆ್ಯಸ್ ಪಾಸಿಬಲ್. ವಾಟ್ ಎವರ್ ಬಿ ದ ಸೋರ್ಸ್. ಟ್ರೈ ಆಲ್ ಪಬ್ಲಿಕ್ ಸೆಕ್ಟರ್ ಅಂಡರ್ ಟೇಕಿಂಗ್ಸ್. ಅಕ್ವಯರ್ ಆಲ್ ದ ಎಲ್ ವೈ ಎಸ್, ಆ್ಯಂಡ್ ಡಿ ಎಲ್ ಜಡ್ ಆ್ಯಸ್ ವಿ ವಿಲ್ ನೀಡ್ ಅಟ್‌ಲೀಸ್ಟ್ ಫೈವ್ ಹಂಡ್ರೆಡ್ ವೆಹಿಕಲ್ಸ್.

ದೆಹಲಿಯಲ್ಲಿ ಕನಿಷ್ಠಾವಧಿಯಲ್ಲೆ ೫೦೦ ಕಾರುಗಳನ್ನು ಕಂಡರಸುವುದು ಅಷ್ಟು ಕಷ್ಟದ ಕೆಲಸವಲ್ಲ. ಸರಕಾರದ ಅಧೀನದಲ್ಲಿರುವ ಸಾರ್ವಜನಿಕ ವಲಯದ ಆಫೀಸ್‌ಗಳಿಂದ ಒಂದೊಂದು ಕಾರ್ ಆದರೂ ಲಭಿಸುತ್ತದೆ. ಎಸ್.ಟಿ.ಸಿ. ಬೆಲ್, ಸೆಯಿಲ್, ಐ.ಎ.ಸಿ., ಏರ್ ಇಂಡಿಯಾ, ಮಾರುತಿ ಮುಂತಾದ ದೊಡ್ಡ ದೊಡ್ಡ ಕುಳಗಳಿಂದ ತಲಾ ಅರ್ಧ ಡಜನ್ ಕಾರುಗಳನ್ನಾದರೂ ಒಟ್ಟು ಮಾಡಬಹುದು. ಎಲ್ಲಾ ಡಿಪಾರ್ಟ್‌ಮೆಂಟ್‌ಗಳಲ್ಲೂ ಇರುವ ಸ್ಟಾಫ್ ಕಾರ್‌ಗಳಲ್ಲಿ ಅರ್ಧಾಂಶವನ್ನಾದರೂ ಈ ಕಾರ್ಯಕ್ಕಾಗಿ ಡ್ರಾಫ್ಟ್ ಮಾಡಬಹುದು. ಅಂತ್ಯ ಸಂಸ್ಕಾರ ಮುಗಿಯುವ ತನಕ ಕೇಂದ್ರ ಸರಕಾರದ ಆಫೀಸ್‌ಗಳಲ್ಲಿ ಸಾಮಾನ್ಯ ಕೆಲಸಗಳಾವುದೂ ನಡೆಯುವ ಹಾಗೆ ಕಾಣಿಸುತ್ತಾ ಇಲ್ಲ. ಡಿಫೆನ್ಸ್ ಮಿನಿಸ್ಟ್ರಿಯ ಅಧೀನದಲ್ಲಿ ಬಹಳಷ್ಟು ಜೀಪ್‌ಗಳಿವೆ. ಅನಿವಾರ್ಯವಾದರೆ ಟೂರಿಸ್ಟ್ ಕಾರುಗಳು ಕೂಡ.

ಕುರ್ಚಿಯಿಂದ ಏಳುವಾಗ ತೇಜ ನೆನಪಿಸಿದರು. ಅಂತ್ಯ ಸಂಸ್ಕಾರ ಮುಗಿಯುವ ತನಕ ಯಾರು ವಾಹನ ಕೇಳಿದರೂ ನಾನು ತಮ್ಮ ಟೆಲಿಫೋನ್ ನಂಬರ್ ಕೊಡುತ್ತೇನೆ–ಓಕೆ?

ರವಿ ಅದಕ್ಕೆ ವಿರೋಧ ಹೇಳಲಿಲ್ಲ. ಸೌತ್ ಬ್ಲಾಕ್‌ನಿಂದ ಹೊರಬಿದ್ದು ಸ್ವಂತ ಆಫೀಸ್ ಸೇರಿ ಎರಡು ತಾಸುಗಳಾದವು. ದೆಹಲಿಯ ಸಾರ್ವಜನಿಕ ವಲಯದ ಆಫೀಸ್‌ಗಳ ಮುಖ್ಯಸ್ಥರನ್ನು ಅಪರೇಶನಲ್ ಲೆವೆಲ್‌ನಲ್ಲಿ ಸಂಪರ್ಕಿಸಿದ. ಹೆಚ್ಚಿನವರ ಮನೆಗಳಲ್ಲಿ ಟೆಲಿಫೋನ್ ಇಲ್ಲ. ಕಾರ್‌ಗಳ ಡ್ರೈವರ್‌ಗಳೆಲ್ಲ ನೆಲೆಸಿರುವುದು ದೆಹಲಿಯಿಡೀ ಹಬ್ಬಿಕೊಂಡಿರುವ ಕಾಲನಿಗಳಲ್ಲಿ. ಡಿಪಾರ್ಟ್‌ಮೆಂಟ್‌ಗಳ ಸಂಬಂಧಪಟ್ಟ ಅಧಿಕಾರಿಗಳ ಸಮಸ್ಯೆ ಕೂಡ ಅದೇನೇ. ಡ್ರೈವರ್‌ಗಳನ್ನು ಹುಡುಕಿ ತರಬೇಕಾಗುತ್ತದೆ. ಶಾದ್ರದಿಂದ ಮೊದಲ್ಗೊಂಡು ಪಾಲಮ ಗ್ರಾಮದ ತನಕವೂ ಹಾಗೂ ಉತ್ತಂ ನಗರ್‌ನಿಂದ ಮೊದಲ್ಗೊಂಡು ತ್ರಿಲೋಕ್ ಪುರಿಯವರೆಗೂ ಹರಡಿಕೊಂಡಿರುವ ಸ್ಥಳಗಳಲ್ಲೆಲ್ಲ ಡ್ರೈವರ್‌ಗಳನ್ನು ಹುಡುಕಬೇಕಾಗುತ್ತದೆ.

ಕಲ್ಪಿಸಿಕೊಂಡಷ್ಟು ಸುಲಭವಲ್ಲ, ಸಮಸ್ಯೆ. ರವಿಯ ಸ್ಟಾಫ್ ಮತ್ತು ಅಧೀನ ನೌಕರರನ್ನು ಮನೆಯಿಂದ ಕರೆದೆಬ್ಬಿಸಿ ಪುನಃ ಆಫೀಸಿಗೆ ಬಂದು, ಸಂಪರ್ಕಿಸತಕ್ಕವರ ಯಾದಿಗಳನ್ನು ಹಂಚಿಕೊಂಡರು. ರಾತ್ರಿ ಬೆಳಗಾಗುವಷ್ಟರಲ್ಲಿ ಮೂವತ್ತು ಕಾರ್



ಮತ್ತು ಹತ್ತೊಂಬತ್ತು ಜೀಪ್‌ಗಳ ಲಭ್ಯತೆಯ ಬಗ್ಗೆ ವಾಗ್ದಾನಗಳು ದೊರೆತವು. ಆದರೆ, ಅದರಿಂದೇನೂ ಆದ ಹಾಗಾಗಲಿಲ್ಲ. ಎರಡನೆಯ ಬಾರಿಯೂ ಎಲ್ಲರನ್ನೂ ಸಂಪರ್ಕಿಸಲು ಗೊತ್ತುಮಾಡಿದ. ಗ್ಯಾರೇಜ್‌ಗಳಲ್ಲಿರುವ ಕಾರ್‌ಗಳ ನಂಬರ್ ಮತ್ತು ಡ್ರೈವರ್‌ಗಳ ಮನೆ ವಿಳಾಸಗಳನ್ನು ಸಂಗ್ರಹಿಸುವುದಾಗಿತ್ತು. ಎರಡನೆಯ ಹಂತ ಡ್ರೈವರ್‌ಗಳೊಂದಿಗೆ ಸಂಪರ್ಕ ಹೊಂದಿ, ಜವಾಬ್ದಾರಿಗಳನ್ನು ನಾವೇ ವಹಿಸಿಕೊಳ್ಳಬೇಕು. ಹಾಗೆ ಮಾಡಿದರೇನೇ ಅಗತ್ಯ ಮತ್ತು ಅನುಕೂಲತೆಗಳಿಗೆ ತಕ್ಕಂತೆ ವಾಹನಗಳು ನಮ್ಮ ಹತೋಟಿಯಲ್ಲಿರುತ್ತವೆ ಎಂದನು ರವಿ.

ನಿರೀಕ್ಷಿಸಿದ ಹಾಗೆ ಅಡೆತಡೆಗಳು ಅಲ್ಲಿಯೂ ತಲೆಯೆತ್ತಿದವು. ಪರ್ಸನಲ್ ಮೆನೇಜರ್‌ಗಳ ಅಥವಾ ಅಂಡರ್ ಸೆಕ್ರೆಟರಿಗಳ ಅಧೀನಕ್ಕೊಳಪಟ್ಟದ್ದು ಸ್ಟಾಫ್ ಕಾರ್‌ಗಳ ನಿಯಂತ್ರಣ. ಡ್ರೈವರ್ ಇಲ್ಲ; ಕಾರ್ ಕೆಟ್ಟು ನಿಂತಿದೆ; ಮೇಲಿನ ಅಧಿಕಾರಿಗಳ ಅಧೀನದಲ್ಲಿದೆ–ಎಂಬಂತಹ ನೆಪಗಳು ಬಹಳಷ್ಟು ಎದುರಾದುವು. ಕೊನೆಗೆ ರವಿ ವಿವಿಧ ವಿಭಾಗಗಳ ಕಾರ್ಯದರ್ಶಿಗಳನ್ನೂ ಚೀಫ್ ಎಕ್ಸಿಕ್ಯೂಟಿವ್‌ಗಳನ್ನೂ ನಿದ್ರೆಯಿಂದ ಎಬ್ಬಿಸಬೇಕಾಯಿತು. ಅವರಿಗೆ ಬಳಸಲಿಕ್ಕೆಂದು ತನ್ನ ಆಫೀಸ್‌ನ ಮೂರು ಟೆಲಿಫೋನ್ ನಂಬರ್‌ಗಳನ್ನೂ ಟೆಲೆಕ್ಸ್ ನಂಬರನ್ನೂ ಕೊಟ್ಟನು. ಇನ್ನು ಆ ಕಡೆಗೆ ಫೋನ್ ಮಾಡಬೇಕಾಗಿಲ್ಲ. ಬಿಟ್ಟುಕೊಡುವ ಕಾರ್‌ಗಳ ನಂಬರ್ ಮತ್ತು ಡ್ರೈವರ್‌ಗಳ ಹೆಸರನ್ನು ಸಂಬಂಧಪಟ್ಟವರೇ ಇಲ್ಲಿಗೆ ತಿಳಿಸುವರು. ಟೆಲಿಫೋನ್‌ಗಳನ್ನೂ ಟೆಲೆಕ್ಸ್‌ಗಳನ್ನೂ ನೋಡಿಕೊಳ್ಳಲು ಜನರನ್ನು ಏರ್ಪಡಿಸಿದ.

ಹೌದು. ಮೊದಲ ಸುತ್ತಿನ ಕಾರ್ಯಗಳು ಕೊನೆಗೊಂಡವು. ಫೋನ್‌ಗಳು ದನಿಗೈಯಲೂ ಟೆಲೆಕ್ಸ್ ಕಾರ್ಯಪ್ರವೃತ್ತವಾಗಲೂ ಎರಡು ತಾಸಾದರೂ ಹಿಡಿದೀತು. ಸೆಕ್ರೆಟರಿಗಳು ಚೀಫ್ ಎಕ್ಸಿಕ್ಯೂಟಿವ್‌ಗಳೇ ಮುಂತಾದವರಿಂದೆಲ್ಲ ಕೆಳಗಿನ ಹಂತಗಳಿಗೆ ನಿರ್ದೇಶನ ತಲಪಲು ಸಮಯಾವಕಾಶ ಕೊಡಬೇಕಲ್ಲ.

ರವಿ ವಾಚ್ ನೋಡಿದ. ಮಧ್ಯರಾತ್ರಿಗೆ ಅರ್ಧ ತಾಸು ಉಳಿದಿದೆ. ಸಮರ್ಥ ರೀತಿಯಲ್ಲಿ ದುಡಿಯುತ್ತಿರುವ ಸಹೋದ್ಯೋಗಿಗಳನ್ನು ಗಮನಿಸಿದ. ಅವಿಶ್ರಾಂತವಾಗಿ ಒಂದಿರುಳೂ ಅಗತ್ಯ ಬಿದ್ದರೆ ಒಂದು ಹಗಲೂ ಕೂಡ ದುಡಿಯಲು ಸಿದ್ಧರಾಗಿಯೇ ಅನೇಕ ಮಂದಿ ಬಂದಿರುವರು. ಸ್ವೆಟರ್, ಮಫ್ಲರ್, ಕಂಬಳಿ ಮುಂತಾದುವುಗಳನ್ನು ಕೆಲವರು ತಮ್ಮೊಂದಿಗೆ ತಂದಿರುವರು. ಹೀಟರ್ ಆನ್ ಮಡಿ ಯಾರೋ ಒಂದು ಕೆಟಲ್ ನೀರು ಕುದಿಯಲಿಕ್ಕಿಟ್ಟಿರುವರು. ನೆಸ್‌ಕಫೆ ಬಾಟಲಿ ಮತ್ತು ಸಕ್ಕರೆ ಪೊಟ್ಟಣಗಳು ಮೇಜಿನ ಮೇಲೆ ಕಾಣಿಸಿದವು; ಮೋಡರ್ನ್ ಬ್ರೆಡ್‌ನ ಪ್ಯಾಕ್‌ಗಳೂ ಇವೆ. ಹಸಿವೆಯನ್ನೂ, ನಿದ್ರೆಯನ್ನೂ, ಚಳಿಯನ್ನೂ ಎದುರಿಸಲು ಸಜ್ಜಾಗಿಯೇ ಅವರೆಲ್ಲ ಬಂದಿರುವರು.

ಪಕ್ಕನೆ ರವಿಗೆ ಹರ್‌ಭಜನ್‌ನ ನೆನಪಾಯಿತು. ಇತರ ಡ್ರೈವರ್‌ಗಳಾದ

ಮೆಹರ್‌ಸಿಂಗ್, ಕೃಷ್ಣಲಾಲ್ ಮತ್ತು ಬೇತಾಳ್‌ಸಿಂಗ್, ಡ್ರೈವರ್‌ಗಳಿಗೆಂದೇ ಮೀಸಲಾದ ಕೋಣೆಗಳಲ್ಲಿ ವಿಶ್ರಾಂತಿ ಪಡೆಯುತ್ತಿರುವವರು. ಲಕ್ಷ್ಮಣ್‌ದಾಸ್ ಕೆಳಗಡೆ ಸ್ವಂತ ಕಾರ್‌ನಲ್ಲೆ ನಿದ್ರಿಸುತ್ತಿರಬಹುದು. ಥಟ್ಟನೆ ರವಿ ವರ್ಕ್‌ಶಾಪ್‌ಗೆ ದುರಸ್ತಿಗೆ ಕೊಡಲಾದ ಕಾರ್ ಜ್ಞಾಪಿಸಿಕೊಂಡ. ವರ್ಕ್‌ಶಾಪ್ ತನಕ ಹೋಗಿ ವಿಚಾರಿಸಿದರೇನು? ಪಂಜಾಬಿಗಳು ತಮ್ಮ ವರ್ಕ್‌ಶಾಪ್ ಮತ್ತು ಧಾಬಾಗಳನ್ನು ಮುಂಜಾವದಲ್ಲಷ್ಟೇ ಮುಚ್ಚುತ್ತಾರೆ. ಶ್ರಮಜೀವಿಗಳಾದ ಅವರ ದಿವಸ ಬಹಳ ದೀರ್ಘವಾದುದು. ಅಲ್ಲವಾದರೂ ರಾತ್ರಿಯಲ್ಲೆ ಹೈವೇಗಳಲ್ಲಿ ಟ್ರಕ್‌ಗಳು ಟ್ರಾಫಿಕ್ ಅತ್ಯಧಿಕ. ಧಾಬಾಗಳ ಮತ್ತು ವರ್ಕ್‌ಶಾಪ್‌ಗಳ ಗ್ರಾಹಕರು ಅವರೇ ಆಗಿರುವುದರಿಂದ ರಾತ್ರಿಯಿಡೀ ತೆರೆದಿರಬೇಕಾದದ್ದು ಬಿಜಿನೆಸ್ ದೃಷ್ಟಿಯಿಂದ ಅಗತ್ಯವೂ ಹೌದು.

ಅಷ್ಟರಲ್ಲಿ ಒಂದು ಕಪ್ ಕರಿ ಕಾಫಿಯೊಂದಿಗೆ ಪ್ಯೂನ್ ಬಂದ. ಕಾಫಿ ಕುಡಿದಾಗ ಚುರುಕು ಮೂಡಿತು. ಹೊರಗೆ ಅಲ್ಪಸ್ವಲ್ಪ ಮಂಜು ಮತ್ತು ಹಿತಕರವಾದ ತಂಪು. ಫೋನ್‌ಗಳು ದನಿಗೈಯಲು ಇನ್ನೂ ವೇಳೆ ಇದೆ. ಒಮ್ಮೆ ಸುತ್ತಾಡಿ ಬರಬಹುದು. ರವಿ ತನ್ನ ಆಫೀಸ್ ಕೊಠಡಿಯಿಂದ ಕತ್ತಲೆಯಾವರಿಸಿರುವ ಏಣಿ ಮೆಟ್ಟಿಲುಗಳ ಮೂಲಕ ಕೆಳಗಿಳಿದ. ಲಕ್ಷ್ಮಣ್‌ದಾಸ್ ಒಂದು ಬದಿಯ ಡೋರ್ ತೆರೆದು ಕಾಲುಗಳನ್ನು ಹೊರಗಿರಿಸಿ ನಿದ್ರಿಸುತ್ತಿರುವನು. ಆತನನ್ನು ಕರೆದು ರವಿ ಎಚ್ಚರಗೊಳಿಸಿದ.

ಕಾರ್ ಸ್ಟಾರ್ಟ್ ಮಾಡಲಾಯಿತು. ಸ್ಟ್ರೀಡಿಯಂ ಲೈಟ್‌ನ ನಸುಹಳದಿ ಬಣ್ಣದ ಬೆಳಕಿನಲ್ಲಿ ನಗರದ ನಿರ್ಜನ ವಾತಾವರಣ ಯಾವುದೋ ಅನ್ಯ ಜಗತ್ತಿಗೆ ತಲಪಿರುವಂತೆ ಭಾಸವಾಯಿತು. ಬರಲಿರುವ ಯಾವುದೋ ವಿಪತ್ತನ್ನು ಬಸಿರಿನಲ್ಲಿ ಹೊತ್ತಿರುವ ನೀರವತೆ. ಡಿಫೆನ್ಸ್ ಕಾಲನಿಯ ಓವರ್ ಬ್ರಿಜ್ ದಾಟುವಾಗ ಅಲ್ಲಲ್ಲೇ ಕಗ್ಗ್ರಿನ ಹೊಗೆ ಸುರುಳಿಗಳೇಳುವುದು ಕಾಣಿಸಿದುವು–ಸಮೀಪದಲ್ಲಿರುವ ಮಸಣದಿಂದಿರಬಹುದು; ಅಥವಾ ನಿಜಾಮುದ್ದೀನ್ ನಿಲ್ದಾಣದಲ್ಲಿ ನೆಲಸಿರುವ ಆವಿ ಇಂಜಿನ್‌ಗಳದ್ದಿರಬಹುದು.

ವರ್ಕ್‌ಶಾಪ್ ಕಡೆಗೆ ಕಾರ್ ತಿರುಗಿದ ತತ್‌ಕ್ಷಣ ಲಕ್ಷ್ಮಣ್ ಸಡನ್ ಬ್ರೇಕ್ ಹಾಕಿ ಕಾರ್ ನಿಲ್ಲಿಸಿದ. ಹೊತ್ತಿ ಹೊಗೆಯಾಡುತ್ತಿರುವ ಒಂದು ಕಾರ್. ಅದರ ಬಳಿ ಕರಕಾಗಿ ಆಗಲೂ ಹೊಗೆಯಾಡುತ್ತಿರುವ ಒಂದು ಮನುಷ್ಯಾಕೃತಿ.

ರವಿ ಬೆಚ್ಚಿದ. ಲಕ್ಷ್ಮಣ್, ರಾಂ ರಾಂ ಎಂದು ಗಟ್ಟಿಯಾಗಿ ಕಿರುಚಿದ. ಸುತ್ತಮುತ್ತ ಯಾರೂ ಇಲ್ಲ. ಬೆಳಗ್ಗೆ ಕಾಣಿಸಿಕೊಂಡಿದ್ದ ವರ್ಕ್‌ಶಾಪ್ ಮಾಲೀಕ ನರೋತ್ತಂಸಿಂಗನದ್ದಿರಬಹುದು, ಸುಟ್ಟು ಹೊಗೆಯಾಡುತ್ತಿರುವ ಹೆಣ ಎಂದು ರವಿ ಊಹಿಸಿದ. ಥಟ್ಟನೆ ತನ್ನ ಆಫೀಸ್ ಕಾರ್‌ನ ನೆನಪಾಯಿತು. ತುಸು ದೂರದಲ್ಲಿ ಅದು ಕಾಣಿಸಿತು. ಕಾರ್‌ನ ಒಳಗಡೆ ಫಿಟ್ ಮಾಡಿದ್ದ ಚಿಕ್ಕ ಫ್ಯಾನ್ ಕಾಣಿಸಲಿಲ್ಲ.



ಬಾನೆಟ್ ತೆರೆದುಕೊಂಡಿದೆ. ಟ್ಯಾಂಕ್‌ನಿಂದ ಪೆಟ್ರೋಲ್ ತೆಗೆಯಲಾಗಿದೆ. ಪ್ರಾಯಶಃ ನರೋತ್ತಂಸಿಂಗನನ್ನು ಉರಿಸಲಿಕ್ಕಿರಬಹುದು.

ರವಿ ಸುತ್ತಲೂ ದೃಷ್ಟಿ ಹಾಯಿಸಿದ. ವರ್ಕ್‌ಶಾಪ್‌ನೊಳಗೆ ಬಹಳ ಹೊತ್ತು ಬಿರುಗಾಳಿಯೊಂದು ಬೀಸಿದಂತಿದೆ. ರಿಪೇರಿಗೆ ಬಂದಿದ್ದ ಕಾರುಗಳೆಲ್ಲದರ ವಿಂಡ್ ಸ್ಕ್ರೀನ್‌ಗಳು ಪುಡಿಗೈಯ್ಯಲ್ಪಟ್ಟಿವೆ.

ರವಿ ಒಂದು ಕ್ಷಣ ಮರಗಟ್ಟಿ ನಿಂತುಬಿಟ್ಟ. ಕರಟಿ ಹೋಗಿದ್ದ ಹೆಣವನ್ನು ಬೆಂಕಿ ನಾಲಗೆಗಳು ಆಸೆಯಿಂದ ನೆಕ್ಕುತ್ತಿರುವ ಕಿರು ಸದ್ದು ಮಾತ್ರ ಸುತ್ತಣ ನಿಶ್ಶಬ್ದತೆಯನ್ನು ಅಣಕಿಸುತ್ತಿದೆ. ಇದ್ದಕ್ಕಿದ್ದಂತೆ ಆತ ಹರ್‌ಭಜನ್‌ನ ಕುಟುಂಬದ ಬಗ್ಗೆ ಯೋಚಿಸಿದ. ಹರ್‌ಭಜನ್ ಈಗಲೂ ಆಸ್ಪತ್ರೆಯಲ್ಲೇ ಇರಬಹುದು. ಹರ್‌ಭಜನ್‌ನ ಮನೆಗೆ ಕೆಲವೇ ತಾಸುಗಳ ಹಿಂದೆ ತಾನು ಹೋದದ್ದು.

ಯಾವುದೋ ಅಂತಃಪ್ರೇರಣೆಯಿಂದಿರಬಹುದು. ರವಿ ಅವರನ್ನು ಇನ್ನೊಮ್ಮೆ ಸಂದರ್ಶಿಸಲು ಬಯಸಿದ. ಈ ನಡುರಾತ್ರಿಯಲ್ಲಿ ಹರ್‌ಭಜನ್‌ನನ್ನು ಆಸ್ಪತ್ರೆಗೆ ಹೋಗಿ ಕಾಣುವುದು ಸರಿಯಾಗಲಾರದು. ಮನೆಯವರು ನಿದ್ರೆ ಹೋಗಿರದಿದ್ದರೆ ವಿಷಯ ತಿಳಿದುಕೊಳ್ಳಬಹುದು. ಹೆಚ್ಚೇನಾದರೂ ಆಗಿಬಿಟ್ಟರೆ ಫೋನ್ ಮಾಡಲು ಹೇಳಿದ್ದೆ. ಫೋನ್ ಮಾಡಿರದ ಕಾರಣ ಸ್ಥಿತಿ ತೃಪ್ತಿಕರವಿರಬಹುದು.

ಮದರ್ ಡಯರಿ ಬೂತ್‌ನ ಸಮೀಪದಲ್ಲಿರುವ ಹರ್‌ಭಜನ್‌ನ ಮನೆಯಿರುವುದು ಮೇನ್ ಮಾರ್ಕೆಟ್‌ನಿಂದ ಎರಡು ಬ್ಲಾಕ್‌ಗಳಾಚೆಗೆ.

ಮಾರ್ಕೆಟ್ ದಾಟಿ ಮೊದಲ ತಿರುವಿಗೆ ತಲಪಿದಾಗ ಗಲಾಟೆ ಕೇಳಿಸಿತು. ನೂರು ಗಜಗಳಷ್ಟು ಮತ್ತೂ ಮುಂದುವರಿದಾಗ ಗಲಾಟೆಯ ಸ್ಪಷ್ಟ ಆಕೃತಿ ಕಾಣಿಸಿತು. ಮಂಜಿನ ಮಬ್ಬಾದ ಪಾರದರ್ಶಕತೆಯ ಮೂಲಕ ಜನ ಜಂಗುಳಿಯ ರೂಪುರೇಖೆ ಗೋಚರಿಸಿತು. ಲಾಠಿಗಳನ್ನೂ ಕಬ್ಬಿಣದ ಸರಳುಗಳನ್ನೂ ಹಿಡಿದುಕೊಂಡಿರುವ ಜನರ ಗುಂಪಿಗೆ ಬೆಳಕು ತೋರಿಸಲೆಂಬಂತೆ ದೊಂದಿಗಳನ್ನು ಹಿಡಿದಿವೆ ಬಹಳಷ್ಟು ಕೈಗಳು. ಧೋತಿ ಉಟ್ಟ, ಪೈಜಾಮ್ ತೊಟ್ಟ ಕಾಲುಗಳು. ಜನರ ಗುಂಪಿಗೆ ಮುಖವಿರಲಿಲ್ಲ. ಸಾವಿರಾರು ಕಾಲುಗಳು ಮತ್ತು ಆಯುಧಗಳನ್ನು ಹಿಡಿದ ಸಾವಿರಾರು ಕೈಗಳಷ್ಟೇ ಇರುವ ಒಂದು ಭೀಕರ ಜಂತು. ಮಂಜಿನ ಪರದೆ ಸರಿಸಿ ಯಾವುದೊ ಕರಾಳ ನರ್ತನಕ್ಕೆ ಸಜ್ಜಾಗಿ, ದಾರಿದೀಪಗಳು ಕಾವಲು ನಿಂತಿರುವ ಕಪ್ಪು ಬೀದಿಗಳಗುಂಟ ತೂರಾಡುತ್ತ ಸಾಗುತ್ತಿರುವ ವಿಚಿತ್ರ ಜಂತು.

ರವಿ ಕಾರನ್ನು ಬೀದಿಯ ಬದಿಯಲ್ಲಿ ನಿಲ್ಲಿಸಿದ ಹೆಡ್ ಲೈಟ್ ಆರಿಸಲಾಯಿತು. ಜನಜಂಗುಳಿ ಹುಚ್ಚು ಆವೇಶದೊಂದಿಗೆ ಮುಂದಕ್ಕೆ ಸರಿಯುತ್ತಿದೆ. ಒಂದೊಂದು ಹನಿ ನೆತ್ತರಿಗೂ ಮುಯ್ಯಿ ಕೇಳುವೆವು ಎಂದು ಅವರು ಅಬ್ಬರಿಸುತ್ತಿರುವರು. ಜನಸಂದಣಿ ಮೊದಲು ಪ್ರವೇಶಿಸಿದ್ದು ಬೀದಿಯ ಮೂರನೆಯ ಮನೆಯಲ್ಲಿ.

ಗದ್ದಲ ಕೇಳಿದ್ದರಿಂದ ಎದ್ದದ್ದಿರಬಹುದು. ಇತರ ಅನೇಕ ಮನೆಗಳ ಕಿಟಕಿಗಳಲ್ಲೂ ಬೆಳಕು ಕಾಣಿಸಿತು. ಜನಸಂದಣಿ ತತ್‌ಕ್ಷಣ ಏಳೆಂಟು ಗುಂಪುಗಳಾಗಿ ಚದುರಿತು. ಅವು ಬೀದಿಯ ಮನೆಗಳನ್ನು ಹಂಚಿಕೊಂಡವು. ಆಯ್ದ ಮನೆಗಳಲ್ಲಷ್ಟೆ ಅವರು ಪ್ರವೇಶಿಸುತ್ತಿರುವುದು. ಇಂತಿಂತಹ ಮನೆಗಳಿಗೆ ಪ್ರವೇಶಿಸಕೂಡದು ಎಂದು ಅವರಿಗೆ ಮುಂಚಿತವಾಗಿಯೇ ಗೊತ್ತಿತ್ತೆಂದು ಅನ್ನಿಸುತ್ತದೆ. ಜನರ ಗುಂಪು ಯಾರ ಆಜ್ಞೆಗೂ ಕಾದು ನಿಲ್ಲಲಿಲ್ಲ. ಅವರು ಗುರುತಿಸಿಕೊಂಡಿದ್ದ ಮನೆಗಳ ಬಾಗಿಲನ್ನು ಬಡಿದರು. ತೆರೆಯಲ್ಪಟ್ಟ ಬಾಗಿಲುಗಳ ಮೂಲಕ ಒಳಗೆ ನುಗ್ಗಿದರು. ತೆರೆಯದ ಬಾಗಿಲುಗಳನ್ನು ಒದ್ದು ತೆರೆದರು.

ಸಮೂಹ ಬೊಬ್ಬೆಗಳ ಜತೆಯಲ್ಲೆ ಮೃತ್ಯುಭಯದೊಂದಿಗಿನ ಭಯಾನಕ ಬೊಬ್ಬೆಗಳು.

ರವಿ ಥಟ್ಟನೆ ಒಂದು ಸಂಗತಿಯನ್ನು ನೆನೆದುಕೊಂಡ. ಹರ್‌ಭಜನ್‌ನ ಮನೆಯಿರುವುದು ಬೀದಿಯ ಆಚೆ ತುದಿಯಲ್ಲಿ. ಆತ ಬೀದಿಯ ಹಿಂಬದಿಯ ನೆರಳುಗಳ ಮರೆಯಲ್ಲೆ ದಾಪುಗಾಲು ಹಾಕಿ ನಡೆದ. ಹರ್‌ಭಜನ್‌ನ ಮನೆಯ ಹಿಂಬದಿಯ ಕೋರ್ಟ್ ಯಾರ್ಡ್ ಬಾಗಿಲು ತಳ್ಳಿ ತೆರೆದ. ಹರ್‌ಭಜನ್‌ನ ಮಕ್ಕಳ ಹೆಸರನ್ನು ಆತ ಮೊದಲೇ ತಿಳಿದುಕೊಂಡಿದ್ದ–ಮನೀಂದರ್ ಮತ್ತು ಸುನೀಂದರ್. ಆತ ಹಿಂಬಾಗಿಲು ಬಡಿದು ದನಿ ತಗ್ಗಿಸಿ ಅವರನ್ನು ಕರೆದ. ಒಳಗಿನಿಂದ ಪ್ರಶ್ನೆಯೆದ್ದಿತು;

ಯಾರು

ನಾನು ಹರ್‌ಭಜನ್‌ನ ಆಫೀಸ್‌ನಿಂದ....

ಬಾಗಿಲುತೆರೆಯಿತು. ಒಳಗಡೆ ಒಂದು ಜೀರೊ ವಾಲ್ಟ್ ಬಲ್ಪ್ ಉರಿಯುತ್ತಾ ಇದೆ. ಮಬ್ಬು ಬೆಳಕಿನಲ್ಲಿ ಹರ್‌ಭಜನ್‌ನ ತಮ್ಮಂದಿರು ಸತ್‌ವೀರ್ ಮತ್ತು ಕರ್ತಾರ್. ಸತ್‌ವೀರ್‌ನ ಕೈಯಲ್ಲೊಂದು ನಾಡ ಕೋವಿ. ಕರ್ತಾರ್‌ನ ಕೈಯಲ್ಲಿ ಕಾರ್ ಸ್ಟಾರ್ಟ್ ಮಾಡಲು ಬಳಸುವ ಕಬ್ಬಿಣದ ಸರಳು.

ಒಳಕೋಣೆಯೊಳಗೆ ಹೆಂಗಸರ ಅದುಮಿ ಹಿಡಿದ ಅಳು. ಹರ್‌ಭಜನ್‌ನ ತಾಯಿ, ಹೆಂಡತಿ ಮತ್ತು ಸತ್‌ವೀರ್ ಹಾಗೂ ಕರ್ತಾರ್‌ನ ಹೆಂಡಂದಿರು. ಅವರು ಮದುವೆಯಾಗಿ ಇನ್ನೂ ಒಂದು ವರ್ಷ ತುಂಬಿಲ್ಲ.

ರವಿ ಹೇಳಿದ: ಅವರು ಬರುತ್ತಿದ್ದಾರೆ.

ಉತ್ತರ ಹೇಳಿದವನು ಕರ್ತಾರ್. ನಾವು ಅವರನ್ನು ಬರಮಾಡಿಕೊಳ್ಳಲು ಸಜ್ಜಾಗಿದ್ದೇವೆ. ನಮಗೆ ಗೊತ್ತಿತ್ತು. ದೆಹಲಿಯ ಹಿಂದೂಗಳು ಹಲ್ಲೆಗೆ ಹೊರಡುವರೆಂದು, ಸೇಡು ತೀರಿಸುವರೆಂದು. ಅವರ ಕೈಯಲ್ಲಿ ಲಾಠಿ, ದೊಣ್ಣೆಗಳಷ್ಟೇ ಇರುತ್ತವೆ. ನಮ್ಮ ಕೈಯಲ್ಲಿ ಚಿಕ್ಕ ಮತ್ತು ದೊಡ್ಡ ಕೋವಿಗಳಿವೆ.

ರವಿ ಅವರಿಗೆ ಸಲಹೆಯಿತ್ತ. ಬನ್ನಿ ನೀವು ಇಲ್ಲಿಂದ ತಪ್ಪಿಸಿಕೊಳ್ಳಿ, ತುಸು



ಆಚೆ ಕಾರ್ ನಿಂತುಕೊಂಡಿದೆ. ನೀವೆಲ್ಲರೂ ಬಂದು ರಕ್ಷಣೆ ಪಡೆಯಿರಿ.

ಕರ್ತಾರ್ ಮತ್ತು ಸತ್‌ವೀರ್ ಪರಸ್ಪರ ದಿಟ್ಟಿಸಿದರು. ಬಳಿಕ ಶಾಂತ ಭಾವದಲ್ಲೆ ಹೇಳಿದರು. ನಮಗೆ ದೆಹಲಿಯಲ್ಲಿ ಇನ್ನು ರಕ್ಷಣೆ ದೊರೆಯಲಾರದು. ಜೀವ ಅಂಗೈಯಲ್ಲಿ ಹಿಡಿದುಕೊಂಡು ಸಾಗಿಸುವ ಜೀವನ ಸಿಕ್ಖನಿಗೆ ಹೊಸತೇನಲ್ಲ. ನೀವು ಹೋಗಬಹುದು.

ಒಳಗಿನಿಂದ ಒಂದು ದಣಿದ ದನಿ; ಕರ್ತಾರ್.... ಓ ಸತ್‌ವೀರ್...

ಕರ್ತಾರ್ ಮತ್ತು ಸತ್‌ವೀರ್ ಒಳಗೆ ಹೋದರು. ಎರಡು ನಿಮಿಷಗಳ ಕಾಲ ಅವರು ಅದುಮಿ ಹಿಡಿದ ದನಿಯಲ್ಲಿ ಏನೊ ಮಾತಾಡಿಕೊಂಡು ಅನಂತರ ಅವರು ಹೊರಬಂದರು. ಜತೆಯಲ್ಲಿ ಇಬ್ಬರು ಮಕ್ಕಳೂ ಇದ್ದರು. ಸಲ್ವಾರ್ ಕಮೀಜ್‌ಗಳನ್ನು ತೊಟ್ಟ, ಹನ್ನೆರಡೊ, ಹದಿಮೂರೋ ವರ್ಷದವರು. ಅವರು ಹರ್‌ಭಜನ್‌ನ ಮಕ್ಕಳು ಮನೀಂದರ್ ಮತ್ತು ಸುನೀಂದರ್ ಎಂಬುದು ಮೊದಲು ಗೊತ್ತಾಗಲಿಲ್ಲ. ಯಾಕೆಂದರೆ ಅವರು ಹುಡುಗಿಯರ ಉಡುಗೆಯಲ್ಲಿದ್ದರು.

ಸಾಬ್ ದಯವಿಟ್ಟು ಇವರನ್ನು ಕರೆದೊಯ್ದಿರಿ ಇವರು ಹರ್‌ಭಜನ್‌ನ ಮಕ್ಕಳು. ಇವರಾದರೂ ನರಮೇಧ ನೋಡದಿರಲಿ. ಇವರಾದರೂ ಪಾರಾಗಲಿ.

ಹೊರಗಿನ ಅಬ್ಬರ ಹತ್ತಿರವಾಗುತ್ತಿದೆ. ಕಿಟಕಿ ಸಂದಿಗಳ ಮೂಲಕ, ಹೊರಗೆ ಉರಿಯುತ್ತಿರುವ ದೊಂದಿಗಳ ಬೆಳಕಿನಲ್ಲಿ, ಅಬ್ಬರಿಸುತ್ತಿರುವ ನೆರಳುಗಳು ಹತ್ತಿರಕ್ಕೆ ಬರುತ್ತಾ ಇವೆ.

ರವಿ ಮಕ್ಕಳನ್ನು ಕರೆದುಕೊಂಡು ಹಿಂಬಾಗಿಲಿನ ಮೂಲಕ ಹೊರಬಿದ್ದ. ನೆರಳಿನಲ್ಲೆ ಕಾರಿನ ಬಳಿ ತಲಪಿದ. ಲಕ್ಷ್ಮಣ್ ಬಾಗಿಲು ತೆರೆದು ಹಿಡಿದುಕೊಂಡೇ ನಿಂತಿದ್ದ. ರವಿ ಮಕ್ಕಳನ್ನು ಕಾರೊಳಗೆ ತಳ್ಳಿ ತಾನೂ ಹತ್ತಿದ.

ಆಗ ದೂರದಲ್ಲಿ ಬಾಗಿಲನ್ನು ಒದ್ದು ತೆರೆಯುತ್ತಿರುವ ಸದ್ದು; ಹೆಂಗಸರ ಸಮೂಹ ಬೊಬ್ಬೆ; ಹೆಡ್‌ಲೈಟ್ ಹಾಕದೆ ಕಾರ್ ಅತಿ ವೇಗವಾಗಿ ಧಾವಿಸತೊಡಗಿತು.

* * *

## ಅಧ್ಯಾಯ ೯

# ಮನೀಂದರ್ ಮತ್ತು ಸುನೀಂದರ್

ರವಿ ಹುಡಗರನ್ನು ಕರೆದುಕೊಂಡು ನೇರವಾಗಿ ತನ್ನ ಮನೆ ತಲಪಿದ. ಸಲ್ವಾರ್ ಕಮೀಜ್‌ಗಳನ್ನು ತೊಟ್ಟಿದ್ದರಿಂದ ಅವರಿಗೆ ವಯಸ್ಸಿಗೆ ಮೀರಿದ ಬೆಳವಣಿಗೆ ಇರುವಂತೆ ಅನ್ನಿಸಿತು. ಕರ್‍ರಗಿನ ಹುಬ್ಬುಗಳು, ಕೆಂಪಗಿನ ಕೆನ್ನೆಗಳು, ಬೊಗಸೆ ಕಣ್ಣುಗಳು. ಬಿಳಿ ಅರಿವೆಯಿಂದ ಮುಚ್ಚಿಕೊಂಡಿರುತ್ತಿದ್ದ ಕೂದಲು ಬಿಟ್ಟಿದ್ದು ಹೆಗಲ ತನಕ ಇಳಿಬಿದ್ದಿದೆ. ಅವರು ಹುಡುಗಿಯರಾಗಿರುತ್ತಿದ್ದರೆ ಚೆಲುವೆಯರಾಗಿರುತ್ತಿದ್ದರು. ಅವರ ಬೊಗಸೆ ಕಣ್ಣುಗಳಲ್ಲಿ ಭೀತಿ ಮತ್ತು ಕಳವಳಗಳ ತೆರೆಗಳೇಳುತ್ತಿವೆ.

ಫ್ರಿಜ್ ತೆರೆದು ತಣ್ಣಗಿನ ನೀರನ್ನು ಗ್ಲಾಸ್‌ಗಳಲ್ಲಿ ಸುರಿದು ಅವರಿಗೆ ಕುಡಿಯಲು ಕೊಟ್ಟ. ನೀರು ಕುಡಿದು ಅವರು ಸುಮ್ಮಗೆ ಕುಳಿತರು. ನಿಷಿದ್ಧವಾದುದೇನನ್ನೋ ಮಾಡಿರುವಂಥ ಭಾವನೆ ಅವರನ್ನು ಪೀಡಿಸುತ್ತಾ ಇತ್ತು. ಮನೀಂದರ್ ತಗ್ಗಿದ ದನಿಯಲ್ಲಿ ವಿಚಾರಿಸಿದ; ಅವರಿಗೆ ಏನಾದರೂ ಆದೀತೆ?

ಅಬ್ಬರಿಸುತ್ತ ನುಗ್ಗಿ ಬರುವ ಜನಸಂದಣಿಯನ್ನು ಎದುರಿಸುತ್ತಿರುವ ಕರ್ತಾರ್ ಮತ್ತು ಸತ್‌ವೀರ್‌ನ ಕಲ್ಪಿತ ಚಿತ್ರಗಳು ಈ ಹುಡುಗರನ್ನು ಕಾಡುತ್ತಿರಬಹುದು. ಮಲಗುವ ಕೊಠಡಿಗಳಿಂದೇಳುವ ಅಮ್ಮನ, ಅಜ್ಜಿಯ ಹಾಗೂ ಯುವತಿಯರಾದ ಚಿಕ್ಕಮ್ಮಂದಿರ ಆಕ್ರಂದನಗಳು ಇವರ ಕಿವಿಗಳಲ್ಲಿ ಮೊಳಗುತ್ತಿರಬಹುದು. ಹೌದು. ಕಳೆದ ನವೆಂಬರ್‌ನಲ್ಲಿ, ಹರ್‌ಭಜನ್‌ನ ಒತ್ತಾಯಕ್ಕೆ ಮಣಿದು ರವಿ ಅವರ ಮದುವೆ ಸಮಾರಂಭದಲ್ಲಿ ಪಾಲ್ಗೊಂಡಿದ್ದ. ಕರ್ತಾರ್ ಮತ್ತು ಸತ್‌ವೀರ್‌ನ ಮದುವೆ ಒಂದೇ ದಿನವಾಗಿತ್ತು. ಅಕ್ಕ ತಂಗಿಯರೇ ಅವರ ವಧುಗಳೆಂದು ಹರ್‌ಭಜನ್ ಹೇಳಿದ್ದು ರವಿಯ ಜ್ಞಾಪಕಕ್ಕೆ ಬಂತು.

ಅವರನ್ನೆಲ್ಲ ಬಿಟ್ಟುಬಿಟ್ಟು ಅಪಾಯದ ವೇಳೆ ನಾವು ವೇಷ ಮರೆಸಿ ಬಂದದ್ದು ಸರಿಯೆ ಅಂಕಲ್?

ಸುನೀಂದರ್‌ನನ್ನು ಕಾಡುತ್ತಿರುವುದು ಅದಾಗಿತ್ತು. ಅದೂ ಹೆಣ್ಣುವೇಷ ತೊಟ್ಟು ನಡೆಸಿದ್ದ ಈ ಪಲಾಯನ ಹೇಡಿತನವೆಂದು ಆ ಪುಟ್ಟ ಮನಸ್ಸು ಕೊರೆಯುತ್ತಿರಬಹುದು.

ಅವರನ್ನು ಸಾಂತ್ವನಗೊಳಿಸಬೇಕಾದುದು ಅನಿವಾರ್ಯವಾಗಿತ್ತು. ತನ್ನ



ಸಂರಕ್ಷಣೆಯಲ್ಲಿ ಅವರಿಗೆ ತಕ್ಕಮಟ್ಟಿಗೆ ಭದ್ರತೆ ದೊರೆಯುತ್ತದಾದರೂ ಸಿಕ್ಖ್ ಚರಿತ್ರೆಯಲ್ಲಿ ಕಂಡುಬರುವ ವೀರ ಯೋಧರುಗಳ ಹಾಗೆ ಅಮ್ಮನನ್ನು, ಅಜ್ಜಿಯನ್ನು, ಚಿಕ್ಕಮ್ಮಂದಿರನ್ನು ಕಾಪಾಡಬೇಕಾದ ಕರ್ತವ್ಯದಿಂದ ತಪ್ಪಿಸಿಕೊಂಡ ಬಗೆಗಿನ ಅಪರಾಧ ಪ್ರಜ್ಞೆ ಅವರಿಗೆ ಕಿರಿಕಿರಿಯನ್ನುಂಟುಮಾಡುತ್ತಾ ಇದೆ. ಚಿಕ್ಕಪ್ಪಂದಿರ ಜತೆ ಹುಚ್ಚೆದ್ದ ಜನಜಂಗುಳಿಯನ್ನೆದುರಿಸಲು ಸಾಧ್ಯವಾಗದ ಬಗ್ಗೆ ಅವರು ವ್ಯಥೆಪಡುತ್ತಿದ್ದಾರೆಂದು ರವಿಗೆ ವೇದ್ಯವಾಯ್ತು.

೨೭೯ ವರ್ಷಗಳ ಹಿಂದೆ ತೀರ ಭಿನ್ನವಾದ ಪರಿಸ್ಥಿತಿಗಳಲ್ಲಿ ಗುರುಗೋವಿಂದ್ ಸಿಂಗರ ಕಿರಿಯ ಪುತ್ರರಿಗೂ ಪಲಾಯನ ಮಾಡಬೇಕಾದ ದುಃಸ್ಥಿತಿ ಎದುರಾಗಿತ್ತು. ಆಗ ಜುಜಾರ್ ಸಿಂಗ್‌ನಿಗೆ ಒಂಬತ್ತು, ಫತ್ತಾ ಸಿಂಗ್‌ನಿಗೆ ಏಳು ವರ್ಷ ಪ್ರಾಯ.

ಗುರುಗೋವಿಂದ್ ಸಿಂಗ್ ಆನಂದ್‌ಪುರದಲ್ಲಿ ಬೀಡು ಬಿಟ್ಟು ತಮ್ಮ ಬಲವನ್ನು ವೃದ್ಧಿಪಡಿಸುತ್ತಿದ್ದ ಕಾಲ. ಅವರ ದಿವ್ಯ ನಾಯಕತ್ವದಲ್ಲಿ ಸಿಕ್ಖರು ಸಂಖ್ಯೆಯಲ್ಲೂ ಶಕ್ತಿಯಲ್ಲೂ ಉನ್ನತಿ ಹೊಂದುತ್ತಾ ಇದ್ದರು. ಅವರ ವೃದ್ಧಿ ಹೊಂದುತ್ತಿದ್ದ ಶಕ್ತಿ ಮತ್ತು ಪ್ರಭಾವಗಳ ಬಗ್ಗೆ ಕರುಬುತ್ತಿದ್ದದ್ದು, ಬಿಲಾಸ್‌ಪುರ್‌ದ ಅಜ್ಮೀರ್‌ಚಂದ್, ಕಾಂಗ್ರಾದ ಘಮಚಂದ್‌ಗಳಷ್ಟೇ ಅಲ್ಲ. ಕುಲುವಿನ, ಮಂಡಿಯ, ಚಂಬಾದ, ಶ್ರೀನಗರದ ಹಾಗೂ ಜಮ್ಮುವಿನ ಮಹಾರಾಜರುಗಳೂ ಗುರುವಿನ ಬಗ್ಗೆ ಕುಪಿತರಾಗಿದ್ದರು. ಅಲ್ಲದೆ ರಂಘಾರುಗಳು, ಗುಜ್ಜಾರುಗಳು ಕೂಡ ಗುರುವಿಗೆದುರು ತಿರುಗಿ ಬಿದ್ದರು. ಅವರೆಲ್ಲ ಗುರುವನ್ನೂ ಸಿಕ್ಖರನ್ನೂ ಬಗ್ಗುಬಡಿಯಲು ಔರಂಗಜೇಬನ ನೆರವನ್ನು ಯಾಚಿಸಿದರು. ಔರಂಗಜೇಬ್ ಕೂಡ ಗುರು ಗೋವಿಂದ್ ಸಿಂಗರ ಜನಪ್ರಿಯತೆ ಮತ್ತು ವೃದ್ಧಿಸುತ್ತಿರುವ ಸಿಕ್ಖ್ ಶಕ್ತಿಯ ಬಗ್ಗೆ ಆತಂಕಿತನಾಗಿದ್ದ. ಔರಂಗಜೇಬ್ ದೆಹಲಿ, ಸರ್‌ಹಿಂದ್ ಮತ್ತು ಲಾಹೋರ್‌ಗಳಲ್ಲಿನ ತನ್ನ ಸೇನೆಯನ್ನು ಗುರುಗೋವಿಂದ್ ಸಿಂಗರ ವಿರುದ್ಧ ಒಟ್ಟು ಗೂಡಿಸಿದ. ಅನ್ಯ ರಾಜರುಗಳ ಸೇನೆಗಳೂ ಔರಂಗಜೇಬನ ನೆರವಿಗೆ ಬಂದಿತ್ತು.

ಮಹಮ್ಮದೀಯ ಮತ್ತು ಅನ್ಯ ರಾಜರುಗಳ ಬಲಿಷ್ಠವಾದ ಸೇನೆಯ ಚಲನವಲನಗಳ ಬಗ್ಗೆ ಗುರುವಿಗೆ ಬೇಹುಗಾರರ ಮೂಲಕ ಸುದ್ದಿ ಸಿಕ್ಕಿತ್ತು. ಗುರು ತನ್ನ ಅನುಯಾಯಿಗಳನ್ನು ಯುದ್ಧಕ್ಕೆ ಸಜ್ಜುಗೊಳಿಸಿದರು. ಯುದ್ಧವೀರ್ಯ ಮನಸ್ಸಿನಲ್ಲೂ ದೇವರ ಸತ್‌ನಾಮ ನಾಲಿಗೆಯಲ್ಲೂ ನೆಲೆಸಿರಲು ಸಿಕ್ಖ್ ಸೇನೆ ಗುರುವಿನ ನಾಯಕತ್ವದಲ್ಲಿ ಸಜ್ಜಾಗಿ ನಿಂತಿತ್ತು. ಮೊಗಲರ ಸಂಘಟಿತ ಸೇನೆಗೆ ಹೋಲಿಸಿದಾಗ ಸಿಕ್ಖರ ಸಂಖ್ಯೆ ಕಿರಿದಾಗಿತ್ತು. ಧೀರತನ, ಅರ್ಪಣಾಭಾವ ಹಾಗೂ ಏನನ್ನೂ ತೊರೆಯಲು ಸಿದ್ಧನಾಗಿದ್ದ ಒಬ್ಬೊಬ್ಬ ಸಿಕ್ಖನೂ ಸಾವಿರ ಮುಸಲ್ಮಾನರಿಗೆ ಸಮನಾಗಿದ್ದ.

ವಜೀರ್‌ಖಾನ್‌ನ ಸೇನೆ ಸರ್‌ಹಿಂದ್‌ನಲ್ಲೂ ಸಬರ್ ದಸ್ತ್‌ಖಾನ್‌ನ ಸೇನೆ

ಲಾಹೋರ್‌ನಿಂದಲೂ ರೋಪಾರ್ ಎಂಬ ಸ್ಥಳದಲ್ಲಿ ಸಂಧಿಸಿದುವು. ಅಲ್ಲೇ ಅವುಗಳೊಂದಿಗೆ ಅನ್ಯ ರಾಜರುಗಳ ಸೇನೆಗಳೂ ಕೂಡಿಕೊಂಡವು. ಈ ಮೂರು ಸೇನೆಗಳೂ ಒಟ್ಟಾಗಿ ತೆರೆಗಳೇಳುತ್ತಿರುವ ಸಾಗರದ ಹಾಗೆ ಆನಂದ್‌ಪುರದತ್ತ ಸಾಗಿತ್ತು. ಗುರುವಿನ ಫಿರಂಗಿಗಳು ಅಬ್ಬರಿಸಿದುವು. ಸಿಕ್ಖರು ಉಭೇಸಿಂಗ್ ಮತ್ತು ದಯಾಸಿಂಗರ ನಾಯಕತ್ವದಲ್ಲಿ ಧೀರವಾಗಿ ಕಾದಾಡಿದರು. ಬೆಳೆದ ಗೋಧಿ ಹೊಲಕ್ಕಿಳಿದ ಕೊಯಿಲು ತಂಡದ ಹಾಗೆ ಗುರುವಿನ ಭಟರು ಶತ್ರು ಸೈನಿಕರನ್ನು ತರಿದು ಹಾಕಿದರು.

ವಜೀರ್‌ಖಾನ್ ಮತ್ತು ಸಬರ್‌ದಸ್ತ್‌ಖಾನ್ ಸಿಕ್ಖರ ಮುನ್ನುಗ್ಗುವಿಕೆ ಕಂಡು ದಂಗಾಗಿಬಿಟ್ಟರು. ಗುರು ಬರಿಯ ಫಕೀರ್ ಎಂದೂ ಮೊಗಲರ ಸುಸಂಘಟಿತ ಸೇನೆಯನ್ನೆದುರಿಸಲು ಅವರಿಂದಾಗದು ಎಂದು ವೈಸರಾಯ್‌ಗಳಿಗೆ ಮಾಹಿತಿ ಸಿಕ್ಕಿತ್ತು. ಬಲಿದಾನ ತಂಡವನ್ನು ಕೋಟೆಯೊಳಗೆ ನುಗ್ಗಿಸಿ ಸಿಕ್ಖ ಸೈನಿಕರಲ್ಲಿ ಗೊಂದಲವನ್ನುಂಟುಮಾಡುವ ಯತ್ನವೂ ವಿಫಲಗೊಂಡಿತು. ಮಹಮ್ಮದೀಯರ ಪದಾತಿದಳ ಮತ್ತು ಅಶ್ವದಳಗಳಲ್ಲಿ ಅರ್ಧದಷ್ಟು ಸತ್ತುಬಿದ್ದವು.

ಮುಂದಿನ ದಿನ ಗುರು ಸ್ವತಃ ರಣಭೂಮಿಯಲ್ಲಿ ನಾಯಕತ್ವ ವಹಿಸಿಕೊಂಡರು. ಚಿನ್ನದೆಳೆಗಳ ಕಸೂತಿ ಚಿತ್ರಗಳಿರುವ ಪಟ್ಟೆಚಾದರ ಹೊದ್ದ ಬಿಳಿ ಕುದುರೆಯನ್ನೇರಿ ಹಸುರು ಬಣ್ಣ ಹಚ್ಚಲಾದ ಬಿಲ್ಲಿನ ಹೆದೆಯೇರಿಸಿ, ರತ್ನಖಚಿತವಾದ ಎದೆಕವಚ ತೊಟ್ಟು, ಗರಿಗಳೂ ಹಾರಗಳೂ ಅಂದ ಹೆಚ್ಚಿಸಿದ್ದ, ಪಗಡಿ ಧರಿಸಿದ್ದ ಗುರು ಶತ್ರುಗಳನ್ನು ತರಿದು ಕೆಡವಿದರು. ಕೌರವ ಪಡೆಯನ್ನು ಚೆಲ್ಲಾಡಿದ್ದ ಪಾರ್ಥನ ಹಾಗೆ. ಅಜ್ಮೀರ್‌ಚಂದ್‌ನ ಹಿಂದೂ ಯೋಧರಾಗಲೀ ವಜೀರ್‌ಖಾನ್‌ನ ಮುಸ್ಲಿಂ ಭಟರಾಗಲೀ ಗುರುವಿನ ಒಂದು ರೋಮಕ್ಕೆ ಕೂಡ ಹಾನಿಯುಂಟುಮಾಡಲು ಸಾಧ್ಯವಾಗಲಿಲ್ಲ. ಸಬರ್‌ದಸ್ತ್ ಖಾನ್‌ನ ಕೋವಿಗಳಿಗೆ ಗುರಿ ತಪ್ಪಿತ್ತು. ಆದರೆ ಗುರುವಿನ ಬಾಣಗಳಿಗೆ ಒಮ್ಮೆ ಕೂಡ ಗುರಿ ತಪ್ಪಲಿಲ್ಲ. ಗುರು ಖಡ್ಗ ಝಳಪಿಸಿದಾಗಲೆಲ್ಲ ತಲೆಗಳು ಉದುರಿಬಿದ್ದವು.

ಮಹಮ್ಮದೀಯರು ಆನಂದ್‌ಪುರ್ ನಗರದ ಕಡೆಗಿನ ಎಲ್ಲಾ ಮಾರ್ಗಗಳನ್ನೂ ತಡೆಯಲು ನಿರ್ಧರಿಸಿದರು. ಗುರುವಿನ ಸೇನೆಗೆ ಸರಬರಾಜಾಗುತ್ತಿದ್ದ ಆಹಾರ ವಸ್ತುಗಳು, ಆಯುಧ ಸಾಮಗ್ರಿಗಳೇ ಮುಂತಾದುವುಗಳನ್ನೆಲ್ಲ ಸಂಪೂರ್ಣ ತಡೆಹಿಡಿದು ಸತಾಯಿಸುವ ತಂತ್ರ ಹೂಡಿದರು. ನಗರದ ಕಡೆಗಿರುವ ಎಲ್ಲಾ ದ್ವಾರಗಳನ್ನು ಮುಚ್ಚುವುದರೊಂದಿಗೆ ಕೋಟೆಯ ಕಡೆಗೆ ಮಿಂಚಿನ ದಾಳಿ ನಡೆಸಲಿಕ್ಕೂ ಅವರು ಮರೆಯಲಿಲ್ಲ. ಮೊಗಲರ ಫಿರಂಗಿಗಳು ಎಷ್ಟೋ ಸಲ ಗರ್ಜಿಸಿದವು. ಆದರೂ ಕೋಟೆಗೆ ಹಾನಿಯುಂಟುಮಾಡಲಿಕ್ಕಾಗಲೀ ಸಿಕ್ಖರ ಸ್ಥೈರ್ಯ ಕೆಡಿಸಲಿಕ್ಕಾಗಲೀ ಅವರಿಗೆ ಸಾಧ್ಯವಾಗಲಿಲ್ಲ. ಯುದ್ಧ ಬಹಳ ದಿನಗಳ ಕಾಲ ಮುಂದುವರಿಯಿತು. ಗುರುಪುತ್ರ ಅಜಿತ್‌ಸಿಂಗ್‌ನಿಗೆ ಕೇಸ್‌ಗರ್ ರಕ್ಷಣೆಯ ಹೊಣೆ ವಹಿಸಿಕೊಡಲಾಯಿತು.



ಕೇಸ್‌ಗರ್‌ನ ಕಡೆಗೆ ಬರುವ ಯಾರನ್ನೂ ಕೊಲ್ಲಲು ಅಜಿತ್‌ಸಿಂಗ್ ಸಜ್ಜಾದ. ಲೋಹ್‌ಗರನ್ನು ಸಂರಕ್ಷಿಸುವ ಹೊಣೆ ನಹಾರ್‌ಸಿಂಗ್ ಮತ್ತು ಶೇರ್‌ಸಿಂಗ್‌ರಿಗೆ ವಹಿಸಿಕೊಡಲಾಯಿತು. ಆಗಂಪುರ್‌ನ ಜವಾಬ್ದಾರಿ ಆಲೀಂಸಿಂಗ್‌ನದ್ದಾಗಿತ್ತು. ದಯಾಸಿಂಗ್ ಕೋಟೆಯ ಉತ್ತರ ಭಾಗವನ್ನೂ ಉಭೇಸಿಂಗ್ ಇತರ ಭಾಗಗಳನ್ನೂ ಸಂರಕ್ಷಿಸಲು ನಿಯುಕ್ತರಾದರು. ಒಬ್ಬೊಬ್ಬರಿಗೂ ಕೆಚ್ಚೆದೆಯ ಐನೂರು ಮಂದಿ ಸಿಕ್ಖರನ್ನು ಸಹಾಯಕ್ಕಾಗಿ ನಿಯೋಜಿಸಲಾಯಿತು.

ದಿನಕಳೆದಂತೆ, ಗುರುವಿನ ಆಹಾರ ಸಾಮಗ್ರಿಗಳು ಮತ್ತು ಆಯುಧ ಸಂಗ್ರಹ ಕಡಿಮೆಯಾಗತೊಡಗಿದುವು. ಮಹಮ್ಮದೀಯರು ಯುದ್ಧದಲ್ಲಿ ಹಿಂದೆ ಬಿದ್ದರೂ ಗುರು ಮತ್ತು ತಂಡಕ್ಕೆ ತಲಪಲಿರುವ ಯುದ್ಧ ಸಾಮಗ್ರಿ ಮತ್ತು ಆಹಾರ ಸಾಮಗ್ರಿಗಳನ್ನು ತಡೆಗಟ್ಟುವುದರಲ್ಲಿ ಸಫಲರಾದರು.

ಹಗಲ ದಾಳಿಗೆ ಆಯುಧ ಸಾಮಗ್ರಿಗಳು ಸಾಲದಾದಾಗ ನಹಾರ್‌ಸಿಂಗ್ ಮತ್ತು ಶೇರ್‌ಸಿಂಗ್ ಬೆರಳೆಣಿಕೆಯ ಸಂಗಡಿಗರೊಂದಿಗೆ ಮೊಗಲರ ಶಿಬಿರದಲ್ಲಿ ರಾತ್ರಿ ವೇಳೆ ದಾಳಿ ನಡೆಸಿದರು. ಮಹಮ್ಮದೀಯರ ಸೈನ್ಯಕ್ಕೆ ಭಾರೀ ನಷ್ಟಗಳನ್ನುಂಟುಮಾಡಿದರು. ಕತ್ತಲೆಯಲ್ಲಿ ದಾಳಿ ನಡೆಸಿದಾಗ ಶತ್ರು ಯಾರೆಂದು ಖಚಿತವಾಗದೆ ಮಹಮ್ಮದೀಯರೇ ಶಿಬಿರದೊಳಗೆ ಪರಸ್ಪರ ಹೋರಾಡಿದರು.

ತಮಗಾದ ನಷ್ಟಗಳನ್ನು ಕಂಡು ಗಲಿಬಿಲಿಗೊಂಡ ಮೊಗಲ ಸೇನಾಪತಿಗಳು ಅಮೀರ್‌ಚಂದ್‌ನನ್ನೂ, ಸಂಗಡಿಗರನ್ನು ಸಿಕ್ಖರಬಳಿ ಬಿಟ್ಟು ತಾವು ದೆಹಲಿಗೇ ಮರಳುವುದಾಗಿ ಬೆದರಿಕೆ ಹಾಕಿದರು. ಸಂಖ್ಯೆಯಲ್ಲಿ ತೀರಾ ನಗಣ್ಯರಾಗಿದ್ದ ಸಿಕ್ಖರನ್ನು ಎರಡೇ ದಿನಗಳಲ್ಲಿ ಸೋಲಿಸಿ ಆನಂದ್‌ಪುರ್ ವಶಪಡಿಸಬಹುದೆಂದೇ ಚಕ್ರವರ್ತಿಗೆ ತಿಳಿಸಲಾಗಿತ್ತು. ಆದರೆ ದಿನಗಳೆಷ್ಟೇ ಕಳೆದರೂ ಸಿಕ್ಖರು ಶರಣಾಗುವ ಸೂಚನೆ ಕಾಣಿಸುತ್ತಿಲ್ಲ. ಅಷ್ಟೇ ಅಲ್ಲ. ಅವರು ಮೊಗಲರ ಸೇನೆಯಲ್ಲಿ ಭಾರೀ ನಷ್ಟಗಳನ್ನುಂಟುಮಾಡುತ್ತಲೂ ಇದ್ದಾರೆ.

ಮರುದಿನ ಮೊಗಲ ಸೇನೆ ಹೆಚ್ಚಿನ ಸಿದ್ಧತೆಗಳೊಂದಿಗೆ ಕೋಟೆಗೆ ಮುತ್ತಿಗೆ ಹಾಕಿತ್ತು. ಗುರುವಿನ ಸುಪ್ರಸಿದ್ಧ ಫಿರಂಗಿಗಳೆರಡೂ–ಬಾಘನ್ ಮತ್ತು ಬಿಜಯ್‌ಘೋಷ್ ಈ ಸಂದರ್ಭಕ್ಕಾಗಿ ಕಾಯುತ್ತಾ ಇದ್ದುವು. ಮೊಗಲರ ಮತ್ತು ಹಿಂದೂ ರಾಜರುಗಳ ಸಾವಿರಗಟ್ಟಲೆ ಸೈನಿಕರು ಹತರಾದರು. ಅವರ ಶಿಬಿರಗಳೂ ಧ್ವಜಗಳೂ ಧ್ವಂಸವಾದುವು. ಧ್ವಜಸ್ತಂಭಗಳು ಮುರಿದುವು. ಮೊಗಲರ ಸೇನೆ ಅನಿವಾರ್ಯವಾಗಿ ಹಿಂದೆ ಸರಿಯಬೇಕಾಯಿತು.

ಆಹಾರ ಸಾಮಗ್ರಿಗಳ ಮತ್ತು ಆಯುಧಗಳ ಬರುವಿಕೆ ನಿಂತುಬಿಟ್ಟಾಗ, ಸಿಕ್ಖರು ಶತ್ರು ಶಿಬಿರದಲ್ಲಿ ಆಕ್ರಮಣ ನಡೆಸಿ ಸಾಮಾನು ಮತ್ತು ಸಾಮಗ್ರಿಗಳನ್ನು ಕೊಳ್ಳೆ ಹೊಡೆದರು. ಅಂತಹ ಒಂದು ಮಿಂಚಿನ ದಾಳಿಯ ವೇಳೆ ಮಹಮ್ಮದೀಯರು ಓರ್ವ ಸಿಕ್ಖನನ್ನು ಹಿಡಿದರು. ಆತನ ಕೇಶ ಮತ್ತು ಲಿಂಗಾಗ್ರವನ್ನು ಕತ್ತರಿಸಿದರು.

ಆತನಿಗೆ ಗೋಮಾಂಸ ತಿನ್ನಿಸಿದರು. ಆತನನ್ನು ಅಪಮಾನಿಸಿ ಹಿಂತಿರುಗಿಸಿದರು. ಸಿಕ್ಖರಿಗೆ ಒಂದು ಪಾಠ ಕಲಿಸಲಿಕ್ಕೆಂದೇ ಹಾಗೆ ಮಾಡಿದ್ದರು. ಆದರೆ ಗುರು ಆತನನ್ನು ಮರಳಿ ಸಿಕ್ಖ ಮತಕ್ಕೆ ಸೇರಿಸಿದರು. ಬಲವಂತವಾಗಿ ಮತಾಂತರಗೊಳಿಸಲ್ಪಟ್ಟರೂ ಮೂಲಭೂತವಾಗಿ ಸಿಕ್ಖರು ಸಿಕ್ಖರೇ ಎಂದು ಅವರು ಬೋಧಿಸಿದರು.

ಆನಂದ್‌ಪುರ್ ನಗರದಲ್ಲಿ, ತಡೆಗಟ್ಟುವಿಕೆಯಿಂದಾಗಿ ಆಹಾರ ಸಾಮಗ್ರಿಗಳು ಅಲಭ್ಯವಾದುವು. ಒಂದು ರಾತ್ಲು ಗೋಧಿಹಿಟ್ಟಿಗೆ ಒಂದು ರೂಪಾಯಿಗೇರಿತು ಬೆಲೆ. ಅನೇಕ ಮಂದಿ ನಗರ ತೊರೆದು ಪಕ್ಕದ ನಗರಕ್ಕೆ ವಲಸೆ ಹೋದರು. ಗುರುವಿನ ಸೇನೆ ಮಾತ್ರ ಹಸಿವೆ ಸಹಿಸುತ್ತಾ ಎದುರಿಸಿ ನಿಂತಿತು. ಜೀವವನ್ನೇ ತೊರೆಯಲು ಸಿದ್ಧರಾಗಿದ್ದವರಿಗೆ ಹಸಿವೆ ಒಂದು ಸಮಸ್ಯೆಯಾಗಲಿಲ್ಲ. ಆದರೆ ಅನೇಕ ಮಂದಿ ಗೊಣಗುಟ್ಟುತ್ತಾ ಇದ್ದರು. ಗುರು ಮಾತೆಗೆ ಕೂಡ ಈ ಗೊಣಗಾಟ ಕೇಳಿಸುತ್ತಿತ್ತು. ಕೆಲವರೆಲ್ಲ ಆಕೆಯ ಬಳಿ ದೂರು ಹೇಳುತ್ತಲೂ ಇದ್ದರು. ಆಕೆಯ ದಾಸಿಯರೆ ಆಕೆಗೆ ಕೇಳಿಸುವ ಹಾಗೆ ಈ ಪರಿಸ್ಥಿತಿಯನ್ನು ಶಪಿಸತೊಡಗಿದರು. ಕೊನೆಗೆ ಆಕೆ ಮಗನನ್ನು ಸಮೀಪಿಸಿದಳು. ಯುದ್ಧದಲ್ಲಿ ಯಾವತ್ತೂ ಸೋಲರಿಯದ ಸಿಕ್ಖರು ಈಗ ಉಪವಾಸದಿಂದ ನಿರ್ಬಲರಾಗಿದ್ದಾರೆ. ಆಹಾರಕ್ಕಾಗಿ ಈಗ ಅವರಿಗೆ ಕೇವಲ ಹತ್ತು ತೊಲೆ ಧಾನ್ಯವಷ್ಟೇ ದೊರೆಯುತ್ತಾ ಇದೆ. ಶತ್ರು ಸೇನೆ ಸಂದರ್ಭಕ್ಕಾಗಿ ಕಾಯುತ್ತ ಬಾಗಿಲಲ್ಲೆ ಕಾದು ನಿಂತಿದೆ. ಈ ಪರಿಸ್ಥಿತಿಯಲ್ಲಿ ಸಿಕ್ಖರು ಯುದ್ಧ ಮಾಡುವುದಾದರೂ ಹೇಗೆ? ಅವರ ತಾಳ್ಮೆ ಸಂಪೂರ್ಣ ಬತ್ತಿಹೋಗಿದೆ.

ಗುರು ತಾಳ್ಮೆಯಿಂದಲೆ ತಾಯಿಯ ಸಂತಪ್ತ ನುಡಿಗಳನ್ನು ಆಲಿಸಿದರು. ಅನಂತರ ಶಾಂತ ಮನಸ್ಸಿನಿಂದಲೆ ಹೇಳಿದರು: ಹಸಿವೆ, ತ್ಯಾಗ, ಕಷ್ಟ ಸಹಿಷ್ಣುತೆ ಮುಂತಾದುವುಗಳ ಮೂಲಕವೇ ಖಲ್ಸ ಗುರಿಮುಟ್ಟ ಬಲ್ಲದು. ದೇವರ ಸನ್ನಿಧಿಗೆ ಸುಲಭದ ದಾರಿಗಳಿಲ್ಲ ಅಮ್ಮ.

ದಿಗ್ಬಂಧನದ ದುಷ್ಪರಿಣಾಮಗಳು ಸಿಕ್ಖ ಸೇನೆಯ ಮನಃಸ್ಥೈರ್ಯವನ್ನು ಕದಲಿಸತೊಡಗಿದುವು. ಧಾನ್ಯ ತಲಾ ಒಬ್ಬನಿಗೆ ಐದು ತೊಲೆಗೆ ಕುಗ್ಗಿತು. ಕೆಲವು ದಿನ ಅದೂ ಸಿಕ್ಕುತ್ತಿರಲಿಲ್ಲ. ಶತ್ರು ಶಿಬಿರದ ಲೂಟಿಯಿಂದಲೂ ಅಗತ್ಯವಿರುವುದೇನೂ ಸಿಕ್ಕದಾಯ್ತು. ಅವರು ಮರದ ತೊಗಟೆ ಕಿತ್ತು ಗುದ್ದಿ ಪುಡಿ ಮಾಡಿದ ಚಪಾತಿ ತಯಾರಿಸಿದರು. ಕೆಲವೊಮ್ಮೆ ಎಲೆಗಳನ್ನಷ್ಟೇ ತಿಂದರು.

ಇಷ್ಟಾಗಿಯೂ ಗುರು ಸೋಲೊಪ್ಪಲು ಸಿದ್ಧರಿರಲಿಲ್ಲ. ಗುರು ತಾವಾಗಿಯೇ ಆನಂದ್‌ಪುರ್ ಬಿಟ್ಟು ಹೋಗುವುದಾದರೆ, ಗುರುವಿನ ಹಾಗೂ ಅನುಯಾಯಿಗಳ ಜೀವ ಮತ್ತು ಸ್ವತ್ತುಗಳಿಗೆ ರಕ್ಷಣೆ ನೀಡುವ ಆಶ್ವಾಸನೆಯೊಂದಿಗೆ ಅಜ್ಮೀರ್‌ಚಂದ್‌ನ ದೂತನು ಗುರುವನ್ನು ಸಮೀಪಿಸಿದನು. ಗುರುವಿನ ಅನುಯಾಯಿಗಳಲ್ಲಿ ಅನೇಕ ಮಂದಿ ಇದೊಂದು ಸುಸಂದರ್ಭವೆಂದೂ ರಾಜಿ ಮಾಡಿಕೊಳ್ಳುವುದೇ ಸಿಕ್ಖರ



ಭವಿಷ್ಯದ ಮಟ್ಟಿಗೆ ಒಳ್ಳೆಯದೆಂದೂ ಗುರುವಿಗೆ ಹೇಳಿದರು. ಗುರುವಿನ ತಾಯಿ ಕೂಡ ಆನಂದ್‌ಪುರವನ್ನು ತೊರೆದು ಬೇರೆಲ್ಲಾದರೂ ಆಸರೆ ಪಡೆಯಲು ಮಗನನ್ನು ಕೇಳಿಕೊಂಡಳು: ಮಗನೆ, ಈ ಸಂದರ್ಭವನ್ನು ವ್ಯರ್ಥಗೊಳಿಸಬಾರದು. ಆಯುಧಗಳೂ ಆಹಾರವೂ ಇಲ್ಲದೆ ಶತ್ರುವನ್ನೆದುರಿಸಲು ನಮಗೆ ಸಾಧ್ಯವಾಗುವುದಿಲ್ಲ. ನಾವು ಇಲ್ಲಿಂದ ಹೊರಟು ಹೋಗೋಣ.

ಆದರೆ, ಗುರುವಿಗೆ ಶತ್ರು ಶಿಬಿರದಿಂದ ಬಂದ ಸಂದೇಶದ ಪ್ರಾಮಾಣಿಕತೆಯ ಬಗ್ಗೆ ಸಂಶಯ ಇದ್ದಿತ್ತು.

ತಾಯಿ ಮತ್ತು ತನ್ನ ಅನುಯಾಯಿಗಳು ಒತ್ತಾಯಿಸಿದಾಗ ಗುರು ಶತ್ರುಗಳ ಪ್ರಾಮಾಣಿಕತೆಯನ್ನು ಪರೀಕ್ಷಿಸಲು ನಿರ್ಧರಿಸಿದರು. ಅಜ್ಮೀರ್‌ಚಂದ್‌ನ ದೂತನಾಗಿ ಬಂದಿರುವ ಬ್ರಾಹ್ಮಣನೊಡನೆ ತಾವು ಆನಂದ್‌ಪುರ್ ಬಿಟ್ಟು ಹೋಗಲು ತಯಾರಿರುವುದಾಗಿ ಹೇಳಿದರು; ಆದರೆ ಒಂದು ಶರ್ತಬದ್ಧವಾಗಿ ಮಾತ್ರ. ಮೊದಲು ನಮ್ಮ ಚರಸ್ವತ್ತುಗಳಷ್ಟನ್ನೂ ಕೋಟೆಯಿಂದ ಹೊರಸಾಗಿಸಲು ಬಿಡಬೇಕು. ಆ ಅಮೂಲ್ಯ ಸ್ವತ್ತುಗಳನ್ನು ಚಿನ್ನ, ರತ್ನ, ನಾಣ್ಯ–ಸಾಗಿಸಲು ಕೆಲವು ಎತ್ತಿನಗಾಡಿಗಳನ್ನು ಒದಗಿಸಬೇಕು. ಆ ಗಾಡಿಗಳು ಆನಂದ್‌ಪುರ್‌ನ ಗಡಿ ದಾಟುವ ತನಕ ಅವರಿಗೆ ಯಾವ ರೀತಿಯಲ್ಲೂ ತೊಂದರೆ ಕೊಡುವುದಿಲ್ಲವೆಂದು ಶತ್ರು ಪಕ್ಷದ ಹಿಂದೂ ದಂಡ ನಾಯಕ ಸಾಲಿಗ್ರಾಮ ಮುಟ್ಟಿಯೂ ಮುಸ್ಲಿಂ ದಂಡ ನಾಯಕ ಖುರಾನ್ ಮುಟ್ಟಿಯೂ ಪ್ರಮಾಣ ಮಾಡಬೇಕು.

ಶತ್ರು ಪಕ್ಷದವರು ಗುರುವಿನ ಶರತ್ತುಗಳನ್ನು ಒಪ್ಪಿಕೊಂಡರು. ಗುರು ತನ್ನ ಉಗ್ರಾಣಾಧಿಕಾರಿಯನ್ನು ಕರೆದು ಹಳೆಯ ಚಪ್ಪಲಿಗಳು, ಸೆಗಣಿ, ಬೆರಣಿ, ಹರಕು ಬಟ್ಟೆ, ಹಳೆಯ ಪಾತ್ರೆಗಳು ಸತ್ತ ಪಶುಗಳ ಮೂಳೆಗಳೇ ಮುಂತಾದವುಗಳನ್ನು ಗೋಣಿಚೀಲಗಳಲ್ಲಿ ತುಂಬಿ ಬಾಯಿ ಹೊಲಿಯಲು ಹೇಳಿದರು. ಪ್ರತಿಯೊಂದು ಚೀಲವನ್ನೂ ಬೆಲೆಬಾಳುವ ಪಟ್ಟೆ ವಸ್ತ್ರದಿಂದ ಮುಚ್ಚಲಾಯಿತು. ರಾತ್ರಿ ವೇಳೆ ಎತ್ತಿನಗಾಡಿಗಳಲ್ಲಿ ಚೀಲಗಳನ್ನು ಹೇರಲಾಯಿತು. ಪ್ರತಿಯೊಂದು ಗಾಡಿಯ ಮುಂದುಗಡೆಯೂ ಉರಿಯುವ ಒಂದೊಂದು ದೊಂದಿಯನ್ನು ಊರಲಾಯಿತು. ಪಟ್ಟೆ ವಸ್ತ್ರಗಳಿಂದ ಸುತ್ತಲಾದ ಗೋಣಿಚೀಲಗಳಲ್ಲಿ ಅಮೂಲ್ಯ ಸ್ವತ್ತುಗಳೇ ತುಂಬಿವೆ ಎಂಬ ಗ್ರಹಿಕೆಯಿಂದ. ಹಿಂದೂಗಳ ಹಾಗೂ ಮುಸ್ಲಿಂಗಳ ಸೈನಿಕರು ತಾವು ಸಾಲಿಗ್ರಾಮ ಮುಟ್ಟಿಯೂ ಖುರಾನ್ ಮುಟ್ಟಿಯೂ ಮಾಡಿದ್ದ ಪ್ರಮಾಣವನ್ನು ಮರೆತು ಚೀಲಗಳನ್ನು ಕೊಳ್ಳೆಹೊಡೆದರು. ಆರು ಸಾವಿರದಷ್ಟು ಸೈನಿಕರು ಆ ದರೋಡೆಯಲ್ಲಿ ಪಾಲ್ಗೊಂಡರು. ಗುರು ಆ ಸಂದರ್ಭವನ್ನು ಕಳೆದುಕೊಳ್ಳಲಿಲ್ಲ. ಸಜ್ಜುಗೊಳಿಸಿ ಇರಿಸಲಾಗಿದ್ದ ಫಿರಂಗಿಗಳು ಗುಡುಗಿದವು. ಶತ್ರುವಿನ ಕಡೆಯಲ್ಲಿ ಬಹಳಷ್ಟು ನಾಶ, ನಷ್ಟಗಳು ಸಂಭವಿಸಿದವು. ಆದರೂ ಅಳಿದುಳಿದವರು ಪಟ್ಟೆ ವಸ್ತ್ರ ಸುತ್ತಿದ ಚೀಲಗಳನ್ನು ಅವರವರ ಶಿಬಿರಕ್ಕೆ ಸಾಗಿಸಿದರು. ಬೆಳಗ್ಗೆ ಕೊಳ್ಳೆ ಸ್ವತ್ತುಗಳನ್ನು

ಪಾಲು ಮಾಡಲು ಹೊರಟಾಗಲಷ್ಟೇ ಅವರಿಗೆ ತಮ್ಮ ಮೂರ್ಖತನದ ಅರಿವಾದದ್ದು. ಹಳೆಯ ಚಪ್ಪಲಿ, ಹರಕು ಬಟ್ಟೆ, ತೂತುಬಿದ್ದ ಪಾತ್ರೆ ಮುಂತಾದುವುಗಳಿಗೆ ಬದಲಿಯಾಗಿ ಕೊಡಬೇಕಾಗಿ ಬಂದದ್ದು ಆರು ಸಾವಿರ ಸೈನಿಕರ ಪ್ರಾಣವಾಗಿತ್ತು.

ಶತ್ರುವಿನ ನಿಜವಾದ ಉದ್ದೇಶ ಏನು ಎಂಬುದನ್ನು ಸ್ಪಷ್ಟಪಡಿಸಿಕೊಡುತ್ತ ಗುರು ಸಂಗಡಿಗರಿಗೆ ಬೋಧಿಸಿದರು. ಸಂತಸ ತುಂಬಿದ ಬದುಕು ಒಂದು ರೋಗ. ಸಂಕಷ್ಟವೇ ಅದಕ್ಕೆ ಮದ್ದು. ಕಷ್ಟಗಳೆದುರಾದಾಗ ಅವನ್ನು ಎದುರಿಸದೆ ಓಡಿಹೋಗುವುದು ಹೇಡಿತನ.

ಕೊನೆಗೆ ಚಕ್ರವರ್ತಿಯ ಸ್ವಹಸ್ತಾಕ್ಷರದಲ್ಲಿರುವ ಪತ್ರವೇ ಗುರುವಿಗೆ ಲಭಿಸಿತು. ನಾವು ಖುರಾನ್ ಮುಟ್ಟಿ ಪ್ರಮಾಣ ಮಾಡುತ್ತೇವೆ. ತಮಗೆ ಯಾವ ತೊಂದರೆಯೂ ಆಗಲಾರದು. ಯುದ್ಧವನ್ನು ಕೊನೆಗೊಳಿಸಿ ನಮ್ಮ ಬಳಿಗೆ ಬನ್ನಿರಿ. ಇಲ್ಲಿಗೆ ಬರಲು ಇಷ್ಟವಿಲ್ಲವಾದರೆ, ತಾವು ಇಷ್ಟಪಡುವ ಇನ್ನೆಲ್ಲಿಗಾದರೂ ತೆರಳಿರಿ.

ಕೋಟೆಯೊಳಗಿನ ಕಡು ಬವಣೆಯಿಂದ ರೋಸಿ ಹೋಗಿದ್ದ ಸಿಕ್ಖರಲ್ಲಿ ಕೆಲವರು ಪುನಃ ಗುರುವಿನ ತಾಯಿಯನ್ನು ಕಂಡು ಸಂಕಟ ನಿವೇದನೆ ಮಾಡಿದರು. ತಾಯಿ ಮಗನೊಡನೆ ಕೇಳಿಕೊಂಡಳು: ಶತ್ರು ಸೇನೆಯಿಂದ ಮುತ್ತಿಗೆ ಹಾಕಲ್ಪಟ್ಟ ಈ ಕೋಟೆಯೊಳಗಿದ್ದರೆ ಸಾವು ಬೇಗನೆ ಬಂದುಬಿಡುತ್ತದೆ. ಇಲ್ಲಿಂದ ಪಾರಾಗು. ಚಕ್ರವರ್ತಿಯೇ ವಾಗ್ದಾನವಿತ್ತಿರುವನಲ್ಲ... ಔರಂಗಜೇಬನ ಪ್ರಾಮಾಣಿಕತೆಯಲ್ಲಿ ಗುರುವಿಗೆ ನಂಬಿಕೆ ಇರಲಿಲ್ಲ. ಆದರೆ ಸಂಗಡಿಗರ ಹಾಗೂ ತಾಯಿಯ ಒತ್ತಾಯವನ್ನು ಎದುರಿಸಲಸಾಧ್ಯವಾದಾಗ ಗುರು ಹೇಳಿದರು: ಈ ಕೋಟೆಯನ್ನು ಬಿಟ್ಟರೆ ನಾವೆಲ್ಲರೂ ಸಾಯುವುದು ಖಚಿತ. ಇಲ್ಲಿಂದ ಹೊರಹೋಗುವುದೆಂದರೆ ಬೆಂಕಿ ಕಿಡಿಯನ್ನು ಕಂಡು ಭ್ರಮಿಷ್ಟನಾದ ಮಗುವನ್ನು ಹಿಡಿಯಲು ಹೋಗುವ ಹಾಗಾದೀತು. ಹೆತ್ತವರು ಬೇಡವೆಂದರೂ ಜ್ವಾಲೆಯಿಂದ ಆಕರ್ಷಿತವಾದ ಮಗು ಕೇಳಲಾರದು. ಪ್ರಿಯ ಬಂಧುಗಳೇ... ನಿಮಗೆ ಭದ್ರತೆಯೊದಗಿಸುತ್ತಿರುವುದು ಈ ಕೋಟೆ. ತುರುಕರ ಹಾಗೂ ಹಿಂದೂಗಳ ವಂಚನೆಯನ್ನು ನಾನು ಈಗಾಗಲೇ ಸಾಬೀತುಗೊಳಿಸಿದ್ದೇನೆ. ಮಾಳ್ವದಿಂದ ನಮ್ಮ ನೆರವಿಗೆ ಬರಲಿರುವ ಸೇನೆ ತಲಪಲು ನಾಲ್ಕೈದು ದಿನ ತಡವಾದೀತು. ಅಷ್ಟರ ತನಕವಾದರೂ ಸೈರಿಸಿರಿ....

ಆದರೆ, ಮಾತಾ ಗುಜಾರಿ, ಗುರುವಿನ ಮಾತುಗಳನ್ನು ಕಿವಿಗೆ ಹಾಕಿಕೊಳ್ಳಲಿಲ್ಲ. ಶತ್ರು ಸೇನಾಪತಿ, ಮಾತಾ ಗುಜಾರಿ ಕೋಟೆ ಬಿಡಲು ಸಿದ್ಧಳೆಂದರಿತಾಗ ಓರ್ವ ಬ್ರಾಹ್ಮಣನನ್ನು ಆಕೆಯ ಬಳಿಗೆ ಕಳುಹಿಸಿದ.

ಮಾತಾ ಗುಜಾರಿ ಗುರುವಿನ ಅಜಿತ್‌ಸಿಂಗ್, ಜೋರಾವರ್‌ಸಿಂಗ್ ಹಾಗೂ ಐನೂರರಷ್ಟು ಅನುಯಾಯಿಗಳಷ್ಟೇ ಕೋಟೆಯಲ್ಲಿ ಉಳಿದರು. ಅವರಲ್ಲಿ ದಯಾಸಿಂಗ್, ಮುಹಕಮ್‌ಸಿಂಗ್, ಸಾಹಿಬ್‌ಸಿಂಗ್ ಸಹ ಇದ್ದರು. ಗುಲಾಬ್‌ರಾಯ್, ಶ್ಯಾಮ್‌ಸಿಂಗ್ ಹಾಗೂ ಇನ್ನಿತರ ನಿಕಟ ಸಂಬಂಧಿಕರೂ ಇದ್ದರು.



ಶತ್ರುಸೇನೆಯೊಂದಿಗೆ ಕಾದಾಡಲು ಸಂಖ್ಯೆಯಲ್ಲೂ ಬಲದಲ್ಲೂ ತೀರಾ ಹಿಂದೆ ಬಿದ್ದಿರುವ ಒಂದು ಮುಷ್ಟಿ ಜನರಿಂದ ಸಾಧ್ಯವಾಗದೆಂದು ಗುರು ಮನಗಂಡರು. ಕೊನೆಗೆ ಕತ್ತಲೆಯ ಮರೆ ಬಳಸಿ ಕೋಟೆ ಬಿಡಲು ನಿರ್ಧರಿಸಿದರು. ಆನಂದ್‌ಪುರ್ ತೊರೆದು ಕಿರ್ತಾರ್‌ಪುರ್ ದಾರಿಯಾಗಿ ಗುರು ಮತ್ತು ತಂಡ ರೋಪಾರ್‌ನತ್ತ ಸಾಗಿದರು. ರೋಪಾರ್ ತಲಪುವ ಮೊದಲೇ ಮೊಗಲ ಸೇನೆ ಗುರುವನ್ನೂ ತಂಡವನ್ನೂ ಹಿಂದಿನಿಂದ ಆಕ್ರಮಿಸಿತು. ಅನೇಕ ಯುದ್ಧಗಳಲ್ಲಿ ಕೆಚ್ಚಿನಿಂದ ಹೋರಾಡಿದ್ದ ಉಭೇಸಿಂಗ್ ಕೊಲೆಯಾದ. ಕೆಲವರನ್ನು ರೋಪಾರ್‌ನಲ್ಲಿ ಬಿಟ್ಟು ಗುರು ಮೂವತ್ತೈದು ಮಂದಿಯನ್ನು ಮಾತ್ರ ಜತೆಗೆ ಕರೆದುಕೊಂಡು ಚಾಂಕೌರ್‌ಗೆ ಪ್ರಯಾಣ ಮುಂದುವರಿಸಿದರು. ರೋಪಾರ್‌ನಲ್ಲಿ ಉಳಿದ ಹೆಚ್ಚಿನವರು ಕೊಲೆಗೈಯಲ್ಪಟ್ಟು ಐವರಷ್ಟೇ ಉಳಿದರು. ಗುರು ಮತ್ತು ಸಂಗಡಿಗರು ಚಿಕ್ಕ ಮನೆಯೊಂದರಲ್ಲಿ ಅವಿತುಕೊಂಡೇ ದಿನಗಳೆದರು. ಅಷ್ಟರಲ್ಲೆ ಶತ್ರುಸೇನೆಗೆ ಗುರುವಿನ ಅಡಗುದಾಣದ ಬಗ್ಗೆ ಸುದ್ದಿ ದೊರೆತಿತ್ತು. ರಂಘಾರ್‌ಗಳೂ ಗುಜಾರ್‌ಗಳೂ ಗುರುವಿಗೆದುರಾಗಿ ಶತ್ರು ಪಕ್ಷವನ್ನು ಸೇರಿದರು. ಈಗ ಗುರುವಿನ ಅನುಯಾಯಿಗಳಾಗಿ ಕೇವಲ ನಲುವತ್ತು ಮಂದಿಯಷ್ಟೇ ಉಳಿದಿರುವರು. ಗುರು ಎಂಟು ಮಂದಿಯ ಒಂದೊಂದು ತಂಡವನ್ನು ಮನೆಯ ನಾಲ್ಕು ದೆಸೆಗಳಲ್ಲಿ ಕಾವಲಿರಿಸಿದರು. ಬಾಗಿಲಲ್ಲಿ ಕೋರ್ತಾಸಿಂಗ್ ಮತ್ತು ಮದನ್‌ಸಿಂಗ್‌ನನ್ನು ನಿಲ್ಲಿಸಿದರು. ಮಹಡಿ ಮೇಲೆ ಗುರು ಮತ್ತು ಇಬ್ಬರು ಪುತ್ರರೂ–ದಯಾಸಿಂಗ್ ಮತ್ತು ಸಂತ್‌ಸಿಂಗ್ ನೆಲೆಸಿದರು. ಕೇವಲ ನಲುವತ್ತೇ ಮಂದಿ ಸಿಕ್ಖರೊಂದಿಗೆ ಗುರು ಮೊಗಲರ ಅನ್ಯ ರಾಜರುಗಳ ರಂಘಾರುಗಳ ಗುಜಾರ್‌ಗಳೇ ಮುಂತಾದವರ ಸಂಯುಕ್ತ ಸೇನೆಯನ್ನೆದುರಿಸಲು ನಿರ್ಧರಿಸಿದರು.

ಸಮೀಪಿಸುತ್ತಿರುವ ಶತ್ರಗಳನ್ನೆದುರಿಸಲು ಗುರು ಕೇವಲ ಐದು ಮಂದಿಯನ್ನಷ್ಟೇ ಕಳುಹಿಸಿದರು. ಕಬ್ಬಿನ ತೋಟವನ್ನು ಹೊಕ್ಕ ಗಜವೀರರ ಹಾಗೆ ಅವರು ಶತ್ರು ಸೇನೆಯೊಳಗೆ ಭಾರಿ ಹಾನಿಯನ್ನುಂಟು ಮಾಡಿದರು. ನಿಡುಹೊತ್ತಿನ ಕಡು ಕಾದಾಟದ ಬಳಿಕ ಅವರು ಐವರೂ ಹತರಾದರು.

ಬಳಿಕ ಖಜಾನ್‌ಸಿಂಗ್, ದಾನ್‌ಸಿಂಗ್ ಮತ್ತು ಧ್ಯಾನ್ ಸಿಂಗರು ಶತ್ರುಗಳನ್ನೆದುರಿಸಿದರು. ಮುಂದಿನ ಸರದಿ ಮುಹಕಮ್‌ಸಿಂಗ್‌ನದಾಗಿತ್ತು. ಒಬ್ಬೊಬ್ಬನೂ ಕೆಚ್ಚಿನಿಂದ ಕಾದಾಡಿ ಕದನಾಂಕಣದಲ್ಲಿ ಮಡಿದು ಬಿದ್ದನು.

ಗುರುವಿನ ಪುತ್ರ ಅಜಿತ್‌ಸಿಂಗ್ ಈ ಸಂದರ್ಭದಲ್ಲಿ ಯುದ್ಧಕ್ಕೆ ಹೊರಡಲು ಗುರುವಿನ ಅನುಮತಿ ಕೋರಿದ. ಗುರು ಸಂತೋಷದಿಂದ ಅನುಮತಿ ಇತ್ತರು. ಐವರು ಬೆಂಬಲಿಗರೊಂದಿಗೆ ಅಜಿತ್‌ಸಿಂಗ್ ಶತ್ರುಗಳಿಗೆ ಸವಾಲೆಸೆದ. ಬೆಳೆದು ನಿಂತಿರುವ ಗೋಧಿ ಹೊಲಕ್ಕೆ ಬೀಸಿ ಬಂದ ಬಿರುಗಾಳಿಯ ಹಾಗೆ ಅಜಿತ್‌ಸಿಂಗ್ ಶತ್ರು ಸೇನೆಯಲ್ಲಿ ಅಪಾರ ನಷ್ಟಗಳನ್ನುಂಟುಮಾಡಿದ. ಕೌರವರೊಡನೆ ಹೋರಾಡಿದ್ದ ಘಟೋತ್ಕಚನ ಹಾಗೆ ಕಾದಾಡುತ್ತಿರುವ ಮಗನ ಪರಾಕ್ರಮಗಳನ್ನು ಗುರು ಮಹಡಿ

ಮೇಲೆ ನಿಂತು ನೋಡಿದರು. ಗಂಟೆಗಟ್ಟಲೆ ಹೋರಾಡಿದರೂ ಅಜಿತ್ ದಣಿಯಲಿಲ್ಲ. ಶತ್ರು ಪಕ್ಷದ ಒಬ್ಬೊಬ್ಬ ಸೈನಿಕನನ್ನು ಕಡಿದುರುಳಿಸಿದಾಗಲೂ ಆತನ ಬಲವು ಕೂಡ ಮಗನಲ್ಲಿ ಆವಾಹಿಸಲ್ಪಡುತ್ತಿರುವಂತೆ ಭಾಸವಾಗುತ್ತಿತ್ತು. ಆದರೆ, ಕುದುರೆ ಮೇಲೆ ದೌಡಾಯಿಸಿ ಬಂದ ಭಟನೊಬ್ಬನ ಭರ್ಜಿ ಅಜಿತ್‌ಸಿಂಗ್‌ನ ಪಕ್ಕೆಯಲ್ಲಿ ರೊಯ್ಯನೆ ನುಗ್ಗಿತು. ಭರ್ಜಿಯ ಗಾಯದಿಂದ ಚಿಮ್ಮಿದ ರಕ್ತ ಚಿಲುಮೆಯನ್ನು ಕಂಡ ಗುರು ಪ್ರಾರ್ಥಿಸಿದರು.

ದೇವರೇ..... ಅವನನ್ನು ಈ ಭೂಮಿಗೆ ಕಳುಹಿಸಿದವನು ನೀನು. ನಿನ್ನ ಧರ್ಮಪಾಲನೆಗಾಗಿ ಅವನು ಅಗೋ ನಿನ್ನ ಪಾದಗಳಿಗೆ ರಕ್ತಪುಷ್ಪಗಳನ್ನು ಅರ್ಪಿಸುತ್ತಿರುವನು.

ಅಣ್ಣ ಹೋರಾಡುತ್ತ ನೆಲಕ್ಕುರುಳಿದಾಗ ತಮ್ಮ ಜೋರಾವರ್‌ಸಿಂಗ್‌ನಿಗೆ ತಡೆದುಕೊಳ್ಳಲಾಗಲಿಲ್ಲ. ಅಪ್ಪನ ಅನುಮತಿಯೊಂದಿಗೆ ಆತನೂ ರಣರಂಗವನ್ನು ಪ್ರವೇಶಿಸಿದ. ಸರೋವರದ ತಳಕ್ಕೆ ಧುಮ್ಮುಕ್ಕುವ ಒಂದು ಮೊಸಳೆಯ ಹಾಗೆ. ಅರ್ಜುನ ಕುವರ ಅಭಿಮನ್ಯುವಿನ ಹಾಗೆ ಅವನು ತೇಜಸ್ವಿಯಾಗಿದ್ದನು. ಮೊಗಲ ಸೇನೆ ಗುರುವಿನ ಈ ಎರಡನೆಯ ಕುವರನ ಶೌರ್ಯ ಕಂಡು ಕಕ್ಕಾಬಿಕ್ಕಿಯಾಯಿತು. ಕೊನೆಗೆ ಆ ಪರಾಕ್ರಮಿಯೂ ಮೊಗಲ ಸೇನೆಯ ಖಡ್ಗಗಳಿಗೆ ಬಲಿಯಾದನು.

ಉಳಿದಿರುವ ಸಿಕ್ಖರು ಹೇಗಾದರೂ ತಮ್ಮ ಗುರುವನ್ನು ಒಂದು ಸುರಕ್ಷಿತ ಸ್ಥಳಕ್ಕೆ ತಲಪಿಸಲು ನಿರ್ಧರಿಸಿದರು. ಉಳಿದಿರುವ ಸಿಕ್ಖರು ಐವರು ಮಾತ್ರ.

ಸಿಕ್ಖರ ಈ ಹತ್ತನೆಯ ಗುರು ತಮ್ಮ ಗುರುಸ್ಥಾನವನ್ನು ಆ ಐದು ಮಂದಿ ಸಿಕ್ಖರಲ್ಲಿ ಅರ್ಪಿಸಿದರು. ಬಾಣ, ಬಿಲ್ಲು, ಎದೆಕವಚ, ಪಗಡಿಗಳನ್ನು ಅವರ ಪಾದಗಳಲ್ಲಿರಿಸಿದರು. ಗುರುವಿನ ಗುರುಗಳೆಂದು ಅವರ ಗುಣಗಾನ ಮಾಡಿದರು. ಬಳಿಕ ಅವರಿಗೆ ಪ್ರದಕ್ಷಿಣೆ ಬಂದರು. ಅನಂತರ ಅರುಹಿದರು. ಶ್ರೀವಾಹ್ ಗುರೂಜಿ ಕಾ ಖಲ್ಸಾ, ಶ್ರೀವಾಹ್ ಗುರೂಜಿ ಕ ಫಾತ್ತಾ...

ರೋಪಾರ್ ಮತ್ತು ಲೂಧಿಯಾನಗಳ ಮಧ್ಯದಲ್ಲಿರುವ ಅರಣ್ಯಗಳತ್ತ ಅವರು ಪಲಾಯನ ಮಾಡಿದರು.

ಇಷ್ಟರಲ್ಲೇ ಗುರುವಿನ ತಾಯಿ ಮತ್ತು ಕಿರಿಯ ಪುತ್ರರು ಸರ್‌ಹಿಂದ್‌ನ ಸಮೀಪದ ಕೇರಿಯಲ್ಲಿ ಬ್ರಾಹ್ಮಣನೊಬ್ಬನ ರಕ್ಷಣೆಯಲ್ಲಿದ್ದರು. ಒಂದು ಕಾಲದಲ್ಲಿ ಗುರುವಿನ ಅಡುಗೆಯವನಾಗಿದ್ದನು ಆತ. ಅಜಿತ್‌ಸಿಂಗ್‌ನ ಹಾಗೂ ಜೋರಾವರ್‌ಸಿಂಗ್‌ನ ಹೆಂಡಂದಿರು ಓರ್ವ ನಂಬಿಗಸ್ತ ಸೇವಕನೊಂದಿಗೆ ದೆಹಲಿಯ ಕಡೆಗೆ ಪ್ರಯಾಣಿಸಿದ್ದರು. ಬ್ರಾಹ್ಮಣ ದುರ್ಬುದ್ಧಿಯವನೂ ದುರಾಸೆಯವನೂ ಆಗಿದ್ದ. ಆತ, ಮಾತಾಜಿಯ ವಶದಲ್ಲಿದ್ದ ಬೆಲೆಬಾಳುವ ರತ್ನಗಳನ್ನು, ಆಭರಣಗಳನ್ನು, ನಾಣ್ಯಗಳನ್ನು ಅಪಹರಿಸಿದ. ಆ ಬಗ್ಗೆ ವಿಚಾರಿಸಿದಾಗ ಇಲ್ಲಿ ಬಹಳಷ್ಟು ಕಳ್ಳರಿದ್ದಾರೆಂಬ ಸುಳ್ಳನ್ನು ಹೇಳಿದ. ಸರ್ ಹಿಂದ್‌ನ ವೈಸ್ರಾಯ್ ವಜೀರ್‌ಖಾನ್‌ಗೆ ಗುರುವಿನ



ತಾಯಿ ಮತ್ತು ಮಕ್ಕಳು ತಮ್ಮ ಮನೆಯಲ್ಲಿರುವರು ಎಂಬ ಗುಟ್ಟನ್ನು ತಿಳಿಸಿದ. ವಜೀರ್‌ಖಾನ್ ಒಂದು ದೊಡ್ಡ ಎತ್ತರದ ಕಟ್ಟಡದಲ್ಲಿ ಗುರುವಿನ ತಾಯಿಯನ್ನೂ ಮಕ್ಕಳನ್ನೂ ಬಂಧನದಲ್ಲಿರಿಸಿದನು. ಮುಖ ತೋರಿಸಲು ಎಂಬ ನೆಪದೊಂದಿಗೆ ಜುಜಾರ್‌ಸಿಂಗ್‌ನನ್ನು, ಫತ್ತಾಸಿಂಗ್‌ನನ್ನು ವಜೀರ್‌ಖಾನ್‌ನ ಮುಂದೆ ಹಾಜರುಪಡಿಸಲಾಯಿತು. ಅಣ್ಣಂದಿರಿಬ್ಬರೂ ವಧೆಗೈಯಲ್ಪಟ್ಟರೆಂದೂ ವಜೀರ್‌ಖಾನ್‌ಗೆ ಬಗ್ಗಿ ಸಲಾಮು ಹೊಡೆದು ಇಸ್ಲಾಂ ಮತ ಸ್ವೀಕರಿಸಲು ಒಪ್ಪದಿದ್ದರೆ ತಮಗೆ ಸಾವು ನಿಶ್ಚಿತವೆಂದೂ ಆ ಹುಡುಗರು ಮನಗಂಡರು. ಆದರೂ ಅಧೀರರಾಗಲಿಲ್ಲ. ಆ ಎಳೆಯರು ತಲೆಯೆತ್ತಿ ವಜೀರ್ ಖಾನ್‌ನ ಕಣ್ಣುಗಳಲ್ಲೆ ದೃಷ್ಟಿ ನೆಟ್ಟುಕೊಂಡು ಹೇಳಿದರು: ನಾವು ಗುರು ಗೋವಿಂದಸಿಂಗ್‌ರ ಮಕ್ಕಳು. ನಾಶವಿಲ್ಲದ ದೇವರ ಹೊರತು ಅವರನ್ನು ನಾಶ ಮಾಡಲು ಯಾರಿಗೂ ಸಾಧ್ಯವಿಲ್ಲ. ನಾವು ಗುರು ತೇಜ್‌ಬಹದೂರರ ಮೊಮ್ಮಕ್ಕಳು. ಅವರು ಜೀವಾರ್ಪಣೆ ಮಾಡಲಿಕ್ಕಲ್ಲದೆ ಮತಾಂತರಕ್ಕೆ ಒಪ್ಪಲಿಲ್ಲ. ಮತಾಂತರ ಹೊಂದಿ ಗುರು ಗೋವಿಂದಸಿಂಗರ, ಅವರ ತಂದೆ ಗುರು ತೇಜ್ ಬಹದೂರರ ಹಾಗೂ ಅವರ ತಂದೆ ಗುರು ಹರ್ ಗೋವಿಂದ್‌ಸಿಂಗರ ಹೆಸರುಗಳಿಗೆ ಕಳಂಕ ಹಚ್ಚಲು ನಾವು ಒಪ್ಪಲಾರೆವು. ನಾವು ಸಾವನ್ನಪ್ಪಲು ಸಿದ್ಧರಿರುವೆವು.

ವಜೀರ್‌ಖಾನ್‌ಗೆ ಹೆಚ್ಚು ಯೋಚಿಸಬೇಕಾಗಿರಲಿಲ್ಲ. ಆ ಮಕ್ಕಳ ಸುತ್ತಲೂ ಇಟ್ಟಿಗೆಗಳನ್ನು ಕಟ್ಟಿ ಗೋಡೆಯೆಬ್ಬಿಸಲು ಆಜ್ಞಾಪಿಸಿದ. ದುರಾಸೆಯೊಂದಿಗೆ ಕಾದು ನಿಂತುಕೊಂಡಿದ್ದ ಯಾವನೊ ಒಬ್ಬ ಈ ಆಜ್ಞೆಯನ್ನು ಅಕ್ಷರಶಃ ನೆರವೇರಿಸಿದ.

ಮನೀಂದರ್ ಮತ್ತು ಸುನೀಂದರ್‌ನ ಎಳೆಯ ಮನಸ್ಸಿನ ಮೂಲಕ ಸಿಕ್ಖ ಚರಿತ್ರೆಯ ಉಜ್ವಲ ಚಿತ್ರಗಳಷ್ಟೂ ಒಂದು ಚಲನಚಿತ್ರದಲ್ಲೆಂಬಂತೆ ಹಾದು ಹೋದವು. ಜುಜಾರ್‌ಸಿಂಗ್‌ನ ಹಾಗೂ ಫತ್ತಾಸಿಂಗ್‌ನ ಆತ್ಮಗಳು ಸುತ್ತಲೂ ಹಾರಾಡುತ್ತಾ ಇರುವಂತೆ ಅವರಿಗನ್ನಿಸಿತು.

ಅವರ ಆತಂಕ ತುಂಬಿದ್ದ ಕಣ್ಣುಗಳಲ್ಲಿ ನಿದ್ರೆ ಮತ್ತು ಆಯಾಸಗಳನ್ನು ಗಮನಿಸಿದ ರವಿ. ಅವರನ್ನು ಹಾಸಿಗೆಯಲ್ಲಿ ಮಲಗಿಸಿ ಕಂಬಳಿಯಿಂದ ಕತ್ತಿನ ತನಕ ಹೊದಿಸಿದನು.

* * * *

## ಅಧ್ಯಾಯ ೧೦

# ಗುರುದಯಾಳನ ಚರಂಡಿವಾಸ

ರವಿ ಆಫೀಸಿಗೆ ಮರಳಿ ತಲಪಿದ. ಆಗಲೂ ಆತನ ಸಹೋದ್ಯೋಗಿಗಳು ಹೆಚ್ಚಿನ ಪ್ರಗತಿಯೇನೂ ಸಾಧಿಸಿರಲಿಲ್ಲ. ಡ್ರೈವರ್ ಸಹಿತ ಇನ್ನೂ ಕೆಲವು ಕಾರುಗಳು ಲಭ್ಯವಾಗುವುದೆಂಬ ವಾಗ್ದಾನಗಳು ದೊರೆತಿವೆ. ಡ್ರೈವರ್ ರಹಿತವಾಗಿ ದೊರೆಯಲಿರುವ ವಾಹನಗಳ ಒಂದು ಯಾದಿ ಕೂಡ ಸಿದ್ಧವಾಗಿತ್ತು. ಅದಾದರೂ ನಿರೀಕ್ಷಿಸಿದಷ್ಟು ಉದ್ದವಾಗಿಲ್ಲ ಎಂಬುದನ್ನಾತ ಒಂದೇ ನೋಟದಲ್ಲೇ ಅರಿತುಕೊಂಡ. ಸಂಬಂಧಿಸಿದವರನ್ನೆಲ್ಲ ಮತ್ತೊಮ್ಮೆ ಸಂಪರ್ಕಿಸುವ ಪ್ರಯತ್ನ ಆರಂಭಿಸಿದ.

ರವಿ ಮರಳಿ ಕ್ಯಾಬಿನ್‌ಗೆ ಬಂದ. ಪೇದೆ ಒಂದು ಕಪ್ ಕಾಫಿ ತಂದುಕೊಟ್ಟ. ಕಾಫಿ ಹೀರುತ್ತಲೇ ರವಿ ಪೊಲೀಸ್ ಹೆಡ್ ಕ್ವಾರ್ಟರ್ಸ್‌ಗೆ ಫೋನ್ ಮಾಡಿದ. ಎಷ್ಟೇ ಬಾರಿ ಡಯಲ್ ಮಾಡಿದರೂ ಕೇಳಿ ಬಂದದ್ದು ಎಂಗೇಜ್ಡ್ ಟ್ಯೂನ್ ಮಾತ್ರ. ಜನರ ಗುಂಪುಗಳು ಕಾನೂನನ್ನು ಕೈಗೆತ್ತಿಕೊಂಡ ಬಳಿಕ ಗಂಟೆಗಳೇ ಕಳೆದಿದ್ದರೂ ಪೊಲೀಸರ ಉಪಸ್ಥಿತಿ ಎಲ್ಲೂ ಕಾಣಿಸಲಿಲ್ಲ ಎಂಬುದನ್ನಾತ ಜ್ಞಾಪಿಸಿಕೊಂಡ–ನರೋತ್ತಮ್ ಸಿಂಗ್‌ನ ವರ್ಕ್‌ಶಾಪ್ ಮತ್ತು ಹರ್‌ಭಜನ್ ಸಿಂಗ್ ವಾಸಿಸುತ್ತಿರುವ ಕಾಲನಿಗಳಿರುವುದು ಪೊಲೀಸ್ ಠಾಣೆಯಿಂದ ಮೂರೇ ಫರ್ಲಾಂಗ್ ಅಂತರದಲ್ಲಿ ಎಂಬುದನ್ನು ಕೂಡ. ಆಯಾ ನಗರದಲ್ಲಿ ಕಾನೂನು ವ್ಯವಸ್ಥೆ ಸಂಪೂರ್ಣ ಹದಗೆಟ್ಟಿದೆ.

ಫರೂಕ್ಸಿಯಾರ್ ಬಾದಷಹಾನ ದೆಹಲಿಯ ಪುನರಾವರ್ತನೆಯಾಗುತ್ತಿದೆ ಎಂಬುದನ್ನಾತ ನೋವಿನೊಂದಿಗೆ ನೆನೆದುಕೊಂಡ. ೧೯೪೭ ಆಗಸ್ಟ್‌ನಲ್ಲಿ ವಿಭಜನೆಯೊಂದಿಗೇ ಹುಟ್ಟಿಕೊಂಡ ರಕ್ತಪಾತಗಳು ಭಾರತ–ಪಾಕಿಸ್ತಾನಗಳ ಅಂತರಂಗಗಳಲ್ಲಿ ಕಿಲುಬು ಹಚ್ಚಿವೆ. ಲಾರ್ಡ್ ಮೌಂಟ್‌ಬ್ಯಾಟನ್‌ಗೆ ಮೇಜಿನ ಮೇಲೆ ಬಿಡಿಸಿಡಲಾದ ಭೂ ನಕ್ಷೆಯಲ್ಲಿ ಪೆನ್ಸಿಲ್‌ನಿಂದ ಕೆಲವು ಗೆರೆಗಳನ್ನು ಗೀಚುವುದರಿಂದಲೇ ಭಾರತವನ್ನು ಹೋಳಾಗಿಸಲು ಸಾಧ್ಯವಾಗಿತ್ತು. ಆ ಪೆನ್ಸಿಲ್ ಗೆರೆಗಳ ಆಚೆ ಬದಿಯಲ್ಲೂ ಈಚೆ ಬದಿಯಲ್ಲೂ ಸಿಕ್ಕಿಬಿದ್ದ ಲಕ್ಷಗಟ್ಟಲೆ ಮನುಷ್ಯ ಜೀವಿತಗಳು ಮೌಂಟ್‌ಬ್ಯಾಟನ್‌ಗಾಗಲೀ ಆತನ ಮಧ್ಯಸ್ಥಿಕೆಯಲ್ಲಿ ಮುಗ್ಧರಾಗಿ



ಬಿಟ್ಟ ಜಿನ್ನಾ ಮತ್ತು ನೆಹರೂಗಳಿಗಾಗಲೀ ಸಮಸ್ಯೆಯಾಗಲಿಲ್ಲ. ಗಡಿಗಳ ತಪ್ಪು ಭಾಗಗಳಲ್ಲಿ ಸಿಕ್ಕಿಬಿದ್ದ ಹಿಂದೂಗಳೂ ಮುಸ್ಲಿಮರೂ ಸಿಕ್ಖರೂ ಕೋಮು ದ್ವೇಷದ ಭುಗಿಲೆದ್ದ ಕಿಚ್ಚಿನ ಜ್ವಾಲೆಗಳಲ್ಲಿ ಹೋಮಿಸಲ್ಪಟ್ಟರು. ಮುಸ್ಲಿಂ ಲೀಗ್ ಮತ್ತು ಮುಸ್ಲಿಂ ಮೂಲಭೂತವಾದವೂ ಆರ್.ಎಸ್.ಎಸ್. ಮತ್ತು ಹಿಂದೂ ಮೂಲಭೂತವಾದವೂ ಗಡಿಗಳ ಆಚೆ ಮತ್ತು ಈಚೆ ಆ ಕಿಚ್ಚಿನ ಜ್ವಾಲೆಗಳು ನಂದದ ಹಾಗೆ ನೋಡಿಕೊಂಡವು. ಮಕ್ಕಳೂ ಮುದುಕರೂ ಸಹಿತ ಹಿಂದೂಗಳೂ ಮುಸ್ಲಿಮರೂ ತಲೆತಲಾಂತರಗಳಿಂದ ಸಂಪಾದಿಸಿದ್ದ ಆಸ್ತಿಪಾಸ್ತಿಗಳನ್ನೂ ನಗನಾಣ್ಯಗಳನ್ನೂ ಬಿಟ್ಟುಬಿಟ್ಟು ಜೀವವನ್ನು ಮಾತ್ರ ಉಳಿಸುವ ಕಾತರದೊಂದಿಗೆ ಗಡಿಗಳನ್ನು ಉಲ್ಲಂಘಿಸಿದರು. ಆದರೆ ಅವರಲ್ಲಿ ಹೆಚ್ಚಿನವರು ಗುರಿ ಸೇರಲಿಲ್ಲ. ದಾರಿಯಲ್ಲೆ ಅವರು ಆಕ್ರಮಿಸಲ್ಪಟ್ಟರು. ಅವರು ಪ್ರಯಾಣಿಸುತ್ತಿದ್ದ ಗಾಡಿಗಳು ಕೊಳ್ಳೆ ಹೊಡೆಯಲ್ಪಟ್ಟವು. ಸ್ತ್ರೀಯರ ಸ್ತನಗಳನ್ನು ಕತ್ತರಿಸಿ ತೆಗೆದು ಆಕ್ರಮಿಗಳು ಚೆಂಡಾಡಿದರು: ಪುರುಷರ ಶಿಶ್ನಗಳು ನಾಯಿಗಳಿಗೆ ತಿನಿಸುಗಳಾದವು. ಮಕ್ಕಳನ್ನು ಹದ್ದುಗಳಿಗೆ ಎಸೆದುಕೊಟ್ಟರು. ಬಂಗಾಳ, ಪಂಜಾಬು, ದೆಹಲಿಗಳು ಮಸಣಗಳಾದವು. ಎತ್ತರದಲ್ಲಿ ಸುತ್ತು ಹೊಡೆಯುತ್ತಿದ್ದ ಹದ್ದುಗಳು ಮನುಷ್ಯರು ಸಿದ್ಧಗೊಳಿಸಿದ್ದ ಆ ಔತಣದಿಂದ ಮೈಮರೆತವು.

ಮಹಾತ್ಮಾಜಿ ತಮ್ಮ ಹರಿತ ಕಳೆದುಕೊಂಡಿದ್ದ ಆಯುಧವನ್ನು–ನಿರಶನವನ್ನು–ಮತ್ತೊಮ್ಮೆ ಬಳಸಿ ನೋಡಿದರು. ಅನಾಥರೂ ಅಶರಣರೂ ಆದ ಮುಸ್ಲಿಮರ ವಕ್ತಾರರಾದರು ಅವರು. ೭೭ ವರ್ಷದ ಆ ವೃದ್ಧ ತಮ್ಮ ಊರುಗೋಲುಗಳಾದ ಆಭಾ ಮತ್ತು ಮನುವಿನ ಹೆಗಲ ಮೇಲೆ ಕೈಗಳನ್ನೂರಿ ಎಂದಿನ ಪ್ರಾರ್ಥನಾ ಸಭೆಗೆಂದು ಬಿರ್ಲಾರ ವಿಶಾಲವಾದ ಉದ್ಯಾನದತ್ತ ನಡೆಯುತ್ತಾ ಇದ್ದರು. ಪೂನಾದ ಹೊರವಲಯದ ಗುಡಿಸಲುಗಳಲ್ಲಿ ಹುಟ್ಟಿ ಬೆಳೆದು ಹಿಂದೂ ಮಹಾಸಭೆಯ ಮುಸ್ಲಿಂ ದ್ವೇಷ ಮತ್ತು ಹಿಂದೂ ಮೂಲಭೂತವಾದಗಳನ್ನು ಸವಿಯುತ್ತಾ ಬಂದಿದ್ದ ಗೋಡ್ಸೆ ಎಂಬ ಯುವಕ ಜನರ ಗುಂಪಿನಲ್ಲಿ, ಗುಂಡು ತುಂಬಿದ್ದ ಕೋವಿ ಸಹಿತ ಕಾಯುತ್ತ ಇದ್ದನು. ಗುಂಡು ನಾಟಿದ್ದ ಗಾಂಧಿಯ ತುಟಿಗಳು ಕೊನೆಯದಾಗಿ ಉರು ಹೊಡೆದವು, "ಹೇ ರಾಮ್, ಹೇ ರಾಮ್."

ತೀನ್ ಮೂರ್ತಿಯೊಳಗೆ ಮಂಜು ಮೆತ್ತೆಯ ಮೇಲೆ ರಕ್ತ ಧಮನಿಗಳಲ್ಲಿ ಫೋರ್ಮಲಿನ್ ತುಂಬಿಕೊಂಡು ಗಾಂಧೀಜಿ ಮಲಗಿದ್ದರು. ಇಂದಿರಾರ ತಂದೆಗೆ ಆ ಹತ್ಯೆಯನ್ನು ತಡೆಯಲು ಸಾಧ್ಯವಾಗಲಿಲ್ಲ. ಭಾರತದ ಆರುನೂರಕ್ಕಿಂತಲೂ ಹೆಚ್ಚು ದೇಸೀ ಸಂಸ್ಥಾನಗಳನ್ನು ತ್ರಿವರ್ಣ ಧ್ವಜದ ಅಡಿಯಲ್ಲಿ ನೆಲೆಗೊಳಿಸಿದ್ದ, ಉಕ್ಕಿನ ಮನುಷ್ಯನೆಂದು ಖ್ಯಾತಿ ಗಳಿಸಿದ್ದ ಪಟೇಲರಿಗೂ ಆ ಅಮೂಲ್ಯ ಜೀವವನ್ನು ಸಂರಕ್ಷಿಸಲಿಕ್ಕಾಗಲಿಲ್ಲ.

ಸತ್ಯದ, ಅಹಿಂಸೆಯ, ಸಮಭಾವನೆಯ ಪ್ರತೀಕವಾಗಿದ್ದ ಗಾಂಧೀಜಿ ಇಲ್ಲಿ

ಮರುಜನ್ಮ ಪಡೆಯಲಿಲ್ಲ. ಆದರೆ ಪಾಶಿಗಂಬವನ್ನೇರುವಾಗಲೂ ಭಾರತ ಮಾತೆಗೆ ಜಯಕಾರ ಮೊಳಗಲು ಮರೆಯದ ಗೋಡ್ಸೆಗಳು ಚಿರಂಜೀವಿಗಳಾಗಿ ಮುಂದುವರಿಯುತ್ತಿದ್ದಾರೆ. ಕೋವಿಯಿಂದ ಗುಂಡುಗಳು ಹಾರುತ್ತಲೇ ಇವೆ. ಸ್ತ್ರೀಯರು ಬೀದಿಗಳಲ್ಲಿ ಬಲಾತ್ಕಾರವಾಗಿ ಭೋಗಿಸಲ್ಪಡುತ್ತಿರುವರು. ವಿದ್ರೋಹಿಗಳ ತುಟಿಗಳು ಉರು ಹೊಡೆಯುತ್ತಿರುವ ಶಬ್ದಗಳಷ್ಟೇ ಕಾಲ, ದೇಶ, ವ್ಯತ್ಯಾಸಗಳಿಗನುಗುಣವಾಗಿ ಬದಲಾಗುತ್ತಿವೆ. ನಾಗಾಲ್ಯಾಂಡ್, ಅಸ್ಸಾಂ, ಜಮ್ಮು, ತ್ರಿಪುರಗಳಲ್ಲೆಲ್ಲ ಭಾಷೆಗಳಷ್ಟೇ ವ್ಯತ್ಯಸ್ಥ. ಪಂಜಾಬ್‌ನಲ್ಲಿ ಇವತ್ತು ಪ್ರಾಶಸ್ತ್ಯವಿರುವ ಶಬ್ದದಲ್ಲಿ ನಾಲ್ಕೇ ಅಕ್ಷರಗಳಿವೆ–ಖಾಲಿಸ್ಥಾನ್.

೧೯೬೪ ಮೇ ೨೭ರಂದು ಭಾರತದ ರಾಜಕೀಯ ಕ್ಷೇತ್ರದ ಅತಿ ಮಾನವನಾಗಿದ್ದ ನೆಹರೂ ನಿಧನರಾದಾಗ ಇಂದಿರಾ ಗಾಂಧಿಗೆ ಕೇವಲ ನಲ್ವತ್ತಾರು ವರ್ಷ ವಯಸ್ಸಷ್ಟೇ. ನೆಹರೂ ಮಗಳು ತನ್ನ ತಾಳತಪ್ಪಿದ್ದ ದಾಂಪತ್ಯ ಜೀವನದ ಕಹಿಯನ್ನು ಮರೆಯಲಿಕ್ಕಾಗಿಯೂ ಇರಬಹುದು, ತಂದೆಯ ಔದ್ಯೋಗಿಕ ಆತಿಥೇಯಳಾಗಿ ಕಾಂಗ್ರೆಸ್‌ನ ಹಾಗೂ ಭಾರತ ಸರಕಾರದ ನಿರ್ಣಾಯಕವಾದ ಎಲ್ಲಾ ನಿರ್ಧಾರಗಳಲ್ಲೂ ಪಾಲ್ಗೊಂಡಿದ್ದರು. ನೆಹರೂ ವಿದೇಶ ಪರ್ಯಟನೆಗಳನ್ನು ಮಾಡುವಾಗಲೂ ಅವರ ನಿರಂತರ ಒಡನಾಟದಲ್ಲಿದ್ದು ಇಂದಿರಾರಿಗೆ ಜಾಗತಿಕ ಮುಂದಾಳುಗಳ ಪರಿಚಯ ಹೊಂದಲಿಕ್ಕೂ ಅಂತಾರಾಷ್ಟ್ರೀಯ ರಾಜಕೀಯ ಬೆಳವಣಿಗೆಗಳನ್ನೆಲ್ಲ ಹತ್ತಿರದಿಂದ ವೀಕ್ಷಿಸಲಿಕ್ಕೂ ಅವಕಾಶ ದೊರೆತಿತ್ತು. ಮಗಳು ರಾಜಕೀಯ ವಿಚಾರಗಳಲ್ಲಿ ಆಸಕ್ತಿ ವಹಿಸುತ್ತಿರುವುದು ಕುಟುಂಬ ಜೀವನದ ಏರುಪೇರುಗಳಿಗೊಂದು ಬದಲಿಯಾದೀತೆಂದು ವಿಧುರನೂ ವಾತ್ಸಲ್ಯದ ಗಣಿಯೂ ಆಗಿದ್ದ ತಂದೆ ಭಾವಿಸಿರಬಹುದು. ರಾಜಕಾರಣದ ಸೀಳುದಾರಿಗಳಲ್ಲಿ ಕಾಲೆಡವದೆ ಅನಾಯಾಸವಾಗಿ ನಡೆದಾಡುತ್ತಿದ್ದ ಇಂದಿರಾ ನೆಹರೂಗಳ ಮಟ್ಟಿಗೆ ಕೇವಲ ಒಂದು ಕುತೂಹಲವಷ್ಟೇ ಆಗಿದ್ದರು. ಹೆಚ್ಚು ವಿಳಂಬವಿಲ್ಲದೆಯೇ ಈ ಜಾಣೆ, ತಾನು ಕುಳಿತಿರುವ ಕುರ್ಚಿ ಹತ್ತಿ ಕೂಡಬೇಕೆಂದು ಆ ತಂದೆ ಕನಸಿನಲ್ಲೂ ಬಯಸಿರಲಿಕ್ಕಿಲ್ಲ. ತನ್ನ ನೆರಳಿನಲ್ಲೆ ಓಡಾಡುತ್ತ, ತನ್ನ ಔದ್ಯೋಗಿಕ ಗೃಹಕೃತ್ಯಗಳನ್ನು ಸಮರ್ಪಕವಾಗಿ ನೆರವೇರಿಸುತ್ತ, ತನಗೆ ಒಂದು ಊರುಗೋಲಾಗಬೇಕೆಂದಷ್ಟೇ ಆ ತಂದೆ ಅಂದು ಕೊಂಡಿದ್ದಿರಬಹುದು.

೧೯೫೯ರಲ್ಲಿ ಅಂದಿನ ಕಾಂಗ್ರೆಸ್ ಅಧ್ಯಕ್ಷ ಯು.ಎನ್.ದೇಬಾರ್ ತಮ್ಮ ಅನಂತರದ ಅಧ್ಯಕ್ಷೆಯಾಗಿ ಇಂದಿರಾರನ್ನು ಒಪ್ಪಿಕೊಂಡಾಗ ಅಚ್ಚರಿ ಪಟ್ಟವರಲ್ಲಿ ನೆಹರೂ ಮತ್ತು ಇಂದಿರಾ ಕೂಡ ಒಳಗೊಂಡಿದ್ದರು. ಅಷ್ಟೇ ಅಲ್ಲ, ತಾನು ಪ್ರಧಾನ ಮಂತ್ರಿಯಾಗಿರುವಾಗ ತನ್ನ ಪಕ್ಷದ ಅಧ್ಯಕ್ಷ ಹುದ್ದೆಯನ್ನು ತನ್ನ ಮಗಳೇ ವಹಿಸಿಕೊಳ್ಳುವುದರಲ್ಲಿನ ಅನೌಚಿತ್ಯದ ಕುರಿತೂ ನೆಹರೂ ಜಾಗೃತರಾಗಿದ್ದರು.



ಕುಟುಂಬ ವಾತಾವರಣದ ಕಿರಿಕಿರಿಗಳೂ ಇಬ್ಬರು ಮಕ್ಕಳನ್ನು ಬೆಳೆಸಬೇಕಾದ ಹೊಣೆಯೂ ಎಲ್ಲಕ್ಕಿಂತ ಮಿಗಿಲಾಗಿ ಮಗಳ ಆರೋಗ್ಯ ಕೊರತೆಯೂ ಅವರನ್ನು ಆತಂಕಗೊಳಿಸಿದ್ದವು. ಕೊನೆಗೆ ಗೃಹ ಸಚಿವ ಗೋವಿಂದ ವಲ್ಲಭ ಪಂತ್ ಅವರು ಬೇರೊಂದು ನೆಲೆಯಿಂದ ವಿಷಯ ವೀಕ್ಷಣೆಗೆ ನೆಹರೂರನ್ನು ಪ್ರೇರೇಪಿಸಿದ್ದರು. ನೆಹರೂ ಮಗಳೆಂಬ ಕಾರಣಕ್ಕಾಗಿ ಮಾತ್ರ ಆಕೆಯಿಂದ ಅರ್ಹವಾದುದನ್ನು ತಪ್ಪಿಸುವುದು ಸರಿಯಲ್ಲವೆಂದು ನೆಹರೂ ಅವರಿಗೆ ಮನವರಿಕೆಯಾಗಿತ್ತು. ಸಜಲನೇತ್ರೆಯಾಗಿ ಸ್ವೀಕರಿಸಿದ್ದ ಆ ಅಧ್ಯಕ್ಷ ಪದವಿಯನ್ನು ಇಂದಿರಾ ಸುಮಾರು ಒಂದು ವರ್ಷವಷ್ಟೇ ಆಳಿದ್ದರು. ಆದರೂ ಆ ಕನಿಷ್ಠಾವಧಿಯಲ್ಲೇ ದೂರವ್ಯಾಪಕವಾದ ಎರಡು ನಿರ್ಧಾರಗಳನ್ನು ತೆಗೆದುಕೊಳ್ಳಲು ಅವರು ಮುಂದಾಳ್ತನವನ್ನು ವಹಿಸಿದ್ದರು. ಮುಖ್ಯವಾಗಿ ಮರಾಠಿ ಮತ್ತು ಗುಜರಾತಿ ಭಾಷೆಗಳು ಬಳಕೆಯಲ್ಲಿದ್ದ ವಿಶಾಲ ಮುಂಬಯಿ ಪ್ರಾಂತ್ಯವನ್ನು ಎರಡಾಗಿ ವಿಭಜಿಸಲಾಯಿತು–ಗುಜರಾತ್ ಮತ್ತು ಮಹಾರಾಷ್ಟ್ರ. ಭಾಷಾ ತಳಹದಿಯ ಮೇಲೆಯೇ ಭಾರತದ ಹೆಚ್ಚಿನ ರಾಜ್ಯಗಳ ರಚನೆಯಾಗಿರುವಾಗ ಈ ಎರಡು ರಾಜ್ಯಗಳೆಂದೂ ಹೆಚ್ಚಳವಾಗಲಾರದೆಂದು ಅವರು ಭಾವಿಸಿದರು. ಚುನಾವಣೆಯ ಮೂಲಕ ಅಧಿಕಾರಕ್ಕೇರಿದ್ದ ಕೇರಳದ ಕಮ್ಯೂನಿಸ್ಟ್ ಮಂತ್ರಿಮಂಡಲಿಗೆ ಮಂಗಳ ಹಾಡಿಸುವುದರಲ್ಲೂ ಅವರು ಪ್ರಧಾನ ಪಾತ್ರ ವಹಿಸಿದ್ದರು. ಆ ಕಾಲದಲ್ಲಿ ಅದೊಂದು ಅಕೃತ್ಯವೆಂದೇ ಅನ್ನಿಸಿದ್ದರೂ ಮುಂದೆ ಕಮ್ಯೂನಿಸಮ್‌ನ ಬಣ್ಣ ಮತ್ತು ಮರ್ಜಿ ಹೆಚ್ಚು ಹೆಚ್ಚು ಬಯಲಾದಾಗ, ಇಂದಿರಾ ಮಾಡಿದ್ದ ಒಳ್ಳೆಯ ಕಾರ್ಯಗಳಲ್ಲಿ ಅದೂ ಒಂದೆಂದೇ ಈಗ ಹಿಂತಿರುಗಿ ನೋಡುವಾಗ ಭಾಸವಾಗುತ್ತಿದೆ. ಐವತ್ತರ ದಶಕದಲ್ಲಿ ತನ್ನ ತಲೆಮಾರಿನ ಜನ ಪೂರ್ತಿ, ಎಂತೆಂತಹ ನಿರೀಕ್ಷೆಯನ್ನಿರಿಸಿರಲಿಲ್ಲ, ಈ ದೇಶದಲ್ಲಿ ಮೂಡಿದ್ದ ಕೆಂಪು ಸೂರ್ಯನ ಬಗ್ಗೆ! ಆ ತಲೆಮಾರನ್ನಷ್ಟೂ ವಂಚಿಸಿದ್ದ ಇಂಡಿಯನ್ ಕಮ್ಯೂನಿಸಮ್ ಇವತ್ತು ಕೋಮುವಾದದ, ಜಾತಿ ಮತ ಭೇದಗಳ ವ್ಯಕ್ತಿ ದ್ವೇಷಗಳೇ ಮುಂತಾದುವುಗಳ ರಂಗಸ್ಥಳವಾಗಿ ಮಾರ್ಪಟ್ಟಿದೆ, ಮುಖ್ಯವಾಗಿ ಕೇರಳದಲ್ಲಿ.

ಕಳೆದ ನಾಲ್ಕೈದು ದಶಕಗಳಿಂದಲೂ ಸಾರ್ವಜನಿಕ ವೇದಿಕೆಗಳಲ್ಲಿ, ಅಧಿಕಾರ ಕೇಂದ್ರಗಳಲ್ಲಿ, ಪತ್ರಿಕೆಗಳೂ ರೇಡಿಯೊ, ಟಿ.ವಿ.ಗಳೂ ಒಳಗೊಂಡ ಮಾಧ್ಯಮಗಳ ಕೇಂದ್ರ ಬಿಂದುವಿನಲ್ಲೂ ಕಾಣಿಸಿಕೊಳ್ಳುತ್ತಲೇ ಇದ್ದರೂ ಇಂದಿರಾ ಎಂಬ ಸ್ತ್ರೀ ಒಂದು ಒಗಟಾಗಿಯೇ ಉಳಿದವರು. ಎಷ್ಟೋ ಜೀವನ ಚರಿತ್ರೆಗಳು ಬರೆಯಲ್ಪಟ್ಟವು. ಆತ್ಮಕಥಾತ್ಮಕವಾಗಿ ಅವರೇ ಕೆಲವನ್ನೆಲ್ಲ ಬರೆದಿರುವರು. ಆದರೂ ಒಂದಷ್ಟು ಖಾಸಗಿ ದುಃಖಗಳನ್ನು ಚಿಕ್ಕಪುಟ್ಟ ಸಂತೋಷಗಳನ್ನೂ ಒಳಗಿರಿಸಿಕೊಂಡಿದ್ದ ಇಂದಿರಾ ಎಂಬ ಸ್ತ್ರೀಯನ್ನು ಹತ್ತಿರದಿಂದ ಅರಿತುಕೊಳ್ಳಲು ಯಾರಿಗೂ ಸಾಧ್ಯವಾಗಲಿಲ್ಲವೆಂದೇ ಅನ್ನಿಸುತ್ತದೆ. ನೆಹರೂ ಇಂದಿರಾರನ್ನು ಅನಾರೋಗ್ಯದಿಂದ ಕೂಡಿರುವ ಓರ್ವ

ಲಜ್ಜಾವತಿ ಎಂದಷ್ಟೇ ಭಾವಿಸಿದ್ದರು. ಇಂಡಿಯಾ ಭೂ ಖಂಡದ ಚರಿತ್ರೆ ಮಾತ್ರವಲ್ಲ. ಭೂವಿಜ್ಞಾನವನ್ನು ಕೂಡ ತಿದ್ದಿ ರಚಿಸತಕ್ಕ ತಾಕತ್ತು ಆ ಹೆಣ್ಣು ಮಗಳಲ್ಲಿ ಸುಪ್ತಾವಸ್ಥೆಯಲ್ಲಿದ್ದದ್ದನ್ನು ಕಾಣಲು ನೆಹರೂ ಅವರಿಗೆ ಸಾಧ್ಯವಾಗಲಿಲ್ಲ. ಓರ್ವ ಪ್ರಧಾನ ಮಂತ್ರಿಯ ಮಗಳೂ ಭವಿಷ್ಯದ ಪ್ರಧಾನ ಮಂತ್ರಿಯ ತಾಯಿಯೂ ಆಗಿರುವ ಆಕೆಗೇನೇ ಸ್ವಂತ ಮನಸ್ಸಿನ ಸಿಕ್ಕುಗಳ ಎಳೆಗಳನ್ನು ಬಿಡಿಸಲಿಕ್ಕಾಗಲೀ ಆತ್ಮಾವಲೋಕನ ನಡೆಸಲಿಕ್ಕಾಗಲೀ ಅಗತ್ಯವಾದ ಸಾವಕಾಶ ಸಿಕ್ಕಿದೆಯೇ ಎಂಬುದೂ ಅನುಮಾನಾಸ್ಪದವೇ. ನಾದಿನಿಯರ ಅವಗಣನೆಗೆ ಗುರಿಯಾಗಿ ಜೈಲಿನಲ್ಲೋ ಸಾರ್ವಜನಿಕ ಚಟುವಟಿಕೆಗಳಲ್ಲೋ ಕಾಲ ಕಳೆಯುತ್ತಿದ್ದ ಪತಿಯ ಪ್ರೇಮಪೂರ್ಣ ಸಾಮೀಪ್ಯಕ್ಕೆ ಎರವಾಗಿಯೂ ದಿನಕಳೆಯುತ್ತಿದ್ದ ತಾಯಿ ಕಮಲಾ ನೆಹರೂ ಅಷ್ಟಿಷ್ಟು ನೆಮ್ಮದಿ ಕಂಡುಕೊಳ್ಳುತ್ತಿದ್ದದ್ದು ಫಿರೋಜ್‌ನ ಪ್ರೀತ್ಯಾದರಗಳಿಂದಾವೃತವಾದ ಸೇವಾಭಾವದಲ್ಲಾಗಿತ್ತು. ಸಂಪ್ರದಾಯಬದ್ಧ ಆಚಾರನುಷ್ಠಾನಗಳ ಬಿಗಿಮುಷ್ಟಿಯಲ್ಲಿ ಬೆಳೆದಿದ್ದ ಕಮಲಾರಿಗೆ ನೆಹರೂ ಕುಟುಂಬದ ಪಾಶ್ಚಾತ್ಯ ಸಂಸ್ಕೃತಿ ಹಾಗೂ ಆಧುನಿಕ ಮನೋಭಾವಗಳೊಂದಿಗೆ ಹೊಂದಿಕೊಳ್ಳಲೂ ಸಾಧ್ಯವಾಗಲಿಲ್ಲ. ಆ ಹೊಂದಾಣಿಕೆ ಕೊರತೆಯಿಂದ ಪಾರಾಗಲಿಕ್ಕೊ ಎಂಬಂತೆ ಕಮಲಾ ಕೂಡ ಕಾಂಗ್ರೆಸ್‌ನ ಕಾರ್ಯಕಲಾಪಗಳಲ್ಲಿ ಧೀರತನದಿಂದ ಪಾಲ್ಗೊಂಡರು.

ಜವಾಹರ್‌ಗಿಂತ ಹತ್ತು ವರ್ಷ ಚಿಕ್ಕವರಿದ್ದರು ಕಮಲಾ. ಜವಾಹರ್‌ರ ವ್ಯಕ್ತಿತ್ವದೊಂದಿಗೆ ಬೌದ್ಧಿಕವಾಗಿಯಾಗಲೀ ಭಾವನಾತ್ಮಕವಾಗಿಯಾಗಲೀ ಮಾನಸಿಕವಾಗಿಯಾಗಲೀ ಒಂದೇ ಸ್ತರದಲ್ಲಿ ಸ್ಪಂದಿಸಲು ಕಮಲಾರಿಗೆ ಸಾಧ್ಯವಾಗಲಿಲ್ಲ.

೧೯೩೬ ಫೆಬ್ರವರಿಯಲ್ಲಿ ಜರ್ಮನಿಯ ಆರೋಗ್ಯ ಧಾಮವೊಂದರಲ್ಲಿ ಕ್ಷಯರೋಗಕ್ಕೆ ತುತ್ತಾಗಿ ಕಮಲಾ ಅಸುನೀಗಿದಾಗ ಎಲ್ಲಾ ಅರ್ಥದಲ್ಲೂ ಇಂದಿರಾ ಅನಾಥೆಯಾಗಿ ಬಿಟ್ಟರು. ಅನೇಕ ವರ್ಷಗಳ ಬಳಿಕ ಎಪ್ಪತ್ತು ಕೋಟಿ ಜನರನ್ನು ಆಳುವವರಾಗಿ, ಜಗತ್ತಿನ ಅತ್ಯಂತ ಬಲಿಷ್ಠ ಮಹಿಳೆ ಎಂದು ಹೊಗಳಲ್ಪಟ್ಟಾಗಲೂ ಇಂದಿರಾ ಏಕಾಂಗಿ ಮತ್ತು ಅನಾಥಳೇ ಆಗಿದ್ದರು. ಆನಂದ ಭವನದ ರೋಜಾ ಗಿಡಗಳ ಹಾಗೂ ರೋಗಪೀಡಿತೆಯಾಗಿರುವ ಕಮಲಾರ ಆರೈಕೆ ಮಾಡಿಕೊಂಡಿದ್ದ ಫಿರೋಜ್ ಇಂದಿರಾರನ್ನು ವಿವಾಹವಾದದ್ದು ೧೯೪೨ರಲ್ಲಿ ಕ್ವಿಟ್ ಇಂಡಿಯಾ ಚಳವಳಿಯ ಪರಾಕಾಷ್ಠೆಯಲ್ಲಾಗಿತ್ತು. ಇಂದಿರಾರ ಖಾಸಗಿ ವ್ಯಥೆಗಳನ್ನು ಕೊನೆಗೊಳಿಸಲಿಕ್ಕಾಗಲೀ ಇಂದಿರಾರನ್ನು ಪೂರ್ತಿ ಅರ್ಥ ಮಾಡಿಕೊಳ್ಳಲಿಕ್ಕಾಗಲೀ ಫಿರೋಜ್‌ರಿಗೂ ಸಾಧ್ಯವಾಗಲಿಲ್ಲ. ಇಂದಿರಾರ ಜೀವನದಲ್ಲಿ ಫಿರೋಜ್‌ರ ಕೊಡುಗೆ ಗಾಂಧಿ ಎಂಬ ಸರ್‌ನೇಮ್ ಮತ್ತು ಇಬ್ಬರು ಪುತ್ರರು ಅಷ್ಟೇ. ವಿವಾಹಾನಂತರ ಎರಡು ವರ್ಷಗಳ ಬಳಿಕ ಹುಟ್ಟಿದ ಮಗು ರಾಜೀವರೇ, ಕೆಲವೇ ತಾಸುಗಳ ಮುನ್ನ ಪ್ರಧಾನಿ ಹುದ್ದೆಯನ್ನು ವಹಿಸಿಕೊಂಡದ್ದು.



ಇಂದಿರಾ ತಮ್ಮ ತಂದೆಯ ಜವಾಬ್ದಾರಿ ವಹಿಸಿಕೊಳ್ಳುವುದರೊಂದಿಗೇನೇ ಆ ವಿವಾಹ ಸಂಬಂಧ ಬಹುಮಟ್ಟಿಗೆ ಅನೌಪಚಾರಿಕವಾಗಿ ಕೊನೆಗೊಂಡಿತ್ತು. ಆದರೂ ಸಾರ್ವಜನಿಕರ ಲಕ್ಷ್ಯದಲ್ಲೆ ಯಾವಾಗಲೂ ಇರಬೇಕಾಗಿದ್ದ ಇಂದಿರಾ ಮತ್ತು ಫಿರೋಜ್ ಬಹಿರಂಗವಾಗಿಯಾದರೂ ಪರಸ್ಪರ ಸೌಹಾರ್ದ ಕಾಪಾಡಿಕೊಂಡರು. ಮುಖ್ಯವಾಗಿ ರಾಜೀವ್ ಮತ್ತು ಸಂಜಯರಿಗೆ ಓರ್ವ ಅಕ್ಕರೆಯ ಅಪ್ಪನಾಗಿರಲು ಫಿರೋಜ್ ವಿಶೇಷ ಕಾಳಜಿ ವಹಿಸಿದ್ದರು. ಮೊದಲು ತಾಯಿ, ಬಳಿಕ ಫಿರೋಜ್, ಆಮೇಲೆ ತಂದೆ, ಮುಂದೆ ಅತಿ ದಾರುಣ ಪರಿಸ್ಥಿತಿಯಲ್ಲಿ ಸಂಜಯ್–ಹೃದಯದೊಂದಿಗೆ ನಿಕಟ ಸಂಬಂಧ ಹೊಂದಿದ್ದ ಒಬ್ಬೊಬ್ಬರೂ ಹೊರಟು ಹೋದಾಗ ಇಂದಿರಾರ ಅನಾಥತ್ವ ಅದರ ಪೂರ್ಣತೆಗೆ ತಲಪುತ್ತಾ ಕೊನೆಯದಾಗಿ ಇವತ್ತು ಆ ಅನಾಥತ್ವವೂ ಕೊನೆಗೊಂಡಿತ್ತು.

ರವಿ ಪುನಃ ಪೊಲೀಸ್ ಹೆಡ್‌ಕ್ವಾರ್ಟರ್ಸ್‌ಗೆ ಫೋನ್ ಮಾಡಿದ. ಬಹಳಷ್ಟು ಬಾರಿ ಡಯಲ್ ಮಾಡಿದಾಗ ಲೈನ್ ಸಿಕ್ಕಿತು. ಆ ಕಡೆ ಎರಡು ನಿಮಿಷಗಳ ಕಾಲ ಫೋನ್ ಮೊಳಗಿರಬಹುದು. ಕೊನೆಗೆ ಯಾರದ್ದೋ ನಿದ್ರೆಯಿಂದೆದ್ದಂಥ ಸ್ವರ ಕೇಳಿಸಿತು.

ಹಲೋ, ಪೊಲೀಸ್ ಹೆಡ್‌ಕ್ವಾರ್ಟರ್ಸ್....

ರವಿ ತಾನು ಪ್ರತ್ಯಕ್ಷ ಕಂಡಿದ್ದ ಕೊಲೆ, ಕೊಳ್ಳಿಯಿಕ್ಕುವಿಕೆಗಳ ವಿವರಗಳನ್ನು ಹೇಳಿದ.

ಎಲ್ಲವನ್ನೂ ಹೇಳಿ ಮುಗಿಸುವ ತನಕ ಆಚೆಕಡೆಯಿಂದ ಪ್ರತಿಕ್ರಿಯೆ ಏನೂ ಬರಲಿಲ್ಲ. ಕೊನೆಗೆ ಬೇಸರ ಬೆರೆತ ಒಂದು ಆಕಳಿಕೆಯನ್ನು ತಡೆಹಿಡಿದ.

ಯಾಕೆ ನೀವು ಹತ್ತಿರದ ಪೊಲೀಸ್ ಸ್ಟೇಷನ್‌ಗೆ ಹೋಗಿ ಎಫ್.ಐ.ಆರ್.ಫೈಲ್ ಮಾಡುವುದಿಲ್ಲ?

ರವಿ ಉತ್ತರವೇನನ್ನೂ ಹೇಳಲಿಲ್ಲ. ಬಳಿಕ ಇಯರ್ ಫೋನ್‌ನಲ್ಲೆ ತನಿಖೆಯಾರಂಭವಾಯ್ತು.

ನಿಮ್ಮ ಸ್ವತ್ತುಗಳಿಗೆ ನಾಶ ನಷ್ಟವೇನೂ ಆಗಿಲ್ಲವಲ್ಲ? ನಿಮ್ಮ ಬಳಗದವರಾರೂ ಕೊಲೆಯಾಗಲಿಲ್ಲವಲ್ಲ?

ಅದಕ್ಕೂ ರವಿ ಉತ್ತರ ಹೇಳಲಿಲ್ಲ.

ಪಂಜಾಬಿನಲ್ಲಿ ಸುಲಭವಾಗಿರುವ ಪೋಲಿ ಬೈಗುಳವೊಂದನ್ನು ಒದರುತ್ತ ಆ ಕಡೆ ಫೋನ್ ಕೆಳಗಿಟ್ಟ ಸದ್ದು ಕೇಳಿಸಿತು.

ರವಿಯೂ ಯಾಂತ್ರಿಕವಾಗಿ ಫೋನ್ ಕೆಳಗಿಟ್ಟನು. ಥಟ್ಟನೆ ದರ್ಶನ್‌ಳ ನೆನಪಾಯಿತು. ದರ್ಶನ್‌ಳ ಲೊಕಾಲಿಟಿಯೂ ಗಲಭೆ ಪೀಡಿತ ಪ್ರದೇಶವೇ.

ಪೇದೆ ಇನ್ನೊಂದು ಕಾಫಿ ತಂದಿರಿಸಿದ.

ಕಾಫಿ ಕುಡಿಯುವಾಗಲೂ ರವಿ ದರ್ಶನ್‌ಳ ಕುರಿತೇ ಯೋಚಿಸುತ್ತಾ ಇದ್ದ.

* * *

ಗುರುದಯಾಲ್ ಸಿಂಗನು ಭೀಮಗಾತ್ರದ ಸಿಮೆಂಟ್ ಕೊಳವೆಯ ಒಳಗಿನ ಕತ್ತಲೆಯಿಂದ ಹೊರಕ್ಕೆ ದಿಟ್ಟಿಸಿದನು. ಕೊಳವೆಯ ಆ ತುದಿ ಆತನಿಗೆ ಒಂದು ದೊಡ್ಡ ಸೊನ್ನೆಯ ಹಾಗೆ; ತನ್ನ ಮತ್ತು ನಗರದ ನಡುವಿನ ಸಾವು ಮತ್ತು ಬದುಕಿನ ಮಧ್ಯದ–ಪುನರ್ಜನ್ಮದತ್ತಣ ಬಾಗಿಲಿನ ಹಾಗೆ–ಮರಣದ ಗುಹಾಮುಖದ ಹಾಗೆ ಭಾಸವಾಯಿತು. ರಸ್ತೆ ಬದಿಯಲ್ಲಿ ಡ್ರೈನೇಜ್‌ಗೆಂದು ಅಗೆದಿದ್ದ ತೋಡು ಹಾಗೂ ರಾಶಿ ಹಾಕಿದ್ದ ಸಡಿಲು ಮಣ್ಣು. ಪ್ರತಿದಿನವೂ ಆತ ತನ್ನ ಫರ್ನಿಚರ್ ಶೋರೂಮ್‌ಗೆ ಹೋಗಿ ಬರುತ್ತಾ ಇದ್ದದ್ದು ಈ ಹಾದಿಯಲ್ಲೆ. ಸ್ಕೂಟರ್‌ನಲ್ಲಿ ಈ ಹಾದಿಯನ್ನು ಹಾದು ಹೋಗುವಾಗಲೆಲ್ಲ ಶಾಪ ಹಾಕುತ್ತಿದ್ದ. ಎಷ್ಟು ತಿಂಗಳಾದುವು ಇಲ್ಲಿ ಕಾಮಗಾರಿ ಶುರು ಮಾಡಿ... ಗಟಾರ್‌ನಿಂದ ಗಬ್ಬುನಾತ ಹೊಡೆಯುತ್ತಿದೆ. ಸೊಳ್ಳೆ ಕಡಿತದಿಂದ ಮೈಯಿಡೀ ಊದಿಕೊಂಡಿದೆ. ಥಟ್ಟನೆ ನೆನಪಾಯಿತು–ತನ್ನ ಮೈಯಲ್ಲಿರುವ ಬಟ್ಟೆಯೆಂದರೆ ಒಂದು ಕಾಚಾ ಅಷ್ಟೇ ಎಂದು. ಸಿಕ್ಖರಿಗೆ ಕಡ್ಡಾಯವಾಗಿದ್ದ ಇತರ ನಾಲ್ಕು 'ಕ'ಗಳನ್ನೂ ಆ ಹಲ್ಲೆಕೋರರು ಬಲಾತ್ಕಾರವಾಗಿ ಕಿತ್ತುಕೊಂಡಿದ್ದರು.

ಆತನ ಮಸುಕಾಗಿದ್ದ ಪ್ರಜ್ಞೆಯಲ್ಲಿ ಒಂದು ಬೆಚ್ಚಿಸುವಿಕೆಯಾಗಿ ಆ ಘಟನೆಗಳೆಲ್ಲವೂ ಮರುಕಳಿಸಿದವು.

ಪ್ರಧಾನಿಗೆ ಗುಂಡು ಹೊಡೆದ ಸುದ್ದಿ ಆತನಿಗೆ ಗೊತ್ತಾದದ್ದು ಸಂಜೆ ನಾಲ್ಕರ ಹೊತ್ತಿಗೆ. ಗುಂಡಿಟ್ಟವರು ಸಿಕ್ಖರೆಂದು ಗೊತ್ತಾದಾಗ ಸಹಜವಾಗಿಯೇ ಅವರ ಬಗ್ಗೆ ಸಿಟ್ಟು ಬಂದಿತ್ತು. ಅದು ಸಿಕ್ಖ್ ಸಮಾಜಕ್ಕೆ ಮಾಡಲಾದ ಅತಿದೊಡ್ಡ ಅನ್ಯಾಯ. ಎಷ್ಟೋ ವರ್ಷಗಳ ಕಾಲ ಸಿಕ್ಖ್ ಸಮಾಜ ಈ ಅಪರಾಧದ ಬೆಲೆ ತೆರಬೇಕಾದೀತೋ ಎಂದುಕೊಂಡನಾತ.

ಫರ್ನೀಚರ್ ಮಾರ್ಕೆಟ್‌ನ ಎಸೋಸಿಯೇಶನ್ ಪ್ರತಿನಿಧಿಗಳು ಅಂಗಡಿಗಳನ್ನು ಮುಚ್ಚಲು ಎಲ್ಲಾ ಮಾಲಕರಿಗೂ ಫೋನ್ ಮೂಲಕ ಹೇಳಿದರು. ತತ್‌ಕ್ಷಣವೇ ಆತ ಕೆಲಸಗಾರರನ್ನು ಹೊರಕಳುಹಿಸಿ ಷಟರ್ ಹಾಕಿದ್ದ.

ಕಳೆದ ಕೆಲವು ತಿಂಗಳ ಅನುಭವವನ್ನು ಗಮನದಲ್ಲಿರಿಸಿಕೊಂಡು ನೋಡಿದಾಗ ಹಿಂದೂಗಳಲ್ಲಿನ ಒಂದು ಪಂಗಡ ಈ ಸಂದರ್ಭವನ್ನು ದುರುಪಯೋಗ ಪಡಿಸೀತು ಎಂಬ ಭಯ ಆತನ ಮನಸ್ಸಿನ ಯಾವುದೋ ಮೂಲೆಯಲ್ಲಿ ಏಳತೊಡಗಿತು. ಹಿಂದೂಗಳಲ್ಲೂ ಮುಸ್ಲಿಮರಲ್ಲೂ ಸಿಕ್ಖರಲ್ಲೂ ಕೆಲವು ತಲೆತಿರುಕರಿರುವರು. ಅವರು ಸಂಖ್ಯೆಯಲ್ಲಿ ಕಡಿಮೆಯಿದ್ದರೂ ಸಂಕುಚಿತ ಮನೋಭಾವದವರಿದ್ದು, ಅಪಾಯಕಾರಿಯಾದ ಮತದ್ವೇಷವನ್ನು ಭುಗಿಲೆಬ್ಬಿಸಲು ಸಂದರ್ಭ ಕಾಯುತ್ತಾ ಇದ್ದಾರೆಂಬ ಸಂಗತಿ ದೆಹಲಿಯಲ್ಲಿ ಗುಟ್ಟೇನೂ ಅಲ್ಲ. ಇದನ್ನು ಪ್ರಜಾಪ್ರಭುತ್ವ ಪದ್ಧತಿಯ ನ್ಯೂನತೆಗಳಲ್ಲಿ ಒಂದೆಂದು ಗುರುತಿಸಬಹುದು. ಅಲ್ಪಮತೀಯರು



ಬಹುಮತೀಯರನ್ನು ಮೂಗುದಾರ ಹಿಡಿದು ನಡೆಸುವಂಥ ವಿಶಿಷ್ಟ ವಿದ್ಯಮಾನ. ಬಾಲವನ್ನು ಬೀಸುತ್ತ ಒಡಲನ್ನು ಅಟ್ಟುವಂಥ ವಿರೋಧಾಭಾಸ. ಇತ್ತೀಚೆಗೆ ಇದರ ಪ್ರತ್ಯಾಘಾತಗಳು ಈ ದೇಶವನ್ನು ಕೊರೆದು ತಿನ್ನುತ್ತಲೇ ಇವೆ. ತೀರಾ ಶೋಚನೀಯವಾದ ಸಂಗತಿಯೆಂದರೆ ಇಂತಹ ವಿದ್ರೋಹಿಗಳನ್ನು ಪ್ರತಿಯೊಂದು ರಾಜಕೀಯ ಪಕ್ಷವೂ ಸಾಕಿ ಸಲಹುತ್ತಿರುವುದೇ. ಅಷ್ಟೇ ಅಲ್ಲ, ಈ ದುರ್ಮಾರ್ಗಿಗಳಿಗೆ ಹೆಚ್ಚು ಹೆಚ್ಚು ಮಾನ್ಯತೆ ದೊರೆಯುತ್ತಿರುವುದೂ ಒಂದು ವಿರೋಧಾಭಾಸವೆಂದೇ ಅನ್ನಿಸುತ್ತದೆ.

ದೆಹಲಿಯ ಪಶ್ಚಿಮದ ವಿಸ್ತರಣೆಗಳಲ್ಲೊಂದಾದ ತಿಲಕ್‌ನಗರ್‌ನಲ್ಲಿ ವಾಸಿಸುತ್ತಿರುವ ಗುರುದಯಾಲ್ ಸಿಂಗ್‌ಗೆ ಜನಸಂದಣಿಯ ಮನಃಶಾಸ್ತ್ರ ಚೆನ್ನಾಗಿ ಗೊತ್ತು. ವಿಭಜನೆಯ ಬಳಿಕ ಪಶ್ಚಿಮ ಪಂಜಾಬ್‌ನಿಂದ ಓಡಿಬಂದ ನಿರಾಶ್ರಿತರು ಒತ್ತೊತ್ತಾಗಿ ವಾಸಿಸುವ ಪ್ರದೇಶ ತಿಲಕ್‌ನಗರ್. ಹಿಂದೂಗಳೂ ಸಿಕ್ಖರೂ ಮತಭೇದವಿಲ್ಲದೆ ಒಂದೇ ಗಲ್ಲಿಯ ಇಬ್ಬದಿಗಳಲ್ಲೂ ಒಂದೇ ಕಟ್ಟಡದ ವಿವಿಧ ಮಹಡಿಗಳಲ್ಲೂ ಒಂದೇ ಗೋಡೆಯ ಇಬ್ಬದಿಗಳಲ್ಲೂ ಒಂದೇ ಸೂರಿನ ಅಡಿಯಲ್ಲೂ ಸಾಮರಸ್ಯವನ್ನು ಉಳಿಸಿಕೊಂಡು ಬಾಳುತ್ತಾ ಬಂದಿರುವರು. ಅವರಿಗೆ ಪರಸ್ಪರ ಹಂಚಿಕೊಳ್ಳಲು ವಿಭಜನೆಯ ರಕ್ತಸಿಕ್ತ ನೆನಪುಗಳಿದ್ದಿತ್ತಲ್ಲ.

ತಂದೆಯೊ, ಅಣ್ಣನೊ, ತಮ್ಮನೋ ಕೊಲೆಗೈಯಲ್ಪಡದ ಒಂದು ಕುಟುಂಬವೂ ಅಲ್ಲಿ ನೆಲಸಿರಲಿಲ್ಲ. ಹಠ ಸಂಭೋಗಕ್ಕೆ ಗುರಿಯಾಗಿರದ ತಾಯಿಯನ್ನೊ, ಹೆಂಡತಿಯನ್ನೊ, ಅಕ್ಕ ತಂಗಿಯರನ್ನೋ ಹೊಂದಿರದ ಒಬ್ಬಾತನೂ ಅಲ್ಲಿ ನೆಲಸಿರಲಿಲ್ಲ. ಅವರಿಗೆ ಮೆಲುಕಾಡಲು ಕಣ್ಣೀರಿನಲ್ಲಿ ತೊಯ್ದ ಅನುಭವಗಳಿದ್ದವು. ಕಷ್ಟಕೋಟಲೆಗಳೇ ತುಂಬಿದ್ದ ಭೂತಕಾಲದಿಂದ ಪಾರಾಗಲು ಮೈಮುರಿದು ಅವರು ದುಡಿದರು. ಸರಕಾರದಿಂದ ದೊರೆತ ಅಲ್ಪ ಪ್ರಮಾಣದ ಸಹಾಯಧನದ ಮೇಲೆ ಕಾವು ಕುಳಿತು ಅವರು ಬೆವರು ಹರಿಸಿದರು. ಶ್ರಮಶೀಲರಾದ ಸಿಕ್ಖರು ಹಗಲಿರುಳೂ ರಕ್ತವನ್ನು ನೀರು ಮಾಡಿದರು. ಹಿಂದೂಗಳು ಚಿಕ್ಕಪುಟ್ಟ ವ್ಯಾಪಾರಗಳಲ್ಲಿ ತೊಡಗಿಸಿಕೊಂಡರು. ಒಂದೊಂದು ಕುಟುಂಬವೂ ಅದರದ್ದೇ ಆದ ವಿಧಿಯೊಂದಿಗೆ ಹೊಂದಿಕೊಳ್ಳುತ್ತಾ ಇದ್ದವು. ಹಿಂದೂಗಳೂ ಸಿಕ್ಖರು, ಪರಸ್ಪರ ಮದುವೆ ಮಾಡಿಕೊಂಡರು. ಸಿಕ್ಖರು ಹಿಂದೂ ದೇವಾಲಯಗಳಲ್ಲಿ ಕೈಮುಗಿದರು. ಹಿಂದೂಗಳೂ ಗುರುದ್ವಾರಗಳಲ್ಲಿ ಹರಕೆ ಹೊತ್ತರು. ಕಾಲಾಂತರದಲ್ಲಿ ಹಿಂದೂ ಇಲ್ಲದ ಸಿಕ್ಖ ಕುಟುಂಬವಾಗಲೀ ಸಿಕ್ಖನಿಲ್ಲದ ಹಿಂದೂ ಕುಟುಂಬವಾಗಲಿ ಇಲ್ಲವಾದವು. ಈ ಅನ್ಯೋನ್ಯತೆಯಲ್ಲಿ ಅಪಸ್ವರವೆದ್ದದ್ದು ಯಾವತ್ತಿನಿಂದ ಎಂದು ನೆನಪಿಗೆ ತಂದುಕೊಳ್ಳಲು ಆತ ಯತ್ನಿಸಿದ. ಇದ್ದಕ್ಕಿದ್ದಂತೆ ಒಂದು ದಿನ ಧ್ವನಿವರ್ಧಕದ ಮೂಲಕ ಯಾರೋ ಘೋಷಣೆ ಕೂಗುವುದು ಕೇಳಿಸಿತು. ಗರ್ವ್ ಸೆ ಕಹೋ... ಹಂ ಹಿಂದೂ ಹೈ. ಅಂದೇ ತಾನು

ಮೊತ್ತಮೊದಲು ಬೆಚ್ಚಿದ್ದೆ. ಸಿಕ್ಖ್ ಮತ ನಿರ್ದೇಶಿಸುವ ಜುಟ್ಟು, ಗಡ್ಡ, ಮುಂಡಾಸು, ಬಳೆ, ಒಳವಸ್ತ್ರ ಮತ್ತು ಕೃಪಾಣಗಳನ್ನು ತೊಟ್ಟುಕೊಳ್ಳುತ್ತಿರುವೆನಾದರೂ ಹಿಂದೂಗಳು ಅನ್ಯರೆಂಬ ವಿಚಾರ ಯಾವತ್ತೂ ತನಗೆ ಕಿರಿಕಿರಿಯುಂಟು ಮಾಡಿರಲಿಲ್ಲ ಎಂದುಕೊಂಡನಾತ.

ಸಿಕ್ಖರ ಐದು 'ಕ'ಗಳಿಗೆ ಪ್ರತಿಯಾಗಿ ಹಿಂದೂಗಳು ಮೂರು 'ಗ'ಗಳ ಉಪಾಸಕರಾದರು–ಗಾಯ್, ಗಂಗಾ, ಗಾಯತ್ರಿ. ಸಿಕ್ಖನ ಕೃಪಾಣಕ್ಕೆ ಪ್ರತಿಯಾಗಿ ಮೊನೆ ಚೂಪು ಮಾಡಲಾದ ತ್ರಿಶೂಲ. ಕೃಪಾಣಧಾರಿಗಳಾದ ಸಿಕ್ಖರಿಗೆ ಪ್ರತಿಯಾಗಿ ತ್ರಿಶೂಲಧಾರಿಗಳಾದ ಹಿಂದೂಗಳು.

ಅಂಗಡಿ ಮುಚ್ಚಿ ಸ್ಕೂಟರ್ ಬಿಡುವಾಗ ಈ ವಿಚಾರಗಳೆಲ್ಲವೂ ಗುರುದಯಾಲ್ ಸಿಂಗ್‌ನ ನೆನಪಿನಲ್ಲಿದ್ದವು. ಆದುದರಿಂದಲೇ ಇರಬಹುದು. ಜನಸಂದಣಿ ಇರುವ ಮೈನ್‌ರೋಡ್‌ನಿಂದ ಈ ಒಳರಸ್ತೆಗೆ ತಿರುಗಿದಾಗ ಆತ ಹೆಚ್ಚು ಜಾಗರೂಕನಾಗಿದ್ದ. ನೂರು ಗಜ ಕ್ರಮಿಸಿರಲಿಕ್ಕಿಲ್ಲ. ತಾನು ಈ ಹಾದಿಯನ್ನು ಆಯ್ಕೆ ಮಾಡಿದ್ದು ಮೂರ್ಖತನವಾಗಿತ್ತೆಂಬ ವಿಚಾರ ಒಂದು ಸಿಡಿಲಿನ ಹಾಗೆ ಆತನ ಮನಸ್ಸಿನಲ್ಲೆರಗಿತ್ತು. ಆದರೆ ಅಷ್ಟರಲ್ಲೆ ಸಮಯ ಮೀರಿ ಹೋಗಿತ್ತು. ತಂಡ ತ್ರಿಶೂಲಧಾರಿಗಳದ್ದಲ್ಲ. ಬರಿಯ ಬಿದಿರ ಕೋಲುಗಳನ್ನೇ ಆಯುಧವನ್ನಾಗಿ ಹಿಡಿದುಕೊಂಡವರು. ಹೆಚ್ಚಿನವರು ಖಾಕಿ ಚಡ್ಡಿ ತೊಟ್ಟಿರುವರು. ಪ್ರತಿದಿನವೂ ಬೆಳಗ್ಗೆ ಹಳದಿ ಧ್ವಜದ ಅಡಿಯಲ್ಲಿ ನಿಂತುಕೊಂಡು ಪಾರ್ಕ್‌ಗಳಲ್ಲೂ ಕಾಲನಿಗಳ ನಡುವಿನ ಮೈದಾನಗಳಲ್ಲೂ ಕಸರತ್ತು ಮಾಡುತ್ತಿದ್ದ ಇಂತಹ ಸಂಘಗಳು ದೆಹಲಿ ವಾಸಿಗಳಿಗೆ ಅಪರಿಚಿತವಲ್ಲ. ಆ ತಂಡದಲ್ಲಿ ಇದ್ದದ್ದು ಎಂಟೊ ಹತ್ತೊ ಮಂದಿ ಮಾತ್ರ. ಅವರು ಸ್ಕೂಟರ್ ತಡೆದರು. ಸ್ಕೂಟರ್‌ನ ಹೆಡ್‌ಲೈಟ್‌ನ ಮೇಲೆ ಓರ್ವ ಜಾಣ ತನ್ನ ಬಿದಿರ ಬಡಿಗೆಯ ಬಲಪರೀಕ್ಷೆ ಮಾಡಿದ. ಹೆಗಲ ಮೇಲೆ ಅಡ್ಡಕ್ಕೆ ಕಟ್ಟಲಾದ ತೊಗಲ ಪಟ್ಟಿಯಲ್ಲಿದ್ದ ಚಿಕ್ಕ ಕೃಪಾನವನ್ನು ಮತ್ತೊಬ್ಬಾತ ವಶಪಡಿಸಿಕೊಂಡ. ಇವರ ಬಿದಿರ ಬಡಿಗೆಗಳು ತನ್ನ ಮೈಮೇಲೆ, ತಲೆಮೇಲೆಲ್ಲ ರಪ್ಪನೆ ಬಂದೆರಗುವುದಿಲ್ಲ ಯಾಕೆ ಎಂದು ಗುರುದಯಾಲ್ ಸಿಂಗ್ ಅಚ್ಚರಿ ಪಡುವಷ್ಟರಲ್ಲಿ ಒಬ್ಬಾತ ಅವರ ಖಾಕಿ ಚಡ್ಡಿಯ ಜೇಬಿನಿಂದ ಒಂದು ಕತ್ತರಿ ಹೊರತೆಗೆದ. ಅವರಲ್ಲಿ ಯಾರೊಬ್ಬರೂ ದನಿಯೆತ್ತಲಿಲ್ಲ. ಒಬ್ಬೊಬ್ಬನೂ ಮಾಡತಕ್ಕ ಕೃತ್ಯಗಳನ್ನು ಅವರು ಮುಂಚಿತವಾಗಿಯೇ ನಿರ್ಧರಿಸಿರಬೇಕು. ಇಷ್ಟರಲ್ಲೇ, ಭಾರಿ ಡೊಳ್ಳು ಹೊಟ್ಟೆಯ ಒಬ್ಬಾತ ಗುರುದಯಾಲ್‌ನ ಕೈಯ ಕಂಕಣವನ್ನು ಕಳಚಿ ತೆಗೆದ. ಅದು ಚಿನ್ನದ್ದೇ ಎಂಬುದನ್ನು ದೃಢಪಡಿಸಿಕೊಂಡ ಬಳಿಕ ಜೇಬಿಗಿಳಿಸಿದ. ಇಬ್ಬರು ಮುಂದೆ ಬಂದು ಸ್ಕೂಟರ್ ಸ್ಟಾಂಡ್‌ನಲ್ಲಿರಿಸಿದರು. ಗುರುದಯಾಲ್‌ನ ವಸ್ತ್ರಗಳನ್ನು ಒಂದೊಂದೇ ಆಗಿ ಕಳಚಿ ತೆಗೆದರು. ಒಳ ಉಡುಪನ್ನು ಹೊರತುಪಡಿಸಿ ಉಳಿದೆಲ್ಲವನ್ನೂ ಆತನನ್ನು ಸ್ಕೂಟರ್ ಸೀಟಿನ ಮೇಲೆ ಕೂರಿಸಿ, ಗಂಟುಹಾಕಿಕೊಂಡಿದ್ದ



ಜುಟ್ಟಿನಲ್ಲಿ ಸಿಕ್ಕಿಸಿಕೊಂಡಿದ್ದ ದಂತದ ಬಾಚಣಿಗೆಯನ್ನು ವಶಪಡಿಸಿದರು. ಅಷ್ಟರಲ್ಲಿ ಕತ್ತರಿ ಹಿಡಿದ ಕೈಗಳು ಚಲಿಸಿದವು. ಆತನ ಕೇಶ ಮತ್ತು ಗಡ್ಡಗಳನ್ನು ಕತ್ತರಿಸಿ ಹಾಕಿದವು.

ಅವರ ಕುಕೃತ್ಯಗಳಾವುದನ್ನೂ ಆತ ವಿರೋಧಿಸಲು ಯತ್ನಿಸಲಿಲ್ಲ. ಒಬ್ಬ ಸಿಕ್ಖನು ಅತ್ಯಂತ ಪವಿತ್ರವೆಂದು ಭಾವಿಸುವ ಎಲ್ಲದರ ಮೇಲೂ ಅನ್ಯರು ಕೈ ಹಾಕುವಾಗ ಸಹಜವಾಗಿಯೇ ಹುಟ್ಟಿಕೊಳ್ಳುವ ಸಿಟ್ಟು, ದ್ವೇಷ, ಅಸಹಾಯಕತೆಗಳೆಲ್ಲ ಆತನನ್ನು ಬಳಸಿದ್ದವು. ಆದರೆ, ನಿಶ್ಶಬ್ದವಾದ ಜನರ ಗುಂಪೊಂದು ಶಿಸ್ತುಬದ್ಧವಾಗಿ ಕಾರ್ಯನಿರತವಾದಾಗ ಏಕಾಕಿಯಾಗಿ ಒಬ್ಬಾತ ಪ್ರತಿಭಟಿಸುವುದಾದರೂ ಹೇಗೆ? ನಿಶ್ಶಬ್ದವಾದ ಜನರ ಗುಂಪು. ಹೌದು, ಅತ್ಯಂತ ಬೀಭತ್ಸವಾಗಿ ಅನ್ನಿಸಿದ್ದು ಗುಂಪಿನ ಮೌನವಾಗಿತ್ತು. ನಿಶ್ಶಬ್ದ ರಕ್ತಹೀರುವ ಭೀಕರ ಜಂತು. ಅವರ ಕದನ ಕ್ರಮ ಸಿಕ್ಖನನ್ನು ಅಪಮಾನಿಸುವುದಾಗಿತ್ತು–ಒಂದು ಜೀವಮಾನವಿಡೀ ಪವಿತ್ರ ಭಾವನೆಯಿಂದ ಕಾಪಾಡಿಕೊಂಡು ಬಂದಿದ್ದ ಅವನ ಕೂದಲುಗಳನ್ನು ಕಿತ್ತುಕೊಳ್ಳುವುದು.

ಒಬ್ಬಾತ ಸ್ಕೂಟರ್ ಟ್ಯಾಂಕ್‌ನ ಮುಚ್ಚಳ ಬಿಚ್ಚಿ ಪೆಟ್ರೋಲ್ ಸುತ್ತಲೂ ಸುರಿದುಕೊಂಡ. ಗುರು ದಯಾಲ್‌ನ ರುಮಾಲ್ ಮತ್ತು ಉಡುಪುಗಳನ್ನು ಅದರ ಮೇಲೆ ಹಾಕಿ ಬೆಂಕಿ ಹಚ್ಚಿದ. ಬೆಂಕೆಯೆಸಳು ದೊಡ್ಡದಾಗುವುದನ್ನೂ ಪೆಟ್ರೋಲ್‌ನಲ್ಲಿ ಭಗ್ಗನೆ ಹಬ್ಬುವುದನ್ನು ನಿಂತು ನೋಡುತ್ತಿರುವಾಗ ನಾಲ್ಕು ಮಂದಿ ಆತನನ್ನು ಹಿಡಿದು, ಅಗೆದು ಹಾಕಿದ್ದ ಚರಂಡಿಯ ದಂಡೆಯನ್ನು ಹತ್ತಿದರು, ನಗರದ ಕೊಳೆಗಷ್ಟೂ ಹರಿದು ಹೋಗುತ್ತಿರುವ ಮೋರಿಗೆ ಆತನನ್ನೆಸೆದರು.

ಆ ಬೀಳುವಿಕೆಯಲ್ಲಿ ಆತನ ತಲೆ ಯಾವುದಕ್ಕೊ ಹೋಗಿ ಗುದ್ದಿರಬಹುದೆಂದೇ ಆತನಿಗೆ ಅನ್ನಿಸುತ್ತದೆ.

ಯಾವ ಹೊತ್ತಿನಲ್ಲೊ ಕಣ್ಣುಬಿಟ್ಟಾಗ ಸ್ಥಳ, ಕಾಲಗಳ ಬಗೆಗಿನ ಪ್ರಜ್ಞೆ ನಷ್ಟವಾಗಿತ್ತು. ಮೋರಿಯ ಬದಿಯಲ್ಲಿ ತಲೆಕೆಳಗಾಗಿ ಬಿದ್ದುಕೊಂಡು, ಹರಿದು ದೂರವಾಗುತ್ತಿರುವ ಕೊಳೆಗಳನ್ನು ನೋಡುತ್ತ ಎಷ್ಟು ಹೊತ್ತು ಕಳೆದೆನೆಂದು ಆತನಿಗೆ ತಿಳಿಯದು. ಹೆಚ್ಚು ದೂರವಿರದ ಜುಗ್ಗಿಯಿಂದ ಹಂದಿಮಂದೆಗಳು ಕೆಸರು ನೀರಿಗೆ ನೀರಾಟಕ್ಕಿಳಿಯುವುದನ್ನು ಕಂಡಾಗ ವೇಳೆಯನ್ನು ಸುಮಾರಾಗಿ ಊಹಿಸಿದ್ದ–ಹೊತ್ತು ಬೆಳಗಾಗುವುದರಲ್ಲಿದೆ. ತಲೆಯೆತ್ತಲು ಪ್ರಯತ್ನಿಸಿದ. ಎಲ್ಲೆಲ್ಲೂ ನೋಯುತ್ತಿದೆ. ಮೊಣಕಾಲುಗಳಲ್ಲೂ ಮೊಣಕೈಗಳಲ್ಲೂ ಗಾಯಗಳಿವೆ. ಸೊಳ್ಳೆಗಳಿಗೆ ಪುಷ್ಕಳವಾದ ಔತಣ ನೀಡಿದ್ದ ಮೈಯಿಡೀ ಬಾತು ಜುಮುಗುಟ್ಟುತ್ತಿದೆ.

ಹೇಗೇಹೇಗೋ ಒದ್ದಾಡುತ್ತ ಮೋರಿಯ ದಂಡೆಯನ್ನು ತಲಪಿದ. ದಾರಿದೀಪಗಳು ನಂದಿಲ್ಲ. ರಸ್ತೆ, ದೃಷ್ಟಿ ತಲಪುವ ದೂರದ ತನಕವೂ ನಿರ್ಜನವೇ. ವಾಹನಗಳ ಓಡಾಟವೂ ಶುರುವಾಗಿಲ್ಲ.

ಎದ್ದು ಕುಳಿತುಕೊಳ್ಳುವಾಗ ತಲೆ ಸುತ್ತುತ್ತಿರುವಂತೆ ಅನ್ನಿಸಿತು. ತುಸು ದೂರದಲ್ಲಿ ಬಿದ್ದುಕೊಂಡಿರುವ ಸಿಮೆಂಟ್ ಕೊಳವೆ ಕಾಣಿಸಿದ್ದು ಆಗಲೇ. ಜರುಗುತ್ತ ಸರಿದು ಅದರೊಳಗೆ ನುಸುಳಿದ. ಕೊಳವೆಯ ಬೆಂಡಿನೊಳಗೆ ಒಡಲು ಅಡಕಗೊಳ್ಳುವಷ್ಟರಲ್ಲಿ ಪುನಃ ಪ್ರಜ್ಞೆ ತಪ್ಪಿರಬೇಕು. ಅಥವಾ ಬಳಲಿಕೆ ಹೆಚ್ಚಾಗಿ ನಿದ್ರೆ ಹೋದದ್ದಿರಬೇಕು.

ಹೇಗಾದರೊಮ್ಮೆ ಮನೆಗೆ ತಲಪಿದರೆ ಸಾಕೆನಿಸಿತ್ತು. ಬರೇ ಕಾಚಾ ಕಟ್ಟಿಕೊಂಡಿದ್ದು ರಸ್ತೆಗಿಳಿಯುವುದಾದರೂ ಹೇಗೆ? ಇಲ್ಲಿಂದ ನಾಲ್ಕೈದು ಕಿಲೋ ಮೀಟರ್ ನಷ್ಟಾದರೂ ದೂರವಿದೆ ಮನೆಗೆ. ಈ ಸ್ಥಿತಿಯಲ್ಲಿ ನಡೆದು ತಲಪುವುದು ಹೇಗೆ? ಅದೂ ಈ ವೇಷದಲ್ಲಿ? ತನ್ನನ್ನು ಕಂಡರೆ ಯಾರಾದರೂ ಲಿಫ್ಟ್ ಕೊಟ್ಟಾರೆಯೆ?

ಇದ್ದಕ್ಕಿದ್ದಂತೆ ಮನೆಯವರ ನೆನಪಾಯಿತು. ಮಗಳು ದರ್ಶನ್ ಯಾವ ಅನಾಹುತಕ್ಕೂ ಗುರಿಯಾಗದೆ ಮನೆಗೆ ತಲಪಿರಬಹುದೆ? ಮನ್ಮೋಹನ್‌ಗೆ ಏನಾದರೂ ಕೆಡುಕು ಸಂಭವಿಸಿರಬಹುದೆ? ದರ್ಶನ್‌ಳ ತಾಯಿ ನನ್ನನ್ನು ಕಾಣದ್ದರಿಂದ ಗಾಬರಿ ಪಡುತ್ತಿರಬಹುದು ಎಂದುಕೊಂಡನಾತ.

ಹೆಚ್ಚಿಗೆ ಯೋಚಿಸಲು ಸಾಧ್ಯವಾಗುತ್ತ ಇಲ್ಲ. ಮನಸ್ಸು ಮರಗಟ್ಟಿದೆ. ಕೊಳವೆಯೊಳಗೆ ಬೆಂಡಾಗಿ ಮುದುಡಿ ಬಿದ್ದುಕೊಂಡಿದ್ದರಿಂದಲೊ ಏನೊ, ಕಾಲುಗಳು ಜುಮುಗುಟ್ಟುತ್ತಿವೆ. ಬೆನ್ನಿನಲ್ಲಿ ವಿಪರೀತ ನೋವು.

ಮಲಗಿದ ಭಂಗಿಯನ್ನೊಮ್ಮೆ ನಿಧಾನವಾಗಿ ಬದಲಾಯಿಸಲು ಯತ್ನಿಸಿದ. ಕಾಲುಗಳನ್ನು ನೀಡಿ ಕೊಳವೆಗೆ ಸಮಾನಂತರವಾಗಿ ಮಲಗಿದ. ಈಗ ಕಾಲುಗಳಿರುವುದು ಮೂಡಣದ ಕಡೆಗೆ. ಸೂರ್ಯ ಮೂಡಲಿಕ್ಕೆ ಇನ್ನು ಹೆಚ್ಚು ಹೊತ್ತಿಲ್ಲ. ಸೂರ್ಯ ಭಗವಂತನನ್ನು ಎದುರ್ಗೊಳ್ಳುವುದು ಕಾಲುಗಳಿಂದಾಗಬಾರದು. ಕಷ್ಟದಲ್ಲಿ ಹೆಣಗಾಡಿ ಪೂರ್ವದತ್ತ ತಲೆಹಾಕಿ ಮಲಗಿದ. ಈಗ ಕಾಲುಗಳಿರುವುದು ಪಶ್ಚಿಮದ ಕಡೆಗೆ. ಅದೂ ಸರಿಯಲ್ಲ. ಆ ಕಡೆಗೂ ಕಾಲುಗಳನ್ನು ಚಾಚಕೂಡದು. ಆತನ ದಣಿದ ಮನಸ್ಸು ನಾನಕ್ ಗುರುದೇವನ ಕುರಿತು ಯೋಚಿಸಿತು. ಒಂದು ವೀಥಿ, ಒಂದು ಬಾಗಿಲು. ಗುರು ಎಂಬ ಸೋಪಾನದ ಮೂಲಕ ಗೃಹವನ್ನು ತಲಪಬಹುದು. ಎಷ್ಟು ಸುಂದರ ನಾಮ! ನಾನಕ್ ದೇವರು ಮೆಕ್ಕಾವನ್ನು ಸಂದರ್ಶಿಸಿದ್ದರು. ಆದರೆ ಯಾವುದೇ ಸಾಂಪ್ರದಾಯಿಕ ಆಚರಣೆಗಳಲ್ಲೂ ಪಾಲ್ಗೊಳಲಿಲ್ಲ. ಎಷ್ಟೋ ದಿನಗಳು ಎಷ್ಟೋ ಗಾವುದಗಳು ನಡೆದೇ ಮೆಕ್ಕಾ ತಲಪಿದ್ದ ನಾನಕ್‌ದೇವ ಆಯಾಸದಿಂದ ಬರಿನೆಲದಲ್ಲಿ ಮಲಗಿ ನಿದ್ದೆ ಹೋಗಿಬಿಟ್ಟರು. ಉದ್ದೇಶಪೂರ್ವಕ ಅಲ್ಲವಾದರೂ ಅವರ ಕಾಲುಗಳಿದ್ದದ್ದು ಪವಿತ್ರವಾದ ಕಾಬಾದ ಕಡೆಗಾಗಿತ್ತು. ಯಾವನೋ ಒಬ್ಬ ಮುಲ್ಲಾ ಇದನ್ನು ಗಮನಿಸಿದ. ಗುರುದೇವನ ಈ ಅನಾದರ ಮುಲ್ಲಾನನ್ನು ರೇಗಿಸಿತು. ಆತ ಗುರುದೇವನನ್ನು ಕುಲುಕಿ ಎಚ್ಚರಗೊಳಿಸಿ ಪ್ರಶ್ನಿಸಿದ. ದೇವರು ನೆಲಸಿರುವ ಕಡೆಗೆ ಕಾಲು ಚಾಚಿರುವ ಮಹಾಪಾಪಿ, ನೀನು



ಯಾರು? ಗುರು ಶಾಂತವಾಗಿ ಉತ್ತರಿಸಿದರು. ನಾನೊಬ್ಬ ಯಾತ್ರಿಕ, ಬಹಳ ದೂರದಿಂದ ಬಂದಿರುವ ಯಾತ್ರಿಕ. ನಾನು ಸುಸ್ತಾಗಿದ್ದೇನೆ. ನನ್ನ ಕಾಲುಗಳನ್ನು ಎತ್ತಿಡುವಷ್ಟು ಬಲವೂ ನನಗೆ ಇಲ್ಲವಾಗಿದೆ. ತಾವು ದಯಮಾಡಿ ನನ್ನ ಕಾಲುಗಳನ್ನು ದೇವರಿಲ್ಲದ ಕಡೆಗೆ ತಿರುಗಿಸಿಡಿರಲ್ಲ. ಮುಲ್ಲಾನು ನಾನಕರ ಕಾಲುಗಳನ್ನೆಳೆದು ಬೇರೆ ದಿಕ್ಕಿನತ್ತ ತಿರುಗಿಸಿದ. ಎಲ್ಲರನ್ನೂ ಸೋಜಿಗಗೊಳಿಸುತ್ತ, ಪವಿತ್ರ ಕಾಬಾ ಕೂಡ ಕಾಲುಗಳ ಜತೆಯಲ್ಲೇ ತಿರುಗಿತ್ತು. ಮುಲ್ಲಾಗಳು ಮಹಾತ್ಮನಾದ ಗುರುವಿನ ಪಾದಕ್ಕೆರಗಿದರು. ದೇವರಿಲ್ಲದ ಸ್ಥಳವಿಲ್ಲವೆಂದು ಅವರು ಅರಿತುಕೊಂಡರು.

ಯಾಕೆ ಈಗ ಆ ಕತೆ ನೆನಪಿಗೆ ಬಂದದ್ದು? ಮೈಯಿಡೀ ನೋವು. ಮನಸ್ಸಿನಲ್ಲಿ ಕುಟುಂಬದವರ ಬಗೆಗಿನ ಆತಂಕ. ಮನುಷ್ಯರು ಮಾಡಿದ ದುಷ್ಟ ಕೃತ್ಯಕ್ಕೆ ಮತವನ್ನೇಕೆ ದೂರಬೇಕು?

ಗುರುದಯಾಲ್ ಸಿಂಗ್‌ನ ಮನಸ್ಸು ಗುರುವಿನ ಸಿದ್ಧಿಗಳತ್ತ ಹೊರಳಿತು:

ಗುರುನಾನಕ್ ಮೃತ್ಯುಶಯ್ಯೆಯಲ್ಲಿರುವರೆಂದು ಗೊತ್ತಾದಾಗ ಗುರುವಿನ ಅನುಯಾಯಿಗಳಾದ ಹಿಂದೂಗಳೂ ಮುಸ್ಲಿಮರೂ ಅವರ ಸುತ್ತಲೂ ಒಟ್ಟಾದರು. ಮರಣಾನಂತರ ಗುರುವಿನ ಪಾರ್ಥಿವ ಶರೀರವನ್ನು ಹೂಳಲು ಬಿಡಬೇಕೆಂದು ಮುಸ್ಲಿಮರೂ ಗಂಧದ ಚಿತೆಯಲ್ಲಿ ಸುಡಲು ಬಿಡಬೇಕೆಂದು ಹಿಂದೂಗಳೂ ವಿನಂತಿಸಿಕೊಂಡರು. ಈ ವಿಚಾರವಾಗಿ ಅನುಯಾಯಿಗಳ ನಡುವೆ ವಿವಾದ ಶುರುವಾಯಿತು. ಗುರು ಎರಡು ಗುಂಪುಗಳನ್ನೂ ಸಂತೈಸಿದರು: ಮಕ್ಕಳಿರಾ, ನೀವು ಜಗಳವಾಡಬೇಡಿ. ಹಿಂದೂಗಳು ನನ್ನ ಬಲಬದಿಯಲ್ಲೂ ಮುಸ್ಲಿಮರು ನನ್ನ ಎಡಬದಿಯಲ್ಲೂ ಹೂವುಗಳನ್ನು ಚೆಲ್ಲಲಿ. ಮರುದಿನ ಯಾರ ಹೂವು ಬಾಡಲಿಲ್ಲವೊ ಅವರು ನನ್ನ ಅಂತ್ಯಕ್ರಿಯೆಗಳನ್ನು ಇಚ್ಛಾನುಸಾರ ಮಾಡಿಕೊಳ್ಳಿ.

ಇಷ್ಟು ಹೇಳಿ ಗುರು ಧ್ಯಾನಮಗ್ನರಾದರು. ಅದಕ್ಕೂ ಮೊದಲು ಬಿಳಿ ವಸ್ತ್ರದಿಂದ ಸ್ವತಃ ಮುಸುಕೆಳೆದುಕೊಂಡರು ಹಾಗೂ ಜಪ್‌ಜಿಯ ಕೊನೆಯ ಸೋಹಿಲಗಳನ್ನು ಉರು ಹೊಡೆದರು. ಗುರುದೇವನ ಅಂತ್ಯಾಭಿಲಾಷೆಗೆ ಅನುಗುಣವಾಗಿ ಹಿಂದೂಗಳು ಬಲಬದಿಯಲ್ಲೂ ಮುಸ್ಲಿಮರು ಎಡಬದಿಯಲ್ಲೂ ಹೂ ಚೆಲ್ಲಿದರು. ಯಾರು ಹರಡಿದ ಹೂಗಳು ಮೊದಲು ಬಾಡುವುದೆಂದು ತಿಳಿದುಕೊಳ್ಳುವ ಸಲುವಾಗಿ ಅವರು ರಾತ್ರಿಯಿಡೀ ನಿದ್ದೆಗೆಟ್ಟು ಕಾದು ಕುಳಿತರು. ಮರುದಿನ ಬಿಳಿ ಬಟ್ಟೆಯನ್ನು ಸರಿಸಿ ನೋಡಿದಾಗ ಗುರುದೇವನ ಕಳೇಬರವೇ ಕಾಣೆ! ಎರಡು ಪಾರ್ಶ್ವಗಳಲ್ಲೂ ಹರಡಿದ್ದ ಹೂವುಗಳು ಬಾಡಿರಲಿಲ್ಲ.

ಗುರುದಯಾಲ್ ಸಿಂಗ್ ನೋವಿನೊಂದಿಗೆ ಜ್ಞಾಪಿಸಿಕೊಂಡ: ಗುರುನಾನಕರಿಗೆ ಈಗ ಅನುಯಾಯಿಗಳಿಲ್ಲ. ಹಿಂದೂಗಳೂ ಸಿಕ್ಖರೂ ಮುಸ್ಲಿಮರೂ ಮಾತ್ರವೇ ಇರುವರು. ಅವರು ಹರಡುವ ಹೂವುಗಳಷ್ಟೂ ಬಾಡಿ ಕರಟಿ ಹೋಗುತ್ತಿವೆ.

ಆತ ಮೆಲ್ಲಗೆ ಎದ್ದ. ಹಗಲ ಬೆಳಕು ಹರಡುವ ಮುನ್ನ ಹೇಗಾದರೂ ಮನೆ ತಲಪಬೇಕು. ಈ ವೇಷದಲ್ಲಿ ಯಾರೂ ತನ್ನನ್ನು ಗುರುತಿಸಲಾರರು. ಮತದ ಬಾಹ್ಯ ಲಾಂಛನಗಳಿಲ್ಲವಾದುದರಿಂದ ಯಾರೂ ತನಗೆ ಶಾರೀರಿಕ ಹಿಂಸೆಯನ್ನು ನೀಡಲಾರರು. ಆತ ಕಾಲುಗಳನ್ನು ಎಳೆಯುತ್ತ ಎಳೆಯುತ್ತ ರಸ್ತೆಯ ಅಂಚಿನಲ್ಲೇ ನಡೆಯತೊಡಗಿದ.

* * *



## ಅಧ್ಯಾಯ ೧೧

## ಗುರುದೇವ್ ಸಿಂಗ್

ಸೋಫಾದ ಮೇಲೆ ಒರಗಿ ಕುಳಿತ ತುಸು ಮಂಪರಿಗೊಳಗಾಗಿರಬೇಕು. ಮಂಪರಿನಲ್ಲಿ ಅಸ್ಪಷ್ಟವಾದ ಭಯಾನಕ ಕನಸುಗಳನ್ನು ಕಂಡನು. ಬೆಂಕಿ ನಾಲಿಗೆಗಳನ್ನು ಚಾಚಿ ನೆಕ್ಕಿ ಚಪ್ಪರಿಸುತ್ತಿರುವ ನರೋತ್ತಂ ಸಿಂಗನ ಇದ್ದಲಿ ಬಣ್ಣಕ್ಕೆ ತಿರುಗಿದ್ದ ಒಡಲು. ಸುತ್ತಲೂ ಬಿಳಿವಸ್ತ್ರ ಧರಿಸಿರುವ ಸ್ತ್ರೀಯರು ಬೊಬ್ಬೆ ಹಾಕಿ ವಿಲಪಿಸುತ್ತಿರುವರು. ವಿಲಪಿಸುತ್ತಿರುವವರ ಗುಂಪಿನಲ್ಲಿ ದರ್ಶನ್ ಮಾತ್ರ ಸ್ಪಷ್ಟವಾಗಿ ಕಾಣಿಸಿದಳು. ಅವಳ ಕೂದಲು ಪೂರ್ತಿ ಕೆದರಿಕೊಂಡಿದೆ. ಭುಗಿಲೇಳುತ್ತಿರುವ ಬೆಂಕಿ ಜ್ವಾಲೆಗಳ ಮೂಲಕ ನೋಡುವಾಗ ಅವಳ ರೂಪು ನಿರಂತರ ಚಲಿಸುತ್ತಿರುವಂತೆ ಅನ್ನಿಸಿತು ಆತನಿಗೆ. ಆ ಜ್ವಾಲೆಯಲ್ಲಿ ಅವಳು ಕರಗಿ ಇಲ್ಲವಾಗುತ್ತಿರುವಳೆ? ಸಮೀಪಿಸುತ್ತಿರುವ ಫಯರ್ ಇಂಜಿನ್‌ನ ಗಂಟೆಗಳ ಮೊರೆತ ಕೇಳಿದಾಗ ಸಮಾಧಾನವೆನ್ನಿಸಿತು. ಫಯರ್ ಇಂಜಿನ್ ಬೆಂಕಿ ನಂದಿಸಬಹುದೆಂದೂ ಆಗ ನರೋತ್ತಮ್ ಸಿಂಗ್ ಮರು ಹುಟ್ಟು ಪಡೆದಂತೆ ಎದ್ದೇಳಬಹುದೆಂದೂ ಅಂದುಕೊಂಡಾಗ ತುಸು ನೆಮ್ಮದಿ ಮೂಡಿತು ಆತನಿಗೆ. ಆದರೆ, ದರ್ಶನ್? ಅವಳು ಹೊತ್ತಿ ಉರಿಯುತ್ತಿರಲಿಲ್ಲ. ಅವಳು ಸ್ವತಃ ಅಗ್ನಿಜ್ವಾಲೆಯಾಗಿ ಪರಿವರ್ತಿಸುತ್ತಿರುವಳು.

ಹತ್ತಿರವಾಗುತ್ತಿರುವ ಫಯರ್ ಇಂಜಿನ್‌ನ ಅವಿರತ ಗಂಟೆ ಧ್ವನಿ. ಮಂಪರಿನಿಂದ ಎಚ್ಚೆತ್ತನಾತ. ಕೇಳಿಸಿದ್ದು ಫೋನ್‌ನ ಗಂಟೆ. ಫೋನ್ ಎತ್ತಿ ಆಲಿಸಿದ. ಮರುಬದಿಯಿಂದ ಗುರುದೇವ್‌ಸಿಂಗರ ಪರಿಚಿತ ಸ್ವರ. ವಿತ್ತ ಸಚಿವಾಲಯದ ಅಧೀನ ಕಾರ್ಯದರ್ಶಿ ಆತ. ಎರಡು ವರ್ಷಗಳಿಗಿಂತಲೂ ಹೆಚ್ಚು ಕಾಲ ಆತ ಮತ್ತು ರವಿ ಅಕ್ಕಪಕ್ಕದ ಕೊಠಡಿಗಳಲ್ಲಿ ಸಹೋದ್ಯೋಗಿಗಳಾಗಿದ್ದರು. ಆ ಅವಧಿಯಲ್ಲಿ ರವಿಗೆ ಮಧ್ಯಾಹ್ನದ ಊಟ ಒಂದು ಸಮಸ್ಯೆಯಾಗಿರಲಿಲ್ಲ. ಗುರುದೇವ್‌ಸಿಂಗರ ಬ್ರೀಫ್‌ಕೇಸ್‌ನಲ್ಲಿ ರವಿ, ಭಾಭಿ ಎಂದು ಕರೆಯುವ ಗುರುದೇವ್ ಸಿಂಗರ ಪತ್ನಿ ಪ್ರತಿದಿನವೂ ತುಪ್ಪದಲ್ಲಿ ಬೇಯಿಸಿದ ಪರೋಟಗಳನ್ನಿರಿಸುತ್ತಿದ್ದಳು. ಬಾಯಲ್ಲಿ ನೀರೂರಿಸುವ ಸ್ವಾದಿಷ್ಟವಾದ ಸಬ್ಜಿಗಳನ್ನು ಕೂಡ. ಆಲುಮಟ್ಟರ್, ಪಫ್ ಮಾಡಲಾದ ಶಿಮ್ಲಾಮಿರ್ಚ್, ಅಮ್‌ಚೂರ್ ತುಂಬಿ ಕರಿಯಲಾದ ಹಾಗಲ ವಗ್ಗೈರೆಗಳು, ಫೂಲ್‌ಗೋಭಿ ಮತ್ತು

ಟೊಮೇಟೊಗಳಿಂದ ತಯಾರಿಸಲಾಗುವ ಹುಳಿ. ಬೇಸಗೆ ಕಾಲವಾಗಿದ್ದರೆ ರಾಯತ ಅಥವಾ ದಹಿವಡ..... ಆಗಿನ ಅರ್ಧ ತಾಸು ಲಂಚ್ ಟೈಂ ಆಹ್ಲಾದಕರವಾಗಿತ್ತು. ಪುಷ್ಕಳವಾದ ಊಟಕ್ಕೆ ಅನುಪಾನವೆಂಬಂತೆ ಸರ್ದಾರ್ ಗುರುದೇವ್‌ಸಿಂಗ್ ಧಾರಾಳವಾಗಿ ತಮಾಷೆಗಳನ್ನು ಸುರಿದು ಕೊಡುತ್ತಿದ್ದರು. ಎಲ್ಲಾ ತಮಾಷೆಗಳಲ್ಲೂ ಅಪಹಾಸ್ಯಕ್ಕೆ ಗುರಿಯಾಗುವವರು ಸರ್ದಾರ್ಜಿಗಳೆ. ಒಂದೊಂದು ತಮಾಷೆಯೂ ಗೊಳ್ಳನೆ ನಗೆಯ ಮಾಲೆಪಟಾಕಿಗಳಲ್ಲಿ ಕೊನೆಗೊಳ್ಳುವಾಗ ಗುರುದೇವ್ ಸಿಂಗ್ ಕೈ ಚಾಚುತ್ತಾರೆ. ಬೆರಳ ತುದಿಗಳಲ್ಲಿ ಸಾಸಿವೆಯೆಣ್ಣೆಯಲ್ಲಿ ಒಗ್ಗರಣೆ ಮಾಡಲಾದ ಬೆಳ್ಳುಳ್ಳಿಯ ಜಿಡ್ಡು ಮತ್ತು ಅರಿಶಿನದ ಬಣ್ಣಗಳಿರುತ್ತಿದ್ದರೂ ನಗುವಾಗ ಪರಸ್ಪರ ಕೈ ಕುಲುಕುತ್ತಲೇ ನಗಬೇಕೆಂಬ ಕಡ್ಡಾಯ ಮನೋಭಾವದವರು ಗುರುದೇವ್‌ಸಿಂಗ್.

ಗುರುದೇವ್‌ಸಿಂಗರ ಮನಸ್ಸಿನ ಮೂಟೆಯಲ್ಲಿರುವ ಸರ್ದಾರ್ಜಿ ಕತೆಗಳಿಗೆ ಮಿತಿಯೆಂಬುದೇ ಇಲ್ಲ. ನಾರ್ತ್ ಬ್ಲಾಕ್‌ನಿಂದ ಮತ್ತೊಂದು ಕಟ್ಟಡಕ್ಕೆ ರವಿ ವರ್ಗಾವಣೆಗೊಂಡರೂ ಗುರುದೇವ್‌ರೊಂದಿಗಿನ ಆತ್ಮೀಯತೆ ಮಾತ್ರ ಮುಂದುವರಿಯುತ್ತಲೇ ಇದೆ. ಆಫೀಸ್ ಕೆಲಸಗಳ ಒತ್ತಡಗಳ ನಡುವೆ ಯಾವಾಗಲಾದರೊಮ್ಮೆ ರಿಲಾಕ್ಸ್ ಮಾಡಬೇಕೆಂದೆನ್ನಿಸಿದಾಗ ರವಿ ಅವರನ್ನು ಫೋನ್‌ನಲ್ಲಿ ಕರೆಯುತ್ತಾರೆ. ಕುಶಲಾನ್ವೇಷಣೆಯ ಬಳಿಕ ಕೇಳಿಕೊಳ್ಳುತ್ತಾನೆ: ಸರ್ದಾರ್ಜಿ ಏಕ್ ಚುಟ್‌ಕುಲಾ ಸುನಾವೊ?

ಅವರು ಹೇಳತೊಡಗುತ್ತಾರೆ. ಜ್ಯೋತಿಷ ಗೊತ್ತಿರುವ ಓರ್ವ ಬ್ರಾಹ್ಮಣ ಮತ್ತು ಓರ್ವ ಸರ್ದಾರ್ಜಿ ಸ್ನೇಹಿತರಾದರು. ತಲೆಯನ್ನು ಲಾಳಾಕಾರದಲ್ಲಿ ಬೋಳಿಸಿ ಹಿಂಬದಿಯಲ್ಲಿ ಸಪೂರ ಜುಟ್ಟಿರುವ ಆ ಬ್ರಾಹ್ಮಣನು ಹೇಳುವ ಭವಿಷ್ಯಗಳು ಯಾವತ್ತೂ ತಪ್ಪುತ್ತಿರಲಿಲ್ಲ. ಉದ್ಯೋಗಾರ್ಥಿಗಳು ಭವಿಷ್ಯ ತಿಳಿಯಲು ಹೋದರೆ ನೌಕರಿ ದೊರೆಯುವ ದಿನಾಂಕ ಮಾತ್ರವಲ್ಲ ಯಾವ ಡಿಪಾರ್ಟ್‌ಮೆಂಟ್‌ನಲ್ಲಿ ದೊರೆಯುತ್ತದೆ ಎಂಬುದನ್ನು ಕೂಡ ಖಚಿತವಾಗಿ ಹೇಳುತ್ತಾನೆ. ಬಸುರಿಯರು ಆತನನ್ನು ಸಮೀಪಿಸಿದರೆ ಹೆರಿಗೆಯ ದಿನಾಂಕ ಅಷ್ಟೇ ಅಲ್ಲ, ಮಗು ಗಂಡೋ, ಹೆಣ್ಣೋ ಎಂಬುದನ್ನು ಕೂಡ ಭವಿಷ್ಯ ಹೇಳುತ್ತಾನೆ. ಬ್ರಾಹ್ಮಣನ ಈ ಸಾಮರ್ಥ್ಯದ ಬಗ್ಗೆ ಸರ್ದಾರ್ಜಿಗೆ ಅಪಾರ ಆದರ ಉಂಟಾಯಿತು. ಒಂದು ದಿನ ಸರ್ದಾರ್ಜಿ ಬ್ರಾಹ್ಮಣನೊಡನೆ ಭವಿಷ್ಯ ಹೇಳುವಿಕೆಯ ಗುಟ್ಟೇನೆಂದು ಪ್ರಶ್ನಿಸಿದ. ಹಿಂಬದಿಯಲ್ಲಿ ಗಂಟಿಕ್ಕಿಕೊಂಡಿರುವ ಜುಟ್ಟನ್ನು ಮುಟ್ಟಿತೋರಿಸಿ ಬ್ರಾಹ್ಮಣ ಹೇಳಿದ: ಈ ಜುಟ್ಟಿನಲ್ಲಿದೆ ನನ್ನ ಗೆಲುವಿನ ಗುಟ್ಟು. ಇದು ನನ್ನ ಏರಿಯಲ್. ಕುತ್ತಿಗೆಯ ತನಕ ನೀರಿನಲ್ಲಿಳಿದು ನಿಂತು ಪ್ರತಿದಿನ ನಾನು ದೇವರೊಡನೆ ಪ್ರಾರ್ಥಿಸುತ್ತೇನೆ. ನಾನು ಆ ದಿನ ಭವಿಷ್ಯ ಹೇಳಬೇಕಾದ ಸಂಗತಿಗಳನ್ನೆಲ್ಲ ದೇವರು ಈ ಏರಿಯಲ್ ಮೂಲಕ ನನ್ನ ಮಿದುಳಿಗೆ ಆವಾಹಿಸುತ್ತಾನೆ.

ಸರ್ದಾರ್ಜಿಗೆ ಆಶ್ಚರ್ಯವಾಯಿತು. ಬ್ರಾಹ್ಮಣನಿಗಿಂತ ನೂರುಪಟ್ಟು ಹೆಚ್ಚು



ಕೂದಲಿವೆ ತನ್ನ ತಲೆ ಮೇಲಿನ ಪಗಡಿಯೊಳಗೆ. ಬ್ರಾಹ್ಮಣನ ಉಪಾಯವನ್ನು ತಾನು ಬಳಸಿದ್ದಾದರೆ ತನ್ನ ಭವಿಷ್ಯ ನುಡಿ ನೂರುಪಟ್ಟು ಹೆಚ್ಚು ನಿಜವಾಗುತ್ತದೆ. ಸರ್ದಾರ್ಜಿ ಕೂಡ ಪ್ರತಿದಿನವೂ ಹೊಳೆಯ ನೀರಿನಲ್ಲಿಳಿದು ನಿಂತು ಪ್ರಾರ್ಥಿಸತೊಡಗಿದ. ಒಂದು ತಿಂಗಳ ಪ್ರಾರ್ಥನೆಯ ಬಳಿಕ ಸರ್ದಾರ್ಜಿಯೂ ಜ್ಯೋತಿಷ್ಯ ಮತ್ತು ಭವಿಷ್ಯ ಹೇಳುವಿಕೆಗಳನ್ನು ಆರಂಭಿಸಿದ. ಆದರೆ, ಸರ್ದಾರ್ಜಿಯ ಭವಿಷ್ಯ ನುಡಿಗಳಾವುದೂ ನಿಜವಾಗಲಿಲ್ಲ. ಗಂಡು ಮಗುವನ್ನು ಹೆರುವಳೆಂದು ಹೇಳಲ್ಪಟ್ಟವಳು ಹೆಣ್ಣು ಮಗುವಿಗೆ ಜನ್ಮವಿತ್ತಳು. ಸರಕಾರಿ ನೌಕರಿ ಪಡೆಯುವನೆಂದು ಹೇಳಲಾದ ಯುವಕ ಯಾವುದೋ ದಾವೆಯಲ್ಲಿ ಸಿಲುಕಿ ಜೈಲು ಸೇರಿದ. ಐ.ಎ.ಎಸ್. ಅಧಿಕಾರಿಯ ಮಡದಿಯಾಗುವಳೆಂದು ಹೇಳಲ್ಪಟ್ಟ ಯುವತಿ ಡ್ರೈವರ್ ಜತೆ ಪಲಾಯನ ಮಾಡಿ ಅವನನ್ನೇ ಮದುವೆಯಾದಳು.

ಬಹಳ ವ್ಯಥೆಯೊಂದಿಗೆ ಸರ್ದಾರ್ಜಿ ಪುನಃ ಬ್ರಾಹ್ಮಣನನ್ನು ಸಮೀಪಿಸಿದ. ಬ್ರಾಹ್ಮಣ ಸರ್ದಾರ್ಜಿಯನ್ನು ಸಾಂತ್ವನಗೊಳಿಸಿದ. ತಪ್ಪು ನಿನ್ನದಲ್ಲ. ನಿನ್ನ ಗಡ್ಡದ್ದು. ಏರಿಯಲ್ ಆಗಿ ಜುಟ್ಟು ಕಾರ್ಯ ನಿರ್ವಹಿಸುವಾಗ ಅರ್ತ್ ಆಗಿ ಪ್ರವರ್ತಿಸುತ್ತದೆ ಗಡ್ಡ. ಜುಟ್ಟಿನ ಮೂಲಕ ಒಳಹೋಗುವ ಜ್ಞಾನ, ಗಡ್ಡದ ಮೂಲಕ ನೀರಿನಲ್ಲಿ ತೇಲಿ ಹೋಗುತ್ತದೆ!

ಫೋನ್‌ನ ಆಚೆಗೆ ಗೊಳ್ಳನೆಯ ನಗೆ. ಯಾಂತ್ರಿಕವಾಗಿ ರವಿಯ ಕೈ ಚಾಚಲ್ಪಟ್ಟಿತು. ಗುರುದೇವ್‌ಸಿಂಗ್ ಕೂಡಾ ಆ ಕಡೆಯಿಂದ ಕೈ ಚಾಚಿರಬಹುದು. ಅಲ್ಲದೆ ಆಗಲೇ ಹೇಳಿಯೂ ಹೇಳಿದರು. ಫೋನ್ ಮೂಲಕ ತಮಾಷೆ ಹೇಳಲು ಮಜಾ ಇಲ್ಲ. ಕೈ ಕುಲುಕಲು ಸಾಧ್ಯವಾಗುವುದಿಲ್ಲವಲ್ಲ?

ಸ್ವತಃ ಗುರುದೇವ್‌ಸಿಂಗರ ಕುರಿತೇ ಒಂದು ಕತೆ ಇದೆ. ಅರುವತ್ತನೆಯ ದಶಕದ ಕೊನೆಯಲ್ಲಿ ಕಾಂಗ್ರೆಸ್ ಎರಡು ಹೋಳಾಗುವುದಕ್ಕೆ ನಿಕಟ ಪೂರ್ವದ ಅವಧಿ. ಒಂದು ಬದಿಯಲ್ಲಿ ಇಂದಿರಾಗಾಂಧಿ ಮತ್ತು ಅವರ ಕಿಚನ್ ಕ್ಯಾಬಿನೆಟ್, ಮರುಬದಿಯಲ್ಲಿ ಸಿಂಡಿಕೇಟ್. ೧೯೬೭ರಲ್ಲಿ ಕಾಂಗ್ರೆಸ್ ಕಾರ್ಯಕಾರಿ ಸಮಿತಿ ರಾಜಧನ ರದ್ದು ಪಡಿಸುವುದರ ಕುರಿತು ಚರ್ಚಿಸಿತ್ತು. ಆಗ ಮೊರಾರ್ಜಿ ದೇಸಾಯಿಯವರು ಅದನ್ನು ರದ್ದುಪಡಿಸುವುದು ರಾಜರುಗಳೊಂದಿಗೆ ಮಾಡಿಕೊಳ್ಳಲಾದ ಒಡಂಬಡಿಕೆಯ ಅವಹೇಳನವೂ ನೈತಿಕ ಜವಾಬ್ದಾರಿಯಿಂದ ಮಾಡುವ ಪಲಾಯನವೂ ಆದೀತೆಂದು ವಾದಿಸಿದ್ದರು. ಅದೇ ವರ್ಷವೇ, ಬ್ಯಾಂಕ್‌ಗಳನ್ನು, ಜೀವವಿಮಾ ಸಂಸ್ಥೆಗಳನ್ನು ರಾಷ್ಟ್ರೀಕರಣ ಮಾಡುವುದರ ಕುರಿತು ಚರ್ಚೆಗಳು ನಡೆದಿದ್ದುವು. ಬಂಡವಾಳಗಾರರು ಸ್ಥಾಪಿಸಿ ಬಂಡವಾಳಗಾರರೇ ಆಡಳಿತ ನಡೆಸುತ್ತಿರುವ ಬ್ಯಾಂಕುಗಳು ಕಾರ್ಯವೆಸಗುತ್ತಿದ್ದದ್ದು ಕೇವಲ ಬಂಡವಾಳಗಾರರ ಹಿತಾಸಕ್ತಿಗಳನ್ನೆಲ್ಲ ಗುರಿಯಾಗಿರಿಸಿಕೊಂಡೇ ಆಗಿತ್ತಲ್ಲ. ಬ್ಯಾಂಕುಗಳು ಚಿಕ್ಕಪುಟ್ಟ ವ್ಯಾಪಾರಿಗಳಿಗೂ ರೈತರಿಗೂ ಹಳ್ಳಿಗರಿಗೂ ಕೈಗೆಟುಕಲಾರದಷ್ಟು ಎತ್ತರದಲ್ಲೇ ಇದ್ದವು.

ಗುಜರಾತ್‌ನ ಗಿರಣಿ ಮಾಲಕರ ದಲ್ಲಾಳಿ ವರ್ಗಗಳ ವಕ್ತಾರರಾಗಿದ್ದ ದೇಸಾಯಿಯವರಿಗೆ ವಿತ್ತಸಚಿವ ಎಂಬ ನೆಲೆಯಲ್ಲಿ ರಾಷ್ಟ್ರೀಕರಣ ಎಂಬ ಆಶಯ ಜೀರ್ಣವಾಗುವಂಥದ್ದಾಗಿರಲಿಲ್ಲ. ಕಾಂಗ್ರೆಸ್‌ನಲ್ಲಿದ್ದ ಸಮಾಜವಾದಿ ನಿಲುವಿನವರು ಯಂಗ್‌ಟರ್ಕ್‌ಗಳಾಗಿ ಮಾರ್ಪಟ್ಟರು. ಅವರೆಲ್ಲ ರಾಷ್ಟ್ರೀಕರಣದ ಅಗತ್ಯವನ್ನು ಸಾರ್ವಜನಿಕರ ಮುಂದೆ ಬಲವತ್ತಾಗಿ ಪ್ರತಿಪಾದಿಸಿದಾಗ ದೇಸಾಯಿಯವರಿಗೆ, ತಾನು ಏನಾದರೂ ಮಾಡಲೇಬೇಕೆಂಬ ಪರಿಸ್ಥಿತಿ ಎದುರಾಯಿತು. ಅವರು, ಸೋಶಿಯಲ್ ಕಂಟ್ರೋಲ್ ಎಂಬ ಆಶಯವನ್ನು ಮುಂದಿಟ್ಟರು. ರಾಷ್ಟ್ರೀಕರಣಕ್ಕಿಂತಲೂ ಯಶಸ್ವಿಯಾಗುತ್ತದೆ, ರಿಸರ್ವ್ ಬ್ಯಾಂಕ್‌ನ ಮೂಲಕ ವಾಣಿಜ್ಯ ಬ್ಯಾಂಕುಗಳ ಮೇಲಿನ ನಿಯಂತ್ರಣ ಎಂದು ಅವರು ವಾದಿಸಿದರು. ಬಡತನರೇಖೆ ಆಗ ಗುರುತಿಸಲ್ಪಟ್ಟಿರಲಿಲ್ಲ. ಆದರೂ ಬಡವರು, ಹಿಂದುಳಿದವರು, ಪರಿಶಿಷ್ಟ ಜಾತಿಯವರು ಮುಂತಾದವರು ಆಗಲೂ ಇದ್ದರು. ಅಂತಹ ಗ್ರಾಹಕರಿಗೆ ಉದಾರವಾಗಿ ಸಾಲನೀಡಲು ಬ್ಯಾಂಕ್‌ಗಳನ್ನು ಸೋಶಿಯಲ್ ಕಂಟ್ರೋಲ್ ಮೂಲಕ ನಿರ್ಬಂಧಿಸಬಹುದೆಂದೂ ಅದಕ್ಕೆ ಒಪ್ಪದ ಬ್ಯಾಂಕುಗಳನ್ನು ರಾಷ್ಟ್ರೀಕರಣ ಎಂಬ ಬ್ರಹ್ಮಾಸ್ತ್ರ ತೋರಿಸಿ ಬೆದರಿಸಬಹುದೆಂದೂ ಆಗಿತ್ತು ದೇಸಾಯಿಯವರ ವಾದ. ಪಾಟೀಲ್, ಕಾಮರಾಜ್, ನಿಜಲಿಂಗಪ್ಪ, ಸಂಜೀವರೆಡ್ಡಿ ಪ್ರಭೃತಿಗಳು ಒಳಗೊಂಡ ಸಿಂಡಿಕೇಟ್ ಬಣ ದೇಸಾಯಿಯವರನ್ನು ಬೆಂಬಲಿಸಿತ್ತು.

ಇಂದಿರಾಗಾಂಧಿಯಾದರೂ ಜನತೆಯ ನಾಡಿಬಡಿತವನ್ನು ಚೆನ್ನಾಗಿ ಅರ್ಥ ಮಾಡಿಕೊಂಡಿದ್ದರು. ನಾಟಕೀಯವಾಗಿ ಏನಾದರೂ ಮಾಡದಿದ್ದರೆ ಕಾಂಗ್ರೆಸ್‌ಗೆ ಭವಿಷ್ಯವಿರುವುದಿಲ್ಲವೆಂದೂ ಕಂಡುಕೊಂಡಿದ್ದರು. ಪಶ್ಚಿಮ ಬಂಗಾಳದಲ್ಲೂ ಆಂಧ್ರದಲ್ಲೂ ನಕ್ಸಲೈಟ್‌ಗಳೂ ಉಗ್ರವಾದಿಗಳೂ ಆಗಲೇ ವೇದಿಕೆಗೆ ತಲಪಿದ್ದರು. ಕಾಂಗ್ರೆಸ್‌ನ ಧೋರಣಾತ್ಮಕ ಕಾರ್ಯಕ್ರಮಗಳನ್ನು ಜನರ ಮಧ್ಯಕ್ಕೆ ಒಯ್ಯದಿದ್ದರೆ, ಸ್ಪಷ್ಟವಾಗಿಯೇ ಎಡದತ್ತ ವಾಲದಿದ್ದರೆ, ತನ್ನ ನೆಲೆ ಭದ್ರವಾಗದೆಂದು ತಿಳಿದುಕೊಂಡಿದ್ದರು. ಚಂದ್ರಶೇಖರ್, ಕುಮಾರ ಮಂಗಲಂ, ನಂದಿನಿಸತ್ಪಥಿ ಮತ್ತು ಚವಾಣರನ್ನೊಳಗೊಂಡ ಕಿಚನ್ ಕ್ಯಾಬಿನೆಟ್‌ನ ಸಲಹೆ ಕೂಡ ಅದೇ ಆಗಿತ್ತು.

ರಾಷ್ಟ್ರೀಕರಣ ಬೇಕೆ? ಸೋಶಿಯಲ್ ಕಂಟ್ರೋಲ್ ಸಾಕೆ? ಎಂಬ ನಿರ್ಣಾಯಕವೂ ಭಾರತದ ರಾಜಕೀಯದ ಮಟ್ಟಿಗೆ ಮಹತ್ತ್ವಪೂರ್ಣವೂ ಆದ ಪ್ರಶ್ನೆಗಳ ನಡುವೆ ಗುರುದೇವ್‌ಸಿಂಗರ ಸ್ಥಿತಿ ತುಸು ಕಷ್ಟಕ್ಕಿಟ್ಟುಕೊಂಡಿತ್ತು. ಆಗ ವಿತ್ತ ಸಚಿವಾಲಯದಲ್ಲಿ ಬ್ಯಾಂಕ್‌ಗಳಿಗೆ ಸಂಬಂಧಿಸಿದ ಪ್ರತ್ಯೇಕ ಡಿವಿಜನ್‌ಗಳು ಇರಲಿಲ್ಲ. ಬ್ಯಾಂಕ್ ಕಂಪೆನಿಗಳ, ರಿಸರ್ವ್ ಬ್ಯಾಂಕ್‌ನ ಮತ್ತು ಸ್ಟೇಟ್ ಬ್ಯಾಂಕ್‌ನ ಕಾರ್ಯಗಳನ್ನು ನೋಡಿಕೊಳ್ಳುತ್ತಾ ಇದ್ದದ್ದು ಕೇವಲ ಒಂದು ಸೆಕ್ಷನ್ ಮಾತ್ರವಾಗಿತ್ತು. ಅಂದು ಗುರುದೇವ್‌ಸಿಂಗ್ ಆ ಸೆಕ್ಷನ್‌ನ ಹೊಣೆಹೊತ್ತ ಅಂಡರ್ ಸೆಕ್ರೆಟರಿಯಾಗಿದ್ದರು. ಅವರಿಗೆ ಅಂದು ಒಂದು ಶುಕ್ರವಾರ ಸಂಜೆ ವಿತ್ತ ಸಚಿವರ ಕಚೇರಿಯಿಂದ



ರಾಷ್ಟ್ರೀಕರಣಕ್ಕೆ ವಿರೋಧವಾಗಿ ಹಾಗೂ ಸೋಶಿಯಲ್ ಕಂಟ್ರೋಲ್‌ನ ಪರವಾಗಿ ಒಂದು ಬ್ರೀಫ್ ತಯಾರಿಸಬೇಕು ಎಂದು ಒಂದು ಚೀಟಿ ಬಂದು ತಲಪಿತು. ಅದು, ವಿತ್ತ ಸಚಿವ ದೇಸಾಯಿಯವರ ನಿರ್ದೇಶನವೆಂಬುದು ಸ್ಪಷ್ಟವಾಗಿತ್ತು. ಗುರುದೇವ್‌ಸಿಂಗ್ ತತ್‌ಕ್ಷಣವೇ ಕಾರ್ಯಪ್ರವೃತ್ತರಾದರು. ರಿಸರ್ವ್ ಬ್ಯಾಂಕ್‌ನ ಸಂಬಂಧಪಟ್ಟ ಡೆಪ್ಯೂಟಿ ಗವರ್ನರ್‌ರ ಜತೆ ಚರ್ಚಿಸಿದರು. ಹಳೆಯ ದಾಖಲೆಗಳನ್ನು ಹುಡುಕಿ ತೆಗೆದರು. ತಕ್ಕಷ್ಟು ವ್ಯಾಪಕ ಹಾಗೂ ಕನ್‌ವಿನ್ಸಿಂಗ್ ಆದ ಒಂದು ಬ್ರೀಫ್‌ನ ಕರಡು ಶನಿವಾರ ರಾತ್ರಿಯಾಗುವಷ್ಟರಲ್ಲಿ ಸಿದ್ಧಗೊಳಿಸಿದರು. ಅದರ ಫಿನಿಶಿಂಗ್ ಸೆಟ್ ನಡೆಸುತ್ತಾ ಇದ್ದಾಗ, ಪ್ರಧಾನಮಂತ್ರಿಯ ಪ್ರಿನ್ಸಿಪಾಲ್ ಸೆಕ್ರೆಟರಿ ಹಕ್ಸರ್‌ರ ಆಫೀಸ್‌ನಿಂದ ಸೋಶಿಯಲ್ ಕಂಟ್ರೋಲ್‌ನ ವಿರೋಧವಾಗಿಯೂ ರಾಷ್ಟ್ರೀಕರಣದ ಪರವಾಗಿಯೂ ಒಂದು ಬ್ರೀಫ್ ತಯಾರಿಸಬೇಕು ಎಂಬ ಒಂದು ಗುಪ್ತ ನಿರ್ದೇಶನ ದೊರೆಯಿತು. ಕೇಂದ್ರ ಸರಕಾರದ ಕಾರ್ಯವೈಖರಿಯ ವೈಶಿಷ್ಟ್ಯ ಇದು–ಒಂದು ನಿರ್ದಿಷ್ಟ ವಿಷಯದ ಕುರಿತು, ಏನು ಬೇಕಾದರೂ ಸಂಬಂಧಪಟ್ಟ ಸೆಕ್ಷನ್‌ಗೆ ನಿರ್ದೇಶನಗಳು ಬರುತ್ತವೆ. ಕೆಲವೊಮ್ಮೆ ಪ್ರಧಾನಮಂತ್ರಿ ಮತ್ತು ಖಾತೆಯ ಮಂತ್ರಿ– ಇಬ್ಬರೂ ಪಾಲ್ಗೊಳ್ಳುವ ಸೆಮಿನಾರ್‌ಗಳಲ್ಲಿ ಇಬ್ಬರ ಭಾಷಣಗಳನ್ನು ಸಿದ್ಧಪಡಿಸಬೇಕಾದ ಆಫೀಸರ್ ಒಬ್ಬನೇ ಆಗಿರುತ್ತಾನೆ. ರಾಷ್ಟ್ರೀಕರಣ ವಿಚಾರದಲ್ಲೂ ಹಾಗೇನೇ ಸಂಭವಿಸಿತು. ಗುರುದೇವ್‌ಸಿಂಗರ ಹೆಗಲ ಮೇಲೆ ಭಾರೀ ದೊಡ್ಡ ಜವಾಬ್ದಾರಿ ಬಂದು ಬಿದ್ದಿತು. ರಾಜಕೀಯವಾಗಿ ವಿರುದ್ಧ ಧ್ರುವಗಳಲ್ಲಿ ನೆಲಸಿದ್ದ ಕಿಚನ್ ಕ್ಯಾಬಿನೆಟ್‌ನ ಹಾಗೂ ಸಿಂಡಿಕೇಟ್ ಗುಂಪಿನ ಪರಸ್ಪರ ವಿರುದ್ಧ ದೃಷ್ಟಿಕೋನಗಳಿಂದ ವಿಷಯವನ್ನು ಪ್ರತಿಪಾದಿಸಲು ಅವರು ನಿರ್ಬಂಧಿತರಾದರು.

ಗುರುದೇವ್‌ಸಿಂಗರ ಸಹಜವಾದ ಹಾಸ್ಯಪ್ರಜ್ಞೆ ಮಾತ್ರ ಆಗೆಲ್ಲ ಅವರ ನೆರವಿಗಿದ್ದಿತ್ತು. ಮೊದಲ ಬ್ರೀಫ್ ಸಿದ್ಧಪಡಿಸಿದೊಡನೆ ಅವರು ಉತ್ತರ ದಿಕ್ಕಿನಿಂದ ದಕ್ಷಿಣದೆಸೆಗೆ ತನ್ನ ಕುರ್ಚಿಯ ಸ್ಥಾನ ಬದಲಾಯಿಸಿದರು.

ವಾಹ್ ಗುರುವನ್ನು ಧ್ಯಾನಿಸಿ ಎರಡನೆಯ ಬ್ರೀಫ್ ಸಹ ಸಿದ್ಧಗೊಳಿಸಿದರು. ಎರಡನ್ನೂ ಚೊಕ್ಕವಾಗಿ ಡಬಲ್ ಸ್ಪೇಸ್‌ನಲ್ಲಿ ಟೈಪ್ ಮಾಡಿದರು.

ಸಚಿವರುಗಳಿಗಷ್ಟೇ ಮೀಸಲಾದ ಪ್ಯಾಡ್‌ನಲ್ಲಿ ಅಡಕಗೊಳಿಸಿ ಅತಿ ಗೋಪ್ಯ ಅತಿ ಶೀಘ್ರ ಎಂದೆಲ್ಲ ಹಣೆಪಟ್ಟಿಗಳನ್ನು ಹಚ್ಚಿ ಸೋಮವಾರ ಬೆಳಗ್ಗೆ ಹತ್ತು ಗಂಟೆಗೆ ಒಂದು ಪ್ಯಾಡನ್ನು ನಾರ್ತ್ ಬ್ಲಾಕ್‌ನ ಒಂದನೆಯ ಅಂತಸ್ತಿನಲ್ಲಿರುವ ವಿತ್ತಸಚಿವರ ಕಚೇರಿಗೂ ಇನ್ನೊಂದು ಪ್ಯಾಡನ್ನು ಸೌತ್‌ಬ್ಲಾಕ್‌ನಲ್ಲಿರುವ ಪ್ರಧಾನ ಮಂತ್ರಿಗಳ ಕಚೇರಿಗೂ ತಲಪಿಸಿದರು. ಅತಿ ಮಹತ್ತ್ವದ ಕಾರ್ಯವೊಂದನ್ನು ಯಶಸ್ವಿಯಾಗಿ ನಿರ್ವಹಿಸಿ ಪೂರ್ಣಗೊಳಿಸಿದ್ದೇನೆ ಎಂಬ ಕೃತಕೃತ್ಯತೆಯೊಂದಿಗೆ ಅವರು ತನ್ನ ಕ್ಯಾಬಿನ್‌ಗೆ ಮರಳಿ ಬಂದರು. ಬಳಿಕ ಹಿಂದೆ ಯಾವತ್ತೋ ಕೇಳಿ ಮರೆತಿದ್ದ ಕವ್ವಾಲಿಯ ಎರಡು ಸಾಲುಗಳನ್ನು ಗುನುಗತೊಡಗಿದರು. ಪ್ರಕೃತ ವರ್ಷದ

ಕಾನ್‌ಫಿಡೆನ್‌ಷಿಯಲ್ ವರದಿಯಲ್ಲಿ ಈ ಸಂಗತಿಯನ್ನು ಸೆಲ್ಫ್ ಅಸೆಸ್‌ಮೆಂಟ್ ಕಾಲಂನಲ್ಲಿ ವಿಶೇಷ ಒತ್ತುಕೊಟ್ಟು ದಾಖಲಿಸಬೇಕೆಂದೂ ಮನಸ್ಸಿನಲ್ಲಿ ಗಟ್ಟಿ ಮಾಡಿಕೊಂಡರು. ದೇಶದ ಅರ್ಥವ್ಯವಸ್ಥೆಯಲ್ಲಿನ ಕ್ರಾಂತಿಕಾರಿಯಾದ ಪಥ ಬದಲಾವಣೆಗೆ ತಾನಿತ್ತ ಕಿರುಕಾಣಿಕೆಯ ಬಗ್ಗೆ ತನ್ನನ್ನು ತಾನೆ ಅಭಿನಂದಿಸಿಕೊಂಡರು. ಮಿತ್ರರಲ್ಲಿ ಯಾರನ್ನಾದರೂ ಕರೆದು ಎರಡು ಸರ್ದಾರ್ ಜೋಕ್ ಹಾರಿಸಿ ಗೊಳ್ಳನೆ ನಗಬೇಕೆಂದು ಯೋಚಿಸುತ್ತಿರುವಾಗ ಇಂಟರ್‌ಕಾಂ ಸದ್ದು ಮಾಡಿತು.

ಫೋನ್ ವಿತ್ತ ಖಾತೆಯ ಕಾರ್ಯದರ್ಶಿಯದ್ದು; ಆತನ ಕೋಣೆಗೆ ಹೋಗಬೇಕೆಂಬ ಆಜ್ಞೆ. ಬ್ರೀಫ್‌ಗಳ ಸಮರ್ಪಕತೆಯನ್ನು ಎತ್ತಿ ಹೇಳಿ ಅಭಿನಂದಿಸಲಿಕ್ಕೇ ಇರಬಹುದು ಎಂದುಕೊಂಡರು. ಗುರುದೇವ್‌ಸಿಂಗ್ ಕೋಣೆಗೆ ಹೋದಾಗ ವಿತ್ತ ಕಾರ್ಯದರ್ಶಿಯ ಕೆಂಪಡರಿದ್ದ ಮುಖ ಗಂಟಿಕ್ಕಿಕೊಂಡಿತ್ತು. ಆತ ಧ್ವನಿಯೆತ್ತರಿಸಲಿಲ್ಲ. ಆದರೆ ಒಂದು ಗರ್ಜನೆಗಿಂತಲೂ ಹೆಚ್ಚು ಮೊರೆತವಿತ್ತು ಆತನ ಮಾತುಗಳಿಗೆ.

ಮಿಸ್ಟರ್ ಗುರುದೇವ್‌ಸಿಂಗ್, ಯೂ ಮೇ ಪ್ರೊಸೀಡ್ ಆನ್ ಲೀವ್ ಇಮ್ಮಿಡಿಯಟ್‌ಲಿ.

ಗುರುದೇವ್‌ಸಿಂಗರಿಗೆ ಏನೂ ಗೊತ್ತಾಗಲಿಲ್ಲ. ಯಾಕೆ ತಾನು ಕಡ್ಡಾಯವಾಗಿ ರಜೆಯಲ್ಲಿ ಹೋಗಬೇಕೆಂದು ಕೇಳಬೇಕೆಂದೆನ್ನಿಸಿತ್ತು. ಆದರೆ ಗಂಟಲು ಬತ್ತಿ ಒಂದು ಮರುಭೂಮಿಯಾಗಿ ಮಾರ್ಪಟ್ಟಿತ್ತು. ಮಾತುಗಳು ಹೊರಬರುತ್ತಾ ಇಲ್ಲ. ಕಾಲುಗಳು ಕುಸಿಯುತ್ತಿರುವಂತೆ ಭಾಸವಾಯಿತು ಗುರುದೇವ್‌ಸಿಂಗರಿಗೆ.

ಏನನ್ನೂ ಪ್ರಶ್ನಿಸಲಿಕ್ಕಾಗದೆ ಗುರುದೇವ್‌ಸಿಂಗ್ ಹಿಂತಿರುಗಿ ನಡೆಯತೊಡಗಿದರು.

ಆಗ ಸೆಕ್ರೆಟರಿಯ ಶಾಂತವಾದ ಧ್ವನಿ.

ಅಯಾಮ್ ಸಾರಿ ಗುರುದೇವ್, ದೋಸ್ ನೋಟ್ಸ್ ವೇರ್ ಬ್ರಿಲ್ಲ್ಯಂಟ್ ಬಟ್ ಯೂ ಡೆಲಿವರ್ಡ್ ದೆಂ ರಾಂಗ್‌ಲಿ.

ಮೊದಲು ಗೊತ್ತಾಗಲಿಲ್ಲ. ಬಳಿಕ ಸ್ಪಷ್ಟವಾಯಿತು. ಪ್ರಧಾನಮಂತ್ರಿಗೆ ಕೊಡತಕ್ಕದ್ದನ್ನು ವಿತ್ತಸಚಿವರಿಗೂ ವಿತ್ತಸಚಿವರಿಗೆ ಕೊಡಬೇಕಾದುದನ್ನು ಪ್ರಧಾನಮಂತ್ರಿಗೂ ಕೊಟ್ಟಿದ್ದರು. ಗುರುದೇವ್‌ಸಿಂಗ್! ಸಾಲದೇನು?

ವರ್ಷಗಳ ಬಳಿಕ ಗುರುದೇವ್, ಬೆಳ್ಳುಳ್ಳಿ ಮತ್ತು ಮಾವಿನಕಾಯಿ ಹುಡಿಯನ್ನು ಬೆರೆಸಿ ಸ್ವಾದ ಹೆಚ್ಚಿಸಿದ್ದ 'ಟಿಂಡದ' ತುಣುಕುಗಳನ್ನು ಬಾಯಿಗೆ ಹಾಕಿ ಆಸ್ವಾದಿಸುತ್ತಾ ಆ ಸಂದರ್ಭವನ್ನು ನೆನಪುಮಾಡಿಕೊಂಡಿದ್ದರು. ಇಷ್ಟೊಂದು ಒಳ್ಳೆಯ ತಮಾಷೆ ಕೇಳಿದಾಗ ಗಟ್ಟಿಯಾಗಿ ನಗಲು ಸಾಧ್ಯವಾಗದೆ, ಕೈಚಾಚಿ ಸೆಕ್ರೆಟರಿಯ ಕೈಕುಲುಕಿ ಕಮಾಲ್ ಕರ್‌ದಿಯಾ ಆಪ್ನೆ ಎಂದು ಹೇಳಲು ಸಾಧ್ಯವಾಗದ ಬಗೆಗಿನ ನೋವಾಗಿತ್ತು ಗುರುದೇವ್ ಸಿಂಗ್‌ರನ್ನು ಕಾಡುತ್ತಿದ್ದದ್ದು. ಅಂಡರ್ ಸೆಕ್ರೆಟರಿಯಿಂದ ಡೆಪ್ಯೂಟಿ ಸೆಕ್ರೆಟರಿ ಹುದ್ದೆಗೇರುವುದು ವಿಳಂಬವಾಗಲು ಆ ಅಚಾತುರ್ಯ ಕಾರಣವಾಗಿತ್ತು.



ಸಿಂಡಿಕೇಟ್ ಮತ್ತು ಇಂದಿರಾರ ನಡುವೆ ರಾಷ್ಟ್ರೀಕರಣಕ್ಕೆ ಸಂಬಂಧಿಸಿ ಮತಭೇದವಿರದೆ ಇರುತ್ತಿದ್ದರೆ ಗುರುದೇವ್ ಈಗ ಕ್ಯಾಬಿನೆಟ್ ಸೆಕ್ರೆಟರಿಯಾಗಿರುತ್ತಿದ್ದರು. ಗುರುದೇವ್ ಕೂಡ ಸುಮ್ಮಗಿರಲಿಲ್ಲ. ತನ್ನದೇ ಆದ ರೀತಿಯಲ್ಲಿ ಸೇಡು ತೀರಿಸಿದರು. ಹೇಗೆನ್ನುವಿರಾ? ಈಗಲೂ ಅವರಿಗೆ ರಾಷ್ಟ್ರೀಕೃತ ಬ್ಯಾಂಕ್‌ನಲ್ಲಿ ಅಕೌಂಟ್ ಇಲ್ಲ. ಮಹಾಲಕ್ಷ್ಮಿ ಬ್ಯಾಂಕ್ ಲಿಮಿಟೆಡ್‌ನಲ್ಲೇ ಅವರ ಅಕೌಂಟ್ ಇದೆ.

ಆ ಗುರುದೇವ್ ಸಿಂಗರೇ ಈಗ ಫೋನ್ ಮಾಡಿದ್ದಾರೆ:

ಕಿಧರ್ ಹೈ ಯಾರ್... ಕೋಯಿ ನಯಿ ಜೋಕ್ ಹೈ ಕ್ಯಾ....

ಇದೆ ಮಿತ್ರಾ, ಒಂದು ದೊಡ್ಡ ತಮಾಷೆಯೇ ಇದೆ. ಆದರೆ ಫೋನ್‌ನಲ್ಲಿ ಹೇಳಲಿಕ್ಕಾಗುವುದಿಲ್ಲ.

ರವಿ ನಿದ್ರೆಯ ಜಡತೆಯಿಂದ ಪೂರ್ಣವಾಗಿ ಎಚ್ಚರಗೊಂಡದ್ದೂ ನಿನ್ನೆಯ ಬೆಚ್ಚಿಸುವ ಘಟನೆಗಳ ಸರಪಳಿಯಷ್ಟೂ ಮನಸ್ಸಿನಲ್ಲಿ ಮಿಂಚಿ ಮರೆಯಾದದ್ದು ಥಟ್ಟನೆಯಾಗಿತ್ತು.

ಏನಾಗಿದೆ ಗುರುದೇವ್?

ನಾನು ಘಾಜಿಯಾಬಾದ್‌ನ ರೈಲ್ವೆ ಸ್ಟೇಶನ್‌ನ ಪಬ್ಲಿಕ್ ಬೂತ್‌ನಿಂದ ಮಾತಾಡುತ್ತಿರೋದು. ದಯಮಾಡಿ ಒಂದು ಗಾಡಿ ತೆಗೆದುಕೊಂಡು ತತ್‌ಕ್ಷಣ ಬನ್ನಿ.

ಸರಿ, ವೈಟಿಂಗ್ ರೂಮ್‌ಗೆ ಹೋಗಿ ಕುಳಿತುಕೊಳ್ಳಿ. ನಾನು ಪಿಕ್‌ಅಪ್ ಮಾಡುತ್ತೇನೆ.

ನಹೀ ಯಾರ್... ಈ ಬೂತ್ನಲ್ಲೇ ಇರುತ್ತೇನೆ ನಾನು. ಬರುವಾಗ ಒಂದು ಲಂಗೋಟಿ. ಪೈಜಾಮ ಮತ್ತು ಶರಟನ್ನು ತರಲು ಮರೆಯಬೇಡಿ. ಸಮಜ್ ಗಯಾನಾ....

ಫೋನ್‌ನ ಆ ಕಡೆ ಗೊಳ್ಳನೆಯ ನಗೆಯೆದ್ದಿತು.

ನಿಜಕ್ಕೂ ಗೊಳ್ಳನೆಯ ಅಳುವಿಗಿಂತಲೂ ಶೋಚನೀಯವಾಗಿತ್ತು ಆ ಗೊಳ್ಳನೆಯ ನಗೆ.

ಜೀವ ಉಳಿಸಲಿಕ್ಕಾಗಿ ಟೆಲಿಫೋನ್ ಬೂತ್‌ನೊಳಗೆ ಅವಿತುಕೊಂಡ ಗುರುದೇವ್ ಸಿಂಗರ ಬಗ್ಗೆ ಯೋಚಿಸಿದಾಗ ರವಿಯ ಕಣ್ಣುಗಳು ತುಂಬಿದವು.

* * *

## ಅಧ್ಯಾಯ ೧೨

# ನೋವಿನಲ್ಲೂ ನಕ್ಕ ಮುಖ

ಮರಣದ ಮನೆಯ ಮೂಕತೆ ದೆಹಲಿಯಲ್ಲಿ ಗಲ್ಲಿ, ರಾಜವೀಥಿಗಳನ್ನಲ್ಲದೆ ಎಲ್ಲೆಲ್ಲೂ ವ್ಯಾಪಿಸಿದೆ. ಮರಣ ವಸ್ತ್ರದ ಮುಸುಕಿನೊಳಗಿನಿಂದ ಕಾಣಿಸುವ ಮೃತ ದೇಹದ ಮುಖದಂತೆ ಬಿಳಿಚಿಕೊಂಡಿದೆ ಮೂಡುತ್ತಲಿರುವ ಸೂರ್ಯಬಿಂಬ.

ರಸ್ತೆ ಬದಿಗಳಲ್ಲಿ ಜನರ ಚಿಕ್ಕ ಚಿಕ್ಕ ಗುಂಪುಗಳು ಬಿಸಿರೊಟ್ಟಿಯ ಹಾಗೆ ಮಾರಾಟವಾಗುತ್ತಿರುವ ವೃತ್ತ ಪತ್ರಿಕೆಗಳ ಸುತ್ತಲೂ ನಿಂತು ಹೆಚ್ಚಿನ ವಿವರಣೆಗಳನ್ನು ಅರಸುತ್ತಲಿದೆ.

ರವಿಗೆ ಡ್ರೈವರ್ ಲಕ್ಷ್ಮಣ್ ಎಲ್ಲಿಂದಲೊ ಒಂದು ಪತ್ರಿಕೆಯನ್ನು ದೊರಕಿಸಿ ತಂದುಕೊಟ್ಟನು–ಹಿಂದಿನ ದಿನದ ಹೃದಯವಿದ್ರಾವಕವಾದ ಕೊಲೆಯ ವಿವರಣೆಗಳು. ತಪ್ಪಿಸಿಕೊಂಡ ಮೂರನೆಯವನ ಬಗೆಗಿನ ಊಹಾಪೋಹಗಳು. ಬ್ಲೂಸ್ಟಾರ್ ಆಪರೇಶನ್‌ನ ಬಳಿಕ ಇಂದಿರಾಜಿಯ ಜೀವಕ್ಕೆ ಅಪಾಯವಿದೆ ಎಂದು ತಿಳಿದೂ ಮುಂಜಾಗ್ರತೆ ವಹಿಸದಿದ್ದ ಸೆಕ್ಯೂರಿಟಿಯಲ್ಲಿನ ಬಿರುಕುಗಳು. ಗುಂಡುಗಳು ತಗಲಿದ ಬಳಿಕ ಆಸ್ಪತ್ರೆಗೆ ತಲಪಿಸುವುದರಲ್ಲೂ ವೈದ್ಯಸೇವೆ ದೊರಕಿಸುವುದರಲ್ಲೂ ಸಂಭವಿಸಿದ್ದ ಕಾಲವಿಳಂಬ. ರಾಜೀವ್‌ಗಾಂಧಿಯನ್ನು ಆಯ್ಕೆ ಮಾಡುವುದರ ಮುನ್ನ ನೇಪಥ್ಯದಲ್ಲಿ ನಡೆದಿದ್ದ ಚಟುವಟಿಕೆಗಳು...

ಗುರುದೇವ್‌ಸಿಂಗ್ ಬಚ್ಚಿಟ್ಟುಕೊಂಡಿರುವ ಟೆಲಿಫೋನ್ ಬೂತ್ ಪತ್ತೆ ಹಚ್ಚಲು ರವಿಗೆ ಕಷ್ಟವಾಗಲಿಲ್ಲ. ಬಾಗಿಲ ಕೆಳಗಿನ ಸಂದಿಯ ಮೂಲಕ ಮೊದಲು ಕಾಣಿಸಿದ್ದು ಎರಡು ನಗ್ನ ಪಾದಗಳು. ಹೊರಗಿನಿಂದ ಪಿಸುದನಿಯಲ್ಲಿ ರವಿ ಕರೆದ: "ಗುರುದೇವ್!"

"ವಾಹ್ ಗುರೂಜಿ ಜಯ್ ಹೋ... ರವೀ ಬಹುತ್ ಶುಕ್ರಿಯಾ...."

ಆಫೀಸ್‌ಗೆ ಬಂದಿದ್ದ ಸಹೋದ್ಯೋಗಿಗಳಿಂದ ಎರವಲು ಪಡೆದಿದ್ದ ಪೈಜಾಮ ಮತ್ತು ಜುಬ್ಬವನ್ನು ರವಿ ಬಾಗಿಲ ಸಂದಿಯ ಮೂಲಕ ಕೊಟ್ಟ. ಒಂದು ಟರ್ಕಿಶ್ ಟವಲ್ ಮತ್ತು ಶಾಲು ಸಹ ತಂದಿದ್ದ. ಬೂತ್‌ನ ಒಳಗೆ ನಿಂತುಕೊಂಡೇ ಗುರುದೇವ್ ವಸ್ತ್ರ ಧರಿಸಿದ್ದರು.

ಗುರುದೇವ್ ಹೊರಗೆ ಬಂದಾಗ ರವಿ ಬೆಚ್ಚಿದ. ಮುಖ ಮತ್ತು ತಲೆಗಳಲ್ಲಿ



ರಕ್ತ ಗಟ್ಟಿಕಟ್ಟಿ ಊದಿಕೊಂಡಿದೆ. ಟರ್ಕಿಶ್‌ನಿಂದ ಮುಖ ಮತ್ತು ತಲೆಯನ್ನು ಮರೆ ಮಾಡಿದ. ಶಾಲು ಹೊದಿಸಿದ. ಮೈ ವಿಪರೀತ ಸುಡುತ್ತಿದೆ. ಒಂದು ಜೋಡಿ ಚಪ್ಪಲಿಗಳನ್ನು ಕೂಡ ತರಬೇಕಾಗಿತ್ತು ಎಂದುಕೊಂಡ ರವಿ. ವಿರೂಪಗೊಂಡ ತುಟಿಗಳನ್ನು ಕೊಂಕಿಸಿ ಗುರುದೇವ್ ನಗಲು ಯತ್ನಿಸಿದರು–ನಗೆ ಎಂಬ ಸಿದ್ಧಿಯನ್ನು ತಾನು ಮರೆತಿಲ್ಲವೆಂದು ದೃಢಪಡಿಸಲೊ ಎಂಬಂತೆ.

ಮೊದಲು ನನಗೊಮ್ಮೆ ಟಾಯ್‌ಲೆಟ್‌ಗೆ ಹೋಗ್ಬೇಕು. ಅವರು ಫಸ್ಟ್‌ಕ್ಲಾಸ್ ವೈಟಿಂಗ್ ರೂಮ್‌ನ ಒಳಗೆ ಹೋದರು. ಪ್ಲಾಟ್‌ಫಾರ್ಮ್‌ನಲ್ಲೂ ವೈಟಿಂಗ್ ರೂಮ್‌ನಲ್ಲೂ ಗಲಿಬಿಲಿಗೊಂಡ ಪ್ರಯಾಣಿಕರ ಗಜಿಬಿಜಿ. ಎಲ್ಲಾ ಟ್ರೈನ್‌ಗಳದ್ದೂ ವೇಳೆ ತಪ್ಪಿವೆ. ಕೆಲವು ಟ್ರೈನ್‌ಗಳು ಝಾನ್ಸಿಯಲ್ಲೂ ಆಗ್ರಾದಲ್ಲೂ ಟರ್ಮಿನೇಟ್ ಮಾಡಿವೆ. ದೆಹಲಿಯಿಂದಲೂ ನಿಜಾಮುದ್ದೀನ್‌ನಿಂದಲೂ ಹೊರಡಬೇಕಾದ ಟ್ರೈನ್‌ಗಳ ವೇಳೆಯನ್ನೂ ಅನಿಶ್ಚಿತಾವಧಿಗೆ ಮುಂದೂಡಲಾಗಿದೆ.

ಇಂದು ಬರಲಿರುವ ಟ್ರೈನ್ ಸಹ ತಲಪಲು ಅನಿಶ್ಚಿತಾವಧಿ ವಿಳಂಬವಾಗಿರಬಹುದು. ಸ್ಟೇಶನ್ ಮಾಸ್ಟರ್‌ಗೆ ಯಾವ ಮಾಹಿತಿಯೂ ದೊರೆತಿಲ್ಲ. ಝಾನ್ಸಿಯಲ್ಲಿ ಟರ್ಮಿನೇಟ್ ಮಾಡುವ ಟ್ರೈನ್‌ಗಳಲ್ಲಿ ಅದೂ ಇದೆಯೋ ಗೊತ್ತಿಲ್ಲ. ಹೀಗಾದರೆ ಇಂದುವನ್ನು ಗುರುತಿಸುವುದು ಕಷ್ಟವಾದೀತು. ಕಿವಿಗಳಲ್ಲಿ ದೊಡ್ಡ ರಿಂಗ್‌ಗಳನ್ನೂ ಬ್ರೌನ್ಸ್ ಕಲರ್‌ನಲ್ಲಿ ಬಿಳಿ ಚೌಕಗಳಿರುವ ಸೀರೆಯನ್ನೂ ಧರಿಸಿ ಕೇರಳಾ ಎಕ್ಸ್‌ಪ್ರೆಸ್‌ನ ಎ.ಸಿ. ಕಂಪಾರ್ಟ್‌ಮೆಂಟ್‌ನ ಹೊರಗೆ ನಿಲ್ಲುವ ಇಂದುವನ್ನು ಇನ್ನು ಹೇಗೆ ಪತ್ತೆ ಹಚ್ಚುವುದು?

ಗುರುದೇವ್ ಸಿಂಗ್ ಟಾಯ್‌ಲೆಟ್‌ನಿಂದ ಹೊರಬಂದರು. ಮುಖ ಮತ್ತು ತಲೆಗಳನ್ನು ತೊಳೆದಿದ್ದರು. ತಲೆ ಮತ್ತು ಮುಖದಲ್ಲಿನ ಕೂದಲುಗಳನ್ನು ಕಿತ್ತು ತೆಗೆಯಲಾಗಿದೆ ಎಂದು ಆಗಷ್ಟೇ ಗೊತ್ತಾದದ್ದು.

ಕಾರ್ ಹತ್ತುವ ತನಕ ಗುರುದೇವ್ ಏನನ್ನೂ ಹೇಳಲಿಲ್ಲ. ಬಳಿಕ ಮೆಲುದನಿಯಲ್ಲಿ ಹೇಳಿದರು: ನನಗೆ ಯಾರ ಬಗ್ಗೆಯೂ ಬೇಸರವಿಲ್ಲ. ಜನರ ಗುಂಪಿಗೆ ಹುಚ್ಚು ಹಿಡಿದಾಗ ಅದಕ್ಕೆ ತಾನು ಮಾಡುತ್ತಿರುವುದೇನೆಂದು ಗೊತ್ತಿರುವುದಿಲ್ಲ. ಮನುಷ್ಯ ಎಷ್ಟೇ ಮುಂದುವರಿದರೂ ಅವನಲ್ಲಿ ಅವಿತುಕೊಂಡಿರುವ ಮೃಗ ವಾಸನೆ ಯಾವಾಗಲಾದರೂ ಹೊರ ನುಗ್ಗದೆ ಇರಲಾರದು. ಲೂಧಿಯಾನದಲ್ಲಿರುವ ನನ್ನ ಗ್ರಾಮದಿಂದ ಛತ್ತೀಸ್‌ಗಢ್ ಎಕ್ಸ್‌ಪ್ರೆಸ್‌ನಲ್ಲಿ ಮರಳುತ್ತಾ ಇದ್ದೆ ನಾನು. ಅಲ್ಲಿ ನನಗೆ ಒಂದಿಷ್ಟು ಗೋಧಿ ಹೊಲ ಇದೆ. ನಿನ್ನೆ ಸಂಜೆ ಎಂಟು ಗಂಟೆಗೆ ಟ್ರೈನ್ ಹತ್ತುವಾಗ ದೆಹಲಿಯಲ್ಲಿ ಸಂಭವಿಸಿದ್ದ ಘಟನೆಗಳ ಬಗ್ಗೆ ಅರಿತಿದ್ದೆನಾದರೂ ಪ್ರಕರಣ ಇಷ್ಟರಮಟ್ಟಿಗೆ ಅನಿಯಂತ್ರಿಕವಿರಬಹುದೆಂದು ಅಂದುಕೊಂಡಿರಲಿಲ್ಲ. ಪಂಜಾಬ್‌ನಲ್ಲಿ ಸ್ಥಿತಿಗತಿಗಳು ಶಾಂತವಾಗಿದ್ದವು. ಅಲ್ಲಲ್ಲಿ ಇರುವ ತಲೆತಿರುಕ ಸರ್ದಾರ್‌ಗಳು ಒಳಗೊಳಗೇ

ಸಂತೋಷ ಪಟ್ಟಿದ್ದರು. ಸ್ವರ್ಣ ಮಂದಿರದಲ್ಲಿ ಇಂದಿರಾಜಿ ಎಸಗಿದ್ದ ಅಪವಿತ್ರ ಕೃತ್ಯವನ್ನು ಸಿಕ್ಖ್ ಸಮಾಜ ಕ್ಷಮಿಸಿರಲಿಲ್ಲ. ಟ್ರೈನ್ ಹತ್ತಿದೊಡನೆ ನಾನು ಬರ್ತ್‌ನಲ್ಲಿ ಮಲಗಿ ನಿದ್ರೆ ಹೋಗಿಬಿಟ್ಟೆ. ಎರಡು ದಿನಗಳ ನಿದ್ರೆ ಮತ್ತು ಪ್ರಯಾಣದ ಆಯಾಸವೂ ಇದ್ದಿತ್ತು. ಅಂಬಾಲಿ, ಸಹಾರನ್‌ಪೂರ್‌ಗಳನ್ನೆಲ್ಲ ದಾಟಿದ್ದು ಗೊತ್ತಾಗಲೇ ಇಲ್ಲ. ಮೀರತ್‌ಗೆ ಬೆಳಗ್ಗೆ ಮೂರು ಗಂಟೆಗೆ ಟ್ರೈನ್ ತಲಪಿತು. ಪ್ಲಾಟ್ ಫಾರ್ಮ್‌ನಲ್ಲಿ ಜನರ ಗುಂಪು ನಮ್ಮನ್ನು ಎದುರುಗೊಳ್ಳಲು ಕಾದು ನಿಂತುಕೊಂಡಂತೆ ಅನ್ನಿಸಿತು. ಶಸ್ತ್ರಧಾರಿಗಳಾದ ಜನರ ಗುಂಪು ಎಲ್ಲಾ ಕಂಪಾರ್ಟ್‌ಮೆಂಟ್‌ಗಳಲ್ಲೂ ಹತ್ತಿ ಇಳಿದಿತ್ತು. ಪಗಡಿ ಧರಿಸಿದವರನ್ನೆಲ್ಲ ಹಿಡಿದು ಪ್ಲಾಟ್ ಫಾರ್ಮಿನಲ್ಲಿ ಇಳಿಸಿತ್ತು. ನಾನು ಅಪ್ಪರ್ ಬರ್ತ್‌ನಲ್ಲಿ ಮಲಗಿದ್ದೆ. ಎದುರಿನ ಬರ್ತ್‌ನಲ್ಲಿ ಮಲಗಿದ್ದ ಒಬ್ಬಾತ ನನ್ನನ್ನು ಕರೆದು ಎಚ್ಚರಗೊಳಿಸಿ ವಿಷಯಗಳನ್ನು ತಿಳಿಸಿದರು. ಟಾಯ್‌ಲೆಟ್‌ನೊಳಗೆ ಹೊಕ್ಕು ಬಚ್ಚಿಟ್ಟುಕೊಳ್ಳಲು ಆತ ನನಗೆ ಸಲಹೆಯಿತ್ತರು. ನಿಜ ರವೀ, ಜನರ ಗುಂಪು ಹಿಂದೂಗಳದ್ದಾಗಿತ್ತು. ನನ್ನನ್ನು ಕರೆದೆಬ್ಬಿಸಿ ಪಾಯಿಖಾನೆಯಲ್ಲಿ ಬಚ್ಚಿಟ್ಟುಕೊಳ್ಳಲು ಸಹಾಯ ಮಾಡಿದ್ದ ವ್ಯಕ್ತಿಯೂ ಹಿಂದೂವಾಗಿದ್ದ. ಮೀರತ್‌ನಿಂದ ಟ್ರೈನ್ ಬಿಡುವ ತನಕ ನಾನು ಟಾಯ್‌ಲೆಟ್‌ನಲ್ಲಿ ಬಚ್ಚಿಟ್ಟುಕೊಂಡೇ ಇದ್ದೆ. ಗಾಜಿಯಾಬಾದ್‌ಗೆ ಟ್ರೈನ್ ತಲಪಿದಾಗ ಗಂಟೆ ಐದಾಗಿತ್ತು. ನಾನು ಪುನಃ ಟಾಯ್‌ಲೆಟ್ ಹೊಕ್ಕೆ. ಗಾಜಿಯಾಬಾದ್‌ನಲ್ಲೂ ಅಪಾಯವಿರಬಹುದೆಂದು ನನ್ನ ಆ ಅಜ್ಞಾತ ಮಿತ್ರ ಪೂರ್ವ ಸೂಚನೆ ನೀಡಿದ್ದ. ಗಾಜಿಯಾಬಾದ್‌ನಲ್ಲೇ ಟ್ರೈನ್ ಉಳಿದು ಬಿಟ್ಟಿತ್ತು. ಮುಂದಕ್ಕೆ ಸಾಗಲು ಸಿಗ್ನಲ್ ಸಿಕ್ಕಿರಲಿಲ್ಲ. ಪಾಯಿಖಾನೆಯಲ್ಲಿ ಮಲ ಮೂತ್ರಗಳು ಮಡುಗಟ್ಟಿಕೊಂಡಿತ್ತು. ಅರ್ಧ ತಾಸು ಅಲ್ಲೇ ಮೆಲ್ಲಗೆ ಬಾಗಿಲು ತೆರೆದೆ. ಪ್ಲಾಟ್‌ಫಾರ್ಮಿನ ಕಡೆಗಿರುವ ಬಾಗಿಲು ತೆರೆದುಕೊಂಡು, ಸಮಾನಾಂತರವಾಗಿ ಬೇರೊಂದು ಟ್ರೈನ್ ನಿಂತುಕೊಂಡಿತ್ತು. ಆ ಟ್ರೈನ್‌ನ ಕೆಳಗಡೆಯಿಂದ ನುಸುಳಿ ಜನಸಂದಣಿ ಇಲ್ಲದ ಮರುಬದಿ ತಲಪಿದೆ. ಆದರೆ ಟ್ಯೂಬ್‌ಲೈಟ್‌ನ ಬೆಳಕಿನಲ್ಲಿ ಯಾವ ಸರ್ದಾರ್ಜಿಗೂ ಅದೃಶ್ಯನಾಗಲು ಸಾಧ್ಯವಾಗಲಿಲ್ಲ. ಪಗಡಿ ಮತ್ತು ದಾಡಿ ಅವರನ್ನು ಬಯಲು ಸ್ಥಳದ ಲೈಟ್ ಹೌಸ್‌ನ ಹಾಗೆ ಎಷ್ಟೇ ದೂರದಿಂದಲೂ ತೋರಿಸಿ ಕೊಡುತ್ತವೆ. ಒಂದು ಮೈಲು ದೂರದಿಂದಲೂ ಅವರು ಗುರುತಿಸಲ್ಪಡುತ್ತಾರೆ. ನನ್ನ ಮಟ್ಟಿಗೆ ಸಂಭವಿಸಿದ್ದೂ ಅದೇನೇ. ದೂರದಿಂದಲೇ ಗರ್ಜನೆ ಕೇಳಿಸಿತ್ತು: ಸಾಲಾ ಸರ್ದಾರ್ಜಿ... ಪಕಡೋ ಕುತ್ತೇ ಕಾ ಬಚ್ಚಾ, ಬೇಂ ಚೂತ್... ಸರ್ದಾರ್ಜಿಗಳ ಬಾಯಿಯಿಂದಲೇ ಎರವಲು ಪಡೆದ ಅಶ್ಲೀಲ ಬೈಗುಳಗಳಿಂದ ಅವರು ನನ್ನನ್ನು ಅಭಿಷೇಕ ಮಾಡಿದರು. ಅಶ್ಲೀಲ ಬೈಗುಳಗಳಷ್ಟೇ ಆಗಿದ್ದರೆ ಸಹಿಸಬಹುದಾಗಿತ್ತು. ಸರ್ದಾರರ ಚರ್ಮಕ್ಕೆ ದಪ್ಪ ಕಡಿಮೆ ಎಂದು ಯಾರೂ ಹೇಳಲಾರರು. ಹಿಂದೂಗಳು ಹೊಗೆಸೊಪ್ಪು ಬಳಸುವ ಹಾಗೇನೆ ನಾವು ಅಶ್ಲೀಲ ಬೈಗುಳ ಬಳಸುತ್ತೇವೆ. ಅದಕ್ಕೆ



ಕಾರಣವೂ ಇದೆ. ಗುರು ಹೇಳಿರುವರು: ಅಮಲು ಕೆಟ್ಟದ್ದು. ಗಾಂಜಾ ಒಂದು ಪೀಳಿಗೆಯನ್ನು ನಾಶ ಮಾಡಿದರೆ, ಹೊಗೆಸೊಪ್ಪು ಮುಂದಿನ ಪೀಳಿಗೆಯನ್ನೂ ಕೂಡ ನಾಶ ಮಾಡುತ್ತದೆ. ಗುರು ವಾಕ್ಯವನ್ನು ಮೀರದಿರಲು ಸರ್ದಾರ್ಜಿಗಳು ಪ್ರಯತ್ನಿಸುತ್ತಾರೆ. ಹೊಗೆಸೊಪ್ಪಿಗೆ ಬದಲು ಬಾಯಿಯ ತೀಟೆ ತೀರಿಸಲು ಅವರು ಹೊಲಸು ಬೈಗುಳುಗಳನ್ನು ಹೇಳುತ್ತಾರೆ.

ಗುರುದೇವ್ ಗೊಳ್ಳನೆ ನಕ್ಕರು. ಜತೆಯಲ್ಲೇ ಕೈ ಚಾಚಲಿಕ್ಕೂ ಮರೆಯಲಿಲ್ಲ. ತುಟಿಗಳೂ ಕೆನ್ನೆಗಳೂ ಬಾತಿರುವುದರಿಂದ ಆ ನಗೆ ದಯನೀಯವೂ ವಿಕೃತವೂ ಆಗಿತ್ತು.

ಸುತ್ತುವರಿದಿದ್ದ ಜನಜಂಗುಳಿಯೊಡನೆ ಅಂಗಲಾಚಿದೆ: ತುಸು ದಯೆದೋರಿರಿ! ತುಸು ಮಾನವೀಯತೆಯಿಂದ ವರ್ತಿಸಿರಿ.

ಆದರೆ ಗುಂಪಿಗೆ ಕಿವಿಯಿಲ್ಲ. ಕಣ್ಣುಗಳೂ ಇಲ್ಲ.

ಅವರು ನನ್ನ ವಸ್ತ್ರಗಳನ್ನು ಒಂದೊಂದಾಗಿ ಕಳಚಿ ತೆಗೆದುಕೊಂಡರು. ಲಾಠಿಗಳು ನನ್ನ ನಗ್ನ ದೇಹದಲ್ಲೆರಗಿದವು. ನಾಲ್ಕಾರು ಮಂದಿ ನನ್ನ ತಲೆಕೂದಲೆಳೆಗಳನ್ನು, ದಾಡಿ ರೋಮಗಳನ್ನು ಕಿತ್ತು ತೆಗೆಯತೊಡಗಿದರು.

ಗುರುದೇವ್ ಮಾತು ನಿಲ್ಲಿಸಿದರು. ಅವರ ಕಣ್ಣುಗಳು ತುಂಬಿದ್ದವು. ಅವುಗಳಲ್ಲಿ ಸಿಟ್ಟಾಗಲೀ ಸೇಡಾಗಲಿ ಕಾಣಿಸಲಿಲ್ಲ; ತೀವ್ರವಾದ ವ್ಯಥೆಯಷ್ಟೇ.

ಗುಂಪಿಗೆ ಸಾಕೆನಿಸಿದಾಗ ನನ್ನನ್ನು ಟ್ರ್ಯಾಕ್‌ಗೆ ಎಸೆದು ಇನ್ನೊಂದು ಬೇಟೆಯ ಶೋಧನೆಗೆ ಹೊರಟಿತು. ನಾನು ಸತ್ತಿರಬಹುದೆಂದೇ ಅದು ಅಂದುಕೊಂಡಿರಬಹುದು. ಅಥವಾ ಸತ್ತಿಲ್ಲವಾದರೆ ಯಾವುದಾದರೂ ಗೂಡ್ಸ್ ಟ್ರೈನ್ ಆ ಕೆಲಸವನ್ನು ಪೂರ್ಣಗೊಳಿಸುತ್ತದೆ ಎಂದು ಆಶಿಸಿರಲೂ ಬಹುದು.

ತುಸು ದೂರದಲ್ಲಿ ಅಸಹಾಯಕರಾಗಿ ನೋಡುತ್ತ ನಿಂತುಕೊಂಡಿದ್ದ ಯಾರೋ ಇಬ್ಬರು, ಗುಂಪು ದೂರವಾದಾಗ ಹತ್ತಿರ ಬಂದರು. ಅವರೂ ಹಿಂದೂಗಳೇ. ಅವರು ನನ್ನನ್ನು ಟ್ರ್ಯಾಕ್‌ನಿಂದ ಮೇಲಕ್ಕೆತ್ತಿದರು: ಕಟ್ಟಡದ ಹಿಂಬದಿಯ ನೆರಳಿನಲ್ಲಿ ಮಲಗಿಸಿದರು. ಒಬ್ಬಾತ ಟ್ಯಾಪ್‌ನಿಂದ ನೀರು ತಂದು ಮುಖಕ್ಕೆ ಚಿಮುಕಿಸಿದ ಹಾಗೂ ನನಗೆ ನೀರು ಕುಡಿಸಿದ.

ಅವರೂ ಗಲಿಬಿಲಿಗೊಂಡಿದ್ದರು. ಗುಂಪಿನ ಕೈಗೆ ಸಿಲುಕದಿರಲು ಅವರು ಕಾತರರಾಗಿದ್ದರು. ನನ್ನನ್ನು ಅಲ್ಲಿ ಬಿಟ್ಟು ಹೋಗಲಿಕ್ಕೂ ಅವರ ಮನ ಒಪ್ಪಲಿಲ್ಲ.

ಅವರ ಧರ್ಮ ಸಂಕಟ ನನಗೆ ಅರ್ಥವಾಗುತ್ತಿತ್ತು. ನನ್ನನ್ನು ದೂರದಲ್ಲಿ ಕಾಣಿಸಿದ್ದ ಟೆಲಿಫೋನ್ ಬೂತ್‌ಗೆ ತಲಪಿಸಲು ನಿರ್ದೇಶಿಸಿದವನೂ ನಾನೇ. ನನ್ನ ನಗ್ನತೆಯ ಬಗ್ಗೆ ನಾನು ಜಾಗೃತನಾಗಿದ್ದೆ. ನನ್ನ ತವಕ ಬೆಳಕು ಹಬ್ಬುವ ಮುನ್ನ ಮಾನ ಮುಚ್ಚುವ ಸಲುವಾಗಿತ್ತೇ ಹೊರತು ಯಾರಿಗಾದರೂ ಫೋನ್ ಮಾಡುವುದರ

ಕುರಿತಾಗಿರಲಿಲ್ಲ. ಟೆಲಿಫೋನ್ ಬೂತ್‌ಗೆ ತಲಪಲು ಅವರು ನನಗೆ ನೆರವಾದರು. ಬೂತ್‌ನ ಇಕ್ಕಟ್ಟಾದ ಕತ್ತಲೆಯೊಳಗೆ ಅಮ್ಮನ ಬಸಿರೊಳಗೆಂಬಂತೆ ಸುರಕ್ಷೆ ಪಡೆದೆನೆಂದೆನ್ನಿಸಿತ್ತು. ಬೂತ್‌ನ ಬಾಗಿಲು ಮುಚ್ಚಿ ಮರೆಯಾದ ಆ ಇಬ್ಬರಲ್ಲಿ ಒಬ್ಬಾತ ಮರಳಿ ಬಂದು ನನಗೆ ಎರಡು ಐವತ್ತು ಪೈಸೆ ನಾಣ್ಯಗಳನ್ನು ಕೊಟ್ಟನು. ನನ್ನ ಜೀವಮಾನದಲ್ಲೇ ಅಷ್ಟೊಂದು ಅಮೂಲ್ಯವಾದ ನಾಣ್ಯಗಳನ್ನು ನಾನು ಬಳಸಿದ್ದಿಲ್ಲ. ನನ್ನ ವಸ್ತ್ರಗಳ ಜತೆಯಲ್ಲೇ ಐಡೆಂಟಿಟಿ ಕಾರ್ಡ್, ಹಣ ಮುಂತಾದ ಎಲ್ಲವನ್ನೂ ಕಳೆದುಕೊಂಡಿದ್ದೆನಲ್ಲ. ಯಾರೋ ನನ್ನ ಶೂಗಳನ್ನು ಕೂಡ ಕಳಚಿ ಒಯ್ದಿದ್ದರು.

ಗುರುದೇವ್ ಮಾತು ನಿಲ್ಲಿಸಿದರು. ರವಿ ಪ್ರಶ್ನಾರ್ಥಕವಾಗಿ ಅವರತ್ತ ನೋಡಿದ. ಟೆಲಿಫೋನ್ ಬೂತ್‌ನಲ್ಲಿ ಪೂರ್ಣ ನಗ್ನನಾಗಿ ಬಚ್ಚಿಟ್ಟುಕೊಂಡಿದ್ದಾಗ ಒಂದು ಜೋಕ್ ನೆನಪಾಗಿತ್ತು ಎಂದು ಹೇಳತೊಡಗಿದರು.

ಇಂಗ್ಲೆಂಡ್‌ನಲ್ಲಿ ನೆಲೆಸಿದ್ದ ಒಬ್ಬ ಸರ್ದಾರ್ಜಿ ಓರ್ವ ಇಂಗ್ಲಿಷ್ ಹುಡುಗಿಯನ್ನು ಪ್ರೇಮಿಸಿದ. ಪಗಡಿ, ದಾಡಿಗಳೆಲ್ಲ ಇದ್ದು ಆಜಾನುಬಾಹುವಾಗಿದ್ದ ಸರ್ದಾರ್ಜಿಯೊಡನೆ ತುಸು ಫ್ಲರ್ಟ್ ನಡೆಸುವ ಉದ್ದೇಶವಷ್ಟೇ ಹೊಂದಿದ್ದಳು ವಿಲಾಯತಿಯವಳು. ಅದಕ್ಕಿಂತ ಹೆಚ್ಚಿನ ಆಸಕ್ತಿಯೇನೂ ಅವಳಿಗೆ ಅದರಲ್ಲಿರಲಿಲ್ಲ. ಆದರೆ ಸರ್ದಾರ್ಜಿ ಸಂಗತಿಯನ್ನು ಗಂಭೀರವಾಗಿಯೆ ತೆಗೆದುಕೊಂಡ. ವಾರದ ರಜಾದಿನಗಳನ್ನು ಜತೆಯಾಗಿ ಕಳೆಯಲಿಕ್ಕೂ ಕೆಫೆಗಳಲ್ಲೂ ಬಾರ್‌ಗಳಲ್ಲೂ ಸುತ್ತಾಡಿಕೊಂಡಿರಲಿಕ್ಕೂ ಹುಡುಗಿಯನ್ನು ಪ್ರೇರೇಪಿಸಿದ. ಹುಡುಗಿಗೂ ಅವೆಲ್ಲ ಇಷ್ಟವಾದವು. ಎರಡು ತಿಂಗಳ ಬಳಿಕವೂ ಪ್ರೇಮದಲ್ಲಿ ಪ್ರಗತಿಯೇನೂ ಕಾಣದಿದ್ದ ಕಾರಣ ಸರ್ದಾರ್ಜಿ ತುಸು ವಾಚಾಳನಾಗತೊಡಗಿದ. ಸಿಕ್ಖರ ಧೀರತನ, ಶೂರತನ ವಗೈರೆಗಳನ್ನೆಲ್ಲ ವರ್ಣಿಸಿದ. ತಲೆಮಾರುಗಳಿಂದ ಸಿಂಹಗಳ ಹಾಗೆ ಶೂರರಾಗಿ ಬಾಳುತ್ತ ಬಂದಿದ್ದ ತನ್ನ ವರ್ಗದ ವೀರ ಪರಾಕ್ರಮಗಳನ್ನೆಲ್ಲ ಆಕೆಗೆ ವಿವರಿಸಿದ. ವಾಚಾಳಿತನ ಸಹಿಸದಾದಾಗ ಹುಡುಗಿ ಆತನಿಗೆ ಸವಾಲು ಹಾಕಿದಳು. ಅಷ್ಟು ಧೀರನಾಗಿದ್ದರೆ ಇಂಗ್ಲಿಷ್ ಕಾಲುವೆಯನ್ನು ಈಜಿ ದಾಟುವೆಯಾ? ಸರ್ದಾರ್ಜಿ ಸವಾಲನ್ನು ಒಪ್ಪಿಕೊಂಡ. ಆಗ ಹುಡುಗಿ ಮತ್ತೊಂದು ಶರತ್ತನ್ನು ಮುಂದಿಟ್ಟಳು. ಕೇವಲ ಈಜಿದರಷ್ಟೇ ಸಾಲದು, ಪೂರ್ಣ ನಗ್ನನಾಗಿ ಈಜಬೇಕು. ಅದನ್ನೂ ಸರ್ದಾರ್ಜಿ ಒಪ್ಪಿಕೊಂಡ. ಆದರೆ, ಒಂದು ಚಿಕ್ಕ ಹೊಂದಾಣಿಕೆಗೆ ಹುಡುಗಿ ತಯಾರಾಗಬೇಕು. ಅದೇನೆಂದರೆ, ನಗ್ನನಾಗಿ ಈಜುವುದು ರಾತ್ರಿಯಷ್ಟೇ ಸಾಧ್ಯ. ಅಷ್ಟೇ ಅಲ್ಲದೆ ಈಜು ಮುಗಿದೊಡನೆ ಹುಡುಗಿಯನ್ನು ಆ ಹುಟ್ಟುಡುಗೆಯಲ್ಲೇ ಮುದ್ದಿಸಲು ಅವಳೊಪ್ಪಬೇಕು. ಈ ಹಂತಕ್ಕೆ ತಲಪಿದಾಗ ಹುಡುಗಿಯೂ ಅನ್ಯ ಮಾರ್ಗವಿಲ್ಲದ್ದರಿಂದ ಒಪ್ಪಿಕೊಂಡಳು. ಅವರು ವಿಕ್ಟೋರಿಯಾದಿಂದ ರೋವರ್‌ಗೆ ಹೋದರು. ಸರ್ದಾರ್ಜಿ ಹುಡುಗಿಯನ್ನು ಬೋಟ್‌ನಲ್ಲಿ ಆಚೆ ದಡದ ಹಾಲೆಂಡ್‌ಗೆ ತಲಪಿಸಿದ. ಬಳಿಕ ವಸ್ತ್ರಗಳನ್ನೆಲ್ಲ ಕಳಚಿ



ಕಾಲುವೆಗೆ ಹಾರಿ ಈಜತೊಡಗಿದ. ಹುಡುಗಿ ನಿದ್ರೆ ಬಿಟ್ಟು ಮರುದಡದಲ್ಲಿ ಕಾದು ಕುಳಿತಳು. ಹೊತ್ತು ಬೆಳಗಾಗುವ ತನಕ ಕಾದರೂ ಸರ್ದಾರ್ಜಿಯ ಸುಳಿವೇ ಇಲ್ಲ. ಹೊತ್ತು ಕಳೆಯಲು ಅವಳೊಂದು ವೃತ್ತಪತ್ರಿಕೆಯನ್ನು ಕೊಂಡುಕೊಂಡಳು. ಬ್ಯಾನರ್ ಹೆಡ್‌ಲೈನ್‌ನಲ್ಲಿ ಮುಖ್ಯ ವಾರ್ತೆ: ಮೈ ತುಂಬ ಕೂದಲುಗಳಿರುವ ಅತಿ ವಿಚಿತ್ರವಾದ ಸಮುದ್ರ ಜೀವಿಯೊಂದು ಮತ್ಸ್ಯಬಂಧಕರ ಬಲೆಯಲ್ಲಿ. ಜತೆಯಲ್ಲೆ ವಿವಿಧ ಭಂಗಿಗಳ ಫೋಟೋಗಳು ಕೂಡ. ಆ ಮುಖ ತನಗೆ ಪರಿಚಿತವಾಗಿತ್ತೆಂದು ಅವಳಿಗೆ ಅನ್ನಿಸಿತು. ಪಗಡಿ ಮತ್ತು ಜಾಲಿಗಳಿಲ್ಲದೆಯೂ ಅವಳದನ್ನು ಗುರುತಿಸಿದಳು. ಹೌದು, ಸರ್ದಾರ್ಜಿಯದ್ದೇ.

ಗುರುದೇವ್ ಗಟ್ಟಿಯಾಗಿ ನಕ್ಕರು ಹಾಗೂ ಕೈಯನ್ನು ಮುಂದೆ ಮಾಡಿದರು. ಕೈಕುಲುಕುತ್ತಲೇ ರವಿ ಹೇಳಿದ: "ದೆಹಲಿ ಮೃಗಾಲಯವು ಗಾಜಿಯಾಬಾದ್‌ನಿಂದ ದೂರದಲ್ಲಿರುವುದರಿಂದ ನೀವು ಬಚಾವಾದಿರಿ. ಅಲ್ಲವಾದರೆ, ಗುರುದೇವ್ ನೀವೂ ಪಂಜರ ಸೇರುತ್ತಿದ್ದಿರಿ."

ಗುರುದೇವ್ ಪುನಃ ಗೊಳ್ಳನೆ ನಕ್ಕರು. ಆಗಲೂ ಕೈ ಮುಂದೆ ಚಾಚಿದರು. ನಗೆ ನಿಂತಾಗ ಗುರುದೇವ್ ಕೆನ್ನೆಯ ಗಾಯವನ್ನು ಸವರುತ್ತ ಹೇಳಿದರು: "ಒಟ್ಟಿನಲ್ಲಿ ಇದ್ದ ಒಂದು ಗಮ್ಮತ್ತು ನಗೆಯಾಗಿತ್ತು. ಆದರೆ ಅದೂ ಈಗ ಅಸಾಧ್ಯವಾಯ್ತು. ಆದರೂ ರವೀ. ನನ್ನ ಸಂದೇಹ ಅದಲ್ಲ. ನಿಜವಾದ ಹಿಂದೂಗಳು ಯಾರು? ನನ್ನನ್ನು ಮುತ್ತಿ ಹಿಡಿದು ಹಿಂಸಿಸಿದವರೆ? ಅಥವಾ ನನ್ನನ್ನು ಟಾಯ್‌ಲೆಟ್‌ನಲ್ಲಿ ಬಚ್ಚಿಟ್ಟು ಕಾಪಾಡಿದವರೆ? ನನಗೆ ಎರಡು ಐವತ್ತು ಪೈಸೆ ನಾಣ್ಯಗಳನ್ನು ಕೊಟ್ಟು ಸಹಾಯ ಮಾಡಿದವರೆ? ಈಗ ಕಾರ್‌ನಲ್ಲಿ ಬಂದು ನನ್ನನ್ನು ರಕ್ಷಿಸುತ್ತಿರುವ ರವಿಯೆ? ಮಹಮ್ಮದೀಯರ ಮತ್ತು ಸಿಕ್ಖರ ವಿಚಾರದಲ್ಲೂ ಇದು ಸರಿಯೇ. ಎಲ್ಲಾ ಮತಗಳಲ್ಲೂ ಒಳ್ಳೆಯವರೂ ಕೆಟ್ಟವರೂ ಇದ್ದಾರೆ."

ರವಿಗೆ ಪ್ರಶ್ನಿಸದಿರಲು ಸಾಧ್ಯವಾಗಲಿಲ್ಲ. ಕೇಶ, ಗಡ್ಡ, ಪಗಡಿ ಮುಂತಾದುವುಗಳು ಮತದ ಎತ್ತಿ ತೋರಿಸುವ ಚಿಹ್ನೆಗಳಾಗಿವೆ. ಯಾಕೆ ಗುರುಗೋವಿಂದ್ ಸಿಂಗ್ ಈ ಬಾಹ್ಯ ಚಿಹ್ನೆಗಳನ್ನು ಧರಿಸಲು ತಮ್ಮ ಅನುಯಾಯಿಗಳನ್ನು ಒತ್ತಾಯಿಸಿದ್ದು? ಕೇವಲ ಅವುಗಳಿಂದಾಗಿಯೇ ಖಲ್ಸ ಹುಟ್ಟಿಕೊಂಡ ಬಳಿಕ ಎಷ್ಟೆಷ್ಟೊ ಸಿಕ್ಖರು ಪ್ರಾಣ ಕಳಕೊಂಡಿಲ್ಲ? ಮೊಗಲರ ಕಾಲದಲ್ಲಿ, ವಿಭಜನೆಯ ಕಾಲದಲ್ಲಿ, ಈಗ ಕೂಡ ಸಂಭವಿಸಿದ್ದು ಅದೇನೇ. ದೇಶಪ್ರೇಮಿಗಳಾದ ಎಷ್ಟೆಷ್ಟು ಮಂದಿ ತಮ್ಮ ಹಾಗೆ ಬೇಟೆಯಾಡಲ್ಪಡಲಿಲ್ಲ? ಸಿಕ್ಖರಿಗೆ ಅನಿವಾರ್ಯವಾದ ವೇಷ, ಲಾಂಛನಗಳನ್ನು ತೊಟ್ಟುಕೊಳ್ಳುತ್ತಿರುವುದಷ್ಟೇ ತಾನೆ ಅವರು ಮಾಡಿದ ಅಪರಾಧ?

ಇದೇ ಪ್ರಶ್ನೆಯನ್ನು ಗುರುಗೋವಿಂದ್ ಸಿಂಗರ ಅನುಯಾಯಿಗಳೂ ಗುರುವಿನೊಡನೆ ಕೇಳಿದ್ದರು. ಕೂದಲು ಬಿಡುವುದರಿಂದ ಹಿಂದೂಗಳೂ ಮುಸ್ಲಿಮರೂ

ತಮ್ಮನ್ನು ಹಿಂಸಿಸುತ್ತಿರುವುದಾಗಿ ಅವರು ನಿವೇದಿಸಿದ್ದರು. ಪ್ರಕೃತಿದತ್ತವಾದ ಕೂದಲನ್ನು ಕತ್ತರಿಸಿ ಬಿಸಾಡಬಾರದೆಂದು ಗುರು ಆಣತಿಯಿತ್ತರು. ರಾಮ, ಕೃಷ್ಣ, ಕ್ರಿಸ್ತ ಮತ್ತು ಮಹಮ್ಮದ್ ಸಹ ಕೂದಲು ಬಿಟ್ಟಿದ್ದರೆಂಬುದನ್ನು ಗುರು ಬೆಟ್ಟು ಮಾಡಿ ತೋರಿಸಿದರು. ಕತ್ತರಿಸಿ ಬಿಸಾಡಬೇಕಾಗಿದ್ದರೆ ದೇವರು ಅದನ್ನೇಕೆ ಕೊಟ್ಟನು ಎಂದು ಅವರು ಪ್ರಶ್ನಿಸಿದರು. ಬಸುರಿನಲ್ಲಿರುವ ಮಗುವಿಗೆ ಕೂಡ ಕೂದಲು ಬೆಳೆಯುತ್ತ ಇರುತ್ತದಲ್ಲ. ಅನ್ಯರ ಕೂದಲನ್ನು ಯಾವತ್ತೂ ಕೀಳಕೊಡದೆಂದು ಮನು ಹೇಳಿರುವನು. ಕೊಲೆಪಾತಕಕ್ಕಾಗಿ ಬ್ರಾಹ್ಮಣೇತರರ ಶಿರಚ್ಛೇದ ಮಾಡುವಾಗ ಬ್ರಾಹ್ಮಣರ ಜುಟ್ಟಷ್ಟೇ ಕತ್ತರಿಸಿದರೆ ಸಾಕೆಂದೂ ಮನು ವಿಧಿಸಿದ್ದ. ಸಿಟ್ಟಿನಿಂದ ಹುಚ್ಚೆದ್ದಾಗ ಕೂಡ ಇತರರ ಕೂದಲಿಗೆ ಕೈ ಹಾಕಬಾರದು. ಅರ್ಜುನನಿಗೆ ಯುದ್ಧ ಕ್ರಮ ಕಲಿಸುವಾಗ ದ್ರೋಣಾಚಾರ್ಯನು ಇದನ್ನು ಒತ್ತಿ ಹೇಳಿರುವನು. ಮುಸ್ಲಿಮರು ಸುನ್ನತ್ ನಡೆಸುವುದೂ ಪ್ರಕೃತಿಗೆ ವಿರುದ್ಧವಾದುದೇ.

ಕೂದಲು ಬೆಳೆಸುವಿಕೆ, ಪಗಡಿ ಧರಿಸುವಿಕೆಗಳು ಮುಸ್ಲಿಮರನ್ನು ಕೆರಳಿಸುತ್ತಿದ್ದರೆ ಆತ್ಮರಕ್ಷಣೆಗಾಗಿ ಆಯುಧ ಧರಿಸುವುದೇ ಅದಕ್ಕಿರುವ ಪರಿಹಾರವಾಗಿದೆ. ಕೃಪಾಣ ಧರಿಸುವುದೂ ಅದಕ್ಕಾಗಿಯೇ. ದೇವರು ಪಾಪಿಗಳನ್ನು ನಾಶ ಮಾಡುವ ಹಾಗೆ ಕೃಪಾಣ ಶತ್ರುಗಳನ್ನು ತರಿಯುತ್ತದೆ. ಹೀಗೇ ಶಾಸ್ತ್ರನಾಮಮಾಲೆಯಲ್ಲಿ ಗುರು ಹೇಳಿರುವರು. ಆದುದರಿಂದ ಕೃಪಾಣ ದೇವರೂ ದೇವರು ಕೃಪಾಣವೂ ಹೌದು.

ಖಲ್ಸವನ್ನು ಸ್ಥಾಪಿಸಿದ್ದು ಮಹಮ್ಮದೀಯರ ವೈರವನ್ನು ಎದುರಿಸಲಿಕ್ಕಾಗಿ. ಮಹಮ್ಮದೀಯರು ತನ್ನ ಅನುಯಾಯಿಗಳನ್ನು ಹಿಂಸಿಸುತ್ತಿರುವರೆಂದರಿತಾಗ ಗುರು ಎಲ್ಲಾ ಸಿಕ್ಖರೊಡನೆಯೂ ಒಂದು ವೈಶಾಖಿಯಂದು ಆನಂದ್‌ಪೂರ್‌ನಲ್ಲಿ ಒಟ್ಟಾಗಲು ಕೇಳಿಕೊಂಡರು. ಯಾರೂ ಕೂದಲು ಕತ್ತರಿಸಬಾರದು. ಗಡ್ಡ ಬೋಳಿಸಬಾರದು ಎಂದು ಆಜ್ಞಾಪಿಸಿದ್ದರು. ತನ್ನ ಪೀಠದ ಪಕ್ಕದಲ್ಲಿ ಬಟ್ಟೆಯಿಂದ ಮರೆಮಾಡಲಾದ ಒಂದು ಗುಪ್ತ ಕೋಣೆ ನಿರ್ಮಿಸಿ ಅದರೊಳಗೆ ಐದು ಆಡುಗಳನ್ನು ಕಟ್ಟಿ ಹಾಕಿದ್ದರು. ಎಲ್ಲಾ ಅನುಯಾಯಿಗಳೂ ಕುಳಿತುಕೊಂಡ ಬಳಿಕ ಗುರು ತನ್ನ ಖಡ್ಗವನ್ನು ಒರೆಯಿಂದ ಹೊರ ತೆಗೆದರು. ತದನಂತರ, ನನ್ನ ಸಲುವಾಗಿ ಜೀವ ತೆರಲು ಯಾರಾದರೂ ತಯಾರಿರುವರೆ? ಎಂದು ಪ್ರಶ್ನಿಸಿದರು. ಸಭೆಯಲ್ಲಿ ಮೌನ ಆವರಿಸಿತು. ಗುರು ಪ್ರಶ್ನೆಯನ್ನು ಪುನರಾವರ್ತಿಸಿದರು. ಮೂರನೆಯ ಬಾರಿಯೂ ಪ್ರಶ್ನೆಯನ್ನು ಆವರ್ತಿಸಿದಾಗ ಲಾಹೋರ್‌ನಿಂದ ಬಂದ ದಯಾರಾಮ್ ಎಂಬ ಕ್ಷತ್ರಿಯನು ಮುಂದೆ ಬಂದನು. ಗುರು ಗುಪ್ತ ಕೋಣೆಗೆ ದಯಾರಾಮ್‌ನನ್ನು ನಡೆಸಿದರು. ಬಳಿಕ ಒಂದು ಆಡಿನ ತಲೆ ಕಡಿದು ರಕ್ತ ತೊಟ್ಟಿಕ್ಕುವ ಖಡ್ಗ ಹಿಡಿದುಕೊಂಡು ಹೊರಗೆ ಬಂದು ಪುನಃ ಪ್ರಶ್ನಿಸಿದರು: ಯಾರಿದ್ದಾರೆ ನನ್ನ ಸಲುವಾಗಿ ಆತ್ಮಾಹುತಿ ಮಾಡಲು ಸಿದ್ಧರಿರುವವರು? ಈ ಬಾರಿ ದೆಹಲಿಯ ಧರಮ್‌ದಾಸ್ ಎಂಬ



ಕೃಷಿಕ, ಹಿಮ್ಮತ್ ಹೆಸರಿನ ಬ್ರಾಹ್ಮಣ ಹಾಗೂ ಸಾಹಿಬ್ ಚಂದ್ ಎಂಬ ಬಾರ್ಬರ್ ಮುಂದೆ ಬಂದರು. ಪುನಃ ಒಳಗೆ ಹೋಗಿ ಇನ್ನೊಂದು ಆಡನ್ನು ಕಡಿದರು. ಮೂರನೆಯ ಬಾರಿ ದ್ವಾರಕಾದಿಂದ ಬಂದಿದ್ದ ಧೋಬಿ ಮಹಾಕಂ ಚಂದ್ ಮುಂದೆ ಬಂದನು. ಆ ಬಳಿಕ ಬಿದಾರ್‌ನ ಸಾಹಿಬ್ ಚಂದ್ ಸಹ ಮುಂದೆ ಬಂದನು. ಐದು ಮಂದಿಯೂ ಗುರುವಿಗಾಗಿ ತಮ್ಮ ಜೀವ ತೆರಲು ತಯಾರಾದರು. ಈ ಐವರಿಗಾಗಿ ಗುರು ಸ್ವಂತ ಜೀವ ತ್ಯಜಿಸಲು ಸಿದ್ಧರಾದರು. ಸಭೆ ದಂಗಾಗಿ ಕುಳಿತಿತ್ತು. ಗುರು ಸಭೆಗೆ ನೆನಪು ಮಾಡಿದರು. ಗುರು ನಾನಕ್ ದೇವನ ಕಾಲದಲ್ಲಿ ಗುರುವಿಗೋಸ್ಕರ ಜೀವ ಕೊಡಲು ತಯಾರಿದ್ದದ್ದು ಒಬ್ಬಾತ ಮಾತ್ರ–ಗುರು ಅಂಗದ್. ನನ್ನ ಸಲುವಾಗಿ ಇಗೋ ಐದು ಮಂದಿ ಸಿದ್ಧರಿರುವರು.

ಅಮೃತಪಾನ ಮಾಡಿಸಿ ತನ್ನ ಅನುಯಾಯಿಗಳನ್ನು ಜ್ಞಾನ ಸ್ನಾನ ಮಾಡಿಸಲು ಗುರು ಸಿದ್ಧತೆಗಳನ್ನು ನಡೆಸಿದರು. ಅವರು ತಮ್ಮ ಖಡ್ಗದಿಂದ ಮಗುಚಿದ್ದ ಅಮೃತದ ಪಾನ ಮಾಡಿದವರು ಸಿಂಹಗಳಾದರು. ತೋಳಗಳನ್ನು ಕೂಡ ಸಿಂಹಗಳನ್ನಾಗಿ ಮಾರ್ಪಡಿಸಲು ಅಮೃತ್ ಸಮರ್ಥವಾಯಿತು.

ತಮ್ಮ ನಂಬಿಗಸ್ತರಾದ ಐದು ಮಂದಿ ಅನುಯಾಯಿಗಳನ್ನು ಗುರು ಸಭೆಗೆ ಪರಿಚಯಿಸಿದರು. ಕಬ್ಬಿಣದ ಪಾತ್ರೆಯಲ್ಲಿ ಅಮೃತ್ ಸಿದ್ಧಪಡಿಸಿದರು. ಖಡ್ಗದಿಂದ ಮಗುಚಿ ಆ ಅಮೃತ್‌ನ ಮಹತ್ತ್ವವನ್ನು ಗುರು ಸಭೆಗೆ ತೋರ್ಪಡಿಸಿದರು. ಎರಡು ಪಾರಿವಾಳಗಳನ್ನು ತಂದು ಅಮೃತ್‌ನ ಹನಿಗಳನ್ನು ಕೊಕ್ಕುಗಳನ್ನು ಬಿಡಿಸಿ ಅವುಗಳಿಗೆ ಕುಡಿಸಿದರು. ಮರುಕ್ಷಣದಲ್ಲೆ ಪಾರಿವಾಳಗಳು ಒಂದನ್ನೊಂದು ಕೆಚ್ಚಿನಿಂದ ಕುಕ್ಕತೊಡಗಿದವು. ರಣಭೂಮಿಯ ಯೋಧರ ಹಾಗೆ ಅವು ಪರಸ್ಪರ ಕುಕ್ಕಿ ಸತ್ತುಬಿದ್ದುವು. ಗುರುಪತ್ನಿ ಮಾತಾಜಿ ಇದನ್ನು ಕಂಡಳು. ಗುರುವಿನ ಅನುಯಾಯಿಗಳು ಹೊರಗೆ ಪರಸ್ಪರ ಕಾದಾಡಿ ಸಾಯಬಾರದೆಂದು ಅವಳು ಅಂದುಕೊಂಡಿರಬೇಕು. ಗುರು ತಯಾರಿಸಿದ್ದ ಅಮೃತ್‌ನಲ್ಲಿ ಆಕೆ ಒಂದಿಷ್ಟು ಸಿಹಿತಿಂಡಿ ಬೆರೆಸಿದಳು. ಹಾಗಾಗಿ ಪರಸ್ಪರರಲ್ಲಿ ಸಹನೆ, ಸಾಮರಸ್ಯಗಳೊಂದಿಗೆ ಬಾಳಲು ಸಿಕ್ಖರಿಗೆ ಸಾಧ್ಯವಾಯಿತು.

ಖಲ್ಸ ಆರಂಭಗೊಂಡದ್ದು ಹಾಗೆ–ಐದು ಬಾರಿ ಗುರು ತಮ್ಮ ನಂಬಿಗಸ್ತರಾದ ಐದು ಮಂದಿಗೆ ಅಮೃತ್ ನೀಡಿದರು. ವಾಹ್ ಗುರೂಜಿ ಕಾ ಖಲ್ಸಾ, ವಾಹ್ ಗುರೂಜಿ ಕಾ ಫಾತಾ.... ಎಂದು ಜಪಿಸಿದರು. ಕೇಶ, ಕಾಂಗ್ರ, ಕೃಪಾಣ, ಕಾಚಾ, ಕಡಗಗಳನ್ನು ಧರಿಸಲು ವಿಧಿಸಿದರು. ಶಸ್ತ್ರಾಭ್ಯಾಸ ನಡೆಸಬೇಕೆಂದೂ ಶತ್ರುಗಳೆದುರಿನಿಂದ ಯಾವತ್ತೂ ಪಲಾಯನ ಮಾಡಕೂಡದೆಂದು ಬೋಧಿಸಿದರು. ದುರ್ಬಲರನ್ನು ಸಂರಕ್ಷಿಸಬೇಕು. ನಿರಾಶ್ರಿತರಿಗೆ ಆಶ್ರಯ ಕೊಡಬೇಕು, ಪರಸ್ತ್ರೀಯನ್ನು ಕೆಟ್ಟ ದೃಷ್ಟಿಯಿಂದ ನೋಡದಿರಬೇಕು. ಅಮೃತ್ ಪಾನಕ್ಕೆ ಮೊದಲಿದ್ದ ಜಾತಿಭೇದಗಳನ್ನು ಮರೆತು ಒಂದೇ ಕುಟುಂಬದ ಸಹೋದರರ ಹಾಗೆ ಬಾಳಬೇಕು. ವಿಗ್ರಹಾರಾಧನೆಯನ್ನು

ವರ್ಜಿಸಬೇಕು. ಶ್ಮಶಾನದಲ್ಲಿ ನಡೆಸಲಾಗುತ್ತಿದ್ದ ಅನುಷ್ಠಾನಗಳನ್ನು ಅವಗಣಿಸಬೇಕು. ಬೆಳಗ್ಗೆ ಎದ್ದು ದೇಹಶುದ್ಧಿ ಮಾಡಿಕೊಂಡ ಬಳಿಕ ಗುರು ಗ್ರಂಥ ಸಾಹಿಬ್ ವಾಚಿಸಬೇಕು.

ಖಲ್ಸಾಕ್ಕೆ ಅಪಾಯವಿದೆ ಎಂದೆನಿಸಿದಾಗಲೆಲ್ಲ ಸಿಕ್ಖರಿಗೆ ಹುಚ್ಚು ಹಿಡಿಯುತ್ತಿರುವುದರ ಹಿನ್ನೆಲೆ ಇದು. ಇಂದಿರಾ ಗಾಂಧಿ ಈ ಮನಃಶಾಸ್ತ್ರವನ್ನು ಅರ್ಥಮಾಡಿಕೊಳ್ಳಲಿಲ್ಲವೆಂದನ್ನಿಸುತ್ತದೆ. ಅರ್ಥಮಾಡಿಕೊಂಡಿದ್ದರೆ ಆಕೆ ಕಳೆದ ಜೂನ್ ತಿಂಗಳಲ್ಲಿ ಸ್ವರ್ಣಮಂದಿರಕ್ಕೆ ಸೇನೆಯನ್ನು ಕಳುಹಿಸುತ್ತಿರಲಿಲ್ಲ. ಸ್ವರ್ಣ ಮಂದಿರವನ್ನು ಅಪವಿತ್ರಗೊಳಿಸುವವರೆಲ್ಲರೂ ಅದಕ್ಕೆ ಶಿಕ್ಷೆಯನ್ನನುಭವಿಸಿದ್ದರೆಂದು ಚರಿತ್ರೆಯ ಬಾಲಬೋಧೆಯನ್ನು ಅಭ್ಯಾಸ ಮಾಡಿದವರಿಗೆ ಕೂಡ ಗೊತ್ತು. ೧೭೪೩ರಲ್ಲಿ ಔರಂಗಜೇಬ್ ಮತ್ತು ೧೭೬೨ರಲ್ಲಿ ಅಹಮ್ಮದ್ ಶಾ ಸ್ವರ್ಣಮಂದಿರದ ಹರ್‌ಮಂದಿರ್ ಸಾಹಿಬ್ ಅನ್ನು ಧ್ವಂಸ ಮಾಡಿದ್ದರು. ೧೮೪೩ರಲ್ಲಿ ತುರ್ಕಿಗಳೂ ೧೯೮೪ರಲ್ಲಿ ಇಂದಿರಾಗಾಂಧಿಯೂ ಆ ತಪ್ಪನ್ನು ಪುನರಾವರ್ತಿಸಿದರು.

ಒಂದು ದೊಡ್ಡ ಮಸಣದ ಹಾಗೆ ಮೂಕತೆ ಮಡುಗಟ್ಟಿ ನಿಂತಿರುವ ದೆಹಲಿಯ ವೀಥಿಯ ಮೂಲಕ ಕಾರು ಧಾವಿಸಿತು.

ಗುರುದೇವ್ ಸಿಂಗ್ ವಾಸಿಸುತ್ತಿರುವುದು ಪಂಡಾರಾ ರೋಡ್‌ನ ಗವರ್ನ್‌ಮೆಂಟ್ ಫ್ಲಾಟ್ ಒಂದರಲ್ಲಿ!

ಕಾರು ಮನೆ ಮುಂದೆ ತಲಪಿದಾಗ, ಗುರುದೇವ್ ಸಿಂಗರ ಪತ್ನಿ ಕಾತರದಿಂದ ಕಾಯುತ್ತ ನಿಂತಿದ್ದಳು.

ಗುರುದೇವ್‌ನ ಅವಸ್ಥೆ ಕಂಡು ಭಾಭಿ ಸಹಜವಾಗಿಯೇ ಅಧೀರಳಾದಳು. ಆಕೆಯ ಕಣ್ಣುಗಳು ತುಂಬಿದವು. ತುಟಿಗಳು ಅದುರಿದವು. ರವಿಯನ್ನು ಕಂಡಾಗ ಆಕೆಗೆ ತುಸು ಸಮಾಧಾನವೆನ್ನಿಸಿತು. ಆಕೆ ವಿಚಾರಿಸಿದಳು.

ಭಾಯಿ ಸಾಬ್ ಕ್ಯಾ ಹೋಗಯಾ....

ರವಿ ಆಕೆಗೆ ಸಾಂತ್ವನ ಹೇಳಿದ: ಇಲ್ಲ, ಅನಾಹುತವೇನೂ ಸಂಭವಿಸಲಿಲ್ಲ.

ಗುರುದೇವ್ ಹೇಳಿದರು: ಕಾಲು ಜಾರಿ ಬಿದ್ದೆ. ಗಾಬರಿಯಾಗಲಿಕ್ಕೇನೂ ಇಲ್ಲ.

ಆದರೆ ಭಾಭಿ ಎಲ್ಲವನ್ನೂ ಊಹಿಸಿದಳು. ಆಕೆಗೆ ಬಹಳ ಆತಂಕ ತಳಮಳಗಳುಂಟಾದವು. ಆಕೆ ತತ್‌ಕ್ಷಣ ಪ್ರಥಮ ಶುಶ್ರೂಷೆಗೆ ಅಗತ್ಯವಾದುದನ್ನೆಲ್ಲ ಸಜ್ಜೀಕರಿಸಿದಳು. ಸಲೈನ್ ಮಿಶ್ರಿತ ಬಿಸಿನೀರು, ಹತ್ತಿ ಮುಂತಾದುವುಗಳೊಂದಿಗೆ ಆಕೆಯ ಬೆರಳುಗಳು ಕಾರ್ಯಪ್ರವೃತ್ತವಾದವು. ಡಾಕ್ಟರರೊಂದಿಗೆ ಫೋನ್‌ನಲ್ಲಿ ಮಾತಾಡಿದಳು. ಅವರು ಕೂಡಲೆ ಬರುವುದಾಗಿ ಒಪ್ಪಿಕೊಂಡರು.

ಅಷ್ಟರಲ್ಲಿ ಗುರುದೇವರ ಮಗ ಅಂಗದ್ ಒಳಕೋಣೆಯಿಂದ ಬಂದ. ಗುರುದೇವ್‌ರಿಗೆ ಇಬ್ಬರು ಮಕ್ಕಳು. ಒಬ್ಬ ಮಗ, ಒಬ್ಬಳು ಮಗಳು. ಮಗಳ



ಮದುವೆಯಾಗಿ ಎರಡು ವರ್ಷಗಳೇ ಕಳೆದಿವೆ. ಮಗನಿಗೆ ರಾಷ್ಟ್ರೀಕೃತ ಬ್ಯಾಂಕೊಂದರಲ್ಲಿ ಪ್ರೊಬೆಶನರಿ ಆಫೀಸರ್ ಆಗಿ ಸೆಲೆಕ್ಷನ್ ಆಗಿದೆ. ಪೋಸ್ಟಿಂಗ್ ಆರ್ಡರ್‌ಗೆ ಕಾಯುತ್ತಾ ಇದ್ದಾನೆ. ರಾಷ್ಟ್ರೀಕೃತ ಬ್ಯಾಂಕ್‌ನಲ್ಲಿ ಖಾತೆ ತೆರೆಯಲು ನಿರಾಕರಿಸುವ ಗುರುದೇವ್ ಅಲ್ಲಿ ಮಗನಿಗೆ ದೊರೆಯುವ ನೌಕರಿ ಒಪ್ಪಿಕೊಳ್ಳುವುದಕ್ಕೆ ಅಡ್ಡಿಯೇನೂ ಹೇಳಲಿಲ್ಲ.

ಸುಂದರಾಂಗ ಅಂಗದ್, ಎತ್ತರದ ನಿಲುವು, ನಗುವ ಕಣ್ಣುಗಳು. ಜಾಲಿಯಲ್ಲಿ ಅಂದವಾಗಿ ಅಡಕಗೊಳಿಸಿ ಕಟ್ಟಲಾದ ದಾಡಿ. ಸೊಗಸಾಗಿ ಬಿಗಿದು ಕಟ್ಟಲಾದ ಪಗಡಿ.

ನಮಸ್ತೇ, ಅಂಕಲ್‌ಜೀ.

ಆತ ಕೈಮುಗಿದ.

ಯಾಕೆ ಅಂಗದ್ ಇತ್ತೀಚೆಗೆ ಆ ಕಡೆ ಕಾಣಿಸುತ್ತಾ ಇಲ್ಲ, ರವಿ ಕುಶಲ ವಿಚಾರಿಸಿದ.

ತಾಯ್ತಂದೆಯರಿಗೆ ಕಾಣಿಸದ ಹಾಗೆ ಅಂಗದ್ ತುಟಿ ಮೇಲೆ ಬೆರಳಿರಿಸಿ ಹೇಳ್ಬೇಡಿ ಎಂದು ಸನ್ನೆ ಮಾಡಿದ.

ಅಂಗದ್ ಮತ್ತು ದರ್ಶನ್ ಪ್ರೇಮಿಗಳೆಂದು ರವಿಗೆ ಗೊತ್ತು. ಆಗಾಗ ಫೋನ್ ಕಾಲ್ ಬರುತ್ತಿತ್ತು. ಆಗೊಮ್ಮೆ ಈಗೊಮ್ಮೆ ಅಂಗದ್ ಆಫೀಸ್‌ಗೆ ಬಂದು ದರ್ಶನ್‌ಳನ್ನು ಕಾಣುತ್ತಿದ್ದ. ಬಂದಾಗಲೆಲ್ಲ ತನ್ನ ಕ್ಯಾಬಿನ್‌ಗೆ ಬಂದು ನಮಸ್ತೆ ಹೇಳಲು ಆ ಯುವಕ ಮರೆಯುತ್ತಿರಲಿಲ್ಲ.

ಹಿಂದಿನ ಬಾರಿ ಅಂಗದ್‌ನೊಡನೆ ವಿಚಾರಿಸಿದ್ದೆ.

ವಾಟ್ ಈಸ್ ದ ಪ್ರೋಬ್ಲಮ್?

ಅಂಗದ್ ತಲೆತಗ್ಗಿಸಿ ನಿಂತುಕೊಂಡದ್ದು ಮಾತ್ರ. ಬಳಿಕ ಹೇಳಿದ: ಕೆಲಸ ಸಿಕ್ಕಿದ ಮೇಲೆಯೇ ಅಪ್ಪ ಮತ್ತು ಅಮ್ಮನಿಗೆ ಹೇಳುತ್ತೇನೆ.

ಅವರ ವಿರೋಧವೇನೂ ಇರಲಿಕ್ಕಿಲ್ಲವಲ್ಲ?

ಇರಲಾರದೆಂದೇ ಅಂದುಕೊಂಡಿದ್ದೇನೆ ಅಥವಾ ಇದ್ದರೂ ನೀವಿದ್ದೀರಲ್ಲ ಅಂಕಲ್‌ಜೀ, ಸಹಾಯಕ್ಕೆ.

ಅಂಗದ್, ಅಪ್ಪನ ತಲೆಗೂ ಕೆನ್ನೆಗಳಿಗೂ ಬಿಸಿನೀರಿನಲ್ಲಿ ಅದ್ದಿದ ಅರಿವೆಯಿಂದ ಮೆಲ್ಲಗೆ ಮಸಾಜ್ ಮಾಡುತ್ತಿರುವ ಅಮ್ಮನಿಗೆ ಸಹಾಯ ಮಾಡತೊಡಗಿದ.

ಏನೋ ಜ್ಞಾಪಿಸಿಕೊಂಡೆ ಎಂಬಂತೆ ಅಂಗದ್‌ನ ತಾಯಿ ಹೇಳಿದಳು: ರವಿ ಭಯ್ಯಾ ನಿಮ್ಮೊಡನೆ ಒಂದು ವಿಷಯ ಹೇಳಬೇಕೆಂದಿದ್ದೆ.

ಅಂಗದ್ ಅಮ್ಮನ ಕಣ್ಣುಗಳಲ್ಲೆ ದೃಷ್ಟಿಯಿರಿಸಿ ಆಮೇಲೆ ಹೇಳಿದರಾಯ್ತೆಂದು ಸನ್ನೆ ಮಾಡಿದ.

ರವಿಗೆ ಅರ್ಥವಾಯಿತು. ಅಂಗದ್ ಅಮ್ಮನಿಗೆ ವಿಷಯ ತಿಳಿಸಿದ್ದಾನೆ. ಅಪ್ಪನನ್ನು

ಒಪ್ಪಿಸಲು ತನ್ನ ಸಹಾಯ ಬೇಕಾಗಿದೆ. ಈ ಸಂದರ್ಭದಲ್ಲಿ ಆ ಸಂಗತಿಯನ್ನು ಸೂಚಿಸುವುದು ಸಮಂಜಸವಾಗದೆಂದು ರವಿಗೂ ಅನ್ನಿಸಿತು.

ಹೆಂಡತಿಯ ಮತ್ತು ಮಗನ ಶುಶ್ರೂಷೆಗಾಗಿ ತಲೆಬಾಗಿ ಕುಳಿತಿರುವ ಗುರುದೇವ್ ಹೇಳಿದರು: ಜಾನೋ ಭಾಯಿ.... ಒಂದು ಜೋಕ್ ಹೊಳೀತಾ ಇದೆ.

ಆತನ ತಮಾಷೆ ಕೇಳಲು ರವಿ ಅಲ್ಲೇ ಕುಳಿತುಕೊಂಡ.

* * *



### ಅಧ್ಯಾಯ ೧೩

## ಸಂಶಯದ ಸುಳಿಗಳು

ಗುರುದೇವ್ ಸಿಂಗ್ ತನ್ನ ಹೊಸ ತಮಾಷೆಗೆ ಸಿದ್ಧತೆ ನಡೆಸಿದರು. ಬಾಭಿ ಮತ್ತು ಅಂಗದ್ ಸಾವ್‌ಲಾನ್ ಸುರಿದ ಬಿಸಿನೀರಿನಲ್ಲಿ ಅದ್ದಿದ ಹತ್ತಿಯಿಂದ ಆತನ ತಲೆ ಮತ್ತು ಕೆನ್ನೆಗಳಲ್ಲಿನ ರಕ್ತದ ಕಲೆಗಳನ್ನು ಒರೆಸಿ ತೆಗೆಯುತ್ತಾ ಇದ್ದರು. ಬಾತುಕೊಂಡಿರುವ ಕೆನ್ನೆಗಳಲ್ಲಿ ಬಿಸಿ ತಾಗುವಾಗ ಆತ ನೋವಿನಿಂದ ನರಳುತ್ತಿದ್ದರು. ಆದರೂ ಆತ ತಾನಾಗಿಯೇ ತಮಾಷೆ ಹೇಳಲು ಮುಂದಾಗುತ್ತಿರುವುದನ್ನು ಕಂಡಾಗ ಅಚ್ಚರಿಯೆನಿಸಿತು. ಪ್ರಾಯಶಃ ತಾನು ಸಹಿಸಬೇಕಾಗಿ ಬಂದ ಅಪಮಾನ, ಶಾರೀರಿಕ ಹಾಗೂ ಮಾನಸಿಕ ಹಿಂಸೆ ಮೊದಲಾದುವುಗಳನ್ನೆಲ್ಲ ಒಂದು ತಮಾಷೆಯಲ್ಲಿ ಮುಳುಗಿಸಿ ಕೊಲ್ಲಲು ಆತ ಯತ್ನಿಸುತ್ತಿರಬಹುದು. ಅಪಮಾನ, ಅವಹೇಳನ ಮುಂತಾದವುಗಳಿಂದೆಲ್ಲ ಓಡಿ ಹೋಗಲು ಮನಸ್ಸು ಕಂಡರಸಿದ ಒಳದಾರಿ ಇರಬಹುದು ಅದು.

ಗುರುದೇವ್ ನರಳಿಕೆ, ಮುಲುಗುಟ್ಟುವಿಕೆಗಳ ನಡು ನಡುವೆ ಹೇಳಿದರು: ಅವಳೊಬ್ಬಳು ಕಾಲೇಜ್ ಹುಡುಗಿ. ಬೆಡಗಿ ಮಿರಾಂಡದಲ್ಲಿ ಓದುತ್ತಿರುವವಳು. ನಿತ್ಯವೂ ಡಿ.ಟಿ.ಪಿ. ಬಸ್‌ನಲ್ಲಿ ಕಾಲೇಜ್‌ಗೆ ಬರುತ್ತಾಳೆ. ಡಿ.ಟಿ.ಪಿ. ಬಸ್‌ನಲ್ಲೇ ಮರಳಿ ಹೋಗುತ್ತಾಳೆ. ಬಸ್‌ನಲ್ಲಿ ಯಾವತ್ತೂ ನೂಕುನುಗ್ಗಲಿರುತ್ತದೆ. ಅಂದ ಚೆಂದದ ಹುಡುಗಿಯರಿಗೆ ಒತ್ತುತ್ತ, ಅಂಟುತ್ತ, ಅಂಡು ಚಿವುಟುತ್ತ ಟೀಜ್ ಮಾಡುವುದು ದೆಹಲಿಯಲ್ಲಿ ಸಹಜವೆ ತಾನೇ? ಹೆಚ್ಚಿನವರು ಅದನ್ನು ಗಣನೆಗೆ ತೆಗೆದುಕೊಳ್ಳುವುದಿಲ್ಲ. ಕಿರಣ್‌ಬೇಡಿಗೆ ದೆಹಲಿಗೆ ವರ್ಗಾವಣೆ ದೊರೆಯುವ ತನಕ ಈ ಟೀಜಿಂಗ್ ಅನ್ನು ಅಷ್ಟು ಗಂಭೀರವಾಗಿ ಪರಿಗಣಿಸಲಿಲ್ಲ, ಯಾರೊಬ್ಬರೂ. ತುಸು ಸ್ಪರ್ಶ ಸುಖ... ಆತ ಕ್ಷಣ ಹೊತ್ತು ಮಾತು ನಿಲ್ಲಿಸಿ ಬೀವಿ ಬಚ್ಚೋಂ ಕೆ ಸಾಮ್‌ನೇ ಬೋಲ್ನೇ ಕೇಲಿಯೆ ಮಜ ನಹೀ ಹೈ ಎಂದು ಹೇಳಿ ತನ್ನತ್ತ ಕಣ್ಣು ಮಿಡುಕಿಸಿದ ಬಳಿಕ ಮುಂದುವರಿಸಿದರು: ಒಂದು ದಿನ ಓರ್ವ ಸರ್ದಾರ್ಜಿ ಯುವಕ ಬಸ್‌ನಲ್ಲಿದ್ದ ನೂಕು ನುಗ್ಗಲಿನ ನಡುವೆ ಆ ಹುಡುಗಿಯನ್ನು ತುಸು ಬಲ ಪ್ರಯೋಗ ಮಾಡಿಯೇ ಚುಂಬಿಸಿದ. ಬಸ್ಸಿಳಿದು ಹುಡುಗಿ ಕಿರಣ್‌ಬೇಡಿಯನ್ನು ಕಂಡು ದೂರಿತ್ತಳು. ಅಕ್ಬರ್

ಬಾದಷಾಹನ ಅರಮನೆಯಲ್ಲೂ ತಿಗಣೆ ಕಾಟವೇ ಎನ್ನುವಂತೆ ಕಿರಣ್‌ಬೇಡಿ ಬಾಟನ್ ಎತ್ತಿಕೊಂಡು ಸೈರನ್ ಫಿಟ್ ಮಾಡಲಾದ ಜೀಪ್ ತೆಗೆದುಕೊಂಡು, ಬಸ್ ಸಾಗುವ ಮಾರ್ಗದಲ್ಲಿ ಕಾಣಿಸಿದ ೧೮ ಮತ್ತು ೨೦ರ ನಡುವಿನ ಯುವಕ ಸರ್ದಾರ್‌ಗಳನ್ನೆಲ್ಲ ಹಿಡಿದು ತಂದು ಹುಡುಗಿಯ ಮುಂದೆ ಹಾಜರುಪಡಿಸಿ ಹೇಳಿದರು: ಹೇಳು, ಇವರಲ್ಲಿ ಯಾವಾತ ನಿನ್ನನ್ನು ಚುಂಬಿಸಿದ್ದ ಕೊಳಕ? ಹುಡುಗಿ ಪ್ರತಿಯೊಂದು ಮುಖವನ್ನು ದಿಟ್ಟಿಸಿದಳು. ಎಲ್ಲಾ ಸರ್ದಾರ್‌ಗಳಿಗೂ ಒಂದೇ ಮುಖ ಚಹರೆ. ದಮಯಂತಿಯ ಮುಂದೆ ಕಾಣಿಸಿಕೊಂಡ ನಳರ ಹಾಗೆ. ಪಗಡಿ, ದಾಡಿಗಳನ್ನು ಹೊರತು ಪಡಿಸಿದರೆ ಮತ್ತೆ ಮುಖದಲ್ಲಿ ಗುರುತು ಹಚ್ಚಲು ಏನೂ ಉಳಿದಿರುವುದಿಲ್ಲವಲ್ಲ? ಈ ವಿಷಯದಲ್ಲಿ ಸರ್ದಾರ್ಜಿಗಳು ಕಾಗೆಗಳ ಹಾಗೆಯೇ. ಎಲ್ಲಾ ಕಾಗೆಗಳ ಚಹರೆಯೂ ಒಂದೇ. ಒಂದರಿಂದ ಇನ್ನೊಂದನ್ನು ಪ್ರತ್ಯೇಕಿಸಿ ಗುರುತಿಸಲು ಸಾಧ್ಯವಾಗದು.

ಹುಡುಗಿ ಗೊಂದಲಕ್ಕೊಳಗಾದಳು. ಕೊನೆಗೆ ಕಿರಣ್‌ಬೇಡಿಯ ಕಿವಿಯಲ್ಲಿ ಪಿಸುಗುಟ್ಟಿದಳು: ಸಾರಿ ಮೇಡಂ. ಕೊಳಕನು ಚುಂಬಿಸುವಾಗ ನಾನು ವಾಡಿಕೆಯಂತೆ ಕಣ್ಣು ಮುಚ್ಚಿಕೊಂಡಿದ್ದೆ.

ಗುರುದೇವ್‌ರ ಅಬ್ಬರದ ನಗೆಯಲ್ಲಿ ಅಂಗದ್, ಬಾಭಿಯರೂ ಪಾಲ್ಗೊಂಡರು. ಬಿಗಿ ವಾತಾವರಣ ಥಟ್ಟನೆ ಸಡಿಲಾಯಿತು. ಅಷ್ಟರಲ್ಲಿ ಫೋನ್ ಶಬ್ದ ಮಾಡಿತು. ಅಂಗದ್ ಫೋನ್ ಚಾಚಿದ. ಆಫೀಸ್‌ನಿಂದ ರವಿಯನ್ನು ವಿಚಾರಿಸುತ್ತಿದ್ದಾರೆ. ಗುರುದೇವ್‌ರ ಫೋನ್ ಕರೆಯ ಮೇರೆಗೆ ರವಿ ಆಫೀಸ್‌ನಿಂದ ಹೊರಟದ್ದೆಂದು ಅವರಿಗೆ ಗೊತ್ತಿತ್ತು.

ತೇಜ ಎರಡು ಬಾರಿ ಫೋನ್ ಮಾಡಿದ್ದರು. ತತ್‌ಕ್ಷಣ ಸಂಪರ್ಕಿಸಬೇಕು ಎಂಬುದಾಗಿತ್ತು ಸಂದೇಶ. ರವಿ ತೇಜರ ನಂಬರ್ ಡಯಲ್ ಮಾಡಿದ. ಕಾರ್‌ಗಳ ಲಭ್ಯತೆಯ ಅಂದಾಜು ಲೆಕ್ಕ ತಿಳಿಯಲು ತೇಜ ಕರೆದದ್ದು. ಡ್ರೈವರ್ ಸಹಿತ ನೂರ ಹತ್ತು ಕಾರುಗಳು ಸಿದ್ಧವಿರುವುದಾಗಿಯೂ ನೂರೈವತ್ತು ಕಾರ್‌ಗಳ ಬಗ್ಗೆ ವಾಗ್ದಾನ ದೊರೆತಿರುವುದಾಗಿಯೂ ರವಿ ತಿಳಿಸಿದ. ಅಲ್ಲದೆ ಡ್ರೈವರ್‌ಗಳಿಲ್ಲದೆ ಇನ್ನೂರರಷ್ಟು ಕಾರ್‌ಗಳು ಬೇರೆಯೂ ದೊರೆಯಲಿವೆ. ಡ್ರೈವರ್‌ಗಳ ವಿಳಾಸ ಹುಡುಕುತ್ತ ತನ್ನ ಸಿಬ್ಬಂದಿ ನಾಲ್ದೆಸೆಗಳಿಗೂ ಧಾವಿಸುತ್ತಲಿದ್ದಾರೆಂದೂ ಹೇಳಿದ. ಉದ್ದೇಶಿಸಿದ್ದ ಸಂಖ್ಯೆ ಭರ್ತಿಯಾಗದಿದ್ದರೂ ತೇಜ ಸಂತೃಪ್ತಿ ಪ್ರಕಟಿಸಿದರು: ಈ ಪರಿಸ್ಥಿತಿಯಲ್ಲಿ ಅಷ್ಟಾದರೂ ಸಿಕ್ಕಿತ್ತಲ್ಲ. ಆದರೆ ಹೊಸತೊಂದು ಸಮಸ್ಯೆ. ದೆಹಲಿಯಲ್ಲಿ ಕರ್ಫ್ಯೂ ಜಾರಿಯಾಗಲಿದೆ. ಆದುದರಿಂದ ಎಷ್ಟು ಕಾರ್‌ಗಳು ದೊರೆಯಲಿವೆಯೋ ಅಷ್ಟೇ ಕರ್ಫ್ಯೂ ಪಾಸ್‌ಗಳನ್ನು ಸಂಗ್ರಹಿಸಬೇಕು. ಪ್ಲೀಸ್ ಗೇಟ್ ಇನ್ ಟಚ್ ವಿತ್‌ದ ಪೊಲೀಸ್ ಕಮೀಶನರ್.

ರವಿ ಫೋನ್ ಕೆಳಗಿರಿಸಿದ. ಐನೂರು ಕಾರ್‌ಗಳಿಗೆ ಐನೂರು ಕರ್ಫ್ಯೂ



ಪಾಸ್‌ಗಳನ್ನು ಸಂಪಾದಿಸಬೇಕಾಗಿದೆ. ಜನಜಂಗುಳಿಯ ಅನಿಯಂತ್ರಿತವಾದ ಹುಚ್ಚಿಗೆ ಕರ್ಫ್ಯೂ ತಕ್ಕಮಟ್ಟಿಗೆ ಮರುಮದ್ದಾದೀತು. ನಿನ್ನೆ ರಾತ್ರಿ ಮತ್ತು ಇವತ್ತು ಹಗಲು ಬೆಳಕಿನಲ್ಲಿ ಕೂಡ ದೆಹಲಿಯ ನೂರು ನೂರು ಗಲ್ಲಿಗಳಲ್ಲಿ ಕೊಲೆ, ಕೊಳ್ಳೆಗಳು ಮುಂದುವರಿಯುತ್ತಲೇ ಇವೆ. ಆದರೆ ಕರ್ಫ್ಯೂ ಜಾರಿಯಲ್ಲಿರುವಾಗ ವಿದೇಶದಿಂದ ಆಗಮಿಸುವ ವಿ.ಐ.ಪಿ.ಗಳ ಭೇಟಿ ಮತ್ತು ಅಂತ್ಯ ಸಂಸ್ಕಾರ ವಿಧಿಗಳು ಒಂದು ಭಾರೀ ಬಾಧ್ಯತೆಯಾಗಲಿದೆ. ಅಲಿಪ್ತ ಧೋರಣೆ, ಮತಾತೀತತೆ, ಪ್ರಜಾಪ್ರಭುತ್ವ ವಗೈರೆಗಳನ್ನೆಲ್ಲ ಸೂರಿನ ಮೇಲೆ ಹತ್ತಿ ನಿಂತು ಘೋಷಿಸುತ್ತಿರುವ ಭಾರತಕ್ಕೆ, ಸೇನೆ ಮತ್ತು ಸಶಸ್ತ್ರ ಪೋಲೀಸ್ ಪಡೆಗಳ ಉಸ್ತುವಾರಿಯಲ್ಲೇ ಸ್ವತಂತ್ರ ಭಾರತದಲ್ಲಿ ಅತೀ ದೀರ್ಘಾವಧಿ ಪ್ರಧಾನ ಮಂತ್ರಿಯಾಗಿದ್ದ ಜನನಾಯಕಿಯ ಅಂತ್ಯ ಸಂಸ್ಕಾರವನ್ನು ನೆರವೇರಿಸಬೇಕಾಗಿ ಬರುವುದು ಒಂದು ದೊಡ್ಡ ವಿರೋಧಾಭಾಸವಾದೀತು. ಮುಂದಿನ ವರ್ಷಗಳಲ್ಲಿ ಹೊಸ ಸರಕಾರದ ರಾಜ ತಾಂತ್ರಿಕರು ವಿದೇಶೀ ರಾಜಧಾನಿಗಳಲ್ಲಿ ನಡೆಸಬಹುದಾದ ಅತೀ ತೀವ್ರವಾದ ಪ್ರಚಾರ ಕಾರ್ಯಕ್ರಮಗಳಿಂದೇನೂ ಈ ಕಳಂಕ ತೊಡೆದು ಹಾಕಲು ಸಾಧ್ಯವಾಗಲಾರದು. ಆದರೆ ಕರ್ಫ್ಯೂ ಜಾರಿಯಲ್ಲಿರದಿದ್ದರೆ ಎಷ್ಟೋ ಜೀವಗಳು ಅನಾಥವಾದಾವು. ಎಷ್ಟೋ ಮನೆಗಳು ಬೆಂಕಿಗೆ ಆಹುತಿಯಾದಾವು. ಎಷ್ಟೋ ಸ್ವತ್ತುಗಳು ಕೊಳ್ಳೆಗೈಯಲ್ಪಟ್ಟಾವು. ಎಷ್ಟೋ ಮಂದಿ ಅಮಾಯಕ ಸ್ತ್ರೀಯರು ಅತ್ಯಾಚಾರಕ್ಕೆ ಗುರಿಯಾದಾರು.

ಇಂದ್ರಪ್ರಸ್ಥದ ಪೋಲೀಸ್ ಹೆಡ್ ಕ್ವಾರ್ಟರ್ಸ್ ಅಚ್ಚರಿ ಭರಿಸುವಷ್ಟು ಶಾಂತವೂ ನಿರ್ಜನವೂ ಆಗಿತ್ತು. ದೆಹಲಿಯಿಡೀ ಹೊತ್ತಿ ಉರಿಯುವ ಅಗ್ನಿಷ್ಟಿಕೆಯಾಗಿ ಮಾರ್ಪಟ್ಟಿರುವಾಗಲೂ ಕಾನೂನು ವ್ಯವಸ್ಥೆಯನ್ನು ಕಾಪಾಡಬೇಕಾದ ಪೋಲೀಸ್ ಕೇಂದ್ರದಲ್ಲಿ, ಮಧ್ಯಾಹ್ನ ನಿದ್ರೆಯಿಂದ ಎಚ್ಚೆತ್ತ ವೇಶ್ಯೆಯ ಮುಖದಲ್ಲೆಂಬಂತೆ ಆಲಸ್ಯ ಮತ್ತು ನಿಷ್ಕ್ರಿಯತೆಗಳು ಅಂಟಿಕೊಂಡಿವೆ. ಕಲ್ಲು ಮೆಟ್ಟಿಲುಗಳನ್ನು ಹತ್ತುವಾಗ ರವಿ ಸೆಂಟ್ರಿಯೊಡನೆ ಪ್ರಶ್ನಿಸಿದ: ಸಿ.ಪಿ.ಸ್ಥಳದಲ್ಲಿಲ್ಲವೇ? ಸೆಂಟ್ರಿ ಇಲ್ಲವೆಂದು ಸನ್ನೆ ಮಾಡಿದ. ಸಾಮಾನ್ಯವಾಗಿ ಪೊಲೀಸ್ ಹೆಡ್ ಕ್ವಾರ್ಟರ್ಸ್ ಪ್ರವೇಶ ನಿಯಂತ್ರಣಕ್ಕೆ ಒಳಪಟ್ಟಿರುತ್ತದೆ. ಅದ್ಭುತವೇ ಎನ್ನಬೇಕು. ಇವತ್ತು ಯಾರೂ ರವಿಯನ್ನು ತಡೆಯಲಿಲ್ಲ. ಯಾರೂ ಪ್ರಶ್ನೆಗಳನ್ನು ಕೇಳಲಿಲ್ಲ. ಪೋಲೀಸರಿಗೆ ಅವರ ಆತ್ಮವಿಶ್ವಾಸವೂ ಬಲವೂ ನಷ್ಟವಾಗಿವೆ. ದೆಹಲಿ ಪೋಲೀಸ್‌ನ ಚರಿತ್ರೆಯಲ್ಲೇ ಅತೀ ದೊಡ್ಡ ಪತನ ಇಂದಿನದು. ಸ್ವತಂತ್ರ ಭಾರತದ ಅತ್ಯಂತ ಅಮೂಲ್ಯವಾದ ಜೀವವನ್ನು ರಕ್ಷಿಸಲು ಸಾಧ್ಯವಾಗಲಿಲ್ಲ ಅವರಿಗೆ. ಆ ನಡುಕದಿಂದ ಚೇತರಿಸಿಕೊಳ್ಳುವ ಮುನ್ನವೇ ದೆಹಲಿಯಲ್ಲಿ ಅಲ್ಲಲ್ಲೇ ಹೋಮಾಗ್ನಿ ಕುಂಡಗಳು ಸಿದ್ಧಗೊಂಡಿದ್ದವು. ಜೀವಂತ ಮನುಷ್ಯರನ್ನು ಆಹುತಿ ಮಾಡಲಾಗುವ ಹೋಮ ಕುಂಡಗಳು ಮಾತ್ರ, ಗಂಧದ ಕಟ್ಟಿಗೆಯೂ ಮಂತ್ರೋಚ್ಚಾರಣೆಗಳೂ ಇಲ್ಲ. ಕಟ್ಟಿಗೆಗೆ ಬದಲು ಪೆಟ್ರೋಲ್, ಮಂತ್ರಕ್ಕೆ ಬದಲು ರಕ್ತಕ್ಕೆ ಪ್ರತಿಯಾಗಿ ರಕ್ತ

ಎಂಬ ಘೋಷಣೆಗಳು.

ಶಕ್ಕರ್ ಪುರಿಯಲ್ಲಿ, ತ್ರಿಲೋಕ್ ಪುರಿಯಲ್ಲಿ, ಶಾದ್ರಿಯಲ್ಲಿ, ಕೃಷ್ಣನಗರ್‌ನಲ್ಲಿ, ಚಾಂದ್ನೀ ಚೌಕ್‌ನಲ್ಲಿ, ನ್ಯೂ ಫ್ರೆಂಡ್ಸ್ ಕಾಲನಿಯಲ್ಲಿ, ಪಾಲಂಗ್ರಾಮದಲ್ಲಿ, ಸುಲ್ತಾನ್ ಪುರಿಯಲ್ಲಿ, ಮಂಗಲ್ ಪುರಿಯಲ್ಲಿ, ಮೂಡಣದ ಯಮುನಾದಿಂದ ಮೊದಲ್ಗೊಂಡು ಪಶ್ಚಿಮದ ರಿಡ್ಜ್ ತನಕ, ಪಹಾಡ್‌ಗಂಜ್, ಕೊನಾಟ್ ಪ್ಲೇಸ್, ಡಿಫೆನ್ಸ್ ಕಾಲನಿಗಳೂ ಈ ಹುಚ್ಚಿನಿಂದ ಹೊರಗುಳಿಯಲಿಲ್ಲ.

ಹೆಡ್ ಕ್ವಾರ್ಟರ್ಸ್‌ನಲ್ಲಿ ಉನ್ನತ ಸ್ಥಾನೀಯರೆಲ್ಲರ ಕೊಠಡಿಗಳೂ ಖಾಲಿ ಬಿದ್ದುಕೊಂಡಿವೆ. ಪೊಲೀಸ್ ಕಮೀಷನರ್ ಸುಭಾಸ್ ಟಂಡನ್ ತೀನ್‌ಮೂರ್ತಿಯಿಂದ ನಾರ್ತ್ ಬ್ಲಾಕ್‌ಗೂ ನಾರ್ತ್ ಬ್ಲಾಕ್‌ನಿಂದ ರಾಷ್ಟ್ರಪತಿ ಭವನ್‌ಗೂ ಅಲ್ಲಿಂದ ರಾಜ್‌ಭವನ್‌ಗೂ ಓಡಾಡುತ್ತ ಉನ್ನತ ಮಟ್ಟದ ಚರ್ಚೆಗಳಲ್ಲಿ ಪಾಲ್ಗೊಳ್ಳುತ್ತಿರುವರು. ದೆಹಲಿ ಹೊತ್ತಿ ಉರಿಯುತ್ತಿರುವಾಗ ಚರ್ಚಿಸದೆ ಇರಲು ಹೊಣೆಗಾರ ಸ್ಥಾನದಲ್ಲಿರುವವರಿಗೆ ಸಾಧ್ಯವಾಗದಲ್ಲ? ಸ್ಪೆಷಲ್ ಸೆಕ್ಯೂರಿಟಿಯ ಚಾರ್ಜ್‌ವಹಿಸುತ್ತಿರುವ ಅಡಿಶನಲ್ ಕಮೀಷನರ್ ಗೌತಮ್‌ಕೌಲ್ ಎಂಬ ಐ.ಪಿ.ಎಸ್. ಅಧಿಕಾರಿಗೆ ನೆಹರೂ ಕುಟುಂಬದ ಬಗ್ಗೆ ನಿಷ್ಠೆಯಿಲ್ಲವೆಂದು ಯಾರೂ ಆಕ್ಷೇಪಿಸಲಾರರು. ಮೋತಿಲಾಲ್ ನೆಹರೂ ಅವರ ಸಹೋದರ ನಂದ ಲಾಲ್ ನೆಹರೂ ಅವರ ಮೊಮ್ಮಗ ಆತ. ಇಂದಿರಾರ ಜೀವರಕ್ಷಣೆಯ ಹೊಣೆ ಹೊತ್ತ ಅಧಿಕಾರಿ, ಕೊಲೆಗೆ ಮುಂಚಿನ ಅಸಡ್ಡೆಗೆ ಮುಯ್ಯಿ ತೀರಿಸಲಿಕ್ಕೇ ಇರಬಹುದು. ಇಂದಿರಾರ ಕಳೇಬರದ ಸುತ್ತ ಆತ ಓಡಾಡುತ್ತಲೇ ಇದ್ದಾರೆ. ದೂರದರ್ಶನದ ಕ್ಯಾಮೆರಾಗಳು ಆಗಾಗ ಆತನ ಕಂಗಾಲಾದ ಮುಖವನ್ನು ಟಿ.ವಿ. ತೆರೆಯಲ್ಲಿ ತೋರಿಸಲು ಮರೆಯುತ್ತಾ ಇಲ್ಲ. ಶಾಂತಿ ಸುವ್ಯವಸ್ಥೆಗಳ ಪಾಲನೆಗೆ ನಿಯೋಜಿಸಲ್ಪಡಬೇಕಾಗಿದ್ದ ಒಂದು ಬೃಹತ್ ಗಾತ್ರದ ಪೊಲೀಸ್ ಪಡೆ ತೀನ್‌ಮೂರ್ತಿಯ ಸುತ್ತಲೂ ಪೋಸ್ಟ್ ಮಾಡಲ್ಪಟ್ಟಿದೆ. ಅಶ್ರುಪೂಜೆ ಸಲ್ಲಿಸಲು ಬರುವ ಅಪಾರ ಜನತೆಯನ್ನು ನಿಯಂತ್ರಿಸಬೇಕಾದ ಜವಾಬ್ದಾರಿಯೂ ಪೊಲೀಸರಿಗಿದೆಯಲ್ಲ.

ಕಂಟ್ರೋಲ್ ರೂಮ್‌ನ ಚಾರ್ಜ್ ವಹಿಸುತ್ತಿರುವ ನಿಖಿಲ್ ಕುಮಾರ್ ಮಾತ್ರ ತನ್ನ ಕೋಣೆಯಲ್ಲೇ ಇದ್ದರು. ಸೆಕ್ಯೂರಿಟಿಗೆ ಸಂಬಂಧಿಸಿದ ಸೆಮಿನಾರ್‌ಗಳಲ್ಲಿ ಎರಡೋ, ಮೂರೋ ಬಾರಿ ರವಿ ಆತನನ್ನು ಕಂಡಿದ್ದ. ದಣಿದಿದ್ದು, ದುಃಖಿತರೂ ಆಗಿದ್ದರು ಆತ. ಸುತ್ತಲೂ ಸಂಭವಿಸುತ್ತಿರುವ ಭಯಾನಕ ದುರಂತಗಳ ಬಗ್ಗೆ ಏನೂ ಗೊತ್ತಿಲ್ಲದವರಂತೆಯೇ ಆತ ಕಾಣಿಸಿದರು. ಅಥವಾ ಆತ ವರ್ತಿಸಿದ್ದು ಆ ರೀತಿಯಾಗಿ. ಕೆಲವೆಡೆಗಳಲ್ಲಿ ಚಿಕ್ಕ ಪುಟ್ಟ ಪ್ರಕರಣಗಳು ಸಂಭವಿಸಿರಲೂಬಹುದೆಂದು ಆತ ಒಪ್ಪಿಕೊಂಡರು. ಯಾರೂ ಹತ್ಯೆಯಾಗಿರುವುದಾಗಿ ಆತನಿಗೆ ಗೊತ್ತಿಲ್ಲ. ಲೋಕಲ್ ಸ್ಟೇಶನ್‌ನ ಆಫೀಸರ್‌ಗಳು ಅಪಾಯ ಸ್ಥಿತಿಯ ಕುರಿತು ಈ ತನಕ ಏನನ್ನೂ



ಸೂಚಿಸಿಲ್ಲ. ಆತ ಚಹಾ ತರಿಸಲೇ ಎಂದು ಉಪಚರಿಸಿದರು. ಕರ್ಫ್ಯೂ ಪಾಸ್ ಬಗ್ಗೆ ಕಮೀಷನರ್ ಬಾರದೆ ನಿರ್ಧಾರವೇನೂ ತೆಗೆದುಕೊಳ್ಳುವಂತಿಲ್ಲ. ಕಾದಿರಿ, ಅವರು ಬರುವರು. ಈ ಸಂದರ್ಭದಲ್ಲಿ ಅವರು ಗಡಿಬಿಡಿಯಲ್ಲಿರುತ್ತಾರೆಂದು ಪ್ರತ್ಯೇಕ ಹೇಳಬೇಕಾಗಿಲ್ಲವಲ್ಲ.

ಆತನ ಕೋಣೆಯಿಂದ ಹೊರ ಬರುವಾಗ ಒಂದು ಸಂಗತಿ ರವಿಯ ಮನಸ್ಸನ್ನು ಮಥಿಸುತ್ತಿತ್ತು. ರೋಮ್ ಹೊತ್ತಿ ಉರಿಯುತ್ತಿರುವಾಗ ನೀರೋ ವೀಣೆ ನುಡಿಸುತ್ತಿದ್ದ. ಇಲ್ಲಿ ದೆಹಲಿ ಹೊತ್ತಿ ಭುಗಿಲೇಳುತ್ತಿರುವಾಗ ವೀಣೆ ನುಡಿಸತಕ್ಕ ಉದ್ಧಟತನವನ್ನು ಯಾರೂ ತೋರ್ಪಡಿಸಲಿಲ್ಲ ಅಷ್ಟೇ. ಪರಿಚಿತರೇ ಆದ ಇತರ ಐ.ಪಿ.ಎಸ್. ಅಧಿಕಾರಿಗಳ ನಾಮಫಲಕಗಳು ಅವರವರ ಕೋಣೆಯ ಗೋಡೆಗೆ ಅಂಟಿಕೊಂಡಿರುವುದು ಕಾಣಿಸಿತು. ಆದರೆ ಕೋಣೆಯೊಳಗೆ ಕುರ್ಚಿಗಳು ಬರಿದಾಗಿವೆ. ಐ.ಪಿ.ಎಸ್.ಗಳ ಕುರಿತು ಐ.ಎ.ಎಸ್.ಗಳು ಹೇಳಿ ಹಬ್ಬಿಸುವ ಒಂದು ಕಿಲಾಡಿತನದ ನುಡಿ ಇದೆ. ಖಾಕಿ ಪೋಷಾಕಿನವರು ಕರ್ಮ ಕುಶಲರೂ ಕಾರ್ಯ ದಕ್ಷರೂ ಹೌದು. ಅವರು ಎಲ್ಲವನ್ನೂ ಮಾಡುತ್ತಾರೆ: ತಾವು ಮಾಡಬೇಕಾದುದನ್ನು ಹೊರತು ಪಡಿಸಿ.

ಕೊನೆಗೆ ರವಿ ಕಮೀಷನರರ ಸ್ಟಾಫ್ ಆಫೀಸರನ್ನು ಪತ್ತೆ ಹಚ್ಚಿದ. ಕಮೀಷನರ್ ಬಂದೊಡನೆ ಐನೂರು ಕರ್ಫ್ಯೂ ಪಾಸ್‌ಗಳನ್ನು ಸಿದ್ಧಗೊಳಿಸಿ ಇರಿಸಲು ವಿನಂತಿಸಿದ. ಅಗತ್ಯವಿರುವ ಬೇಡಿಕೆ ಪತ್ರಗಳನ್ನು ಸಹಿ ಹಾಕಿ ಕೊಟ್ಟ. ಕಾರ್ಯ ಸಮರ್ಥ ನಡು ವಯಸ್ಕ ಆ ಅಧಿಕಾರಿ. ಮೋಟಾಗಿ ಕತ್ತರಿಸಲಾದ ಕೂದಲಿನಲ್ಲಿ ಅಲ್ಲಲ್ಲಿ ನರೆ ಹಬ್ಬಿದೆ. ಎಲ್ಲವೂ ಗೊತ್ತಿದ್ದೂ ಏನೂ ಗೊತ್ತಿಲ್ಲವೆಂಬ ಮುಖಭಾವ. ರವಿಯ ಹೆಸರು ಪರಿಚಿತವಾಗಿರುವುದರಿಂದಿರಬೇಕು. ಅಧಿಕಾರಿ ಎದ್ದು ಕೈ ಮುಗಿದರು. ಬಳಿಕ ಸ್ವತಃ ಪರಿಚಯಿಸಿಕೊಂಡರು. ನನ್ನ ಹೆಸರು ವರ್ಮಾ. ತಮ್ಮ ಕೈ ಕೆಳಗೆ ಕೆಲಸ ಮಾಡುತ್ತಿರುವ ವಿನೋದ್ ಕುಮಾರ್ ನನ್ನ ಅಳಿಯ. ವರ್ಮಾ ರವಿಯನ್ನು ಕುಳಿತುಕೊಳ್ಳಲು ಕೇಳಿಕೊಂಡರು. ಸಿ.ಪಿ. ಬಂದೊಡನೆ ಕರ್ಫ್ಯೂ ಪಾಸ್‌ಗಳನ್ನು ಸರಿಪಡಿಸಿ ನಿಮ್ಮ ಆಫೀಸ್‌ಗೆ ತಲಪಿಸುತ್ತೇನೆ. ಆ ಬಗ್ಗೆ ಚಿಂತಿಸಬೇಡಿ. ಆದರೆ, ಒಂದು ಚಿಕ್ಕ ಬೇಡಿಕೆ. ತಾವು ಕಾಫಿ ಕುಡಿದೇ ಹೋಗಬೇಕು. ತಾವು ಕಾಫೀನೇ ಕುಡಿಯೋದೆಂದು ವಿನೋದ್ ಹೇಳುತ್ತಾ ಇರುತ್ತಾನೆ. ನನ್ನ ಮಗಳು ತಮ್ಮಿಂದಾಗಿ ಅಲ್ಪಸ್ವಲ್ಪ ಆಕ್ಷೇಪಣೆಗೂ ಗುರಿಯಾಗುತ್ತಾ ಇದ್ದಾಳೆ. ತಮ್ಮ ಆಫೀಸ್‌ನಿಂದ ಯಾವಾಗಲಾದರೂ ಸಿಗುತ್ತಿದ್ದ ಕಾಫಿಯ ಸಮೀಪ ಮಟ್ಟಕ್ಕೂ ತಲಪುವಲ್ಲಿ ನನ್ನ ಮಗಳು ತಯಾರಿಸುವ ಕಾಫಿ ಎಂಬುದೇ ಆಕ್ಷೇಪಣೆ.

ಕ್ಷಮಿಸಿ ವರ್ಮಾ, ನನ್ನಿಂದಾಗಿ ಅವರಿಬ್ಬರ ನಡುವೆ ಅಪಸ್ವರವೇಳುತ್ತಿರುವ ಬಗ್ಗೆ ನಾನು ವಿಷಾದಿಸುತ್ತೇನೆ.

ವರ್ಮ ನಗುತ್ತ ಮೇಜಿನ ಮೇಲಿನ ಗಂಟೆ ಬಾರಿಸಿದರು. ಯೂನಿಫಾರ್ಮ್ ತೊಟ್ಟುಕೊಂಡಿರುವ ಓರ್ವ ಕಾನ್ಸ್ಟೇಬಲ್ ಹಾಜರಾದ: ಸಾಬ್ ಕೇಲಿಯೇ ಡಬಲ್ ಸ್ಪೆಷಲ್ ಬಡಿಯಾ ಕಾಫಿ ಲೇಕೆ ಆಜಾವೊ!

ಕಾನ್ಸ್ಟೇಬಲ್‌ಗೆ ನೆನಪಿಸಿದರು: ಚೀನೀ ಔರ್ ದೂದ್ ಬಹುತ್ ಕಂ.

ಇಸ್ಕಾ ಮತ್‌ಲಬ್ ಡಬಲ್‌ಸ್ಟ್ರಾಂಗ್. ಕಾನ್ಸ್ಟೇಬಲ್‌ಗೆ ವಿಷಯ ಅರ್ಥವಾಯ್ತು–ದೆಹಲಿಯಲ್ಲಿ ಒಳ್ಳೆಯ ಕಾಫಿ ಎಂದರೆ ಹೇರಳವಾಗಿ ಹಾಲು ಹಾಗೂ ಅಷ್ಟೇ ಸಕ್ಕರೆಯನ್ನೂ ಹಾಕಿ ಖೀರ್‌ನಂತೆ ಸಿಹಿಯಿರುವ ಕಾಫಿ ಎಂದೇ ಅರ್ಥ.

ಹೇಳಿರಿ ವರ್ಮಾ, ಜನ ಸಾಮಾನ್ಯರಿಗೆ ಗೊತ್ತಿಲ್ಲದ ಏನೇನು ಮಾಹಿತಿಗಳಿವೆ ಪೊಲೀಸರ ಬಳಿ? ದಾರಿ ತಪ್ಪಿದ್ದ ಇಬ್ಬರು ಸರ್ದಾರ್ ಯುವಕರಷ್ಟೇ ಅಪರಾಧಿಗಳೇ? ಅಥವಾ ವಿದೇಶಿಯವೋ. ದೇಶಿಯವೋ ಆದ ನಿಗೂಢ ಮೂಲದಿಂದ ರೂಪಿತವಾದದ್ದಾಗಿತ್ತೆ ಈ ಕಗ್ಗೊಲೆ?

ವರ್ಮ ಕುರ್ಚಿಗೊರಗಿ ಕುಳಿತರು. ಒಂದು ಕ್ಷಣ ಕಣ್ಣು ಮುಚ್ಚಿಕೊಂಡರು. ಬಳಿಕ ಹೇಳತೊಡಗಿದರು: ಕೊಲೆಗಾರರಲ್ಲಿ ಒಬ್ಬಾತ ಅನುಮಾನಾಸ್ಪದ ರೀತಿಯಲ್ಲಿ ಕೊಲೆಯಾಗಿರುವನು. ಇನ್ನೊಬ್ಬಾತ ಗುಂಡುಗಳು ತಗುಲಿ ಆಸ್ಪತ್ರೆಯಲ್ಲಿ ಇಂಟೆನ್ಸಿವ್ ಕೇರ್ ಯೂನಿಟ್‌ನಲ್ಲಿರುವನು. ಪೊಲೀಸರಿಗೆ ಆತ ಪ್ರಶ್ನಿಸಲು ಸಿಗಬೇಕಾದರೆ ಇನ್ನೂ ಬಹಳ ದಿನ ಕಳೆಯಬೇಕಾದೀತು. ಆತ ಗಂಭೀರ ಪರಿಸ್ಥಿತಿಯಲ್ಲಿರುವನು. ಪ್ರಾಯಶಃ ಪ್ರಶ್ನಿಸಲ್ಪಡದೆಯೇ ಆತ ಗೊಟಕ್ ಎನ್ನಲೂ ಬಹುದು. ಹಾಗಾಗಿಬಿಟ್ಟರೆ, ಬಹಳಷ್ಟು ಪ್ರಶ್ನೆಗಳಿಗೆ ಯಾವತ್ತೂ ಉತ್ತರ ಕಂಡುಕೊಳ್ಳಲು ಸಾಧ್ಯವಾಗಲಾರದು. ಒಂದನೆಯ ನಂಬರ್ ಸಫ್ದರ್‌ಗಂಜ್ ರೋಡ್‌ನಲ್ಲಿ ನಿನ್ನೆ ಕೂಡ ಮುಂಜಾನೆಯ ಬೆಳಕು ಪಸರಿಸಿದ್ದು ಎಂದಿನಂತೆಯೇ. ಆದರೆ, ಸಂಪೂರ್ಣ ಎಂದಿನ ಕ್ರಮದಲ್ಲೇ ಎನ್ನುವಂತಿಲ್ಲ. ೧೯೬೬ರಲ್ಲಿ ಪ್ರಧಾನಿಯಾದಂದಿನಿಂದ ಇಂದಿರಾ ಒಂದು ರೂಢಿಯನ್ನು ಮುಂದುವರಿಸಿಕೊಂಡು ಬಂದಿದ್ದರು–ಬೆಳಗ್ಗೆ ಎಂಟು ಗಂಟೆಗೆ ಜನರಿಗೆ ದರ್ಶನ ನೀಡುವುದು. ನಿನ್ನೆ ದರ್ಶನ ರದ್ದು ಪಡಿಸಿದ್ದರು. ರಾಜೀವರ ಮಕ್ಕಳು ರಾಹುಲ್ ಮತ್ತು ಪ್ರಿಯಾಂಕ ಅಪಘಾತವೊಂದರಲ್ಲಿ ಸಿಲುಕಿ ಅಲ್ಪಸ್ವಲ್ಪ ಗಾಯಗೊಂಡಿದ್ದರು. ನಾಲ್ಕು ವರ್ಷಗಳ ಹಿಂದೆ ವಿಮಾನಾಪಘಾತದಲ್ಲಿ ಸಿಲುಕಿ ಸಂಜಯ್ ಇಂದಿರಾರನ್ನು ತೀರಾ ವಿಚಲಿತರನ್ನಾಗಿ ಮಾಡಿತ್ತು. ಎಳೆಯ ಪೀಳಿಗೆಯಿಂದ ಹಿಮ್ಮುಖವಾಗಿಯೇ ವಧೆಗೈಯಲಾಗುವುದೆಂದು, ಬ್ಲೂಸ್ಟಾರ್‌ನ ಬಳಿಕ ಉಗ್ರವಾದಿಗಳ ವಿವಿಧ ಪಂಗಡಗಳು ತೆಗೆದುಕೊಂಡ ನಿರ್ಧಾರ ಗುಪ್ತಚರ ವೃತ್ತಗಳಲ್ಲಿ ಗುಟ್ಟಾಗಿರಲಿಲ್ಲ. ವರುಣ್, ರಾಹುಲ್, ಪ್ರಿಯಾಂಕ ಬಳಿಕ ಇಂದಿರಾ, ನೆಹರೂ ವಂಶವನ್ನು ಸಂಪೂರ್ಣ ತೊಡೆದು ಹಾಕುವುದೇ ಆಗಿತ್ತು ಅವರ ಗುರಿ. ಇಂದಿರಾರಿಗೂ ಇದು ಗೊತ್ತಿತ್ತು. ಎಲ್ಲಾ



ಇಂಟೆಲಿಜೆನ್ಸ್ ಏಜೆನ್ಸಿಗಳಿಂದಲೂ ಅವರಿಗೆ ವರದಿ ದೊರೆಯುತ್ತಾ ಇದ್ದುವು. ರಾಜೀವ್ ಇದ್ದದ್ದು ಪಶ್ಚಿಮ ಬಂಗಾಲದಲ್ಲಾಗಿತ್ತಲ್ಲ? ಇಂದಿರಾ ಅವರೂ ಒರಿಸ್ಸಾದಿಂದ ಮೊನ್ನೆಯಷ್ಟೇ ಮರಳಿ ತಲಪಿದ್ದರು. ರಾಷ್ಟ್ರಪತಿ ಭವನ್‌ನ ಹಿಂಭಾಗದಲ್ಲಿರುವ ವಿಲಿಂಗ್‌ಟನ್ ಕ್ರಿಸೆಂಟ್‌ನಲ್ಲಿ, ಗೋಳಾಕ್‌ಖಾನದ ಬಳಿಯ ಸಂತ ಕೊಲಂಬಸ್ ಸ್ಕೂಲ್‌ನಿಂದ ಮತ್ತು ಜೀಸಸ್ ಲ್ಯಾಂಡ್ ಮೇರಿಯಿಂದ ರಾಹುಲ್ ಮತ್ತು ಪ್ರಿಯಾಂಕ ಮರಳುವಾಗ ಆ ಅಪಘಾತ ಸಂಭವಿಸಿತ್ತು. ವೇಗವಾಗಿ ಧಾವಿಸುತ್ತ ಬಂದ ಒಂದು ವ್ಯಾನ್ ಮಕ್ಕಳು ಪ್ರಯಾಣಿಸುತ್ತಿದ್ದ ಕಾರನ್ನು ಹಿಂದಿನಿಂದ ಗುದ್ದಿತ್ತು. ಸಾಧ್ಯವಿದ್ದಷ್ಟು ಹೊತ್ತೂ ಮಕ್ಕಳ ಜತೆಯಲ್ಲಿ ಕಳೆಯಲು ಅಜ್ಜಿ ಬಯಸಿದರು. ಮೊಮ್ಮಕ್ಕಳನ್ನು ಸಂತೈಸುವುದರೊಂದಿಗೇ, ಅವರೊಂದಿಗೆ ಸ್ವತಃ ಸಾಂತ್ವನ ಕಂಡುಕೊಳ್ಳುತ್ತಾ ಇತ್ತು ಆಕೆಯ ತಳಮಳಗೊಂಡ ಹೃದಯ. ಆದುದರಿಂದಲೇ ನಿನ್ನೆ ಜನತಾ ದರ್ಶನವನ್ನು ಆಕೆ ರದ್ದು ಪಡಿಸಿದ್ದರು.

ಆದರೆ ಐರಿಶ್ ಟೆಲಿವಿಶನ್‌ನ ಪ್ರತಿನಿಧಿ ಪೀಟರ್ ಉಸ್ತಿನೋವ್ ಅವರ ಬಗ್ಗೆ ಒಂದು ವ್ಯಕ್ತಿಚಿತ್ರ ನಿರ್ಮಿಸುತ್ತಾ ಇದ್ದ. ಬೆಳಗ್ಗೆ ೮.೩೦ಕ್ಕೆ ಆಗಿತ್ತು, ಆ ಅಪಾಯಿಂಟ್‌ಮೆಂಟ್. ಕೊನೆಯ ನಿಮಿಷದಲ್ಲಿ ಅದು ಅರ್ಧ ತಾಸು ಮುಂದೂಡಲ್ಪಟ್ಟಿತ್ತು. ರಷ್ಯಾದೊಂದಿಗೆ ತೀರಾ ನಿಕಟ ಸಂಪರ್ಕ ಹೊಂದಿರುವ ಉಸ್ತಿನೋವ್‌ನ ಕ್ಯಾಮೆರವನ್ನು ಎದುರಿಸಲು ೯.೩೦ಕ್ಕೆ ತಮ್ಮ ನಿವಾಸದಿಂದ ಹೊರಟ ಇಂದಿರಾ ಒಂದನೆಯ ನಂಬರ್ ಅಕ್ಬರ್ ರೋಡ್‌ನ ಕೆಂಗಲ್ಲ ಚಪ್ಪಡಿಗಳನ್ನು ಹಾಸಲಾದ ಕಾಲುದಾರಿ ಗುಂಟ ನಡೆದು ತಮ್ಮ ಅಂತ್ಯವನ್ನೇ ಎದುರು ಗೊಂಡರು!

ಪರ್ಸನಲ್ ಸೆಕ್ಯೂರಿಟಿ ಆಫೀಸರ್ ದಿನೇಶ್ ಭಟ್ ಎರಡು ಹೆಜ್ಜೆ ಹಿಂದಿನ ತನಕವೂ ಅವರನ್ನು ಹಿಂಬಾಲಿಸಿದ್ದ. ಅವರ ರಕ್ಷಣೆಯ ಬಗ್ಗೆ ನಿಗಾವಹಿಸಲು ಮೂವರು ಪರ್ಸನಲ್ ಸೆಕ್ಯೂರಿಟಿ ಆಫೀಸರ್‌ಗಳಿದ್ದರು. ನಿಯಮಾನುಸಾರ ಪಿ.ಎಸ್.ಓ.ಗಳು ಅವರ ಹಿಂದೆ ಅಲ್ಲ. ಪಾರ್ಶ್ವಗಳಲ್ಲಿ ಜತೆಯಾಗಿಯೇ ನಡೆಯಬೇಕು: ಸುತ್ತಲೂ ಗಮನಿಸುತ್ತಿರಬೇಕು. ಆದರೆ, ನಿನ್ನೆ ಆ ನಿರ್ಣಾಯಕ ಕ್ಷಣದಲ್ಲಿ ದಿನೇಶ್ ಭಟ್‌ನನ್ನು ಹಿಂದಿನಿಂದ ಕರೆಯಲಾಯಿತು. ಪಿತೂರಿಯ ಅಂಶವಾಗಿತ್ತೇ ಆ ಕರೆ? ಗೊತ್ತಿಲ್ಲ. ಭಟ್ ಹಿಂತಿರುಗಿದ್ದ ಎರಡೇ ನಿಮಿಷದೊಳಗೆ ಗುಂಡುಗಳು ಹಾರಿದ್ದುವು.

ಮೊದಲು ಗುಂಡು ಹೊಡೆದವನು ಬಿಯಾಂತ್ ಸಿಂಗ್. ಬಳಿಕ ಸತ್‌ವಂತ್ ಸಿಂಗ್‌ನ ಮೆಷಿನ್‌ಗನ್ ಅವಿರತವಾಗಿ ಗುಂಡಿನ ಮಳೆಗರೆಯಿತು. ದಿನೇಶ್ ಭಟ್‌ರಿಗೆ ಏನೂ ಮಾಡಲು ಸಾಧ್ಯವಾಗಲಿಲ್ಲ.

ಯಾವತ್ತೂ ಇಂದಿರಾರ ನೆರಳಾಗಿರುತ್ತಿದ್ದ ಧವನ್ ಸಹ ನಿನ್ನೆ ಕ್ರಮ ತಪ್ಪಿಸಿದ್ದರು. ವಿದೇಶಾಂಗ ಖಾತೆಯ ಪಾರ್ಥಸಾರಥಿಯೊಂದಿಗೆ ಮಾತನಾಡುತ್ತಾ ನಿಂತಿದ್ದ ಧವನ್ ಇಂದಿರಾರ ಜತೆ ತಲಪಲು ಕೆಲವು ನಿಮಿಷ ತಡವಾಗಿತ್ತು. ಧವನ್ ಸಮೀಪ

ತಲಪುವುಷ್ಟರಲ್ಲಿ ಇಂದಿರಾ ಸ್ವಂತ ರಕ್ತದಲ್ಲಿ ತೊಯ್ದಿದ್ದರು.

"ಇಟಲಿಯವಳಾದ ಸೋನಿಯಾ ೧೯೬೮ರಿಂದ ಮನೆಯ ಯಜಮಾನಿಯ ಕರ್ತವ್ಯ ನಿರ್ವಹಿಸುತ್ತಿದ್ದರು. ಒಂದು ಡ್ರೆಸಿಂಗ್ ಗೌನ್ ಮಾತ್ರ ತೊಟ್ಟುಕೊಂಡಿದ್ದ ಆಕೆ ಚಪ್ಪಲಿ ಕೂಡ ಹಾಕದೆ ಧಾವಿಸಿ ಬಂದರು. ಘಟನೆಯ ಗಂಭೀರತೆಯನ್ನು ಆಕೆ ಒಂದೇ ನೋಟದಲ್ಲಿ ಅರಿತುಕೊಂಡರು. ಮೊದಲು ಸಂಯಮ ಗಳಿಸಿದ್ದೂ ಆಕೆಯೇ. ಅಷ್ಟರಲ್ಲೇ ಪೊತೇದಾರ್ ಒಂದು ಅಂಬಾಸಿಡರ್ ಕಾರನ್ನು ತರಿಸಿದರು. ಪೂರ್ವ ತಯಾರಿಯೊಂದಿಗೆ ಕಾದು ನಿಂತಿದ್ದ ಆ್ಯಂಬುಲೆನ್ಸ್ ಯಾರ ನೆನಪಿಗೂ ಬರಲಿಲ್ಲ. ಎಮರ್ಜೆನ್ಸಿ ಡಾಕ್ಟರ್ ಧಾವಿಸಿ ಬಂದರು. ಮೌತ್ ಟು ಮೌತ್ ರೆಸ್ಪಿರೇಶನ್ ನಡೆಸಿದರೂ ಪ್ರಯೋಜನವಾಗಲಿಲ್ಲ. ಆ್ಯಂಬುಲೆನ್ಸಿನಲ್ಲಿ ಆಕ್ಸಿಜನ್ ಸಿಲಿಂಡರ್ ಇರುವುದನ್ನು ಡಾಕ್ಟರೂ ಮರೆತಿದ್ದರು. ಸೋನಿಯಾ ಇಂದಿರಾರ ತಲೆಯನ್ನು ತೊಡೆಯ ಮೇಲಿರಿಸಿದರು. ಕಾರ್‌ನಲ್ಲಿ ಎ.ಐ.ಎಂ.ಎಸ್.ಗೆ ತೆರಳಿದರು. ಮುಂದಿನ ಘಟನೆಗಳೆಲ್ಲ ತಮಗೆ ಗೊತ್ತಿಲ್ಲ."

ನೆಹರೂ ಕುಟುಂಬದ ರಾಜ್ಯಭಾರ ಕೊನೆಗೊಳಿಸಲು ಮಾಡಲಾದ ಒಂದು ಇನ್‌ಸೈಡ್ ಜಾಬ್ ಈ ಕೊಲೆ ಎನ್ನುವುದರಿಂದ ಮೊದಲ್ಗೊಂಡು ಈ ಕುಕೃತ್ಯದ ಹಿಂದೆ ಒಂದು ಅಂತಾರಾಷ್ಟ್ರೀಯ ಸಂಘಟನೆಯ ಕೈವಾಡ ಇದೆ ಎನ್ನುವವರೆಗೆ ಊಹಾಪೋಹಗಳಿವೆ. ಕೊಲೆಯಾಗಿರುವಾಕೆ ನಿಜವಾದ ಇಂದಿರಾ ಅಲ್ಲ. ತನ್ನ ಮಗನಿಗೆ ಅಧಿಕಾರ ಹಸ್ತಾಂತರಿಸಲಿಕ್ಕಾಗಿ ಓರ್ವ ಡ್ಯೂಪನ್ನು ಕೊಲ್ಲಿಸಿದ್ದು, ನಿಜವಾದ ಇಂದಿರಾ ಇಟಲಿಯಲ್ಲಿರುವರು ಎಂಬಂತಹ ಒಂದು ಕ್ರೂರವಾದ ಹಾಸ್ಯಾಸ್ಪದ ಆಪಾದನೆ ಕೂಡ ಹಬ್ಬಿಕೊಂಡಿದೆ. ಈ ಕೊಲೆಯ ಹಿಂದೆ ಇರುವುದು ಕೆ.ಜಿ.ಬಿ. ಎಂದೂ, ಅಲ್ಲ ಸಿ.ಐ.ಎ.ಎಂದೂ, ಅದೂ ಅಲ್ಲ ಮೊಸಾದ್ ಎಂದೂ, ಅದೂ ಅಲ್ಲ ಪಾಕಿಸ್ತಾನ್ ಎಂದೂ ಅನೇಕ ಮಂದಿ ಅನೇಕ ರೀತಿಯಲ್ಲಿ ಹೇಳುತ್ತಾ ಇದ್ದಾರೆ.

ಅಂತೂ ಪೊಲೀಸರನ್ನು ಕಂಗೆಡಿಸುವಂಥ ಅನೇಕ ಸಮಸ್ಯೆಗಳು ಇದ್ದೇ ಇವೆ. ಸತ್‌ವಂತ್ ಸಿಂಗ್‌ನ ಕೈಯಲ್ಲಿದ್ದದ್ದು ಒಂದು ಎಸ್.ಎ.ಎಫ್. ಕಾರ್ಬಯಿನ್ ಮತ್ತು ೨೫ ಬುಲೆಟ್‌ಗಳು. ಬಿಯಾಂತ್ ಸಿಂಗ್‌ನ ವಶ ಒಂದು ರಿವಾಲ್ವರ್ ಮತ್ತು ಐದು ಗುಂಡುಗಳಷ್ಟೇ. ಮೂರು ಸೆಕೆಂಡುಗಳೊಳಗೆ ಗುಂಡೆಸೆತ ಕೊನೆಗೊಂಡಿತ್ತೆಂದೂ ಇಬ್ಬರು ಕೊಲೆಗಡುಕರೂ ಶಸ್ತ್ರ ಒಪ್ಪಿಸಿ ಶರಣಾಗತರಾದರೆಂದೂ ಪ್ರತ್ಯಕ್ಷದರ್ಶಿಗಳು ಹೇಳಿದ್ದಾರೆ. ಶಸ್ತ್ರಾಸ್ತ್ರಗಳ ಬಗ್ಗೆ ಸ್ವಲ್ಪವಾದರೂ ತಿಳಿವಳಿಕೆ ಇರುವವರಿಗೆ ಒಂದು ಎಸ್.ಎ.ಎಫ್. ಕಾರ್ಬಯಿನ್ ರೀಲೋಡ್ ಮಾಡಲು ಎರಡು ನಿಮಿಷ ಬೇಕೆಂದು ಗೊತ್ತು. ಇಂದಿರಾರ ಮೈಯಲ್ಲಿ ಐವತ್ತಕ್ಕಿಂತಲೂ ಹೆಚ್ಚು ಗುಂಡುಗಳಿಂದಾದ ಗಾಯಗಳಿವೆ. ಬಿಯಾಂತ್ ಸಿಂಗ್ ಮತ್ತು ಸತ್‌ವಂತ್ ಸಿಂಗ್ ತಮ್ಮ ಆಯುಧಗಳನ್ನು ರೀಲೋಡ್ ಮಾಡಲಿಲ್ಲವೆಂದೂ ಪ್ರತ್ಯಕ್ಷದರ್ಶಿಗಳು ಹೇಳುತ್ತಿರುವರು. ಅಷ್ಟೇ ಅಲ್ಲ ಮೂರು ಸೆಕೆಂಡುಗಳಲ್ಲಿ ಎಸ್.ಎ.ಎಫ್.ರಿಲೋಡ್ ಮಾಡುವುದು ಶಕ್ಯವೇ ಇಲ್ಲ. ಇಂದಿರಾರ ಶರೀರದಲ್ಲಷ್ಟೇ ಅಲ್ಲ, ನೆಲಕ್ಕೂ ರಾಮೇಶ್ವರ ದಯಾಲ್‌ನ ಕಾಲಿಗೂ ಗುಂಡುಗಳು ತಗಲಿವೆ. ಇಷ್ಟೆಲ್ಲ ಗುಂಡುಗಳು ಎಲ್ಲಿಂದ ಬಂದವು?



ಬಿಯಾಂತ್ ಮತ್ತು ಸತ್‌ವಂತ್ ಅಷ್ಟೇ ಅಲ್ಲದೆ, ಅಜ್ಞಾತರೂ ಅದೃಶ್ಯರೂ ಆದ ಕೊಲೆಗಾರರೂ ಇದ್ದಿರಬಹುದೆಂದೇ ತರ್ಕಿಸಬೇಕಾಗುತ್ತದೆ. ಪೋಸ್ಟ್ ಮಾರ್ಟಂ ಬಳಿಕ ಇಂದಿರಾರ ದೇಹದಿಂದ ಹೊರ ತೆಗೆದದ್ದು ಎರಡೇ ಎರಡು ಗುಂಡುಗಳನ್ನು. ಅದರಲ್ಲಿ ಒಂದು ಸತ್‌ವಂತ್‌ನ ಕೋವಿಗೂ ಇನ್ನೊಂದು ಬಿಯಾಂತ್‌ನ ಕೋವಿಗೂ ಸರಿ ಹೊಂದುತ್ತದೆ ಎಂದು ಮೊದಲ ಪರಿಶೀಲನೆಯಲ್ಲಿ ಸಾಬೀತಾಗಿದೆ. ಆದರೆ ಮಿಕ್ಕ ನಾಲ್ಕು ಡಜನ್‌ಗಿಂತಲೂ ಹೆಚ್ಚಿನ ಗುಂಡುಗಳು ಏನಾದವು?

ಸೇಡು ತೀರಿಸಲಿಕ್ಕಿರುವ ಅಮೃತ್‌ಪಾನ ನಡೆಸುವ ವೇಳೆ, ಗುರುದ್ವಾರದ ಗ್ರಂಥಿ, ಸತ್‌ವಂತ್ ಮತ್ತು ಬಿಯಾಂಗ್ ಸಿಂಗ್‌ರಿಗೆ ಬೋಧಿಸಿದ್ದ: ಗುರು ಗೋವಿಂದ್ ನಿಮಗೆ ಸೂಚನೆ ಕೊಡುವರು. ಒಂದೋ ಬಿಳಿ ಕುದುರೆಯ ಮೇಲೆ ಹತ್ತಿ ಬಂದು ಗುರುದೇವನು ಕನಸಿನಲ್ಲಿ ನಿಮ್ಮನ್ನು ಅನುಗ್ರಹಿಸುವರು. ಅಲ್ಲವಾದರೆ ಅವರ ಮೆಚ್ಚಿನ ಪಕ್ಷಿ ಸ್ವರ್ಣ ಗಿಡುಗ ನಿಮ್ಮ ತಲೆಯ ಮೇಲ್ಗಡೆ ಸುತ್ತು ಹೊಡೆದು ಹಾರಾಡುತ್ತದೆ. ಮೊನ್ನೆ ದಿನ ಒಂದನೆಯ ನಂಬರ್ ಸಫ್ದರ್‌ಗಂಜ್ ರೋಡ್‌ನ ಮೇಲ್ಭಾಗದಲ್ಲಿ ಎತ್ತರದಲ್ಲಿ ಒಂದು ಗಿಡುಗ ಸುತ್ತು ಹೊಡೆದು ಹಾರಾಡುತ್ತಿತ್ತೆಂದೂ ಸತ್‌ವಂತ್ ಸಿಂಗ್ ಅಂದು ಬಿಯಾಂತ್ ಸಿಂಗ್‌ಗೆ ತೋರಿಸಿಕೊಟ್ಟ ಬಳಿಕ ಇಬ್ಬರೂ ಕಣ್ಣು ಮುಚ್ಚಿ ಪ್ರಾರ್ಥನಾ ಮಗ್ನರಾಗಿದ್ದರೆಂದೂ ಸೆಕ್ಯೂರಿಟಿಯ ಓರ್ವ ಆಫೀಸರ್ ಅದನ್ನು ಕಂಡಿದ್ದರೂ ಯಾವ ಕ್ರಮವನ್ನೂ ತೆಗೆದುಕೊಳ್ಳಲಿಲ್ಲವೆಂದೂ ಒಬ್ಬಾತ ಸಾಕ್ಷ್ಯ ನುಡಿದಿರುವನು. ಆ ಆಫೀಸರ್ ಧವನ್‌ರಿಗೆ ಸಂಗತಿ ತಿಳಿಸಿದ್ದರೂ ಧವನ್ ಆತನನ್ನು ಗದರಿದ್ದು ಮಾತ್ರವಂತೆ. ಧವನ್ ಯಾಕೆ ಆ ಘಟನೆಯನ್ನು ನಿರ್ಲಕ್ಷಿಸಿದ್ದು? ಸತ್‌ವಂತ್ ಸಿಂಗ್ ಮತ್ತು ಬಿಯಾಂತ್ ಸಿಂಗ್‌ರಿಗೆ ಏಕಕಾಲದಲ್ಲಿ ಒಂದೇ ಕಡೆ ಡ್ಯೂಟಿ ಕಲ್ಪಿಸಿದ್ದು ಕೂಡ ಪ್ರಶ್ನೆಗಳನ್ನೆಬ್ಬಿಸುತ್ತಿವೆ. ಡ್ಯೂಟಿ ರೋಸ್ಟರ್‌ಗೆ ಅನುಗುಣವಾಗಿ ಸತ್‌ವಂತ್ ಸಿಂಗ್‌ನ ಡ್ಯೂಟಿ ವೇಳೆ ಮೊನ್ನೆ ೧.೩೦ ಪಿ.ಎಂ.ನಿಂದ ೭.೩೦ಪಿ.ಎಂ. ತನಕ. ಆತ ಹೇಗೆ ತನ್ನ ಡ್ಯೂಟಿಯನ್ನು ನಿನ್ನೆಯ ಮಾರ್ನಿಂಗ್ ಶಿಫ್ಟ್‌ಗೆ ಬದಲಾಯಿಸಿದ್ದು? ಉನ್ನತ ಸ್ಥಾನೀಯರ ಅರಿವಿನೊಂದಿಗೆ ಮಾತ್ರವೇ ಅಂತಹ ಬದಲಾವಣೆಗಳನ್ನು ನಡೆಸಲು ಸಾಧ್ಯ.

ಇನ್ನೊಂದು ಕೋನದಿಂದ ನೋಡುವಾಗಲೂ ಸಮಸ್ಯೆ ಸಂಕೀರ್ಣವಾಗುತ್ತದೆ. ಉಸ್ತಿನೋವ್ ಜತೆಗಿನ ಭೇಟಿಯ ಕುರಿತು ಸೆಕ್ಯೂರಿಟಿಗೆ ಸೂಚನೆಗಳೇನೂ ಇರಲಿಲ್ಲ. ಇಂದಿರಾರ ತೀರಾ ನಿಕಟವರ್ತಿಗಳಲ್ಲಿ ಕೆಲವರಿಗಷ್ಟೇ ಆ ಕಾರ್ಯಕ್ರಮದ ಬಗ್ಗೆ

ಗೊತ್ತಿದ್ದದ್ದು. ಜನತಾ ದರ್ಶನ ರದ್ದಾದ ಹಿನ್ನೆಲೆಯಲ್ಲಿ, ಇಂದಿರಾ ಆ ಹೊತ್ತಿನಲ್ಲಿ ಒಂದನೆಯ ನಂಬರ್ ಅಕ್ಬರ್ ರೋಡ್‌ಗೆ ಹೊರಡುವ ವಿಚಾರ ಬೆರಳೆಣಿಕೆಯ ಮಂದಿಗಷ್ಟೇ ಗೊತ್ತು. ಕೆಳ ಸ್ತರದ ಬಿಯಂತ್ ಮತ್ತು ಸತ್‌ವಂತ್‌ಗೆ ಈ ಸಂಗತಿ ಹೇಗೆ ಗೊತ್ತಾದದ್ದು?

ನಿಜಕ್ಕೂ ಇಂದಿರಾರ ಉಸ್ತಿನೋವ್ ಜತೆಗಿನ ಭೇಟಿ ೮.೩೦ಕ್ಕೇ ನಡೆಯಬೇಕಾಗಿತ್ತು. ೮.೩೦ಕ್ಕೆ ಆಕೆ ಹೊರಗೆ ಬಂದಿದ್ದರೆ ನಿನ್ನೆ ಆ ಹೊತ್ತಿನಲ್ಲಿ ಆಕೆಯ ಕೊಲೆಯಾಗುತ್ತಿರಲಿಲ್ಲ. ಸತ್‌ವಂತ್ ಮತ್ತು ಬಿಯಾಂತ್ ಕೋವಿ ಹಿಡಿದುಕೊಂಡು ಬೋಗನ್‌ವಿಲ್ಲ ಗಿಡಗಳ ಕಮಾನಿನ ಇಬ್ಬದಿಗಳಲ್ಲೂ ಕಾದು ನಿಂತಿರಲಿಲ್ಲ. ಅವರಿಬ್ಬರೂ ಸಜ್ಜಾಗುವ ತನಕ ಇಂದಿರಾರ ಕಾರ್ಯಕ್ರಮವನ್ನು ಯಾವುದೋ ಅದೃಶ್ಯ ಹಸ್ತಗಳು ಅರ್ಧ ತಾಸು ಉದ್ದೇಶಪೂರ್ವಕ ವಿಳಂಬಗೊಳಿಸಿತ್ತೆಂದು ಅನ್ನಿಸೀತು, ಸಾಕ್ಷ್ಯಾಧಾರಗಳನ್ನು ಗಮನಿಸುವಾಗ.

ಉಸ್ತಿನೋವ್ ಜತೆಗಿನ ಭೇಟಿ ಖಚಿತ ಪಡಿಸಲು ಯಾರ‍್ಯಾರೋ ಕೆಲವರು ಭಾರೀ ಹೆಣಗಾಡಿದ್ದರೆಂದೂ ಭಾಸವಾಗುತ್ತದೆ. ಒರಿಸ್ಸಾದಲ್ಲಿ ಪ್ರವಾಸ ಮಾಡುತ್ತಿರುವಾಗಲೂ ವಯರ್‌ಸೆಲ್ ಮೂಲಕ, ಆ ಕಾರ್ಯಕ್ರಮ ರದ್ದು ಮಾಡಲಾರದೆಂದು ದೃಢಪಡಿಸಿಕೊಂಡಿದ್ದರು, ಸಂಬಂಧ ಪಟ್ಟವರು. ಒರಿಸ್ಸಾದಿಂದ ಮರಳಿ ಬಂದೊಡನೆ ಪಾಲಂನಲ್ಲಿ ಇಂದಿರಾರೊಡನೆ ಮೊದಲು ಕೇಳಲಾದ ಪ್ರಶ್ನೆ ಕೂಡ ಅದೇ ಆಗಿತ್ತು. ಉಸ್ತಿನೋವ್ ಜತೆಗಿನ ಭೇಟಿ ರದ್ದು ಮಾಡುವುದಿಲ್ಲವಲ್ಲ, ಎಂದು. ಜನತಾ ದರ್ಶನ ರದ್ದುಗೊಳಿಸಿ ಮೊಮ್ಮಕ್ಕಳ ಜತೆಯಲ್ಲಿ ಪ್ರಭಾತವನ್ನು ಕಳೆಯಲು ನಿರ್ಧರಿಸಿದ್ದ ಇಂದಿರಾ, ಉಸ್ತಿನೋವ್ ಜತೆಗಿನ ಭೇಟಿ ರದ್ದು ಮಾಡದಿರಲು ನಿರ್ಬಂಧಿತರಾಗಿದ್ದರೆಂದೇ ಭಾಸವಾದೀತು.

ಸಿಕ್ಖರ ಮತೀಯ ಭಾವನೆಗಳನ್ನು ಗಾಯಗೊಳಿಸಿದ ಬ್ಲೂಸ್ಟಾರ್‌ನ ಬಾಳಿಕೆ ಇಂದಿರಾರ ಸೆಕ್ಯೂರಿಟಿಯಿಂದ ಎಷ್ಟೇ ನಂಬಿಗಸ್ತರಾಗಿದ್ದರು ಕೂಡ ಸಿಕ್ಖರನ್ನು ವರ್ಗಾಯಿಸದೆ ಇದ್ದದ್ದೂ ಸೆಕ್ಯೂರಿಟಿಯ ಅತೀ ದೊಡ್ಡ ಅಚಾತುರ್ಯವೇ.

ಸೆಕ್ಯೂಲರಿಸಂ ಯಾವತ್ತೂ ಸೆಕ್ಯೂರಿಟಿಗೆ ಬದಲಿಯಾಗದು ಎಂಬುದನ್ನು ಸೆಕ್ಯೂರಿಟಿ ಅಧಿಕಾರಿಗಳು ನೆನೆಯಬೇಕಾಗಿತ್ತು.

ಸೆಕ್ಯೂರಿಟಿ ಅಡ್‌ವೈಸರ್ ಕಾವೊ, ಸೆಕ್ಯೂರಿಟಿಗೆ ಜವಾಬ್ದಾರರಾದ ಐ.ಬಿ.ಯ ಮತ್ತು ದೆಹಲಿ ಪೊಲೀಸರಿಗೆ ಸಂಬಂಧಪಟ್ಟ ವ್ಯಕ್ತಿಗಳ ಜೀವನ ಹಿನ್ನೆಲೆಯನ್ನು ಕಡ್ಡಾಯವಾಗಿ ಮೌಲ್ಯಮಾಪನಕ್ಕೊಳಪಡಿಸಬೇಕೆಂದು ಸಲಹೆ ಮಾಡಿದ್ದರು. ಆ ಸಲಹೆಯನ್ನು ಯಾವತ್ತೂ ಜಾರಿಗೆ ತಂದಿರಲಿಲ್ಲ.

ಇಂಡೋ–ಟಿಬೆಟನ್ ಪೊಲೀಸ್ ಮತ್ತು ದೆಹಲಿ ಪೊಲೀಸರ ನಡುವೆ ಯಾವತ್ತೂ ಸಾಮರಸ್ಯವಿರಲಿಲ್ಲ. ದೆಹಲಿ ಪೊಲೀಸರ ಆದೇಶಗಳನ್ನು ಐ.ಟಿ.ಬಿ.ಪಿ.ಗಳು



ಯಾವತ್ತೂ ಪಾಲಿಸಿದ್ದಿಲ್ಲ. ಐ.ಟಿ.ಬಿ.ಪಿ.ಯ ಜವಾಬ್ದಾರಿ ಏನೆಂದೇ ಯಾರಿಗೂ ಗೊತ್ತಿಲ್ಲ. ಐ.ಟಿ.ಬಿ.ಪಿ. ದೆಹಲಿ ಪೊಲೀಸ್ ಮತ್ತು ಐ.ಬಿ.ಯ ಹೊಣೆಗಾರಿಕೆಯ ಗಡಿಗಳನ್ನು ವಿಂಗಡಿಸಿದ್ದಿಲ್ಲ.

ಪ್ರಾಯಶಃ ಸತ್ಯ ಯಾವತ್ತೂ ಹೊರಗೆ ಬರಲಾರದು?

ಕಾನ್‌ಸ್ಟೇಬಲ್ ಕಾಫಿಯೊಂದಿಗೆ ಬಂದ. ಕಾಫಿ ಕುಡಿಯುವಾಗ ರವಿ ಹೇಳಿದ: ಚೆನ್ನಾಗಿದೆ ಕಾಫಿ, ನಾನು ಆಫೀಸ್‌ನಲ್ಲಿ ಕುಡಿಯುವುದಕ್ಕಿಂತಲೂ ಚೆನ್ನಾಗಿದೆ.

ನನ್ನ ಮಗಳಿಗೆ ಕೋಚ್ ಕೊಡಲು ನಾನು ಈತನಿಗೆ ಹೇಳುತ್ತೇನೆ.

ಥಟ್ಟನೆ ಇಂದೂ ನೆನಪಾದಳು. ನಿಜಾಮುದ್ದೀನ್ ಸ್ಟೇಶನ್‌ಗೆ ಹೋಗಿ ವಿಚಾರಿಸಿದ ಬಳಿಕವೇ ಮುಂದಿನ ಕಾರ್ಯಕ್ರಮ ಎಂದುಕೊಂಡನು ರವಿ.

ತಣ್ಣಗಿನ ಗಾಳಿಗೆ ಕಣ್ಣುಗಳು ತನ್ನಷ್ಟಕ್ಕೆ ಮುಚ್ಚಲ್ಪಡುತ್ತಿವೆ.

ಹರ್‌ಭಜನ್‌ನ ಮಕ್ಕಳಿಗೆ ಆಹಾರದ ವ್ಯವಸ್ಥೆ ಮಾಡಿರಲಿಲ್ಲವೆಂದೂ ಥಟ್ಟನೆ ನೆನಪಾಯಿತು. ಸ್ಟೇಶನ್‌ನಲ್ಲಿ ಟ್ರೈನ್‌ನ ಬಗ್ಗೆ ವಿಚಾರಿಸಿ ಫ್ಲ್ಯಾಟ್‌ಗೆ ಮರಳುವುದೆಂದು ನಿರ್ಧರಿಸಿದನಾತ.

* * *

## ಅಧ್ಯಾಯ ೧೪

## ಉಪಕಾರ್ ಸಿಂಗ್

ಮಥುರಾ ರೋಡ್‌ನಿಂದ ನಿಜಾಮುದ್ದಿನ್ ರೋಡ್‌ಗೆ ಕಾರ್ ತಿರುಗುವ ವೇಳೆ ರವಿಯ ಕಣ್ಣುಗಳನ್ನು ನಿದ್ದೆ ಮುತ್ತುತ್ತಾ ಇತ್ತು. ಮಬ್ಬು ಬಿಸಿಲಿನ ಅರೆಬರೆ ಪಾರದರ್ಶಕತೆಯಲ್ಲಿ ಹುಮಾಯೂನ್ ಚಕ್ರವರ್ತಿಯ ಗೋರಿಯ ಗುಮ್ಮಟ ಮತ್ತು ಮಿನಾರ್‌ಗಳು ಗೋಚರಿಸಿದವು. ಸ್ವಂತ ಮೌಸೋಲಿಯಮ್‌ನ ಸ್ಥಳವನ್ನು ಚಕ್ರವರ್ತಿಯೇ ಆಯ್ಕೆ ಮಾಡಿದ್ದ. ಆತನ ನಿಧನಾನಂತರ ಪತ್ನಿ ಹಮಿದಾಬಾಯಿ ಬೇಗಮ್‌ಳೇ ಅದನ್ನು ಕಟ್ಟಿಸಿದ್ದಳು. ಒರಟು ಕಲ್ಲಿನಲ್ಲಿ ನಿರ್ಮಿಸಲಾದ ಗೋರಿ ಮುಂದೆ ಅಮೃತಶಿಲೆಯಲ್ಲಿ ನಿರ್ಮಿಸಲಾದ ತಾಜ್‌ಮಹಲ್‌ಗೆ ಮಾದರಿಯಾಗಿತ್ತು. ಎತ್ತರದ ಶಿಲಾಮಂಟಪದ ನಡುವೆ ಎತ್ತರದಲ್ಲಿ ನಿರ್ಮಿಸಲಾದ ಶಿಲಾಕಲಶ. ಅಕ್ಬರ್‌ನ ತಾಯಿ ಹದಿನಾರನೆಯ ಶತಮಾನದಲ್ಲಿ ಅದನ್ನು ಕಟ್ಟಿಸಿರಬೇಕು. ಎಷ್ಟೆಷ್ಟು ಕಬರುಗಳಿವೆ ಆ ಮೌಸೋಲಿಯಮ್‌ನಲ್ಲಿ!

ಹುಮಾಯೂನ್, ಹುಮಾಯೂನ್‌ನ ಪತ್ನಿ ಹಮಿದಾ ಬೇಗಮ್‌ಳ, ಷಾಜಹಾನನ ಪುತ್ರ, ದಾರನ, ಹೌದು, ಕಿರೀಟವನ್ನೂ ಅಧಿಕಾರವನ್ನೂ ವಶಪಡಿಸಲಿಕ್ಕಾಗಿ ಔರಂಗಜೇಬನಿಂದ ಕೊಲೆ ಮಾಡಲ್ಪಟ್ಟ ದಾರಾಜಹಂದರ್ ಶಾನ ಫರೋಕ್ಸಿಯಾರ್‌ನದ್ದೇ ಅಲ್ಲದೆ ಇನ್ನೂ ಅನೇಕರ ಚಿಕ್ಕಪುಟ್ಟ ಗೋರಿಗಳು ಅಕ್ಕಪಕ್ಕಗಳಲ್ಲೇ ಇವೆ. ಚರಿತ್ರೆಯಲ್ಲಿ ಎಲ್ಲೋ ಮಿಂಚಿ ಮರೆಯಾದ ಬಾದಷಾಹಗಳ, ಅವರ ಚೆಲುವೆಯರಾದ ಮಡದಿಯರ ಹಾಗೂ ಅಕಾಲ ಮರಣಕ್ಕೆ ತುತ್ತಾದ ಮಕ್ಕಳ ಗೋರಿಗಳು.

ಚರಿತ್ರೆಯ ಪಳೆಯುಳಿಕೆಗಳಾಗಿ ಮಾರ್ಪಟ್ಟ ಗೋರಿಗಳು. ನರೆತ ಆಕಾಶದಡಿಯಲ್ಲಿ ದೆಹಲಿ ಎಂಬ ಮೃತ ನಗರಿ. ದೆಹಲಿ ಎಂಬ ಮೌಸೋಲಿಯಂ. ದೆಹಲಿ ಎಂಬ ಮಸಣ.

ನಿಜಾಮುದ್ದಿನ್ ಸ್ಟೇಶನ್ ಎಂಬ ನಾಮಫಲಕ ನೋಡಿ ಎಡಕ್ಕೆ ತಿರುಗುವಾಗ ರವಿ ಮೊದಲು ಗಮನಿಸಲಿಲ್ಲ. ಬ್ರೇಕ್ ತುಳಿದು ಕಾರ್ ಸ್ಲೋ ಮಾಡಿದ. ತಾನು ನಿದ್ದೆಗಣ್ಣಿನಲ್ಲಿ ಯಾವುದಾದರೂ ಭಯಾನಕ ಕನಸುಗಳನ್ನು ಕಾಣುತ್ತಿರುವೆನೇನೊ



ಎಂದುಕೊಂಡನಾತ. ಉರಿಯುತ್ತಿರುವ ಚಿತೆಗಳ ಒಂದು ಸಾಲು. ತಾನು ದಾರಿ ತಪ್ಪಿ ತಲಪಿದ್ದು ನಿಂಗ್‌ಬೋಧ್ ಘಾಟ್‌ನ ಶ್ಮಶಾನದಲ್ಲೇನು? ಆಗಿರಲು ಸಾಧ್ಯವಿಲ್ಲ. ಶ್ಮಶಾನದ ಚಿತೆಗಳು ಯಾವತ್ತೂ ಅನಾಥವಾಗದಲ್ಲ? ಒದ್ದೆ ವಸ್ತ್ರ ಉಟ್ಟುಕೊಂಡ ಸಂಬಂಧಿಕರು ಚಿತೆಗೆ ಕಾವಲಿರುತ್ತಾರೆ. ಮೃತ ವ್ಯಕ್ತಿಯ ಆತ್ಮ ಶಾಂತಿಗಾಗಿ ಸಹನೆಯಿಂದ ಕಾದು ನಿಲ್ಲುವರು. ಆದರೆ ಈ ಕಾಣಿಸುವ ಪ್ರತಿಯೊಂದು ಚಿತೆಗೂ ತಲಾ ನಾಲ್ಕು ಗಾಲಿಗಳಿವೆ. ದೆಹಲಿಗೆ ಬಂದ ಮೊದಲ ದಿನಗಳಲ್ಲಿ ತನಗೆ, ಸಪ್ಪಳ ಮಾಡುತ್ತಾ ದೌಡಾಯಿಸುತ್ತಿದ್ದ ಫಟ್‌ಫಟ್ ಎಂಬ ವಿಚಿತ್ರ ವಾಹನ ಒಂದು ತಮಾಷೆಯಾಗಿತ್ತು. ಎರಡನೆಯ ಜಾಗತಿಕ ಮಹಾಯುದ್ಧ ಕೊನೆಗೊಂಡಾಗ, ಇನ್ನು ಓಡಿಸಲು ಬರುವುದಿಲ್ಲವೆಂದು ನಿರ್ಧರಿಸಲಾದ ಎನ್‌ಫೀಲ್ಡ್ ಬೈಕ್‌ಗಳನ್ನು ಅಗ್ಗ ಬೆಲೆಗೆ ಏಲಂನಲ್ಲಿ ವಹಿಸಿಕೊಂಡಿದ್ದರು ಶ್ರಮ ಜೀವಿಗಳಾದ ಸರ್ದಾರ್ಜಿಗಳು. ನಾಲ್ಕು ಗಾಲಿಗಳಿರುವ ಒಂದು ಪೆಟ್ಟಿಗೆಯನ್ನು ಅದರ ಮೇಲೆ ಫಿಟ್ ಮಾಡಿದ್ದರು. ಹಳೆಯ ಬಸ್ ಸೀಟ್‌ಗಳನ್ನು ಸಂಪಾದಿಸಿ ನಾಲ್ಕು ಸೀಟ್‌ಗಳನ್ನೂ ಅಳವಡಿಸಿದ್ದರು. ದೆಹಲಿಯ ರೈಲ್ವೆ ಸ್ಟೇಶನ್‌ಗಳಲ್ಲಿ ಫಟ್‌ಫಟ್‌ಗಳು ಅಲ್ಪ ವರಮಾನದ ಪ್ರಯಾಣಿಕರಿಗೆ ಒಂದು ವರದಾನವಾಗಿತ್ತು. ಟ್ಯಾಕ್ಸಿ, ಆಟೋರಿಕ್ಷಾಗಳ ದರ ತೆರಲು ಸಾಧ್ಯವಾಗದವರಿಗೆ ಕನಿಷ್ಠ ದರದಲ್ಲಿ ಸಂಚಾರ ಸೌಕರ್ಯ ಸೈಲೆನ್ಸರುಗಳಲ್ಲದೆ ಗಟ್ಟಿಯಾಗಿ ಫಟ್‌ಫಟ್ ಎಂದು ಅಬ್ಬರಿಸುತ್ತಿರುವುದರಿಂದಲೇ ಅದಕ್ಕೆ ಆ ಹೆಸರು ಬಂದಿರಬಹುದು. ಫಟ್‌ಫಟ್‌ಗಳಲ್ಲಿ ತೊಡಗಿಸಿಕೊಂಡು ಚಂದದ ಮಹಡಿ ಮನೆಗಳನ್ನೆಬ್ಬಿಸಿ ಲಕ್ಷಾಧಿಪತಿಗಳಾದವರು ಎಷ್ಟೊ ಮಂದಿ ದೆಹಲಿಯಲ್ಲಿದ್ದಾರೆ.

ಈಗ ಹೊತ್ತಿ ಉರಿಯುತ್ತಿರುವುದು ರಸ್ತೆಯ ಅಂಚಿನಲ್ಲಿ ಸಾಲುಸಾಲಾಗಿ ನಿಲ್ಲಿಸಲಾದ ಏಳು ಫಟ್ ಫಟ್‌ಗಳೇ. ಒಂದೊಂದರಲ್ಲೂ ಇದ್ದಲಿನ ಬಣ್ಣ ತಳೆದ ಒಂದೊಂದು ಮನುಷ್ಯ ಶರೀರವೂ ಇದೆ. ಮೇಲಕ್ಕೆ ಹೊಮ್ಮುತ್ತಿರುವ ನೀಲಿ ಹೊಗೆಗೆ ಕೆಟ್ಟ ವಾಸನೆ ಇಲ್ಲವೆಂದು ರವಿ ಗಮನಿಸಿದ. ಜೀವಂತ ಮನುಷ್ಯ ಪೆಟ್ರೋಲ್‌ನಲ್ಲಿ ಹೊತ್ತಿ ಉರಿಯುತ್ತಿರುವಾಗ ಹೊರಡುವ ವಾಸನೆ ಅಸಹ್ಯ ಹುಟ್ಟಿಸುವುದಿಲ್ಲವೆಂದೂ ಅದು ತೀಕ್ಷ್ಣವಾಗಿದ್ದರೂ ಹೃದ್ಯವಾಗಿದೆ ಎಂದೂ ಆತ ತುಸು ಅಪರಾಧ ಪ್ರಜ್ಞೆಯೊಂದಿಗೆ ನೆನೆದುಕೊಂಡ. ಇನ್ನೊಂದು ಸಂಗತಿಯನ್ನು ಕೂಡ ಆತ ಗಮನಿಸಿದ–ಕಲ್ಲಿದ್ದಲಿನ ಬಣ್ಣ ಹೊಂದಿದ್ದ ಶರೀರವನ್ನು ನೆಕ್ಕಿ ಚಪ್ಪರಿಸುತ್ತಿರುವ ಬೆಂಕಿ ನಾಲಗೆಗಳದ್ದು ಆಕರ್ಷಕವಾದ ನೀಲೀ ಬಣ್ಣ.

ಹೌದು, ಶಿಶಿರ ಬಿಸಿಲಿನ ಕ್ಯಾನ್‌ವಾಸ್‌ನಲ್ಲಿ ಬಿಡಿಸಲಾದ ರಿಯಲಿಸ್ಟಿಕ್ ಚಿತ್ರವೊಂದರ ಹಾಗೆ ಏಳು ಚಿತೆಗಳು. ಸುತ್ತಲೂ ನಿರ್ಜನ ಪರಿಸರ. ಆ ನಿರ್ಜನ ವಾತಾವರಣವೇ ಭಯ ಹುಟ್ಟಿಸುತ್ತಿದೆ. ನಿನ್ನೆ ರಾತ್ರಿಯ ಜನ ಜಂಗುಳಿಯ ಗರ್ಜನೆಗಿಂತಲೂ ಹೆಚ್ಚಾಗಿ ಈ ನಿರ್ಜನ ಮೌನ ಮನದಾಳದಲ್ಲಿ ನಡುಕ ಹುಟ್ಟಿಸುತ್ತದೆ

ಎಂದುಕೊಂಡನಾತ.

ರವಿ ಒಂದು ಕ್ಷಣ ದಂಗಾಗಿ ನಿಂತುಬಿಟ್ಟ. ಇಲ್ಲ, ಇಲ್ಲಿ ತಾನು ಏನು ಮಾಡುವಂತಿಲ್ಲ.

ಕಾರ್ ಸ್ಟಾರ್ಟ್ ಮಾಡಿದ. ರೈಲ್ವೆ ಸ್ಟೇಶನ್‌ನ ಪರಿಸರದಲ್ಲಿ ಮನುಷ್ಯ ಜೀವಿಗಳೇ ಇಲ್ಲ. ಆದರೆ ಪ್ಲ್ಯಾಟ್ ಫಾರ್ಮಿನಲ್ಲೂ ವೈಟಿಂಗ್ ರೂಮಿನಲ್ಲೂ ಜನರ ನೂಕುನುಗ್ಗಲು ಇದೆ. ಪೂಛ್‌ತಾಛ್ ಎಂದು ಬರೆಯಲಾದ ಕೌಂಟರ್‌ನಲ್ಲಿ ಯಾರೂ ಇಲ್ಲ. ಸ್ಟೇಶನ್ ಮಾಸ್ಟರರ ಕೋಣೆಯ ಮುಂದೆ ಕೆಲವರಿದ್ದಾರೆ. ಅವರೆಲ್ಲರೂ ತುಂಬು ಆತಂಕಕ್ಕೊಳಗಾದವರೇ. ಎಲ್ಲರಿಗೂ ತಿಳಿಯಬೇಕಾಗಿರುವುದು ಬರಲಿರುವ ಟ್ರೈನ್‌ಗಳ ವಿವರ. ಬೆಳಗ್ಗೆ ತಲಪಬೇಕಾಗಿದ್ದ ಬಂಡಿಗಳಾವುದೂ ಬಂದಿರಲಿಲ್ಲ. ಕೇರಳಾ ಎಕ್ಸ್‌ಪ್ರೆಸ್ ಬರಬೇಕಾದದ್ದು ಎರಡು ಗಂಟೆಗೆ. ಆದರೆ ಎಷ್ಟು ಹೊತ್ತಿಗೆ ಬಂದೀತೆಂದು ಯಾರಿಗೂ ಗೊತ್ತಿಲ್ಲ. ನೋ ಇನ್‌ಫಾರ್ಮೇಶನ್–ಎಲ್ಲರ ಪ್ರಶ್ನೆಗಳಿಗೂ ಸ್ಟೇಶನ್ ಮಾಸ್ಟರರ ಉತ್ತರ ಒಂದೇ. ಯಾವುದಾದರೂ ಇನ್‌ಫಾರ್ಮೇಶನ್ ಸಿಕ್ಕಲು ಮಾರ್ಗವೂ ಇಲ್ಲ. ನಿನ್ನೆಯಿಂದ ಟೆಲಿಫೋನ್ ಲೈನ್‌ಗಳೆಲ್ಲವೂ ಮೃತಾವಸ್ಥೆಯಲ್ಲೇ ಇವೆ.

ಇಂದು ಧರಿಸುವುದಾಗಿ ತಿಳಿಸಿದ್ದ ಸೀರೆಯ ಬಣ್ಣ, ಕಿವಿಯ ರಿಂಗ್‌ಗಳು, ತೇಕುತ್ತ ನಿಂತಿರುವ ಟ್ರೈನ್‌ನ ಹಿನ್ನೆಲೆಯಲ್ಲಿ ಕಾಯುತ್ತ ನಿಂತಿರುವ ಆ ಹುಡುಗಿ ಕೂಡ ಯಾವುದೊ ಮುಂಜಾವದಲ್ಲಿ ಕಂಡು ಮರೆತ ಕನಸಿನಂತೆ ಭಾಸವಾಯ್ತು ರವಿಗೆ.

ಮರಳಿ ಬಂದು ಕಾರ್ ಹತ್ತಿದ. ಆತ ಇಂಜಿನ್ ಸ್ಟಾರ್ಟ್ ಮಾಡಿದ. ಎಲ್ಲೆಲ್ಲೂ ಜಡತೆ. ಏನಾಗಿದೆ ಈ ನಗರಕ್ಕೆ? ನಡು ಮಧ್ಯಾಹ್ನ ಏಳು ವಾಹನಗಳು ಉರಿಯುತ್ತಿವೆ. ಅದೂ ನಗರದ ಮಧ್ಯದಲ್ಲಿ. ಎಲ್ಲೂ ಯಾರೂ ಕಾಣಿಸುತ್ತಿಲ್ಲ. ಆ ವಾಹನಗಳೊಳಗೆ ಇದ್ದಲ ಮುದ್ದೆಯಾಗಿ ಮಾರ್ಪಟ್ಟಿರುವ ಮನುಷ್ಯರಿಗೆ ಹೆಸರಿಲ್ಲ; ವ್ಯಕ್ತಿತ್ವ ಇಲ್ಲ; ಒಂದು ಮಾತ್ರ ಇದೆ–ಮತ. ಅವರು ಸಿಕ್ಖರು. ಸಿಕ್ಖರಾದುದರಿಂದಲೇ ಅವರಿಗೆ ಈ ಗತಿ ಬಂದು ಬಿಟ್ಟಿದೆ.

ರವಿ ವೇಗವಾಗಿ ಕಾರ್ ನಡೆಸಿದ. ಯಾವ್ಯಾವುದ್ದರಿಂದಲೊ ಓಡಿ ಹೋಗಿ ತಪ್ಪಿಸಿಕೊಳ್ಳಬೇಕೆಂಬ ಆತುರವಾಗಿತ್ತು ಆತನಿಗೆ. ಬೋಗನ್‌ವಿಲ್ಲಾಗಳಿಗೆ ಪ್ರಖ್ಯಾತವಾಗಿದ್ದ ನರ್ಸರಿ ದಾಟಿದ. ಫ್ಲೈ ಓವರ್‌ನ ಕೆಳಗಿನ ಟ್ರಾಫಿಕ್ ಲೈಟ್ ಹಳದಿಯಿಂದ ಕೆಂಪಗೆ ವರ್ಣಾಂತರ ಹೊಂದುವುದಕ್ಕೆ ಮುನ್ನ ಕ್ರಾಸ್ ಮಾಡಬೇಕೆಂದುಕೊಂಡು ಕಾರ್‌ನ ವೇಗ ಹೆಚ್ಚಿಸಿದ. ಆದರೆ, ಮರು ಸೆಕೆಂಡಿನಲ್ಲೆ ಬ್ರೇಕನ್ನು ಒತ್ತಿ ತುಳಿಯಬೇಕಾಯಿತು. ತಿರುವಿನಿಂದ ಹಟಾತ್ತಾನೆ ಜನರ ಗುಂಪೊಂದು ರಸ್ತೆಗೆ ಬರುತ್ತಿದೆ. ಗುಂಪು ತನ್ನ ಕಾರನ್ನು ಅಡ್ಡಗಟ್ಟುವುದರಲ್ಲಿದೆಯೆ? ಇಲ್ಲ. ಗುಂಪಿಗೆ



ಹೊಸ ಕೊಳ್ಳೆ ಸಿಕ್ಕಿದೆ. ಅದು ಆ ಕೊಳ್ಳೆಯ ಸುತ್ತಲೂ ಸ್ವತಃ ಹಬ್ಬಿಕೊಂಡು ಕೊಳ್ಳೆಯನ್ನು ಸ್ವಂತ ಶರೀರದೊಳಗಡೆಗೆ ಆವಾಹಿಸುವ ಅಮೀಬಾದ ಹಾಗೆ ಒಂದು ವೃತ್ತ ನಿರ್ಮಿಸಿದೆ. ಗುಂಪಿನಲ್ಲಿ ನಲುವತ್ತೊ, ಐವತ್ತೊ ಮಂದಿ ಇದ್ದಾರೆ. ಅವರ ಮಧ್ಯದಲ್ಲಿ ಓರ್ವ ಯುವಕ. ಆತನಿಗೆ ಪಗಡಿ, ದಾಡಿಗಳಿವೆ. ಆರು ಅಡಿಗಳಿಗಿಂತಲೂ ಹೆಚ್ಚು ಎತ್ತರವಿದ್ದಾನೆ. ಗುಂಪಿನ ನಡುವೆ ಆತ ಎತ್ತರದವನಾಗಿ ಕಾಣಿಸಿದ. ಅಥವಾ ಆತನ ಸುತ್ತಣದ ಜನರೇ ತನಗೆ ಕುಬ್ಜರಂತೆ ಕಾಣಿಸುತ್ತಿರಬಹುದು ಎಂದುಕೊಂಡನು ರವಿ.

ಗುಂಪಿನಲ್ಲಿರುವ ಮಂದಿಯ ಕೈಗಳಲ್ಲಿ ಮೊನಚಾದ ಕಲ್ಲುಗಳು, ಬಿದಿರ ಬಡಿಗೆಗಳೇ ಮುಂತಾದ ಆಯುಧಗಳು. ಒಂಟಿ ಸಲಗನ ಕೈಯಲ್ಲಿ ಚಿಕ್ಕ ಪಿಸ್ತೂಲ್, ಆತ ಗರ್ಜಿಸುತ್ತಿದ್ದಾನೆ, ನನ್ನ ಮುಟ್ಟಿದರೆ ನಾ ಕೊಲ್ತೇನೆ. ಜನರ ಗುಂಪು ಅಳುಕುತ್ತ ನಿಂತಿದೆ. ಒಬ್ಬಾತ ಐವತ್ತು ಮಂದಿಯನ್ನು ಎದುರಿಸುತ್ತಿರುವ ಈ ದೃಶ್ಯ ಕ್ರೂರವಾದ ಒಂದು ತಮಾಷೆಯಾಗಿ ಕಂಡಿತು ರವಿಗೆ. ಯಾರೊ ಹೇಳಿದ್ದು ನೆನಪಾಯಿತು: ಮೈದಳೆದ ಹೇಡಿತನ ದೆಹಲಿಯ ಜನಗುಂಪು, ಗುಂಪಿಗಿಂತಲೂ ಹೆಚ್ಚು ಜೋರಾಗಿ ಬೊಬ್ಬೆ ಹಾಕುವವನು ಇಲ್ಲಿ ಗೆಲ್ಲುವನು. ಗುಂಪನ್ನು ಪಳಗಿಸಲು ಒಂದು ಆಟದ ಪಿಸ್ತೂಲಷ್ಟೇ ಸಾಕು, ಹೆಂಬೇಡಿಗಳು! ಗುಂಪಿನ ಹಿಂಬದಿಯಿಂದ ಒಬ್ಬಾತ ಹೇಳಿದ: ಗುಂಡಿಲ್ಲದ ಪಿಸ್ತೂಲ್ ಅದು. ಸಲಗನಿಗೆ ಆ ಮಾತು ಕೇಳಿಸಿತು. ಆತ ಆಕಾಶದತ್ತ ಒಂದು ಗುಂಡು ಹಾರಿಸಿದ. ಪಿಸ್ತೂಲ್ ಖಾಲಿಯಲ್ಲವೆಂದು ಗುಂಪಿಗೆ ಮನವರಿಕೆ ಆಯಿತು. ಏನಾದರೊಂದು ನೆಪ ಸಿಕ್ಕದೆ ಗುಂಪು ಹೊರಟು ಹೋಗಲು ಹಿಂಜರಿಯಿತು. ಸಮೀಪಕ್ಕೆ ತೆರಳಿ ಬ್ರೇಕ್ ಹಾಕಿ ನಿಂತ ಕಾರನ್ನು, ಗುಂಪು ಗಮನಿಸಿದ್ದು ಆಗಲೇ. ರವಿ ಕಾರ್‌ನಿಂದ ಇಳಿದ. ಗುಂಪು ಆತನಿಗೆ ದಾರಿ ಮಾಡಿಕೊಟ್ಟಿತು. ಆತ ಕೋವಿ ಗುರಿ ಹಿಡಿದು ನಿಂತಿರುವ ಸರ್ದಾರ್ಜಿಯನ್ನು ಸಮೀಪಿಸಿದ–ಎಷ್ಟೋ ದಿನಗಳ ಪರಿಚಿತನಂತೆ, ಸೌಹಾರ್ದ ಭಾವದೊಂದಿಗೆ ಗುಂಪಿನಿಂದ ತಪ್ಪಿಸಿಕೊಳ್ಳಲು ಸರ್ದಾರ್ಜಿ ಕೂಡ ಒಂದು ಉಪಾಯ ಹುಡುಕುತ್ತಿದ್ದಿರಬೇಕು. ಪಿಸ್ತೂಲ್‌ನೊಳಗೆ ಒಂದೇ ಒಂದು ಗುಂಡು ಕೂಡ ಉಳಿದಿಲ್ಲವೆಂದು ಗೊತ್ತಾದರೆ ಗುಂಪು ತನ್ನನ್ನು ಪರಚಿ ಸೀಳು ಸೀಳು ಮಾಡುತ್ತದೆ ಎಂದು ಆತನಿಗೆ ಗೊತ್ತು. ಪಿಸ್ತೂಲ್‌ಗಾಗಿ ಚಾಚಿದ್ದ ರವಿಯ ಕೈಯತ್ತ ಆತ ಕ್ಷಣ ಹೊತ್ತು ದಿಟ್ಟಿಸಿದ. ಸುತ್ತುವರಿದಿದ್ದ ಗುಂಪು ರೊಚ್ಚಿಗೇಳುವುದನ್ನು ಆತ ಕಂಡ. ಆತ ಪಿಸ್ತೂಲ್ ರವಿಯ ಕೈಗಿತ್ತ. ಗುಂಪನ್ನು ಉದ್ದೇಶಿಸಿ ರವಿ ಹೇಳಿದ: ಈತ ನನಗೆ ಗೊತ್ತು. ನಾನು ಈತನನ್ನು ಪೋಲೀಸ್ ಸ್ಟೇಶನ್‌ಗೆ ತಲಪಿಸುತ್ತೇನೆ.

ಗುಂಪು ಒಬ್ಬ ಪೆದ್ದನ ಹಾಗೆ ಬಿಡುಗಣ್ಣು ಬಿಟ್ಟು ನಿಂತುಕೊಂಡಿತ್ತು. ಆ ಮಧ್ಯಂತರ ವೇಳೆಯಲ್ಲಿ ರವಿ ಸರ್ದಾರ್ಜಿಯನ್ನು ಕಾರ್ ಹತ್ತಿಸಿದ. ಕಾರ್ ನಡೆಸುವಾಗ

ರವಿ ಎದುರಿನ ಕನ್ನಡಿಯಲ್ಲಿ ಪ್ರತಿಫಲಿಸಿದ ಗುಂಪನ್ನು ಗಮನಿಸಿದ. ಗುಂಪಿನ ಜನ ತಮ್ಮ ಸುತ್ತಲೂ ನೋಡುತ್ತಾ ಇದ್ದಾರೆ–ಬೇರೊಂದು ಕೊಳ್ಳೆಗಾಗಿ. ಕಾರ್‌ನ ವೇಗ ಹೆಚ್ಚಿದಾಗ ಸರ್ದಾರ್ಜಿ ರವಿಯ ಮುಖದತ್ತ ನೋಡಿದ. ಬಳಿಕ ನಕ್ಕ. ಆಕರ್ಷಕವಾದ ನಡೆ. ಕರ್‍ರಗಿನ ಗಡ್ಡ, ಮೀಸೆಗಳ ಸಂದಿಯಲ್ಲಿ ಹೊಳೆಯುವ ಹಲ್ಲುಗಳ ಒಪ್ಪವಾದ ಸಾಲುಗಳು. ನನ್ನ ಹೆಸರು ಉಪಕಾರ್ ಸಿಂಗ್. ನನಗೆ ನಿಮ್ಮ ಪರಿಚಯವಿಲ್ಲ. ನಿನ್ನೆ ರಾತ್ರಿ ವರ್ಕ್‌ಶಾಪ್‌ನಲ್ಲಿ ಒಂದು ಕ್ಷಣ ಮಿಂಚು ಹೊಳೆದಂತೆ ನಿಮ್ಮನ್ನು ಕಂಡಿದ್ದೆ. ಪೊಲೀಸ್ ಠಾಣೆಗೆ ತಲಪಿಸುವ ಮನ್ನ ನನ್ನದೊಂದು ಬೇಡಿಕೆ ಇದೆ. ನನಗೆ ಹಸಿವಾಗುತ್ತಿದೆ. ನೀರಡಿಕೆ ಕೂಡ: ನಿನ್ನೆ ಇಡೀ ದಿನ, ಇವತ್ತು ಕೂಡ ನಾನು ಯಾವ ಆಹಾರವನ್ನೂ ಸೇವಿಸಲಿಲ್ಲ. ರಾತ್ರಿ ನಿದ್ದೆಯನ್ನೂ ಮಾಡಲಿಲ್ಲ. ಬೇಟೆಯಾಡಲ್ಪಡುತ್ತಿರುವ ಒಂದು ವನ್ಯಮೃಗದ ಹಾಗೆ ನಾನು ಓಡುತ್ತಲೇ ಇದ್ದೆ, ಜನರ ಒಂದು ಗುಂಪಿನಿಂದ ಇನ್ನೊಂದು ಗುಂಪಿನತ್ತ.

ರವಿ ಆತನನ್ನು ಸೂಕ್ಷ್ಮವಾಗಿ ದಿಟ್ಟಿಸಿದ. ಪೊಲೀಸ್ ಠಾಣೆಗೆಂದು ಗುಂಪಿಗೆ ಹೇಳಿದ್ದು ಸಟೆಯಾಗಿತ್ತು. ಯಾವುದಾದರೂ ಗುರುದ್ವಾರದ ಸುರಕ್ಷಿತ ನೆಲೆಗೆ ತಲಪಿಸಬಹುದೆಂದೇ ಮೊದಲು ಅಂದುಕೊಂಡದ್ದು, ಆತನ ಕಣ್ಣುಗಳಲ್ಲಿನ ಪಲಾಯನದ ವಿಹ್ವಲತೆಯನ್ನು ರವಿ ಗಮನಿಸಿದ. ಯಾವುದರಿಂದ ಈತನ ಪಲಾಯನ? ಪ್ರಾಯಶಃ ದಾರಿ ತಪ್ಪಿಬಂದ ಓರ್ವ ಭಯೋತ್ಪಾದಕನಿರಬಹುದು ಈತ. ಪಿಸ್ತೂಲ್ ಹಿಡಿದುಕೊಂಡು ಒಂದು ಜನ ಸಮೂಹವನ್ನೇ ಎದುರಿಸಿದ್ದ ಈತ ಸಾಮಾನ್ಯನಲ್ಲ!

ಅವೇನಿದ್ದರೂ ಈತ ಕೇಳುತ್ತಿರುವುದು ಹಸಿವೆ ಇಂಗಿಸಲು ಆಹಾರ. ನೀರಡಿಕೆ ನೀಗಿಸಲು ನೀರು. ತನಗೂ ಹಸಿವೆ ನೀರಡಿಕೆಗಳಾಗುತ್ತಿವೆ. ತನ್ನ ಫ್ಲ್ಯಾಟ್‌ನಲ್ಲಿರುವ ಇಬ್ಬರು ಹುಡುಗರಿಗೆ ಕೂಡ ಹಸಿವಾಗುತ್ತಿರಬಹುದೆಂದು ಥಟ್ಟನೆ ಜ್ಞಾಪಿಸಿಕೊಂಡನಾತ. ಸಮಯ ಒಂದು ಗಂಟೆ ದಾಟಿದೆ. ಫ್ಲ್ಯಾಟ್‌ನ ಕಡೆಗೇ ಕಾರ್ ನಡೆಸಿದ. ಜೇಬಿಗೆ ತುರುಕಿದ್ದ ಪಿಸ್ತೂಲ್ ನೆನಪಾದಾಗ ಪ್ರಶ್ನಿಸದಿರಲು ಸಾಧ್ಯವಾಗಲಿಲ್ಲ; ಎಷ್ಟು ಗುಂಡುಗಳಿವೆ ಈ ಪಿಸ್ತೂಲ್‌ನಲ್ಲಿ?

ಉಪಕಾರ್ ಸಿಂಗ್ ಗಟ್ಟಿಯಾಗಿ ನಕ್ಕ. ಗೋಲಿ ಮುಗಿದಿವೆ.

ಹಾಗಾದರೆ, ಗೋಲಿಯೆ ಇಲ್ಲದ ಕೋವಿ ಗುರಿ ಹಿಡಿದುಕೊಂಡೇ ಈ ಸಾಹಸಕ್ಕೆ ಹೊರಟದ್ದು ಅಲ್ವೆ?

ಉಪಕಾರ್ ಸಿಂಗ್ ಒಂದು ಕ್ಷಣ ಮೌನ ವಹಿಸಿದ. ಈ ಸಾಹಸದಿಂದಲೇ ಅಲ್ಪಸಂಖ್ಯಾತರು ಉಳಿದುಕೊಂಡಿರುವುದು; ಭಾರತದಲ್ಲಷ್ಟೇ ಅಲ್ಲ, ಸಮಗ್ರ ವಿಶ್ವದಲ್ಲೇನೇ. ಪಾಲಸ್ತಿನ್‌ನಲ್ಲಿ, ಸೌತ್ ಆಫ್ರಿಕಾದಲ್ಲಿ, ವಿಯಟ್ನಾಮಿನಲ್ಲಿ... ಎಲ್ಲೆಡೆಯೂ. ಎಲ್ಲಾ ಕ್ರಾಂತಿಗಳ ನಾಂದಿಯೂ ಗುಂಡು ಇಲ್ಲದ ಕೋವಿಯನ್ನು ಗುರಿ



ಹಿಡಿದುಕೊಂಡೇ. ಇಲ್ಲದ ಬಲ ಇದೆಯೆಂದು ತೋರ್ಪಡಿಸುವುದು ಇಂತಹ ಉಪಾಯಗಳಿಂದಲೇ. ಸಂಘಟಿತ ಶಕ್ತಿಗಳಿಗೆದುರಾಗಿ ಆಯುಧ ಎತ್ತಿದವರೆಲ್ಲ ಇಂತಹ ಉಪಾಯಗಳನ್ನು ಪ್ರಯೋಗಿಸಬೇಕಾಗಿ ಬಂದಿದೆ. ಇಂಡಿಯಾದಲ್ಲೇ ನಕ್ಸಲ್‌ಬಾರಿಯ ಚರಿತ್ರೆ ತೋರ್ಪಡಿಸುವುದೂ ಬೇರೇನಲ್ಲ. ಕೆಲವು ಕ್ರಾಂತಿಗಳು ಸಂಘಟಿತ ಶಕ್ತಿಗಳೆದುರು ಸೋಲುತ್ತಿವೆ. ಕೆಲವಾದರೂ ವಿಜಯ ಸಾಧಿಸುತ್ತವೆ.

ರವಿ ಹೆಚ್ಚಿಗೆ ಪ್ರಶ್ನಿಸಲಿಲ್ಲ. ಬಹಳ ಮೋಟಿವೇಟೆಡ್ ಆಗಿರುವ ಓರ್ವ ಸಿಕ್ಖ ಉಪಕಾರ್ ಸಿಂಗ್ ಎಂಬ ಬಗ್ಗೆ ಅನುಮಾನವೇ ಇಲ್ಲ. ಊಟವಾದ ಬಳಿಕ ಈತನನ್ನು ಯಾವುದಾದರೂ ಗುರುದ್ವಾರಕ್ಕೆ ತಲಪಿಸಬಹುದು ಎಂದುಕೊಂಡನಾತ.

ಡೋರ್ ಬೆಲ್ ಒತ್ತಿದಾಗ ಒಳಗೆ ಕಾಲ ಸಪ್ಪಳ ಪೀಪ್ ಹೋಲ್‌ನಿಂದ ಇಣುಕಿ ನೋಡಿ ಯಾರೆಂದು ದೃಢಪಡಿಸಿದ ಬಳಿಕವೇ ಎಳೆಯರು ಬಾಗಿಲು ತೆರೆದರು. ಅವರು ಈಗಲೂ ವೇಷ ಬದಲಾಯಿಸಲಿಲ್ಲ. ಬದಲಾಯಿಸಲು ತಕ್ಕ ಹಾಗೆ ಅವರಿಗೆ ಒಪ್ಪುವಂಥ ಉಡುಪುಗಳು ಯಾವುದೂ ಇಲ್ಲವಲ್ಲ ಎಂಬುದನ್ನು ರವಿ ವ್ಯಥೆಯೊಂದಿಗೇ ಜ್ಞಾಪಿಸಿಕೊಂಡನು.

ಮನೀಂದರ್ ಮತ್ತು ಸುನೀಂದರ್‌ನನ್ನು ಉಪಕಾರ್ ಸಿಂಗ್‌ಗೆ ಪರಿಚಯಿಸಿದ. ಸಿಕ್ಖರಲ್ಲಿ ಗಂಡು ಮಕ್ಕಳಿಗೂ ಹೆಣ್ಣು ಮಕ್ಕಳಿಗೂ ಒಂದೇ ಹೆಸರಿಡಬಹುದಾದುದರಿಂದ ಎಳೆಯರ ಲಿಂಗವ್ಯತ್ಯಯವನ್ನು ಉಪಕಾರ್ ಸಿಂಗ್ ಗುರುತಿಸಲಿಲ್ಲವೆನಿಸಿತು– ಮನೀಂದರ್ ಗಂಡಸಾದರೆ ಮನೀಂದರ್ ಸಿಂಗ್, ಹೆಂಗಸಾದರೆ ಮನೀಂದರ್ ಕೌರ್. ಕೌರ್ ಎಂದರೆ ರಾಜಕುಮಾರಿ ಎಂದು ಅರ್ಥ. ಎಲ್ಲಾ ಪುರುಷರೂ ಸಿಂಹಗಳು. ಎಲ್ಲಾ ಹುಡುಗಿಯರೂ ರಾಜಕುಮಾರಿಯರು. ಅಮೃತ್ ಮತ್ತು ಕ ದಿಂದ ಆರಂಭಿಸಲಾಗುವ ಐದು ಚಿಹ್ನೆಗಳನ್ನು ಸ್ವೀಕರಿಸಲು ಗಂಡು, ಹೆಣ್ಣು ಎಂಬ ಭೇದವಿಲ್ಲದೆ ಎಲ್ಲರೂ ಬದ್ಧರೇ.

ರವಿ ಕೆಫೆಟೋರಿಯಾಕ್ಕೆ ಫೋನ್ ಮಾಡಿದ. ರೊಟ್ಟಿ, ದಾಲ್, ಆಲೂಕೊಫ್ತ ಮತ್ತು ಮಟ್ಟನ್ ಪನೀರ್ ಆರ್ಡರ್ ಮಾಡಿದ. ಎಷ್ಟು ರೊಟ್ಟಿ ಬೇಕಾಗುತ್ತದೆ ಎಂಬ ಅನುಮಾನ ಮೆನೇಜರ್‌ಗೆ. ಹಸಿದಿರುವ ನಾಲ್ಕು ಸಿಂಹಗಳಿಗೆ ತಿನ್ನಲು ಬೇಕಾಗುವಷ್ಟು ಎಂದು ರವಿ ಉತ್ತರಿಸಿದ. ಮೆನೇಜರ್‌ಗೆ ಈ ತಮಾಷೆ ಖುಷಿ ಕೊಟ್ಟಂತೆ ಅನ್ನಿಸಿತು.

ಉಪಕಾರ್ ಸಿಂಗ್ ಬಾತ್‌ರೂಮ್‌ಗೆ ಹೋದಾಗ ಮನೀಂದರ್ ಮತ್ತು ಸುನೀಂದರ್ ವಿಚಾರಿಸಿದರು. ಮನೆಯ ಸುದ್ದಿ ಏನಾದರೂ ಗೊತ್ತೆ? ಅಮ್ಮ, ಅಜ್ಜಿ, ಚಿಕ್ಕಪ್ಪಂದಿರು ಅವರ ಹೆಂಡಂದಿರಾದ ಯುವ ಪ್ರಾಯದ ಚಿಕ್ಕತಾಯಂದಿರು–ಆ ಬಗ್ಗೆ ವಿಚಾರಿಸಲು ತನಗೆ ಸಮಯಾವಕಾಶ ದೊರೆತಿಲ್ಲವೆಂಬ ಸಂಗತಿ ಅಪರಾಧ ಪ್ರಜ್ಞೆಯನ್ನುಂಟು ಮಾಡಿತು. ರವಿಯ ಮನಸ್ಸಿನಲ್ಲಿ ಹರ್‌ಭಜನ್ ಆಸ್ಪತ್ರೆಯಲ್ಲಿರುವುದರಿಂದ ಅನಾಹುತವೇನೂ ಸಂಭವಿಸಿರಲಿಕ್ಕಿಲ್ಲ. ಆದರೂ ಅವರ

ಬಗ್ಗೆ ವಿಚಾರಿಸದೆ ಇದ್ದದ್ದು ಸರಿಯಲ್ಲ. ಕೆಲಸದೊತ್ತಡದಿಂದಾಗಿ ಬಿಡುವು ಸಿಕ್ಕಲಿಲ್ಲವೆಂಬುದನ್ನು ಈ ಎಳೆಯರಿಗೆ ಮನವರಿಕೆ ಮಾಡುವುದು ಹೇಗೆ? ಕೊನೆಗೆ ಇಷ್ಟು ಮಾತ್ರ ಹೇಳಿದನಾತ; ವಾಹ್ ಗುರುವಿನಲ್ಲಿ ನಂಬಿಕೆಯನ್ನಿಡಿರಿ. ಎಲ್ಲವೂ ಸರಿಯಾಗುತ್ತದೆ. ಜತೆಯಲ್ಲೇ ನಿರ್ಧಾರವನ್ನು ಮಾಡಿದ. ಊಟವಾದ ತತ್‌ಕ್ಷಣ ವಿಚಾರಿಸುವುದು.

ಡೈನಿಂಗ್ ಟೇಬಲ್‌ನ ಸುತ್ತ ಆಹಾರಕ್ಕಾಗಿ ಕಾದು ಕುಳಿತಾಗ ಸಂಭಾಷಣೆ ಸಿಕ್ಖ್ ಚರಿತ್ರೆಯತ್ತ ತಿರುಗಿತು. ಉಪಕಾರ್ ಸಿಂಗ್ ಪಲಾಯನಾರಂಭಿಸಿದ್ದು ಇಂದು, ನಿನ್ನೆ ಅಲ್ಲವೆಂದು ಆತ ತುಸು ನಾಟಕೀಯವಾಗಿಯೇ ಹೇಳಿದ. ಸಿಕ್ಖ ಚರಿತ್ರೆಯೇ ಪಲಾಯನದ ಚರಿತ್ರೆಯಾಗಿದೆ. ಗುರುಗೋವಿಂದ್‌ಸಿಂಗ್‌ರ ಮರಣಾನಂತರ ಸಿಕ್ಖರು ಒಂದು ಕೈಯಲ್ಲಿ ನೇಗಿಲು ಹಿಡಿದಾಗ ಇನ್ನೊಂದು ಕೈಯಲ್ಲಿ ಖಡ್ಗ ಧರಿಸಲು ನಿರ್ಬಂಧಿತರಾದರು. ನೇಗಿಲು ಹಿಡಿದು ಬೇಸಾಯ ಮಾಡುವಾಗಲೂ ಖಡ್ಗ ಬೀಸುತ್ತ ಶತ್ರುಗಳನ್ನೆದುರಿಸಲು ಶಪಿಸಲ್ಪಟ್ಟವರು ಅವರು. ಗುರು ತೇಜ್‌ಬಹದೂರರನ್ನು ಕೊಲೆಗೈದುದರ ಸೇಡು ತೀರಿಸಲು ಬಂದಾಸಿಂಗ್ ಬಹದೂರ್. ಸರ್‌ಹಿಂದ್‌ನಲ್ಲೂ ಸಮಾನದಲ್ಲೂ ಹತ್ತು ಸಾವಿರಕ್ಕಿಂತಲೂ ಹೆಚ್ಚು ಮಹಮದೀಯರನ್ನು ಸಫಾಯಿ ಮಾಡಿದ್ದ. ಗುರುತೇಜ್‌ಬಹುದೂರರ ಕೊಲೆಗಾರ ಜಲಾಲುದ್ದೀನ್‌ನ ಜನ್ಮಸ್ಥಳವಾಗಿತ್ತು ಸಮಾನ. ಹತ್ತು ಸಾವಿರಕ್ಕಿಂತಲೂ ಹೆಚ್ಚು ಮಹಮ್ಮದೀಯರನ್ನು ನಾಶ ಮಾಡಿಯೂ ಸಿಕ್ಖರ ಹಾಗೆ ಕಡಿಮೆಯಾಗಲಿಲ್ಲ. ಅವರು ಕೊಳ್ಳೆ, ಕೊಲೆಗಳನ್ನು ಮುಂದುವರಿಸಿದರು. ಕೊನೆಗೆ ಗುರುದಾಸ್‌ಪುರ್‌ನಲ್ಲಿ ಹೆಚ್ಚು ಅನುಯಾಯಿಗಳನ್ನು ಮೊಗಲರು ಸೆರೆ ಹಿಡಿದು ದೆಹಲಿಗೆ ಕರೆ ತಂದರು. ಸಾವಿರಗಟ್ಟಲೆ ಎತ್ತಿನ ಗಾಡಿಗಳ ಹಿಂದೆ ಕಟ್ಟಿ, ಕಾಲು ನಡಿಗೆಯಲ್ಲೆ ಅವರನ್ನು ದೆಹಲಿಗೆ ತಲಪಿಸಲಾಗಿತ್ತು. ಹಾದಿಯ ಇಬ್ಬದಿಗಳಲ್ಲೂ ಸಿಕ್ಖರ ಶೋಚನೀಯ ಸ್ಥಿತಿಯನ್ನು ಕಂಡು ಖುಷಿ ಪಡುತ್ತ ಕೇಕೆ ಹಾಕಿ ನಗುತ್ತ ಮುಸ್ಲಿಮರು ಸಂದಣಿಸಿದ್ದರು. ಆದರೂ ಸಿಕ್ಖರು ವಿಚಲಿತರಾಗಲಿಲ್ಲ. ಅವರು ಮುಸ್ಲಿಮರಿಗೆ ಕೂಗಿ ಹೇಳಿದರು. ನಮ್ಮ ಈ ದುಃಸ್ಥಿತಿಯಲ್ಲೂ ನಮಗೆ ದುಃಖವಿಲ್ಲ. ಈ ಅವಸ್ಥೆ ಕೂಡ ಎಲ್ಲವೂ ಬಲ್ಲ ದೇವರ ಇಚ್ಛೆಯೇ ಹೌದು. ನಮಗೆ ಆಕ್ಷೇಪಣೆಗಳೂ ಇಲ್ಲ.

ಉಪಕಾರ್ ಸಿಂಗ್ ವಿವರಿಸಿದ. ಸಿಕ್ಖರ ಮನಃಶಾಸ್ತ್ರ ಇದೇನೇ. ಯಾವುದೇ ಕಷ್ಟ ಪರಿಸ್ಥಿತಿಯನ್ನು ಕೂಡ ಅವರು ದೈವೇಚ್ಛೆಯೆಂದೇ ತಿಳಿದು ನೆಮ್ಮದಿಯನ್ನು ಕಂಡುಕೊಳ್ಳುತ್ತಾರೆ.

ಜಲಿಯನ್‌ವಾಲಾಬಾಗ್ ಸಮೂಹ ಹತ್ಯಾಕಾಂಡದಲ್ಲಿ ಜನರಲ್ ಡಯಾರನ ಗುಂಡುಗಳಿಗೆ ತುತ್ತಾದವರಲ್ಲಿ ಮೂರನೆಯ ಒಂದು ಪಾಲು ಸಿಕ್ಖರಾಗಿದ್ದರು. ೧೯೨೧ರಲ್ಲಿ ಗುರುನಾನಕರ ಜನ್ಮಸ್ಥಳವಾದ ನಾನ್‌ಕಣದ ಹತ್ಯಾಕಾಂಡದಲ್ಲಿ ಅಸಂಖ್ಯ ಸಿಕ್ಖರು ಕೊಲೆಯಾಗಿದ್ದರು. ನಾನ್‌ಕಣಾಸಾಹಿಬ್ ಗುರುದ್ವಾರದ ಸಾವಿರ ಗಟ್ಟಲೆ ಎಕರೆ ಭೂ ಹಿಡುವಳಿ ಮತ್ತು ಲಕ್ಷಗಟ್ಟಲೆ ರೂಪಾಯಿಯ ಇತರ ಮೂಲಗಳ ಆದಾಯಗಳ ಬಗ್ಗೆ ದುರಾಸೆ ಹೊಂದಿದ್ದ ನಾರಾಯಣ್‌ದಾಸ್ ಎಂಬುವನು ಹಿಂದೂವಾಗಿದ್ದನು. ಅಂದು ಗುರುದ್ವಾರದ ಮಹಂತ್ ಗುರುದ್ವಾರದ ಆಸ್ತಿಗಳನ್ನಷ್ಟೂ ಅಪಹರಿಸಲು ನಾರಾಯಣ್‌ದಾಸ್ ಗೂಢತಂತ್ರಗಳನ್ನು ಬಳಸತೊಡಗಿದ್ದ. ಸಿಕ್ಖರು ಪ್ರತಿಭಟಿಸುತ್ತ ಗುರುದ್ವಾರವನ್ನು ಆಕ್ರಮಿಸಿದರು. ಮಹಂತ್ ಅದನ್ನು ನಿರೀಕ್ಷಿಸಿಯೇ ಇದ್ದ. ಶಸ್ತ್ರಧಾರಿಗಳಾದ ಗೂಂಡಾಗಳನ್ನೂ ಆತ ಗೊತ್ತು ಮಾಡಿದ್ದ. ನೂರೈವತ್ತರಷ್ಟು ಸಿಕ್ಖರು ಆ ದಿನ ಗುರುದ್ವಾರದೊಳಗೆ ಕೊಲೆಯಾದರು. ೧೯೪೭ರ ಗಲಭೆಯ ವೇಳೆ ೨,೫೦,೦೦,೦೦೦ರಷ್ಟು ಸಿಕ್ಖರು ಪಾಕಿಸ್ತಾನದಿಂದ ಭಾರತಕ್ಕೆ ಪಲಾಯನ ಮಾಡಬೇಕಾಗಿ ಬಂದಿತ್ತು. ರಾವಲ್‌ಪಿಂಡಿಯಲ್ಲಿ ಸಾವಿರ ಗಟ್ಟಲೆ ಸಿಕ್ಖರು ಕೊಲ್ಲಲ್ಪಟ್ಟರು.

ಜರ್ಮನಿಯ ಓಕ್‌ವೃಕ್ಷದ ಹಾಗೆ ಮತ್ತು ಕೆನಡಾದ ಮಾಪಿಳ್‌ನ ಹಾಗೆ ಪಂಜಾಬ್‌ನಲ್ಲಿ ಸಾಮಾನ್ಯವಾಗಿರುವ ಒಂದು ಮರವಿದೆ. ತಹ್ಲಿ ಎಂದು ಅದರ ಹೆಸರು. ಈ ಮರವನ್ನು ಕತ್ತರಿಸಿ ಬಿಸುಟರೂ ಪುನಃ ಚಿಗುರುತ್ತದೆ. ಬೇರು ಸಹಿತ ಕಿತ್ತರೂ ಕುಡಿಯೊಡೆಯುತ್ತದೆ. ಏನು ಮಾಡಿದರೂ ಅದನ್ನು ನಾಶಮಾಡಲಿಕ್ಕಾಗುವುದಿಲ್ಲ. ಸಿಕ್ಖನೂ ಈ ಮರದ ಹಾಗೆಯೇ, ಫೀನಿಕ್ಸ್ ಪಕ್ಷಿಯ ಹಾಗೆ ಸ್ವಂತ ಚಿತೆಯಲ್ಲಿ, ಹಿಂದಿನದಕ್ಕಿಂತಲೂ ಬಲಾಢ್ಯವಾಗಿ ಅವರು ಮರುಹುಟ್ಟು ಪಡೆಯುವರು. ಇವರ ಹಾಗೆ ಬಗ್ಗು ಬಡಿಯಲ್ಪಟ್ಟಷ್ಟೂ ಬಲಿಷ್ಠವಾಗುತ್ತಲೇ ಇರುವ ಇನ್ನೊಂದು ವರ್ಗವಿದೆಯೆ? ಪ್ರಾಯಶಃ ಒಂದು ಅಪವಾದದಂತೆ ಜೂತ ಜನಾಂಗ ಇದ್ದೀತು ಅಷ್ಟೇ.

ಪಂಜಾಬ್‌ನ ಮತೀಯ ಹುಚ್ಚಿಗೆ ಸಿಕ್ಖರು ಕೆಲವು ಮಟ್ಟಿಗೆ ಕಾರಣ ಕರ್ತರಿರಬಹುದು. ಆದರೆ, ಭಾಷಾ ಸಮಸ್ಯೆಯನ್ನು ಬಡಿದೆಬ್ಬಿಸಿದ್ದು ಜನಸಂಘ ಮತ್ತು ಆರ್ಯ ಸಮಾಜಗಳಾಗಿದ್ದುವು. ಪಂಜಾಬಿಸಭಾ ವಾದವನ್ನು ಹಿಂದಿ ಹುಚ್ಚರಿಗೊಂದು ಪ್ರತ್ಯುತ್ತರವಾಗಿಯೇ ಆರಂಭಿಸಲಾಗಿತ್ತು. ಅದನ್ನಾರಂಭಿಸಿದ್ದಾಗ ಪಂಜಾಬಿ ಭಾಷೆಗೊಂದು ಪ್ರತ್ಯೇಕ ರಾಜ್ಯಬೇಕೆಂದು ಮಾಸ್ಟರ್ ತಾರಾ ಸಿಂಗ್ ಸಹ ಆಶಿಸಿರಲಿಲ್ಲ. ಹಿಂದಿಯನ್ನು ಬಲಾತ್ಕಾರವಾಗಿ ಹೇರತೊಡಗಿದ್ದಾಗ ತಮಿಳುನಾಡಿನಲ್ಲಿ ಸಂಭವಿಸಿದಕ್ಕಿಂತ ಹೆಚ್ಚಿನದೇನೂ ಪಂಜಾಬಿನಲ್ಲೂ ಸಂಭವಿಸುತ್ತಿರಲಿಲ್ಲ.

ಬಾಗಿಲು ಬಡಿದ ಸದ್ದು. ಊಟದ ಟ್ರೇಗಳೊಂದಿಗೆ ಮಾಣಿ ಮೇಜಿನ ಮೇಲೆ ಆಹಾರ ಪದಾರ್ಥಗಳನ್ನಿರಿಸಿ ಹೊರಟು ಹೋದ. ನಾಲ್ಕು ಸಿಂಹಗಳಿಗೆ ತಿನ್ನಲು ಸಾಕಾಗುವಷ್ಟು ರೊಟ್ಟಿಗಳ ರಾಶಿ.

ಮೊದಲ ಹತ್ತು ನಿಮಿಷ ಕಾಲ ಯಾರೂ ಮಾತನಾಡಲಿಲ್ಲ. ರೊಟ್ಟಿ ಮುರಿದು ದಾಲ್‌ನಲ್ಲೋ, ಕೋಫ್ತದಲ್ಲೊ ಅದ್ದಿ ಆತುರಾತುರವಾಗಿ ತಿನ್ನುತ್ತಿರುವುದರ ನಡುವೆ

ಯಾರೂ ಪರಸ್ಪರ ಮುಖ ನೋಡಲು ಕೂಡ ಇಲ್ಲ. ಮನೀಂದರ್ ಮತ್ತು ಸುನೀಂದರ್ ಮನೆಯೊಡತಿಯರ ಭೂಮಿಕೆಯನ್ನು ಚೆನ್ನಾಗಿ ನಿರ್ವಹಿಸಿದರು. ಫ್ರಿಜ್‌ನಿಂದ ನೀರು ತೆಗೆಯಲೂ ಕಪ್ ಬೋರ್ಡ್‌ನಿಂದ ಗ್ಲಾಸುಗಳನ್ನು ಹೊರ ತೆಗೆಯಲೂ ಅವರು ನೆರವಾದರು. ಹಲವು ದಿನಗಳಿಂದ ಬಳಸದೆಯೇ ಇದ್ದ ಉಪ್ಪಿನ ಕಾಯಿಯ ಭರಣಿಯನ್ನೂ ಅವರು ಮೇಜಿಗೆ ತಲಪಿಸಿದರು.

ಉಪಕಾರ್ ಸಿಂಗ್ ಏಳನೆಯ ರೊಟ್ಟಿ ಮುರಿದ ಬಳಿಕ ತಲೆಯೆತ್ತಿದ. ತದನಂತರ ನಕ್ಕ. ಅದೇ ಆಕರ್ಷಕವಾದ ಹರ್ಷ ಹರಡುವ ನಗೆ.

ಆತ ಹೇಳತೊಡಗಿದ: ಪಂಜಾಬ್ ಸಮಸ್ಯೆಗೆ ಪರಿಹಾರ ಹುಡುಕುವವರು ಅರ್ಥ ಮಾಡಿಕೊಳ್ಳದ ಒಂದು ಸಂಗತಿ ಇದೆ. ಸಿಕ್ಖರ ಮನಸ್ಸನ್ನು ರೂಪಿಸುವುದರಲ್ಲಿ ಪ್ರಮುಖ ಪಾತ್ರ ವಹಿಸುತ್ತಿರುವುದು ಅರ್ದಾಸ್. ಗುರು ಭಕ್ತರಾದ ಸಿಕ್ಖರು ಉಣ್ಣುವಾಗಲೂ ನಿದ್ರಿಸುವಾಗಲೂ ಹರ್ಷಿಸುವಾಗಲೂ ಹೊಸ ಬಿಜಿನೆಸ್ ಆರಂಭಿಸುವಾಗಲೂ ಪ್ರತಿಯೊಂದನ್ನು ಮಾಡುವಾಗಲೂ ಅರ್ದಾಸ್ ಅವರ ಮೇಲೆ ಪ್ರಭಾವ ಬೀರುತ್ತದೆ. ಸಿಕ್ಖ್ ನಂಬಿಕೆಗಳಿಗಾಗಿ ಬಲಿಯಾದವರ ತ್ಯಾಗವನ್ನು ಸ್ಮರಿಸಲು ಅವರು ಬದ್ಧರಿರುವರು. ಕೊಲೆಯಾದವರು, ಕೈ, ಕಾಲು, ಕಿವಿ ಮತ್ತು ಮೂಗುಗಳು ಕತ್ತರಿಸಲ್ಪಟ್ಟವರು, ಕಣ್ಣು ಗೊಂಬೆಗಳು ಕೀಳಲ್ಪಟ್ಟವರು, ಕುದಿ ನೀರಿನಲ್ಲಿ ಮುಳುಗಿಸಿ ಕೊಲ್ಲಲ್ಪಟ್ಟವರು, ಒಂದೊಂದೇ ಆಗಿ ಕೂದಲುಗಳು ಕೀಳಲ್ಪಟ್ಟು ಅಂಗುಲ ಅಂಗುಲವಾಗಿ ಭೇದ್ಯಕ್ಕೆ ಗುರಿಯಾದವರು, ಗುರುದ್ವಾರಗಳ ರಕ್ಷಣೆಗಾಗಿ ಆತ್ಮಾಹುತಿ ಮಾಡಿಕೊಂಡವರು, ನಂಬಿಕೆಯನ್ನು ಕಾಪಾಡಲಿಕ್ಕಾಗಿ ಅರೆವ ಗಾಣದಲ್ಲಿ ಹಾಕಿ ಜಜ್ಜಿ ಕೊಲ್ಲಲ್ಪಟ್ಟವರು, ಕೊನೆಯುಸಿರೆಳೆವ ತನಕವೂ ಕೇಶ, ಕಾಚ, ಕಂಕಣ, ಕೃಪಾಣಗಳನ್ನು ತ್ಯಜಿಸಲು ಒಪ್ಪದಿದ್ದವರು, ಗುರುವಾಣಿ ಜಪಿಸುತ್ತ, ಜಪ್‌ಜಿ ಉರು ಹೊಡೆಯುತ್ತ ಮರಣವನ್ನು ದೇವರ ಇಚ್ಛೆಯೆಂದೇ ಬರಮಾಡಿಕೊಂಡವರು– ಅವರ ಸ್ಮರಣೆಯೊಂದಿಗೇ ಸಿಕ್ಖರ ದಿನ ಆರಂಭವಾಗುತ್ತದೆ. ಅವರ ಸ್ಮರಣೆಯೊಂದಿಗೇ ಸಿಕ್ಖರ ದಿನ ಕೊನೆಗೊಳ್ಳುತ್ತದೆ. ಸಿಕ್ಖರು ಖಲ್ಸಕ್ಕಾಗಿ ಎಲ್ಲವನ್ನು ತ್ಯಾಗ ಮಾಡಲು ತಯಾರಿರುತ್ತಾರೆ. ವಾಹ್‌ಗುರು ಎಂದು ಕರೆಯುತ್ತಾ ಎಲ್ಲಾ ದುಃಖಗಳನ್ನು ಬರಮಾಡಿಕೊಳ್ಳಲು ಸಿದ್ಧರಿರುತ್ತಾರೆ.

ಅರ್ದಾಸ್ ಪ್ರತಿಯೊಂದು ಸಿಕ್ಖ್ ಗೃಹದಲ್ಲೂ ಆದರದಿಂದ ಸ್ತೋತ್ರ ಮಾಡಲ್ಪಡುತ್ತದೆ. ಅರ್ದಾಸ್ ಮಕ್ಕಳಿಗೆ ಕೂಡ ಕಂಠಪಾಠವಾಗಿರುತ್ತದೆ. ಅರ್ದಾಸ್‌ನಲ್ಲಿ ಸಿಕ್ಖ ಚರಿತ್ರೆಯ ಉಜ್ವಲ ಮುಹೂರ್ತಗಳು ವರ್ಣಿಸಲ್ಪಟ್ಟಿವೆ. ಅರ್ದಾಸ್‌ನ ಪ್ರಭಾವ ಅತ್ಯಂತ ಗಾಢವಾಗಿರುತ್ತದೆ: ಸಿಕ್ಖರ ಜೀವನದಲ್ಲಿ, ಅರ್ದಾಸ್ ಮೋಕ್ಷವನ್ನಾಗಲಿ, ಸುಖವನ್ನಾಗಲೀ ವಾಗ್ದಾನ ಮಾಡುವುದಿಲ್ಲ. ಆತ್ಮೀಕವೂ ಶಾರೀರಿಕವೂ ಆದ ಹೆಚ್ಚುಗಾರಿಕೆಯ ಕಾಂಕ್ಷೆಯನ್ನು ಪ್ರಚೋದಿಸುವುದಿಲ್ಲ. ನಂಬಿಕೆಗಾಗಿ ಏನನ್ನೂ ತ್ಯಾಗ



ಮಾಡಲೆಂಬ ಆಣತಿಯನ್ನಷ್ಟೇ ಅರ್ದಾಸ್ ನೀಡುತ್ತದೆ. ಆ ಅಣತಿಯನ್ನು ಮನನ ಮಾಡುತ್ತ, ಮಾಡುತ್ತ ಮೈಗೂಡಿಸಿಕೊಳ್ಳುತ್ತದೆ, ಸಿಕ್ಖರ ಮನಸ್ಸು. ಸಿಕ್ಖರು ತಮ್ಮ ನಂಬಿಕೆಯ ರಕ್ಷಣೆಗಾಗಿ ಎಂತಹ ತ್ಯಾಗಕ್ಕೂ ಹಿಂಜರಿಯಲಾರರು.

ಸಿಕ್ಖರೊಳಗಿನ ಭಯೋತ್ಪಾದಕರೂ ಅರ್ದಾಸ್ ಉರು ಹೊಡೆದು ಬೆಳೆದವರೇ. ಆದರೆ ವ್ಯಾಪಕಾರ್ಥದಲ್ಲಿ ಸಿಕ್ಖರು ಮತ್ತು ಭಯೋತ್ಪಾದಕರ ನಡುವೆ ಗಡಿದಂಡೆಗಳಿಲ್ಲ. ಯಾಕೆಂದರೆ ಅರ್ದಾಸ್‌ನ ಪ್ರಭಾವ ಅಷ್ಟರ ಮಟ್ಟಿಗೆ ಎಲ್ಲಾ ಸಿಕ್ಖರಲ್ಲೂ ಬೇರು ಬಿಟ್ಟಿರುತ್ತದೆ. ಏನನ್ನು ಗಳಿಸಿದೆ ಎಂದಲ್ಲ. ಏನನ್ನು ತ್ಯಾಗ ಮಾಡಿದೆ ಎಂಬುದೇ ಮಹತ್ತ್ವದ ಮಾನದಂಡವಾಗಿದೆ.

ಊಟ ಮುಗಿದಾಗ ಎಲ್ಲರ ತಟ್ಟೆಗಳನ್ನೂ ತೊಳೆದಿಡಲು ಮನೀಂದರ್ ಮತ್ತು ಸುನೀಂದರ್‌ರ ನಡುವೆ ಸ್ಪರ್ಧೆಯೇ ನಡೆಯಿತು. ಅವರು ಮೇಜು ಒರೆಸಿ ಚೊಕ್ಕಗೊಳಿಸಿದರು. ತಟ್ಟೆ ಲೋಟಗಳನ್ನು ತೊಳೆದು ಅದರದರ ಸ್ಥಾನಗಳಲ್ಲಿ ಇರಿಸಿದರು. ಬಳಿಕ ಅವರು ಮಲಗುವ ಕೋಣೆಗೆ ಹೋದರು.

ರವಿ ಅಧ್ಯಯನ ಕೋಣೆಯ ಅಲ್ಮಾರದೊಳಗೆ ಪಿಸ್ತೂಲನ್ನಿರಿಸಿ ಬೀಗ ಜಡಿದ. ಉಪಕಾರ್ ಸಿಂಗ್‌ನನ್ನು ಸ್ವಾಗತ ಕೋಣೆಯ ದಿವಾನದ ಮೇಲೆ ವಿಶ್ರಾಂತಿಗೆ ಬಿಟ್ಟ.

ಸೋಫಾದಲ್ಲಿ ಒರಗಿ ಕೂಡುವಷ್ಟರಲ್ಲೆ ರವಿಯ ಕಣ್ಣುಗಳು ಮುಚ್ಚಿಕೊಂಡವು.

* * *

## ಅಧ್ಯಾಯ ೧೫

# ದರ್ಶನಳ ಮೇಲೆ ಆಕ್ರಮಣ

ದರ್ಶನ್ ನಿಧಾನವಾಗಿ ಕಣ್ಣು ಬಿಟ್ಟಳು. ಯಾವುದೂ ಸ್ಪಷ್ಟವಾಗಲಿಲ್ಲ. ತಲೆಯೊಳಗೆ ದುಂಬಿಗಳು ಗುಂಯಿಗುಟ್ಟುತ್ತ ಹಾರಾಡುತ್ತಿರುವಂತೆ, ಮೈಯಿಡೀ ಹಾವುಗಳು ಹರಿದಾಡುತ್ತಿರುವಂತೆ, ಸುತ್ತಲೂ ನೀರ ಸುಳಿ, ಸರ್ರನೆ ಸುತ್ತುವರಿಯುತ್ತಿರುವ ರಾಡಿ ನೀರು, ಅಥವಾ ತಾನೇ ಸುತ್ತು ಹೊಡೆಯುತ್ತಿರುವೆನೆ?

ಯಾವ್ಯಾವುದೊ ಮಸುಕು ಮಸುಕಾದ ಚಿತ್ರಗಳು ಬಳಲಿರುವ ಮನಸ್ಸಿನಲ್ಲಿ ಮೂಡಿ ಮಾಯವಾಗುತ್ತಾ ಇವೆ. ಏನು ಸಂಭವಿಸಿದ್ದು ತನಗೆ? ಕತ್ತಲಿಸಿರುವ ಮಡುವಿನತ್ತ ಯಾರೋ ತನ್ನನ್ನು ಪುನಃ ಎಳೆಯುತ್ತಿದ್ದಾರೆ. ಮೆಲ್ಲಮೆಲ್ಲಗೆ ಹುಟ್ಟು ಹಾಕುತ್ತ ನೀರಿನ ಮೇಲ್ಮೈ ತಲಪುವಷ್ಟರಲ್ಲಿ ಪುನಃ ತಳಕ್ಕೇ ಎಳೆಯುತ್ತಿದ್ದಾರೆ.

ಕಣ್ಣರೆಪ್ಪೆಗಳು ಭಾರವಾಗಿವೆ. ತೆರೆಯಲು ಸಾಧ್ಯವಾಗುತ್ತಾ ಇಲ್ಲ. ಯಾವುದೋ ಗಬ್ಬುನಾತ ಕೊರಕೊರೆದು ಮೂಗೊಳಗೆ ನುಗ್ಗುತ್ತಾ ಇದೆ. ತಾನು ಕಂತಿ ಹೋಗಿರುವ ಕೊಳಚೆ ನೀರಿನಲ್ಲಿದ್ದಿರಬೇಕು. ಎಲ್ಲಾ ಕೊಳಚೆಗಳೂ ಒಟ್ಟಾಗುವ ಗಟಾರದೊಳಗೇ ತಾನು ಬಿದ್ದಿರುವೆನೇ? ಅಡ್ಡಾದಿಡ್ಡಿ ಮೊನಚು ಹಲ್ಲುಗಳಿರುವ ಮೊಸಳೆಗಳೇ ತನ್ನನ್ನು ಕೆಳಗಡೆಗೆ ಎಳೆಯುತ್ತಿವೆಯೇ?

ಬಹಳ ಹೆಣಗಾಡಿ ಕಣ್ಣು ಬಿಟ್ಟಳಾಕೆ. ಮೊದಲು ನೆರಳುಗಳು. ಬಳಿಕ ಬೆಳಕಿನ ಧಗಧಗಿಸುವ ಹೊಳಪು. ಮೆಲ್ಲ ಮೆಲ್ಲಗೆ ರೂಪುಗಳು ನಿಚ್ಚಳವಾದುವು. ತಾನು ಬಿದ್ದುಕೊಂಡಿರುವುದು ಕೆಸರ ಮಡುವಿನಲ್ಲಲ್ಲ. ನೆಲದ ಮೇಲೆ ಹಾಸಲಾದ ದಡಿಯಲ್ಲಿ. ಕತ್ತು ಓರೆ ಮಾಡಿ ಸುತ್ತಲೂ ದಿಟ್ಟಿಸಿದಳು. ತನ್ನ ಮಲಗುವ ಕೋಣೆಯೇ ಎಂದು ಖಚಿತಪಡಿಸಿದಳು. ಮೂಲೆಯಲ್ಲಿರಿಸಿದ್ದ ಹೂದಾನಿ ಕೆಳಗೆ ಬಿದ್ದು ಒಡೆದಿದೆ. ಅಂಗದ್ ಮತ್ತು ತಾನು ಜತೆಗೂಡಿ ಜನ್‌ಪಥ್ ಕಾಟೇಜ್ ಎಂಪೋರಿಯಮ್‌ನಿಂದ ಕೊಂಡುಕೊಂಡ ಸಿರಾಮಿಕ್ ಹೂದಾನಿ ಅದು. ಚಿತ್ರ ಕೆತ್ತನೆಗಳಿರುವ ಬ್ರಾಸ್‌ವಾಸ್ ಸಾಕೆಂದು ತಾನು ಹೇಳಿದ್ದೆ. ಅದು ಒಡೆಯುವುದಿಲ್ಲ. ಆದರೆ, ಅಂಗದ್ ಒತ್ತಾಯಿಸಿದ್ದ. ನೀಲಿ ಹೂಗಳ ಚಿತ್ರವಿರುವ ಸಿರಾಮಿಕ್‌ನ ದೊಡ್ಡ ಹೂದಾನಿ. ದಿಸ್ ಇಸ್ ಮೋರ್ ಎಲಿಗೆಂಟ್... ಮೋರ್ ಕ್ಲಾಸ್ಸಿ... ಬೆಳಗ್ಗೆ ಕೊಯ್ದು ತೆಗೆಯಲಾದ ರಾತ್ರಿ



ರಾಣಿಯ ಮೂರು ದಂಡುಗಳು ಬಳಿ ಕರಕಲಾಗಿ ಚದುರಿ ಬಿದ್ದುಕೊಂಡಿವೆ. ಥಟ್ಟನೆ ಸಮಯದ ನೆನಪಾಯ್ತು. ಹೂದಾನಿಯನ್ನು ಸಿದ್ಧಗೊಳಿಸಿದ್ದು ನೆನಪಿದೆ. ಹಿಂದಿನ ದಿನದ ಬಾಡಿದ ಹೂಗಳನ್ನು ಬಿಸಾಡುವುದರಲ್ಲಿದ್ದಾಗಲೇ ಡೋರ್ ಬೆಲ್ ಸದ್ದಾಗಿತ್ತು.

ಆಮೇಲೆ ಆದದ್ದೇನು? ಅವಳು ಬೆಚ್ಚಿದಳು. ತನಗೆ ಏನು ಸಂಭವಿಸಿದ್ದು? ಬಾಗಿಲು ತೆರೆಯುತ್ತಲೇ ಹತ್ತು ಹನ್ನೆರಡು ಮಂದಿ ಒಳಗೆ ನುಗ್ಗಿದ್ದು ನೆನಪಾಗುತ್ತಿದೆ. ಅವಳು ಏಳಲು ಯತ್ನಿಸಿದಳು. ಕುತ್ತಿಗೆ ಮತ್ತು ಸೊಂಟದಲ್ಲಿ ನೋವು. ತನ್ನ ಮೃದುಲ ನಾಡಿಗಳಲ್ಲಿ ಕುದಿವ ಲೋಹವು ಉಂಟುಮಾಡಿದ್ದ ಉರಿ. ಅವಳು ತನ್ನನ್ನೇ ನೋಡಿಕೊಂಡಳು. ತಾನು ಬತ್ತಲೆ ಇರುವೆನಲ್ಲ. ತನ್ನ ವಸ್ತ್ರಗಳೇನಾದುವು? ಸುತ್ತಲೂ ಕಣ್ಣುಹಾಯಿಸಿದಳು. ತುಸು ದೂರದಲ್ಲಿ ತನ್ನ ಸಲ್ವಾರ್ ಕಮೀಜ್‌ಗಳು ಚಿಂದಿ ಚಿಂದಿಗಳಾಗಿ ಬಿದ್ದುಕೊಂಡಿವೆ. ಎದೆಯ ಮಾರ್ದವತೆಗಳಲ್ಲಿ ನೆತ್ತರು ಹೆಪ್ಪುಗಟ್ಟಿದೆ. ಎಡ ಮೊಲೆ ತೊಟ್ಟು ದಪ್ಪಗೆ ಬಾತುಕೊಂಡಿದೆ. ತೊಡೆಗಳಲ್ಲಿ ವಿಪರೀತ ನೋವು ಮತ್ತು ಉರಿ.

ಥಟ್ಟನೆ ಚಿತ್ರ ಸ್ಪಷ್ಟವಾಯಿತು–ಅನೇಕ ಕಾಲುಗಳೂ ಕೈಗಳೂ ಇರುವ ನರ ಪಶುವಿನ ಆಕ್ರಮಣ. ಕಿಸಿಯುತ್ತಿದ್ದ ಹಲ್ಲುಗಳನ್ನು ಹೊರತು ಪಡಿಸಿದರೆ ಆ ಪಶುವಿಗೆ ಕಾರ್ಯ ಪ್ರವರ್ತವಾಗಿದ್ದ ಅವಯವ ಒಂದು ಮಾತ್ರ.

ನರ ಪಶುವಿನ ಆಕ್ರಮಣವನ್ನು ತಡೆಗಟ್ಟಲು ತಮ್ಮನು ಪಕ್ಕದ ಕೋಣೆಯಿಂದ ಧಾವಿಸಿ ಬಂದಿದ್ದ. ಯಾರೊ ಒಬ್ಬಾತ ಅವನನ್ನು ತಳ್ಳಿ ನೆಲಕ್ಕೊರಗಿಸಿದ. ಒಳಕೋಣೆಯಲ್ಲಿ ಗುರುಗ್ರಂಥ ಸಾಹಿಬ್ ಪಾರಾಯಣ ಮಾಡುತ್ತ ಕುಳಿತಿದ್ದ ಅಮ್ಮನೂ ಧಾವಿಸಿ ಬಂದದ್ದು ನೆನಪಾಗುತ್ತಿದೆ. ಅಷ್ಟರಲ್ಲೇ ಯಾರ‍್ಯಾರೋ ತನ್ನ ಮೈ ಮೇಲೆರಗಿದ್ದರು. ಬಳಿಕ ಅಮ್ಮನಿಗೆ ಮತ್ತು ತಮ್ಮನಿಗೆ ಏನಾಗಿದೆಯೋ ಏನೊ? ನಾನು ಗಟ್ಟಿಯಾಗಿ ಅಳತೊಡಗಿದಾಗ ಯಾವನೊ ನನ್ನ ಬಾಯಿಗೆ ತನ್ನದೇ ದುಪ್ಪಟ ತುರುಕಿದ್ದ. ಎದುರಿಸಿ ನಿಲ್ಲಲು ಸಾಧ್ಯವಾಗದೆಂದು ಖಚಿತವಾದಾಗ ನಾನು ಕಣ್ಣುಗಳನ್ನು ಬಲವಾಗಿ ಮುಚ್ಚಿಕೊಂಡೆ. ಯಾವ್ಯಾವನೋ ನನ್ನ ಮಾರ್ದವತೆಗಳಲ್ಲಿ ಕೈಯಾಡಿಸಿದ್ದ. ಮೈಯಿಡೀ ಕಂಬಳಿ ಹುಳಗಳು ಹರಿದಾಡಿದ್ದವು.

ಯಾವನೋ ಮುತ್ಠಾಳ ನನ್ನ ಮೈಮೇಲೆ ಬೋರಲಾಗಿ ಮಲಗಿದ್ದ. ಆತನ ಉಗುರುಗಳು ನನ್ನನ್ನು ಪರಚಿ ಸೀಳಿದ್ದವು. ಅವನು ಹಲ್ಲುಗಳನ್ನು ನನ್ನ ತುಟಿಗಳಲ್ಲೂ ಎದೆಯಲ್ಲೂ ಇಳಿಸಿದ್ದನು. ನನ್ನ ಕಣ್ಣುಗಳು ಒಸರಲಿಲ್ಲ. ತುಟಿಗಳು ಬಿಕ್ಕಳಿಸಲಿಲ್ಲ. ಗದ್ಗದದಿಂದ ಗಂಟಲು ಕಟ್ಟಲಿಲ್ಲ. ಯಾವುದನ್ನೂ ಕಾಣದಿರಲೆಂದು ಕಣ್ಣುಗಳನ್ನು ಮುಚ್ಚಿದ್ದೆ. ಕೇಳದಿರಲೆಂದು ಕಿವಿಗಳನ್ನು ಮುಚ್ಚಿಕೊಂಡಿದ್ದೆ.

ಚಿಕ್ಕಂದಿನಲ್ಲಿ ಕಂಠಪಾಠ ಮಾಡಿಕೊಂಡಿದ್ದ ಜಪ್‌ಜಿಯ ಸಾಲುಗಳನ್ನು ಉರು ಹೊಡೆದೆ.

ಆದಿಯಲ್ಲಿದ್ದದ್ದು ಸತ್ಯ. ಆ ಸತ್ಯ ಇವತ್ತೂ ಇದೆ. ಯಾವತ್ತೂ ಇರುತ್ತದೆ.

ಸೃಷ್ಟಿಕರ್ತನ ಇಚ್ಛಾನುಸಾರ ಎಲ್ಲವೂ ನಡೆಯುತ್ತವೆ. ಈ ಜಗತ್ತಿನಲ್ಲಿ ನಡೆಯುತ್ತಿರುವುದನ್ನು, ನಡೆಯಲಿರುವುದನ್ನು ಎಲ್ಲವನ್ನೂ ಸೃಷ್ಟಿಕರ್ತನು ನಿರ್ಧರಿಸಿರುವನು. ಯಾವುದೂ ತಾನಾಗಿ ಸಂಭವಿಸುತ್ತಿಲ್ಲ. ಎಲ್ಲಾ ಜೀವಜಾಲಗಳೂ ಆ ಇಚ್ಛೆಯನ್ನೂ ಅನುಸರಿಸುತ್ತವೆ.

ಎಲ್ಲಾ ದುಃಖಗಳೂ ಎಲ್ಲಾ ಸಂತೋಷಗಳೂ ಆ ಇಚ್ಛೆಗನುಗುಣವಾಗಿ ಮಾತ್ರ ಹುಟ್ಟಿಕೊಳ್ಳುತ್ತವೆ.

ಹೌದು. ಈ ನಿಮಿಷದಲ್ಲಿ ದರ್ಶನ್ ಎಂಬ ನಾನು ಪಾಶವೀಯವಾಗಿ ಆಕ್ರಮಿಸಲ್ಪಡುತ್ತಿರುವುದೂ ಆ ಇಚ್ಛೆಗನುಗುಣವಾಗಿಯೇ ಇರಬಹುದು. ಈ ನೀಚರು ಈ ಹೀನ ಕಾರ್ಯವೆಸಗುತ್ತಿರುವುದೂ ಈ ಇಚ್ಛೆಗನುಗುಣವಾಗಿಯೇ ಇರಬಹುದು.

ಪುನಃ ಮನಸ್ಸು ಪಿಸುಗುಟ್ಟುತ್ತದೆ.

ಸಂಯಮ ಕೊಟ್ಟಿಗೆಯಾಗಲಿ, ತಾಳ್ಮೆ ಸೊನಗಾರನಾಗಲಿ. ವಿವೇಕ ಕಾರ್ಯಾಗಾರವಾಗಲಿ, ಬುದ್ಧಿ ಸುತ್ತಿಗೆಯಾಗಲಿ, ಭಯವನ್ನು ಕುಲುಮೆಯನ್ನಾಗಿ ಮಾಡಿ, ವ್ರತವನ್ನು ಅಗ್ನಿಯನ್ನಾಗಿಸಿ, ಪ್ರೀತಿಯ ಕುಡಿಕೆಯಲ್ಲಿ ಅಮೃತ್ ಕರಗಲಿ.

ಸಾಲುಗಳು ತಪ್ಪುತ್ತಿವೆ. ನಿದ್ದೆಯಲ್ಲು ಕೂಡ ಪಠಿಸಲು ಸಾಧ್ಯವಾಗಿದ್ದ ಜಪ್‌ಜಿಯ ಸಾಲುಗಳು ತಪ್ಪುತ್ತಾ ಇವೆ.

ನರಪಶು ಬದಲಾಗಿದೆ. ಬೆವರ ನಾತಕ್ಕೆ ವ್ಯತ್ಯಾಸವಿದೆ. ಹುಚ್ಚು ಚಲನೆಗಳಿಗೆ ಮಾತ್ರ ವ್ಯತ್ಯಾಸವಿಲ್ಲ.

ಬೇರೊಂದು ಬೈರಿಗೆ ಕೆಲಸ ಮಾಡತೊಡಗಿತ್ತು. ಮನಸ್ಸನ್ನು ಬೇರೆಲ್ಲಿಗೋ ಮೇಯಲು ಬಿಟ್ಟಿದ್ದೆ.

ಮಾಘಮಾಸದ ಕುರಿತು ನಾನಕ್ ಹಾಡಿದ್ದ ಸಾಲುಗಳಲ್ಲಿ ಮನಸ್ಸನ್ನು ಕಟ್ಟಿ ಹಾಕಿದ್ದೆ:

ಮಾಘ ಮಾಸದಲ್ಲಿ ತೀರ್ಥಯಾತ್ರೆಯ
ಪಾವಿತ್ರ್ಯದೊಂದಿಗೆ ಅವಳು
ಹೃದಯದಲ್ಲಿ ಅಮಾಯಕತೆಯನ್ನು ಅವಿತಿರಿಸಿ
ಸಂಗಮದ ಕನಸನ್ನು ಕಾಣುತ್ತಿರುವಳು
ನೆಚ್ಚಿನ ಇನಿಯನ ಪ್ರೀತಿಯಲ್ಲಿ
ಗಂಗೆಯ ಯಮುನೆಯ ತ್ರಿವೇಣಿ.
ಅಲ್ಲ,
ಸಪ್ತ ಸಾಗರಗಳ ಸಂಗಮ....
ಫಾಲ್ಗುಣ ಮಾಸದಲ್ಲಿ



ಅಯ್ಯೊ, ನೋವಿನಿಂದ ಒದ್ದಾಡಿದ್ದೆ. ಈಗ ಬೇರೊಬ್ಬ ಬರ್ಬರ.

ಉಳಿದಿರುವ ಬಲವನ್ನಷ್ಟೂ ಒಟ್ಟು ಮಾಡಿ ಮತ್ತೊಮ್ಮೆ ವಿರೋಧಿಸಲು ಪ್ರಯತ್ನಿಸಿದ್ದೆ. ಆದರೆ ಮೂಳೆಗಳು ಪುಡಿಯಾಗುತ್ತಿರುವಂತೆ.... ಯಾವನೋ ನನ್ನ ಮೂಗು, ಬಾಯಿಗಳನ್ನು ಮುಚ್ಚುತ್ತಿದ್ದನು ಉಸಿರು ಕಟ್ಟುತ್ತಿತ್ತು.

ಮೆಲ್ಲ ಮೆಲ್ಲಗೆ ಕತ್ತಲೆಯ ಅಲೆಗಳಿಂದ ಆಳದಿಂದಾಳಕ್ಕೆ ಮುಳುಗುತ್ತಾ ಹೋಗಿದ್ದೆ.

ಎಷ್ಟು ಗಂಟೆಗಳ ಮುನ್ನವಾಗಿತ್ತು ಇವೆಲ್ಲ ಘಟಿಸಿದ್ದು? ಒಡೆದ ಹೂದಾನಿ... ಬಾಡಿ ಕರಕಲಾದ ರಾತ್ರಿರಾಣಿ...

ಗೋಡೆ ಮೇಲಿನ ಕ್ಲಾಕ್ ಕಾಣೆ. ಟೀಪಾಯ್ ಮೇಲಿರಿಸಿದ್ದ ನನ್ನ ಟ್ರಾನ್ಸಿಸ್ಟರ್ ಸಹ ಕಾಣುತ್ತಿಲ್ಲವಲ್ಲ?

ಅಮ್ಮಾ ಎಲ್ಲಿ? ತಮ್ಮನೂ ಕಾಣಿಸುತ್ತಿಲ್ಲವಲ್ಲ?

ತೀರಾ ಕಷ್ಟದಲ್ಲಿ ಎದ್ದು ಕುಳಿತಳು. ಮನೆಯೊಳಗೆ ಜನರ ಚಲನೆಯೇ ಇಲ್ಲ. ಗೋಡೆ ಹಿಡಿದುಕೊಂಡು ಎದ್ದಳು. ಕೆಳಗೆ ನೋಡಿದಾಗ ಬೆಚ್ಚಿದಳು. ಸ್ವಂತ ನಗ್ನತೆಯಲ್ಲಿ ರಕ್ತ!

ಬಲ ಪೂರ್ತಿ ಸೋರಿ ಹೋಗಿತ್ತು. ದೇವರೇ, ಆ ಬರ್ಬರರು ನನ್ನನ್ನು ಕೊಲ್ಲಬಾರದಾಗಿತ್ತೆ? ಕಾಲೆಳೆಯುತ್ತ ಅಡುಗೆ ಮನೆಗೆ ಬಂದಳು. ಅಮ್ಮ ಕಾಣಿಸಲಿಲ್ಲ. ಅರ್ಧ ತೆರೆದ ಟ್ಯಾಪ್‌ನಿಂದ ನೀರು ಬೀಳುತ್ತಾ ಇದೆ. ಮುಖ ತೊಳೆದಳು. ಎದುರಿನ ಕನ್ನಡಿಯಲ್ಲಿ ಕಾಣಿಸುವ ಮುಖ ಯಾರದ್ದು? ಕೆನ್ನೆಗಳು ಊದಿಕೊಂಡಿವೆ. ತುಟಿಗಳು ಗಾಯಗೊಂಡು ರಕ್ತ ಬತ್ತಿ ಸಿಪ್ಪೆಯಂತಿದೆ. ಹಗ್ಗದ ಮೇಲೆ ಆರಿಸಲು ಹಾಕಿದ್ದ ಸಲ್ವಾರ್ ಕಮೀಜ್‌ಗಳನ್ನು ತೊಟ್ಟುಕೊಂಡಳು.

ಟ್ಯಾಪ್‌ನಿಂದ ಎರಡು ಲೋಟ ನೀರು ಕುಡಿದಳು. ಮುಖಕ್ಕೆ ತಣ್ಣಗಿನ ನೀರು ಬಿದ್ದಾಗ ಉರಿಯುತ್ತಿದ್ದರೂ ತುಸು ಹಾಯೆನಿಸಿತು. ಕೂದಲು ಒಟ್ಟು ಮಾಡಿ ಗಂಟಿಕ್ಕಿಕೊಂಡಳು.

ಯಾರ ಬಗ್ಗೆಯೂ ಕೋಪಗೊಳ್ಳಲಿಲ್ಲ. ಮನಸ್ಸು ಮರಗಟ್ಟಿತ್ತು.

ಮೆಲ್ಲಗೆ ಸ್ವಾಗತ ಕೊಠಡಿಗೆ ಬಂದಳು. ಚಾರ್ಪಾಯ್‌ಯಲ್ಲಿ ಬಿದ್ದುಕೊಂಡಿದ್ದಾನೆ ಮನ್ಮೋಹನ್; ಅರ್ಧ ಚಾರ್ಪಾಯಿಯಲ್ಲಿ, ಅರ್ಧ ನೆಲದ ಮೇಲೆ. ದೂರದಿಂದಲೇ ಸ್ಪಷ್ಟವಾಗಿತ್ತು. ಆದ್ದರಿಂದ ಖಚಿತಪಡಿಸಲು ತ್ವರೆ ಮಾಡಲಿಲ್ಲ. ಕಾಲುಗಳು ಕಂಪಿಸಲಿಲ್ಲ. ಎದೆಬಡಿತ ಹೆಚ್ಚಲಿಲ್ಲ. ಚಾರ್ಪಾಯ್ ಬಳಿ ಮಂಡಿಯೂರಿ ಕುಳಿತಳು. ಭಯಾನಕವಾಗಿತ್ತು ಆ ಮುಖ. ಕಣ್ಣಾಲಿಗಳು ಉಬ್ಬಿಕೊಂಡಿವೆ. ನಾಲಗೆ ಹಲ್ಲುಗಳೆಡೆಯಲ್ಲಿ ಸಿಕ್ಕಿಕೊಂಡಿದೆ. ತಲೆ ಮತ್ತು ಹಣೆಗಳಲ್ಲಿ ಗಾಯಗಳಿವೆ. ನೆಲದ ಮೇಲೆ ಮಡುಗಟ್ಟಿದ್ದ ರಕ್ತ ಗಟ್ಟಿ ಕಟ್ಟಿ ಒಣಗಿದ್ದು ಇರುವೆಗಳು ಮುತ್ತಿಕೊಂಡಿವೆ.

ಆ ಕಣ್ಣುಗಳನ್ನು ಮುಚ್ಚಿಸಲು ಅವಳಿಗೆ ಸಾಧ್ಯವಾಗಲಿಲ್ಲ. ಚಾರ್ಪಾಯಿಯಲ್ಲಿ ಸರಿಯಾಗಿ ಮಲಗಿಸಲಿಕ್ಕೂ ಸಾಧ್ಯವಾಗಲಿಲ್ಲ.

ಗಂಟಲಿನಲ್ಲಿದ್ದ ಬಿಕ್ಕಳಿಕೆಯನ್ನು ಬಾಯ್ಮುಚ್ಚಿ ತಡೆದುಕೊಂಡಳು. ಅಳಕೂಡದು.

ಚಿತ್ರಹಿಂಸೆಯ ಭಯಾನಕತೆಯಷ್ಟೂ ತಮ್ಮನ ಮುಖದಲ್ಲಿ ಕೊರೆದಿರಿಸಿದ ಹಾಗೇ ಇವೆ.

ನೀನೂ ಹುತಾತ್ಮನಾಗಿರುವೆ. ಮತೀಯ ಹುಚ್ಚಿನ ಬಲಿಪೀಠದಲ್ಲಿ ನೀನೂ ಹೋಮಿಸಲ್ಪಟ್ಟಿರುವೆ.

ಕೆನ್ನೆಗಳ ಮೂಲಕ ಹರಿದಿಳಿದ ಕಣ್ಣೀರನ್ನೊರೆಸುವಾಗ ತನಗೆ ತಾನೇ ಹೇಳಿಕೊಂಡಳು; ಅಳಬಾರದು, ಅಳಬಾರದು. ಇವೆಲ್ಲವೂ ದೈವೇಚ್ಛೆಯೇ. ಗುರು ಗೋವಿಂದ್ ಸಿಂಗರ ಮಕ್ಕಳು ಮೃಗೀಯವಾಗಿ ಕೊಲ್ಲಲ್ಪಟ್ಟ ಬಳಿಕ, ಗುರು ತಾಲ್ವಂಡಿಯ ದಂದಮಾ ಸಾಹಿಬ್‌ಗೆ ಮರಳಿ ಬಂದರು. ಆಗ ಅಲ್ಲಿನ ಮುಖ್ಯಸ್ಥನು ಗುರುವಿನ ಮಕ್ಕಳು ಕೊಲೆಯಾದ ಬಗ್ಗೆ ತನ್ನ ಸಂತಾಪ ತಿಳಿಸಿದನು. ಆದರೆ ಗುರು ಆತನನ್ನೇ ಸಾಂತ್ವನಗೊಳಿಸಿದರು. ದುಃಖಿಸದಿರಿ, ನನ್ನ ರಾಜಕುಮಾರರು ಮಡಿಯಲಿಲ್ಲ. ಅವರು ಅವರ ಶಾಶ್ವತ ನೆಲೆಗೇ ಮರಳಿ ಹೋಗಿರುವರಷ್ಟೇ. ದಂದಮಾ ಸಾಹಿಬ್‌ನಲ್ಲಿರುವಾಗ. ಗುರುಪತ್ನಿ ಮಕ್ಕಳನ್ನು ಕಳೆದುಕೊಂಡ ದುಃಖವನ್ನು ತಡೆಯಲಾರದೆ ಗುರುಗೋವಿಂದ್ ಸಿಂಗರೊಡನೆ ಕೇಳಿದ್ದಳು:

ಗುರುವರ್ಯರೇ, ನನ್ನ ನಾಲ್ವರೆಲ್ಲಿ? ಹೇಳಿರಿ. ಎಲ್ಲಿ ನನ್ನ ಚಿನ್ನದ ಕಳಶಗಳು? ಗುರು ಉತ್ತರಿಸಿದ್ದರು: ಮಕ್ಕಳ ತಾಯೀ, ನಿನ್ನ ನಾಲ್ವರ ಕುರಿತು ಯಾಕೆ ದುಃಖಿಸುವೇ? ಈ ಖಲ್ಸ ಸಂಪೂರ್ಣ ನಮ್ಮ ಮಕ್ಕಳೇ. ದಶಲಕ್ಷಗಳ ಖಲ್ಸದ ಸಲುವಾಗಿ ನಮ್ಮ ನಾಲ್ವರು ಬಲಿಗೊಡಲ್ಪಟ್ಟರೆ ಏನಂತೆ?

ಯಾವುದೊ ಅಜ್ಞಾತ ಹಸ್ತ ಬರೆದ ಸ್ಕ್ರಿಪ್ಟ್‌ಗೆ ಅನುಗುಣವಾಗಿ ಆಡುವ, ಮಾಡುವ ಕಥಾಪಾತ್ರಗಳು. ಒಬ್ಬೊಬ್ಬನೂ ಅವನವನ ಪಾಲನ್ನು ನಿರ್ವಹಿಸುತ್ತಾನೆ. ವೇದಿಕೆ ಮೇಲೆ ಒಬ್ಬೊಬ್ಬನಿಗೂ ನಿಗದಿ ಪಡಿಸಲಾದ ವೇಳೆ ಮುಗಿದೊಡನೆ ಆತ ನೇಪಥ್ಯದಲ್ಲಿ ಮರೆಯಾಗುತ್ತಾನೆ. ಭಿಂದ್ರನ್‌ವಾಲ ತನಗೆ ಗೊತ್ತು ಪಡಿಸಲಾದ ಭೂಮಿಕೆಯನ್ನು ಚೆನ್ನಾಗಿ ಅಭಿನಯಿಸಿ ಸ್ವರ್ಣ ಮಂದಿರದ ಪ್ರದಕ್ಷಿಣ ಪಥದಲ್ಲಿ ಒದರಾಡುತ್ತ ಬಿದ್ದ. ಇಂಡಿಯನ್ ಸೇನೆಗೆ ಅದರದ್ದೇ ಆದ ಕಾರ್ಯ ನಿರ್ವಹಿಸಲಿಕ್ಕಿದ್ದಿತ್ತು. ಇಂದಿರಾರ ವಿಧಿ ಪಂಜಾಬ್ ಮತ್ತು ಹರಿಯಾಣಗಳನ್ನು ಎರಡಾಗಿ ಬೇರ್ಪಡಿಸಲಿಕ್ಕೂ ಮಾತ್ರ ಆಗಿರಲಿಲ್ಲ. ಸ್ವರ್ಣ ಮಂದಿರಕ್ಕೆ ಸೇನೆಯನ್ನು ನಡೆಸುವ ಹೊಣೆಯೂ ಆಕೆಗಿದ್ದಿತ್ತು. ಸತ್‌ವಂತ್ ಸಿಂಗ್‌ಗೆ ಇಂದಿರಾರ ಎದೆಗೆ ಗುಂಡಿಡದೆ ಇರಲು ಸಾಧ್ಯವಿರಲಿಲ್ಲ. ಅವರ ವಿಧಿ ಅದಾಗಿತ್ತಲ್ಲ. ಜೆ.ಬಿ.ಪಿ. ಕಮಾಂಡೊಗಳಿಗೆ ಸತ್‌ವಂತ್ ಮತ್ತು ಬಿಯಾಂತ್‌ನನ್ನು ಗುಂಡಿಕ್ಕದಿರಲಾಗುತ್ತಿರಲಿಲ್ಲ.



ಮನ್ಮೋಹನ್, ನನ್ನ ಪ್ರೀತಿಯ ತಮ್ಮ, ನೀನೂ ನಿನ್ನ ಪಾತ್ರವನ್ನು ಚೆನ್ನಾಗಿ ಅಭಿನಯಿಸಿ ನೇಪಥ್ಯಕ್ಕೆ ತೆರಳಿರುವೆ. ನನ್ನ ಪಾಲು ಇನ್ನೂ ಬಾಕಿ ಇದೆಯೆನಿಸುತ್ತದೆ.

ತಣ್ಣಗಾಗಿ ಮರಗಟ್ಟಿದ್ದ ಮುಂಗೈ ಮೇಲೆ ತುಟಿಗಳನ್ನೊತ್ತುವಾಗ ಗದ್ಗದವು ಗಂಟಲಿನಲ್ಲಿ ಸಿಲುಕಿತ್ತು. ಈ ಕೈಗಳಲ್ಲಿ ಇನ್ನು ನನಗೆ ರಾಖಿ ತೊಡಿಸಲು ಸಾಧ್ಯವಾಗದು.

ಮೆಲ್ಲಗೆ ಎದ್ದು ಪುಣ್ಯ ಗ್ರಂಥವಿರುವ ಕೋಣೆಯತ್ತ ನಡೆದಳು. ಪಟ್ಟೆವಸ್ತ್ರ ಹಾಸಲಾದ ಪೀಠದ ಮೇಲೆ ಬಿಡಿಸಿಕೊಂಡಿರುವ ಗುರುಗ್ರಂಥ ಸಾಹಿಬ್; ಅಮ್ಮ ಪುಣ್ಯ ಗ್ರಂಥದ ಮುಂದೆ ಸಾಷ್ಟಾಂಗವೆರಗಿದ್ದಾಳೆ.

ಅಮ್ಮಾ!

ಅವಳು ಕರೆದಳು.

ಅಮ್ಮ ಓಗೊಡಲಿಲ್ಲ. ಅಮ್ಮನ ಬಳಿ ಉಚ್ಚರಿಸಲು ಇನ್ನು ಮಾತುಗಳು ಉಳಿದಿಲ್ಲ. ಅಮ್ಮನ ಪಾಲೂ ಕೊನೆಗೊಂಡಿದೆ. ಅಮ್ಮನ ಬೆನ್ನ ಮೇಲೆ ಬಿದ್ದುಕೊಂಡು ಅವಳು ಬಿಕ್ಕಿ ಬಿಕ್ಕಿ ಅತ್ತಳು. ಬಳಿಕ ತೆರೆದಿರಿಸಲಾದ ಪುಣ್ಯಗ್ರಂಥದತ್ತ ನೋಡಿದಳು. ಎಲ್ಲವನ್ನು ಸಹಿಸಬಲ್ಲ ಬಲ ಕೊಡಲು ಆ ಗ್ರಂಥಕ್ಕಲ್ಲದೆ ಇನ್ನಾರಿಗೆ ಸಾಧ್ಯ?

ತೆರೆದುಕೊಂಡಿರುವ ಗ್ರಂಥದ ಮೊದಲ ಸಾಲುಗಳನ್ನು ಅವಳು ಉರು ಹೊಡೆದಳು:

ಅಲ್ಲಿ ದೇವರ ಸನ್ನಿಧಿಯಲ್ಲಿ ಮಳೆಯಿಲ್ಲ.<br>
ಸಾಗರವಿಲ್ಲ, ಸೂರ್ಯಪ್ರಕಾಶವಿಲ್ಲ; ನೆರಳಿಲ್ಲ.<br>
ಜೀವನವಿಲ್ಲ; ಮರಣವಿಲ್ಲ.<br>
ದುಃಖವಿಲ್ಲ, ಸೌಖ್ಯವಿಲ್ಲ.<br>
ಇರುವುದು ದಿವ್ಯವಾದ ಶಾಂತಿ ಮಾತ್ರ.<br>
ಹಗಲಿಲ್ಲ; ಇರುಳಿಲ್ಲ;<br>
ನೀರಿಲ್ಲ, ಗಾಳಿಯಿಲ್ಲ, ಬೆಂಕಿಯಿಲ್ಲ<br>
ನಿಜವಾದ ಗುರು ಇರುವುದು ಅಲ್ಲೇ.

ಹೌದು. ಅಮ್ಮಾ, ತಮ್ಮ ಮತ್ತು ನೀನು ಬೆಳಕಿನ ಮತ್ತು ಅಂಧಕಾರದ ಆಚೆಗಿರುವ ನಿತ್ಯ ಶಾಂತಿಯಲ್ಲಿ ಲಯಿಸಿದ್ದೀರಿ. ಗುರು ಸನ್ನಿಧಿಗೆ ತಲಪಿದ್ದೀರಿ.

ಇನ್ನು ನಾನು.

ಮತ್ತು ಅಪ್ಪ.

ಅವಳು ಬೆಚ್ಚಿದಳು.

ಅಪ್ಪನಿಗೆ ಏನಾಗಿತ್ತೊ?

ಹಿಂದಿನ ರಾತ್ರಿ ಬಹಳ ಹೊತ್ತು ಕಾದು ಕುಳಿತಿದ್ದೆ. ಆದರೂ ಅಪ್ಪ ಬಂದಿರಲಿಲ್ಲ. ಅಮ್ಮ ಬೆಳಗಿನ ತನಕವೂ ನಿದ್ದೆಗೆಟ್ಟಿರಬೇಕು. ತಮ್ಮನೂ ಪರಿಚಿತರಿಗೆ ಫೋನ್

ಮಾಡಿದ್ದ. ಅಂಗಡಿ ಬೇಗನೆ ಮುಚ್ಚಿ ಅಪ್ಪ ಸ್ಕೂಟರ್‌ನಲ್ಲಿ ಮನೆಗೆ ಹೊರಟ ಸುದ್ದಿ ಎಲ್ಲರಿಗೂ ಗೊತ್ತಿತ್ತು. ಆಮೇಲೆ ಏನಾಗಿತ್ತೊ?

ಬೆಳಗ್ಗೆ ಡೋರ್‌ಬೆಲ್ ಬಾರಿಸಲ್ಪಟ್ಟಾಗ ಅಪ್ಪ ಬಂದಿರಬಹುದೆಂದುಕೊಂಡೇ ಬಾಗಿಲು ತೆರೆದಿದ್ದಳು. ಆದರೆ ಎದುರ್ಗೊಂಡದ್ದು ಆ ನರಪಶುವಾಗಿತ್ತು. ಅವಳು ಕುಸಿದು ಕುಳಿತಳು. ಇನ್ನೇನು ಮಾಡುವುದು? ಯಾರನ್ನು ಸಹಾಯಕ್ಕೆ ಕರೆಯುವುದು? ದೆಹಲಿಯಲ್ಲಿ ಎಲ್ಲಾ ಸಿಕ್ಖರು ಅಸಹಾಯಕರೇ. ಹಗಲ ಬೆಳಕಿನಲ್ಲಿ ಅವರಿಗೆ ಈದಿನ ಹೊರಬರಲು ಸಾಧ್ಯವಾಗದು. ಹೊರಗೆ ಹೋಗಿ ಯಾರಿಗಾದರೂ ಫೋನ್ ಮಾಡಬೇಕು. ಪೊಲೀಸ್‌ಗೆ ಫೋನ್ ಮಾಡಿ ಪ್ರಯೋಜನವಿಲ್ಲ. ಗುರುದ್ವಾರ ಇರುವುದು ತುಸು ದೂರದಲ್ಲಿ.

ಅಂಗದ್‌ಗೆ ಫೋನ್ ಮಾಡಲೆ? ಆದರೆ, ಈ ಪರಿಸ್ಥಿತಿಯಲ್ಲಿ ನಾನು ಅಂಗದ್‌ನನ್ನು ಕಾಣುವುದಾದರೂ ಹೇಗೆ? ಒದ್ದು ತುಳಿಯಲ್ಪಟ್ಟ ಈ ಶರೀರವನ್ನು ನಾನು ಅಂಗದ್‌ಗೆ ತೋರಿಸುವುದು ಹೇಗೆ? ಅಂಗದ್‌ಗೆ ಸಮರ್ಪಿಸಲು ಇನ್ನೇನಿದೆ ನನ್ನಲ್ಲಿ?

ಕೂಡದು, ಇನ್ನು ಅಂಗದ್‌ನನ್ನು ಕಾಣಕೂಡದು. ಕಿಲುಬು, ಕಲ್ಮಶಗಳಂಟಿರುವ ಈ ಮೈ ಅಂಗದ್‌ಗೆ ಯೋಗ್ಯವಾದುದಲ್ಲ.

ಥಟ್ಟನೆ ರವಿಯ ನೆನಪಾಯಿತು. ಆಫೀಸಿನ ಯಾರಿಂದಲಾದರೂ ಸಹಾಯ ನಿರೀಕ್ಷಿಸಬಹುದಾದರೆ ಅದು ರವಿಯಿಂದ ಮಾತ್ರ. ನಾಲ್ಕು ಬ್ಲಾಕ್‌ಗಳ ಆಚೆಗಿರುವ ಪರಿಚಿತರ ಮನೆಯಲ್ಲಿ ಫೋನ್ ಇದೆ.

ಅವಳು ಒಂದು ಶಾಲ್ ತೆಗೆದು ಹೊದ್ದುಕೊಂಡಳು. ಬಾಗಿಲಿಗೆ ಹೊರಗಿನಿಂದ ಬೀಗ ಹಾಕಿ ಹೊರಗಿನ ಮಬ್ಬು ಬಿಸಿಲಿನಲ್ಲಿ ಹೊರಟಳು. ವೀಥಿಗಳು ಜನ ಶೂನ್ಯ. ಯಾವುದೋ ಪ್ರೇತ ನಗರಿಯ ಹಾಗೆ ಕಟ್ಟಡಗಳಷ್ಟೇ ಕಾಣಿಸುತ್ತಿವೆ.

ಅವಳು ಫೋನ್ ಹುಡುಕುತ್ತ ನಡೆದಳು.

ಮನೆಯೊಳಗೆ ಅಮ್ಮನ ಮತ್ತು ತಮ್ಮನ ಮೃತ ದೇಹಗಳು. ಅಪ್ಪನ ಸುದ್ದಿಯೇ ಇಲ್ಲ. ಅಂಗದ್ ಒಂದು ದೂರದ ಕನಸಷ್ಟೇ.

ಇನ್ನೇನಿದೆ ನನ್ನಲ್ಲಿ ಕಳಕೊಳ್ಳಲು?

ಅವಳು ಬೀದಿಗುಂಟ ನಡೆದಳು. ಬೀದಿಗಳೆಲ್ಲ ನಿರ್ಜನವೇ. ನಡು ರಸ್ತೆಯಲ್ಲಿ ಮೆಲುಕಾಡುತ್ತ ಮಲಗಿರುವ ದನ, ದನದ ಕಿವಿಯಿಂದ ಕಾಗೆಯೊಂದು ಏನನ್ನೊ ಕುಕ್ಕಿ ತೆಗೆಯುತ್ತಾ ಇದೆ. ದನದ ಹಳದಿ ಬಣ್ಣವಿರುವ ಕಣ್ಣುಗಳಲ್ಲಿ ಕಿರಿಕಿರಿ ಇಲ್ಲ. ಅದರ ಬದಲು, ಕೊಕ್ಕಿನ ಒರೆಯುವಿಕೆಯಲ್ಲಿ ಯಾವುದೋ ಸುಖ ಸವಿಯುವ ಹಾಗೇ ಕಾಣಿಸುತ್ತಿದೆ.

ಅವಳು ಮತ್ತೂ ನಡೆದಳು. ಯಾವತ್ತೂ ತೆರೆದಿರುತ್ತಿದ್ದ ಹಾಲಿನ ಅಂಗಡಿ



ಕೂಡ ಮುಚ್ಚಲಾಗಿದೆ. ಅದರ ಮುಂದುಗಡೆ ಬೀದಿನಾಯಿಯೊಂದು ಸ್ವಂತ ಬಾಲದ ಮೇಲೆ ತಲೆ ಚಾಚಿ ನಿದ್ರಿಸುತ್ತಿದೆ. ನೊಣಗಳು ನಾಯಿಯ ಮೂತಿಯ ಸುತ್ತಲೂ ಹಾರಾಡುತ್ತ ಇವೆ. ಕಿವಿಗಳಿಂದ ಅವುಗಳನ್ನು ಅಟ್ಟಿ ದೂರ ಮಾಡಲು ನಡೆಸುತ್ತಿರುವ ನಾಯಿಯ ಪ್ರಯತ್ನ ಯಶಸ್ವಿಯಾಗುತ್ತ ಇಲ್ಲ. ಅಟ್ಟಿದಾಗಲೆಲ್ಲ ನೊಣಗಳು ಗುಂಪಾಗಿಯೇ ಬಂದು ಆಕ್ರಮಿಸುತ್ತಲೇ ಇವೆ.

ಫೋನ್ ಇರುವ ಮನೆಯ ಮುಂಭಾಗದಲ್ಲಿ ಯಾರೂ ಇಲ್ಲ. ಎಂದಿನಂತೆ ಆಗಿದ್ದರೆ ಬಿಸಿಲಿನಲ್ಲಿ ಚಾರ್ಪಾಯಿಗಳನ್ನು ಹಾಕಿ ಹೆಣಿಗೆ ಕೆಲಸ ಮಾಡುವುದರೊಂದಿಗೆ ಅಡುಗೆ ಪುರಾಣ ಹೇಳುತ್ತ ಸಮಯ ಕಳೆಯುತ್ತಿರುವ ಗೃಹಿಣಿಯರು ಕಾಣಿಸಬೇಕಿತ್ತು. ದರ್ಶನ್ ಡೋರ್ ಬೆಲ್‌ನಲ್ಲಿ ಬೆರಳೊತ್ತಿದಳು. ಬಾಗಿಲು ತೆರೆದದ್ದು ತನ್ನನ್ನು ದೀದಿ ಎಂದು ಕರೆಯುತ್ತಿದ್ದ ಹುಡುಗ. ಆಗಲೆ ಅವನು ಹತ್ತಿರದಲ್ಲೆಲ್ಲೊ ಮಾಯವಾಗಿಬಿಟ್ಟ. ದೀದಿ ಬಂದ ವಿಷಯ ಹೇಳಲಿಕ್ಕೆ ಹೋಗಿರಬಹುದು. ಫೋನ್ ಇರುವ ಸ್ವಾಗತ ಕೊಠಡಿಗೆ ಯಾರೂ ಬರಲಿಲ್ಲ. ಬದಲು ಯಾವಳೊ ಅಪರಿಚಿತಳು ಮನೆಗೆ ಬಂದಾಗಲೆಂಬಂತೆ ಮನೆಮಂದಿ ಕದಗಳ ಮರೆಯಿಂದ ಇಣುಕಿ ನೋಡುತ್ತಿರುವರು. ಥಟ್ಟನೆ ದರ್ಶನ್ ಜ್ಞಾಪಿಸಿಕೊಂಡಳು. ಇದ್ದಕ್ಕಿದ್ದಂತೆ ಮಾಯವಾಗಿ ಬಿಡುವ ಮತ ಸೌಹಾರ್ದ! ಹೌದು ಇವರು ಹಿಂದೂಗಳು, ನಾನು ಬೇರೊಂದು ಮತದವಳು. ಈ ಹಿಂದೆ ಯಾವತ್ತೂ ಈ ಭೇದಭಾವ ಅವಳ ಅರಿವಿಗೆ ಬಂದಿರಲಿಲ್ಲ.

ಅವಳು ಫೋನ್ ಎತ್ತಿಕೊಂಡಳು. ತಲೆಯೊಳಗೆ ಏನೇನೋ ಮುರಿದು ತುಂಡಾಗುತ್ತಿರುವಂತೆ ಅನ್ನಿಸಿತು ಅವಳಿಗೆ. ಫೋನ್ ಡಯಲ್ ಮಾಡತೊಡಗಿದ ಅವಳು ಇದ್ದಕ್ಕಿದ್ದಂತೆ ನಂಬರುಗಳನ್ನು ಮರೆತುಬಿಟ್ಟಳು. ತನಗೇನಾಗಿ ಬಿಟ್ಟಿದೆ? ಕನಸಿನಲ್ಲೂ ಕೂಡ ಡಯಲ್ ಮಾಡಬಹುದಾಗಿದ್ದ ಆರು ಅಂಕೆಗಳಿರುವ ನಂಬರ್ ಹಠಾತ್ತನೆ ಹೇಗೆ ಮರೆತುಬಿಟ್ಟೆ ಎಂದು ಬೆರಗಾದಳು.

ಅವಳು ಅಸಹಾಯಕಳಾಗಿ ಸುತ್ತಲೂ ನೋಡಿದಳು. ಪರದೆಯ ಮರೆಯಿಂದ ದುರುಗುಟ್ಟುತ್ತಿರುವ ಕಣ್ಣುಗಳು ಕಾಣಿಸಿದವು. ಅವಳು ಫೋನ್ ಕೆಳಗಿಟ್ಟಳು. ಮುಚ್ಚಿಕೊಂಡಿದ್ದ ಬಾಗಿಲನ್ನು ತಳ್ಳಿ ತೆರೆದು ಹೊರಕ್ಕೆ ಓಟ ಕಿತ್ತಳು. ನಿರ್ಜನವಾಗಿರುವ ಬೀದಿಯ ಮಬ್ಬು ಬಿಸಿಲು ಅವಳನ್ನು ಬರಮಾಡಿಕೊಂಡಿತು.

* * *

## ಅಧ್ಯಾಯ ೧೬

# ರಕಬ್‌ಗಂಜ್ ಗುರುದ್ವಾರದಲ್ಲಿ

ಗುರು ದಯಾಲ್‌ಸಿಂಗ್ ಮೆಲ್ಲಮೆಲ್ಲನೆ ಕಣ್ಣುಗಳನ್ನು ತೆರೆದ. ತಾನು ಮಲಗಿರುವುದು ಎಲ್ಲಿ ಎಂಬುದರ ಸುಳಿವು ಕೂಡ ಸಿಕ್ಕಲಿಲ್ಲ. ಸುತ್ತಲೂ ಅಪರಿಚಿತ ಮುಖಗಳೇ. ಯಾರೊ ತನ್ನ ಬಾಯಿಗೆ ತುಸು ನೀರು ಸುರಿದು ಕೊಟ್ಟರು. ಒಂದು ಸಾಗರವನ್ನೇ ಹೀರಬೇಕೆಂಬಷ್ಟು ನೀರಡಿಕೆಯಾಗಿತ್ತು ಆತನಿಗೆ.

ನೀರು ಕುಡಿದ ಬಳಿಕ ತುಸು ಹಾಯೆನಿಸಿತು. ಆದರೂ ಕಡು ಬಳಲಿಕೆ. ಮೈಯಿಡೀ ನೋವು. ತಾನು ಮಲಗಿರುವುದು ಒಂದು ಚಾರ್ಪಾಯ್ ಮೇಲೆ. ಸುತ್ತಲೂ ನೋಡಿದ. ಅಸಂಖ್ಯ ಚಾರ್ಪಾಯ್‌ಗಳು. ಅವುಗಳಲ್ಲೆಲ್ಲ ಕಂಗಾಲಾಗಿರುವ ಹೆಂಗಸರು, ಗಂಡಸರು ಮತ್ತು ಮಕ್ಕಳು ಬಹಳಷ್ಟು ಮಂದಿ ಗಾಯಗೊಂಡವರು. ಕುತ್ತಿಗೆಗೂ ತಲೆಗೂ ಗಾಯಗೊಂಡವರು. ರಕ್ತದಲ್ಲಿ ತೊಯ್ದ ಬ್ಯಾಂಡೇಜ್‌ಗಳು. ಸ್ಲಿಂಗ್‌ನಲ್ಲಿರಿಸಲಾದ ಕೈಗಳು. ಭಯಗ್ರಸ್ತರಾದ ಸಂಬಂಧಿಕರಿರಬಹುದು ಸುತ್ತಲೂ ನಿಂತಿರುವವರು ಎಂದುಕೊಂಡನಾತ.

ಕಿಟಕಿಯ ಮೂಲಕ ಹೊರಕ್ಕೆ ದೃಷ್ಟಿ ಹಾಯಿಸಿದ. ಚಿನ್ನದ ಹಾಳೆಗಳ ಮೇಲ್ಮೈ ಹೊಂದಿರುವ ಗೋಪುರ ಕಳಶ. ಹಳದಿ ಮೈಯ ಧ್ವಜಸ್ತಂಭ. ತುಸು ದೂರದಲ್ಲಿ ಕಾಣಿಸುವ ಮಾರ್ಬಲ್ ಸೋಪಾನಗಳ ಸಾಲು, ಚೌಕಾಕಾರದ ಕೆರೆಯಲ್ಲಿ ಕೊನೆಗೊಳ್ಳುತ್ತವೆ. ಸೋಪಾನಗಳ ಮೇಲೆಲ್ಲ ಅಸಂಖ್ಯ ಜನರು. ಹೆಂಗಸರು, ಗಂಡಸರು ಮತ್ತು ಮಕ್ಕಳು. ಒಬ್ಬೊಬ್ಬರ ವಶದಲ್ಲೂ, ಅವರವರಿಗೆ ಎತ್ತಿಕೊಳ್ಳಲು ಸಾಧ್ಯವಾಗುವಂಥ ಪೆಟ್ಟಿಗೆಗಳೂ ಗಂಟುಮೂಟೆಗಳೂ ಇವೆ.

ಹೌದು, ಮೂವತ್ತೇಳು ವರ್ಷಗಳ ಹಿಂದೆ ಇಂತಹ ದೃಶ್ಯಗಳನ್ನು ಕಂಡು ಅನುಭವಿಸಿದ್ದ ಆತನಿಗೆ ಅಪರಿಚಿತವಲ್ಲ ಈ ಚಿತ್ರ. ವಿಭಜನೆಯ ಬಳಿಕ ದೆಹಲಿಯ ನಿರಾಶ್ರಿತ ಶಿಬಿರಗಳಿಗೆ ತಲಪುವ ಮುನ್ನ ಆತನಿಗೆ ಗುರುದ್ವಾರಗಳೇ ಆಗಿದ್ದುವು ಆಸರೆ. ವಿಶ್ರಾಂತಿ ಪಡೆಯಲು ಸ್ಥಳ, ಹಸಿವೆ ನೀಗಲು ಲಂಕಾರ್‌ಗಳಿಂದ ದೊರೆಯುವ ರೊಟ್ಟಿ, ದಾಲ್ ಮತ್ತು ಚಟ್ನಿ. ಬಾಯಾರಿಕೆ ಇಂಗಿಸಲು ನೀರೂ ಇಲ್ಲಿ ದೊರೆಯುತ್ತಿದ್ದುವು.



ಪಕ್ಕನೆ ಆತನಿಗೆ ಪರಿಸರ ಪ್ರಜ್ಞೆ ಮೂಡಿತು. ಕಳಶ ಮತ್ತು ಮಾರ್ಬ್ಲ್ ಮೆಟ್ಟಿಲುಗಳಿರುವ ಚೌಕ ಕೆರೆ. ಹೌದು, ಈಗ ತಾನಿರುವುದು ರೇಕಾಬ್‌ಗಂಜ್ ಗುರುದ್ವಾರದ ಚೌಕ ಕೆರೆಯ ಸುತ್ತಣದ ವಿಶ್ರಾಂತಿ ಕೋಣೆಗಳಲ್ಲೊಂದರಲ್ಲಿ. ಹೇಗೆ ತಾನು ಇಲ್ಲಿ ತಲಪಿದ್ದು? ಆತ ನೆನಪಿಗೆ ತಂದುಕೊಳ್ಳಲು ಯತ್ನಿಸಿದ. ಚೆಲ್ಲಾಪಿಲ್ಲಿಯಾಗಿದ್ದ ಚಿತ್ರಗಳು ಮನಸ್ಸಿನಲ್ಲಿ ಮಿಂಚಿ ಮರೆಯಾಗತೊಡಗಿದವು. ದೂರದ ಚಿನ್ನದ ಕಳಶದ ಮೇಲೆ ಅಸ್ತಮ ಸೂರ್ಯನ ಮಂದ ಕಿರಣಗಳು ಹೊಳೆಯುತ್ತಿವೆ.

ಸಿಮೆಂಟ್ ಕೊಳವೆಯ ಕತ್ತಲೆಯಿಂದ ಹೊರಗೆ ಬಂದದ್ದೂ ಕೇವಲ ಕಾಚ ಮಾತ್ರ ಕಟ್ಟಿಕೊಂಡಿದ್ದೂ ಮನೆಯನ್ನು ಗುರಿಯಾಗಿರಿಸಿಕೊಂಡು ನಡೆಯತೊಡಗಿದ್ದೂ ನೆನಪಿನಲ್ಲಿ ನಿಚ್ಚಳವಾಯಿತು. ಪಗಡಿ, ಕೃಪಾಣ, ಕಟಕ, ಕಂಗಗಳನ್ನು ಕಳೆದುಕೊಂಡಿದ್ದ ಸಿಕ್ಖ್ ದಾಡಿರೋಮಗಳಲ್ಲಿ ಅರ್ಧದಷ್ಟೂ ಕಿತ್ತು ತೆಗೆಯಲ್ಪಟ್ಟಿದ್ದುವು.

ಉಳಿದುಕೊಂಡಿರುವ ಕೂದಲೆಳೆಗಳಲ್ಲೂ ದಾಡಿರೋಮಗಳಲ್ಲೂ ಆತ ಬೆರಳಾಡಿಸಿದ. ಇನ್ನೂರ ಎಪ್ಪತ್ತೈದು ವರ್ಷಗಳ ಮುನ್ನ ವೈಶಾಖಿಯಂದು ಗುರುಗೋವಿಂದ್ ಸಿಂಗ್ ಆನಂದ್‌ಪುರ್‌ಗೆ ತನ್ನ ಅನುಯಾಯಿಗಳೆಲ್ಲರನ್ನೂ ಆಮಂತ್ರಣವಿತ್ತು ಕರೆಸಿದ್ದರು. ತನ್ನ ಅನುಯಾಯಿಗಳೊಡನೆ ಗುರು ಕೇಳಿಕೊಂಡದ್ದು ಅವರ ಜೀವವಾಗಿತ್ತು, ತಲೆಯಾಗಿತ್ತು. ಆಗ ಗುರುವಿಗೋಸ್ಕರ ಆತ್ಮತ್ಯಾಗ ಮಾಡಲು ಸಿದ್ಧರಾಗಿ ಐದು ಮಂದಿ ಮುಂದೆ ಬಂದರು.

ಮರುದಿನ ಗುರು ತನ್ನ ಕಠಾರಿಯನ್ನು ದಿವ್ಯ ಜಲದಲ್ಲಿ ಕರಗಿಸಿ, ಕೇಶದಲ್ಲಿ ಅಮೃತ್ ಚಿಮುಕಿಸಿ ಸಿದ್ಧಗೊಳಿಸಿದ್ದ ಜ್ಞಾನದ ಅಮೃತವನ್ನು ಪಂಚ ಪ್ಯಾರಾಗಳ ಮುಖ ಮತ್ತು ಕೇಶಗಳಿಗೆ ಚಿಮುಕಿಸಿ ಶುದ್ಧಿ ಮಾಡಿದ್ದರು. ಅಮೃತ ಬಿದ್ದು ಶುದ್ಧವಾದ ಕೇಶ ಸಿಕ್ಖನ ಮಟ್ಟಿಗೆ ಪರಿಶುದ್ಧಿಯ ಪ್ರತೀಕ. ಆ ಕೇಶವನ್ನು ಹಲ್ಲೆಕೋರರು ಕಿತ್ತು ತೆಗೆದು ತನ್ನನ್ನು ಅಪಮಾನಿಸಿದ್ದಾರೆ. ತನ್ನನ್ನಷ್ಟೇ ಅಲ್ಲ, ಖಲ್ಸವನ್ನು ಗುರುವನ್ನು, ಗುರುಗ್ರಂಥ ಸಾಹಿಬನ್ನು, ದೇವರನ್ನು ಸಹ.

ಕೃಪಾಣ ಆತ್ಮರಕ್ಷಣೆಗಿರುವ ಆಯುಧ ಅಷ್ಟೇ ಅಲ್ಲ, ಸೋಲರಿಯದ, ನಿರಾಸೆಯರಿಯದ, ಆತ್ಮ ಶಕ್ತಿಯ ಪ್ರತೀಕ ಅದು. ಕೃಪಾಣ ಧರಿಸಿರುವ ತನ್ನ ಪ್ರತಿಯೊಬ್ಬ ಶಿಷ್ಯನೂ–ಸಿಕ್ಖನೂ–ಲಕ್ಷ ಲಕ್ಷ ಶತ್ರುಗಳನ್ನೆದುರಿಸಬಲ್ಲ ಬಲಾಢ್ಯನಾಗಬೇಕೆಂದು ಗುರು ಬಯಸಿದ್ದರು.

ಕಡಗವು ಗುರುವಿನ ಉಡುಗೊರೆಯಾಗಿದೆ. ಗುರುವಿನ ಬಗ್ಗೆ ಹೊಂದಿರುವ ಗೌರವದ, ಪ್ರೀತಿಯ, ನಂಬಿಕೆಯ, ಅರ್ಪಣ ಭಾವದ ಪ್ರತೀಕ ಅದು.

ಪಂಚ ಪ್ಯಾರಾಗಳನ್ನು ಸಿಂಹಾಸನದಲ್ಲಿ ಕುಳ್ಳಿರಿಸಿ ಗುರು ಪ್ರಾರ್ಥಿಸಿದ್ದರು. ಇನ್ನು ನನ್ನ ಸರದಿ. ನೀವು ನನ್ನನ್ನು ಖಲ್ಸಕ್ಕೆ ಸೇರಿಸಿರಿ. ಗುರುವಿಗೋಸ್ಕರ ಅಮೃತ್ ಸಿದ್ಧವಾಯಿತು. ಪಂಚ ಪ್ಯಾರಾಗಳು ಸಂದೇಹಕ್ಕೊಳಗಾದರು. ಇದು ಕೂಡ ಗುರುವಿನ

ಇನ್ನೊಂದು ಚಮತ್ಕಾರ ಇರಬಹುದೆ? ಗುರು ಅವರ ಅನುಮಾನ ಪರಿಹರಿಸಿದ್ದರು; ನಾನು ನಿಮ್ಮನ್ನು ಖಲ್ಸಕ್ಕೆ ಆವಾಹನ ಮಾಡಿದೆ. ಖಲ್ಸ ಮತ್ತು ಗುರು ಬೇರೆ ಬೇರೆಯಲ್ಲ. ಖಲ್ಸ ಗುರುವೂ, ಗುರು ಖಲ್ಸವೂ ಹೌದು.

ಭಾಯಿ ದಯಾಸಿಂಗ್‌ಗೆ ಪ್ರಶ್ನಿಸದಿರಲು ಸಾಧ್ಯವಾಗಲಿಲ್ಲ; ನಾವು ಗುರುವಿಗೋಸ್ಕರ ಜೀವ ತೆರಲು ಸಿದ್ಧರಾದೆವು. ತಾವು? ಗುರು ಹೇಳಿದರು; ನಾನು ಖಲ್ಸಕ್ಕಾಗಿ ನನ್ನ ಮನಸ್ಸು, ಶರೀರ, ಕುಟುಂಬ ಎಲ್ಲವನ್ನು ಸಮರ್ಪಿಸುತ್ತೇನೆ.

ಹಾಗಾಗಿ ಗೋವಿಂದ್‌ರಾಯಿ ಗೋವಿಂದ್‌ಸಿಂಗ್ ಆದರು. ಇತರ ಯಾವ ಮಹಾತ್ಮನೂ ತನ್ನ ಅನುಯಾಯಿಗಳಿಗಾಗಿ ಇಂತಹ ಆತ್ಮ ಸಮರ್ಪಣೆ ಮಾಡಲಿಲ್ಲ. ಗುರು ಶಿಷ್ಯನೂ ಹೌದು, ಶಿಷ್ಯ ಗುರುವೂ ಹೌದು. ಅವರು ಬೇರೆ ಬೇರೆ ಅಲ್ಲ.

ಇಬ್ಬರು ಸ್ತ್ರೀಯರು ಗುರುವಿನ ಪ್ರಸಾದದೊಂದಿಗೆ ಬಂದರು. ಒಬ್ಬೊಬ್ಬರ ಕೈಯಲ್ಲೂ ಪ್ರಸಾದವನ್ನಿರಿಸಿದರು. ಅವರು ಆತನ ಹತ್ತಿರ ತಲಪಿದರು. ಆತ ಎರಡು ಕೈಗಳನ್ನು ಚಾಚಿ ಪ್ರಸಾದವನ್ನು ಸ್ವೀಕರಿಸಿದ. ಕಣ್ಣುಗಳಿಗೆ ತಾಗಿಸಿ, ವಾಹ್ ಗುರುವನ್ನು ಸ್ಮರಿಸಿ ಪ್ರಸಾದ ಸೇವಿಸಿದ. ಸ್ತ್ರೀಯರು ದನಿ ತಗ್ಗಿಸಿ ಏನೋ ಮಾತನಾಡುತ್ತಿರುವವರು. ಪಟೇಲ್ ನಗರ್‌ನ ಸಮೀಪ ರಸ್ತೆ ಬದಿಯಲ್ಲಿ ಪ್ರಜ್ಞೆ ಇಲ್ಲದೆ ಬಿದ್ದುಕೊಂಡಿದ್ದ ತನ್ನನ್ನು ಸಿಕ್ಖ್ ಸ್ವಯಂ ಸೇವಕರೇ ಇಲ್ಲಿ ತಲಪಿಸಿದ್ದರು. ಯಾರು ತನ್ನನ್ನು ಪತ್ತೆ ಹಚ್ಚಿದ್ದರೆಂದಾಗಲೀ, ಇಲ್ಲಿ ತಲಪಿಸಿದ್ದೆಂದಾಗಲೀ, ವಿಚಾರಿಸಬೇಕಾಗಿಲ್ಲ. ಸಿಕ್ಖನ ನೆರವಿಗೆ ದೆಹಲಿಯಲ್ಲಿ ಸಿಕ್ಖನಷ್ಟೇ ಇರುವನು.

ಅತನಿಗೆ ಪಕ್ಕನೆ ಮನೆ ಮಂದಿಯ ನೆನಪಾಯಿತು. ಹೆಂಡತಿ, ದರ್ಶನ್, ಮನ್ಮೋಹನ್. ಆತ ಸುತ್ತಲೂ ನೋಡಿದ. ಯಾವುದೊ ಭೀತಿ ಆತನನ್ನು ಆವರಿಸಿತು. ಸಂಘಟಿತವಾದ ಹಲ್ಲೆಗೊಳಗಾಗಿ ಓಡಿ ಬಂದವರೇ ಎಲ್ಲರೂ. ಜೀವ ಉಳಿಸಲು ಓಡುವ ಗಡಿಬಿಡಿಯಲ್ಲಿ ಸ್ವಂತದವರನ್ನು ಕಳೆದುಕೊಂಡವರು. ಹಲವರೆಲ್ಲ ಕೊಲೆಯಾಗಿರುವವರು. ಕೆಲವರು ಆಸ್ಪತ್ರೆಗೆ ದಾಖಲಾಗಿರುವವರು. ಕುಟುಂಬದ ಸದಸ್ಯರು ದಿಕ್ಕಾಪಾಲಾಗಿರುವವರು. ಆತಂಕ, ಭಯ, ದುಃಖ–ಎಲ್ಲವೂ ಅವರ ಕಣ್ಣುಗಳಲ್ಲಿ ತುಂಬಿಕೊಂಡಿವೆ.

ಪುನಃ ಆತನನ್ನು ನೆನಪುಗಳು ಮುತ್ತಿದವು. ಗುರು ತೇಜ್‌ಬಹದ್ದೂರರ ರುಂಡವಿಲ್ಲದ ಮುಂಡವನ್ನು ದಹನ ಮಾಡಲಾದ ಸ್ಥಳದಲ್ಲೇ ಈ ರೇಕಾಬ್‌ಗಂಜ್ ಗುರುದ್ವಾರ ತಲೆಯೆತ್ತಿ ನಿಂತಿದೆ. ಔರಂಗಜೇಬನ ಕಿಂಕರರು ಗುರು ತೇಜ್ ಬಹದೂರರ ತಲೆ ಕತ್ತರಿಸಿದ್ದು ಚಾಂದ್ನೀ ಚೌಕ್‌ನಲ್ಲಿ. ಚಾಂದ್ನೀ ಚೌಕ್‌ನ ಸೀಸ್ಮಗಬ್ ಗುರುದ್ವಾರ ನಿರ್ಮಿಸಲಾದ ಸ್ಥಳದಲ್ಲಿ. ತದನಂತರ ಸಂಭವಿಸಿದ್ದ ಬಿರುಗಾಳಿ, ಬಿರುಮಳೆಗಳು ಆ ದಿವ್ಯಾತ್ಮನು ಹುತಾತ್ಮನಾದುದಕ್ಕೆ ಸಂದ ಸಂತಾಪ ಮತ್ತು ಅಶ್ರುತರ್ಪಣಗಳಾಗಿರಬಹುದು. ಧೀರನಾದ ಭಾಯಿ ಜೈತ, ಗುರುವಿನ ರಕ್ತ ತೊಟ್ಟಿಕ್ಕುವ



ಶಿರಸ್ಸನ್ನು ಆನಂದ್‌ಪುರ್‌ಗೆ ಕದ್ದು ಸಾಗಿಸಿದ್ದ. ಭಾಯಿ ಲಖಿ ತನ್ನ ಎತ್ತಿನ ಗಾಡಿಯಲ್ಲಿ ಗುರುವಿನ ರುಂಡವಿಲ್ಲದ ಮುಂಡವನ್ನು ಬಚ್ಚಿಟ್ಟುಕೊಂಡು ರೇಕಾಬ್‌ಗಂಜ್‌ನಲ್ಲಿದ್ದ ತನ್ನ ಮನೆಗೆ ತಲಪಿಸಿದ್ದ. ತದನಂತರ ತನ್ನ ಮನೆಗೇ ಬೆಂಕಿಹಚ್ಚಿ ಗುರುವಿಗೆ ಚಿತೆಯೇರ್ಪಡಿಸಿದ್ದ. ಮೊಗಲರ ಕ್ರೌರ್ಯದಿಂದ ತಪ್ಪಿಸಿಕೊಳ್ಳಲು ಬೇರೆ ದಾರಿ ಇರಲಿಲ್ಲ. ಗುರುವಿನ ಒಡಲು ಸುಟ್ಟು ಬೂದಿಯಾದ ಆ ಸ್ಥಳದಲ್ಲೇ ಸ್ವರ್ಣ ಕಳಶವಿರುವ, ಬಿಳಿ ಮಾರ್ಬಲ್‌ನಲ್ಲಿ ನಿರ್ಮಿಸಲಾದ ಈ ಗುರುದ್ವಾರ ತಲೆಯೆತ್ತಿ ನಿಂತಿದೆ. ಸಿಕ್ಖರೇ ಸ್ವಂತ ಕೈಗಳಿಂದ, ಒಂದೊಂದು ಇಟ್ಟಿಗೆಯನ್ನು ಒಂದೊಂದು ಮಾರ್ಬಲ್ ಫಲಕವನ್ನು ಕಟ್ಟಿ ಎಬ್ಬಿಸಿದ್ದರು ಇದನ್ನು.

ಚರಿತ್ರೆಯಲ್ಲಿನ ಕ್ರೂರವಾದ ತಿರುವುಗಳ ಕುರಿತು ಯೋಚಿಸದಿರಲು ಆತನಿಗೆ ಸಾಧ್ಯವಾಗಲಿಲ್ಲ.

ಎಂಟನೆಯ ಗುರು ಹರ್‌ಕಿಶನ್ ಏಳನೆಯ ಗುರು ಹರ್‌ರಾಯಿಯ ಕೊನೆಯ ಪುತ್ರನಾಗಿದ್ದರು. ಐದನೆಯ ವಯಸ್ಸಿನಲ್ಲಿ ಗುರು ಪದವಿಯನ್ನು ವಹಿಸಿಕೊಂಡ ಹರ್‌ಕಿಶನ್ ಎಂಟನೆಯ ವಯಸ್ಸಿನಲ್ಲಿ ನಿಧನರಾದರು. ಆದರೂ ಬಾಲಗುರು ನಿಧನ ಹೊಂದುವ ಮೊದಲು ತನ್ನ ಉತ್ತರಾಧಿಕಾರಿ ಯಾರಿರಬೇಕು ಎಂಬ ಬಗ್ಗೆ ಸೂಚನೆ ನೀಡಲು ಮರೆಯಲಿಲ್ಲ. ಆ ಸಂತ ಚಾಲಕ, ಸ್ವಂತ ತಾಯಿಯ ಕಿವಿಯಲ್ಲಿ ಬಾಬಾ ಬಕ್ಕಲೆ, ಬಾಬಾ ಬಕ್ಕಲೆ ಎಂದು ಉರು ಹೊಡೆದಿದ್ದರು. ಮುಂದಿನ ನಾನಕ್ ಬಕ್ಕಲೆ ಗ್ರಾಮದಲ್ಲಿರುವನೆಂಬುದಾಗಿತ್ತು ಸೂಚನೆ. ಬಕ್ಕಲೆ ಗ್ರಾಮದ ಇಪ್ಪತ್ತಕ್ಕಿಂತಲೂ ಹೆಚ್ಚು ಭಾವಿ ನಾನಕ್‌ಗಳನ್ನು ಗುರು ಪದವಿಗೆ ಕಳುಹಿಸಲಿಕ್ಕೂ ಸೂಚಿಸಲಾಯಿತು. ಆದರೆ, ಗುರು ಪದವಿಗೆ ದೇವರು ನಿರ್ಧರಿಸಿದ್ದು ಗುರು ಹರ್‌ಗೋವಿಂದ್‌ರ ಕಿರಿಯ ಪುತ್ರ ತೇಜ್‌ಬಹದ್ದೂರನನ್ನಾಗಿತ್ತು.

ಆರನೆಯ ಗುರು ಹರ್‌ಗೋವಿಂದ್ ಕರ್ತಾರ್‌ಪುರ್‌ಗೆ ವಾಸ್ತವ್ಯ ಬದಲಾಯಿಸಿದ್ದಾಗ ಅಮೃತ್‌ಸರ್‌ನ ಸ್ವರ್ಣ ಮಂದಿರ ಶತ್ರುಗಳ ವಶವಾಗಿತ್ತು. ಗುರು ತೇಜ್ ಬಹದ್ದೂರ್ ಸ್ವರ್ಣ ಮಂದಿರಕ್ಕೆ ಭೇಟಿ ಕೊಡಲು ಯತ್ನಿಸಿದಾಗ ಅಲ್ಲಿನ ಪುರೋಹಿತರುಗಳು ಮಂದಿರದ ಬಾಗಿಲುಗಳನ್ನು ಮುಚ್ಚಿ ಗುರುವಿಗೆ ಪ್ರವೇಶವನ್ನು ನಿಷೇಧಿಸಿದ್ದರು.

ಗುರು ತೇಜ್‌ಬಹದ್ದೂರ್ ಹರಿ ಮಂದಿರದ ತೇಜಸ್ಸನ್ನಷ್ಟೂ ತಮ್ಮ ದಿವ್ಯ ಮನಸ್ಸಿಗೆ ಆವಾಹಿಸಿಕೊಂಡು ಅಮೃತ್‌ಸರದಿಂದ ಹೊರಟು ಹೋಗಲನುವಾದರು. ಆಗ ಭಕ್ತ ಜನರೂ ಅನುಯಾಯಿಗಳೂ ಗುರುವಿನ ಪಾದಗಳಿಗೆರಗಿ ಹರಿ ಮಂದಿರದ ತೇಜಸ್ಸನ್ನು ಅಲ್ಲೇ ಬಿಟ್ಟುಹೋಗಲು ಅತ್ತು ಕರೆದು ವಿನಂತಿಸಿದರು. ಭಕ್ತ ಜನರ ಬೇಡಿಕೆಯನ್ನು ಗುರು ಮನ್ನಿಸಿದರು.

ಆ ಹರಿ ಮಂದಿರದ ಮಾರ್ಬಲ್ ಭಿತ್ತಿಯ ಮೇಲೆಯೇ ಭಾರತೀಯ

ಮಿಲಿಟ್ರಿ ಗುಂಡಿನ ಮಳೆಗರೆದದ್ದು. ಹತ್ತು ಮಂದಿ ಗುರುಗಳ, ಕೋಟಿಗಟ್ಟಲೆ ಖಲ್ಸಗಳೆಲ್ಲರ ನಂಬಿಕೆಗಳ, ತ್ಯಾಗಗಳ, ಆತ್ಮಾಹುತಿಗಳ ಪ್ರತೀಕ ಸ್ವರ್ಣ ಮಂದಿರ.

ಚರಿತ್ರೆ ಅಲ್ಲಿಗೂ ಕೊನೆಗೊಳ್ಳುತ್ತಾ ಇಲ್ಲ. ಅನಂತ್‌ಪುರ್ ನಗರವನ್ನು ಕಟ್ಟಿ ಬೆಳೆಸಿದ್ದು ಗುರು ತೇಜ್‌ಬಹದ್ದೂರ್ ಆಗಿದ್ದರೂ ಅವರು ಅಲ್ಲಿ ಹೆಚ್ಚು ಕಾಲ ವಾಸ್ತವ್ಯ ಮಾಡಲಿಲ್ಲ. ಅವರೊಂದು ದೀರ್ಘ ತೀರ್ಥಯಾತ್ರೆ ನಡೆಸಿದರು. ಕುರುಕ್ಷೇತ್ರ, ಆಗ್ರಾ, ಪ್ರಯಾಗ್, ಕಾಶಿ, ಗಯಾ–ಎಲ್ಲೆಡೆಯೂ ಅವರು ಗುರುನಾನಕರ ಸಂದೇಶಗಳನ್ನು ತಲಪಿಸಿದರು. ಬಹಳ ಮಂದಿ ಹಿಂದೂಗಳೂ ಮುಸ್ಲಿಮರೂ ಅವರ ಅನುಯಾಯಿಗಳಾದರು. ಕೊನೆಗೆ ಅವರು ಬಿಹಾರ್‌ನ ಪಾಟ್ನಾ ಸಾಹಿಬ್‌ಗೆ ತಲಪಿದರು. ಬಳಿಕ ಕಾಮರೂಪಕ್ಕೆ ಅಲ್ಲಿರುವಾಗಲೇ ತಮಗೊಂದು ದಿವ್ಯ ಶಿಶು, ಗುರು ಗೋವಿಂದ್‌ಸಿಂಗ್ ಹುಟ್ಟಿರುವ ಸುದ್ದಿ ಅವರಿಗೆ ಗೊತ್ತಾದದ್ದು.

ಔರಂಗಜೇಬನು ಸ್ವಂತ ಅಪ್ಪನನ್ನು ಜೈಲಿಗೆ ಹಾಕಿ ಸೋದರರನ್ನು ನಿರ್ನಾಮ ಮಾಡಿ ಹಿಂದೂಸ್ತಾನದ ಸಿಂಹಾಸನವನ್ನು ವಶಪಡಿಸಿದ್ದೂ ಆ ಕಾಲದಲ್ಲೇ. ಆತ ಅಧಿಕಾರವನ್ನು ವಶಪಡಿಸಲಿಕ್ಕಾಗಿ ತಾನು ಮಾಡಿದ್ದ ಕಲಂಕಗಳಿಗೆ ತೆರೆಯೆಳೆಯಲೆಂದು ಮತ ಪುರೋಹಿತರುಗಳ, ಆಚಾರ್ಯರುಗಳ ಬೆಂಬಲ ಗಳಿಸಲಿಕ್ಕೂ ಹೂಟ ಹೂಡಿದ. ಮುಲ್ಲಾಗಳ ನೆರವಿನೊಂದಿಗೆ ಹಿಂದೂಗಳ ವಿರುದ್ಧ ಧರ್ಮಯುದ್ಧ. ಹಿಂದೂಸ್ತಾನದ ಎಲ್ಲಾ ಹಿಂದೂಗಳನ್ನೂ ಮತಾಂತರಗೊಳಿಸಿ ಮುಸ್ಲಿಮರನ್ನಾಗಿ ಮಾಡುವುದೇ ಆತನ ಯೋಜನೆಯಾಗಿತ್ತು. ಮತಾಂತರಗೊಳಿಸಲಿಕ್ಕಾಗಿ ಸಾಮ, ದಾನ, ಭೇದ, ದಂಡಗಳನ್ನು ಪ್ರಯೋಗಿಸಲು ಹಿಂಜರಿಯಲಿಲ್ಲ ಆತ. ಮತಾಂತರಕ್ಕೆ ಒಪ್ಪದವರಿಗೆ ಕ್ರೂರವಾದ ದಂಡನೆಗಳು. ಮತಾಂತರ ಮಾಡಿಕೊಂಡವರಿಗೆ ಜಾಗೀರುಗಳು, ಸ್ಥಾನಮಾನಗಳು, ಪಾರಿತೋಷಕಗಳು. ಕಾಶಿ ವೃಂದಾವನಗಳಲ್ಲಿರುವ ದೇಗುಲಗಳನ್ನು ಕೆಡವಿ ಮಸೀದಿಗಳನ್ನೆಬ್ಬಿಸಲಾಯಿತು. ಕಾಶಿಯ ವಿಷ್ಣು ದೇವಾಲಯ ಮತ್ತು ವಿಶ್ವೇಶ್ವರ ದೇವಾಲಯಗಳನ್ನು ಮುರಿದು ಆಲಂಗೀರ್ ಮಸೀದಿಯನ್ನೂ ಗ್ಯಾನ್‌ವಾಪಿ ಮಸೀದಿಯನ್ನೂ ನಿರ್ಮಿಸಲಾಯಿತು.

ಕಾಶ್ಮೀರದ ಸುಬೇದಾರ್ ಆಫ್‌ಖಾನ್‌ನು ಕಾಶ್ಮೀರ್ ಕಣಿವೆಯ ಅರ್ಧಕ್ಕಿಂತಲೂ ಹೆಚ್ಚು ಹಿಂದೂಗಳನ್ನು ಮತಾಂತರಗೊಳಿಸಿದನು. ಕೆಳಜಾತಿಯ ಬಡವರನ್ನು ಮತಾಂತರಗೊಳಿಸುವುದು ಸುಲಭವಾಗಿತ್ತು. ಆದರೆ ಮೇಲ್ಜಾತಿಯವರು ಮುಖ್ಯವಾಗಿ ಬ್ರಾಹ್ಮಣರು ವಿರೋಧಿಸಿದರು. ಶೇರ್ ಆಫ್‌ಖಾನ್‌ನು ಎರಡರಲ್ಲೊಂದನ್ನು ಆಯ್ಕೆ ಮಾಡಲು ಅವರಿಗೆ ಅಂತಿಮಾಜ್ಞೆ ನೀಡಿದನು.

ಒಂದೋ ಇಸ್ಲಾಂಗೆ ಮತಾಂತರ ಮಾಡಿಕೊಳ್ಳುವುದು ಇಲ್ಲವೇ ಸಾವು. ಕಾಶ್ಮೀರಿ ಪಂಡಿತರುಗಳು ಒಂದು ನಿರ್ಧಾರಕ್ಕೆ ಬರಲು ಒಂದಿಷ್ಟು ಕಾಲಾವಕಾಶವನ್ನು ಕೇಳಿಕೊಂಡರು.



ಅವರು ಅನಂತ್‌ಪುರ್‌ಗೆ ತೆರಳಿ ಗುರು ತೇಜ್ ಬಹದ್ದೂರರನ್ನು ಕಂಡು ಸಂಕಟವನ್ನು ನಿವೇದಿಸಿದರು. ಅವರ ಕಷ್ಟಗಳನ್ನು ಕಂಡೂ ಅನುಭವಿಸಬೇಕಾದ ನಿಂದೆ ದಂಡನೆಗಳನ್ನು ಅರಿತೂ ಗುರುವಿನ ಮನಸ್ಸು ಕರಗಿತು. ಆದರೆ, ಮೊಗಲ ಸಾಮ್ರಾಜ್ಯದ ಸಂಘಟಿತ ಬಲಕ್ಕೆದುರಾಗಿ ನಾನೇನು ಮಾಡಬಲ್ಲೆ ಎಂದು ಗುರು ಚಿಂತಾಧೀನರಾದರು.

ಒಂಬತ್ತು ವರ್ಷವಷ್ಟೇ ಪ್ರಾಯವಾಗಿರುವ ಗೋವಿಂದ್ ಅಪ್ಪನ ಚಿಂತಾಭಾವವನ್ನು ಕಂಡು ಸಮೀಪಕ್ಕೆ ಬಂದು ಕಾರಣ ವಿಚಾರಿಸಿದ. ಅಸಹಾಯಕರಾದ ಈ ಬ್ರಾಹ್ಮಣರ ಶೋಚನೀಯ ಸ್ಥಿತಿಯೇ ತನ್ನ ಚಿಂತೆಗೆ ಕಾರಣವೆಂದು ಗುರು ಹೇಳಿದರು. ಇದಕ್ಕೆ ಪರಿಹಾರವಾದರೂ ಏನು? ಎಂದನು ಮಗ, ಗುರುವಿನ ಬಳಿ ಉತ್ತರ ಇದ್ದಿತ್ತು–ತ್ಯಾಗ. ಪರಿಶುದ್ಧರಲ್ಲೇ ಪರಿಶುದ್ಧನಾಗಿರುವ, ದಿವ್ಯಾತ್ಮರಲ್ಲೇ ದಿವ್ಯಾತ್ಮನಾಗಿರುವ ಒಬ್ಬಾತನನ್ನು ಬಲಿ ಕೊಡಬೇಕು. ಅಂತಹ ಒಬ್ಬಾತನನ್ನು ಎಲ್ಲಿ ಪತ್ತೆ ಹಚ್ಚುವುದು; ಎಂಬುದೇ ಸಮಸ್ಯೆಯಾಗಿದೆ.

ಗುರುಪುತ್ರನ ದಿಢೀರನೆಯ ಉತ್ತರ ನಡುಗಿಸುವಂಥದ್ದಾಗಿತ್ತು; ನಿಮಗಿಂತ ಪರಿಶುದ್ಧನೂ ದಿವ್ಯಾತ್ಮನೂ ಆಗಿರುವ ಮನುಷ್ಯ ಎಲ್ಲಿರುತ್ತಾನೆ? ನೀವು ಸ್ವತಃ ಬಲಿಯಾಗಿ ಇವರನ್ನು ಕಾಪಾಡಿರಿ ಅಪ್ಪಾ....

ಹುಡುಗನ ನಿಷ್ಕಳಂಕವಾದ ಸಲಹೆಯನ್ನಾಲಿಸಿ ಗುರು ತೇಜ್‌ಬಹದ್ದೂರ್ ಗೆಲುವಾದರು. ಆಕಾಂಕ್ಷೆಯಿಂದ ಕಾದು ನಿಂತುಕೊಂಡಿದ್ದ ಬ್ರಾಹ್ಮಣರೊಡನೆ ಗುರು ಹೇಳಿದರು: ಗವರ್ನರ್‌ನ ಮೂಲಕ ಔರಂಗಜೇಬ್‌ಗೆ ಹೀಗೆ ಹೇಳಿ ಕಳುಹಿಸಿರಿ. ಗುರು ತೇಜ್‌ಬಹದ್ದೂರ್ ಇಸ್ಲಾಂ ಮತ ಸ್ವೀಕರಿಸುವುದಾದರೆ ನಾವೆಲ್ಲರೂ ಇಸ್ಲಾಂ ಮತ ಸ್ವೀಕಾರ ಮಾಡುವೆವು. ನಮ್ಮನ್ನು ಹಿಂಸಿಸಬಾರದು.

ಕಾಶ್ಮೀರದ ಗವರ್ನರ್ ಮತ್ತು ಔರಂಗಜೇಬ್ ಈ ಸುದ್ದಿ ತಿಳಿದಾಗ ಬಹಳ ಸಂತೋಷಪಟ್ಟರು.

ಔರಂಗಜೇಬನ ದೂತರುಗಳು ಅನಂತಪುರ್‌ಗೆ ಹೋದರು. ಗುರುವನ್ನು ದೆಹಲಿಗೆ ತಲಪಿಸಲಿಕ್ಕಾಗಿ. ಗುರು ಅವರ ಜತೆಯಲ್ಲಿ ಹೋಗಲಿಲ್ಲ. ತಮ್ಮ ಸಮಯ ಸಂದರ್ಭಗಳಿಗೆ ಅನುಗುಣವಾಗಿ ತಾವೇ ದೆಹಲಿಗೆ ಬರುವುದಾಗಿ ಹೇಳಿ ದೂತರುಗಳನ್ನು ವಾಪಸ್ ಕಳುಹಿಸಿದರು. ಕೊನೆಗೆ ಗುರು ತಮ್ಮ ಆಯ್ದ ಐದು ಮಂದಿ ಅನುಯಾಯಿಗಳ ಜತೆಯಲ್ಲಿ ದೆಹಲಿಗೆ ತಲಪಿದರು. ಔರಂಗಜೇಬ್‌ನ ಕಿಂಕರರು ಗುರುವಿಗೆ ಇಸ್ಲಾಂಗೆ ಮತಾಂತರಗೊಂಡರೆ ದೊರೆಯಲಿರುವ ಪ್ರಯೋಜನಗಳ ಕುರಿತು ಮನವರಿಕೆ ಮಾಡಲು ಪ್ರಯತ್ನಿಸಿದರು–ದೊಡ್ಡ ಅರಮನೆ, ಭಾರೀ ಜಮೀನು, ರಾಜಧನ, ನೂರಾರು ಸುಂದರಿಯರಿರುವ ಅಂತಃಪುರ.... ಗುರು ಎಲ್ಲವನ್ನೂ ನಿರಾಕರಿಸಿದರು. ವಾಹ್ ಗುರುವಿನ ದಿವ್ಯ ನಾಮವಲ್ಲದೆ

ತಮಗೆ ಬೇರೇನೂ ಅಗತ್ಯವಿಲ್ಲ ಎಂದರು.

ಬಳಿಕ ಗುರುವನ್ನು ಚಿತ್ರಹಿಂಸೆಗಳಿಗೆ ಗುರಿಪಡಿಸಲಾಯಿತು. ಪೂರ್ಣ ನಿರ್ಮಲತೆಯೊಂದಿಗೆ ಗುರು ಶಾಂತವಾಗಿ ಎಲ್ಲವನ್ನೂ ಸಹಿಸಿದರು. ಗುರು ಜಗ್ಗುವುದಿಲ್ಲವೆಂದು ಗೊತ್ತಾದಾಗ ಔರಂಗಜೇಬ್ ವರಸೆಯನ್ನು ಬದಲಾಯಿಸಿದ. ಗುರುವಿನ ಮುಖ್ಯ ಅನುಯಾಯಿಭಾಯಿ ಮಾತಿದಾಸ್‌ನನ್ನು ಗುರುವಿನ ಕಣ್ಣೆದುರಿನಲ್ಲೆ ಚಿತ್ರಹಿಂಸೆಗೆ ಗುರಿಪಡಿಸಿದ. ಚಕ್ರಾಕಾರದ ಗರಗಸದಿಂದ ಮಾತಿದಾಸ್‌ನನ್ನು ಸಿಗಿದು ಹಾಕಲಾಯಿತು–ಒಂದು ಹಾಲಿವಾಣದ ಕಾಂಡವೊ ಎಂಬಂತೆ ನಿರಾತಂಕವಾಗಿ, ಇನ್ನೊಬ್ಬ ಅನುಯಾಯಿ ಭಾಯಿ ದಯಾಲನನ್ನು ದೊಡ್ಡ ತಾಮ್ರದ ಹಂಡೆಯ ಕುದಿ ನೀರಿನಲ್ಲಿ ಹಾಕಿ ಬೇಯಿಸಿ ಕೊಲ್ಲಲಾಯಿತು. ಆ ಇಬ್ಬರು ಅನುಯಾಯಿಗಳೂ ಮತಾಂತರಕ್ಕಿಂತಲೂ ಮರಣವೇ ಲೇಸೆಂದು ಖಚಿತಪಡಿಸಿದ್ದರು.

ಕೊನೆಗೆ ಗುರುವಿನ ಸರದಿಯೂ ಬಂತು. ಚಾಂದ್ನೀ ಚೌಕ್‌ನ ಜನಭರಿತ ಕವಲೆಯ ವಟವೃಕ್ಷದ ಬುಡದಲ್ಲಿ ಸಾವಿರಾರು ಮಂದಿಯ ಕಣ್ಣೆದುರಿನಲ್ಲೇ ಗುರುವಿನ ಶಿರಚ್ಛೇದ ಮಾಡಲು ಔರಂಗಜೇಬ್ ಆಜ್ಞಾಪಿಸಿದ.

ಚಾಂದ್ನೀ ಚೌಕ್‌ನ ಮರಳು ಮಣ್ಣಿನಲ್ಲಿ ಗುರುವಿನ ಶಿರಸ್ಸು ಕಡಿದುರುಳಿತ್ತು. ನಸು ಬೆಚ್ಚಗಿನ ನೆತ್ತರು ಮಣ್ಣಿಗೆ ತಾಗಿದಾಗ ಆಕಾಶ ಕಪ್ಪಿಟ್ಟಿತ್ತು. ಧೂಳಿನ ಗಾಳಿ ಎದ್ದಿತು; ಸಿಡಿಲು ಮಿಂಚಿತು; ಕಪ್ಪು ಮೋಡಗಳಲ್ಲಿ ಬೆಂಕಿ ಸ್ಫುರಿಸಿತ್ತು. ಕಾವಲು ಸೇನೆ ಸುಂಟರ ಗಾಳಿಯಲ್ಲಿ ಸಿಲುಕಿ ದಿಕ್ಕೆಟ್ಟಿತ್ತು. ಭಯಾನಕ ಮಳೆ; ಕಂಬಗಳಷ್ಟು ದಪ್ಪಗಿನ ಜಲಧಾರೆ. ಯಮುನೆಯಲ್ಲಿ ನೆರೆಯೆದ್ದಿತು. ಕೆಂಪು ಕೋಟೆಯ ತಳಪಾಯವೇ ಹಿಡಿದಲುಗಾಡಿಸುವಂಥ ಅಲೆಗಳೆದ್ದವು.

ಜನಜಂಗುಳಿ ದಿಕ್ಕೆಟ್ಟು ಓಡಿತ್ತು. ಆ ಗಜಿಬಿಜಿಯ ನಡುವೆ ಗುರುವಿನ ಕಡಿದು ಬಿದ್ದ ತಲೆಯನ್ನು ಭಾಯಿ ಜೈತನೂ ಒಡಲನ್ನು ಭಾಯಿ ಲಖಿಯೂ ಎತ್ತಿಕೊಂಡು ಕೊಲೆಗಡುಕರ ಕಣ್ಣು ತಪ್ಪಿಸಿಕೊಂಡು ಓಡಿದರು.

ಹೌದು, ಕಾಶ್ಮೀರಿ ಬ್ರಾಹ್ಮಣರ ಜೀವವನ್ನೂ ನಂಬಿಕೆಯನ್ನೂ ಕಾಪಾಡಲು ಹುತಾತ್ಮರಾದ ತೇಜ್ ಬಹದ್ದೂರರ ಮುಂಡ ದಹನ ಮಾಡಿದ್ದು ಇದೊ ಇಲ್ಲೇನೇ, ತಲೆಯೆತ್ತಿ ನಿಂತಿರುವ ಗೋಪುರ ಕಳಶದಿಂದ ಹೊರಡುವ ಸ್ವರ್ಣ ಕಿರಣಗಳ ಥಳಕು ತಗ್ಗುತ್ತಿದೆ. ಒಂದು ದೈತ್ಯ ಗಾತ್ರದ ಹದ್ದಿನ ಹಾಗೆ ರೆಕ್ಕೆ ಬಿಚ್ಚುತ್ತಿರುವ ಕತ್ತಲೆ ನಗರವನ್ನು ಮುತ್ತುತ್ತಾ ಇದೆ.

ಗುರು ತೇಜ್‌ಬಹದ್ದೂರ್ ಕಾಪಾಡಿದ್ದ ಕಾಶ್ಮೀರಿ ಬ್ರಾಹ್ಮಣರ ಈ ತುದಿಯ ತಲೆಮಾರಿನ ಇಂದಿರಾಗಾಂಧಿ ಸ್ವರ್ಣ ಮಂದಿರವನ್ನು ಆಕ್ರಮಿಸಲು ಸೇನೆ ರವಾನಿಸುವುದು ಎಂತಹ ವಿಧಿ ವೈಪರೀತ್ಯ! ತೇಜ್‌ಬಹದ್ದೂರ್ ಯಾರ ಸಲುವಾಗಿ ಹುತಾತ್ಮರಾದರೊ ಅವರ ಈ ತುದಿಯ ಪೀಳಿಗೆ ಇಂದಿರಾಗಾಂಧಿಯನ್ನು



ವಧಿಸಿದ್ದಾದರೂ ಎಂತಹ ವೈಪರೀತ್ಯ.

ಚಿಂತೆಗಳು ಎಲ್ಲೆಲ್ಲೊ ಸುತ್ತಾಡಿದವು. ಮನೆಯ ಸುದ್ದಿ ತಿಳಿಯಲು ಏನಿದೆ ಉಪಾಯ? ಮೈಯಿಡೀ ನೋವು. ಎದ್ದು ಕೂಡಲು ಯತ್ನಿಸಿದ.

ಯಾವುದೋ ಕೈಗಳು ತಡೆಗಟ್ಟಿದವು–ಒಂದು ಹೆಣ್ಣು ದನಿ ಕಿವಿಗಳಲ್ಲಿ ಪಿಸುಗುಟ್ಟಿತು.

ವಿಶ್ರಾಂತಿ ಪಡೆಯಿರಿ. ಗುರುವಿನ ನಾಮೋಚ್ಚಾರಣೆ ಮಾಡಿರಿ.... ಆತ ಕಣ್ಣುಗಳನ್ನು ಬಲವಾಗಿ ಮುಚ್ಚಿದ. ಬಳಿಕ ಉರು ಹೊಡೆದ:

ಜಬ್ ಲಗ್ ಹುಕ್ಕಂ ನಬುಜ್‌ತಾ ತಬ್ ಲಗಾ ದುಃಖಿಯಾ....
ಗುರು ಮಿಲ್ ಹುಕ್ಕಂ ಪಚಾನಿಯಾ ತಬ್ ಗೀತಾ ಸುಖಿಯಾ....

* * *

## ಅಧ್ಯಾಯ ೧೭

# ಅಡುಗೆ ಮನೆಯಲ್ಲಿ ಸಿಂಹಗಳು

ಕರ್ತಾರ್ ಮತ್ತು ಸತ್‌ವೀರ್ ಪಂಜರದೊಳಗೆ ಸಿಲುಕಿರುವ ಎರಡು ಸಿಂಹಗಳ ಹಾಗೆ ಅಡುಗೆ ಮನೆಯ ಇನಿತೇ ಸ್ಥಳದಲ್ಲಿ ನಿಂತು ಏದುಸಿರು ಬಿಟ್ಟರು. ಮೊದಲ ರೋಷ ಕೆಲವು ತಾಸುಗಳ ಬಳಿಕ ಇಳಿದಿತ್ತು. ಖಲ್ಸಕ್ಕಾಗಿ ಜೀವ ತೆರಲು ಸಿದ್ಧರಾಗಿದ್ದ ಅವರು–ಸಿಗಿದು ಹಾಕಲು ದೊಂದಿ ಹಚ್ಚಿ ದೊಣ್ಣೆ, ಕುಡುಗೋಲುಗಳನ್ನು ಹಿಡಿದುಕೊಂಡು ಬಂದಿದ್ದ ಜನಜಂಗುಳಿಯನ್ನು ಎದುರಿಸಹೊರಟಿದ್ದ ಅವರು–ತಮ್ಮ ಅಡುಗೆ ಮನೆಯಲ್ಲೆ ಬಂದಿಗಳಾಗಿರುವರು. ಅವರ ತಾಯಿ ಮತ್ತು ಹೆಂಡಂದಿರೇ ಅವರನ್ನು ಬಂದಿಗಳನ್ನಾಗಿ ಮಾಡಿದ್ದರು. ಅವರಿಗೆ ಇದನ್ನು ನಂಬಲಿಕ್ಕೇ ಸಾಧ್ಯವಾಗುತ್ತಿಲ್ಲ.

ಕರ್ತಾರ್, ಬೇಸಗೆಯಲ್ಲಿ ನೀರು ತುಂಬಿಡುತ್ತಿದ್ದ ಡ್ರಂ ಕವುಚಿ ಹಾಕಿ ಅದರ ಮೇಲೆ ಕುಳಿತುಕೊಂಡ. ಅಡುಗೆ ಮನೆಯಲ್ಲಿದ್ದ ಏಕಮಾತ್ರ ಆಸನವಾದ ಮುಕ್ಕಾಲಿಯ ಮೇಲೆ ಸತ್‌ವೀರ್ ಸಹ ಆಸೀನನಾದ. ಪರಸ್ಪರ ಮುಖ ನೋಡಲೂ ಅವರಿಗೆ ಸಾಧ್ಯವಾಗಲಿಲ್ಲ. ಮೊದಲು ಹುಟ್ಟಿಕೊಂಡಿದ್ದ ಸಿಟ್ಟು ನಾಚಿಕೆಗೆ ದಾರಿ ಬಿಟ್ಟುಕೊಟ್ಟಿತ್ತು. ಸಮಯ ಕಳೆದಂತೆ ಆ ನಾಚಿಕೆಯೂ ದೂರವಾಯಿತು. ತನ್ನ ಹೆಂಡತಿ ಮತ್ತು ನಾದಿನಿ ಒಟ್ಟಾಗಿ ಸಾಧಿಸಿದ್ದ ಕರಾಮತ್ತಿನ ಬಗ್ಗೆ ಕರ್ತಾರ್‌ಗೆ ವಿಪರೀತ ಮುನಿಸು ಬಂದುಬಿಟ್ಟಿತ್ತು. ಕಣ್ಣೆತ್ತಿ ತನ್ನ ಮುಖ ನೋಡಲು ಮದುವೆಯಾಗಿ ಒಂದು ವರ್ಷದ ಬಳಿಕವೂ ಧೈರ್ಯ ವಹಿಸದವಳು ಕಿರಣ್. ಮಲಗುವ ಕೋಣೆಯ ಗೋಪ್ಯವಾದ ಏಕಾಂತತೆಯಲ್ಲು ಕೂಡ ಅವಳು, ತನ್ನ ಮುಖವನ್ನು ನೇರವಾಗಿ ದಿಟ್ಟಿಸುವುದಿಲ್ಲ. ದೀಪ ನಂದಿಸುವುದರೊಂದಿಗೆ, ಹೊರಗಿನ ಬೀದಿ ದೀಪಗಳ ಮಂದ ಬೆಳಕು ಕಿಟಕಿ ಸಂದಿಗುಂಟ ತೂರಿ ಬರದಿರಲೆಂದು ಕದಗಳಿಂದಲೂ ಪರದೆಗಳಿಂದಲೂ ಅವನ್ನು ಜಾಗರೂಕತೆಯಿಂದ ಮುಚ್ಚಲಿಕ್ಕೆ ಕೂಡ ಅವಳು ಮರೆಯುತ್ತಿರಲಿಲ್ಲ. ಸತ್‌ವೀರ್‌ನ ಹೆಂಡತಿ, ಕಿರಣ್‌ಗಿಂತಲೂ ಹೆಚ್ಚು ನಾಚಿಕೆಗುಳಿ. ಈ ಅಕ್ಕತಂಗಿಯರಲ್ಲಿ ಯಾರು ಹೆಚ್ಚಿನ ಮುಟ್ಟಿದರೆ ಮುನಿ ಎಂದು ಹೇಳುವಂತಿಲ್ಲ.

ಹೀಗಿದ್ದೂ ಅವರು ಸಾಧಿಸಿದ್ದ ಬುದ್ಧಿವಂತಿಕೆ! ಅಮ್ಮನ ಮನಃಪೂರ್ವಕ



ಬೆಂಬಲ ಇದ್ದಿತ್ತೆಂಬುದು ನಿಜವೇ. ಈ ಮೂವರ ಹೆಣ್ಣು ಬುದ್ಧಿಯನ್ನು ಶಪಿಸುತ್ತ ಕೆಲಹೊತ್ತು ಪಂಜರದೊಳಗಿನ ಪುಣುಗು ಬೆಕ್ಕಿನ ಹಾಗೆ ಕಳೆದ ಅಣ್ಣತಮ್ಮಂದಿರು ಬಳಿಕ ಪರಸ್ಪರ ಒಂದಷ್ಟು ಕೆಟ್ಟ ಬೈಗುಳಗಳನ್ನು ವಿನಿಮಯ ಮಾಡಿಕೊಂಡರು. ಅನಂತರ ಅವನವನ ಮೇಲೆಯೇ ಗುರುಗುಟ್ಟಿದರು. ಹಲವಾರು ಬಾರಿ ಬಾಗಿಲು ಬಡಿದು ನೋಡಿದರು. ತೊಳೆದು ಅಚ್ಚುಕಟ್ಟಾಗಿ ಕವುಚಿ ಇಟ್ಟಿದ್ದ ಪಾತ್ರೆ ಪಗಡಿಗಳನ್ನೆಲ್ಲ ತಟ್ಟಿ ಕೆಡವಿದರು. ಕುಡಿಯುವ ನೀರು ತುಂಬಿಟ್ಟಿದ್ದ ಮಣ್ಣಿನ ಕೂಜವನ್ನು ಒಡೆದು ಹಾಕಿದರು. ಇಷ್ಟರಿಂದಲೂ ಸಿಟ್ಟಿಳಿಯದ ಕಾರಣ ಮುಷ್ಟಿ ಬಿಗಿದು ಗೋಡೆಗೆ ಗುದ್ದಿದರು.

ಆದರೂ ಅವು ಹೊರಗೆ ಯಾವ ಚಲನೆಯನ್ನೂ ಉಂಟುಮಾಡಲಿಲ್ಲ. ಅಮ್ಮ, ಕಿರಣ್, ಕಾಜಲ್–ಯಾರೂ ಬಾಗಿಲು ತೆರೆಯಲಿಲ್ಲ.

ಅಮ್ಮ ಮಾತ್ರ ಒಮ್ಮೆ ಬಾಗಿಲ ಬಳಿ ಬಂದು ಅದುಮಿ ಹಿಡಿದ ದನಿಯಲ್ಲಿ ಹೇಳಿದ್ದಳು:

ಮಗಾ ಕರ್ತಾರ್, ಮಗಾ ಸತ್‌ವೀರ್, ಈ ಮನೆಯಲ್ಲಿ ಒಬ್ಬ ವಿಧವೆ ಧಾರಾಳ ಸಾಕು. ಅದಕ್ಕೆ ನಾನೇ ಇದ್ದೇನಲ್ಲ ಮಕ್ಕಳೇ. ಈ ಇಬ್ಬರು ಹುಡುಗಿಯರನ್ನು ವಿಧವೆಯರನ್ನಾಗಿ ಮಾಡುವ ಹಕ್ಕು ನಿಮಗಿಲ್ಲ. ಕೇಳಿಸಿತೆ ಮಕ್ಕಳೇ?

ಅಮ್ಮನ ಮಾತುಗಳು ಗದರಿಕೆಯದ್ದಾಗಿದ್ದವು–ಕಣ್ಣೀರಿನಲ್ಲಿ ಒದ್ದೆಯಾದ ಗದರಿಕೆ.

ಸತ್‌ವೀರ್ ತಾಳ್ಮೆ ಕಳೆದುಕೊಂಡು ಪ್ರಶ್ನಿಸಿದ: ಅಮ್ಮಾ, ನೀನು ಬಾಗಿಲು ತೆಗಿಯುತ್ತೀಯೋ ಅಥವಾ ನಾವು ಒದ್ದು ಮುರೀಬೇಕೊ?

ಅಮ್ಮ ಹೇಳಿದಳು: ನಾನು ಬಾಗಿಲು ತೆಗೆಯುವುದಿಲ್ಲ. ನೀವು ಬಾಗಿಲು ಮುರಿದರೆ ನಾನು ತರಕಾರಿ ಹೆಚ್ಚುವ ಈ ಕತ್ತಿಯಿಂದ ನನ್ನದೇ ಕುತ್ತಿಗೆಕೊಯ್ದು ಕೊಳ್ಳುತ್ತೇನೆ. ಅಲ್ಲವಾದರೆ ಸೀಮೆಎಣ್ಣೆ ಸುರಿದು ಕೊಂಡು ನನಗೆ ನಾನೇ ಬೆಂಕಿ ಹಚ್ಚುತ್ತೇನೆ. ಈ ಮುದುಕಿಯಿಂದ ಈ ಭೂಮಿಯಲ್ಲಿ ಏನೂ ಆಗ್ಬೇಕಾಗಿಲ್ಲ. ಆದರೆ ನೀವು ಈ ಹುಡುಗಿಯರ ಬೈತಲೆಯ ಕುಂಕುಮ ಉಳಿಸಲಿಕ್ಕಾಗಿ ಬದುಕಿರಲೇಬೇಕು. ಹರ್‌ಭಜನ್ ಆಸ್ಪತ್ರೆಯಿಂದ ಮರಳಿ ಬರುವ ತನಕ ನಿಮ್ಮನ್ನು ಬಿಟ್ಟು ಬಿಡಲು ನನ್ನಿಂದಾಗದು.

ಆಗ ಸತ್‌ವೀರ್ ಬೇರೊಂದು ಉಪಾಯ ಹುಡುಕಿದ: ಅವ್ವಾ ಹಸಿವೆಯಾಗುತ್ತೆ. ಅಡುಗೆ ಮನೆಯ ಬಾಗಿಲು ತೆರೆಯದೆ ನೀನು ರೊಟ್ಟಿ ತಯಾರಿಸೋದಾರೂ ಹೇಗೆ?

ಮೊದಲು ಅಮ್ಮ ಏನನ್ನೂ ಹೇಳಲಿಲ್ಲ. ಹೊರಗೆ ಮೌನ ದಟ್ಟಣಿಸಿದಾಗ ಕರ್ತಾರ್ ಪುನಃ ಹೇಳಿದ: ಅಮ್ಮಾ ಹಸಿವಾಗುತ್ತೆ.... ಹಸಿವಾಗುತ್ತೆ ಅಮ್ಮಾ...

ಅಮ್ಮನ ಬಿಕ್ಕಳಿಕೆ ಬೆರೆತ ಅಳು ಹೊರಗಿನಿಂದ ಕೇಳಿ ಬಂತು. ಪಕ್ಕದಲ್ಲೆ

ಕಿರಣ್ ಮತ್ತು ಕಾಜಲ್ ನಿಂತು ಕೊಂಡಿರಬಹುದು. ಅವರ ಬಳೆಗಳ ಸದ್ದು ಕೇಳಿಸಿತಲ್ಲ ಎಂದುಕೊಂಡನು ಸತ್‌ವೀರ್. ಬಿಕ್ಕಳಿಕೆಯ ನಡುವೆಯೇ ಅಮ್ಮನ ಮಾತುಗಳು: ನಿಮ್ಮ ಅಪ್ಪ ತೀರಿಕೊಂಡಾಗ ಹರ್‌ಭಜನ್‌ಗೆ ಹದಿನಾರು ವರ್ಷ, ಕರ್ತಾರ್‌ಗೆ ಹನ್ನೆರಡು. ಸತ್‌ವೀರ್‌ಗೆ ಹತ್ತು. ಮೂಡಣದ ಗಡಿದಾಟಿ ಬಂದಿದ್ದ ಚೀನೀ ಪ್ರವಾಹದಲ್ಲಿ ನಿಮ್ಮ ಅಪ್ಪ ಸಹ ಸಿಕ್ಕಿಬಿದ್ದರು. ಆಮೇಲೆ ಬಹಳಷ್ಟು ಕಷ್ಟಕ್ಕೊಳಗಾಗಿದ್ದೆ. ನಾನು ಉಪವಾಸ ಬಿದ್ರೂ ನಿಮಗೆ ಹಸಿವಾಗದ ಹಾಗೆ ಜಾಗ್ರತೆ ವಹಿಸಿದ್ದೆ. ರೆಕ್ಕೆ ಬಲಿತು ಹಾರಲು ಸಮರ್ಥರಾಗುವ ತನಕ ಹಸಿವೆ ಗೊತ್ತಾಗದ ಹಾಗೆ ನಿಮ್ಮನ್ನು ನಾನು ಸಾಕಿದ್ದೆ. ಆದರೆ ಇವತ್ತು... ಇಲ್ಲ ಮಕ್ಕಳೇ... ಹರ್‌ಭಜನ್ ಬರುವ ತನಕ ಈ ಬಾಗಿಲು ತೆರೆಯಲು ನನ್ನಿಂದಾಗದು. ಹಸಿವೆಗಿಂತಲೂ ಬೆಲೆಬಾಳುವಂಥದ್ದು ನಿಮ್ಮ ಜೀವ, ನಿಮ್ಮ ಜೀವಕ್ಕಿಂತಲೂ ಬೆಲೆಬಾಳುವಂಥದ್ದು ಈ ಹುಡುಗಿಯರ ಅಂಗೈಯ ಮದರಂಗಿ ಬಣ್ಣ. ಇವರು ತೊಟ್ಟುಕೊಂಡಿರುವ ಗಾಜಿನ ಬಳೆಗಳನ್ನು ಒಡೆದು ಹಾಕುವ ದೃಶ್ಯ ನೋಡಲು ನನ್ನಿಂದಾಗದು. ಅವರ ಹಣೆಯ ಕುಂಕುಮ ಅಳಿಸಿ ಹಾಕುವುದನ್ನು ನೋಡಿ ಸಹಿಸಲು ನನ್ನಿಂದ ಸಾಧ್ಯವಿಲ್ಲ. ಹೊರಗೆ ಕಾಲ ಸಪ್ಪಳ ದೂರವಾಗುತ್ತಾ ಹೋಯ್ತು. ಬಿಕ್ಕಳಿಕೆ ಕೂಡ ದೂರವಾಗಿ ಕೇಳಿಸದಾಯಿತು.

ಕರ್ತಾರ್ ಡ್ರಮ್ಮಿನ ಮೇಲೆ ಕುಳಿತಿದ್ದು ಗ್ಯಾಸ್ ಸಿಲಿಂಡರ್‌ಗೆ ಒರಗಿದ. ಹಿಂದಿನ ರಾತ್ರಿಯಿಡೀ ಯಾರೂ ನಿದ್ರಿಸಿರಲಿಲ್ಲ. ಬೆಳಗ್ಗಿನಿಂದಲೂ ಈ ಇಕ್ಕಟ್ಟಾದ ಕೋಣೆಯೊಳಗೆ ಬಂದಿಗಳಾಗಿರುವವರು. ಇಬ್ಬರಿಗೆ ಕಷ್ಟದಲ್ಲಿ ಕಾಲುಚಾಚಿ ಕುಳಿತಿರಬಹುದಾದಷ್ಟೆ ಚಿಕ್ಕ ಕೋಣೆ.

ಸತ್‌ವೀರ್ ಗೋಡೆಗೊರಗಿ ತುಸು ಮಂಪರು ತೆಗೆಯಲು ಯತ್ನಿಸಿದ. ಕರ್ತಾರ್ ಮಂಡಿಗಳ ಮೆಲೆ ತಲೆಯೊರಗಿಸಿ ಗತಘಟನೆಗಳ ಕುರಿತು ಯೋಚಿಸತೊಡಗಿದ:

ರವಿಸಾಬ್ ಮನೀಂದರ್ ಮತ್ತು ಸುನೀಂದರ್‌ನನ್ನು ಜತೆಗೂಡಿಸಿಕೊಂಡು ಹಿಂಬಾಗಿಲಿನ ಮೂಲಕ ಹೊರಹೋಗುವಷ್ಟರಲ್ಲೇ, ಉರಿಯುವ ದೊಂದಿ ಹಿಡಿದುಕೊಂಡು ಅಬ್ಬರಿಸುತ್ತ ಕಿಟಕಿಯ ಸಂದಿಯ ಮೂಲಕ ಹೊರಗೆ ನಡೆಯುವುದೆಲ್ಲವೂ ಕಾಣಿಸುತ್ತಿದ್ದವು. ಗುಂಪು ಗೇಟು ತೆರೆದು ಮನೆಯಂಗಳ ತಲಪಿತ್ತು. ದೊಂದಿಯ ಬೆಳಕಿನಲ್ಲಿ, ಹಲವೆಲ್ಲ ಪರಿಚಿತ ಮುಖಗಳೇ ಎಂದು ಅನ್ನಿಸಿತ್ತು. ಇದೇ ಬೀದಿಯಲ್ಲೂ ಪಕ್ಕದ ಬೀದಿಯಲ್ಲೂ ಮನೆ ಮಾಡಿಕೊಂಡಿರುವವರ ಮುಖಗಳು.

ಗುಂಪಿನಲ್ಲಿದ್ದ ಯಾರೊ ಒಬ್ಬಾತ ಮೆಲ್ಲಗೆ ಬಾಗಿಲು ಬಡಿದ. ಹೊರಗಿನ ಗದ್ದಲ ತಗ್ಗಿತ್ತು. ಒಳಗಿದ್ದ ಯಾರೊಬ್ಬರೂ ಉಸಿರು ಕೂಡ ಹೊರಬಿಡಲಿಲ್ಲ.



ಪುನಃ ಬಾಗಿಲು ಬಡಿಯಲ್ಪಟ್ಟಿತ್ತು. ತುಸುಗಟ್ಟಿಯಾಗಿಯೇ. ತನ್ಮಧ್ಯೆ ಯಾರೊ ಗಟ್ಟಿಯಗಿ ಕರೆದರು:

ಓ ಹರ್‌ಭಜನ್.

ಗುಂಪಿನಿಂದಲೇ ಇನ್ನೊಬ್ಬಾತ ಹೇಳಿದ:

ಹರ್‌ಭಜನ್ ಆಸ್ಪತ್ರೆ ಸೇರಿದ್ದಾನೆ.

ಹಾಗಾದ್ರೆ ಪುಂಡ ಕರ್ತಾರ್ ಎಲ್ಲಿ? ಸತ್‌ವೀರ್ ಎಲ್ಲಿ? ತನ್ನ ರಕ್ತ ಕುದಿಯುತ್ತಾ ಇತ್ತು. ಸತ್‌ವೀರ್ ಸಹ ಗುಂಪನ್ನೆದುರಿಸಲು ಸಿದ್ಧನಾಗಿದ್ದ. ಕೋವಿ ಗುರಿಹಿಡಿಯುತ್ತಾ ತಾನು ಬಾಗಿಲಿನತ್ತ ನಡೆದೆ. ಆಗ ಹೆಗಲ ಮೇಲೊಂದು ಮೃದುಸ್ಪರ್ಶ. ತಿರುಗಿ ನೋಡಿದೆ–ಅಮ್ಮ. ಅಮ್ಮ ತುಟಿಯ ಮೆಲೆ ಬೆರಳಿರಿಸಿ ಉಸಿರೆತ್ತಬಾರದು ಎಂದು ಸನ್ನೆ ಮಾಡಿದಳು.

ಗುಂಪಿನಿಂದ ಇನ್ನೊಂದು ಮಾತು:

ಬಾಗಿಲಿಗೆ ಬೀಗ ಹಾಕಲಾಗಿದೆ.

ಮುಂಬಾಗಿಲಿಗೆ ಬೀಗ ಜಡಿದಿರುವುದನ್ನು ತಾನು ಗಮನಿಸಿರಲಿಲ್ಲ. ಅಮ್ಮ ತೆಗೆದುಕೊಂಡ ಮುಂಜಾಗ್ರತೆ ಇರಬಹುದು. ಹೌದು, ಇದೂ ಸ್ತ್ರೀ ಬುದ್ಧಿಯೆ! ಬಡಿಗೆ, ಭರ್ಜಿ ವಗೈರೆಗಳೊಂದಿಗೆ ಬರುವ ನೂರಾರು ಜನರ ಗುಂಪಿನೆದುರು ಆ ಬಾಗಿಲಿಗಾಗಲೀ ಬೀಗಕ್ಕಾಗಲೀ ಯಾವ ಪ್ರಸಕ್ತಿಯೂ ಇಲ್ಲವೆಂದು ತನಗೆ ಗೊತ್ತು.

ಗುಂಪು ಗೊಂದಲಕ್ಕೊಳಗಾಯಿತು. ಒಬ್ಬಾತ ತನ್ನ ಸಂದೇಹವನ್ನು ಮುಂದಿಟ್ಟ:

ಗಂಡೂ ಹೆಣ್ಣೂ ಅಲ್ಲದ ಆ ಹೇಡಿಗಳು ಒಳಗೇನೇ ಬಚ್ಚಿಟ್ಟುಕೊಂಡಿದ್ದಾರೊ ಏನೊ? ತಾನು ಅಮ್ಮನ ಹಿಡಿತದಿಂದ ಕೊಸರಿ ಬಾಗಿಲಿನತ್ತ ಧಾವಿಸಲೆತ್ನಿಸಿದ್ದೆ. ಅಷ್ಟರಲ್ಲೇ ಕಾಜಲ್ ಮತ್ತು ಕಿರಣ್ ಸಹ ಬಂದು ತನ್ನನ್ನು ಗಟ್ಟಿಯಾಗಿ ಹಿಡಿದುಬಿಟ್ಟರು. ಮೂರು ಮಂದಿ ಹೆಂಗಸರೊಟ್ಟಾದರೆ ಅಷ್ಟೊಂದು ಬಲವಿರುತ್ತದೆಯೇ? ಅವರು ಹೀಗೆ ತಮ್ಮಿಬ್ಬರನ್ನೂ ಈ ಅಡುಗೆ ಕೋಣೆಗೆ ತಲಪಿಸಿ ಬಂದಿಗಳನ್ನಾಗಿ ಮಾಡಿದ್ದೆಂದೂ ಆಗ ಗೊತ್ತಾಗಲಿಲ್ಲ.

ಕೆಲವರೆಲ್ಲ ಅದುಮಿ ಹಿಡಿದ ದನಿಯಲ್ಲಿ ತಮ್ಮ ತಮ್ಮಲ್ಲೆ ಏನೇನೊ ಮಾತನಾಡುತ್ತಾ ಇದ್ದರು. ಒಬ್ಬಾತ ತುಸುಗಟ್ಟಿಯಾಗಿಯೇ ಹೇಳಿದ್ದ: ಬೇಟೆಗಳು ತಪ್ಪಿಸಿಕೊಂಡವು ಅಂತ ತೋರುತ್ತೆ...

ಆಗ, ಪಕ್ಕದ ಮನೆಯ ಮಲ್ಹೋತ್ರಾರ ಮಾತು ಗಟ್ಟಿಯಾಗಿಯೇ ಕೇಳಿಸಿತ್ತು: ಯಾಕೆ ಸಲ್ಲದ ಮಾತುಗಳನ್ನಾಡ್ತಾ ಇದ್ದೀರಾ? ಅವರೆಲ್ಲರೂ ಆಸ್ಪತ್ರೆಗೇ ಹೋಗಿದ್ದಾರೆ.

ನಿರಾಸೆ ಹೊಂದಿದ್ದ ಗುಂಪು ಪುನಃ ಬೀದಿಯ ಕಡೆಗೇ ಸಾಗಿತ್ತು. ಬೀದಿಯ ಆಚೆ ತುದಿಯಲ್ಲಷ್ಟೇ ಇನ್ನೊಂದು ಸಿಕ್ಖ್ ಕುಟುಂಬ–ಬೇಡಿಯವರದ್ದು ಇದೆ. ದೂರವಾಗುತ್ತಿದ್ದ ದೊಂದಿಗಳು ಯಾವುದೋ ಪಿಶಾಚಿಯ ಕೆಂಗಣ್ಣುಗಳ ಹಾಗೆ

ಕಿಟಕಿ ಸಂದಿಯ ಮೂಲಕ ಕಾಣಿಸುತ್ತಿದ್ದವು.

ಕೋಣೆಯ ಮಬ್ಬು ಬೆಳಕಿನಲ್ಲೆ ಅಮ್ಮನನ್ನು ಗಮನಿಸಿದೆ: ಕಿರಣ್ ಮತ್ತು ಕಾಜಲ್‌ನನ್ನು ಸಹ. ತುಂಬಿ ಹರಿಯುತ್ತಿದ್ದವು ಮೂರು ಜೋಡಿ ಕಣ್ಣುಗಳು. ಪಕ್ಕನೆ ನೆನಪಿಗೆ ಬಂದಿತ್ತು: ಮಲ್ಹೋತ್ರ ಓರ್ವ ಒಳ್ಳೆಯ ನೆರೆಕರೆಯವರಾಗಿದ್ದೂ ಎರಡೂ ಕುಟುಂಬಗಳ ನಡುವೆ ಅಲ್ಪಸ್ವಲ್ಪ ವೈಮನಸ್ಯ ಇದ್ದೇ ಇರುತ್ತಿದ್ದವು–ಮೇಲೆ ಕಟ್ಟಲಾಗುತ್ತಿರುವ ವೆರಾಂಡದ ಅಂಚು ಮತ್ತು ನಡುಗೋಡೆಗಳು ಗಡಿ ಮೀರುತ್ತಿರುವ ಕುರಿತು ಚಿಕ್ಕ ಪುಟ್ಟ ಜಗಳಗಳೂ ನಡೆಯುತ್ತಿದ್ದವು. ಆದರೂ ಅಗತ್ಯ ಬಿದ್ದಾಗಲೆಲ್ಲ ಪರಸ್ಪರ ನೆರವಾಗುತ್ತಲೂ ಇದ್ದೆವು. ಮಲ್ಹೋತ್ರರ ಹೆಂಡತಿಗೆ ಪಕ್ಕನೆ ತಲೆಸುತ್ತು ಬಂದಾಗ ಆಸ್ಪತ್ರೆ ಸೇರಿಸಿದ್ದು ತನ್ನ ಟ್ಯಾಕ್ಸಿಯಲ್ಲಾಗಿತ್ತು. ಆಕೆಯ ಜತೆಯಲ್ಲೇ ಅಮ್ಮ ವೈಷ್ಣವ್ ದೇವಿಗೆ ತೀರ್ಥಾಟನೆ ಮಾಡಿ ಬಂದಿದ್ದಳು. ಹಬ್ಬಹರಿದಿನಗಳಲ್ಲಿ ಪರಸ್ಪರ ಸಿಹಿತಿಂಡಿಗಳ ವಿನಿಮಯ ಮಾಡಿಕೊಳ್ಳುತ್ತಿದ್ದೆವು. ವೈಶಾಖಿಯಂದು ಹಲ್ವ, ಜಿಲೇಬಿಗಳು ಆ ಕಡೆಗೆ, ದೀಪಾವಳಿಯಂದೂ ಬರ್ಫಿ, ಲಾಡುಗಳು ಈ ಕಡೆಗೆ.

ಅಮ್ಮ ಕಣ್ಣೊರೆಸುತ್ತ ಹೇಳಿದ್ದಳು: ದೂರದ ಬಂಧುಗಳಿಗಿಂತ ಹತ್ತಿರದ ಶತ್ರುಗಳೇ ಸಮಯಕ್ಕೆ ನೆರವಾಗುತ್ತಾರೆ. ನೋಡಿದೆಯಾ ಸತ್‌ವೀರ್. ಯಾವಾಗಲೂ ಅವರೊಡನೆ ಜಗಳವಾಡಲಿಕ್ಕಷ್ಟೇ ನಿನಗೆ ಸಾಧ್ಯ.

ಸತ್‌ವೀರ್ ಏನನ್ನೂ ಹೇಳಲಿಲ್ಲ. ಕೈಯ ಕೋವಿಯ ಮೇಲಿನ ಹಿಡಿತ ಬಿಗಿಗೊಳಿಸುತ್ತ ಸುಮ್ಮಗೆ ನಿಂತುಕೊಂಡಿದ್ದ. ಪಕ್ಕನೆ ಏನನ್ನೋ ಯೋಚಿಸುತ್ತ ಅಮ್ಮ ಹೇಳಿದ್ದಳು:

ಗುಂಪಿನ ಜನರು ಹಿಂತಿರುಗುವಾಗ ಪುನಃ ಇಲ್ಲಿ ಬಂದು ನೋಡಿಯಾರು.

ಸತ್‌ವೀರ್ ಅಸಹನೆಯಿಂದ ಹೇಳಿದ್ದ: ಯಾವತ್ತೂ ಹೇಡಿಗಳ ಹಾಗೆ ಅವಿತುಕೊಂಡಿರಲು ಸಾಧ್ಯವಾ? ಅಮ್ಮನ ಮಡಿಲೊಳಗೆ ಬಚ್ಚಿಟ್ಟುಕೊಳ್ಳಬೇಕಾದ ಪ್ರಾಯದವರೇನು ನಾವು?

ಸತ್‌ವೀರ್‌ನ ಮರ್ಜಿ ಮಾರ್ಪಡುತ್ತಿರುವುದನ್ನು ಕಂಡಾಗ ಅಮ್ಮ ತನ್ನ ವರಸೆ ಬದಲಾಯಿಸಿದ್ದಳು. ಆಕೆ ಸೊಸೆಯರನ್ನು ಕರೆದು ಮೆತ್ತಗೆ ಹೇಳಿದಳು: ನೀವು ಹೋಗಿ ಮಲಗಿಕೊಳ್ಳಿ. ನನಗೆ ಇವರೊಡನೆ ಸ್ವಲ್ಪ ಮಾತಾಡಲಿಕ್ಕಿದೆ. ಕಾಜಲ್ ಮತ್ತು ಕಿರಣ್ ಅಮ್ಮನ ಆಜ್ಞೆಯನ್ನು ಪಾಲಿಸಿದರು. ತಾವಿಬ್ಬರೂ ನಿಂತೇ ಇದ್ದಾಗ ಅಮ್ಮ ಗದರಿದ್ದಳು: ಬರುವುದಿಲ್ಲವ ನೀವು?

ಸತ್‌ವೀರ್ ಪ್ರಶ್ನಿಸಿದ ಯಾಕೆ?

ಅಮ್ಮ ಹೇಳಿದಳು: ಕಡಲೆ ಬೆಲ್ಲ ತಿನ್ನಲು.

ಸತ್‌ವೀರ್‌ನ ಬಾಯಲ್ಲಿ ನೀರೂರಿರಬೇಕು.

ಅವನು ಪ್ರಶ್ನಿಸಿದ್ದ.



ಸತ್ಯವಾ?

ಅಮ್ಮ ಕಣ್ಣು ಮಿಟುಕಿಸಿದ್ದಳು: ಸತ್ಯ.

ಅಮ್ಮನೊಂದಿಗೆ ಅಡುಗೆ ಕೋಣೆಗೆ ತಲಪಿದೆವು.

ಅಮ್ಮ ಕಬೋರ್ಡ್‌ನಿಂದ ಹುರಿಕಡಲೆ ಮತ್ತು ಬೆಲ್ಲ ತೆಗೆದು ಇಬ್ಬರಿಗೂ ಕೊಟ್ಟಳು. ಬಳಿಕ ಕಿರಣ್ ಮತ್ತು ಕಾಜಲ್‌ರಿಗೆ ಕೊಡಲೆಂದು ಹೊರನಡೆದಳು.

ಕಡಲೆ ಮತ್ತು ಬೆಲ್ಲ ತಿಂದು ಮುಗಿದ ಬಳಿಕವೇ ಗೊತ್ತಾದದ್ದು: ಹೊರಗಿನಿಂದ ಬಾಗಿಲಿಗೆ ಬೀಗ ಹಾಕಲಾಗಿದೆ ಎಂದು.

ಕೋವಿ ಹಿಡಿದುಕೊಂಡು ತಾನು ಮತ್ತು ಸತ್‌ವೀರ್ ಒಂದು ದೊಡ್ಡ ಗುಂಪನ್ನೇ ಎದುರಿಸಹೊರಟದ್ದನ್ನು ಕಂಡಾಗ ಅಮ್ಮನ ಹೆತ್ತ ಕರುಳು ತಳಮಳಿಸಿರಬೇಕು: ಹರ್‌ಭಜನ್‌ನ ಹಾಗೆ ಲೋಕಾನುಭವವಾಗಲೀ ಮನಸ್ಸಿನ ಪರಿಪಕ್ವತೆಯಾಗಲೀ ಹೊಂದಿರದ ಈ ಹುಡುಗರನ್ನು ತಾನೇ ಹತೋಟಿಯಲ್ಲಿರಿಸಬೇಕಾಗಿದೆ. ಅವರಿಗೋಸ್ಕರ ಅಲ್ಲ; ತನಗೋಸ್ಕರ: ಕಿರಣ್‌ಗೋಸ್ಕರ: ಕಾಜಲ್‌ಗೋಸ್ಕರ ಎಂದು.

ಸತ್‌ವೀರ್ ಗೋಡೆಗೊರಗಿ ಕುಳಿತು ನಿದ್ರಿಸುತ್ತಿರುವನು. ಗಂಟೆ ಎಷ್ಟಾಗಿರಬಹುದು? ಹೊರಗೆ ಕತ್ತಲೆ ವ್ಯಾಪಿಸಿದೆ.

ಮಲ್ಹೋತ್ರರ ಮನೆಯಿಂದ, ಟಿ.ವಿ.ಯಿಂದ ಇರಬಹುದು ಸಿತಾರ್‌ನ ಶೋಕಗ್ರಸ್ತ ಸ್ವರ ಕೇಳಿಬರುತ್ತಾ ಇದೆ. ಕೊಲೆಯಾಗಿರುವ ಪ್ರಧಾನಿಯ ಪಾರ್ಥಿವ ಶರೀರಕ್ಕೆ ಆದರಾಂಜಲಿಗಳನ್ನರ್ಪಿಸಲು ಬರುತ್ತಿರುವವರ ದೀರ್ಘ ಕ್ಯೂವಿನ ಬಗ್ಗೆ ಪದೇ ಪದೇ ವಿವರಣೆಗಳು. ರಾಷ್ಟ್ರಕ್ಕಾಗಿ ಆಕೆ ಮಾಡಿರುವ ಸೇವೆಯ ಬಗೆಗಿನ ಸ್ಮರಣಿಕೆಗಳು. ಕರ್ತಾರ್ ಗ್ಯಾಸ್ ಸಿಲಿಂಡರ್‌ಗೆ ಒರಗಿ ಕುಳಿತು ಎವೆ ಮುಚ್ಚಿದ. ವರ್ಷಗಳ ಹಿಂದೆ ಇಂದಿರಾಜಿಯನ್ನು ನೋಡಲು ಗಂಟೆಗಟ್ಟಲೆ ಕಾಲ ಕಾದು ನಿಂತಿದ್ದ ಸಂದರ್ಭ ಥಟ್ಟನೆ ಆತನ ನೆನಪಿಗೆ ಬಂತು:

ಢಾಕಾವನ್ನು ಭಾರತದ ಸೇನೆ ವಶಪಡಿಸಿಯಾಗಿತ್ತು. ೧೯೭೧ ಡಿಸೆಂಬರ್ ನಾಲ್ಕನೆಯ ದಿನಾಂಕ. ಹೌದು. ಹದಿಮೂರು ವರ್ಷಗಳ ಬಳಿಕ ಈಗಲೂ ಆ ದಿನ ನೆನಪಿನಲ್ಲಿ ಥಳಥಳಿಸುತ್ತಾ ಇದೆ. ಭಾರತವು ಪಾಕಿಸ್ತಾನ್ ವಾಯುದಳದ ಆಕ್ರಮಣದ ಬಳಿಕ ಪಾಕಿಸ್ತಾನಕ್ಕೆದುರಾಗಿ ಯುದ್ಧ ಘೋಷಿಸಿತ್ತು. ಎರಡು ದಿನಗಳ ಬಳಿಕ ಬಾಂಗ್ಲಾದೇಶಕ್ಕೆ ಸ್ವತಂತ್ರ ರಾಷ್ಟ್ರವೆಂಬ ಅಂಗೀಕಾರವನ್ನೂ ನೀಡಿತ್ತು.

ಪೂರ್ವ ಬಂಗಾಳದ ಜವುಗು ನೆಲಗಳಲ್ಲಿ ಮುಕ್ತಿ ವಾಹಿನಿ ಮತ್ತು ಭಾರತ ಸೇನೆಗಳು ಹಗಲಿಗೆ ಹಗಲು ಹಚ್ಚಿ ಹೋರಾಡಿದ್ದವು. ಆಗ ಅಮೆರಿಕದ ಏಳನೆಯ ನೌಕಾಪಡೆ ಬಂಗಾಳ ಕೊಲ್ಲಿಯತ್ತ ಬರುತ್ತಾ ಇದೆ ಎಂಬ ಸುದ್ದಿ ಒಬ್ಬರ ಹೊರತು ಎಲ್ಲರನ್ನೂ ಗಲಿಬಿಲಿಗೊಳಿಸಿತ್ತು. ಅವರು ಈ ಯುದ್ಧಕ್ಕಾಗಿ ತಿಂಗಳುಗಳಿಂದ ತಯಾರಿ ನಡೆಸುತ್ತಲೇ ಇದ್ದರು. ಅಮೆರಿಕವು ಯಾಹ್ಯಾರಿಗೂ ಚೀನವು ಬುಟ್ಟೊ

ಅವರಿಗೂ ಸಹಾಯ ಮಾಡುತ್ತಿದ್ದ ಸಂಗತಿ ರಾಜತಾಂತ್ರಿಕ ವಲಯಗಳಲ್ಲಿ ಗುಟ್ಟಾಗಿರಲಿಲ್ಲ. ನಾಲ್ಕು ತಿಂಗಳುಗಳ ಹಿಂದೆಯೇ ಇಂದಿರಾಜಿ ರಶ್ಯಾದೊಂದಿಗಿನ ಇಪ್ಪತ್ತು ವರ್ಷಗಳ ಸಹಕಾರ ಒಡಂಬಡಿಕೆಗೆ ಸಹಿ ಹಾಕಿದ್ದರು. ಪೂರ್ವ ಬಂಗಾಳದ ಪದ್ಮಾನದಿಯ ಇದ್ದಂಡೆಗಳಲ್ಲೂ ಒಳಗ್ರಾಮಗಳಲ್ಲೂ ಮುಕ್ತಿವಾಹಿನಿಯ ಸ್ವಯಂಸೇವಕರುಗಳಿಗೆ, ವೇಷ ಮರೆಸಿದ್ದ ಭಾರತ ಯೋಧರು ತಿಂಗಳುಗಳ ಹಿಂದಿನಿಂದಲೂ ಶಸ್ತ್ರಾಸ್ತ್ರಗಳ ಬಳಕೆ ಮತ್ತು ಯುದ್ಧದ ಬಗ್ಗೆ ತರಬೇತಿ ನೀಡುತ್ತಾ ಇದ್ದರು. ತಿಂಗಳುಗಳ ಹಿಂದೆಯೇ ಇಂದಿರಾಜಿ ರಶ್ಯಾ ಮತ್ತಿತರ ಯುರೋಪ್ ರಾಷ್ಟ್ರಗಳ ರಾಜಧಾನಿಗೆ ಭೇಟಿ ಕೊಟ್ಟು, ಬಾಂಗ್ಲಾ ದೇಶ್‌ನಿಂದ ಭಾರತದ ನೆಲಕ್ಕೆ ಬಂದಿದ್ದ ಲಕ್ಷಗಟ್ಟಲೆ ನಿರಾಶ್ರಿತರತ್ತ ಜಾಗತಿಕ ನಾಯಕರುಗಳು ಗಮನ ಸೆಳೆದಿದ್ದರು.

ಅಮೆರಿಕದ ಏಳನೆಯ ನೌಕಾಪಡೆ ಮಹಾಸಾಗರಗಳನ್ನು ಕ್ರಮಿಸಿ ಬಂಗಾಳಕೊಲ್ಲಿಗೆ ತಲಪುವುಪ್ಪರಲ್ಲೇ ಪಾಕಿಸ್ತಾನ್ ಜನರಲ್ ಅಮೀರ್ ಅಬ್ದುಲ್ಲಖಾನ್ ನಿಯಾಜಿ ಭಾರತೀಯ ಸೇನಾಪತಿಗೆ–ಗುರುತೇಜ್ ಬಹದ್ದೂರರ ಪೀಳಿಗೆಯ ಈಚೆ ತುದಿಯವರಾದ ಸರ್ದಾರ್... ಅವರೇ ಇಂದಿರಾಗಾಂಧಿಯ ಸೇನೆಯ ಜನರಲ್ ಆಗಿದ್ದರೆಂಬುದೂ ವಿಧಿಯ ಮತ್ತೊಂದು ಚಮತ್ಕಾರವಾಗಿರಬಹುದು–ಶರಣಾಗಿದ್ದನು.

ಸ್ವತಂತ್ರಗೊಳಿಸಲಾದ ಬಾಂಗ್ಲಾದೇಶವನ್ನು ಅದರ ನಿಜವಾದ ಹಕ್ಕುದಾರನಿಗೆ ಒಪ್ಪಿಸುವ ಧರ್ಮ ನಿರ್ವಹಣೆಗಾಗಿ, ಪಾಕಿಸ್ತಾನದಲ್ಲಿ ಬಂದಿಯಾಗಿದ್ದ ಮುಜಿಬುರ್ ರೆಹಮಾನ್‌ರನ್ನು ಢಾಕಾಕ್ಕೆ ತಲಪಿಸುವುದಾಗಿತ್ತು ಇಂದಿರಾಜಿಯ ಮುಂದಿನ ಕಾರ್ಯಯೋಜನೆ. ಈ ಎಲ್ಲಾ ಕಾರ್ಯಕಲಾಪಗಳ ಸರಮಾಲೆಗಳಿಂದಾಗಿ ಬೇರೆಲ್ಲರಿಗಿಂತಲೂ ಮುಜಿಬುರ್ ರೆಹಮಾನರಿಗೇ ಹೆಚ್ಚು ದಿಗ್ಭ್ರಮೆಯಾಗಿದ್ದಿರಬಹುದು. ಮುಜಿಬುರ್, ತಾನು ಯಾಹ್ಯಾರ ಜೈಲ್‌ನಿಂದ ಜೀವಸಹಿತ ಬಿಡುಗಡೆ ಹೊಂದುವೆನೆಂದಾಗಲೀ ತನ್ನ ಸೋನಾರ್ ಬಾಂಗ್ಲಾದ ಹೊಲಗಳನ್ನೂ ಪದ್ಮಾನದಿಯ ಅಲೆಗಳನ್ನೂ ಇನ್ನೊಮ್ಮೆ ಕಾಣುವೆನೆಂದಾಗಲೀ ಕನಸಿನಲ್ಲೂ ನಿರೀಕ್ಷಿಸಿರಲಿಕ್ಕಿಲ್ಲ. ಹಲವು ತಿಂಗಳುಗಳ ಹಿಂದೆಯೇ ಬಂಧಿತರಾಗಿದ್ದ ಮುಜಿಬುರ್‌ರಿಗೆ ಬಳಿಕ ಬಾಂಗ್ಲಾದೇಶದಲ್ಲಿ ಸಂಭವಿಸಿದ್ದ ಘಟನಾವಳಿಗಳ ಬಗ್ಗೆ ಸ್ಪಷ್ಟವಾಗಿ ಏನೂ ತಿಳಿದಿರಲಿಲ್ಲ.

ಅನಿರೀಕ್ಷಿತ ಬೆಳವಣಿಗೆಗಳು ಉಂಟುಮಾಡಿದ್ದ ದಿಗ್ಭ್ರಮೆಯಿಂದ ಮುಕ್ತನಾಗುವ ಮುನ್ನವೇ ಮುಜಿಬುರ್ ಲಂಡನ್‌ಗೆ ಹೊರಟಿದ್ದ ಬೋಯಿಂಗ್ ವಿಮಾನವನ್ನು ಹತ್ತಿದ್ದರು. ಲಂಡನ್‌ನಿಂದ ಮುಜಿಬುರ್ ಪಾಲಂಗೆ ತಲಪಿದಾಗ ಅಲ್ಲಿ ಅವರನ್ನು ಎದುರುಗೊಳ್ಳಲು ಇಂದಿರಾಗಾಂಧಿ ಕಾದು ನಿಂತಿದ್ದರು. ಆಗ ಏರ್‌ಪೋರ್ಟಿನಲ್ಲಿ ಸಂದಣಿಸಿದ್ದ ಜನರ ಮಧ್ಯದಲ್ಲಿ ತಾನು ಮತ್ತು ಸತ್‌ವೀರ್ ಸಹ ಇದ್ದೆವು ಎಂದು ಕರ್ತಾರ್ ಜ್ಞಾಪಿಸಿಕೊಂಡನು.



ಇಂದಿರಾಗಾಂಧಿಯ ಅತ್ಯಂತ ಆಕರ್ಷಕವಾದ ಮುಖವನ್ನು ತಾನು ಕಂಡದ್ದೂ ಆ ದಿನವೇ. ಅವರ ಜೀವನದ ಅತ್ಯಂತ ಉಜ್ವಲ ಮುಹೂರ್ತವಾಗಿತ್ತು ಅದು. ಸಾವಿನ ದವಡೆಯಿಂದ ರಾಷ್ಟ್ರವೊಂದರ ರಾಜ್ಯಭಾರ ವಹಿಸಿಕೊಳ್ಳಲು ಸಜ್ಜಾಗಿ ಬಂದಿರುವ ಮುಜಿಬುರ್. ಅಸಾಧ್ಯವಾದುದನ್ನು ಸಾಧ್ಯವಾಗಿಸಿದ್ದ ಇಂದಿರಾ ಚಾಚಿದ ಕೈ ಎರಡು ಕೈಗಳಿಂದಲೂ ಹಿಡಿದುಕೊಳ್ಳುವಾಗ ಮುಜಿಬುರರ ಕಣ್ಣುಗಳು ಒದ್ದೆಯಾಗಿದ್ದವು. ಇಂದಿರಾರಲ್ಲಿ ಕಾಣಿಸಿದ್ದು ದೀರ್ಘಕಾಲದ ಅಗಲಿಕೆಯ ಬಳಿಕ ಮರಳಿಬಂದ ಸಹೋದರನನ್ನು ಬರಮಾಡಿಕೊಳ್ಳುವಂಥ ಭಾವನೆಯಾಗಿತ್ತು. ಆ ನಗೆಯ ಆಕರ್ಷಕತೆಯಲ್ಲಿ ತಾನೊಂದು ಮಹಾಕಾರ್ಯ ಸಾಧಿಸಿದ್ದೇನೆ ಎಂಬ ಅಹಂಭಾವವಾಗಲೀ ಜಂಭವಾಗಲಿ ಇರಲಿಲ್ಲ.

ತಾವು ಭಾರತೀಯರು ಎಂಬ ಬಗ್ಗೆ ಹೆಮ್ಮೆ ಮೂಡಿಸಿದ್ದ ಆ ನಿಮಿಷವನ್ನು ಹಂಚಿಕೊಳ್ಳಲು ಬಂದು ತಲಪಿದ್ದ ಲಕ್ಷ ಲಕ್ಷ ಜನರು ಏರ್‌ಪೋರ್ಟ್‌ನಲ್ಲಿ ಕಿಕ್ಕಿರಿದಿದ್ದರು. ಆ ನೂಕುನುಗ್ಗಲಿನಿಂದ ಸತ್‌ವೀರ್‌ನ ಕೈ ಹಿಡಿದುಕೊಂಡು ಮರಳುವಾಗ, ಗಂಟೆಗಟ್ಟಲೆ ಕಾಲ ಕಾದು ನಿಂತಿದ್ದರ ದಣಿವಾಗಲೀ ಹಸಿವೆಯಾಗಲೀ ಇರಲಿಲ್ಲ. ಭಾರತದ ಅರುವತ್ತು ಕೋಟಿ ಜನರಿಗೂ ಹಕ್ಕಿರುವ ಆ ನಿಮಿಷಗಳಿಗೆ ಪ್ರತ್ಯಕ್ಷದರ್ಶಿಯಾಗಲು ಸಾಧ್ಯವಾದ ಬಗೆಗಿನ ಕೃತಾರ್ಥತೆ ಈಗಲೂ ಮನಸ್ಸಿನಲ್ಲಿ ತುಂಬಿಕೊಂಡಿದೆ ಎಂದುಕೊಂಡನು ಕರ್ತಾರ್.

ಆ ನಿಮಿಷದ ಥಳಕಿನ ಆಳಕ್ಕೆ ಇಳಿದು ನಿಂತಾಗ ಸುತ್ತಲೂ ನೀಲಾಕಾಶದಲ್ಲಿ ನಕ್ಷತ್ರಗಳ ನೀಲ ಬೆಳಕೇ ತುಂಬಿತ್ತು.

ಅಣ್ಣ ಹರ್‌ಭಜನ್ ಗಾಯಗೊಂಡು ಮಿಲಿಟ್ರಿ ಹಾಸ್ಪಿಟಲ್‌ಗೆ ದಾಖಲಾಗಿರುವನೆಂದು ಕೇಳಿದಾಗಲೂ ಆ ಮನೋಭಾವಕ್ಕೆ ಕುಂದುಂಟಾಗಲಿಲ್ಲ. ತಿಂಗಳುಗಳ ಬಳಿಕ ಕೃತಕ ಕಾಲು ಸಹಿತ ಕುಟುಂಬಕ್ಕೆ ಮರಳಿದ್ದ ಹರ್‌ಭಜನ್‌ನನ್ನು ಅಪ್ಪಿಕೊಳ್ಳುವಾಗಲೂ ಮನಸ್ಸಿನಲ್ಲಿ ತುಂಬಿದ್ದದ್ದು ಹೆಮ್ಮೆಯಾಗಿತ್ತು: ಆಹ್ಲಾದವಾಗಿತ್ತು: ಅಣ್ಣನ ಹಾಗೆ ತನಗೂ ರಣರಂಗದಲ್ಲಿ ಹೋರಾಡಲು ಸಾಧ್ಯವಾಗಲಿಲ್ಲವಲ್ಲ ಎಂಬ ನಿರಾಸೆಯಾಗಿತ್ತು.

ಅಮ್ಮ ಹರ್ಷಾಶ್ರುವನ್ನು ಸುರಿಸುತ್ತಾ ಹೇಳಿಯೂ ಹೇಳಿದಳು:

ಚೀನಾದ ಹಸಿವೆ ನೀಗಲು ನಿನ್ನ ಅಪ್ಪ ಪ್ರಾಣತ್ಯಾಗವನ್ನೇ ಮಾಡಬೇಕಾಯಿತು. ಪಠಾನ್‌ರಿಗೆ ಹಸಿವೆ ಕಡಿಮೆ ಎಂದೇ ಅನ್ನಿಸ್ತದೆ. ನಿನ್ನ ಒಂದು ಕಾಲಿನಿಂದಲೇ ಅವರು ತೃಪ್ತರಾದರಲ್ಲ!

ರವಿ ಯಾವುದೊ ಕನಸು ಕಾಣುತ್ತಲೆ ಬೆಚ್ಚಿ ಎಚ್ಚೆತ್ತ. ತನ್ನ ಹಗಲು ನಿದ್ರೆ ಯಾವತ್ತೂ ಒಂದು ತಾಸಿಗಿಂತ ಹೆಚ್ಚಾಗುತ್ತಿರಲಿಲ್ಲ. ಆದರೆ, ಇವತ್ತು ಬಹಳ ಹೊತ್ತು ನಿದ್ರೆ ಮಾಡಿದ ಹಾಗೆ ಅನ್ನಿಸುತ್ತದೆ. ಸೆಟಿಯಲ್ಲಿ ಒರಗಿ ಕುಳಿತು ತುಸು ಹೊತ್ತು

ಮಂಪರು ತೆಗೆಯಬೇಕೆಂದಷ್ಟೇ ಅಂದುಕೊಂಡಿದ್ದ. ಆದರೆ, ಕಣ್ಣುಬಿಟ್ಟಾಗ ಸೆಟಿಯ ಉದ್ದಕ್ಕೂ ನಿಡಿದಾಗಿ ಮಲಗಿಕೊಂಡಿದ್ದ. ಯಾರೊ ತನ್ನ ತಲೆಯಡಿಗೆ ದಿಂಬಿರಿಸಿದ್ದಾರೆ: ಕ್ವಿಲ್ಟ್‌ನಿಂದ ಹೊದೆಸಿದ್ದಾರೆ. ಕೋಣೆಯೊಳಗೆ ಮಬ್ಬು ಬೆಳಕಷ್ಟೆ ಇದೆ. ಗಡಿಯಾರದ ಮುಳ್ಳುಗಳು ಹೊಳೆಯುತ್ತಾ ಇವೆ. ಗಂಟೆ ಎಂಟು ದಾಟಿದೆ. ಹಾಗಾದರೆ, ತಾನು ಮೂರು ಗಂಟೆ ಕಾಲವಾದರೂ ನಿದ್ರಿಸಿರಬೇಕು ಎಂದುಕೊಂಡನಾತ.

ದಿವಾನ್‌ನ ಮೇಲೆ ಯಾರೂ ಇಲ್ಲ. ಪಕ್ಕನೆ ಉಪಕಾರ್‌ನ ನೆನಪಾಯಿತು ರವಿಗೆ. ಮನೀಂದರ್ ಮತ್ತು ಸುನೀಂದರ್ ಕೂಡ ಜ್ಞಾಪಕಕ್ಕೆ ಬಂದರು. ಮನೆಯೊಳಗೆ ಸದ್ದು, ಚಲನೆ ಒಂದೂ ಇಲ್ಲ.

ಎದ್ದು ಲೈಟ್ ಹಾಕಿದ. ಮಲಗುವ ಕೋಣೆಯಿಂದ ಮೆಲುದನಿ ಕೇಳಿಸಿತು. ಬಾಗಿಲ ಬಳಿ ಹೋಗಿ ಇಣುಕಿ ನೋಡಿದ. ಮನೀಂದರ್ ಮತ್ತು ಸುನೀಂದರ್ ಹಾವು ಮತ್ತು ಏಣಿ ಆಟ ಆಡುತ್ತಿದ್ದಾರೆ. ಕಾಲಸಪ್ಪಳ ಕೇಳಿ ಅವರು ತಿರುಗಿ ನೋಡಿದರು. ಅವರು ಈಗಲೂ ಹುಡುಗಿಯರ ವೇಷದಲ್ಲೇ ಇದ್ದಾರೆ. ಹರ್‌ಭಜನ್‌ನನ್ನೂ ಕುಟುಂಬದವರನ್ನೂ ವಿಚಾರಿಸಲಿಲ್ಲವಲ್ಲ ಎಂಬ ಅಪರಾಧ ಪ್ರಜ್ಞೆ ರವಿಯನ್ನು ಕಾಡತೊಡಗಿತ್ತು.

ಉಪಕಾರ್ ಎಲ್ಲಿ?

ಅಂಕಲ್ ಹೊರಹೋದರು. ಹೆಚ್ಚು ತಡಮಾಡದೆ ಬರುತ್ತೇನೆ ಅಂತ ಹೇಳಿದ್ದಾರೆ.

ಬಚ್ಚಲು ಕೋಣೆಗೆ ಹೋಗಿ ತಣ್ಣಗಿನ ನೀರಿನಲ್ಲಿ ಮುಖ ತೊಳೆದುಕೊಂಡನಾತ.

ಕಿಚನ್‌ಗೆ ಹೋಗುವಷ್ಟರಲ್ಲಿ ಮನೀಂದರ್ ಮತ್ತು ಸುನೀಂದರ್ ಗ್ಯಾಸ್ ಹಚ್ಚಿ ಕೆಟಲ್ ಒಲೆಮೇಲಿಟ್ಟಿದ್ದರು.

ಅಂಕಲ್, ನಿಮಗೆ ಒಂದಿಷ್ಟು ಚಹಾ ತಯಾರಿಸಲೆ?

ಅವರು ಆದರ ಪೂರ್ವಕ ಕೇಳಿದರು.

"ತಯಾರಿಸಿರಲ್ಲ. ಒಳ್ಳೆ ಕಡಕಾಗಿರ್ಬೇಕು, ಆಯ್ತಾ" ರವಿ ಹೇಳಿದ. ಹುಡುಗರು ಸಂತೋಷದೊಂದಿಗೆ ಕಪ್‌ಗಳನ್ನು ತೊಳೆದು ಒರೆಸಿದ್ದರು. ಅವರು ಪ್ರಬುದ್ಧ ಸ್ತ್ರೀಯರ ಗಾಂಭೀರ್ಯದೊಂದಿಗೇ ಅಡುಗೆ ಮನೆಯ ಹೊಣೆ ವಹಿಸಿಕೊಳ್ಳುವುದನ್ನು ಕಂಡಾಗ ಕುತೂಹಲ ಮೂಡಿತು ರವಿಗೆ.

ರವಿ ಪುನಃ ಬಂದು ಸೆಟಿಯ ಮೇಲೆ ಕುಳಿತುಕೊಂಡು ಟಿ.ವಿ. ಆನ್ ಮಾಡಿದ. ತೀನ್‌ಮೂರ್ತಿ ಪರಿಸರದ ಸುದೀರ್ಘ ಕ್ಯೂ ಅನ್ನು ಸೆರೆಹಿಡಿಯುತ್ತಾ ಇದೆ ಕ್ಯಾಮೆರಾ. ಇಂದಿರಾರ ಮುಖದ ಕ್ಲೋಸ್‌ಅಪ್. ಯಾವುದೋ ರೋಮನ್ ಶಿಲ್ಪವನ್ನು ನೆನಪಿಗೆ ತರುತ್ತಿರುವ ನಾಸಿಕ, ಪುಷ್ಪ ಚಕ್ರಗಳನ್ನಿರಿಸಿ, ಮೌನವಹಿಸುತ್ತಿರುವ ವಿ.ಐ.ಪಿ.ಗಳು. ಕೆಲವರ ಕಣ್ಣುಗಳು ತುಂಬಿ ಹರಿಯುತ್ತಾ ಇವೆ. ಮೃತದೇಹದ



ಕೆನ್ನೆಯ ಮೇಲೆ ಬಿದ್ದುಕೊಂಡಿದ್ದ ಎರಡು ಹೂವಿನೆಸಳುಗಳನ್ನು ತೆಗೆದೆಸೆದು ಸ್ವಂತ ಕರವಸ್ತ್ರದಿಂದ ಆ ಮುಖವನ್ನೊರೆಸುತ್ತಿರುವ ಸೋನಿಯಾ.

ಹೊರಗೆ ಜನಜಂಗುಳಿಯ ನೂಕುನುಗ್ಗಲು.

ಯಾರೊ ಬಾಗಿಲು ಬಡಿದರು.

ಸುನೀಂದರ್ ಮತ್ತು ಮನೀಂದರ್ ಧಾವಿಸಿ ಹೋಗಿ ಬಾಗಿಲು ತೆರೆದರು: ಉಪಕಾರ್‌ಸಿಂಗ್ ಇರಬಹುದು ಎಂದುಕೊಂಡು.

ಆದರೆ ಬಂದಿರುವುದು ಬೇರೆ ಯಾರೋ. ಸುನೀಂದರ್ ಮತ್ತು ಮನೀಂದರ್ ಬಾಗಿಲ ಬಳಿಯಿಂದಲೆ ಕೂಗಿ ಹೇಳಿದರು.

ಅಂಕಲ್ ಯಾರೋ ಆಂಟಿ ಬಂದಿರುವರು.

ರವಿ ಎದ್ದು ಬಾಗಿಲ ಬಳಿಗೆ ಬಂದ.

ಮೊದಲು ಗುರುತು ಸಿಕ್ಕಲಿಲ್ಲ.

ದರ್ಶನ್!

ರವಿಯ ತುಟಿಗಳು ಪಿಸುಗುಟ್ಟಿದವು.

ದರ್ಶನ್ ಮುಖ ತಗ್ಗಿಸಿ ಒಳಗೆ ಪ್ರವೇಶಿದಳು.

ಅವಳು ಸಂಪೂರ್ಣ ಕಂಗಾಲಾಗಿರುವಳು. ತುಟಿಗಳು ದಪ್ಪಗೆ ಊದಿಕೊಂಡಿದ್ದವು. ಕಣ್ಣುಗಳು ಒದ್ದೆಯಾಗಿವೆ. ಏನು ಮಾಡಬೇಕೆಂದು ಹೊಳೆಯದೆ ರವಿ ಒಂದು ಕ್ಷಣ ಅಳುಕುತ್ತ ನಿಂತುಕೊಂಡ.

ಮೊದಲು ಚೇತರಿಸಿಕೊಂಡವರು ಸುನೀಂದರ್ ಮತ್ತು ಮನೀಂದರ್. ಅವರು ಒಂದು ಲೋಟ ನೀರು ಹಿಡಿದುಕೊಂಡು ಅವಳ ಬಳಿಗೆ ಹೋದರು. ಅವಳು ನೀರು ಇಸಿದುಕೊಂಡು ಒಂದೇ ಬಾರಿ ಹೀರಿ ಮುಗಿಸಿದಳು. ಯಾರೂ ಏನನ್ನೂ ಪ್ರಶ್ನಿಸಲಿಲ್ಲ. ಎಲ್ಲವನ್ನೂ ಅವಳ ಕಣ್ಣುಗಳಲ್ಲೆ ಓದಬಹುದಾಗಿತ್ತು.

* * *

## ಅಧ್ಯಾಯ ೧೮

# ಇಂದುವಿನ ಇಂದಿರಾ ನೆನಪುಗಳು

ಟ್ರೈನ್ ಪುನಃ ನಿಂತಿತ್ತು. ಇಂದು ಲೋವರ್ ಬರ್ತ್‌ನಲ್ಲಿ ತಲೆದಿಂಬನ್ನು ಗಾಜಿನ ಕಿಟಕಿಗೊರಗಿಸಿ ಕುಳಿತು ದೂರಕ್ಕೆ ದಿಟ್ಟಿಸುತ್ತಾ ಯೋಚಿಸಿದಳು. ಮಂದ ಬೆಳದಿಂಗಳಿನಲ್ಲಿ ಮಂಪರಿಗೊಳಗಾದಂತೆ ಬಿದ್ದುಕೊಂಡಿರುವ ಕೊೖಲು ಮುಗಿದ ಹೊಲಗದ್ದೆಗಳು ದೃಷ್ಟಿಗೆ ನಿಲುಕದಷ್ಟೂ ದೂರಕ್ಕೆ ಹಬ್ಬಿಕೊಂಡಿವೆ. ಅನಂತತೆ ಯಾವತ್ತೂ ತನಗೆ ಪ್ರಲೋಭನೆಯೊಡ್ಡುತ್ತಿದೆ. ಸಮುದ್ರ ತೀರದ ಒದ್ದೆ ಮರಳಿನಲ್ಲಿ ಕಚಗುಳಿ ಉಂಟುಮಾಡುವ ಅಲೆಮಾಲೆಗಳ ನಗುವ ಬೆರಳುಗಳ ನೇವರಿಕೆ ಸವಿಯುತ್ತ ಹೆಚ್ಚು ಹೊತ್ತು ನಿಲ್ಲಲು ತನಗೆ ಸಾಧ್ಯವಾಗುತ್ತಿರಲಿಲ್ಲ. ದಿಗಂತವು ಸಮುದ್ರವನ್ನಾಲಿಂಗಿಸುವತ್ತ ನಡೆದು ಹೋಗಲು ಹಾತೊರೆಯುತ್ತಿತ್ತು ತನ್ನ ಹೃದಯ. ಆಗ ಕಾಲುಗಳನ್ನು ಹದ್ದುಬಸ್ತಿನಲ್ಲಿರಿಸಲು ಅಸಾಮಾನ್ಯ ಸಂಯಮ ಬೇಕಾಗುತ್ತದೆ. ಸುತ್ತಲೂ ಹಬ್ಬುತ್ತಿರುವ ಮರಳ್ಗಾಡಿನ ನಿರ್ಜನತೆಯಲ್ಲಿ ತನ್ನನ್ನು ಕಳಕೊಳ್ಳಬೇಕೆಂದು ಅನೇಕ ವೇಳೆ ಹಂಬಲಿಸಿದ್ದಿದೆ. ಎಂದಾದರೊಮ್ಮೆ ತಾನು ಸಹ ಮೌನದಲ್ಲಿ ಕರಗಿ ಓಡಾಡಬೇಕು: ದಿಕ್ಕುದೆಸೆ ಗೊತ್ತಿಲ್ಲದೆ, ಯಾರೊಬ್ಬರೂ ಜತೆಗಿರದೆ.

ಒಲವಕೋಡ್‌ನಿಂದ ಟ್ರೈನ್ ನಿಗದಿತ ವೇಳೆಗೇ ಹೊರಟಿದೆ. ಅವಳು ವಾಚ್ ನೋಡಿ ಖಚಿತಪಡಿಸಿದಳು. ಹೌದು. ಮೊನ್ನೆ ಅಕ್ಟೋಬರ್ ೩೦ರಂದು ರಾತ್ರಿ ಹತ್ತು ಗಂಟೆಗೆ ಟ್ರೈನ್ ಹೊರಟದ್ದು. ಈಗ ಗಂಟೆ ಹತ್ತು ಕಳೆಯಿತು. ಎರಡು ತಾಸುಗಳೊಳಗೆ ನವೆಂಬರ್ ಒಂದನೆಯ ತೇದಿ. ಕಾಲದ ಗರ್ತದಲ್ಲೆಲ್ಲೋ ಒಂದು ಹನಿಯಾಗಿ ಲೀನವಾಗುತ್ತದೆ. ಆರು ತಾಸುಗಳಿಗೂ ಮುನ್ನವೇ ಟ್ರೈನ್ ನಿಜಾಮುದ್ದೀನ್‌ಗೆ ತಲಪಬೇಕಾಗಿತ್ತು. ಆದರೆ ಈಗ ಭೋಪಾಲ್‌ಗೂ ತಲಪಿಲ್ಲ. ಇಟಾರ್ಸಿ ಬಿಟ್ಟ ಬಳಿಕ ಜಗ್ಗಿ ಎಳೆಯುತ್ತ ಟ್ರೈನ್ ಸಾಗುತ್ತಿದ್ದದ್ದು ತೀರಾ ನಿಧಾನವಾಗಿ. ಮುಂದೆ ಯಾವುದೊ ಹೊತ್ತಿನಲ್ಲಿ ಚಲನೆಯೇ ನಿಂತುಬಿಟ್ಟಿತ್ತು.

ಟ್ರೈನ್ ವಿಜಯವಾಡದ ತನಕ ಹೆಚ್ಚು ಕಡಿಮೆ ಸಮಯಕ್ಕೆ ಸರಿಯಾಗಿಯೇ ಓಡಿಕೊಂಡಿತ್ತು. ಇಂದಿರಾಜಿಗೆ ಗುಂಡೇಟು ಬಿದ್ದ ಸುದ್ದಿ ಗೊತ್ತಾದದ್ದು ವಾರಂಗಲ್ ತಲಪಿದ್ದಾಗ. ಮಡಿದರೆಂದೂ ಇಲ್ಲವೆಂದೂ ಊಹಾಪೋಹಗಳು. ಟ್ರೈನ್‌ನಲ್ಲಿದ್ದವರು



ಟ್ರಾನ್ಸಿಸ್ಟರ್‌ನ ಏರಿಯಲ್ ಹೊರಗೆ ಹಾಕಿ ವಾರ್ತೆಗಾಗಿ ನಾಬ್ ತಿರುಗಿಸುತ್ತಲೇ ಇದ್ದರು. ಆಕಾಶವಾಣಿಯ ಎಲ್ಲಾ ಕೇಂದ್ರಗಳು ನಿಲಯದ ಕಲಾವಿದರ ಆಲಾಪನೆಗಳಿಂದಲೂ ಶ್ರೋತೃಗಳು ಮೆಚ್ಚಿದ್ದ ಚಿತ್ರಗೀತೆಗಳಿಂದಲೂ ಶಬ್ದಭರಿತವಾಗಿದ್ದವು. ರಜೆ ಮುಗಿಸಿ ಹಿಂತಿರುಗುತ್ತಿದ್ದ ಏರ್‌ಫೋರ್ಸ್‌ನವನೊಬ್ಬನ ಟ್ರಾನ್ಸಿಸ್ಟರ್ ಕೊನೆಗಾದರೂ ಬಿ.ಬಿ.ಸಿ. ನ್ಯೂಸ್ ದೊರಕಿಸುವುದರಲ್ಲಿ ಯಶಸ್ವಿಯಾಯಿತು.

ಹೌದು, ಇಂದಿರಾಜಿ ಕೊಲೆಯಾಗಿರುವರು. ಆಕೆ ತನ್ನ ಜೀವರಕ್ಷಣೆಯ ಹೊಣೆ ಹೊತ್ತಿದ್ದ ಇಬ್ಬರು ಸಿಕ್ಖ್ ಯುವಕರ ಕೋವಿಗಳಿಗೆ ಬಲಿಯಾಗಿರುವರು.

ಮೊದಲು ನಂಬಲಿಕ್ಕಾಗಲಿಲ್ಲ. ಬಿ.ಬಿ.ಸಿ.ಯವರಿಗೆ ಈ ವಿಚಾರದಲ್ಲಿ ತಪ್ಪು ಸಂಭವಿಸಿದ್ದಾಗಿರಲಿ ಎಂದು ಪ್ರಾರ್ಥಿಸಿಕೊಂಡೆ. ಆದರೂ ಮನದಾಳದಲ್ಲಿ, ವಾರ್ತೆ ಸರಿಯಿರಬಹುದೆಂದೇ ಅನ್ನಿಸಿತ್ತು. ತನ್ನ ಹೆಸರಷ್ಟೇ ಅಲ್ಲ ಜನನ ತೇದಿ ಕೂಡ ಆಕೆಯದ್ದೆ–ನವೆಂಬರ್ ೧೯. ಆದ್ದರಿಂದಲೇ ಅಲ್ಲವೆ ಅಪ್ಪ ತನಗೆ ಆ ಹೆಸರಿಟ್ಟಿದ್ದು. ಚಿಕ್ಕಂದಿನಲ್ಲೆ ತಾನು ಇಂದಿರಾಗಾಂಧಿಯನ್ನು ಹೆಚ್ಚು ಕಡಿಮೆ ಅಂಧವಾಗಿಯೇ ಆರಾಧಿಸುತ್ತ ಬಂದಿದ್ದೆ. ಕಾಲೇಜ್‌ನಲ್ಲಿ ಕಲಿಯುವಾಗ ಗೆಳತಿಯರಲ್ಲಿ ಅನೇಕ ಮಂದಿ ಭಾರತದ ಕ್ಷಿತಿಜದಲ್ಲಿ ವಸಂತದ ಸಿಡಿಲ ಗುಡುಗಿಗಾಗಿ ಕಿವಿ ನಿಮಿರಿ ಕುಳಿತಿದ್ದರು. ಆಗಿನ ದಿನಗಳಲ್ಲಿ ಪ್ರಾಯಶಃ ತನ್ನ ಓರಗೆಯ ಎಲ್ಲಾ ಯುವ ಮನಸ್ಸುಗಳೂ ಕ್ರಾಂತಿಯ ಕನಸುಗಳನ್ನು ಎದೆಯಲ್ಲಿರಿಸಿ ಲಲ್ಲೆಗೈದಿರಬಹುದು. ಕ್ರಾಂತಿಕಾರಿಗಳನ್ನು ಎದುರ್ಗೊಳ್ಳಲಿಕ್ಕೂ ಕ್ರಾಂತಿ ಚಳವಳಿಗಳ ಪೋಷಕರಾದ ಬುದ್ಧಿಜೀವಿಗಳಿಗೆ ಹಾರಾರ್ಪಣೆ ಮಾಡಲಿಕ್ಕೂ ಎಷ್ಟೊಂದು ಗಜಿಬಿಜಿಯಿರಲಿಲ್ಲ ಅಂದಿನ ದಿನಗಳಲ್ಲಿ! ತಾನು ಮಾತ್ರ ಆಗಲೂ ಬೇರೆಯಾಗಿಯೇ ಉಳಿದುಕೊಂಡಿದ್ದೆ. ಅಷ್ಟೇ ಅಲ್ಲ ಇಂದಿರಾಜಿ ಎಮರ್ಜೆನ್ಸಿ ಘೋಷಿಸಿದಾಗ, ಆಕೆ ಮಾಡಿದ್ದು ಸರಿಯೆಂದೇ ನನಗನ್ನಿಸಿದೆ. ತುಸುವಾದರೂ ಶಿಸ್ತನ್ನು ಭಾರತದ ನಾಗರಿಕರು, ಮುಖ್ಯವಾಗಿ ವಾರ್ತಾ ಮಾಧ್ಯಮಗಳು ಮತ್ತು ಬುದ್ಧಿಜೀವಿಗಳು ರೂಢಿಸಿಕೊಳ್ಳಬೇಕಾಗಿದೆ ಎಂದೂ ತನಗನ್ನಿಸಿದೆ. ಎಮರ್ಜೆನ್ಸಿ ಕಾಲದ ಭಯಾನಕ ಘಟನೆಗಳಲ್ಲಿ ಆಕೆಯ ಕೈಗಳಿಗೆ ಪಾಲಿರಲಿಲ್ಲವೆಂದೂ ನಂಬಲು ತಾನು ಯತ್ನಿಸಿದ್ದೆ. ಹೌದು. ಒಂದು ರೀತಿಯ ಆತ್ಮೀಯ ಸಂಬಂಧವನ್ನೇ ಆಕೆಯೊಂದಿಗೆ ತಾನು ಹೊಂದಿದ್ದೆ. ಸ್ವಂತ ಕುಟುಂಬದವರನ್ನು ಇತರರು ಆಕ್ಷೇಪಿಸುವಾಗ ಅನ್ನಿಸುವ ಅದೇ ಕಿರಿಕಿರಿ, ಪತ್ರಿಕೆಗಳು ಆಕೆಯನ್ನು ಶಿಲುಬೆಗೇರಿಸುವಾಗಲೆಲ್ಲ ತನಗನ್ನಿಸುತ್ತಾ ಇತ್ತು.

ಯಾಕೆ ಆ ಯುವಕರು ಈ ಕ್ರೂರ ಕೃತ್ಯವೆಸಗಿದ್ದು? ಈ ಭೂಮಿಯಲ್ಲಿ ಇಂದಿರಾ ಎಂಬ ಓರ್ವ ಸ್ತ್ರೀ ಜೀವಿಸುವುದರಿಂದ, ಆಕೆ ಭಾರತದ ಪ್ರಧಾನಿಯಾಗಿದ್ದರು ಕೂಡ ಸಿಕ್ಖರಿಗೆ ಲಾಭವಲ್ಲದೆ ನಷ್ಟವೇನೂ ಆಗಲಿಲ್ಲ: ಆಗುತ್ತಿರಲಿಲ್ಲ. ಸ್ವರ್ಣಮಂದಿರದಲ್ಲಿ ಸೇನೆ ಪ್ರವೇಶ ಮಾಡಿರುವುದು ನಿಜವೇ. ಆದರೆ ಭಿಂದ್ರನ್‌ವಾಲ ಮತ್ತು ಸಂಗಡಿಗರು

ಸ್ವರ್ಣಮಂದಿರವನ್ನು ಒಂದು ಶಸ್ತ್ರಾಗಾರವನ್ನಾಗಿ ಪರಿವರ್ತಿಸಿದ್ದರು. ಇಂದಿರಾರ ಬದಲು ಬೇರೆ ಯಾರಾದರೂ ಆಗಿದ್ದರೆ ಎಷ್ಟೋ ಹಿಂದೆಯೇ ಭಯೋತ್ಪಾದಕರನ್ನು ಬಗ್ಗುಬಡಿಯುತ್ತಿದ್ದರು. ಸ್ತ್ರೀ ಹೃದಯಕ್ಕೆ ಸಹಜವಾದ ಮಾರ್ದವತೆ, ಉಗ್ರರನ್ನು ಅಟ್ಟಿ ಓಡಿಸುವುದರಲ್ಲಿ ತುಸು ಅಸಡ್ಡೆಗೆ ಕಾರಣವಾಗಿಲ್ಲವೇ ಎಂದು ಶಂಕಿಸಬೇಕಾಗಿದೆ. ಅಮೆರಿಕ ಮತ್ತು ಚೀನಾದ ಬೆಂಬಲ ಹೊಂದಿದ್ದ ಪಾಕಿಸ್ತಾನದ ಬಿಗಿಮುಷ್ಟಿಯಿಂದ ಬಾಂಗ್ಲಾದೇಶವನ್ನು ವಿಮೋಚನೆಗೊಳಿಸಿದ್ದ ಇಂದಿರಾ ಎಂಬ ದುರ್ಗೆಗೆ ಪಂಜಾಬ್ ಅಷ್ಟುದೊಡ್ಡ ಅಗ್ನಿಪರೀಕ್ಷೆಯಾಗಬೇಕಾಗಿರಲಿಲ್ಲ.

ಇಂದಿರಾಜಿಯನ್ನು ಹತ್ತಿರದಲ್ಲಿ ನಿಂತು ನೋಡಲಿಕ್ಕೂ ಆ ವ್ಯಕ್ತಿತ್ವದ ವೈಶಿಷ್ಟ್ಯವನ್ನು ಪ್ರತ್ಯಕ್ಷ ಕಂಡುಕೊಳ್ಳಲಿಕ್ಕೂ ಎಷ್ಟೊಂದು ಹಂಬಲಿಸುತ್ತಿದ್ದೆ ತಾನು. ಮೂರು ವರ್ಷಗಳ ಹಿಂದೆ ತನ್ನ ಆ ಹಂಬಲ ಈಡೇರಿತ್ತು. ಅಂದು ತಾನು ಒಳಗೊಂಡ ಎಂ.ಎಸ್‌ಸಿ. ಅಧ್ಯಯನ ತಂಡ ಒಂದು ಅಖಿಲ ಭಾರತ ಪ್ರವಾಸದ ಯೋಜನೆ ರೂಪಿಸಿತ್ತು. ಮದ್ರಾಸ್, ಹೈದರಾಬಾದ್, ಮುಂಬಯಿ, ಆಗ್ರಾ, ದೆಹಲಿ, ಕಾಶ್ಮೀರ್ ಮುಂತಾದವುಗಳಾಗಿದ್ದವು ಪ್ರವಾಸಕ್ಕೆ ಆಯ್ದ ಮುಖ್ಯ ಪ್ರದೇಶಗಳು. ದೆಹಲಿಯಲ್ಲಿ ತಾನು ನೋಡಬಯಸಿದ್ದು ಕೆಂಪುಕೋಟೆ, ಕುತುಬ್‌ಮಿನಾರ್, ರಾಜ್‌ಘಾಟ್– ಯಾವುದೂ ಅಲ್ಲ. ಹೌದು. ಇಂದಿರಾಜಿಯೇ ಆಗಿದ್ದರು ತನ್ನ ಮುಖ್ಯ ಆಕರ್ಷಣೆ. ಆಗ ದೆಹಲಿಯಲ್ಲಿ ಚಳಿಗಾಲ ಶುರುವಾಗಿತ್ತಷ್ಟೇ. ಇಂದಿರಾಜಿಯ ಭೇಟಿಗಾಗಿ ದೆಹಲಿಯಲ್ಲಿ ಒಂದು ದಿನ ಹೆಚ್ಚಿಗೆ ತಂಗಬೇಕಾಯಿತು. ಇದು, ಜತೆಗೆ ಬಂದಿದ್ದ ಅಧ್ಯಾಪಕರುಗಳಿಗೂ ಇತರ ಸಂಗಡಿಗರಿಗೂ ಒಂದಿಷ್ಟೂ ಸಮ್ಮತವಿರಲಿಲ್ಲ. ತಾನು ಮಾತ್ರ ದೃಢವಾಗಿ ಹೇಳಿದ್ದೆ: ದೆಹಲಿಗೆ ತಲಪಿದ ಬಳಿಕ ಇಂದಿರಾಜಿಯನ್ನು ಕಾಣದೆ ಹಿಂತಿರುಗುವುದಿಲ್ಲ. ಅದಕ್ಕಾಗಿ ಅಗತ್ಯ ಬಿದ್ದರೆ ಕಾಶ್ಮೀರ್ ಪ್ರವಾಸವನ್ನು ಕೈಬಿಡಲೂ ತಾನು ಸಿದ್ಧಳಿದ್ದೆ. ಕೊನೆಗೆ ತಂಡದವರೆಲ್ಲರೂ ತನ್ನ ಆಗ್ರಹವನ್ನು ಒಪ್ಪಿಕೊಂಡರು.

ತನ್ನ ಅದೃಷ್ಟದಿಂದಲೊ ಎಂಬಂತೆ ಭೇಟಿಗೆ ಅವಕಾಶವಿತ್ತದ್ದು ತನ್ನ ಮತ್ತು ಅವರ ಜನ್ಮದಿನವಾದ ನವೆಂಬರ್ ೧೯ರಂದು. ಬೆಳಗೆ ೯.೧೫ಕ್ಕೆ ಅವರ ನಿವಾಸದಲ್ಲಾಗಿತ್ತು ಭೇಟಿ. ಹತ್ತು ನಿಮಿಷವಷ್ಟೇ ಭೇಟಿಗೆ ಸಮಯಾವಕಾಶ ನೀಡಿದ್ದರು. ಜನ್ಮದಿನ ತಾನೆ? ತನ್ನ ಸಂಗಡಿಗರೆಲ್ಲ ಕಂಬಳಿ ಹೊದ್ದಿಕೆಗಳೊಳಗೆ ಮುದುಡಿ ಮಲಗಿದ್ದರು. ತಾನು ಮಾತ್ರ ಮುಂಜಾನೆಯೇ ಎದ್ದು ಮಿಂದು ಒದ್ದೆ ಕೂದಲನ್ನು ತುದಿಗಂಟಿಕ್ಕಿ ಬೆನ್ನ ಮೇಲೆ ಹರವಿಕೊಂಡೆ. ಹಣೆಯಲ್ಲಿ ಗಂಧದಿಂದ ಒಂದು ಅಡ್ಡನಾಮ ಹಾಕಿಕೊಂಡೆ. ಹಿಂದಿನ ದಿನ ಶಂಕರ್ ಮಾರ್ಕೆಟ್‌ನಿಂದ ಕೊಂಡುಕೊಂಡಿದ್ದ ಕಾಟನ್ ಸೀರೆ ಉಟ್ಟುಕೊಂಡೆ.

ಉಳಿದವರು ಏಳುವಷ್ಟರಲ್ಲಿ ತಾನು ಸಿದ್ಧಳಾಗಿದ್ದೆ, ಡವಗುಟ್ಟುವ ಹೃದಯದೊಂದಿಗೆ. ಆ ನಿಮಿಷಕ್ಕಾಗಿ ಕಾಯುತ್ತ ಅವರ ನಿವಾಸದ ಹೊರಗಿನ



ಹಸುರು ಹುಲ್ಲು ಹಾಸಲಾದ ಲೇನ್‌ನಲ್ಲಿ ಬೆತ್ತದ ಕುರ್ಚಿ ಮೇಲೆ ನಾವು ಕಾದುಕುಳಿತೆವು. ನಿಗದಿತ ವೇಳೆ ದಾಟಿದರೂ ಅವರು ಬರಲಿಲ್ಲ. ೯.೨೦, ೯.೨೫... ಕೊನೆಗೂ ಅವರು ಬಂದರು. ಸಾಸಿವೆ ಹೂವಿನ ಬಣ್ಣದ ಒಂದು ರೇಶಿಮೆ ಸೀರೆಯಾಗಿತ್ತು ಅವರು ಉಟ್ಟುಕೊಂಡದ್ದು. ಬಹುಕಾಲದ ಪರಿಚಯ ಭಾವದೊಂದಿಗೆ ತಮ್ಮ ಸಹಜವಾದ ಅರಳುನಗೆಯೊಂದಿಗೆ ಅವರು ನಮ್ಮ ನಡುವೆ ಕುಳಿತು ಒಬ್ಬೊಬ್ಬರನ್ನೆ ಪರಿಚಯ ಮಾಡಿಕೊಂಡರು. ತನ್ನ ಹೆಸರು ಹೇಳಿದಾಗ, ಅವರು ಹಣೆಯ ಮೇಲಿನ ಗಂಧದ ನಾಮವನ್ನು ಗಮನಿಸಿದರು. ಬಳಿಕ ಅರ್ಧ ತಮಾಷೆಯಾಗಿ ಹೇಳಿದರು: ಡೋಂಟ್ ಟೆಲ್ ಮಿ ದಾಟ್, ಟುಡೇ ಈಸ್ ಯುವರ್ ಬರ್ತ್‌ಡೇ ಟೂ! ನನ್ನ ಹುಟ್ಟುದಿನ ಕೂಡ ಇವತ್ತೇ ಎಂದು ಹೇಳಿದಾಗ ಅವರು, ನನ್ನೆರಡು ಕೈಗಳನ್ನೂ ಸೇರಿಸಿ ಹಿಡಿದು, ಮೆನಿ, ಮೆನಿ ಹ್ಯಾಪಿ ರಿಟರ್ನ್ಸ್ ಎಂದರು.

ಅನಂತರ ಅವರು, ನಾವು ಭೇಟಿ ಕೊಟ್ಟ ಸ್ಥಳಗಳ ಬಗ್ಗೆ ವಿಚಾರಿಸಿದರು. ನಾವು ಹೈದರಾಬಾದ್ ಸಂದರ್ಶಿಸಿರುವುದಾಗಿ ಹೇಳಿದಾಗ, ಸಾಲಾರ್ ಜಂಗ್ ಮ್ಯೂಸಿಯಮ್ ನೋಡಿದ್ದೀರಾ? ಚಾರ್ಮಿನಾರ್ ನೋಡಿದ್ದೀರಾ? ಎಂದೆಲ್ಲ ಪ್ರಶ್ನಿಸಿದರು. ಆಫ್‌ಕೋರ್ಸ್, ಆಫ್‌ಕೋರ್ಸ್ ಎಂದು ತನ್ನ ಸಂಗಡಿಗರು ಉರುಹೊಡೆಯುತ್ತಲೇ ಇದ್ದರು.

ವಿಜ್ಞಾನದ ವಿದ್ಯಾರ್ಥಿಗಳಾದ ನಾವು ಆದರ ಮತ್ತು ತುಸು ಅಪರಾಧ ಪ್ರಜ್ಞೆಯೊಂದಿಗೇ ಇಂದಿರಾಜಿಯ ಮಾತುಗಳಲ್ಲಿ ತಲ್ಲೀನರಾದೆವು. ಹೈದರಾಬಾದ್‌ನ ಟೂರಿಸ್ಟ್ ಕೇಂದ್ರಗಳಲ್ಲಿ ನಾವು ಒಂದಷ್ಟು ಅಲೆದಾಡಿದ್ದೆವಾದರೂ ಆ ನಗರದ ಸ್ಥಳಪುರಾಣ ತಿಳಿಯಲು, ಅತ್ಯಂತ ಕಾರ್ಯಬಾಹುಳ್ಯವಿರುವ ಪ್ರಧಾನಿಯ ಬಳಿಗೇ ಬರಬೇಕಾಯಿತು! ತಂದೆಯಿಂದ ಚರಿತ್ರೆಯ ಪ್ರಥಮ ಪಾಠಗಳನ್ನು ಕಲಿತಿದ್ದ ಇಂದಿರಾಜಿಯ ಚರಿತ್ರೆಯ ಬಗೆಗಿನ ಅರಿವು ನಮ್ಮನ್ನು ಸೋಜಿಗಗೊಳಿಸಿತ್ತು.

ಚರಿತ್ರೆ ಬಿಟ್ಟು ಹೈದರಾಬಾದ್‌ನ ಆಹಾರದ ವೈಶಿಷ್ಟವಾಗಿತ್ತು ಮುಂದಿನ ಸಂಭಾಷಣೆಯ ವಸ್ತು. ಯಾವ ರಾಜ್ಯವನ್ನೇ ಆದರೂ ಪೂರ್ಣವಾಗಿ ಅರ್ಥ ಮಾಡಿಕೊಳ್ಳಬೇಕಾದರೆ ಮೊದಲು ಅಲ್ಲಿನ ಅಡುಗೆಗಳ ಪರಿಚಯ ಮಾಡಿಕೊಳ್ಳಬೇಕು. ಅವರೆಂದರು: ಆವಕ್ಕ ಮತ್ತು ತೋಕುಗಳಿಂದಾರಂಭಿಸಿ ಗೋಂಗುರುವಿನ ಮೂಲಕ ಹೈದರಾಬಾದ್‌ನ ಸ್ವಂತದ್ದಾದ ಕಚ್ಚಿ ಬಿರಿಯಾನಿಯತ್ತ ಅದು ಮುಂದುವರಿಯಿತು. ಹೈದರಾಬಾದ್‌ನಲ್ಲಿ ಒಮ್ಮೆ ಕಚ್ಚಿ ಬಿರಿಯಾನಿಯ ರುಚಿಯರಿತವರು ಅದನ್ನು ತಿನ್ನಲಿಕ್ಕಾಗಿ ಪುನಃ ಪುನಃ ಮರಳಿ ಬರುವರೆಂಬ ಒಂದು ನುಡಿಕಟ್ಟು ಇದೆ. ಅವರು ತಮಾಷೆಯಾಗಿ ಪ್ರಶ್ನಿಸಿದರು: ನೀವು ಅದರ ರುಚಿ ನೋಡಲಿಲ್ಲವೆಂದು ಭಾವಿಸಲೆ? ಕೇರಳದಿಂದ ಹೈದರಾಬಾದ್ ಇರುವುದು ದೂರದಲ್ಲೆ ತಾನೆ? ಯಾವಾಗಲೂ ಅಲ್ಲಿಗೆ ಹೋಗುವುದು ಸುಲಭವಲ್ಲವಲ್ಲ. ಹೈದರಾಬಾದ್‌ನ ಸಿಹಿತಿಂಡಿಗಳಲ್ಲಿ ಬಾದಾಮಿ ಜಾಲಿ ಮತ್ತು

ಅಶ್ರಾಫಿ ಬಹಳ ವಿಶಿಷ್ಟವಾದವುಗಳು. ಕುಂಕುಮ ಕೇಸರಿ ಹಾಕಿ ಪರಿಮಳ ಬರಿಸಿದ ಅಶ್ರಾಫಿ ಹೈದರಾಬಾದ್ ನಾಗರಿಕರ ಆಮಿಷದ ಖಾದ್ಯವಾಗಿದೆ. ಹೈದರಾಬಾದ್‌ನಲ್ಲಿ ಮದುವೆ ಭೋಜನ ಆರಂಭವಾಗುವುದು ಲಕ್‌ಮಿಯೊಂದಿಗೆ. ಸಣ್ಣಗೆ ಕತ್ತರಿಸಿದ ಮಾಂಸದಿಂದ ತಯಾರಿಸಿರುವ ಸಮೋಸ. ಅದರ ಬೆನ್ನಲ್ಲೆ ಬರುತ್ತದೆ ದಂಕಾ ಮುರ್ಗಾ. ಸಮೀಪದಲ್ಲೆ ಇರುತ್ತದೆ ಲಗನ್ ಕೆ ಕಬಾಬ್–ಮಸಾಲೆ ಸ್ಟಫ್ ಮಾಡಿ ಹುಣಿಸೆ ನೀರಿನಲ್ಲಿ ಬೇಯಿಸಿದ ಕಿರುಬದನೆ. ನಾಲಗೆಗೆ ಚುರುಕುಂಟು ಮಾಡಲು ಮಿರ್ಚಿ ಕೀ ಬುಲಾಲ್. ಅಲ್ಲವಾದರೆ ಟೊಮ್ಯಾಟೋ ಕಿ ಕಾಲ್. ಬಳಿಕ ಬಿರಿಯಾನಿ. ಡೆಸರ್ಟಾಗಿ ಅಸಂಜಹೀ ಮೀಠಾ. ಅಲ್ಲವಾದರೆ ಕುಲ್ಫಿಮಲಾಯ್.

ಈ ಭೋಜನ ಪುರಾಣದ ನಡುವೆ ಎರಡು ಬಾರಿಯಾದರೂ ಧಾವನ್ ಬಂದು ವೇಳೆಯ ಬಗ್ಗೆ ಇಂದಿರಾಜಿಗೆ ನೆನಪು ಮಾಡಿದ್ದರು.

ಅವರು ಎದ್ದು ಕೈ ಮುಗಿದು ತುಸು ಅಪರಾಧ ಪ್ರಜ್ಞೆಯೊಂದಿಗೇ ಹೇಳಿದ್ದರು: ಕ್ಷಮಿಸಿ, ನಿಮ್ಮ ಜತೆ ಹೆಚ್ಚು ಹೊತ್ತು ಕಳೆಯಲು ನನ್ನ ಸಮಯದ ಯಜಮಾನಿ ನಾನಲ್ಲ. ಮುಂದೆಯೂ ಕಾಣುವ; ಎಲ್ಲಾದರೂ; ಯಾವಾಗಲಾದರೂ.

ಅವರು ಹಿಂತಿರುಗಿ ನಡೆದರು. ಬಳಿಕ ಥಟ್ಟನೆ ಏನೋ ಜ್ಞಾಪಿಸಿಕೊಂಡವರಂತೆ ನಿಂತರು. ಪಕ್ಕದಲ್ಲೆ ಇದ್ದ ಗುಲಾಬಿಗಿಡದಿಂದ ಅರೆಬಿರಿದ ಹಳದಿ ಬಣ್ಣದ ಒಂದು ಹೂವನ್ನು ಆರಿಸಿದರು. ಅನಂತರ ತಿರುಗಿ ನಿಂತು ಪ್ರಶ್ನಿಸಿದರು.

ವೇರ್ ಈಸ್ ದ ಬರ್ತ್‌ಡೇ ಗರ್ಲ್?

ತಾನು ಒಂದು ಕ್ಷಣ ಸ್ತಬ್ಧೆಯಾದೆ. ಅಷ್ಟರಲ್ಲೆ ಅವರು ತನ್ನ ಬಳಿ ತಲಪಿದ್ದರು; ಹೂವನ್ನು ಮುಂದೆ ಚಾಚಿ ತನ್ನ ತಲೆ ತಡವಿದ್ದರು. ಅನಂತರ ಅವಸರದಲ್ಲಿ ನಡೆದು ಮುಂದೆ ಸಾಗಿದ್ದರು.

ಗಲಿಬಿಲಿಗೊಳಗಾಗಿ ತಾನು ಆ ಧನ್ಯ ಮುಹೂರ್ತದಲ್ಲಿ ಧನ್ಯವಾದ ಹೇಳಲೂ ಮರೆತುಬಿಟ್ಟೆನಲ್ಲ ಎಂದು ಆಮೇಲೆ ಹಳಹಳಿಸಿದ್ದೆ.

ಆ ಹೂವನ್ನು ತನ್ನ ಗಂಧದ ಸಂಪುಟದಲ್ಲಿ ಎಷ್ಟೋ ದಿನಗಳ ಕಾಲ ಜೋಪಾನವಾಗಿರಿಸಿದ್ದೆ.

ಇಲ್ಲ; ಎಲ್ಲಾದರೂ ಯಾವಾಗಲಾದರೂ ಪುನಃ ಕಾಣಬಲ್ಲೆವು ಎಂಬ ಅವರ ನಿರೀಕ್ಷೆ ನೆರವೇರಲಿಲ್ಲ. ನಮ್ಮೊಂದಿಗೆ ಕಳೆದ ಹದಿನೈದು ನಿಮಿಷಗಳಲ್ಲಿ ಅವರು ಇಂಡಿಯಾದ ಪ್ರಧಾನಮಂತ್ರಿಯಾಗಿರಲಿಲ್ಲ. ಇಂದಿರಾ ಎಂಬ ಮಹಿಳೆಯಷ್ಟೇ ಆಗಿದ್ದರು!

ಟ್ರೈನ್ ಒಂದು ನೆಗೆತದೊಂದಿಗೆ ಮುಂದಕ್ಕೆ ಸರಿಯಿತು. ಇಂದಿರಾ ಇಲ್ಲದ ದೆಹಲಿಗೆ ಹೋಗಲು ಅದು ಅಸಮ್ಮತಿ ಸೂಚಿಸುತ್ತಿರುವಂತೆ ಇಂದುವಿಗೆ ಅನ್ನಿಸಿತ್ತು.

ಅವಳು ಕಿಟಕಿಯ ಷಟರ್ ಮೇಲೆತ್ತಿದಳು. ಗಾಳಿಯಲ್ಲಿನ ಚಳಿಯ ಮೊನೆಗಳು



ಚುಚ್ಚಿದ್ದರಿಂದ ಷಟರ್ ಅನ್ನು ಕೆಳಗೇ ಹಾಕಿದಳು.

ಸೆರಗಿನಿಂದ ತಲೆ ಮುಚ್ಚಿದ ಬಳಿಕ ಬರ್ತ್‌ನಲ್ಲಿ ನೆಟ್ಟಗೆ ಮಲಗಿ ಕಣ್ಣುಮುಚ್ಚಿದಳು.

ಆದರೆ, ನಿದ್ರೆ ಬರಲಿಲ್ಲ–ಅವಳ ಮನಸ್ಸು ರವಿಯ ಕಡೆಗೆ ಹರಿಯಿತು.

ರವಿ ಸ್ಟೇಶನ್‌ಗೆ ಬಂದು ಕಾದು ನಿಲ್ಲುತ್ತಿರಬಹುದು. ಅಥವಾ ಟ್ರೈನ್ ಬಹಳ ಲೇಟಾಗುತ್ತದೆ ಎಂದು ಗೊತ್ತಾದಾಗ ವಾಪಸ್ ಹೋಗಿರಬಹುದೆ? ರವಿಯ ತಾಯಿ ಒತ್ತಾಯಿಸದೆ ಇರುತ್ತಿದ್ದರೆ ಸ್ಟೇಶನ್‌ಗೆ ಬರಲು ತಾನು ಪತ್ರ ಬರೆಯುತ್ತಿರಲಿಲ್ಲ. ತುಸು ಭಯಬೆರೆತ ಅಭಿಮಾನದೊಂದಿಗೆ ಮಾತ್ರವೇ ತನಗೆ ರವಿಯ ಕುರಿತು ಯೋಚಿಸಲು ಸಾಧ್ಯ. ದಿನವೂ ಹತ್ತು ಬಾರಿಯಾದರೂ ಆ ತಾಯಿ ಮಗನ ಕುರಿತು ಏನನ್ನಾದರೂ ಹೇಳದೆ ಇರುತ್ತಿರಲಿಲ್ಲ. ವಾತ್ಸಲ್ಯದ ಖಣಿಯಾಗಿರುವ ಆ ಅಮ್ಮ ಮೂಡಿಸುವ ರವಿಯ ಚಿತ್ರ ಅಷ್ಟು ಆಕರ್ಷಕವೇನೂ ಅಲ್ಲ–ಅವರು ಹೇಳುವರು; ಇಂದೂ, ಅವನೊಬ್ಬ ಪೆದ್ದ ಸ್ವಂತ ಹಿತವನ್ನು ಸಾಧಿಸಲಾರದವನು. ಅಲ್ಲವಾದರೆ ಇಲ್ಲಿನ ಬೇಸಾಯ, ರಬ್ಬರ್‌ತೋಟ ವಗೈರೆಗಳನ್ನೆಲ್ಲ ಬಿಟ್ಟುಬಿಟ್ಟು ಹೆಬ್ಬಾಗಿಲು, ಕಣಜದ ಮನೆಗಳೂ ಇರುವ ಈ ಮನೆಯನ್ನು ಬಿಟ್ಟು ಬಾಡಿಗೆ ಮನೆಯಲ್ಲಿ ಉಳಕೊಳ್ಳಲು ಹೋಗುತ್ತಾನಾ? ಇಂದೂ ನಿನಗೆ ಗೊತ್ತಾ, ಕಡ್ಡಿ ಪೆಟ್ಟಿಗೆಯಷ್ಟೇ ದೊಡ್ಡ ಮೂರು ಕೋಣೆಗಳಿರುವ ಒಂದು ಮನೆಯಲ್ಲಂತೆ ಅವನ ವಾಸ್ತವ್ಯ. ಸ್ನಾನಕ್ಕೆ ಕೊಳವೆ ನೀರು, ದೆಹಲಿಯ ಹವಾಮಾನವಾದರೆ ಮತ್ತಷ್ಟು ವಿಚಿತ್ರ–ಚಳಿಗಾಲದಲ್ಲಿ ವಿಪರೀತ ಚಳಿ. ಸೆಖೆಗಾಲದಲ್ಲಿ ವಿಪರೀತ ಸೆಖೆ.. ಅದಕ್ಕೇ ನಾ ಹೇಳಿದ್ದು ಅವನೊಬ್ಬ ಪೆದ್ದ ಅಂತ.

ಒಂದಿಷ್ಟೂ ಚುರುಕು, ಜಾಣತನ ಇಲ್ಲದ ಹುಡುಗನಾಗಿದ್ದನು ಅವನು ಚಿಕ್ಕಂದಿನಲ್ಲಿ. ಪಕ್ಕದ ಹಿತ್ತಲಿನ ರಕ್ಕಸ ಮಾವಿನಮರದ ಮೇಲೆ ಗೊಂಚಲು ಗೊಂಚಲುಗಳಾಗಿ ಕಾಯಿ, ಹಣ್ಣುಗಳಿರುತ್ತವೆ. ನೆರೆಕರೆಯ ಮಕ್ಕಳೆಲ್ಲರೂ ಹಣ್ಣು ಹೆಕ್ಕಲು ಬರುತ್ತಾರೆ. ಗಾಳಿ ಬೀಸುವುದೇ ತಡ, ಹಣ್ಣುಗಳು ಉದುರುತ್ತವೆ. ಮಕ್ಕಳು ಓಡುತ್ತ ಹೋಗಿ ಹಣ್ಣು ಹೆಕ್ಕುತ್ತಾರೆ. ಆದರೆ ನನ್ನ ಮಗ ಮಾತ್ರ ಆ ಮಕ್ಕಳ ಓಟ ಪರದಾಟಗಳನ್ನು ನೋಡಿ ಖುಷಿಪಡುತ್ತ ನಿಂತಿರುತ್ತಾನೆ. ಒಂದೇ ಒಂದು ಹಣ್ಣು ಅವನಿಗೆ ಸಿಕ್ಕುತ್ತಿರಲಿಲ್ಲ. ಅದಕ್ಕೆ ನಾನು ಹೇಳಿದ್ದು, ರವಿ ಬರೇ ಪಾಪದವನು.. ಯಾವ ಕಾರ್ಯ ಸಾಧನೆಗೂ ಅಸಮರ್ಥ ಅಂತ.

ಇಷ್ಟೇ ಅಲ್ಲ, ಇನ್ನೂ ಇದೆ ರವಿಯ ಬಾಲ್ಯ ಕಾಲದ ಅಸಾಮರ್ಥ್ಯಗಳ ನಿಡಿದಾದ ಯಾದಿ:

ಒಮ್ಮೆ ನನ್ನ ಕಿರಿಯ ತಮ್ಮ–ರವಿಯ ಚಿಕ್ಕಮಾವ ದೀರ್ಘ ಕಾಲದ ವಿದೇಶ ವಾಸದ ಬಳಿಕ ಮರಳಿ ಬಂದಿದ್ದ. ರವಿಗೆಂದೇ ಬಹಳಷ್ಟು ಆಟಿಕೆಗಳನ್ನೂ ಅಂದಚೆಂದದ ಸಾಮಾನುಗಳನ್ನೂ ತಂದಿದ್ದ. ಬ್ಯಾಟರಿಯಿಂದ ಓಡುವ ರೈಲುಗಾಡಿ, ಚಾವಿ ಕೊಟ್ಟರೆ

ಬ್ಯಾಂಡ್ ಬಾರಿಸುವ ಚಿಂಪಾಂಜಿ, ಸೈಕಲ್ ತುಳಿಯುವ ಹೆಣ್ಣುಮಗಳು–ಇಂಥದ್ದೇ ಅನೇಕ ವಸ್ತುಗಳು. ಒಂದು ದೊಡ್ಡ ಟ್ರಂಕ್ ತುಂಬ ಆಟದ ಸಾಮಾನುಗಳೇ. ಒಂದೊಂದನ್ನೇ ತೆಗೆದು ರವಿಗೆ ಕೊಟ್ಟ. ರವಿ ಯಾವುದರಲ್ಲೂ ಒಂದಿಷ್ಟು ಆಸಕ್ತಿ ತೋರಲಿಲ್ಲ. ಮಗಾ, ಇವುಗಳಲ್ಲಿ ನಿನಗೆ ಯಾವುದು ಇಷ್ಟ ಎಂದು ಪ್ರಶ್ನಿಸಿದ. ಅವನ ಪುಟ್ಟ ಬೆರಳು ತೋರಿಸಿದ್ದು, ನಾವು ಸ್ವಲ್ಪವೂ ಗಮನಿಸಿರದ ಒಂದು ವಸ್ತುವನ್ನು–ನವಿಲುಗರಿಯ ಬೀಸಣಿಕೆಯನ್ನು, ಎರಡೇ ರೂಪಾಯಿಗೆ ಒತ್ತಾಯದಿಂದ ತನ್ನ ಮೇಲೆ ಹೊರಿಸಲಾದ ಆ ವಸ್ತುವನ್ನು ಆ ರೈಲ್ವೆ ಪ್ಲಾಟ್‌ಫಾರ್ಮಿನಲ್ಲೇ ಬಿಸುಡಬಾರದಲ್ಲ ಎಂದು ಕೊಂಡಷ್ಟೇ ನಾನದನ್ನು ಪೆಟ್ಟಿಗೆಯೊಳಗೆ ತುರುಕಿದ್ದೆ ಎಂದು ಅವನ ಮಾವ ಆಮೇಲೆ ಹೇಳಿದ್ದ. ಆದ್ದರಿಂದಲೇ ನಾನು ಹೇಳಿದ್ದು...

ಅತ್ತೆಯ ಮಾತು ಕೇಳಿದರೆ ಯಾವ ಪ್ರಯೋಜನಕ್ಕೂ ಬಾರದ ಒಬ್ಬ ಪೆದ್ದ ರವಿ ಎಂದೇ ಅನ್ನಿಸುತ್ತದೆ. ಆದರೆ ಕೇಂದ್ರ ಸರಕಾರದಲ್ಲಿ ಅಷ್ಟು ದೊಡ್ಡ ನೌಕರಿ ಸಿಕ್ಕಿದ್ದು ಹೇಗೆ? ಅದಕ್ಕೂ ರವಿಯ ತಾಯಿಯ ಬಳಿ ಉತ್ತರವಿದೆ:

"ಅವನು ನನ್ನ ಮಗನಾದ್ದರಿಂದಲೇನೇ."

ಅದೇನಿದ್ದರೂ ಆ ರವಿ ಮೊದಲ ಭೇಟಿಯಲ್ಲೆ ತನಗೆ ತುಸು ನೋವುಂಟು ಮಾಡಿದ್ದರು. ತಿರುವನಂತಪುರಕ್ಕೆ ಟೂರ್ ಬಂದಾಗ ಎರಡು ದಿನಗಳ ಮಟ್ಟಿಗೆ ಅಮ್ಮನೊಂದಿಗೆ ಕಳೆಯಲು ಬಂದದ್ದಾಗಿತ್ತು ಅವರು. ತಾನು ಆಗ ಪಿಯುಸಿ ಓದುತ್ತಾ ಇದ್ದೆ. ಲಂಗದಿಂದ ಸೀರೆಗೆ ಬದಲಾವಣೆ ಹೊಂದಿರಲಿಲ್ಲ.

"ಯಾರು ಅಮ್ಮ, ಈ ಚೆಂದದ ಹುಡುಗಿ?" ರವಿ ಪ್ರಶ್ನಿಸಿದರು.

"ಇವಳೇ ನಮ್ಮ ಇಂದೂ, ನಾನು ಬರೆದಿದ್ದೆನಲ್ಲ?"

"ಬಾ ಹೆಣ್ಣೇ ಇಲ್ಲಿ. ನಾನೊಮ್ಮೆ ನೋಡ್ತೇನೆ."

ಹತ್ತಿರ ಹೋದೆ: ತುಸು ಭಯದೊಂದಿಗೆ ಮತ್ತು ಬಲು ನಾಚಿಕೆಯೊಂದಿಗೆ. ಕಂಡಾಗ ಸ್ವಲ್ಪವಾದರೂ ಪೆದ್ದನೆಂದನ್ನಿಸಲಿಲ್ಲ. ಒಳ್ಳೆಯ ಎತ್ತರ, ಸುರುಳಿ ಕೂದಲು–ನಗುವ ಕಂಗಳು.

ಎರಡಾಗಿ ಹೆಣೆದಿರುವ ಕೂದಲನ್ನು ಮುಂದಕ್ಕಿಡುವುದು ತನ್ನ ಒಂದು ಅಭ್ಯಾಸವಾಗಿತ್ತು. ಕೆಲಸವಿಲ್ಲದ ವೇಳೆ ಕೂದಲು ಹೆಣೆಯುವುದು ಮತ್ತು ಬಿಚ್ಚುವುದು–ಬೆರಳುಗಳಿಗೆ ಕೆಲಸ ಸಿಗುತ್ತಿತ್ತು.

ಈ ಕೂದಲಷ್ಟೂ ನಿಜವಾದುದೇ ಇಂದೂ! ಈ ಬಾರಿ ಹೆಣ್ಣೇ ಎಂದು ಕರೆಯಲಿಲ್ಲವೆಂಬುದನ್ನು ಗಮನಿಸಿದೆ. ಮಾತುಗಳು ಒರಟಿಲ್ಲ. ಎರಡೂ ಜಡೆಗಳನ್ನೂ ಹಿಡಿದು ಎರಡು ಸಲ ಜಗ್ಗಿದರು. ನಿಜಕ್ಕೂ ಬಹಳ ನೋವಾಗಿತ್ತು. ರವಿಯನ್ನು ಅತ್ತೆ ಗದರಿಸಿದರು ಕೂಡ.

ಬೇಡ, ರವೀ. ಕೇಂದ್ರ ಸರಕಾರದ ಪ್ರಥಮ ದರ್ಜೆ ಆಫೀಸರ್ ಆಗಿದ್ದರೂ



ನೀನು, ಹೆಣ್ಣುಮಕ್ಕಳೊಡನೆ ಹೇಗೆ ವರ್ತಿಸಬೇಕೆಂಬುದನ್ನು ಇನ್ನೂ ಕಲಿತಿಲ್ಲ.

ಸರಿ, ಅಮ್ಮಾ, ಮುಂದಿನ ಬಾರಿ ಬರುವಷ್ಟರಲ್ಲಿ ಈ ಬಗ್ಗೆ ಒಂದು ವಿಶೇಷ ತರಬೇತಿ ಪಡೆದೇ ಪಡೆಯುತ್ತೇನೆ.

ಟ್ರೈನ್ ವೇಗ ಹೆಚ್ಚಿಸಿಕೊಂಡಿದೆ. ಕಣ್ಣುಗಳನ್ನು ನಿದ್ರೆ ನೇವರಿಸುತ್ತಿದೆ.

ಇಂದೂ ಕಣ್ಣು ಮುಚ್ಚಿ, ಸೀರೆಯಿಂದ ಪಾದಗಳನ್ನು ಮರೆಮಾಡಿ ಮಲಗಿದಳು.

ಗುರುದೇವ್ ಸಿಂಗ್‌ಗೆ ನಿದ್ರಿಸಲು ಸಾಧ್ಯವಾಗಲಿಲ್ಲ. ಆತ ಮಂಚದ ಮೇಲೆ ಮಲಗಿದ್ದುಕೊಂಡೇ ಮೌನವಾಗಿ ಸೂರು ದಿಟ್ಟಿಸಿದ. ಅಕ್ಟೋಬರ್‌ನ ಅಂತಿಮ ಜಾವಗಳಲ್ಲಿ ಚಳಿಗೆ ಮೊನೆಗಳಿವೆ. ಆದರೂ ಪರಚಿ ಸೀಳುವ ಉಗುರುಗಳಿಲ್ಲ. ಹೆಂಡತಿ ಮಂಚದ ಬಳಿ ಕುಳಿತು ಜಪ್‌ಜಿ ಮತ್ತು ಅರ್ದಾಸ್‌ಗಳನ್ನು ಮೌನವಾಗಿ ಜಪಿಸುತ್ತ, ಆತನ ಕಾಲುಗಳನ್ನು ತಡವುತ್ತಾ ಇದ್ದಳು. ತುಸು ಮುನ್ನವೇ ಆಕೆಯನ್ನು ಹೋಗಿ ನಿದ್ರಿಸಲು ಒತ್ತಾಯಿಸಿ ಪ್ರೇರೇಪಿಸಿದ್ದ; ನಾವು ನಿದ್ರೆಗೆಡುವುದರಿಂದ, ಸುತ್ತಲೂ ನಡೆಯುತ್ತಿರುವ ಹುಚ್ಚಾಟಗಳು ಕೊನೆಗೊಳ್ಳುವಂತಿಲ್ಲ. ಆದರೂ ಅವಳು ಏಳಲಿಲ್ಲ. ಅವಳು ಮೌನವಾಗಿ ಜಪಿಸುತ್ತಾ ಇದ್ದ ಜಪ್‌ಜಿಯ ಸಾಲುಗಳನ್ನು ತನಗೂ ಕೇಳಿಸುವ ಹಾಗೆ ತುಸು ಗಟ್ಟಿಯಾಗಿ ನುಡಿದಿದ್ದಳು.

ದೇವರಿರುವುದು ಒಂದೇ. ಸತ್ಯವೇ ದೇವರು. ಭಯವಿಲ್ಲದ, ಹಗೆಯಿಲ್ಲದ ಅವಿನಾಶಿ, ಜನನವಾಗಲೀ ಮರಣವಾಗಲೀ ಇಲ್ಲದವನು. ಅಂತ್ಯವಿಲ್ಲದವನು. ಅವನು ಇದ್ದ; ಇದ್ದಾನೆ; ಇರುತ್ತಾನೆ.

ಅವಳು ರಜಾಯಿಯಿಂದ ತನ್ನನ್ನು ಕುತ್ತಿಗೆಯ ತನಕ ಹೊದೆಸಿ, ಅವಳ ಮಲಗುವ ಕೋಣೆಗೆ ಹೋದಳು. ಅವಳ ವಾಸನೆ ಮಾತ್ರ ಆ ಬಳಿಕವೂ ತುಸು ಹೊತ್ತು ಕೋಣೆಯೊಳಗಿದ್ದಿತ್ತು. ಆತ ತನ್ನ ಕೆನ್ನೆಗಳನ್ನು ತಡವಿ ನೋಡಿದ. ಊತ ತುಸು ಕಡಿಮೆಯಾಗಿದೆ. ಕಿತ್ತು ತೆಗೆಯಲಾದ ರೋಮಗಳ ಸ್ಥಾನದಲ್ಲಿ ರಕ್ತ ಹೆಪ್ಪುಗಟ್ಟಿದೆ. ನೋವಿಲ್ಲ; ಮರಗಟ್ಟಿದ್ದು ಮಾತ್ರ. ಆತ ಗುರು ನಾನಕರ ಬೋಧನೆಗಳನ್ನು ನೆನೆದ; ಸಹನೆಯೊಂದಿಗೆ ಬಾಳಿರಿ. ಸೃಷ್ಟಿಕರ್ತನ ನಾಮ ಜಪಮಾಡಿರಿ. ದೈವ ಸನ್ನಿಧಿಗೆ ತಲಪಲು ನಾಲ್ಕೇ ಮಾರ್ಗಗಳಿವೆ–ಉತ್ತಮ ಮನಸ್ಸುಗಳೊಂದಿಗೆ ಸಂಪರ್ಕ, ಸತ್ಯ, ಸಂತೃಪ್ತಿ, ಇಂದ್ರಿಯ ಸುಖಗಳ ಹತೋಟಿ.

ಆತ ಎದ್ದು ಕಿಟಕಿ ಬಳಿ ನಿಂತು ಕರ್ಟನ್ ಸರಿಸಿ ಹೊರಗೆ ನೋಡಿದ. ಬೀದಿದೀಪಗಳನ್ನು ಅಪ್ಪಿಕೊಂಡಿರುವ ಮಸುಕು ಮಂಜು, ನಗರದ ಮೇಲ್ಗಡೆ ಯಾರೋ ಬೀಸಿಹಾಕಿರುವ ಶವ ವಸ್ತ್ರದ ಹಾಗೆ ಕಾಣಿಸುತ್ತಿದೆ. ಹವೆಯಲ್ಲಿ ಸುಡಲ್ಪಡುತ್ತಿರುವ ಮನುಷ್ಯ ಮಾಂಸದ ವಾಸನೆ ಬೆರೆತುಕೊಂಡಿದೆಯೇನೋ ಎಂದನ್ನಿಸಿತ್ತು ಆತನಿಗೆ.

ಆತನ ಚಿಂತೆಗಳು ಮುಂದುವರಿದವು:

ಒಂದರ್ಥದಲ್ಲಿ ಇಂದಿರಾರ ಮತ್ತು ಸಿಕ್ಖರ ಪೂರ್ವಿಕ ಪರಂಪರೆಗಳು ಸಿಕ್ಕುಸಿಕ್ಕಾಗಿ ಹೆಣೆದುಕೊಂಡಿರುವಂತೆ ಅನ್ನಿಸಿತು ಆತನಿಗೆ.

ಇಂದಿರಾರ ಮುತ್ತಾತ ಪಂಡಿತ್ ಕವಲ್ ದೆಹಲಿಗೆ ಬರುವಷ್ಟರಲ್ಲೇ ದೆಹಲಿಯಲ್ಲಿ ಐದು ಸಾಮ್ರಾಜ್ಯಗಳು ಕೊನೆಗೊಂಡಿದ್ದವು. ಆರನೆಯ ಸಾಮ್ರಾಜ್ಯವಾದರೂ ಕೊನೆಗೊಳ್ಳುವ ಹಂತದಲ್ಲೆ ಇದ್ದಿತು. ಕೆಂಪುಕೋಟೆಯ ಮುಂಭಾಗದಲ್ಲಿ ಓಣಿಗಳಿಂದಲೂ ವೀಥಿಗಳಿಂದಲೂ ಆವೃತವಾದ ಚಾಂದ್ನಿಚೌಕ್. ಕೆಂಪು ಶಿಲೆಯಿಂದ ನಿರ್ಮಿಸಲಾದ ಚೌಕಾಕಾರದ ಜಲಶೇಖರಗಳ ಮಧ್ಯದಲ್ಲಿ ಕಾರಂಜಿಗಳು. ಬೆಳದಿಂಗಳ ರಾತ್ರಿಗಳಲ್ಲಿ ಕಾರಂಜಿಗಳು ಧವಳ ಗೋಲಕಗಳನ್ನು ಉದುರಿಸುವ, ಶಾಜಹಾನ್‌ನ ಮುದ್ದುಗುವರಿ ಜಹನಾರಳ ಚಾಂದ್ನಿ ಚೌಕ್–ಜಲಶೇಖರಗಳನ್ನು ಪರಸ್ಪರ ಜೋಡಿಸುವ ಶಿಲಾ ಕಾಲುವೆಗಳಿಗೆ ನಹರ್ ಎನ್ನುತ್ತಿದ್ದರು. ಅಂತಹ ಒಂದು ನಹರ್‌ನ ಅಂಚಿನಲ್ಲೇ ಕೌಲ್ ಕುಟುಂಬ ವಾಸಿಸುತ್ತಿದ್ದುದು. ಪಂಡಿತ್ ಕೌಲ್ ಆಮೇಲೆ ಅರಿಯಲ್ಪಟ್ಟದ್ದು, ನಹರ್‌ನ ಅಂಚಿನಲ್ಲಿ ವಾಸವಾಗಿರುವಾತ–ನೆಹರೂ–ಎಂದು.

ಮೊಗಲ ರಾಜರುಗಳಿಗೆ ಶಾಪವಾಗಿದ್ದ ದಾರುಣವಾದ ಅಂತ್ಯ ಫರೂಕ್ಸಿಯಾರ್‌ನನ್ನೂ ಕಾದುಕೊಂಡಿತ್ತು. ಸೇನೆ ಹೊಂಚುಹಾಕುತ್ತಿತ್ತು. ಸಯ್ಯದ್ ಸೋದರರು ಫರೂಕ್ಸಿಯಾರ್‌ನನ್ನು ಹಿಡಿದು ಕಣ್ಣುಗೊಂಬೆಗಳನ್ನು ಕಿತ್ತುಹಾಕಿದ್ದರು. ಇತರ ಮೊಗಲ ಅರಸರುಗಳು ಅನುಭವಿಸಿದ್ದ ಹಾಗೆಯೇ ಆತನೂ ಚಿತ್ರಹಿಂಸೆಗೆ ಗುರಿಯಾಗಿ ಕೊನೆಗೆ ದಾರುಣವಾಗಿ ಕೊಲೆಗೈಯಲ್ಪಟ್ಟಿದ್ದ.

ಕೌಲ್ ಕುಟುಂಬಕ್ಕೆ ರಾಜಕೀಯ ರಕ್ಷಣೆ ನಷ್ಟವಾಯಿತು. ಮುಂದೆ ಸಯ್ಯದ್ ಸೋದರರೂ ವಧಿಸಲ್ಪಟ್ಟರು. ಹುಸೈನ್ ಅಲಿಯ ತಲೆ ಕಡಿದು ಚಾಂದ್ನಿ ಚೌಕ್‌ನಲ್ಲಿ ಚೆಂಡಾಡಲ್ಪಟ್ಟಾಗ ಅಬ್ದುಲ್ಲ ಖಾನ್‌ನನ್ನು ವಿಷ ಉಣಿಸಿ ಕೊಲ್ಲಲಾಯಿತು. ಮುಂದೆ ಮಹಮ್ಮದ್ ಶಾ ಮಯೂರ ಸಿಂಹಾಸನದಲ್ಲಿ ಕುಳಿತು ೨೯ ವರ್ಷ ರಾಜ್ಯಭಾರ ಮಾಡಿದ್ದ.

ಈ ನಡುವೆ ನೆಹರೂ ಕುಟುಂಬದ ಜಾಗಿರ್ ನಷ್ಟವಾಗಿತ್ತು.

ನಾದಿರ್ ಶಾ ದೆಹಲಿ ಆಳಿದ್ದು ಕೆಲಕಾಲ ಮಾತ್ರ. ಆತ ಮಯೂರ ಸಿಂಹಾಸನ ಮತ್ತು ಕೋಹಿನೂರ್ ರತ್ನಗಳನ್ನಲ್ಲದೆ ಹೇರಳ ಸ್ವರ್ಣ ನಾಣ್ಯಗಳು, ರತ್ನಗಳು, ೧,೦೦೦ ಆನೆಗಳು, ೭,೦೦೦ ಕುದುರೆಗಳು, ೧೦,೦೦೦ ಒಂಟೆಗಳು, ೧೦೦ ಹಿಜಡಾಗಳು, ಬಹಳಷ್ಟು ರೂಪಸಿಯರು, ಕಮ್ಮಾರರು, ಬಡಗಿಗಳ ಸಹಿತ ದೆಹಲಿ ಬಿಟ್ಟು ಸ್ವಂತ ದೇಶಕ್ಕೇ ವಾಪಸಾಗಿದ್ದ.

ಬಾಬರ್ ಸ್ಥಾಪಿಸಿದ್ದ ಮೊಗಲ ವಂಶ ಆ ರೀತಿ ನಿರ್ನಾಮವಾಯಿತು. ಹಾಗೆ ಆರನೆಯ ದೆಹಲಿಯೂ ಚರಿತ್ರೆಯ ಪುಟದೊಳಗೆ ಸೀಮಿತಗೊಂಡಿತ್ತು. ಏಳನೆಯ



ದೆಹಲಿಗೆ ಮೊಗಲ ವಂಶದ ಕೊನೆಯ ಕೊಂಡಿಯಾಗಿತ್ತು. ಸಿಪಾಯಿ ದಂಗೆ ಆರಂಭಿಸುವಷ್ಟರಲ್ಲೇ ನೆಹರೂ ಕುಟುಂಬದ ಯಜಮಾನ ಲಕ್ಷ್ಮೀನಾರಾಯಣ್ ನೆಹರೂ ಈಸ್ಟ್ ಇಂಡಿಯಾ ಕಂಪೆನಿಯ ವಕೀಲ್ ಗುಮಾಸ್ತೆಯಾಗಿದ್ದ. ಸಿಪಾಯಿ ದಂಗೆಯ ಮುಂದುವರಿಕೆಯಾಗಿ ಸಂಭವಿಸಿದ್ದ ಹಿಂಸಾಕಾಂಡ ಸಿಕ್ಖ್ ಚರಿತ್ರೆಯ ಹಾಗೂ ನೆಹರೂ ಕುಟುಂಬದ ನಡುವಿನ ಒಂದು ಮುಖ್ಯ ಘಟನೆಯೇ ಆಗಿತ್ತು.

ಬ್ರಿಟಿಷರ ಸಲುವಾಗಿ ಪಂಜಾಬ್ ವಿರುದ್ಧ ಯುದ್ಧ ಮಾಡಿದವನು ಜಾನ್ ನಿಕಲ್ಸನ್ ಎಂಬ ದೊರೆ. ಸಿಪಾಯಿ ದಂಗೆಯಲ್ಲಿ, ಭಾರತೀಯ ಯೋಧರು ನಿಕಲ್ಸನ್‌ನನ್ನು ಮುಗಿಸಿಬಿಟ್ಟರು: ಸೇನಾಪತಿಯನ್ನು ಕಳೆದುಕೊಂಡ ಬಿಳಿಸೈನಿಕರು ರಿಡ್ಜ್‌ನಲ್ಲಿ ಅವಿತುಕೊಂಡರು. ಬಳಿಕ ಧೈರ್ಯ, ಶೌರ್ಯಗಳನ್ನು ಮರಳಿ ಪಡೆದ ಅವರು ದೆಹಲಿಯ ಓಣಿಗಳತ್ತ, ಬೀದಿಗಳತ್ತ ಮಹಾಪೂರದ ಹಾಗೆ ನುಗ್ಗಿದರು. ಕಣ್ಣಿಗೆ ಬಿದ್ದವರನ್ನೆಲ್ಲ ಕೊಲೆಗೈದರು. ಹೆಂಗಸರ ಮಾನಹರಣ ಮಾಡಿದರು. ಈ ಕಾರ್ಯದಲ್ಲಿ ಬ್ರಿಟಿಷರಿಗೆ ಮನಃಪೂರ್ವಕ ಸಹಾಯ ಮಾಡಲು ಸಿಕ್ಖರು ಅವರೊಂದಿಗೆ ಇದ್ದರು. ಕೊಳ್ಳೆ, ಕೊಲೆ ಹಾಗೂ ಇತರ ಹೀನ ಕೃತಿಗಳಲ್ಲಿ ಅಂದು ಸಿಕ್ಖರು ಬಿಳಿಯರನ್ನೂ ಮೀರಿಸಿದ್ದರು–ಅಂದು ದೆಹಲಿಯಿಂದ ಪಲಾಯನ ಮಾಡಿದ್ದ ಸಹಸ್ರಾರು ಜನಗಳೆಡೆಯಲ್ಲಿ ಇಂದಿರಾರ ಮುತ್ತಾತ ಗಂಗಾಧರ್ ನೆಹರೂ ಮತ್ತು ಕುಟುಂಬದವರೂ ಇದ್ದರು.

ಅವರು ಮುಂದೆ ಆಗ್ರಾದಲ್ಲಿ ಆಶ್ರಯ ಪಡೆದರು.

ಚಕ್ರವರ್ತಿಯ ಮೂರು ಮಕ್ಕಳು ಕೊಲೆಗೈಯಲ್ಪಟ್ಟರು. ಬಹದ್ದೂರ್ ಶಾ ರಂಗೂನ್ ಗಡಿಪಾರು ಮಾಡಲ್ಪಟ್ಟನು. ಅದೇ ವರ್ಷ ಗಂಗಾಧರ್ ನಿಧನ ಹೊಂದಿದಾಗ ಆತನ ಹೆಂಡತಿ ಆರು ತಿಂಗಳ ಬಸುರಿಯಾಗಿದ್ದಳು.

ಆ ಮಗುವೇ ಮೋತಿಲಾಲ್.

ಇಂದಿರಾರ ತಾತ.

ಒಂದೂಕಾಲು ಶತಮಾನದ ಬಳಿಕ ಚರಿತ್ರೆಯ ಗಳಿಗೆ ಗಡಿಯಾರ ಪೂರ್ಣವೃತ್ತವನ್ನು ಸುತ್ತಿಯಾಗಿತ್ತು. ಮೋತಿಲಾಲರ ಪುತ್ರ ಜವಾಹರ್ ಗಾಂಧೀಜಿಯ ನಾಯಕತ್ವದಲ್ಲಿ ಬ್ರಿಟಿಷರಿಂದ ಭಾರತವನ್ನು ಸ್ವತಂತ್ರಗೊಳಿಸಿದರು.

ಭಾರತ ಎರಡಾಗಿ ವಿಭಜಿಸಲ್ಪಟ್ಟಿತ್ತಾದರೂ ಆಗಲೇ ಪಂಜಾಬ್‌ನ ಅರ್ಧಾಂಶ ಹಾಗೂ ಸಿಕ್ಖರು ಸಂಪೂರ್ಣ ಭಾರತದ ಅಂಶವಾಗಿದ್ದರು.

ಹೌದು, ಗಂಗಾಧರ್‌ನನ್ನು ಕುಟುಂಬ ಸಹಿತ ದೆಹಲಿಯಿಂದ ಓಡಿಸಿದ್ದ ಸಿಕ್ಖರ ಈ ತುದಿಯ ತಲೆಮಾರಿನ ಇಬ್ಬರು ಯುವಕರು ವಿಶ್ವಾಸಘಾತಕರಾದರು. ತಾವು ಖಿಲ್ಲಾದ ಪರಂಪರೆಯನ್ನು ಮುಂದುವರಿಸುತ್ತಾ, ಹುತಾತ್ಮರಾಗಬೇಕೆಂಬ ಕಳಕಳಿಯಿಂದ ಅವರಿಬ್ಬರೂ ತಮ್ಮ ಜೀವ ತೆತ್ತೂ ಕಾಪಾಡಲು ಬಾಧ್ಯತೆ ಹೊಂದಿದ್ದ ಇಂದಿರಾ ಜೀವವನ್ನು ತಾವೇ ಕಿತ್ತುಕೊಂಡರು.

## ಅಧ್ಯಾಯ ೧೯

# ಗಡ್ಡ, ಮೀಸೆಗಳಿಗೆ ಕೊನೆಯ ನಮಸ್ಕಾರ

ರವಿಯ ಫ್ಲ್ಯಾಟ್‌ನಿಂದ ಹೊರಬಿದ್ದಾಗ ಉಪಕಾರ್ ಸಿಂಗ್‌ಗೆ ಯಾವುದೇ ನಿರ್ದಿಷ್ಟ ಗುರಿಯೂ ಇರಲಿಲ್ಲ. ಪ್ರಧಾನಿಯನ್ನು ಗುಂಡಿಟ್ಟು ಕೊಂದದ್ದರ ಪ್ರತೀಕಾರ ತೀರಿಸುವಿಕೆ ಇದ್ದೇ ಇರುತ್ತದೆ ಎಂದು ಬಹುಮಟ್ಟಿಗೆ ಖಚಿತವಾಗಿತ್ತು.

ಇನ್ಸ್‌ಟಿಟ್ಯೂಟ್ ಏರಿಯಾ ಹೆಚ್ಚು ಕಡಿಮೆ ನಿರ್ಜನವಾಗಿತ್ತು. ನಾಮದೇವ್ ಮಂದಿರ ಮತ್ತು ಸಾಯಿಬಾಬಾ ಮಂದಿರಗಳು ಬಹುಮಟ್ಟಿಗೆ ಮೌನ ಧರಿಸಿದ್ದವು. ಸಹಜ ರೀತಿಯಲ್ಲಾಗಿದ್ದರೆ ಈಗ ಆ ಮಂದಿರಗಳಿಂದ ಭಜನೆ ಮತ್ತು ಸತ್‌ಸಂಗಗಳ ಸದ್ದುಗದ್ದಲ ಕೇಳಿಬರುತ್ತಿತ್ತು ಎಂದುಕೊಂಡನಾತ.

ದಯಾಲ್‌ಸಿಂಗ್ ಕಾಲೇಜ್ ಬಸ್‌ಸ್ಟಾಪ್‌ನ ಸಮೀಪದ ಕೂಡುಮಾಗ್ ತಲಪಿದಾಗ ಸಂದಿಗ್ಧ ಪ್ರಶ್ನೆಯೊಂದು ಆತನಿಗೆದುರಾಯಿತು. ನೇರವಾಗಿ ಮುಂದಕ್ಕೆ ಸಾಗಿದರೆ ಖಾನ್ ಮಾರ್ಕೆಟ್ ಅಥವಾ ಪಂಡಾರರಸ್ತೆಗೆ ತಲಪಬಹುದು. ಬಲಕ್ಕೆ ತಿರುಗಿದರೆ ಗೋಲ್ಫ್ ಲಿಂಕ್ಸ್ ಮೂಲಕ ಮಥುರಾರೋಡ್ ಸೇರಬಹುದು. ಎಡಕ್ಕೆ ತಿರುಗಿದರೆ ಲೋಧಿ ಗಾರ್ಡನ್‌ಗೆ ಹೋಗಬಹುದು.

ಆಗೊಮ್ಮೆ ಈಗೊಮ್ಮೆ ಕಾಣಿಸುತ್ತಿದ್ದ ಸೈಕಲ್ ಸವಾರರು ಮತ್ತು ಸ್ಕೂಟರ್ ಪ್ರಯಾಣಿಕರು ತನ್ನನ್ನು ಗಮನಿಸುತ್ತಿದ್ದಾರೆ ಎಂಬುದನ್ನು ಉಪಕಾರ್ ಪಕ್ಕನೆ ಮನಗಂಡ. ಅವರಿಗೆ ತನ್ನ ಪಗಡಿ ಮತ್ತು ಗಡ್ಡ ಕಿರಿಕಿರಿಯುಂಟು ಮಾಡುತ್ತಿವೆ. ಕೆಲವರ ಮುಖದಲ್ಲಾದರೂ ದ್ವೇಷ ಮತ್ತು ಅಸಹನೆ ಸ್ಪಷ್ಟವಾಗಿ ಗೋಚರಿಸುತ್ತಿವೆ. ರಸ್ತೆಯ ಅಂಚಿನಲ್ಲೆ ಉಪಕಾರ್ ನಡೆಯುತ್ತಿದ್ದನಾದರೂ ಆತನನ್ನು ಒರೆಸಿತು ಒರೆಸಿಲ್ಲ ಎಂಬಂತೆ ಸೈಕಲ್ ಒಂದರ ಮೇಲೆ ಹಾದು ಹೋದರು ಇಬ್ಬರು ಯುವಕರು. ಆ ಸೈಕಲ್ ಸವಾರರು ಸುರಕ್ಷಿತ ದೂರಕ್ಕೆ ತಲಪಿದ ಬಳಿಕ ಕ್ಯಾರಿಯರ್‌ನಲ್ಲಿ ಕುಳಿತಾತ ಸೀಟಿನಲ್ಲಿ ಕುಳಿತಿರುವಾತನೊಡನೆ ಗಟ್ಟಿಯಾಗಿ ಹೇಳುವುದು ಉಪಕಾರ್‌ಗೆ ಕೇಳಿಸಿತು.

ಏನಣ್ಣ, ಮನುಷ್ಯನನ್ನು ಕೊಲ್ಲುವ ಯೋಜನೆಯೆ?

ಅವನು ಮನುಷ್ಯನಾ? ಅವನು ಸರ್ದಾರ್ ಅಲ್ಲವಾ? ಸೀಟಿನಲ್ಲಿ ಕುಳಿತು ಪೆಡಲ್ ತುಳಿಯುವಾತ ಪ್ರತಿಕ್ರಿಯಿಸಿದ.



ಅನಂತರ ಉಪಕಾರ್‌ನತ್ತ ನೋಡುತ್ತ ಪ್ರಶ್ನಿಸಿದ: ಏನೋ ಸರ್ದಾರ್, ಸಾವನ್ನು ಹುಡುಕುತ್ತಿರುವೆಯ? ಅದನ್ನು ಕೇಳಿಸಿಯೂ ಕೇಳಿಸಿಲ್ಲವೆಂದುಕೊಂಡ ಉಪಕಾರ್ ಅದರಲ್ಲಡಗಿದ್ದ ದ್ವೇಷ, ತಿರಸ್ಕಾರಗಳನ್ನು ಗಮನಿಸದೆ ಇರಲಿಲ್ಲ. ಸರ್ದಾರ್ಜಿಗಳು ಉಳಿದೆಲ್ಲರ ಸಿಟ್ಟಿಗೂ ಸೇಡಿಗೂ ಪಾತ್ರರಾಗಿರುವರು, ಈ ರೂಪಿನಲ್ಲಿ ತನಗಿನ್ನು ದೆಹಲಿಯಲ್ಲಿ ಬದುಕು ಸಾಗಿಸಲು ಸಾಧ್ಯವಾಗದು ಎಂದುಕೊಂಡ. ಈ ಮೊದಲೂ ಆತ, ಗಡ್ಡ, ಜುಟ್ಟುಗಳನ್ನು ತೆಗೆಸಿ ಮೋನ ಆಗಿ ಬಿಡಲೇ ಎಂದು ಕೆಲವೊಮ್ಮೆ ಯೋಚಿಸಿದ್ದ. ಆವಾಗಲೆಲ್ಲ ಮಸ್ತಿಷ್ಕದೊಳಗೆ ದುಂಬಿಗಳು ಗುಂಯಿಗುಡುತ್ತಿದ್ದವು. ಹಾಗೆ ಯೋಚಿಸುವುದು ಕೂಡ ಅಪಚಾರವೆ ಎಂದುಕೊಂಡನಾತ.

ಕಾಲುಗಳು ಯಾಂತ್ರಿಕವಾಗಿ ಎಡಕ್ಕೆ ಸಾಗಿದವು. ಲೋಧಿ ಗಾರ್ಡನ್‌ನಲ್ಲಿ ಜನವಾಸವಿಲ್ಲದ ಪುರಾತನ ಗೋರಿಗಳಿವೆ. ಸುತ್ತಲೂ ಶ್ರದ್ಧೆಯಿಂದ ನೆಟ್ಟು ಬೆಳೆಸಲಾದ ಬಿದಿರ ಹಿಂಡಲುಗಳಿವೆ. ಆ ನಿರ್ಜನತೆಯಲ್ಲಿ ತುಸು ಹೊತ್ತು ಕಳೆಯಬಹುದು. ಹೇಗಾದರೂ ಬಂಗಳಾ ಸಾಹಿಬ್ ಇಲ್ಲವೆ ರೇಕಾಬ್‌ಗಂಜ್ ಗುರುದ್ವಾರ ತಲಪಲು ಸಾಧ್ಯವಾದರೆ ತಾನು ಪಾರಾಗಬಹುದು. ಖಲ್ಸಕ್ಕೆ ಪ್ರಯೋಜನಕರವಾದ ಯಾವುದಾದರೂ ಕಾಯಕದಲ್ಲಿ ತೊಡಗಿಸಿಕೊಳ್ಳಬಹುದು. ಲಂಕಾರ್‌ನಲ್ಲಿ ಚಪಾತಿ ಲಟ್ಟಿಸಲಿಕ್ಕಾಗಲೀ ಚಪಾತಿ ಬೇಯಿಸಲಿಕ್ಕಾಗಲೀ ನೆರವಾಗಬಹುದು. ಗುರುದ್ವಾರದ ಮಾರ್ಬಲ್ ನೆಲವನ್ನು ಒರೆಸಿ ಚೊಕ್ಕ ಮಾಡಬಹುದು. ತೀರ್ಥ ಯಾತ್ರಿಕರ ಚಪ್ಪಲಿಗಳನ್ನು ಕಾಯಲೂ ನೆರವಾಗಬಹುದು ಎಂದು ಕೊಳ್ಳುತ್ತಾ ಉಪಕಾರ್ ಮುಂದಕ್ಕೆ ಸಾಗಿದ.

ಆತನ ಎದುರಿನಿಂದ ಒಂದು ಸ್ಕೂಟರ್ ಬಂದದ್ದೂ ವೇಗ ಕಡಿಮೆ ಮಾಡಿ ತೀರಾ ಬತ್ತಿನಲ್ಲಿ ನಿಂತದ್ದೂ ದಿಢೀರನೆಯಾಗಿತ್ತು. ಮನಃಸ್ಥೈರ್ಯ ಮರಳಿ ಪಡೆಯಲು ಸಾಧ್ಯವಾಗುವುದಕ್ಕೂ ಮುನ್ನವೇ ಆತನ ಪಗಡಿ ಎಳೆದು ಕಳಚಿ ಸವಾರನು ಸ್ಕೂಟರ್ ವೇಗವಾಗಿ ಓಡಿಸಿಕೊಂಡು ಹೋಗಿಬಿಟ್ಟ.

ತುಸು ದೂರ ಮಣ್ಣಿನಲ್ಲಿ ಬಿದ್ದುಕೊಂಡಿರುವ ಪಗಡಿಯನ್ನು ಪುನಃ ಎತ್ತಿಕೊಳ್ಳಬೇಕೆ ಎಂದು ಉಪಕಾರ್ ಯೋಚಿಸುತ್ತ ನಿಂತಾಗ, ದೂರದಲ್ಲಿ ನಿಂತು ಎಲ್ಲವನ್ನೂ ನೋಡುತ್ತ ಗಟ್ಟಿಯಾಗಿ ನಗುತ್ತಿರುವ ಜನರ ಗುಂಪನ್ನು ಕಂಡ. ದೊಣ್ಣೆಯಾಗಲೀ ಇತರ ಆಯುಧಗಳಾಗಲೀ ಇಲ್ಲದ ನಿರುಪದ್ರವಿ ಗುಂಪು. ಗುಂಪಿನ ಜನರಿಗೆ ಸಿಟ್ಟಾಗಲೀ ಸಹಾನುಭೂತಿಯಾಗಲೀ ಇಲ್ಲ; ಇರುವುದು ಕೇವಲ ತಿರಸ್ಕಾರ, ನಿಂದೆಗಳು ಮಾತ್ರ–ನಿನ್ನ ವರ್ಗ ಇದಕ್ಕಷ್ಟೇ ಅಲ್ಲ. ಇದಕ್ಕಿಂತ ಹೆಚ್ಚಿನದಕ್ಕೂ ಅರ್ಹವಾಗಿದೆ ಎನ್ನುವಂಥ ಮುಖಭಾವ.

ಲೋಧಿ ಗಾರ್ಡನ್‌ನನ್ನು ಗುರಿಯಾಗಿರಿಸಿಕೊಂಡು ಉಪಕಾರ್ ದಾಪುಗಾಲು

ಹಾಕಿದ. ಅಕ್ಟೋಬರ್ ತಿಂಗಳ ಸಂಜೆಗಳಲ್ಲಿ ಅಲ್ಲಿ ವಿಹಾರಕ್ಕೆ ಬಂದವರ ಸಂದಣಿ ಇರಬೇಕಾಗಿತ್ತು. ವರ್ಣರಂಜಿತ ಉಡುಪುಗಳನ್ನು ತೊಟ್ಟ ಮಕ್ಕಳ ಮತ್ತು ಅವರ ತಾಯಿ–ತಂದೆಯವರ ಸಂದಣಿ. ಆದರೆ ಇವತ್ತು ಜನ, ಸದ್ದು–ಒಂದೂ ಇಲ್ಲ. ಅಲ್ಲಲ್ಲಿ ಐಸ್‌ಕ್ರೀಂ ಕಪ್‌ಗಳೂ ಪೇಪರ್ ತಟ್ಟೆಗಳೂ ಚದುರಿ ಬಿದ್ದುಕೊಂಡಿವೆ. ಜಾಡಮಾಲಿಗಳಾಗಲೀ ಉದ್ಯಾನವನ್ನು ನೋಡಿಕೊಳ್ಳುವ ಮಾಲಿಗಳಾಗಲೀ ಸಮೀಪದಲ್ಲೆಲ್ಲೂ ಇಲ್ಲ. ದೊರಗು ಕಲ್ಲಿನಲ್ಲಿ ನಿರ್ಮಿಸಲಾದ ಎತ್ತರದ ಕಟ್ಟೆಗಳ ಮೇಲೆ ಶತಮಾನಗಳಷ್ಟು ಹಳೆಯ ಖಬರುಗಳು. ಎತ್ತರದ ಅರ್ಧ ಗೋಲಾಕೃತಿಯ ಗುಂಬಸ್‌ಗಳಲ್ಲಿ ನೇತಾಡುತ್ತ ತಪಸ್ಸು ಮಾಡುತ್ತಿರುವ ಬಾವಲಿಗಳು, ಕಾಲ ಗಹ್ವರದಲ್ಲಿ ಮರೆಯಾದ ಸುಲ್ತಾನರುಗಳ ಆತ್ಮಗಳಿರಬಹುದು ಅವು ಎಂದುಕೊಂಡನಾತ.

ಖಬರಿನಾಚೆಯಿಂದ ತಗ್ಗಿದ ದನಿಯಲ್ಲಿ ಗೊಣಗಾಟ ಕೇಳಿಸಿತು. ಶಿಲಾ ಕಮಾನುಗಳನ್ನು ಮರೆಯಾಗಿರಿಸಿಕೊಂಡು ಶಬ್ದ ಕೇಳಿಬಂದ ಸ್ಥಳದತ್ತ ನಡೆದ. ಈ ಏಕಾಂತತೆಯಲ್ಲಿ ಯಾವುದಾದರೂ ಜೋಡಿಗಳು ತಮ್ಮ ರಹಸ್ಯ ಕ್ಷಣಗಳನ್ನು ಹಂಚಿಕೊಳ್ಳುತ್ತಿರಬಹುದೇನೋ ಅಥವಾ ತನ್ನ ಹಾಗೆಯೇ ಜನರ ಗುಂಪಿನಿಂದ ತಪ್ಪಿಸಿಕೊಂಡು ಬಂದ ಕೆಲವರು ಒಟ್ಟಾಗಿ ಮುಂದಿನ ಕಾರ್ಯಕ್ರಮಗಳನ್ನು ರೂಪಿಸುತ್ತಿರಬಹುದೇನೋ ಎಂದುಕೊಂಡನು ಉಪಕಾರ್.

ಸದ್ದು ಮಾಡದೆ ಇಣುಕಿ ನೋಡಿದ. ಓರ್ವ ಕ್ಷೌರಿಕ ಯಾವನೋ ದಾರಿಹೋಕನಿಗೆ ಕ್ಷೌರ ಮಾಡುತ್ತಿದ್ದಾನೆ. ಕೈಯಲ್ಲಿರುವ ಮುರುಕು ಕನ್ನಡಿ ನೋಡುತ್ತ, ಮೀಸೆಯ ಅಂಚುಗಳು ಸರಿಯಾಗಲಿಲ್ಲವೆಂದು ಆಕ್ಷೇಪಿಸುತ್ತಿದ್ದಾನೆ ದಾರಿಹೋಕ. ಕ್ಷೌರದ ಆಕ್ಷೇಪಣೆ ಹೆಚ್ಚೆಂದರೂ ಎಷ್ಟು ಹೊತ್ತು ಎಂದು ಸುಮ್ಮಗಿದ್ದಾನೆ ಕ್ಷೌರಿಕ.

ಒಲ್ಲದ ಮನಸ್ಸಿನಿಂದ ದಾರಿಹೋಕ ಕಿಸೆಯಿಂದ ಎರಡು ಇಪ್ಪತ್ತೈದು ಪೈಸೆ ನಾಣ್ಯಗಳನ್ನು ತೆಗೆದುಕೊಟ್ಟ. ಕ್ಷೌರಿಕ ಅದನ್ನು ಜೇಬಿಗಿಳಿಸಿ ಕತ್ತಿ ಮತ್ತು ಕ್ಷೌರ ಸಾಮಗ್ರಿಗಳನ್ನು ಅಲ್ಯೂಮಿನಿಯಮ್ ಪೆಟ್ಟಿಗೆಯಲ್ಲಿ ತುಂಬುತ್ತಿರುವನು.

ಆ ಕ್ಷಣದಲ್ಲೇ ಉಪಕಾರ್‌ಸಿಂಗ್ ಹತ್ತು ಮಂದಿ ಗುರುಗಳನ್ನೂ ಧ್ಯಾನಿಸಿ ಕೊನೆಯ ನಿರ್ಧಾರಕ್ಕೆ ತಲಪಿದ್ದ. ಇಂದಿನ ಪರಿಸ್ಥಿತಿಯಲ್ಲಿ ಖಲ್ಸಾದ ಧರ್ಮ ಕಾಪಾಡಲು ಇದೊಂದೇ ಮಾರ್ಗ ಎಂದುಕೊಂಡನು. ಒಡನೆಯೆ ಆತ ಕ್ಷೌರಿಕನ ಮುಂದೆ ಕುಳಿತುಕೊಂಡ. ಕ್ಷೌರಿಕ ಯಾವ ಪ್ರಶ್ನೆಯನ್ನೂ ಕೇಳಲಿಲ್ಲ. ಇಳಿಬಿಸಿಲಿನ ನಿಶ್ಯಬ್ದತೆಯಲ್ಲಿದ್ದದ್ದು ಕತ್ತಿಯ ಶಬ್ದವಷ್ಟೇ–ಯಾವುದೋ ಕತ್ತಲೆಯಿಂದ ಲೊಚಗುಟ್ಟುವ ಹಲ್ಲಿಯ ಶಬ್ದದ ಹಾಗೆ.

ಕ್ಷೌರಿಕನ ಮುಂದೆ ತಲೆತಗ್ಗಿಸಿ ಕುಳಿತುರುವಾಗ ಮನಸ್ಸಿನಲ್ಲಿ ಯೋಚನೆಗಳು ಬಿಚ್ಚಿಕೊಂಡವು.

ಹೆಂಗಸರು ಜಗತ್ತಿನ ಇತಿಹಾಸ ತಿರುಚುವುದರಲ್ಲಿ ನಿರ್ಣಾಯಕ ಪಾತ್ರ



ವಹಿಸಿದ್ದರು. ಅವರು ಅರಮನೆಗೊಂದು ಅಲಂಕಾರವಾಗಿಯೇ ಬಂದಿರುತ್ತಿದ್ದರು. ಬಳಿಕ ಮೆಲ್ಲಮೆಲ್ಲಗೆ ಅಧಿಕಾರ ಸೂತ್ರವನ್ನು ತಮ್ಮ ಬೆರಳ ತುದಿಗಳಲ್ಲಿ ಅಡಕಗೊಳಿಸತೊಡಗುತ್ತಾರೆ. ಆಕರ್ಷಕವಾದ ನಗೆಯನ್ನು ಉಳಿಸಿಕೊಂಡೇ ಮನಿಕ್ಯೂರ್ ಹಚ್ಚಿ ಚಂದ ಹೆಚ್ಚಿಸಲಾದ ಉಗುರುಗಳು ಎದುರಾಳಿಗಳ ಕತ್ತಿನ ಆಳಕ್ಕೆ ಇಳಿಯುತ್ತವೆ.

ಬಹಳಷ್ಟು ಮುಖಗಳು ಉಪಕಾರ್‌ನ ನೆನಪಿಗೆ ಬಂದವು. ಫರ್ಡಿನಂಡ್ ಮಾರ್ಕೋಸನ ಪತ್ನಿ ಇಮಲ್ಡಾ ಬದುಕನ್ನಾರಂಭಿಸಿದ್ದು ಅಕ್ಷರಾರ್ಥದಲ್ಲೇ. ಬೀದಿಯಿಂದಾಗಿತ್ತು–ಬೀದಿಗಳ ಕತ್ತಲೆಯಿಂದ. ಆ ನೈಟ್ ಕ್ಲಬ್‌ನ ನರ್ತಕಿ ಮೆಲ್ಲಮೆಲ್ಲನೆ ರಾಜಕಾರಣದ ಏಣಿಯ ಮೂಲಕ ಮಾರ್ಕೋಸ್‌ನ ಮಲಗುವ ಕೋಣೆಗೆ ಸೇರಿದ್ದಳು.

ಇಮಲ್ಡಾಳ ಬಾಡಿಗೆ ಸೇನೆ ವಿಪಕ್ಷ ನಾಯಕ ಆಕ್ವಿನೋವ್ ಅನ್ನು ಗುಂಡಿಟ್ಟು ಕೊಂದಾಗ ಮತ್ತೋರ್ವ ಬೆಡಗಿಗೆ ಅಧಿಕಾರದ ಬಣ್ಣದ ರೆಕ್ಕೆಗಳನ್ನು ಪಡೆಯಲು ಅವಕಾಶ ದೊರೆತಿತ್ತು–ಹೌದು, ಕ್ವಾರಿ ಆಕ್ವಿನೋಳಿಗೆ.

ಮಾವೋ ಬದುಕಿದ್ದಾಗ ಸಿಂಹಾಸನದ ಹಿಂದೆ ಜಿಯಾಂಗ್ ಕ್ವಿಂಗ್ ಇದ್ದಿದ್ದಳು. ಮುಂದೆ ಜೈಲು ಶಿಕ್ಷೆ ಅನುಭವಿಸುತ್ತಿದ್ದಾಗ ಆಕೆ ಹೇಳಿದ್ದಳು–ನಾನು ಮಾವೊರ ನಾಯಿಯಷ್ಟೇ ಆಗಿದ್ದೆ. ಯಾರನ್ನಾದರೂ ಕಚ್ಚಬೇಕೆಂದು ಮಾವೊ ಹೇಳಿದಾಗಲೆಲ್ಲ ನಾನು ಅನುಸರಿಸುತ್ತಿದ್ದೆ, ಅಷ್ಟೇ. ಆಕೆಯೇ ಹೇಳಿದ ಮಾತು–ಬಹಳ ಬಾರಿ ಅನುಭವಿಸಿದಾಗ ಸಂಭೋಗ ಕೂಡ ರೋಸಿ ಬಿಡುತ್ತದೆ. ಆದರೆ ಅಧಿಕಾರದ ರುಚಿ ಕಂಡವರಿಗೆ ಅದನ್ನೆಂದೂ ಕೈಬಿಡಲು ಸಾಧ್ಯವಾಗುವುದಿಲ್ಲ.

ಅಧಿಕಾರ ಕಳೆದುಕೊಂಡಾಗ ಇಂದಿರಾರನ್ನು ರಾಜಕೀಯಕ್ಕೆ ಮರಳುವ ಯೋಚನೆ ಇಲ್ಲವೆ ಎಂದು ಪತ್ರಕರ್ತರು ಪ್ರಶ್ನಿಸಿದ್ದರು. ಆಕೆಯ ಉತ್ತರ ಅರ್ಥ ಗರ್ಭಿತವಾಗಿತ್ತು.

ಮರಳುವುದೆ? ಮರಳಲಿಕ್ಕೆ ರಾಜಕೀಯವನ್ನು ಬಿಟ್ಟೇ ಇಲ್ಲವಲ್ಲ?

ಇಂದಿರಾ ಬಹಳ ವರ್ಷಗಳ ಕಾಲ ನೆಹರೂ ಮಗಳೆಂಬ ನೆಲೆಯಲ್ಲಿ ನೇಪಥ್ಯದಲ್ಲಿದ್ದು ರಾಜಕೀಯ ನಿರ್ಧಾರಗಳ ವೇಳೆ ಪ್ರಭಾವ ಬೀರಿದ್ದರು. ಮುಂದೆ ಮೆಲ್ಲಮೆಲ್ಲಗೆ ಸ್ವಂತ ಬಲದಿಂದಲೇ ಆಕೆ ಹೊರಬಂದರು.

ಅಧಿಕಾರ ಎಲ್ಲಾ ಸ್ತ್ರೀಯರಲ್ಲೂ ಸಮಾನ ರೀತಿಯ ಪ್ರಭಾವ ಬೀರಿದೆ. ಫ್ರಾನ್ಸ್‌ನ ಪ್ರಧಾನ ಮಂತ್ರಿಯ ಪತ್ನಿ ಸೆರ್ನಾಡೆಟ್ಟಿ, ಅಮೆರಿಕದ ನಾನ್ಸಿರೇಗನ್ ಅವರೆಲ್ಲ, ತಮ್ಮ ಗಂಡಂದಿರ ಅಧಿಕಾರ ಬಲವನ್ನು ನಿರ್ಲಕ್ಷಿಸಿದವರನ್ನು ನಿರ್ದಯವಾಗಿಯೇ ನಡೆಸಿಕೊಂಡಿದ್ದರು.

ಕ್ಷೌರಿಕನ ಕತ್ತಿ ಎಲ್ಲೊ ಗಾಯ ಮಾಡಿದಾಗಲಷ್ಟೇ ಉಪಕಾರ್‌ಗೆ ಪರಿಸರ ಪ್ರಜ್ಞೆ ಮರಳಿದ್ದು.

ಕ್ಷೌರಿಕ ಕೊಟ್ಟ ಕನ್ನಡಿಯ ತುಣುಕಿನಲ್ಲಿ ನೋಡಿದಾಗ ಮೊದಲು ಚಕಿತನಾಗಿ ಬಿಟ್ಟ–ಸ್ವತಃ ಗುರುತಿಸಲು ಸಾಧ್ಯವಾಗಲಿಲ್ಲ.

ಯಾರು ಈ ಸುಂದರ ಮುಖದ ಯುವಕ!

ಕೆಳಗೆ ಚದುರಿಸಿದ್ದಿರುವ ಕೂದಲ ತುಣುಕುಗಳಲ್ಲಿ ದೃಷ್ಟಿ ಹಾಯಿಸಿದಾಗ ನೆತ್ತರು ಕುದಿಯಿತು. ಉದ್ವೇಗ ಮತ್ತು ವ್ಯಥೆ ಮನಸ್ಸನ್ನು ಮಥಿಸಿತು. ಕೈಗಳು ಕಂಪಿಸಿದವು. ಕ್ಷೌರಿಕನ ಕಾಲರ್ ಒಂದು ಮಾಡಿ ಹಿಡಿದು ಆತನನ್ನು ಉಪಕಾರ್ ನೆಟ್ಟಗೆ ಮೇಲಕ್ಕೆತ್ತಿದ.

ತತ್‌ಕ್ಷಣವೇ ಸಂಯಮವನ್ನು ತಂದುಕೊಂಡ. ತನ್ನ ಅಸಹಾಯಕತೆಗೆ ಆತನಿಗೇಕೆ ಶಿಕ್ಷೆ?

ಮೆಲ್ಲಗೆ ಆತನನ್ನು ಆನಿಸಿ ತಬ್ಬಿಕೊಂಡ. ಬಳಿಕ ಕಿವಿಯಲ್ಲಿ ಪಿಸುಗುಟ್ಟಿದ:

"ಸಹೋದರಾ.... ಕ್ಷಮಿಸು..."

ಜೇಬಿನಿಂದ ನೂರರ ಒಂದು ನೋಟು ತೆಗೆದು ಕ್ಷೌರಿಕನ ಕೈಯಲ್ಲಿರಿಸಿದ. ಕ್ಷೌರಿಕನ ಕಣ್ಣುಗಳಲ್ಲಿದ್ದ ದೈನ್ಯ, ಅಪನಂಬಿಕೆಗೆ ದಾರಿ ಬಿಟ್ಟುಕೊಟ್ಟಿತು.

* * *

ಗುರುದೇವ್‌ಸಿಂಗ್ ಫೋನ್‌ನಲ್ಲಿ ಸಿಕ್ಕಿದಾಗ, ವಿಷಯಗಳನ್ನು ಎಷ್ಟರಮಟ್ಟಿಗೆ ಮರೆಮಾಚದೆ ಹೇಳಬೇಕು ಎಂಬ ಬಗ್ಗೆ ಹೆಚ್ಚೇನೂ ಯೋಚಿಸಿಕೊಂಡಿರಲಿಲ್ಲ ರವಿ. ದರ್ಶನ್‌ಳಿಂದ ಸಾರಾಂಶಗಳನ್ನೆಲ್ಲ ತಕ್ಕಷ್ಟು ತಿಳಿದುಕೊಂಡಿದ್ದ. ಅಷ್ಟೇ, ದರ್ಶನ್ ಬಿಕ್ಕಿ ಬಿಕ್ಕಿ ಅಳುತ್ತಲೇ ತಾನು ಅನುಭವಿಸಿದ್ದ ಯಾತನೆಗಳನ್ನೆಲ್ಲ ವಿವರಿಸಿದ್ದಳು. ಪ್ರೀತಿಯ ಅಮ್ಮನನ್ನೂ ತಮ್ಮನನ್ನೂ ಮನೆಯಲ್ಲಿ ಬಿಟ್ಟು ಬಿಟ್ಟು ತಾನೇಕೆ ಹೊರಟು ಬಂದದ್ದು ಎಂಬ ಪ್ರಶ್ನೆ ಅವಳನ್ನು ತೀರಾ ಕಂಗೆಡಿಸಿ ಬಿಟ್ಟಿತ್ತು. ಫೋನ್ ಮಾಡಲು ಯತ್ನಿಸಿದ್ದು ಮಾತ್ರ ಅವಳಿಗೆ ನೆನಪಿದೆ. ಆಮೇಲೆ ರವಿಯ ಫ್ಲ್ಯಾಟ್‌ಗೆ ತಲಪಿದ್ದು? ನೆನಪಿಗೆ ತಂದುಕೊಳ್ಳಲು ಮಾಡಿದ ಪ್ರಯತ್ನಗಳಾವುದೂ ಯಶಸ್ವಿಯಾಗಲಿಲ್ಲ. ಯಾವ ವಾಹನದಲ್ಲಿ ಬಂದದ್ದು–ಬಸ್ಸಿನಲ್ಲೆ, ರಿಕ್ಷಾದಲ್ಲೆ, ಟ್ಯಾಕ್ಸಿಯಲ್ಲೆ? ಅದೂ ಗೊತ್ತಿಲ್ಲ. ಆಕೆ ವಿಸ್ಮೃತಿಯಿಂದ ಎಚ್ಚರಗೊಂಡದ್ದು ಎಂದೂ ಯಾರೂ ಆಕೆಯನ್ನು ಗುರುತಿಸಲಿಲ್ಲ. ನೆನಪುಗಳಲ್ಲಿ ಹಠಾತ್ತನೆ ಅಸಂಖ್ಯ ಬಿರುಕುಗಳು ಸಂಭವಿಸಿದ ಹಾಗೆ ಮಂದ ಬಿಸಿಲಿನಲ್ಲಿ, ನಿನ್ನೆ ಬೀದಿಗುಂಟ ಯಾವುದೊ ಕನಸಿನಲ್ಲೆಂಬಂತೆ ನಡೆದದ್ದು ನೆನಪಿದೆ. ಯಾರದ್ದಾದರೂ ಸಹಾಯ ಪಡೆದಿದ್ದನೇ ಎಂಬುದು ನೆನಪಿಲ್ಲ. ಯಾರಾದರೂ ಲಿಫ್ಟ್ ಕೊಟ್ಟಿದ್ದರೆ ಎಂಬುದೂ ಗೊತ್ತಿಲ್ಲ.

ಆ ಕಡೆಯಿಂದ ಗುರುದೇವ್ ಅಸಹನೆಗೊಳಗಾದವರಂತೆ ಪ್ರಶ್ನಿಸಿದರು:

"ಏನು ವಿಷಯ?"

"ಎಲ್ಲವನ್ನೂ ಆಮೇಲೆ ಹೇಳ್ತೇನೆ ಫ್ರೆಂಡ್, ಅಂಗದ್ ನಿದ್ದೆ ಹೋದನೆ?"



"ವೇಳೆ ಅರ್ಧ ರಾತ್ರಿ ಕಳೆದಿದೆ. ಆದರೂ ಯಾವನೇ ಸಿಕ್ಖನಿಗೆ ಈ ರಾತ್ರಿ ನಿದ್ದೆ ಮಾಡಲು ಸಾಧ್ಯವೆ?"

"ಒಮ್ಮೆ ಫೋನ್‌ನ ಹತ್ತಿರ ಕರೀತೀರಾ? ಅಗತ್ಯ ಕಾರ್ಯವಿದೆ."

ಈ ಪ್ರಸಂಗದಲ್ಲಿ ಅಂಗದ್‌ನ ಸಹಾಯ ಪಡೆಯುವುದು ಒಳ್ಳೆಯದೆಂದು ಅನ್ನಿಸಿದ್ದರಿಂದಲೇ ರವಿ ಫೋನ್ ಮಾಡಲು ಹೊರಟಿದ್ದ. ಆದರೆ ಮರು ಚಿಂತನೆ ಆತನನ್ನು ಪುನಃ ತಡೆಹಿಡಿಯಿತು. ಎಲ್ಲವೂ ಶಾಂತವಾಗಿ ಮುಗಿದ ಬಳಿಕ ಹೇಳುವುದೇ ತಾನೆ ಒಳ್ಳೆಯದು?

ಅಂಗದ್‌ನ ಸ್ವರ ಆ ಕಡೆಯಿಂದ ಕೇಳಿಸಿತು. ಆಮೇಲೆ ಅನುಮಾನಿಸಲಿಲ್ಲ. ಈ ಯುವಕನಲ್ಲಿ ಪಕ್ವತೆ ಇದೆ: ವಿದ್ಯೆ ಇದೆ: ಎಲ್ಲವನ್ನೂ ಅರ್ಥ ಮಾಡಿಕೊಳ್ಳಬಲ್ಲ ವಿಶಾಲ ಮನಸ್ಸೂ ಇದೆ ಎಂದುಕೊಂಡನು ರವಿ.

"ಏನು ಅಂಕಲ್?"

ಅಂಗದ್‌ನ ಧ್ವನಿಯಲ್ಲಿನ ಉದ್ವೇಗವನ್ನು ರವಿ ಗಮನಿಸಿದ.

"ಅಂಗದ್, ದರ್ಶನ್ ಈಸ್ ಇನ್ ಟ್ರಬಲ್. ಐ ನೀಡ್ ಯುವರ್ ಹೆಲ್ಪ್."

"ವಾಟ್ ಹ್ಯಾಪೆನ್ಡ್ ಅಂಕಲ್?"

"ತತ್‌ಕ್ಷಣ ನನ್ನ ಫ್ಲ್ಯಾಟಿಗೆ ಬಾ. ದರ್ಶನ್ ಇಲ್ಲಿದ್ದಾಳೆ. ಎಲ್ಲವನ್ನೂ ಸಾವಕಾಶವಾಗಿ ಹೇಳ್ತೇನೆ."

"ಸರಿ. ನಾನೀಗಲೇ ಹೊರಟೆ."

ಪಕ್ಕದ ಫ್ಲ್ಯಾಟಿನಲ್ಲಿ ವಾಸಿಸುತ್ತಿರುವ ಲೇಡಿ ಡಾಕ್ಟರ್ ದರ್ಶನ್‌ಗೆ ಅಗತ್ಯವಾದ ಪ್ರಾಥಮಿಕ ಶುಶ್ರೂಷೆಗಳನ್ನು ನೀಡಿದ್ದರು. ಗಾಯಗಳನ್ನು ಡ್ರೆಸ್ ಮಾಡಿ ಹೆಚ್ಚೆಂದರೆ ಒಂದು ತಾಸು ಕಳೆದಿರಬಹುದು. ಡಾಕ್ಟರ್ ನೀಡಿದ್ದ ಟ್ರ್ಯಂಕ್ವಿಲೈಸರ್‌ನ ಅಮಲಿನಿಂದ ದರ್ಶನ್ ನಿದ್ರಿಸುತ್ತಿರುವಳು. ಸುನೀಂದರ್ ಮತ್ತು ಮನೀಂದರ್ ನಿದ್ದೆ ಬಿಟ್ಟು ದೀದಿಯ ಆರೈಕೆ ಮಾಡಲು ಸಿದ್ಧರಾದರೂ ರವಿ ಅವರನ್ನು ನಿದ್ರಿಸಲು ಪ್ರೇರೇಪಿಸಿದ್ದ.

ಹತ್ತು ನಿಮಿಷದೊಳಗೇ ಬಾಗಿಲು ಬಡಿದದ್ದು ಕೇಳಿಸಿತು. ಕ್ಲಾಕ್‌ನಲ್ಲಿ ಗಂಟೆ ೧–೪೦. ರವಿ ಬಾಗಿಲು ತೆರೆದ. ಅಂಗದ್ ವಿಚಾರಿಸಿದ:

"ದರ್ಶನ್‌ಗೆ ಏನಾಗಿದೆ?"

ಮಂಚದ ಮೇಲೆ ಶಾಂತವಾಗಿ ನಿದ್ರಿಸುತ್ತಿರುವ ದರ್ಶನ್‌ಳ ಕಡೆಗೆ ನೋಡುತ್ತ ರವಿ ಹೇಳಿದ:

"ಗುರುಕೃಪೆಯಿಂದ ಅವಳಿಗೆ ಅಪಾಯವೇನೂ ಸಂಭವಿಸಲಿಲ್ಲ. ಬಟ್ ಷಿ ಈಸ್ ಇನ್ ಶಾಕ್. ಅವಳ ತಾಯಿ ಮತ್ತು ತಮ್ಮ ಕೊಲೆಯಾಗಿದ್ದಾರೆ. ತಂದೆ ಕಾಣೆಯಾಗಿದ್ದಾನೆ."

"ಓ ಮೈ ಗಾಡ್!"

ಅಂಗದ್ ದರ್ಶನ್‌ಳ ಪಕ್ಕದಲ್ಲಿ ಕುಳಿತು ಮಬ್ಬು ಬೆಳಕಿನಲ್ಲಿ ಅವಳ ಮುಖವನ್ನು ದಿಟ್ಟಿಸಿ ನೋಡಿದ. ಹಣೆಗೆ ಜಾರಿಬಿದ್ದುಕೊಂಡಿರುವ ಮುಂಗುರುಳನ್ನು ತೀಡಿ ಸರಿಸಲು ಅವನ ಬೆರಳುಗಳು ಮುಂದಕ್ಕೆ ಸರಿದವು. ಬಳಿಕ ಮರುಚಿಂತನೆಯೊಂದು ಅಡ್ಡಿಪಡಿಸಿದ್ದರಿಂದಲೊ ಎಂಬಂತೆ ಕೈ ಹಿಂತೆಗೆದುಕೊಂಡ. ರಜಾಯಿಯಿಂದ ಅವಳನ್ನು ಕುತ್ತಿಗೆಯ ತನಕ ಹೊದೆಸಿದ. ನಿದ್ರಿಸು... ಶಾಂತವಾಗಿ ನಿದ್ರಿಸು ಎಂದು ಆತ ಉರುಹೊಡೆಯುತ್ತಲೂ ಇದ್ದ.

ಏನಾಗಿದೆ ಈ ಮನುಷ್ಯರಿಗೆ?

ಅಂಗದ್ ಥಟ್ಟನೆ ಸಿಟ್ಟಿಗೇಳುತ್ತ ಪ್ರಶ್ನಿಸಿದ. ಈ ನಗರದಲ್ಲಿ ನಾವು ಪರಕೀಯರಾಗಿದ್ದೇವೆ. ಸಿಕ್ಖ್ ಚಿಹ್ನೆಗಳನ್ನು ಧರಿಸಿರುವ ಯಾರೊಬ್ಬರಿಗೂ ಇಲ್ಲಿ ರಕ್ಷಣೆ ಇಲ್ಲವಾಗಿದೆ ಎಂದನಾತ.

ರವಿ ಅಂಗದ್‌ನ ಹೆಗಲ ಮೇಲೆ ಕೈಯಿರಿಸಿದ. ಆತನನ್ನು ಕೈ ಹಿಡಿದು ಪಕ್ಕದಲ್ಲಿ ಕುಳ್ಳಿರಿಸಿದ.

ಅಂಗೈಗಳನ್ನು ಪರಸ್ಪರ ತಿಕ್ಕುತ್ತ ಅಂಗದ್ ರವಿಯ ಹೆಗಲ ಮೇಲೆ ಮುಖವೊತ್ತಿ ಬಿಕ್ಕಿ ಬಿಕ್ಕಿ ಅಳತೊಡಗಿದ.

ಸಾಂತ್ವನ ಹೇಳಲು ರವಿಯ ಬಳಿ ಮಾತುಗಳಿಲ್ಲ. ಇದ್ದರೂ ಮಾತುಗಳಿಗೆ ಈಗ ಏನಿದೆ ಪ್ರಸಕ್ತಿ?

ಅಂಗದ್ ತುಸು ಶಾಂತನಾದಾಗ ರವಿ ಹೇಳಿದ: ನಾವೀಗ ಮಾಡಿ ಮುಗಿಸಬೇಕಾದ ಕಾರ್ಯಗಳು ಬಹಳಷ್ಟಿವೆ. ಹೊತ್ತು ಬೆಳಗಾಗಲು ಇನ್ನೂ ಸಮಯವಿದೆ. ದರ್ಶನ್‌ಳ ಅಮ್ಮನ ಮತ್ತು ತಮ್ಮನ ನಿರ್ಜೀವ ಶರೀರಗಳು ಅವರ ಮನೆಯಲ್ಲಿ ಅನಾಥವಾಗಿ ಬಿದ್ದುಕೊಂಡಿವೆ. ದರ್ಶನ್ ದಿಗ್ಭ್ರಾಂತಿಗಳ ನಡುವೆ ಬಾಗಿಲು ಬಂದು ಮಾಡಿದ್ದಳೇ ಎಂದು ಕೂಡ ತಿಳಿಯದು. ಅವಳ ವಿವರಣೆಯಿಂದ ಗೊತ್ತಾದದ್ದು ಅವರು ಕೊಲೆಯಾಗಿ ಭರ್ತಿ ಇಪ್ಪತ್ತನಾಲ್ಕು ತಾಸುಗಳಾಗಲು ಇನ್ನು ಹೆಚ್ಚು ಹೊತ್ತಿಲ್ಲ. ಏನೇ ಆದರೂ ಪೊಲೀಸ್‌ಗೆ ತಿಳಿಸಿ ಡೆಡ್ ಬಾಡಿಗಳೆರಡನ್ನೂ ಮೋರ್ಚರಿಗೆ ಸ್ಥಳಾಂತರಿಸಲು ಸೂಕ್ತ ವ್ಯವಸ್ಥೆ ಮಾಡಬೇಕು. ಜತೆಯಲ್ಲೆ ದರ್ಶನ್‌ಳ ತಂದೆಯನ್ನು ಪತ್ತೆಹಚ್ಚಬೇಕಾಗಿದೆ. ಆತ ಅಪಾಯಕ್ಕೆ ಸಿಲುಕಿರಲೂ ಬಹುದು. ಅಲ್ಲವಾದರೆ ಇಷ್ಟರಲ್ಲೆ ಮರಳಿ ತಲಪಬೇಕಿತ್ತಲ್ಲ.

ಎಲ್ಲವನ್ನೂ ಕೇಳಿಸಿಕೊಂಡ ಬಳಿಕ ಅಂಗದ್ ಎದ್ದ. ದರ್ಶನ್ ಇಲ್ಲೇ ನಿದ್ರಿಸಲಿ. ಸುನೀಂದರ್ ಮತ್ತು ಮನೀಂದರ್ ಅವಳನ್ನು ನೋಡಿಕೊಳ್ಳುವರು.

ರವಿ ಮಲಗುವ ಕೋಣೆಗೆ ಹೋಗಿ ಎಳೆಯರನ್ನು ಕರೆದೆಬ್ಬಿಸಿದ. ದರ್ಶನ್‌ಳನ್ನು ನೋಡಿಕೊಳ್ಳಲು ಅವರಿಗೆ ಹೇಳಿದ. ಬಳಿಕ ಅಂಗದ್‌ನನ್ನು ಜತೆಗೂಡಿಸಿಕೊಂಡು ಹೊರಗಿನ ಚಳಿಯತ್ತ ಹೊರಟ.



ನಿರ್ಜನವಾದ ರಸ್ತೆಗುಂಟ ಕಾರ್ ಓಡುತ್ತಿರುವಾಗ ಅಂಗದ್‌ನ ಚಿಂತೆಗಳು ಬಿಚ್ಚಿಕೊಂಡವು. ಸಿಕ್ಖ್ ಸಮಾಜ ಈಗ ಅದರ ಅಸ್ತಿತ್ವವನ್ನರಸುತ್ತಿದೆ. ಈ ಕವಲು ದಾರಿಯಲ್ಲಿ ತನಗೆ ತನ್ನದ್ದೇ ಆದ ಬಾಧ್ಯತೆಗಳಿವೆ–ತನ್ನ ಬಗ್ಗೆ, ದರ್ಶನ್‌ಳ ಬಗ್ಗೆ, ಓರ್ವ ಸರಕಾರೀ ಅಧಿಕಾರಿಯಾಗಿರುವ ತನ್ನ ತಂದೆಯ ಬಗ್ಗೆ. ಎಲ್ಲಕ್ಕಿಂತ ಹೆಚ್ಚಾಗಿ ಸಿಕ್ಖ್ ಸಮಾಜದ ಬಗ್ಗೆ. ಈ ದೇಶದ ಬಗ್ಗೆ. ಸುತ್ತಲೂ ನಡೆಯುತ್ತಿರುವ ಕ್ರೌರ್ಯಗಳಷ್ಟೂ ಒಂದು ಮುಖ್ಯ ಸಂಗತಿಯ ಕಡೆಗೇ ಬೆಟ್ಟುಮಾಡುತ್ತಿವೆ–ಸಿಕ್ಖರು ಒಟ್ಟಾಗಬೇಕಾಗಿದೆ. ಹಿಂದೂಗಳ ಹಾಗೆಯೇ ಸಿಕ್ಖರೂ ಸ್ವಾರ್ಥ ಹಿತಾಸಕ್ತಿಗಳಿಗಾಗಿ ಕೋಮು ಗಲಭೆಗಳನ್ನು ಹಬ್ಬಿಸಲು ಹಿಂಜರಿಯದ ಬೆರಳೆಣಿಕೆಯ ನಾಯಕತ್ವದ ಬಲಿಪಶುಗಳಾಗುತ್ತಿದ್ದಾರೆ. ಮತ ಮತ್ತು ರಾಜಕಾರಣಗಳು ಇಷ್ಟರ ಮಟ್ಟಿಗೆ ಒಂದಕ್ಕೊಂದು ಸಿಕ್ಕು ಹಾಕಿಕೊಂಡಿದ್ದ ಬೇರೊಂದು ಸಂದರ್ಭ ಚರಿತ್ರೆಯಲ್ಲಿರಲಿಲ್ಲ.

ರವಿ ಕಾರ್ ನಿಲ್ಲಿಸಿದಾಗ ಅಂಗದ್ ಚಿಂತೆಯಿಂದ ಎಚ್ಚೆತ್ತ. ಪೊಲೀಸ್ ಸ್ಟೇಶನ್‌ನಲ್ಲಿ ಓರ್ವ ಕಾನ್‌ಸ್ಟೆಬಲ್ ಮಾತ್ರವೇ ಇದ್ದದ್ದು. ರವಿ, ಸ್ಟೇಶನ್ ಹೌಸ್ ಆಫೀಸರ್‌ಗೆ ಫೋನ್ ಮಾಡಿ ವಿಷಯಗಳನ್ನು ಚುಟುಕಾಗಿ ತಿಳಿಸಿದ: ಎರಡು ಮೃತ ದೇಹಗಳು ಅನೇಕ ಗಂಟೆಗಳಿಂದ ಅನಾಥವಾಗಿ ಬಿದ್ದುಕೊಂಡಿವೆ. ಮನೆ ಯಜಮಾನನ ಸುದ್ದಿ ಕೂಡ ಇಲ್ಲ.

ಆ ಕಡೆಯಿಂದ ಮೊದಲು ಪ್ರತಿಕ್ರಿಯೆಯೇ ಬರಲಿಲ್ಲ. ತುಸು ಹೊತ್ತಿನ ಬಳಿಕ ಬಂದದ್ದೊಂದು ಸಲಹೆಯಾಗಿತ್ತು: ಮೃತ ದೇಹಗಳನ್ನು ಸುಡಲು ವ್ಯವಸ್ಥೆ ಮಾಡಿರಿ.

ರವಿ ಹೇಳಿದ: ಇದು ನ್ಯಾಚುರಲ್ ಡೆತ್ ಅಲ್ಲ. ಇಟ್ ಈಸ್ ಮರ್ಡರ್. ಇಟ್ ಈಸ್ ರೇಪ್. ಇಟ್ ಈಸ್ ಲೂಟಿಂಗ್. ಐ ವಾಂಟ್ ಟು ಫೈಲ್ ಎ ಎಫ್.ಐ.ಆರ್. ತಾವು ಬರಲು ಸಿದ್ಧರಿಲ್ಲವಾದರೆ ನಾನು ಸಿ.ಪಿ.ಯನ್ನು ಕರೆಯುವುದು ಅನಿವಾರ್ಯವಾಗುತ್ತದೆ.

ಆಚೆ, ಅನುಮಾನದ ಒಂದು ನಿಮಿಷ ಬಳಿಕ, ಒಂದು ಕ್ಷಮಾಯಾಚನೆಯ ಹಾಗೆ:

"ಇಫ್ ಯು ವಾಂಟ್ ಟು ಗೋ ಥ್ರೂ ದ ಡ್ರಿಲ್, ಓಕೆ. ಐ ಆ್ಯಂ ಕಮಿಂಗ್ ಇನ್ ೧೫ ಮಿನಿಟ್ಸ್."

ರವಿ ಮತ್ತು ಅಂಗದ್ ಪೊಲೀಸ್ ಠಾಣೆಯ ವೆರಾಂಡದ ಮರದ ಹಲಗೆಯ ಮೇಲೆ ಎಸ್.ಎಚ್.ಓ. ಬರುವುದನ್ನೇ ಕಾದುಕುಳಿತರು.

ಆಗಲೂ ಅಂಗದನ ಮನಸ್ಸು ಪ್ರಶ್ನಿಸಿತು.

"ಇದೂ ದೈವದಇಚ್ಛೆ ಹೌದೆ?"

* * *

## ಅಧ್ಯಾಯ ೨೦

# ಉರಿದು ಹೋದ ತ್ರಿಲೋಕಪುರಿ

ಇಂದುಗೆ ಎಚ್ಚರವಾದಾಗ ಟ್ರೈನ್ ನಿಂತುಕೊಂಡಿತ್ತು. ಅವಳಿಗೆ ಪರಿಸರ ಪ್ರಜ್ಞೆ ಮೂಡಲು ಮತ್ತೂ ತುಸು ಹೊತ್ತು ಹಿಡಿಯಿತು. ಯಾವುದೊ ಪೂರ್ವಕಾಲೀನ ಕನಸೊಂದಕ್ಕೆ ಹೊಂದಿಕೊಳ್ಳಲು ಪ್ರಯಾಸ ಪಡುತ್ತಿದ್ದಾಗಲೇ ಎಚ್ಚರವಾಗಿತ್ತು. ಏನಾಗಿತ್ತು ಆ ಕನಸು? ಜಾಗರವೂ ಅಲ್ಲದ ನಿದ್ದೆಯೂ ಅಲ್ಲದ ಮಂಪರಿನಲ್ಲಿ, ಮಬ್ಬು ಬಿಸಿಲಿನಲ್ಲಿ ಹಾರಾಡುತ್ತಿರುವ ಅಜ್ಜನಗಡ್ಡದ ಹಾಗೆ ಬೆರಳಿಗೆಟಕುವಷ್ಟರಲ್ಲೆ ಅದು ತಪ್ಪಿಸಿಕೊಳ್ಳುತ್ತಿದೆ. ಆದರೂ ಅದನ್ನು ಜ್ಞಾಪಿಸಿಕೊಳ್ಳಲು ಕೊನೆಗವಳು ಸಮರ್ಥಳಾದಳು.

ಕೇದಗೆ ಪೊದೆಗಳ ಮತ್ತು ಲಾವಂಚದ ಹುಲ್ಲುಗಳ ದಂಡೆಗಳಿರುವ ಆ ಕಿರು ತೋಡಿನಲ್ಲಿ ತಾನು ಇಳಿದದ್ದೇಕೆ? ಯಾವತ್ತೂ ಮಂಡಿಯ ತನಕವಷ್ಟೇ ನೀರಿರುತ್ತಿದ್ದ ಆ ತೋಡಿನಲ್ಲಿ ಆಗ ಮಾತ್ರ ನೀರು ತುಂಬಿಕೊಂಡಿತ್ತು. ನೀರಿನಲ್ಲಿ ನೀಲಿ ನೈದಿಲೆ ಹೂವುಗಳೂ ತುಂಬಿದ್ದವು. ಜಾರುವ ದಂಡೆಯಿಂದ ತಾನು ಜರುಗಿ, ಜರುಗಿ ತೋಡಿಗಿಳಿದದ್ದು ಹೂ ಕೊಯ್ಯಲಿಕ್ಕೇನು? ಹೂ ಕೊಯ್ಯಬೇಕೆನ್ನುವಷ್ಟರಲ್ಲಿ ಆಚೆ ದಡದಿಂದ ಯಾರೋ ಕರೆದದ್ದು ಕೇಳಿಸಿತು?

"ಇಂದೂ!"

ತಾನು ತಲೆಯೆತ್ತಿ ನೋಡಿದೆ. ಯಾರೋ ಒಬ್ಬ ಯುವಕ. ಮೊದಲು ಗುರುತು ಸಿಗಲಿಲ್ಲ. ಸೂಟು ತೊಟ್ಟಿದ್ದಾನೆ. ಯಾರೀತ. ಈ ಹಳ್ಳಿಯಲ್ಲಿ, ಈ ವೇಷದಲ್ಲಿ?

"ನನ್ನ ಗುರುತು ಹತ್ತಲಿಲ್ಲವೆ ಇಂದೂ?" ಸ್ವರ ಪರಿಚಿತವೇ.

"ಇಂದೂ ನಾನು"

"ಅಂದರೆ?"

"ನಾನೇ ಅಂದೆನಲ್ಲ?"

"ಆಗಲೂ ಯಾರೆಂದು ಗೊತ್ತಾಗಲಿಲ್ಲ."

"ಇಂದೂ, ನಿನಗೋಸ್ಕರ ನಾನು ಏನು ತಂದಿರುವೆನೆಂದು ಗೊತ್ತೆ?"



ಪ್ರತಿಯಾಗಿ ಏನೂ ಹೇಳದೆ ತಾನು, ಅರಳುವುದರಲ್ಲಿದ್ದ ನಾಲ್ಕಾರು ನೈದಿಲೆ ಹೂಗಳನ್ನು ಕೊಯ್ದೆ. ಬಳಿಕ ತರಾತುರಿಯಲ್ಲೆ ದಂಡೆ ಹತ್ತಲು ಹವಣಿಸಿದೆ. ಒಂದೆರಡು ಬಾರಿ ಕೆಳಗಡೆಗೆ ಜಾರಿದ್ದಿರಬೇಕು. ಅಷ್ಟರಲ್ಲೆ ಆ ಯುವಕ ತನ್ನ ಸಹಾಯಕ್ಕೆ ಬಂದಿದ್ದ. ಮರಳಿ ದಡ ಸೇರಿದಾಗ ಆತ ಹೇಳಿದ್ದ:

"ಆ ಹೂಗಳನ್ನು ನನಗೆ ಕೊಟ್ಟರೆ ನಾನೊಂದು ವಸ್ತುವನ್ನು ನಿನಗೆ ಕೊಡ್ತೇನೆ."

"ಯಾವ ವಸ್ತು ಅಂತ ಹೇಳಿರಲ್ಲ."

"ಇಗೋ ನೋಡು!"

ನೋಡಿಯೇ ನೋಡಿದೆ; ನವಿಲುಗರಿಗಳು. ಒಂದಲ್ಲ, ಹತ್ತಲ್ಲ ನೂರಾರು ನವಿಲುಗರಿಗಳು.

ಆಗಷ್ಟೆ ಮುಖ ನೋಡಿದ್ದೆ.

ಆಶ್ಚರ್ಯ! ರವಿ!

ಮುಂದೆ? ಕನಸಿನಿಂದ ಎಚ್ಚರಾದದ್ದು ಆಗಲೇ ಅಂತ ಅನ್ನಿಸುತ್ತೆ.

ಹೊರಗೆ ನೋಡಿದಳು. ಯಾವುದೋ. ಸ್ಟೇಶನ್ ಕಾಣಿಸಿತು. ಹೌದು ಇದು ಗ್ವಾಲಿಯರ್. ಸಮಯ ನೋಡಿದಳು: ಆರೂವರೆ, ದೇವರೇ! ಇನ್ನೆಷ್ಟು ಹೊತ್ತು ಕುಳಿತಿರಬೇಕು ಟ್ರೈನ್‌ನಲ್ಲಿ! ಆಗ್ರಾ, ಫರೀದಾಬಾದ್, ಮಥುರಾ ಬಳಿಕವೇ ನಿಜಾಮುದ್ದೀನ್!

ಸ್ಟೇಶನ್‌ನಲ್ಲಿ ರವಿ ಕಾಯುತ್ತಿರಬಹುದೆ? ತಾನು ಉಟ್ಟುಕೊಂಡಿರುವುದಾಗಿ ಬರೆದಿದ್ದ ಸೀರೆ ಮಾಸಿ ಅಂದಗೆಟ್ಟಿದೆ. ವರ್ಷಗಳ ಅನಂತರದ ಭೇಟಿಯ ವೇಳೆ ಮಸಿಯೂ ಧೂಳೂ ಮೆತ್ತಿಕೊಂಡಿರುವ ಈ ಸೀರೆ ಸಲ್ಲದೆಂದೆನ್ನಿಸುತ್ತದೆ. ಆಗ್ರಾದಲ್ಲಾಗಲೀ ಮಥುರಾದಲ್ಲಾಗಲೀ ಟ್ರೈನ್ ನಿಂತಾಗ ಬೇರೆ ಸೀರೆ ಉಟ್ಟುಕೊಳ್ಳಬಹುದು. ಹೇಗೂ ಎ.ಸಿ.ಕಂಪಾರ್ಟ್‌ಮೆಂಟಿನಲ್ಲಿರುತ್ತೇನೆ ಎಂದು ಬರೆದಿದ್ದೆ. ಕಿವಿಯ ರಿಂಗ್‌ಗಳನ್ನೂ ಗಮನಿಸಿಯಾರು ಎಂದು ಸಮಾಧಾನ ತಂದುಕೊಂಡಳು ಇಂದೂ.

ಯಾರೋ ತನ್ನ ಬರ್ತ್‌ನ ಕಾಲಬದಿಯಲ್ಲಿ ಕುಳಿತುಕೊಳ್ಳಲು ಹವಣಿಸುತ್ತಿರುವುದನ್ನು ಆಕೆ ಗಮನಿಸಿದ್ದು ಆಗಲೇ. ಓರ್ವ ವೃದ್ಧ. ಬಿಳಿ ಗಡ್ಡ, ಊಡಿಯ ತನಕ ಇಳಿ ಬಿದ್ದುಕೊಂಡಿದೆ. ಬಿಳಿ ಪಗಡಿ ಧರಿಸಿರುವನು. ವಯಸ್ಸು ಅರುವತ್ತರಿಂದ ಎಪ್ಪತ್ತರ ಒಳಗೆ. ಸೋಡಾ ಬಾಟ್ಲಿಯ ಗಾಜಿಗಿಂತಲೂ ದಪ್ಪ ಮಸೂರದ ಕನ್ನಡಕ ಹಾಕಿಕೊಂಡಿದ್ದೂ ಬಗ್ಗಿಕೊಂಡೇ ಸೀಟ್ ಖಾಲಿ ಇದೆಯೇ ಎಂದು ನೋಡುತ್ತಿರುವನು. ಪಕ್ಕದ ಬರ್ತ್‌ನಲ್ಲಿರುವ ಯಾರೋ ಹೇಳಿದರು. ಬಾಬಾ, ಇದು ರಿಸರ್ವ್‌ಡ್ ಕಂಪಾರ್ಟ್‌ಮೆಂಟ್.

ವೃದ್ಧನೆಂದ: "ಗಾಡಿ ಹೊರಡಲು ಇನ್ನು ಎರಡೊ ಮೂರೊ ಮಿನಿಟುಗಳಷ್ಟೇ

ಇವೆ. ಹಗಲಲ್ಲವೆ ಪ್ರಯಾಣ? ನಿಮ್ಮ ಆಕ್ಷೇಪಣೆ ಇಲ್ಲವಾದರೆ ನಾನು ಇಲ್ಲೇ ಎಲ್ಲಾದರೂ ಕುಳಿತಿರುತ್ತೇನೆ."

ಬಲು ಶುದ್ಧವಾದ ಇಂಗ್ಲಿಷ್‌ನಲ್ಲಿ ಆತನೆಂದದ್ದು ಕೇಳಿದಾಗ ಯಾರೂ ವಿರೋಧ ಹೇಳಲಿಲ್ಲ. ಇಂದೂ ಕಾಲುಗಳನ್ನು ಮುದುರಿಸಿ ವೃದ್ಧನಿಗೆ ಕುಳಿತಿರಲು ಜಾಗ ಬಿಟ್ಟುಕೊಟ್ಟಳು. ಒಂದು ಚಿಕ್ಕ ಹ್ಯಾಂಡ್ ಬ್ಯಾಗಷ್ಟೇ ಇದೆ ವೃದ್ಧನ ವಶದಲ್ಲಿ. ಅದನ್ನು ಮಡಿಲಲ್ಲೆ ಇರಿಸಿಕೊಂಡು ಆತ ಮುದುಡಿ ಕುಳಿತುಕೊಂಡ.

ಇಂದೂ ಎದ್ದು ಬ್ರಶ್, ಪೇಸ್ಟ್, ಸೋಪ್ ಹಾಗೂ ಇತರ ಅತ್ಯಗತ್ಯದ ಪ್ರಸಾಧನ ಸಾಮಗ್ರಿಗಳೊಳಗೊಂಡ ಹ್ಯಾಂಡ್‌ಬ್ಯಾಗ್ ಎತ್ತಿಕೊಂಡು ಬಾತ್‌ರೂಮ್‌ಗೆ ಹೋದಳು. ಅವಳು ಮರಳಿ ಬರುವಷ್ಟರಲ್ಲಿ. ವೃದ್ಧನು ಎರಡು ಮಣ್ಣಿನ ಬಟ್ಟಲುಗಳಲ್ಲಿ ಚಹಾ ತರಿಸಿಟ್ಟು ಕಾದು ಕುಳಿತಿದ್ದನು.

"ಬೇಟೀ, ಚಾಯ್ ಪೀ ಲೇಗೀ..."

ನನಗೆ ಬೇಡವಿತ್ತು ಬಾಬಾ ಎನ್ನುತ್ತಲೇ ಕೈ ಚಾಚಿದಳು. ಬಿಸಿ, ಬಿಸಿ ಚಹಾ ಒಳಹೊಕ್ಕಾಗ ಉಲ್ಲಾಸವೆನಿಸಿತು ಇಂದೂಗೆ. ಆಗ ನೆನಪಾಯ್ತು. ನಿನ್ನೆ ಮಧ್ಯಾಹ್ನವಷ್ಟೇ ಊಟ ಮಾಡಿದ್ದು–ರಾತ್ರಿ ಒಂದು ಕಿತ್ತಳೆ, ಎರಡು ಬಿಸ್ಕೇಟ್‌ಗಳನ್ನಷ್ಟೇ ತಿನ್ನಲು ಸಾಧ್ಯವಾಗಿತ್ತು.

ಮಣ್ಣ ಬಟ್ಟಲನ್ನು ಹೊರಕ್ಕೆಸೆದು ಬಂದು ವೃದ್ಧನು ಪುನಃ ಕುಳಿತುಕೊಂಡನು.

ನಾನು ದೆಹಲಿಗೆ. ನನ್ನಿಬ್ಬರು ಮಕ್ಕಳೂ ದೆಹಲಿಯಲ್ಲಿ ಬಿಜಿನೆಸ್ ಮಾಡುತ್ತಿದ್ದಾರೆ. ಬೇಸಗೆ ಕಾಲದಲ್ಲಿ ಡೆಸರ್ಟ್ ಕೂಲರ್‌ಗಳನ್ನು ತಯಾರಿಸುವ ಒಂದು ಚಿಕ್ಕ ಫ್ಯಾಕ್ಟರಿ ಇದೆ ಹಿರಿಯವನಿಗೆ. ಎರಡನೆಯವನದ್ದು ಸ್ಪೋರ್ಟ್ಸ್ ಸಾಮಗ್ರಿಗಳ ತಯಾರಿಕೆ–ಹಾಕಿ ಸ್ಟಿಕ್ ಕ್ರಿಕೆಟ್‌ಬ್ಯಾಟ್, ಸ್ಪೋರ್ಟ್ಸ್‌ಗೆ ಬಳಸುವ ಗ್ಲೌಸ್ ಮುಂತಾದವುಗಳನ್ನು ತಯಾರಿಸುತ್ತಾನೆ.

ವೃದ್ಧನು ಒಂದು ಕ್ಷಣ ವಿರಮಿಸಿದನು. ಸ್ವಗತದ ಭಾವವಾಗಿತ್ತು ಮುಖದಲ್ಲಿ. ಇಂದೂ ಗಮನಿಸುತ್ತಿರುವುದನ್ನು ಕಂಡಾಗ ಪುನಃ ಮುಂದುವರಿಸಿದನು:

ಆದರೆ, ದೆಹಲಿಯಲ್ಲಿ ಏನು ನಡೆಯುತ್ತಾ ಇದೆಯೆಂದು ಯಾರಿಗೂ ಗೊತ್ತಿಲ್ಲ. ನಿನ್ನೆಯಿಡೀ ಅವರನ್ನು ಫೋನ್‌ನಲ್ಲಿ ಸಂಪರ್ಕಿಸಲು ಯತ್ನಿಸಿದ್ದೆ–ಆದರೆ ಸಿಕ್ಕಲಿಲ್ಲ. ನಲ್ವತ್ತೇಳರ ಕೊಲೆ, ಖೂನಿ, ಕಿಚ್ಚಿಡುವಿಕೆಗಳನ್ನೆಲ್ಲ ಕಂಡವನು ನಾನು. ಅದರ ಇದಿರೇಟುಗಳ ಕುರಿತು ನೆನೆವಾಗ ಈಗಲೂ ಮೈ ನಡುಗುತ್ತದೆ. ಅಂದು ಹಿಂದೂಗಳೂ ಸಿಕ್ಖರೂ ಒಟ್ಟಾಗಿದ್ದರು. ಇಸ್ಲಾಂ ಆಗಿತ್ತು ಶತ್ರು. ಮೂರು ದಶಕಗಳು ಕಳೆಯುವ ಮುನ್ನವೇ ಕೋಮುಗಲಭೆಗೆ ಹೊಸ ಪಂಗಡಗಳು ಹುಟ್ಟಿಕೊಂಡಿವೆ.

ಆತ ನಿಟ್ಟುಸಿರು ಬಿಟ್ಟ. ಅಷ್ಟರಲ್ಲೆ ಟ್ರೈನ್ ಚಲಿಸಲಾರಂಭಿಸಿತು.

ಮೆಲ್ಲ ಮೆಲ್ಲಗೆ ಹಿಂದಕ್ಕೆ ಸರಿಯುತ್ತಲೇ ಇದ್ದ ದೃಶ್ಯಗಳತ್ತ ನೋಡುತ್ತ ಆತ



ಮುಂದುವರಿಸಿದ:

ಸಿಕ್ಖರ ಮತ್ತು ಹಿಂದೂಗಳ ನಡುವೆ ಏನಿದೆ ವ್ಯತ್ಯಾಸ? ನನ್ನ ಹಿರಿಯ ಮಗ ಜೋಗಿಂದರ್ ಸಿಕ್ಖ್ ಮುದ್ರೆಗಳೆಲ್ಲವೂ ಇರುವ ಸಿಕ್ಖ್‌ನಾದರೆ, ಎರಡನೆಯ ಮಗ ಪರಮೇಂದರ್ ಸಿಕ್ಖ್ ಮುದ್ರೆಗಳಿಲ್ಲದ ಸಿಕ್ಖ್‌ನಾಗಿರುವನು. ಜೋಗಿಂದರ್ ಮದುವೆಯಾದದ್ದು ಮೋನ ಆಗಿರುವ ಸ್ಮರಣ್ ಸಿಂಗ್‌ನ ಮಗಳನ್ನು. ನಿತ್ಯವೂ ನಾವೆಲ್ಲರೂ ಗುರುದ್ವಾರಗಳಿಗೆ ಹೋಗುತ್ತೇವೆ. ಲಂಕಾರುಗಳಲ್ಲಿ ಊಟ ಮಾಡುತ್ತೇವೆ. ಗುರುವಾಣಿ ಉರು ಹೊಡೆಯುತ್ತೇವೆ. ಜಪ್‌ಜಿ ಮತ್ತು ಸುಖ ಮಣಿಗಳನ್ನು ಜಪಿಸುತ್ತೇವೆ. ಗುರುಗ್ರಂಥ ಸಾಹಿಬ್ ಪಾರಾಯಣ ಮಾಡುತ್ತೇವೆ. ಹೀಗಿದ್ದೂ ನಾವು ವರ್ಷಕ್ಕೊಮ್ಮೆ ವೈಷ್ಣೋದೇವಿಗೆ ಹೋಗಿ ಸೇವೆ ಸಲ್ಲಿಸಲು ಮರೆಯುವುದಿಲ್ಲ. ಮಥುರೆಗೆ ಹೋದಾಗ ಶ್ರೀಕೃಷ್ಣ ದೇಗುಲವನ್ನೂ ಸಂದರ್ಶಿಸುವೆವು. ದೆಹಲಿಯಲ್ಲಿನ ಬಿರ್ಲಾ ಮಂದಿರದಲ್ಲೂ ಆದ್ಯ ಕಾತ್ಯಾಯಿನೀ ಮಂದಿರದಲ್ಲೂ ಹರಕೆಗಳನ್ನು ಸಲ್ಲಿಸುತ್ತೇವೆ.

ಆತ ವಿರಮಿಸಿದ. ಕನ್ನಡಕ ತೆಗೆದು ಅದರ ದಪ್ಪ ಮಸೂರಗಳನ್ನು ಕುರ್ತಾದ ಅಂಚಿನಿಂದ ಒರೆಸಿ ಪುನಃ ಮೂಗಿಗೇರಿಸಿದ.

ಟ್ರೈನ್ ವೇಗ ಹೆಚ್ಚಿಸಿಕೊಂಡಿದೆ. ಹೊರಗಿನ ಮಬ್ಬು ಬಿಸಿಲಿನಲ್ಲಿ ಕೊಯಿಲು ಮುಗಿದಿದ್ದ ಗೋಧಿ ಹೊಲಗಳೂ ಮರದ ತುದಿಗಳಿಂದ ಕೆಳಕ್ಕೆ ಇಳಿಯುತ್ತಿರುವ ನವಿಲುಗಳೂ ಕಾಣಿಸಿದವು.

ಆಗ್ರಾ ಸಮೀಪಿಸುವುದರಲ್ಲಿದೆ. ದೂರದಲ್ಲಿ, ಚರಿತ್ರೆಯ ಅವಶೇಷಗಳಾಗಿ ಮಾರ್ಪಟ್ಟಿರುವ ಕೋಟೆ, ಕೊತ್ತಳಗಳು ಕಾಣಿಸುತ್ತಿವೆ. ವೃದ್ಧನು ಏನನ್ನೋ ಜ್ಞಾಪಿಸಿಕೊಂಡ ಹಾಗೆ ಹೇಳಿದ:

ನಾನು ಭಾರತಕ್ಕೆ ಸ್ವಾತಂತ್ರ್ಯ ದೊರೆತ ಬಳಿಕ ನಡೆದ ಎಲ್ಲಾ ಚುನಾವಣೆಗಳಲ್ಲೂ ಕಾಂಗ್ರೆಸ್‌ಗೇ ಓಟು ಹಾಕಿದ್ದೆ. ನನ್ನ ಹೆಂಡತಿ ಮತ್ತು ಹಿರೇ ಮಗನೂ ತಪ್ಪದೇ ಹಾಗೆಯೇ ಮಾಡಿದ್ದರು. ಎರಡನೆಯ ಮಗ ಮಾತ್ರ ಅಕಾಲಿಗಳ ಜತೆ ಸೇರಿಕೊಂಡಿದ್ದ. ನಾವಾದರೂ ವಿರೋಧವೇನೂ ಹೇಳಲಿಲ್ಲ. ಆದರೆ ಎರಡನೆಯವನ ಹಿರಿಯ ಮಗ ಜರ್ನೈಲ್‌ಸಿಂಗರ ಅನುಯಾಯಿಯಾಗಿದ್ದನು.

ಯಾರನ್ನೂ ದೂರಿ ಪ್ರಯೋಜನವಿಲ್ಲ. ಲವ, ಕುಶರು ಶ್ರೀರಾಮನ ಯಜ್ಞಾಶ್ವವನ್ನು ಹಿಡಿದು ಕಟ್ಟಿ ಹಾಕಿದ್ದ ಹಾಗೆ, ಕಾಲವನ್ನು ಕಟ್ಟಿಹಾಕಲು ಯಾರಿಗೂ ಸಾಧ್ಯವಿಲ್ಲ. ನೆರೆಯ ಪ್ರವಾಹದಲ್ಲಿ ತರಗೆಲೆಗಳ ಹಾಗೆ ತೇಲಿ ಹೋಗುವುದಷ್ಟೇ ನಮಗೆ ಸಾಧ್ಯ.

ಟ್ರೈನ್ ನಿಂತಿದೆ. ಬಹಳ ಹಸಿವೆಯಾಗುತ್ತಿದೆ. ಏನಾದರೂ ತಿನ್ನಬೇಕು ಎಂದುಕೊಂಡು ಇಂದೂ ಹೊರಕ್ಕೆ ಇಳಿದಳು. ಒಟ್ಟಿನಲ್ಲಿ ಸಿಕ್ಕಬಹುದಾದ ತಿಂಡಿ

ಪೂರಿ ಒಂದೇ. ಅಷ್ಟರಲ್ಲೇ ಪ್ರಯಾಣಿಕರು ಪೂರಿ ಮಾರುವವರನ್ನು ಮುತ್ತಿಕೊಂಡಾಗಿತ್ತು. ತುಸು ದೂರದಲ್ಲಿ ಸೇಬು ಮಾರುತ್ತಿರುವ ಒಬ್ಬ ಕೈಗಾಡಿಯವ ಕಾಣಿಸಿದ. ಒಂದಷ್ಟು ಸೇಬುಗಳನ್ನು ಕೊಂಡುಕೊಂಡು ಇಂದೂ ಟ್ರೈನ್‌ಗೆ ಹಿಂತಿರುಗುತ್ತಿದ್ದಾಗ ಧ್ವನಿವರ್ಧಕದ ಮೂಲಕ ಪ್ರಕಟನೆ ಕೇಳಿಸಿತು:

ಈ ಟ್ರೈನ್ ದೆಹಲಿಗೆ ಹೋಗುವುದಿಲ್ಲ.

ಇದು ಇಲ್ಲೇ ನಿಲ್ಲುತ್ತದೆ.

ಪ್ರಯಾಣಿಕರಿಗೆ ತೊಂದರೆಯಾದ ಬಗ್ಗೆ ವಿಷಾದಿಸುತ್ತೇವೆ.

ಬ್ರೀಫ್‌ಕೇಸ್ ಹಿಡಿದುಕೊಂಡು ಕೆಳಗಿಳಿಯುವಾಗ ಯಾರ್‍ಯಾರೊ ಹೇಳುವುದು ಕೇಳಿಸಿತು–ದೆಹಲಿ ಉರಿದು ಬೂದಿಯಾಗುತ್ತ ಇದೆ. ಯಾವ ಟ್ರೈನೂ ದೆಹಲಿಗೆ ಹೋಗುವುದಿಲ್ಲ. ವೃದ್ಧ ಸರ್ದಾರ್‌ಜಿಗೆ ಕೂಡ ಅದು ಕೇಳಿಸಿತು. ಆತ ತನ್ನಷ್ಟಕ್ಕೆ ಉರು ಹೊಡೆದ:

ಆತನ ಇಚ್ಛೆಗನುಗುಣವಾಗಿ ಎಲ್ಲವೂ ಸೃಷ್ಟಿಸಲ್ಪಟ್ಟವು.

ಆತನ ಇಚ್ಛೆಗನುಗುಣವಾಗಿ ಜೀವದ ತೊರೆ ಪ್ರವಹಿಸುತ್ತದೆ.

ಆತನ ಇಚ್ಛೇ ಏನೆಂದು ಯಾರಿಗೆ ತಾನೆ ತಿಳಿಯಲು ಸಾಧ್ಯ?

* * *

ಬಾಹ್ಯ ಮುದ್ರೆಗಳ ಅನುಪಸ್ಥಿತಿಯಿಂದ ಹೊಸ ಜನ್ಮ ಪಡೆದ ಉಪಕಾರ್‌ಸಿಂಗ್ ಯಾವ ಗೊತ್ತುಗುರಿಯೂ ಇಲ್ಲದೆ ದೆಹಲಿಯ ಬೀದಿಗಳ ಗುಂಟ ಅಲೆದಾಡಿದ–ಯಾರಾದರೂ ತನ್ನ ಗುರುತು ಹಿಡಿದಾರೆಂದಾಗಲೀ ತನ್ನ ಗತಕಾಲವು ತನ್ನನ್ನು ಬೇಟೆಯಾಡೀತೆಂದಾಗಲೀ ಹೆದರಬೇಕಾಗಿಲ್ಲ. ಈ ಅರಿವಿತ್ತ ಸ್ವಾತಂತ್ರ್ಯಕ್ಕೆ ಅದರದ್ದೇ ಆದ ಭಾರವೂ ಇದೆ. ಯೋಚಿಸುವಾಗಲೆಲ್ಲ ಉಕ್ಕಿ ಹೊಮ್ಮುತ್ತಲೇ ಇರುವ ಸಿಟ್ಟನ್ನು ತಡೆ ಹಿಡಿಯಲು ಆತನಿಗೆ ಸಾಧ್ಯವಾಗುತ್ತಾ ಇಲ್ಲ. ಎಲ್ಲಾ ಸಂಯಮವನ್ನೂ ಮುರಿಯುತ್ತಾ ಅದು ಕಿರಿಕಿರಿ ಮಾಡುತ್ತಲೇ ಇದೆ. ಒಂದೆರಡು ಬಾರಿ, ಮಾರ್ಗದಲ್ಲೆದುರಾದ ಕಲ್ವರ್ಟ್‌ಗಳ ಮೇಲೆ ಕುಳಿತು ಅದರ ಒರಟು ದಂಡೆಗೆ ಮುಷ್ಟಿ ಬಿಗಿದು ಗುದ್ದಿದ್ದ. ಆದ ಲಾಭ ಮುಷ್ಟಿಯಿಂದ ರಕ್ತ ಚಿಮ್ಮಿದ್ದು ಮಾತ್ರ.

ತಿಳಿಯಾದ ಬೀದಿಬೆಳಕಿನಲ್ಲಿ ನಗರದ ನಿರ್ಜನತೆ ಅಸಹಜವಾಗಿ ಕಂಡಿತು. ಸಮಯದ ಬಗ್ಗೆ ಯಾವ ಪರಿವೆಯೂ ಇರಲಿಲ್ಲ. ಲೋಧಿಗಾರ್ಡನ್‌ನಿಂದ ಹೊರಟಾಗ ಯಾವ ಗೊತ್ತುಗುರಿಯೂ ಇರಲಿಲ್ಲ. ಹಾಗಾಗಿ, ತಿರುವು ತಲಪಿದಾಗ ಎಲ್ಲಿಗೆಂದು ಶಂಕಿಸುತ್ತಾ ನಿಲ್ಲಲೂ ಇಲ್ಲ. ಟ್ರಾಫಿಕ್ ಲೈಟ್ ಹಸುರಿದ್ದ ಕಡೆಗೆ ನಡೆದದ್ದೂ ಯಾಂತ್ರಿಕವಾಗಿಯೇ. ನಡೆನಡೆದು ತೀನ್‌ಮೂರ್ತಿ ತಲಪಿದಾಗ ಸ್ವಲ್ಪವೂ ಸೋಜಿಗವೆನಿಸಲಿಲ್ಲ. ರಾತ್ರಿ, ಹೊತ್ತು ಬಹಳ ಮೀರಿದ್ದರೂ ಅಂತ್ಯದರ್ಶನಕ್ಕೆ ಬಂದವರ ಕ್ಯೂ ಮುಂದುವರಿಯುತ್ತಲೇ ಇದೆ. ಯಾರಾದರೂ ಬೇಹುಗಾರರು ತನ್ನನ್ನು



ಗುರುತಿಸಿಯಾರೆ? ತನಗೇನೇ ಗುರುತು ಹಿಡಿಯಲಾಗದ ತನ್ನ ಮುಖವನ್ನು ಯಾವ ಗೂಢಚಾರನೂ ಪತ್ತೆಹಚ್ಚಲಾರ ಎಂದುಕೊಂಡನು ಉಪಕಾರ್.

ಹೆಚ್ಚೇನೂ ಉದ್ದವಿಲ್ಲದ ಕ್ಯೂನ ಬಾಲಕ್ಕೆ ಆತನೂ ಅಂಟಿಕೊಂಡ. ಕ್ಯೂ ತೆವಳುತ್ತಾ ಸರಿಯುತ್ತಿರುವುದು ತೀರಾ ನಿಧಾನವಾಗಿ, ಸಶಸ್ತ್ರ ಪೊಲೀಸರು ಜಾಗರೂಕತೆಯಿಂದ ಸುತ್ತಲೂ ಓಡಾಡುತ್ತಿರುವರು–ಇಂದಿರಾ ಬದುಕಿದ್ದಾಗ ರಕ್ಷಣೆ ಒದಗಿಸಲಾರದೆ ಹೋದದ್ದಕ್ಕೆ ಪ್ರಾಯಶ್ಚಿತ್ತ ಮಾಡುತ್ತಿದ್ದಾರೆ ಅವರು.

ಕೆಂಪು, ಹಳದಿ ಬಣ್ಣಗಳ ರೇಶಿಮೆ ಸೀರೆಗಳಲ್ಲಿ ಸುತ್ತಲಾದ ಇಂದಿರಾರ ಪಾರ್ಥಿವ ಶರೀರವನ್ನು ಗುಲಾಬಿ ಹೂ ಮತ್ತು ರಜನೀಗಂಧ ಹೂವುಗಳಿಂದ ಮುಚ್ಚಲಾಗಿದೆ. ಎಲ್ಲರೂ ಸಮರ್ಪಿಸುತ್ತಾ ಇರುವ ಪುಷ್ಪಚಕ್ರಗಳನ್ನೂ ಹೂಹಾರಗಳನ್ನೂ ಆಗಿಂದಾಗ್ಗೆ ಪಕ್ಕದ ಕೊಠಡಿಗಳಿಗೆ ಸ್ಥಳಾಂತರಿಸಲಾಗುತ್ತಿದೆ. ಹೊಳೆಯುತ್ತಿರುವ ಸ್ಪಾಟ್‌ಲೈಟ್‌ನಲ್ಲಿ ಇಂದಿರಾಜಿಯ ಶಾಂತವಾದ ಮುಖ–ಆ ರೋಮನ್ ಮೂಗು ಮಾತ್ರ ವಿಶೇಷವಾಗಿ ಗಮನ ಸೆಳೆಯುತ್ತಿದೆ.

ಕ್ಯೂನಲ್ಲಿ ನಿಂತವರಲ್ಲಿ ಹೆಚ್ಚಿನವನರು ದೆಹಲಿಯ ಸಬರ್ಬ್‌ನಿಂದಲೂ ಪಂಜಾಬ್‌ನಿಂದಲೂ ಯು.ಪಿ.ಯಿಂದಲೂ ಬಂದು ತಲಪಿದ್ದ ಹಳ್ಳಿಗರೇ–ಒರಟು ಕಂಬಳಿಯಿಂದ ಮೈಯಿಡೀ ಮುಚ್ಚಿಕೊಂಡಿರುವ ಅವರು ತಾಳ್ಮೆಯಿಂದ ತಮ್ಮ ಸರದಿಗಾಗಿ ಕಾಯುತ್ತಿರುವರು. ಈ ಅಂತ್ಯದರ್ಶನಕ್ಕಾಗಿ ಅವರು ಎಷ್ಟೋ ಗ್ರಾಮದ ದೂರವನ್ನು ಕಾಲುನಡಿಗೆಯಲ್ಲೆ ಕ್ರಮಿಸಿ ಬಂದಿರುವರು. ಕಳೆದೆರಡುದಿನಗಳಲ್ಲೂ ದೆಹಲಿಯಲ್ಲಿ ಬಸ್ಸುಗಳಾವುದೂ ಓಡಿರಲಿಲ್ಲ. ನಿಷೇಧಾಜ್ಞೆಯಿಂದಾಗಿ, ಸ್ವಾತಂತ್ರ್ಯದ ತೀರಾ ಸಂಕುಚಿತಗೊಂಡಿರುವ ಸಂದಿಗಳ ಮೂಲಕವೇ ಅವರು ಸಾಗಿ ಬಂದಿರುವರು. ಅವರಲ್ಲಿ ಅನೇಕ ಮಂದಿ ಈ ಹಿಂದೆ ಇಂದಿರಾರ ದರ್ಶನಕ್ಕಾಗಿ ದಾರಿಬದಿಯಲ್ಲಿ ಎಷ್ಟೋ ಗಂಟೆಗಳ ಕಾಲ ಕಾದು ನಿಂತವರಿರಬಹುದು. ಈ ಹಿಂದೆ ಕೂಡ ಇಂದಿರಾರ ಕಾರ್ಯ ಶೈಲಿ ಗ್ರಾಮೀಣರನ್ನು ತನ್ನ ಜತೆಯಲ್ಲಿ ಇರಿಸಿಕೊಳ್ಳುವುದೇ ಆಗಿತ್ತು. ಬುದ್ಧಿಜೀವಿಗಳೂ ಮಧ್ಯಮ ವರ್ಗದವರೂ ನಗರ ವಾಸಿಗಳೂ, ಇಂದಿರಾರಿಂದ ದೂರವಾದಾಗಲೂ ಹಳ್ಳಿಗರು ಇಂದಿರಾರ ಜತೆಯಲ್ಲೇ ನಿಂತಿದ್ದರು. ಅವರ ಕನಸುಗಳನ್ನು ಕೈಗೆಟಕುವಂತೆ ಮಾಡಲು ಇಂದಿರಾರಿಗೆ ಸಾಧ್ಯವಾಗಿತ್ತೆ ಎಂಬುದು ಬೇರೆ ವಿಚಾರ. ಅದೇನಿದ್ದರೂ ಗ್ರಾಮೀಣರು ಯಾವತ್ತೂ ಇಂದಿರಾರಿಗೆ ಕೈಕೊಡಲಿಲ್ಲ.

ಕ್ಯೂ ತೆವಳುತ್ತಾ ಸಾಗುತ್ತಿರಲು ಯಾರೋ ಉಪಕಾರ್‌ನ ಕೈಯಲ್ಲೂ ಒಂದಿಷ್ಟು ಹೂಗಳನ್ನು ತಂದಿರಿಸಿದರು. ಗುಂಡು ಮಲ್ಲಿಗೆ ಮತ್ತು ಗುಲಾಬಿ ಹೂಗಳ ಎಸಳುಗಳು. ಮೊದಲು ಉಪಕಾರ್‌ಗೆ ತಮಾಷೆಯೆನಿಸಿತ್ತು. ಇಂದಿರಾ ಕೊಲೆಯಾದರೆಂದು ಗೊತ್ತಾದಾಗ, ತನ್ನ ತಲೆಗೆ ಬೆಲೆ ಘೋಷಿಸಲ್ಪಟ್ಟಿರುವುದನ್ನು ಸಹ ಮರೆತು, ಸಾರ್ವಜನಿಕ

ರಸ್ತೆಯಲ್ಲಿ ಭಾಂಗ್ಡಾ ನರ್ತನಕ್ಕೆ ಕೂಡ ತಯಾರಾಗಿದ್ದ ತಾನು, ಸಿಕ್ಖ್ ಸಮೂಹದ ಒಂದನೆಯ ನಂಬರ್ ಶತ್ರುವಿನ ಮೃತದೇಹದಲ್ಲಿ ಪುಷ್ಪಗಳನ್ನು ಅರ್ಪಿಸಲು ಕಾದು ನಿಂತಿರುವನೆಲ್ಲ! ಸ್ವರ್ಣ ಮಂದಿರದ ಒಳಸಾಲೆಗಳಲ್ಲೆಲ್ಲೊ ಗಾಯಗೊಂಡು ಬಿದ್ದಿದ್ದ ಭಿಂದ್ರನ್‌ವಾಲರ ಆತ್ಮ ಈಗ ಈ ಪರಿಸರದಲ್ಲೆಲ್ಲಾದರೂ ಸುತ್ತಿ ಸುಳಿದಾಡುತ್ತಾ ಇದ್ದು ಎಲ್ಲವನ್ನೂ ವೀಕ್ಷಿಸುತ್ತಿರಲೂಬಹುದು. ಅಂತೂ ಬೀವಿಜಿಗೂ ಕೊನೆ ಬಂತು ಎಂದು ಅವರು ಗಟ್ಟಿಯಾಗಿ ನಗುತ್ತಿರಬಹುದು ಎಂದುಕೊಂಡನಾತ.

ಹೂವುಗಳನ್ನು ಆ ಕಳೇಬರದ ಪಾದಗಳ ಬಳಿ ಅರ್ಪಿಸುವಾಗ ಉಪಕಾರ್‌ಗೆ ಆ ಕಳೇಬರದ ಒಡತಿಯ ಬಗ್ಗೆ ಲವ ಮಾತ್ರವೂ ಬೇಸರವೆನಿಸಲಿಲ್ಲ. ಅದರ ಬದಲು, ಮಾನವ ಜೀವನದ ಶೂನ್ಯತೆಯ ಕುರಿತೂ ಅದರ ಕ್ಷಣಿಕತೆಯ ಕುರಿತೂ ಕುತೂಹಲ ಮೂಡಿತ್ತು. ಎರಡು ದಿನಗಳ ಹಿಂದಿನ ತನಕವೂ ಜಗತ್ತಿನ ಅತ್ಯಂತ ಬಲಾಢ್ಯೆಯಾಗಿದ್ದ ಮಹಿಳೆ ಈಗ ನಿಶ್ಚೇಷ್ಟಿತೆಯಾಗಿ ಬಿದ್ದುಕೊಂಡಿರುವಾಕೆ. ಇನ್ನು ಕೆಲವೇ ತಾಸುಗಳಲ್ಲಿ ಹಿಡಿಬೂದಿಯಾಗಿ ಮಾರ್ಪಡುವವಳು. ಈಕೆ ಮಗ ಸಂಜಯ್ ಮತ್ತು ತಂದೆ ಜವಾಹರ್‌ಲಾಲರು ಅಂತ್ಯ ವಿಶ್ರಾಂತಿ ಹೊಂದುತ್ತಿರುವ ಸ್ಥಳದ ಸಮೀಪದಲ್ಲೆಲ್ಲಾದರೂ ಈಕೆಗೂ ತುಸು ಸ್ಥಳ ಸಿಕ್ಕಬಹುದು. ಸಿಂಹಾಸನಕ್ಕೆ ಹೊಸ ವಾರಸುದಾರರೂ ಪರಿವಾರವೂ ಹುಟ್ಟಿಕೊಳ್ಳುತ್ತವೆ. ಜೀವನವು ತನ್ನ ಪ್ರವಾಸವನ್ನು ಮುಂದುವರಿಸುತ್ತಲೇ ಇರುತ್ತದೆ ಎಂದುಕೊಂಡನಾತ.

ತೀನ್‌ಮೂರ್ತಿಯನ್ನು ಹಿಂದೆ ಹಾಕುತ್ತ ಆತ ನಡೆದ. ಮರ್ಕ್ಯುರಿ ಲೈಟ್‌ಗಳು ಕಾವಲುನಿಂತಿರುವ ಸೌತ್ ಅವೆನ್ಯೂ ಮೂಲಕ ಸಾಗುತ್ತಿರುವಾಗ ರಾಷ್ಟ್ರಪತಿ ಭವನದ ಎತ್ತರದ ಕಳಶದ ಕೆಂಪುದೀಪ ಕಾಣಿಸಿತು. ಎರಡು ವರ್ಷಗಳ ಹಿಂದೆ ಗ್ಯಾನಿ ಜೈಲ್‌ಸಿಂಗರು ರಾಷ್ಟ್ರಪತಿಯಾಗಿ ಆಯ್ಕೆಯಾದುದರ ಮಾರನೆಯ ದಿನ ತಾನು ಕೂಡ ಈ ಮಹಾ ಸೌಧದೊಳಗೆ ಸಂದರ್ಶಕನಾಗಿದ್ದೆ. ಸಿಕ್ಖ್ ಮನಸ್ಸಿನ ಹೆಮ್ಮೆಯಾಗಿದ್ದರು ಜೈಲ್‌ಸಿಂಗರು ಆ ದಿನಗಳಲ್ಲಿ. ಮಹಾರಾಜಾ ರಣ್‌ಜಿತ್‌ಸಿಂಗ್‌ನ ಬಳಿಕ ರಾಜ್ಯಭಾರವನ್ನು ವಹಿಸಿಕೊಳ್ಳುತ್ತಿರುವ ಮೊದಲನೆಯ ಸಿಕ್ಖ್ ಜೈಲ್‌ಸಿಂಗ್. ಅದಾದರೊ ಈ ಮಹತ್ತಾದ ಸಮಗ್ರ ದೇಶದ ರಾಷ್ಟ್ರಪತಿಯಾಗಿ, ಎಲ್ಲಾ ಗುರುದ್ವಾರಗಳಲ್ಲೂ ಲಂಕಾರುಗಳಲ್ಲೂ ವಿಶಿಷ್ಟ ಭೋಜನವನ್ನು ಏರ್ಪಡಿಸಲಾಗಿತ್ತು ಅಂದು. ಲಸ್ಸಿ, ಶರಬತ್ತುಗಳೂ ಹರಿದಿದ್ದವು. ರಾಷ್ಟ್ರಪತಿಯವರ ಪ್ರೆಸ್ ಸೆಕ್ರೆಟರಿ ರಾಷ್ಟ್ರಪತಿ ಭವನದ ಒಳಕೋಣೆಗಳನ್ನು ತೋರಿಸಿ ಕೊಡುತ್ತಾ ಹೇಳಿದ್ದ ಸಂಗತಿಗಳು ಈಗಲೂ ನೆನಪಾಗುತ್ತಿವೆ.

ಐದು ಸಾವಿರ ಮಂದಿ ಕಲ್ಲುಕುಟಿಕರೂ ಇಂಜಿನಿಯರುಗಳೂ ಹದಿನೆಂಟು ವರ್ಷಗಳ ಕಾಲ ಶ್ರಮಪಟ್ಟು ನಿರ್ಮಿಸಿದ್ದು ಈ ಮಹಾನ್ ಸೌಧ. ೩೩೦ ಎಕರೆಯಷ್ಟು ವಿಶಾಲವಾದ ನಿವೇಶನದಲ್ಲಿ ಐದು ಎಕರೆ ಸ್ಥಳದಲ್ಲಿ ವ್ಯಾಪಿಸಿಕೊಂಡಿದೆ ಇದರ



ತಳಪಾಯ. ಇಲ್ಲಿನ ಕಾರಿಡಾರ್‌ಗಳೇ ಒಂದೂವರೆ ಮೈಲು ಉದ್ದವಿದೆ. ಹದಿನೆಂಟು ಪಾವಟಿಕೆ ಮಾರ್ಗಗಳಿರುವ ಈ ಕಟ್ಟಡದೊಳಗೆ ದೊಡ್ಡವೂ ಚಿಕ್ಕವೂ ಸೇರಿ ೩೪೦ ಕೊಠಡಿಗಳಿವೆ, ೩೭ ಕಾರಂಜಿಗಳೂ ಇವೆ ಇಲ್ಲಿ.

೧೯೧೨ರಲ್ಲಿ ಇಂಡಿಯಾದ ರಾಜಧಾನಿಯನ್ನು ಕಲ್ಕತ್ತಾದಿಂದ ದೆಹಲಿಗೆ ಸ್ಥಳಾಂತರಿಸಿದುದರ ಸ್ಮಾರಕ ಎತ್ತರವಾಗಿ ಕಾಣಿಸುತ್ತಿರುವ ಜಯಪುರ್ ದೀಪಸ್ತಂಭ.

ದರ್ಬಾರ್ ಹಾಲ್ ತೋರಿಸಿಕೊಡುತ್ತಾ ಆತ ವಿವರಿಸಿದ್ದ: ಇಲ್ಲೇ ಕೊನೆಯ ವೈಸ್ರಾಯ್ ಮೌಂಟ್ ಬ್ಯಾಟನ್, ಭಾರತದ ಮೊದಲ ಗವರ್ನರ್ ಜನರಲ್ ರಾಜಾಜಿಗೆ ೧೯೪೭, ಆಗಸ್ಟ್ ೧೫ರಂದು ಅಧಿಕಾರ ಹಸ್ತಾಂತರ ಮಾಡಿದ್ದರು. ೧೯೫೦, ಜನವರಿ ೨೬ರಂದು ಭಾರತ ಪ್ರಜಾಪ್ರಭುತ್ವ ರಾಷ್ಟ್ರವೆಂದು ಘೋಷಿಸಲ್ಪಟ್ಟಿದ್ದೂ ಡಾಕ್ಟರ್ ರಾಜೇಂದ್ರ ಪ್ರಸಾದರು ಮೊದಲ ರಾಷ್ಟ್ರಪತಿಯಾಗಿ ಅಧಿಕಾರ ವಹಿಸಿಕೊಂಡದ್ದೂ ಇಲ್ಲೇನೇ.

ದರ್ಬಾರ್ ಹಾಲ್‌ನ ಹಿಂಭಾಗದಲ್ಲಿರುವ ಏಣಿ ಮಾರ್ಗಗಳಲ್ಲಿ ಒಂದು ಅಶೋಕ ಹಾಲ್‌ನ್ನೂ ಇನ್ನೊಂದು ಬಾಂಕ್ವೆಟ್ ಹಾಲ್‌ನ್ನೂ ಸಂಪರ್ಕಿಸುತ್ತವೆ. ಬಾಂಕ್ವೆಟ್ ಹಾಲ್‌ನಲ್ಲಿ ಕಟ್‌ಗ್ಲಾಸ್‌ನ ಗೊಂಚಲು ದೀಪಗಳ ಬೆಳಕಿನ ಥಳಕಿನಲ್ಲಿ ಕಂಗೊಳಿಸುವ, ಏಕ ಕಾಲದಲ್ಲಿ ನೂರನಾಲ್ಕು ಮಂದಿಗೆ ಬಡಿಸಬಹುದಾದ, ಸಾಗುವಾನಿಯಲ್ಲಿ ನಿರ್ಮಿಸಲಾದ ಡೈನಿಂಗ್ ಟೇಬಲ್.

ದ್ವಾರಕಾ ಸ್ವೀಟ್ ತಲಪಿದಾಗ, ಆತ ವಾಚಾಳಿಯಾದದ್ದು ನೆನಪಾಗುತ್ತಿದೆ. ಕಲಾತ್ಮಕವಾಗಿ ಸಿಂಗರಿಸಲಾದ ಶಯನಾಗಾರದ ಸ್ನಾನದ ಕೊಠಡಿಯ ಸಾಮಗ್ರಿಗಳಷ್ಟೂ ಬೆಳ್ಳಿಯಲ್ಲಿ ನಿರ್ಮಿಸಿದವುಗಳಾಗಿವೆ. ಶಯನಾಗಾರದ ಮಜಬೂತಾದ ಅವಳಿ ಮಂಚದ ಬೆಳ್ಳಿ ಕಾಲುಗಳನ್ನು ನೀರ ಕೊಡ ಹೊತ್ತ ಗ್ರಾಮೀಣ ಯುವತಿಯರ ಹಾಗೆ ರೂಪಿಸಲಾಗಿದೆ. ಮೊದಲ ಬಾರಿ ಈ ಮೆತ್ತೆಯಲ್ಲಿ ಮಲಗಿದಾತ ಇರ್ವಿನ್ ಪ್ರಭು. ಮುಂದೆ ವಿಶ್ವವಿಖ್ಯಾತರಾದ ಎಷ್ಟೆಷ್ಟು ಮಂದಿ! ಎಲಿಜಬೆತ್ ಮಹಾರಾಣಿ, ರಿಚರ್ಡ್ ನಿಕ್ಸನ್, ಬ್ರೆಜ್ನೇವ್, ಅಲೆಕ್ಸಿ ಕೊಸಿಜಿನ್, ಚೌ ಎನ್ ಲಾಯ್... ಈಜಿಪ್ಟ್‌ನ ನಾಸೇರ್ ಬಂದಾಗ ಮಾತ್ರ ಹೊಸ ಮಂಚವೊಂದನ್ನು ಏರ್ಪಡಿಸಬೇಕಾಯಿತು. ಆತ ಆರು ಅಡಿ ನಾಲ್ಕು ಇಂಚು ಎತ್ತರದವನಿದ್ದ.

ಇನ್ನೂ ಅನೇಕ ಕೊಠಡಿಗಳ ಹೆಸರುಗಳು ನೆನಪಿಗೆ ಬರುತ್ತಿವೆ: ನಳಂದ, ಮೈಸೂರ್, ಟಾಗೋರ್... ಇತ್ಯಾದಿ.

ರಾಷ್ಟ್ರಪತಿ ಭವನದ ಅಡುಗೆ ಮನೆ ನೋಡುವ ಅವಕಾಶ ಕೂಡ ಆ ದಿನ ದೊರೆತಿತ್ತು. ಪಂಜಾಬಿನಿಂದ ಬಂದವರಿಗೆ ಅಂತಹ ವಿಶೇಷ ಅನುಮತಿ ನೀಡುವುದರಲ್ಲಿ ಜೈಲ್‌ಸಿಂಗರಿಗೆ ಸಂತೋಷ ಮತ್ತು ಸಂತೃಪ್ತಿಗಳಿದ್ದುವು. ಅವರೇ ಪ್ರೋಟೋಕಾಲ್ ಆಫೀಸರ್‌ಗೆ ನಿರ್ದೇಶಿಸಿದ್ದರು–ಚೋಕ್ರೋಂ ಕೊ ದಿಖಾವೊ ಸಬ್ ಸಚ್–ಹುಡುಗರಿಗೆ

ಎಲ್ಲವನ್ನೂ ತೋರಿಸಿಕೊಡಿ.

ಏಕಕಾಲದಲ್ಲಿ ಸಾವಿರ ಮಂದಿರ ಭೋಜನ ತಯಾರಿಸಬಹುದಾದ ರೀತಿಯಲ್ಲಿ ಸಜ್ಜುಗೊಳಿಸಲ್ಪಟ್ಟಿದ್ದು ರಾಷ್ಟ್ರಪತಿ ಭವನ ಬೇಸ್‌ಮೆಂಟ್‌ನಲ್ಲಿರುವ ಕಿಚನ್–ಆ ಬಳಿಕ ಐಸ್ ಫ್ಯಾಕ್ಟರಿ ಮತ್ತು ಬಟ್ಟೆ ಒಗೆವ ಕಾರ್ಯಾಗಾರವನ್ನೂ ತೋರಿಸಿಕೊಟ್ಟ. ದಿನವಹಿ ಎಂಟು ಸಾವಿರಕ್ಕಿಂತಲೂ ಹೆಚ್ಚು ಬಟ್ಟೆಗಳನ್ನು ಒಗೆಯತಕ್ಕ ವ್ಯವಸ್ಥೆ ಇದೆ, ಅಲ್ಲಿ; ಮೆನು ಕಾರ್ಡುಗಳನ್ನು ಮಾತ್ರ ಮುದ್ರಿಸಲಿಕ್ಕಾಗಿ ಒಂದು ಮುದ್ರಣಾಲಯ ಕೂಡ.

ಮುನ್ನೂರ ಮೂವತ್ತು ಎಕರೆ ಸ್ಥಳದಲ್ಲಿ ವ್ಯಾಪಿಸಿಕೊಂಡಿರುವ ಒಂದು ಸ್ವಯಂಪೂರ್ಣ ನಗರ ರಾಷ್ಟ್ರಪತಿ ಭವನ–ಅಧಿಕಾರಿಗಳೂ ಸೇವಕರೂ ಒಳಗೊಂಡಂತೆ ಸುಮಾರು ಹತ್ತು ಸಾವಿರ ಮಂದಿ ಇದರೊಳಗೆ ವಾಸಿಸುತ್ತಿರುವವರು. ಸ್ಕೂಲ್, ಸಿನಿಮಾ ಥಿಯೇಟರ್, ಗೋಲ್ಫ್‌ಕೋರ್ಸ್, ಟೆನ್ನಿಸ್ ಕೋರ್ಟ್, ಈಜುಕೊಳ ಮುಂತಾದ ಎಲ್ಲವೂ ಇರುವ ನಗರ, ಇದು.

ಹೊರಗಿನ ಪ್ರಸಿದ್ಧ ಮೊಗಲ್ ಗಾರ್ಡನ್ ನೋಡಲು ಆ ದಿನ ಸಮಯಾವಕಾಶವಿರಲಿಲ್ಲ.

ಪಂಜಾಬಿನ ಕುಗ್ರಾಮವೊಂದರಲ್ಲಿ ಹುಟ್ಟಿ ಬೆಳೆದ ಗ್ಯಾನಿ ಜೈಲ್‌ಸಿಂಗರಿಗೆ ಈ ಅರಮನೆಯ ಆಡಂಬರದ ಜೀವನ ಮೊದಮೊದಲು ತುಸು ಅಸಹನೀಯವಾಗಿತ್ತು. ಮುಂದೆ ಅವರು ಅದರ ಸುಖ ಸಮೃದ್ಧಿಯಲ್ಲಿ ಮಗ್ನರಾದಾಗ ಪಂಜಾಬ್ ಸಮಸ್ಯೆ ಭುಗಿಲೆದ್ದೇ ಬಿಟ್ಟಿತ್ತು. ಸಿಕ್ಖನೊಬ್ಬ ರಾಷ್ಟ್ರಪತಿಯಾಗಿರುವಾಗಲೇ ರಾಷ್ಟ್ರದ ಪ್ರಧಾನಿ ಸಿಕ್ಖರ ಪುಣ್ಯ ಸ್ಥಳವಾದ ಸ್ವರ್ಣ ಮಂದಿರಕ್ಕೆ ಸೇನೆಯನ್ನು ಕಳುಹಿಸಿದರು. ರಾಷ್ಟ್ರಪತಿಯಾಗಿದ್ದೂ ಆ ಸಿಕ್ಖನಿಗೆ ಅದನ್ನು ತಡೆಯಲು ಸಾಧ್ಯವಾಗಲಿಲ್ಲ. ಅಷ್ಟೇ ಅಲ್ಲ, ಯಾವತ್ತೂ ಕ್ಷಮಿಸಲನರ್ಹವಾದ ಆ ಕಾರ್ಯಾಚರಣೆಯನ್ನು ಸಮರ್ಥಿಸಲು ರಾಷ್ಟ್ರಪತಿ ಎಂಬ ನೆಲೆಯಲ್ಲಿ ಅವರು ಬದ್ಧರೂ ಆಗಿದ್ದರು. ಗುರುವಾಣಿ, ಗುರುಗ್ರಂಥ ಸಾಹಿಬ್ ಮತ್ತು ಹತ್ತು ಮಂದಿ ಗುರುಗಳೂ ಆದೇಶಿಸುವ ವಿಧಿಗಳನ್ನೂ ಅನುಸರಿಸುವುದರಲ್ಲಿ ಯಾವತ್ತೂ ನಿಗಾವಹಿಸುತ್ತಿದ್ದ ಜೈಲ್‌ಸಿಂಗರನ್ನು ಸಿಕ್ಖ್ ಮತದ ನ್ಯಾಯಪೀಠ ಅಪರಾಧಿಯನ್ನಾಗಿ ಘೋಷಿಸಿತ್ತು.

ಕೆತ್ತಿ ನಯಗೊಳಿಸಲಾದ ಕೆಂಪು ಕಲ್ಲಿನ ಕಮಾನುಗಳನ್ನು ದಾಟಿ, ಇಬ್ಬದಿಗಳಲ್ಲೂ ಎತ್ತರವಾದ ಆವರಣ ಗೋಡೆಗಳಿರುವ ರಸ್ತೆಯ ಮೂಲಕ, ಜಯಪುರ್ ಸ್ತಂಭ ತಲೆಯೆತ್ತಿ ನಿಂತಿರುವ ವಿಶಾಲವಾದ ಲಾನ್‌ಗೆ ಬಂದು, ಎತ್ತರದ ಕಬ್ಬಿಣದ ಗೇಟಿನಲ್ಲಿ ಕಾವಲು ನಿಂತಿರುವ ಕುಮಾವೊನ್ ರೆಜಿಮೆಂಟ್‌ನ ಕಾವಲುಗಾರರಿಗೆ ಕಿರಿಕಿರಿಯಾಗದ ಹಾಗೆ ಉಪಕಾರ್ ಸಿಂಗ್ ನಡೆದ. ಮನಸ್ಸಿನಲ್ಲಿ ಉದ್ವೇಗದ ಅಲೆಗಳೇಳುವಾಗ ಗೊತ್ತುಗುರಿ ಇಲ್ಲದ ನಡಿಗೆ ನೆಮ್ಮದಿ ನೀಡುತ್ತದೆ. ಅದರಲ್ಲೂ, ಹೆಚ್ಚು ಚಳಿಯಿಲ್ಲದ ಈ ಚಳಿಗಾಲದ ರಾತ್ರಿಯಲ್ಲಿ ನಗರದ ನಿರ್ಜನವಾದ ರಸ್ತೆಗುಂಟ ನಡೆಯುವಾಗ



ಯಾವುದೋ ಅನ್ಯಜಗತ್ತಿಗೆ ತಲಪಿದಂತೆ ಭಾಸವಾಗುತ್ತದೆ. ಮನಸ್ಸು ಮಥಿಸುತ್ತಿರುವ ಸಮಸ್ಯೆಗಳಾವುದೂ ತನ್ನದ್ದಲ್ಲವೆಂದು ಅನ್ನಿಸುತ್ತದೆ. ತನ್ನದೇ ಭೂತ ಕಾಲದಿಂದ ತಪ್ಪಿಸಿಕೊಂಡು ಓಡಿಹೋಗಬೇಕೆಂಬ ಆತುರವಾಗಿರಬಹುದೆ ಇದು? ಸಮಸ್ಯೆಗಳನ್ನು ಮುಖಾಮುಖಿಯಾಗಿ ನೋಡಲಿಕ್ಕೂ ಅವನ್ನು ಎದುರಿಸಲಿಕ್ಕೂ ತಯಾರಾಗದ ಈ ಪಲಾಯನ ತನ್ನನ್ನು ಎಲ್ಲಿ ತಲಪಿಸಬಹುದೋ ಏನೋ? ಸ್ವಂತ ವ್ಯಕ್ತಿತ್ವದಿಂದಲೇ ತಪ್ಪಿಸಿಕೊಳ್ಳಲು ಹವಣಿಸುವ ಈ ಪಲಾಯನ, ಹೆದರಿದ ಮನಸ್ಸು ಕಂಡುಕೊಂಡ ಸುಲಭೋಪಾಯವಿರಬಹುದೆ?

ಉಪಕಾರ್‌ಗೆ ತಾನು ಎಷ್ಟು ತಾಸು ನಡೆದೆನೆಂದು ಗೊತ್ತಿಲ್ಲ. ಎರಡು ತಾಸೆ? ಮೂರು ತಾಸೆ? ನಾಲ್ಕು ತಾಸೆ? ಯಾವುದೋ ಹೊತ್ತಿನಲ್ಲಿ ಸ್ವಂತ ಅಸ್ತಿತ್ವದ ಬಗ್ಗೆ ನೆನಪು ಮಾಡಿದಾಗ ಔಟರ್ ರಿಂಗ್ ರೋಡ್‌ನಿಂದ ಯಮುನೆಯ ಮೇಲ್ಗಡೆಯ ಕಾಂಕ್ರೀಟ್ ಸೇತುವೆಯ ದಂಡೆಯ ಮೇಲೆ ಕುಳಿತಿದ್ದ. ಕೆಳಗೆ ಬತ್ತಿ ಬರಡಾಗಿರುವ ಯಮುನೆಯಲ್ಲಿ, ಅಲ್ಲಷ್ಟು, ಇಲ್ಲಷ್ಟು ಮಡುಗಟ್ಟಿ ನಿಂತಿರುವ ಕೆಸರು ನೀರಿನಲ್ಲಿ ಬೀದಿ ದೀಪಗಳ ನೆರಳಷ್ಟೇ ಕಾಣಿಸುತ್ತಿವೆ. ಸುತ್ತಲೂ ನೋಡಿದ ಸ್ಥಳ–ಕಾಲ ಪ್ರಜ್ಞೆಯನ್ನು ಮರಳಿ ಪಡೆದ–ಸೇತುವೆ ದಾಟಿ ಆಚೆ ತಲಪಿದರೆ ಪಟ್‌ಪಟ್‌ಗಂಜ್. ಬಲಗಡೆ ತಿರುಗಿದರೆ ಯಮುನೆಗೆ ಸಮಾಂತರವಾಗಿ ಸಾಗುವ ರಸ್ತೆ ನೋಯ್ಡಗೆ ತಲಪುತ್ತದೆ. ನೇರವಾಗಿ ಹೋದರೆ ಮದರ್ ಡೈರಿ: ತ್ರಿಲೋಕ್‌ಪುರಿ: ಒಳಗಡೆಯೇ ಮಯೂರ್ ವಿಹಾರ್... ನವದೆಹಲಿ. ಯಮುನೆಯನ್ನೂ ಮೀರಿ ಅನಂತತೆಯತ್ತ ವ್ಯಾಪಿಸುತ್ತಿದೆ. ದಕ್ಷಿಣಕ್ಕೆ ಮಾತ್ರ ಹರಡುತ್ತ ಬಂದಿದ್ದ ನಗರ ಈಗ ಪೂರ್ವ ಮತ್ತು ಪಶ್ಚಿಮಗಳ ಕಡೆಗೂ ಹಬ್ಬತೊಡಗಿದೆ. ಟ್ರಾನ್ಸ್ ಯಮುನಾದಲ್ಲಿ ಇತ್ತೀಚೆಗಿನ ಅವಧಿಯಲ್ಲೆ ಎಷ್ಟೊಂದು ನಗರಗಳೂ ವಿಹಾರಗಳೂ ಪುರಗಳೂ ರೂಪಗೊಂಡಿಲ್ಲ! ದಕ್ಷಿಣ ದೆಹಲಿ–ಡಿಫೆನ್ಸ್ ಕಾಲನಿಯ, ಕೈಲಾಸದ ಅಥವಾ ಗ್ರೀನ್‌ಪಾರ್ಕ್‌ನ ಆಸುಪಾಸಿಗೆ ಸೀಮಿತಗೊಂಡಿರಬಹುದು. ಆದರೆ ದೆಹಲಿಯ ಮಧ್ಯಮ ವಿಭಾಗ ಯಮುನೆಯನ್ನು ದಾಟಿ ಪೂರ್ವದ ಕಡೆ ವ್ಯಾಪಿಸುತ್ತಲೇ ಇದೆ ಎಂದುಕೊಂಡನು ಉಪಕಾರ್.

ನಡೆನಡೆದು ಕಾಲುಗಳು ದಣಿದಿದ್ದುವು. ಶೂ ಕಳಚಿ ಪಾದಗಳನ್ನು ತಡವಿದಾಗ ತುಸು ಹಾಯೆನಿಸಿತ್ತು. ಪಕ್ಕನೆ ಒಂದು ಮಿಲಿಟರಿ ಟ್ರಕ್ ಎದುರು ಬಂದು ನಿಂತಿತು. ಅದರ ಹೆಡ್‌ಲೈಟ್‌ನ ಪ್ರಖರತೆಗೆ ಕಣ್ಣುಗಳು ಕೋರೈಸಲ್ಪಟ್ಟವು. ಕ್ಯಾಬಿನ್‌ನಿಂದ ಆರ್ಮಿಗ್ರೀನ್ ಯುನಿಫಾರ್ಮ್ ಧಾರಿಗಳಿಬ್ಬರು ಕೆಳಗಿಳಿದರು. ಅವರ ವಶದಲ್ಲಿ ಸೆಲ್ಫ್‌ಲೋಡಿಂಗ್ ಗನ್‌ಗಳಿವೆ.

* * *

## ಅಧ್ಯಾಯ ೨೧

# ಇಂದೂ ಕಂಡ ರಕ್ತಪಾತ

ಉಪಕಾರ್ ಮೊದಲು ತುಸು ಗಾಬರಿಗೊಳಗಾದ. ಬಳಿಕ ಸಮಾಧಾನ ತಂದುಕೊಂಡ: ನಾನು ಹಿಂದಿನವನಲ್ಲ. ನನ್ನ ಭೂತಕಾಲವನ್ನು ಕಳಕೊಂಡಿದ್ದೇನೆ. ನಾನು ಬೇರೊಬ್ಬನಾಗಿ ಮಾರ್ಪಟ್ಟಿದ್ದೇನೆ.

ಆ ಸೈನಿಕರ ದಪ್ಪ ಬೂಟುಗಳ ಅಡಿಯಲ್ಲಿ ಸಿಲುಕಿ ಮೆಟ್ಟಿಲುಗಳ ಮರಳ ಕಣಗಳು ಜರ್ಜರಿತವಾಗಿ ಅಮುಕಲ್ಪಟ್ಟವು. ಅವರು ಬರುತ್ತಿರುವುದು ತನ್ನ ಕಡೆಗೇನೆ. ಆದರೂ ಗನ್‌ಗಳು ಹೆಗಲಲ್ಲೇ ನೇತಾಡಿಕೊಂಡಿವೆ. ಬಿಡಿಸಿಕೊಂಡಿರುವ ಕಾಗದವೊಂದು ಅದರಲ್ಲಿ ಒಬ್ಬಾತನ ಕೈಯಲ್ಲಿದೆ.

ಅರೇ ಭಾಯ್.... ಜರಾ ಮದದ್ ಕರೊ... ಯೆ ದಿಖಾವೊ ಕಿ ತ್ರಿಲೋಕ್‌ಪುರಿ ಕಿದರ್ ಹೈ! (ಸಹೋದರಾ, ತ್ರಿಲೋಕ್‌ಪುರಿ ಎಲ್ಲೆಂದು ಈಗ ಮ್ಯಾಪ್‌ನಲ್ಲಿ ತೋರಿಸಿ ಕೊಡುವೆಯ?)

ಅವರ ಕೈಯಲ್ಲಿರುವುದು ದೆಹಲಿಯ, ತಕ್ಕಮಟ್ಟಿಗೆ ದೊಡ್ಡದೇ ಆದ ಒಂದು ಭೂನಕ್ಷೆ. ಅದನ್ನವರು ಸಿಮೆಂಟ್ ದಂಡೆಯ ಮೇಲೆ ಹಾಸಿ ಟಾರ್ಚ್ ಹಾಯಿಸಿದರು. ನಕ್ಷೆಯಲ್ಲಿ ಅನೇಕ ಮುಖ್ಯ ಸ್ಥಳಗಳು ತೋರಿಸಲ್ಪಟ್ಟಿವೆ. ಐ.ಟಿ.ಓ. ರಾಜಘಾಟ್, ಪೊಲೀಸ್ ಹೆಡ್‌ಕ್ವಾರ್ಟರ್ಸ್, ಔಟರ್‌ರಿಂಗ್ ರೋಡ್, ನಿಜಾಮುದ್ದೀನ್ ರೆಡ್‌ಪೋರ್ಟ್–ಹೀಗೆ ಇನ್ನೂ ಅನೇಕ ಸ್ಥಳಗಳು. ಆದರೆ ಅವರಿಗೆ ತಿಳಿಯಬೇಕಾದದ್ದು ತ್ರಿಲೋಕ್‌ಪುರಿ ಎಲ್ಲಿ ಎಂದು. ನಕ್ಷೆಯನ್ನು ಸೂಕ್ಷ್ಮವಾಗಿ ಪರಿಶೀಲಿಸಿದಾಗ ಉಪಕಾರ್‌ಗೆ ನಗದಿರಲು ಸಾಧ್ಯವಾಗಲಿಲ್ಲ. ಇಪ್ಪತ್ತು ವರ್ಷಗಳ ಹಿಂದಿನ ನಕ್ಷೆ ಅದು. ಅಂದು ಯಮುನೆಯ ಆಚೆ ಜವುಗು ಪ್ರದೇಶಗಳೂ ಹೊಲಗದ್ದೆಗಳೂ ನೂರು, ನೂರು ನಗರಗಳು ರೂಪಗೊಂಡದ್ದು ಹಿಂದಿನ ದಶಕದಲ್ಲಷ್ಟೇ. ಅಷ್ಟರಲ್ಲೇ ಟ್ರಕ್‌ನಿಂದ ನಾಲ್ಕೈದ್ ಮಂದಿ–ಎಲ್ಲರೂ ಗರಿಗರಿ ಯುನಿಫಾರಮ್ ತೊಟ್ಟವರೇ ಅಲ್ಲಿಗೆ ಬಂದರು. ಅವರಲ್ಲಿ ಒಬ್ಬಾತ ಮುಖ್ಯಸ್ಥನಂತೆ ಕಾಣಿಸಿದ. ಆತ ಪ್ರಶ್ನಿಸಿದ: ಆರ್ ಯೂ ಅವೇರ್, ವೇರ್ ತ್ರಿಲೋಕ್‌ಪುರಿ ಈಸ್?

ಉಪಕಾರ್ ಉತ್ತರಿಸುವ ಬದಲು ಯೋಚಿಸಿದ: ತ್ರಿಲೋಕ್‌ಪುರಿಯಲ್ಲಿ



ತನ್ನ ಪರಿಚಿತರಿದ್ದಾರೆ: ದೂರದ ಸಂಬಂಧಿಕರೂ ಇದ್ದಾರೆ. ತಾನು ಭಯೋತ್ಪಾದಕ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳತೊಡಗಿದ ಬಳಿಕ ಅವರಾರನ್ನೂ ಕಂಡಿಲ್ಲ. ತನ್ನಿಂದಾಗಿ ಅವರು ಶಂಕಿಸಲ್ಪಡಬಾರದಲ್ಲ:

ಭಾಯೀ... ಮಾಲೂಂ ಹೈ ತೋ ಬೋಲೋನಾ. ಸೈನಿಕರು ಅವಸರಪಡಿಸಿದಾಗ ಹೇಳಿದಾಗ:

ನಾನು ತೋರಿಸಿಕೊಡ್ತೇನೆ.

ಉಪಕಾರ್ ಸೈನಿಕರ ಜತೆ ಟ್ರಕ್ ಹತ್ತಿದ. ಸೈನಿಕರು ದೆಹಲಿ ಪೊಲೀಸರಿಗೆ ಶಾಪ ಹಾಕುತ್ತಾ ಇದ್ದಾರೆ. ಸಜ್ಜಾಗಿ ನಿಲ್ಲಲು ಆರ್ಮಿಗೆ ಆದೇಶವಿದೆ. ಆದರೆ, ಎಲ್ಲೆಲ್ಲಿ ಗಲಭೆಗಳಿವೆ ಎಂಬುದನ್ನು ಸ್ಪಷ್ಟಪಡಿಸಲಿಲ್ಲ. ಪಹಾಡ್‌ಗಂಜ್, ನ್ಯೂಫ್ರೆಂಡ್ಸ್ ಕಾಲನಿ, ಚಾಂದ್ನಿಚೌಕ್ ಮುಂತಾದ ಸ್ಥಳಗಳು ಸೈನಿಕರಿಗೆ ಪರಿಚಿತವೇ. ಆದರೆ ಮಂಗೋಲ್‌ಪುರಿ ಎಲ್ಲಿ? ಸುಲ್ತಾನ್‌ಪುರಿ ಎಲ್ಲಿ? ತ್ರಿಲೋಕ್‌ಪುರಿ ಎಲ್ಲಿ? ಕೊನೆಗೆ ಒತ್ತಾಯಕ್ಕೆ ಕಟ್ಟು ಬಿದ್ದು ದೆಹಲಿ ಪೊಲೀಸ್ ಅಲಮಾರುಗಳಿಂದ ಹುಡುಕಿ ತೆಗೆದ ನಕ್ಷೆ ಇವು. ಇವುಗಳಲ್ಲಿ ಅಂಜನ ಹಾಕಿ ನೋಡಿದರೂ ತಲಪಬೇಕಾದ ಸ್ಥಳ ಕಾಣಿಸುತ್ತಾ ಇಲ್ಲ.

ಸೇತುವೆ ದಾಟಿ ಹೆಚ್ಚು ಅಗಲವಿಲ್ಲದ ರಸ್ತೆಗುಂಟ ಟ್ರಕ್ ಧಾವಿಸತೊಡಗಿತು. ಕೊನೆಗೆ, ತ್ರಿಲೋಕ್‌ಪುರಿ ಎಂದು ಬರೆಯಲಾದ ಹಳದಿ ಫಲಕ ಕಾಣಿಸಿತು. ಸುತ್ತಲೂ ಝುಗ್ಗಿಗಳೂ ಜೋಪಡಿಗಳೂ ತುಂಬಿರುವ ಅನಧಿಕೃತ ಕಾಲನಿಗಳು, ಚಾಪೆಗಳಿಂದಲೂ ಬಿದಿರಿನ ತಟ್ಟಿಗಳಿಂದಲೂ ಟಿನ್‌ಶೀಟ್‌ಗಳಿಂದಲೂ ಗೋಡೆ, ಸೂರುಗಳನ್ನು ನಿರ್ಮಿಸಲಾದ ಗುಡಿಸಲುಗಳು, ಗುಡಿಸಲುಗಳ ಗೋಡೆಗಳ ಮೇಲೆ ಹಿಂದಿನ ಚುನಾವಣೆಯ ಘೋಷಣೆಗಳು ಅಸ್ಪಷ್ಟವಾಗಿ ಗೋಚರಿಸುತ್ತಲಿವೆ. ಕಾಂಗ್ರೆಸ್‌ಗೆ ಮತ ಹಾಕಿರಿ: ಇಂದಿರಾಜಿಯ ಕೈಗಳನ್ನು ಬಲಪಡಿಸಿರಿ. ಆದರೆ ಗುಡಿಸಲುಗಳ ಮೇಲ್ಗಡೆ ಹಾರುತ್ತಿರುವ ಧ್ವಜಗಳಷ್ಟೂ ಜನಸಂಘದ್ದೇ. ಕಮ್ಯೂನಿಸ್ಟರಿಗೆ ಇಲ್ಲಿನ ಶ್ರಮಜೀವಿಗಳ ಮೇಲೆ ಪ್ರಭಾವ ಬೀರಲು ಇನ್ನೂ ಸಾಧ್ಯವಾಗಿಲ್ಲವೇನೋ ಎಂದು ಕೊಂಡನು ಉಪಕಾರ್.

ಟ್ರಕ್ ಹಠಾತ್ತನೆ ನಿಂತಿತು. ಭಾರೀ ಸಿಮೆಂಟ್ ಕೊಳವೆಗಳನ್ನು ಅಡ್ಡ ಹಾಕಿ ಮಾರ್ಗ ತಡೆಯಲ್ಪಟ್ಟಿದೆ. ಟ್ರಕ್‌ನ ಸದ್ದು ಕೇಳಿದ್ದರಿಂದಲೋ ಅಥವಾ ಹೆಡ್‌ಲೈಟಿನ ಬೆಳಕು ಕಂಡದ್ದರಿಂದಲೋ ಏನೋ ನೆರಳುಗಳ ಮರೆಯಿಂದ ಕೆಲವು ಮಂದಿ ಟ್ರಕ್‌ನ ಬಳಿಗೆ ಬಂದರು. ಕಪ್ಪು ಕಂಬಳಿ ಹೊದ್ದುಕೊಂಡಿರುವ ಅವರು ಕಬ್ಬಿಣದ ಸಬ್ಬಲ್‌ಗಳನ್ನು ಹಿಡಿದುಕೊಂಡಿರುವರು.

ಟ್ರಕ್‌ನ ಕ್ಯಾಬಿನ್‌ನಲ್ಲಿ ಕುಳಿತಿರುವ ಮಿಲಿಟರಿ ಆಫೀಸರ್ ವಿಚಾರಿಸಿದರು: ಇದೇನಾ ತ್ರಿಲೋಕ್‌ಪುರಿ?

ಹೌದು.

ಮೂವತ್ತೆರಡನೆಯ ಬ್ಲಾಕ್?

ಇದೇನೇ.

ಇಲ್ಲಿ ಏನೋ ಗಲಾಟೆ ಇದೆಯೆಂದು ನಮಗೆ ಸುದ್ದಿ ಬಂದಿದೆ.

ಇಷ್ಟರಲ್ಲೆ ಟ್ರಕ್‌ನ ಸುತ್ತಲೂ ಜನ ಮುತ್ತಿಕೊಂಡಿದ್ದರು. ಎಲ್ಲರ ಕೈಯಲ್ಲೂ ಕಬ್ಬಿಣದ ಸರಳು ಅಥವಾ ಲಾಠಿ ಇದೆ.

ಕಪ್ಪು ಮೀಸೆಯಿರುವ ಒಬ್ಬಾತ ಗಟ್ಟಿಯಾಗಿ ಹೇಳಿದ. ಇಲ್ಲಿ ಯಾವ ಗಲಾಟೆಯೂ ಇಲ್ಲ... ಅಲ್ಲವಾ ದೋಸ್ತಿಗಳೇ?

ಆತ ಸುತ್ತಲೂ ನೀಡಿದ. ಗಲಾಟೆಯೇನೂ ಇಲ್ಲವೆಂದು ಎಲ್ಲರೂ ತಲೆಯಾಡಿಸಿದರು.

ಹಾಗಾದರೆ ಈ ರಸ್ತೆಗೆ ತಡೆ ಹಾಕಿದ್ದು ಯಾಕೆ?

ಅಧಿಕಾರಿಯ ಧ್ವನಿ ಜೋರಾಗಿತ್ತು. ಇಷ್ಟರಲ್ಲೆ ವಿಂಡ್ ಸ್ಕ್ರೀನ್‌ನಲ್ಲಿ ಒಂದು ಕಲ್ಲು ಬಿದ್ದಿತ್ತು. ಗಾಜುಗಳು ಒಡೆದು ಕೆಳಗುದುರಿದವು. ಸೈನಿಕರು ಟ್ರಕ್‌ನಿಂದ ಕೆಳಗಿಳಿದರು. ಗಾಳಿಯಲ್ಲಿ ಗುಂಡು ಹಾರಿಸಿದರು. ಗುಂಪು ಮೊದಲು ಪ್ರತಿಭಟಿಸುತ್ತ ನಿಂತೇ ಇತ್ತು. ಪುನಃ ಗಾಳಿಯಲ್ಲಿ ಗುಂಡು ಸಿಡಿದಾಗ ಗುಂಪು ಮೆಲ್ಲ ಮೆಲ್ಲಗೆ ಹಿಂದಕ್ಕೆ ಸರಿಯಿತು.

ಸೈನಿಕ ತಂಡ ಇಕ್ಕಟ್ಟಾದ ಓಣಿಯ ಮೂಲಕ ಒಳಗೆ ಪ್ರವೇಶಿಸಿತು. ಮೂಗು ಕೊರೆದು ಒಳನುಗ್ಗುವ ಗಬ್ಬುನಾತ ನಸುಕಿನ ಚಳಿಯಲ್ಲಿ ಬೆರತುಕೊಂಡಿದೆ. ಓಣಿಯ ದಾರಿದೀಪಗಳು ಆರಿದ್ದವು. ಆದರೂ ಕೆಲವು ಮನೆಗಳ ಚಿಕ್ಕ ಕಿಟಕಿಗಳಿಂದ ಮಂದ ಬೆಳಕು ಕಾಣಿಸುತ್ತಾ ಇದೆ.

ಯಾವನೋ ಸೈನಿಕ ಹಾಯಿಸಿದ ಟಾರ್ಚ್ ಬೆಳಕಿನಲ್ಲಿ, ಅರ್ಧ ಸುಟ್ಟ ಹೆಣಗಳ ರಾಶಿಗಳು ಕಾಣಿಸಿದವು. ಸುಟ್ಟ ಮನುಷ್ಯನ ಮಾಂಸವನ್ನು ತಿಂದು ಬೀದಿ ನಾಯಿಗಳು ನಿಶ್ಯಬ್ದವಾಗಿ ಹೊಟ್ಟೆ ತುಂಬಿಸುತ್ತಿವೆ–ಆ ನಾಯಿಗಳೂ ಒಂದರೊಡನೊಂದು ಕಿತ್ತಾಡುತ್ತಿಲ್ಲವೆಂಬುದನ್ನು ಉಪಕಾರ್ ಪ್ರತ್ಯೇಕ ಗಮನಿಸಿದ. ಅವುಗಳಿಗೆ ಕಿತ್ತಾಡಬೇಕಾದ ಅಗತ್ಯವಿಲ್ಲ. ಹದವಾಗಿ ಬೇಯಿಸಲಾದ ಮನುಷ್ಯ ಮಾಂಸ ಬೇಕಾದಷ್ಟಿದೆ. ಮೃತದೇಹಗಳ ಅವಶೇಷಗಳಿಂದ ಒಂದು ಸಂಗತಿ ಸ್ಪಷ್ಟವಾಯಿತು. ಕೊಲೆಯಾದವರೆಲ್ಲರೂ ಗಂಡಸರೇ. ಉದ್ದನೆಯ ಗಡ್ಡ ಮತ್ತು ಕೂದಲುಗಳಿರುವ ಸಿಕ್ಖರು. ಕೆಲವರದ್ದೆಲ್ಲ ತಲೆಬುರುಡೆ ಒಡೆದು ಮಿದುಳು ಹೊರಚೆಲ್ಲಿಕೊಂಡಿದೆ. ಕಬ್ಬಿಣದ ಸರಳಿನಿಂದ ತಲೆಗೆ ಹೊಡೆದು ಕೊಂದದ್ದಿರಬಹುದು. ನಾಲ್ಕಾರು ಹೆಣಗಳನ್ನು ಒಟ್ಟು ಮಾಡಿ ಪೆಟ್ರೋಲ್ ಸುರಿದು ಸುಡುವ ಯತ್ನ ನಡೆಸಿದ್ದರೂ ಅರ್ಧಂಬರ್ಧ ಬೆಂದ ಅಂಗಾಂಗಗಳು ಬೀದಿಯಲ್ಲೆಲ್ಲೆಡೆಯೂ



ಚೆಲ್ಲಾಪಿಲ್ಲಿಯಾಗಿ ಬಿದ್ದುಕೊಂಡಿವೆ.

ಎಲ್ಲಾ ಮನೆಗಳ ಬಾಗಿಲುಗಳೂ ತೆರೆದುಕೊಂಡಿವೆ. ಹೆಚ್ಚು ಕಡಿಮೆ ಎಲ್ಲಾ ಮನೆಗಳ ಸೂರಿನ ಮೇಲೂ ಆ್ಯಂಟೆನಾಗಳಿವೆ. ಟಿ.ವಿ.ಯಾಗಲೀ ಇತರ ಸಾಮಗ್ರಿಗಳಾಗಲಿ ಕಾಣಿಸಲಿಕ್ಕೇ ಇಲ್ಲ. ಅಲಮಾರುಗಳೂ ತೆರೆದುಕೊಂಡೇ ಇವೆ. ರಜಾಯಿಗಳೂ ಹಾಸಿಗೆ, ಹೊದ್ದಿಕೆಗಳೂ ಅಲ್ಲಲ್ಲೇ ಚದುರಿ ಬಿದ್ದುಕೊಂಡಿವೆ. ಆದರೆ ಉಣ್ಣೆ ವಸ್ತ್ರಗಳೆಲ್ಲವೂ ಕಾಣೆಯಾಗಿವೆ.

ಉಪಕಾರ್‌ಗೆ ತಲೆ ಸುತ್ತುತ್ತಿರುವಂತೆ ಭಾಸವಾಯಿತು. ತಾನಿರುವುದು ಜನರಹಿತವಾದ ಯಾವುದೋ ಮನೆಯ ಸ್ವಾಗತ ಕೊಠಡಿಯಲ್ಲಿ. ಪೂಜಾ ಕೊಠಡಿಯೊಳಗೆ ಉರಿಸಿ ಇರಿಸಲಾದ ಬಲ್ಬ್‌ನ ಮಂದ ಬೆಳಕು.

ತೆರೆದುಕೊಂಡಿರುವ ಬಾಗಿಲಿನ ಮೂಲಕ ತೂರಿ ಬಂದ ಗಾಳಿಯಲ್ಲಿ ತೀಕ್ಷ್ಣವಾದ ದುರ್ಗಂಧ.

ಆತನಿಗೆ ವಾಕರಿಕೆ ಬಂದುಬಿಟ್ಟಿತ್ತು–ಡೈನಿಂಗ್ ರೂಮಿನ ಸಿಂಕ್‌ನಲ್ಲಿ ಆತ ವಾಂತಿ ಮಾಡಿದ; ಟ್ಯಾಪ್ ತೆರೆದು ಮುಖ ತೊಳೆದ–ಗೋಡೆಯ ಕನ್ನಡಿಯಲ್ಲಿ ಮುಖ ನೋಡಿಕೊಂಡ. ಅಪರಿಚಿತವಾದ ಈ ಮುಖ ಯಾರದ್ದು ಎಂದು ಅಚ್ಚರಿಪಟ್ಟನಾತ.

ಪಕ್ಕದಲ್ಲೇ ಇರುವ ಕ್ಯಾಲೆಂಡರ್‌ನಲ್ಲಿ ಆತನಿಗೆ ಇಂದಿರಾಗಾಂಧಿಯ ನಗುಮುಖ ಕಾಣಿಸಿತು.

ವೈಟಿಂಗ್ ರೂಮ್‌ನಲ್ಲಿ ಪ್ರಯಾಣಿಕರ ನೂಕು ನುಗ್ಗಲು. ದೆಹಲಿಗೆ ಹೋಗಬೇಕಾದ ಅನೇಕ ಟ್ರೈನ್‌ಗಳು ಆಗ್ರಾದಲ್ಲೆ ಯಾನ ಕೊನೆಗೊಳಿಸಿವೆ. ಯಾವ ಗಾಡಿಯೂ ದೆಹಲಿಗೆ ಹೋಗುತ್ತಾ ಇಲ್ಲ. ಎನ್‌ಕ್ವೈರಿಯಲ್ಲಿ ವಿಚಾರಿಸಿದಾಗ ಸ್ಪಷ್ಟ ವಿವರಗಳಾವುದೂ ದೊರೆಯಲಿಲ್ಲ. ಕಾರಣ, ದೆಹಲಿಯ ಗಲಾಟೆಯೇ ಅಥವಾ ರೈಲ್ವೆ ಲೈನ್‌ನಲ್ಲಿ ಕಾಣಿಸಿಕೊಂಡ ಯಾವುದಾದರೂ ದೋಷವೆ ಎಂಬುದನ್ನು ಹೇಳಲೂ ಅವರಿಗೆ ಸಾಧ್ಯವಾಗಲಿಲ್ಲ. ಮುಂದಿನ ಟ್ರೈನ್ ಯಾವಾಗ ಹೊರಟೀತು ಎಂದು ಪ್ರಶ್ನಿಸಿದಾಗಲೂ ಅಂಗೈ, ಅಂಗಾತ ಮಾಡಲಿಕ್ಕಷ್ಟೇ ಅವರಿಗೆ ಸಾಧ್ಯವಾದದ್ದು.

ವೃದ್ಧ ಸರ್ದಾರ್ಜಿಯೊಡನೆ ಬ್ರೀಫ್‌ಕೇಸ್ ನೋಡಿಕೊಳ್ಳಲು ಹೇಳಿ ಇಂದೂ ಬಾತ್‌ರೂಮ್‌ಗೆ ಹೋದಳು. ಧೂಳೂ ಬೆವರೂ ಅಂಟಿಕೊಂಡಿರುವ ಮೈಯಲ್ಲಿ ಶವರ್‌ನಿಂದ ತಣ್ಣಗಿನ ನೀರು ಬಿದ್ದಾಗ ಹಿತವೆನಿಸಿತು. ಸೀರೆ ಬದಲಾಯಿಸಿ ಸಣ್ಣ ಮಟ್ಟಿಗೆ ಅಲಂಕರಿಸಿಕೊಂಡು ಅವಳು ಮತ್ತೊಮ್ಮೆ ಕನ್ನಡಿಯಲ್ಲಿ ನೋಡಿಕೊಂಡಳು. ಈ ಉಟ್ಟುಕೊಂಡಿರುವುದು ಬ್ರೌನ್ ಕಲರ್‌ನಲ್ಲಿ ಬಿಳಿ ಚೌಕಗಳಿರುವ ಸೀರೆಯಲ್ಲ; ಕೆಳಗಡೆಗೆ ಅನುಕ್ರಮ ದೊಡ್ಡದಾಗುತ್ತಲೇ ಇರುವ ಕೆಂಪು ವೃತ್ತಗಳಿರುವ ಬಿಳಿ ಸೀರೆ. ರವಿ ತನ್ನನ್ನು ಗುರುತಿಸಲು ಸಾಧ್ಯವಾದೀತೆ? ಹೇಗೂ ಪತ್ರದಲ್ಲಿ ಬರೆದಿರುವ

ಹಾಗೆ ಕೇರಳ ಎಕ್ಸ್‌ಪ್ರೆಸ್‌ನ ಎ.ಸಿ.ಕಂಪಾರ್ಟ್‌ಮೆಂಟ್‌ನ ಹೊರಗೆ ಕಾದು ನಿಲ್ಲಲು ಇನ್ನು ಸಾಧ್ಯವಾಗದು. ಕಾದು ನಿಲ್ಲುವುದಾಗಿ ತಿಳಿಸಿದ್ದ ವೇಳೆ ದಾಟಿ ಎಷ್ಟು ತಾಸುಗಳಾದವು? ಮೂವತ್ತೇಳೊ? ಮೂವತ್ತೆಂಟೊ? ಗೊತ್ತಿಲ್ಲ. ಊರುಬಿಟ್ಟು ಬಹಳಷ್ಟು ದಿನಗಳಾದುವು ಎಂದೇ ಅನ್ನಿಸುತ್ತಿದೆ. ಈ ಅನಿಶ್ಚಿತಾವಸ್ಥೆ ಯಾವಾಗ ಕೊನೆಗೊಂಡಿತೊ ಏನೊ ಎಂದುಕೊಂಡಳು ಇಂದೂ.

ಮರಳಿ ತಲಪಿದಾಗ, ಆಕೆಗೆ ಕುಳಿತುಕೊಳ್ಳಲು ವೃದ್ಧನು ಸ್ಥಳಾವಕಾಶ ಮಾಡಿಕೊಟ್ಟ. ಸೇಬುಹಣ್ಣಿನ, ಬಾಳೆಹಣ್ಣಿನ ಪೊಟ್ಟಣಗಳನ್ನು ಆಕೆಯತ್ತ ವೃದ್ಧ ಚಾಚುತ್ತ ಉತ್ತೇಜಿಸಿದ: ತಿನ್ನು ಮಗಳೇ... ಹಸಿವೆ ಜೋರಾಗಿಯೇ ಇದೆ. ಆದರೂ ದಾಕ್ಷಿಣ್ಯದಿಂದ ಹೇಳಿದಳು: ಇವೆಲ್ಲ ಬೇಕಿರಲಿಲ್ಲ ಬಾಬಾ.

ಈ ನಡುವೆ ಯಾವಾಗ ತಾನು ಇವರನ್ನು ಬಾಬಾ ಎಂದು ಕರೆಯತೊಡಗಿದ್ದೆಂದು ನೆನಪು ಮಾಡಲು ಅವಳು ಯತ್ನಿಸಿದಳು. ಪ್ರಯಾಣದ ಯಾವುದೊ ಸಂದರ್ಭದಲ್ಲಿ ಹಾಗೆ ಸಂಬೋಧಿಸಿದ್ದಿರಬಹುದು. ತೀರ ಸಹಜವಾದ ಸಂಬೋಧನೆ ಅದು ಎಂದೂ ಆಕೆಗನ್ನಿಸಿತು. ಆತನ ಬಿಳಿ ಪಗಡಿ, ನಸುಹಳದಿ ಮಿಶ್ರಿತ ಬಿಳಿಗಡ್ಡ, ಕಣ್ಣುಗಳಲ್ಲಿ ಕರುಣೆ ಹಾಗೂ ನಗೆಯ ನೈರ್ಮಲ್ಯಗಳು ಆಕೆಯ ಆದರವನ್ನು ಸಂಪೂರ್ಣ ವಶಪಡಿಸಿದ್ದವು.

ಆತನೇ ಸೇಬು ಕೊಯ್ದು ಚಿಕ್ಕ ತುಂಡುಗಳಾಗಿ ಕತ್ತರಿಸಿ ಆಕೆಗೆ ನೀಡಿದ.

ಬಾಳೆಹಣ್ಣಿನ ಸಿಪ್ಪೆ ಸೀಳಿ, ಚೂರಿಯಿಂದ ನೆಟ್ಟಗೆ ಒಂದು ಗೀಟೆಳೆದ ಬಳಿಕ ಅದರಲ್ಲಿ ಯಾವ್ಯಾವುದೊ ಮಸಾಲೆ ಹುಡಿಗಳ ಮಿಶ್ರಣ ಉದುರಿಸಿ, ಅರ್ಧ ಲಿಂಬೆ ಹಣ್ಣಿನ ರಸವನ್ನೂ ಹಿಂಡಿ ಅದನ್ನೂ ಆಕೆಗೆ ನೀಡಿದ. ಸಿಹಿ, ಖಾರ, ಹುಳಿ ಎಲ್ಲವೂ ಒಟ್ಟಾದ ಚುರುಕು ಮುಟ್ಟಿಸುವ ಸ್ವಾದ.

ಬಲು ರುಚಿಯಾಗಿದೆ ಬಾಬಾ ಎಂದಳು ಇಂದೂ, ಚಿಂತೆಯ ನೆರಿಗೆಗಳು ಆತನ ಹಣೆಯಲ್ಲಿ ಕಾಣಿಸಿಕೊಂಡವು. ಒಂದು ಕ್ಷಣದ ಬಳಿಕ ಆತ ಒಂದು ಕುಚೋದ್ಯದ ರೀತಿಯಲ್ಲಿ ಹೇಳಿದ:

ಈ ಚಾಟ್ ಮಸಾಲೆಯ ಹಾಗೆಯೇ ಸಿಕ್ಖನ ವ್ಯಕ್ತಿತ್ವವೂ ಎಂದು ಎಷ್ಟೋ ವೇಳೆ ನನಗನ್ನಿಸಿದ್ದಿದೆ. ಖಾರ, ಹುಳಿಗಳೆಲ್ಲ ತೆಳ್ಳಗಿನ ಹೊರ ಆವರಣಗಳಷ್ಟೇ. ಸಿಕ್ಖನ ನಿಜವಾದ ವ್ಯಕ್ತಿತ್ವ ಸಿಹಿಯೇ. ಈ ಖಾರ, ಹುಳಿಗಳು ಸಿಹಿಯ ಸ್ವಾದ ಹೆಚ್ಚಿಸಲು ನೆರವಾಗುತ್ತವೆ. ಆದರೆ ಯಾರೂ ಇದನ್ನು ಅರ್ಥಮಾಡಿಕೊಳ್ಳುತ್ತಾ ಇಲ್ಲ. ಸುರಕ್ಷಿತಾ ವ್ಯವಸ್ಥೆಗೆ ಹಾನಿ ತಟ್ಟಿದಾಗಲೆಲ್ಲ ಅದರ ಖಾರ, ಹುಳಿಗಳನ್ನೇ ಹೊರತೆಗೆಯಲಾಗುತ್ತದೆ. ಸಿಕ್ಖ್ ಚರಿತ್ರೆ ಪೂರ್ತಿ ಇದನ್ನೇ ಸಾಬೀತು ಪಡಿಸುತ್ತವೆ.

ಮಾತು ನಿಲ್ಲಿಸಿದ ಆತ ಇನ್ನೊಂದು ಸೇಬು ತೆಗೆದು ಕತ್ತರಿಸಿ, ಅದರೊಳಗಿನ ಕಪ್ಪು ಬೀಜಗಳನ್ನು ಚೂರಿ ಮೊನೆಯಿಂದ ಚುಚ್ಚಿ ಹೊರಹಾಕಿದ. ಬಳಿಕ ತನ್ನಷ್ಟಕ್ಕೆ



ಎಂಬಂತೆ ಹೇಳತೊಡಗಿದ:

ಮುಸ್ಲಿಮರ ವಿರುದ್ಧ ಸಿಕ್ಖನೂ ಹಿಂದೂವೂ ಯಾವತ್ತೂ ಒಟ್ಟಾಗಿಯೇ ಇದ್ದಿದ್ದರೂ ಹಿಂದಿನಿಂದಲೂ ಸಿಕ್ಖನು ಹಿಂದೂವನ್ನೂ ಹಿಂದೂ ಸಿಕ್ಖನನ್ನೂ ತುಸು ಸಂಶಯದ ದೃಷ್ಟಿಯಿಂದಲೇ ನೋಡುತ್ತಿದ್ದರು. ಮುಖ್ಯವಾಗಿ, ಬನಿಯಾಗಳಾದ ಹಿಂದೂಗಳನ್ನು ಸಿಕ್ಖನು ಯಾವತ್ತೂ ನಂಬಲಿಲ್ಲ.

ಆತ ಇಂದುವನ್ನು ದಿಟ್ಟಿಸಿದ. ಆ ಪಳಮೆಯ ಕಣ್ಣುಗಳಲ್ಲಿ ಕುಚೋದ್ಯದ ಹೊಳಪು ಇಮ್ಮಡಿಸಿದ್ದನ್ನು ಇಂದೂ ಗಮನಿಸಿದಳು.

ವೈಟಿಂಗ್ ರೂಮ್ ತುಂಬ ಜನರಿದ್ದರೂ ಸಾವು ಸಂಭವಿಸಿದ್ದ ಮನೆಯಲ್ಲೆಂಬಂತೆ ನಿಶ್ಯಬ್ದತೆ ದಟ್ಟಣಿಸಿಕೊಂಡಿದೆ. ಮಕ್ಕಳು ಕೂಡ ಯಾವುದೊ ಅದೃಶ್ಯ ಶಕ್ತಿಯ ಗದರಿಕೆಯಿಂದೆಂಬಂತೆ ಮೂಕರಾಗಿರುವರು.

ಕ್ಲಾಕ್‌ನಲ್ಲಿ ಗಂಟೆ ಎಂಟು. ಇಂದೂ ಹೊರಗೆ ಹೋಗಿ ಪ್ಲ್ಯಾಟ್‌ಫಾರ್ಮಿನಲ್ಲಿ ಅಡ್ಡಾಡಿದಳು. ಕತ್ತಲೆಯಿಂದ ಬೀಸಿ ಬರುತ್ತಿರುವ ಗಾಳಿಯಲ್ಲಿ ಚಳಿಯ ಮುಳ್ಳುಗಳಿವೆ. ದೂರದಲ್ಲೆಲ್ಲೊ ಯಮುನೆ ಶಾಂತವಾಗಿ ಹರಿಯುತ್ತಿರಬಹುದು. ತಾಜ್‌ಮಹಲಿನ ಪ್ರತಿಬಿಂಬ ಅದರ ಅಲೆಗಳಲ್ಲಿ ಕರಗುತ್ತಿರಬಹುದು. ಔರಂಗಜೇಬನ ಸೆರೆಮನೆಯಲ್ಲಿದ್ದುಕೊಂಡು ಒಂದು ಮುರುಕು ಕನ್ನಡಿಯಲ್ಲಿ ತಾಜ್‌ನ ಪ್ರತಿಬಿಂಬವನ್ನು ದಿಟ್ಟಿಸುತ್ತ, ಕೊರಗುತ್ತ ಇದ್ದ ಷಾಜಹಾನ್‌ನ ನಿಟ್ಟುಸಿರುಗಳು ಕೇಳಿಸುತ್ತಿದೆಯೆ ಎಂದನ್ನಿಸಿತ್ತು ಇಂದೂಗೆ. ತುಸು ದೂರದಲ್ಲಿ, ಅಕ್ಬರ್ ಕೇವಲ ಆರೇ ವರ್ಷಗಳಲ್ಲಿ ಕಟ್ಟಿಸಿದ್ದ ಫತೇಪೂರ್ ಸಿಕ್ರಿ ಇದೆ. ತನ್ನ ಸೂಫಿ ಗುರು ಚಿಸ್ತಿಯ ಸಾಮೀಪ್ಯವನ್ನಷ್ಟೇ ಗಣನೆಗೆ ತೆಗೆದುಕೊಂಡು ನಿರ್ಮಿಸಲಾದ ರಾಜಧಾನಿ ಅದು. ಒಂದು ಬೆಟ್ಟವನ್ನಷ್ಟೂ ಕಡಿದು ಸಮತಟ್ಟು ಮಾಡಿ ಅರಮನೆಗಳನ್ನೂ ಕೊತ್ತಳಗಳನ್ನೂ ಕೋಟೆ ಗೋಡೆಗಳನ್ನೂ ಎಬ್ಬಿಸಲಾಗಿತ್ತು. ಆದರೆ ಅಲ್ಲಿ ರಾಜಧಾನಿ ಹೆಚ್ಚು ಕಾಲ ಮುಂದುವರಿಯಲಿಲ್ಲ. ನೀರಿನ ಕೊರತೆಯಿಂದ ಪ್ರಜೆಗಳು ರಾಜಧಾನಿಯನ್ನು ತೊರೆದರು. ಚಿಸ್ತಿಯ ಆಧ್ಯಾತ್ಮಿಕ ಶಕ್ತಿಗೆ ಅಲ್ಲಿನ ನೀರ ಕೊರತೆಯನ್ನು ಪರಿಹರಿಸಲು ಸಾಧ್ಯವಾಗಲಿಲ್ಲ.

ಧ್ವನಿವರ್ಧಕದ ಮೂಲಕ ಪ್ರಕಟಣೆ ಕೇಳಿಸಿತು: ಮುಂಬಯಿಯಿಂದ ಬರುತ್ತಿರುವ ಟ್ರೈನ್ ಕೆಲವೇ ನಿಮಿಷಗಳಲ್ಲಿ ಒಂದನೆಯ ನಂಬರ್ ಪ್ಲ್ಯಾಟ್‌ಫಾರಂ ತಲಪಲಿದೆ. ಹತ್ತು ನಿಮಿಷಗಳ ಬಳಿಕ ಆ ಟ್ರೈನ್ ದೆಹಲಿಗೆ ಹೋಗುತ್ತದೆ.

ಇಂಗ್ಲಿಷ್‌ನಲ್ಲೂ ಹಿಂದಿಯಲ್ಲೂ ಪ್ರಕಟಣೆ ಪುನರಾವರ್ತಿಸಲ್ಪಟ್ಟಾಗ ವೈಟಿಂಗ್ ರೂಮ್‌ನಿಂದ, ತಾಳ್ಮೆಗೆಟ್ಟ ಪ್ರಯಾಣಿಕರು ಪ್ಲ್ಯಾಟ್‌ಫಾರಂಗೆ ನುಗ್ಗತೊಡಗಿದರು.

ಬಾ ಮಗಳೆ... ನಾವು ಈ ನೂಕು ನುಗ್ಗಲಿನಿಂದ ದೂರ ನಿಲ್ಲೋಣ. ಸುಮ್ಮಗೆ ಅವಸರಪಡುವುದರಿಂದ ಏನು ಪ್ರಯೋಜನ? ಟ್ರೈನ್ ಬಾರದೆ ಅದರಲ್ಲಿ

ಹತ್ತಲಿಕ್ಕಾಗುವುದಿಲ್ಲವಲ್ಲ ಎಂದನು ಇಂದೂವಿಗೆ ವೃದ್ಧ.

ಅದ್ಭುತವೇ ಎನ್ನಬೇಕು, ಟ್ರೈನ್‌ನಲ್ಲಿ ಹೆಚ್ಚು ಗಜಿಬಿಜಿ ಇರಲಿಲ್ಲ. ಅಷ್ಟೇ ಅಲ್ಲ, ಆಗ್ರಾದಲ್ಲಿ ಇಳಿಸಲ್ಪಟ್ಟ ಪ್ರಯಾಣಿಕರ ಸಲುವಾಗಿ ಇನ್ನೂ ಎರಡು ಕಂಪಾರ್ಟ್‌ಮೆಂಟ್‌ಗಳನ್ನು ಜೋಡಿಸಲಾಯಿತು. ಕುಳಿತು ಕೊಳ್ಳಲಿಕ್ಕಷ್ಟೇ ಅಲ್ಲ ಒಂದಿಷ್ಟು ಬೆನ್ನೊರಗಿಸಿ ವಿಶ್ರಾಂತಿ ಪಡೆಯಲಿಕ್ಕೆ ಕೂಡ ಸ್ಥಳಾವಕಾಶ ದೊರೆಯಿತು. ಟ್ರೈನ್ ಹೊರಟಾಗ ಗಂಟೆ ಎಂಟೂವರೆ, ಹಾದಿಯಲ್ಲಿ ತಡೆಯೇನೂ ಎದುರಾಗದಿದ್ದರೆ ಮಧ್ಯರಾತ್ರಿಯ ವೇಳೆ ನಿಜಾಮುದ್ದೀನ್ ತಲಪಬಹುದು.

ಮುದುಡಿ ಕುಳಿತು ಸ್ಥಳಾವಕಾಶ ಕಲ್ಪಿಸುತ್ತ ವೃದ್ಧನು ಹೇಳಿದ:

ಮಗಳೇ ನೀನು ನಿದ್ದೆ ಮಾಡು, ನಿಜಾಮುದ್ದೀನ್ ತಲಪುವ ಮೊದಲೇ ನಾನು ಕರೆದೆಬ್ಬಿಸುತ್ತೇನೆ.

ಏರ್‌ಪಿಲ್ಲೊ ಊದಿ ಗಾಳಿ ತುಂಬುವುದರ ನಡುವೆ ಇಂದೂ ಸಹ ಪ್ರಯಾಣಿಕರನ್ನು ಗಮನಿಸಿದಳು. ಮಿಲಿಟರಿ ಯೂನಿಫಾರಂ ತೊಟ್ಟುಕೊಂಡಿರುವ ಓರ್ವ ಸಿಕ್ಖ. ಅವನ ಶರಟಿನ ಫ್ಲಾಪ್‌ನಲ್ಲಿ ಸಿಗ್ನಲ್ಸ್ ಎಂದು ಮುದ್ರಿಸಲಾಗಿದೆ. ಮಂದಿನ ಮೂರು ಬರ್ತ್‌ಗಳನ್ನು ಏಳು ಸದಸ್ಯರಿರುವ ಸಿಕ್ಖ್ ಕುಟುಂಬವೊಂದು ಬಳಸಿಕೊಂಡಿದೆ. ಸರ್ದಾರ್ಜಿಗಿಂತಲೂ ಹಿರಿಯಳಂತೆ ಕಾಣಿಸುತ್ತಾಳೆ ದೊಗಳೆ ಸಲ್ವಾರ್ ಕಮೀಜ್‌ಗಳನ್ನು ತೊಟ್ಟುಕೊಂಡಿರುವ ಆತನ ಮಡದಿ. ಸೇರು, ಪಾವು, ಚಟಾಕುಗಳಂತೆ ಮೂವರು ಗಂಡುಮಕ್ಕಳು. ಅವರ ತಲೆಗೂದಲನ್ನು ಬಿಳಿ ಟವಲ್‌ಗಳಿಂದ ಸುತ್ತಲಾಗಿದೆ. ಚಡ್ಡಿ ಮತ್ತು ಷರಟುಗಳನ್ನು ತೊಟ್ಟುಕೊಂಡಿರುವ ಅವರು ತುಂಟರೆಂದು ಪ್ರಥಮ ನೋಟದಲ್ಲೇ ವೇದ್ಯವಾಗುತ್ತದೆ. ಹಿರಿಯ ಹೆಣ್ಣು ಮಗಳಿಗೂ ಸರ್ದಾರಿಣಿಯ ತೊಡೆ ಮೇಲೆ ಕುಳಿತಿರುವ ತೀರಾ ಕಿರಿಯ ಹೆಣ್ಣು ಮಗುವಿಗೂ ನಡುವಿನವರಿರಬಹುದು ಈ ತ್ರಿಮೂರ್ತಿಗಳು ಎಂದುಕೊಂಡಳು ಇಂದೂ. ಅವರ ವೇಷಭೂಷಣಗಳಿಂದಲೂ ಲಗೇಜ್‌ಗಳಿಂದಲೂ ಅವರು ಶ್ರೀಮಂತ ಮಧ್ಯಮ ವರ್ಗದವರೆಂಬುದು ಸ್ಪಷ್ಟ. ಬರೆದಿರಿಸಲಾದ ಹೆಸರು ಮತ್ತು ವಿಳಾಸವನ್ನು ಆಕೆ ಗಮನಿಸಿದಳು: ಮುಲಾಯಂ ಸಿಂಗ್, ಗವರ್ನಮೆಂಟ್ ಕಂಟ್ರಾಕ್ಟರ್; ಬಂಜಾರ ಹಿಲ್ಸ್, ಹೈದರಾಬಾದ್. ಸೈಡ್ ಬರ್ತ್‌ಗಳಲ್ಲಿ ಕೆಳಗೆ ಓರ್ವ ಯುವಕ ಮತ್ತು ಯುವತಿ. ಅವರು ವಿವಾಹಿತರಾಗಿ ಹೆಚ್ಚು ಕಾಲವಾಗಲಿಲ್ಲವೆಂಬುದು ಸ್ಪಷ್ಟ. ಯುವತಿಯ ದುಪ್ಪಟ್ಟದ ಕೆಂಬಣ್ಣ ಕೆನ್ನೆಗಳ ಕೆಂಪನ್ನು ಹೆಚ್ಚಿಸುತ್ತಿದೆ.

ಇಂದೂ ಸೀರೆಯ ಸೆರಗಿನಿಂದ ತಲೆ ಮುಚ್ಚಿಕೊಂಡಳು–ಟ್ರೈನ್‌ನ ವೇಗ ಹೆಚ್ಚುವಷ್ಟರಲ್ಲೆ ಅವಳ ಕಣ್ಣುಗಳು ಮುಚ್ಚಲ್ಪಟ್ಟಿದ್ದವು. ಮೆಲ್ಲ ಮೆಲ್ಲಗೆ ಅವಳು ನಿದ್ದೆಯ ಮಡುವಿನಲ್ಲಿ ಮುಳುಗಿದಳು...

ಟ್ರೈನ್ ಇದ್ದಕ್ಕಿದ್ದಂತೆ ಅಲುಗಾಡಿದೆಯೆ? ಅಥವಾ ಯಾವುದಾದರೂ



ಸಪ್ಪಳವಾಗಿತ್ತೆ ತನ್ನನ್ನು ಎಚ್ಚರಗೊಳಿಸಿದ್ದು? ಒಂದು ಕನಸು ಕೂಡ ಅಡ್ಡಿಪಡಿಸಿರದ ಗಾಢ ನಿದ್ದೆಯಿಂದ ಎಚ್ಚರಗೊಂಡ ಇಂದೂ ಕಣ್ಣು ಬಿಟ್ಟಳು. ಟ್ರೈನ್ ಮೆಲ್ಲ ಮೆಲ್ಲಗೆ ಸರಿಯುತ್ತಾ ಇದೆ. ಬೋಗಿಯೊಳಗೆ ಬೆಳಕಿಲ್ಲ. ಎಲ್ಲಾ ಲೈಟ್‌ಗಳೂ ನಂದಿವೆ. ಫ್ಯಾನ್‌ಗಳು ತಿರುಗುತ್ತಿರುವ ಸದ್ದು ಮಾತ್ರ ಕೇಳಿಸುತ್ತಿದೆ.

ಯಾಕೊ ಈ ನಿಶ್ಯಬ್ದತೆ ಅಸಾಮಾನ್ಯವೆಂದೇ ಅನ್ನಿಸಿತ್ತು ಇಂದೂಗೆ. ಗಂಟೆ ಎಷ್ಟಾಯ್ತೊ ಏನೊ? ಗಡಿಯಾರದ ಅಂಕೆಗಳು ಈ ಕತ್ತಲೆಯಲ್ಲಿ ಕಾಣುವಂತಿಲ್ಲ. ಯಾವುದಾದರೂ ಸ್ಟೇಷನ್ ಸಮೀಪಿಸುತ್ತಿದೆಯೆ? ಟ್ರೈನ್ ಸರಿಯುತ್ತಿರುವುದು ತೀರಾ ನಿಧಾನವಾಗಿ.

ಯಾವುದೊ ಬೆರಳುಗಳು ತನ್ನ ಮೈಮೇಲೆ ಹರಿದಾಡುತ್ತಿರುವಂತೆ ಇಂದೂಗೆ ಅನ್ನಿಸಿತ್ತು. ಅವಳು ಬೆಚ್ಚಿದಳು.

ಬಾಬಾ ಅವಳು ಕರೆದಳು. ಯಾರೂ ಓಗೊಡಲಿಲ್ಲ. ತನ್ನ ಹೊಟ್ಟೆಯ ನಗ್ನತೆಯಲ್ಲಿರುವ ಬೆರಳುಗಳು ಮೆಲ್ಲಮೆಲ್ಲಗೆ ಮೇಲಕ್ಕೆ ಸರಿದು ಎದೆಯನ್ನು ಸವರಿದಾಗ ಅವಳು ಎದ್ದು ಕುಳಿತಳು.

ಯಾರು?

ಯಾರೂ ಉತ್ತರಿಸಲಿಲ್ಲ. ಗಟ್ಟಿಯಾಗಿ ಬೊಬ್ಬಿಡಲೇ... ದಾರಿ ದೀಪದ ಬೆಳಕು ಕ್ಷಣ ಹೊತ್ತು ಬೋಗಿಯೊಳಗೆ ಮಿಂಚಿ ಮಾಯವಾಯಿತು. ಎದೆ ಸವರಿದ್ದ ವ್ಯಕ್ತಿ ಯಾರೆಂದು ಗೊತ್ತಾಯಿತು. ಪಾಪ! ನಿದ್ದೆ ಹೋಗುವ ಮುನ್ನ ಕಂಡಿದ್ದ, ಸರ್ದಾರಿಣಿಯ ತೊಡೆಯ ಮೇಳೆ ಕುಳಿತಿದ್ದ ಒಂದೂವರೆ ವರ್ಷದ ಪೋರಿ! ಅವಳಿಗೆ ದುರುದ್ದೇಶಗಳೇನೂ ಇರಲಿಲ್ಲವೆಂಬುದು ಸ್ಪಷ್ಟ. ಅಮ್ಮನ ಮಮ್ಮದಲ್ಲಿ ಹಾಲು ದೊರೆಯದೆ ಹೋದಾಗ ಪುಟ್ಟ ಜಾಣೆ ಹೊಸ ಹಾಲು ಕೇಂದ್ರವನ್ನು ಅರಸುತ್ತ ಹೊರಟಿದ್ದಿರಬೇಕು. ಆದರೆ, ಪುಟ್ಟೀ ನಿನ್ನನ್ನು ನಿರಾಸೆಗೊಳಿಸಬೇಕಾಗಿ ಬಂದ ಬಗ್ಗೆ ನಾನು ವಿಷಾದಿಸುತ್ತೇನೆ ಎಂದುಕೊಂಡಳು ಇಂದೂ. ಮಗು ಬೀಳದಿರಲೆಂದು ಹಿಡಿದು ತೊಡೆಯ ಮೇಲೆ ಕೂರಿಸಿದಳು. ಎಲ್ಲರೂ ನಿದ್ರಿಸುತ್ತಿರಬಹುದು. ತನ್ನನ್ನು ಕರೆದೆಬ್ಬಿಸುವುದಾಗಿ ಹೇಳಿದ್ದ ಬಾಬಾಗೆ ಕೂಡ ಗಾಢ ನಿದ್ದೆ ಬಂದಿರಬಹುದು. ಮೆಲ್ಲಗೆ ಷಟ್ಟರ್ ಮೇಲಕ್ಕೆತ್ತಿ ದೂರಕ್ಕೆ ದಿಟ್ಟಿಸಿದಳವಳು. ಯಾವುದೋ ಸ್ಟೇಷನ್ ಸಮೀಪಿಸುತ್ತಾ ಇದೆ.

ಹಳದಿ ಫಲಕದಲ್ಲಿನ ಅಕ್ಷರಗಳನ್ನು ಓದಿದಳು: ಫರೀದಾಬಾದ್!

ಒಂದು ಬಿಕ್ಕಳಿಕೆಯೊಂದಿಗೇ ಟ್ರೈನ್ ನಿಂತಿತು. ಪ್ಲಾಟ್‌ಫಾರ್ಮಿನಿಂದ ಟ್ಯೂಬ್‌ಲೈಟ್‌ನ ಬೆಳಕು ಬೋಗಿಯೊಳಗಿನ ಕತ್ತಲೆಯತ್ತ ಹರಿದು ಬಂತು.

ಅರ್ಧ ನಿಮಿಷದ ಅವಧಿಯೊಳಗೇ ಅವಳಿಗೆ ಎಲ್ಲವೂ ವೇದ್ಯವಾಯ್ತು. ತನ್ನ ಸಹ ಪ್ರಯಾಣಿಕರಾರೂ ನಿದ್ರಿಸುತ್ತಿಲ್ಲ.

ಅವರೆಲ್ಲರೂ ಮೃಗೀಯವಾಗಿ ಕೊಲೆಗೈಯಲ್ಪಟ್ಟಿರುವರು.

ಪಕ್ಕನೆ, ಮಡಿಲಲ್ಲಿ ಕುಳಿತಿರುವ ಮಗುವನ್ನು ಗಮನಿಸಿದಳು. ಅಮ್ಮನ ಮೃತದೇಹದ ಶೈತ್ಯದಿಂದ ಬಿಸುಪನ್ನರಸುತ್ತ ಹೊರಟ ಮಗು ಅವಳ ಮಡಿಲಲ್ಲಿ ಮಲಗಿ ಇಷ್ಟರಲ್ಲೆ ನಿದ್ದೆ ಹೋಗಿತ್ತು.

ಯಾವುದೊ ಅಸ್ಪಷ್ಟ ಕನಸಿನ ಸುಖಕರವಾದ ಅನುರಣನವು ಮೂಡಿಸಿದ್ದ ಅಮಾಯಕ ನಗೆ ಮಗುವಿನ ನುಣ್ಣಗಿನ ತುಟಿಗಳಲ್ಲಿ ಕಂಗೊಳಿಸುತ್ತಾ ಇದೆ.

* * *

ಉಪಕಾರ್ ಸಿಂಗ್ ತ್ರಿಲೋಕ್‌ಪುರಿಯ ಗಲ್ಲಿಗಳಲ್ಲಿ ರಭಸದಿಂದ ಓಡಾಡಿದ. ಯಾವುದೋ ಹುಚ್ಚು ಆವೇಶಕ್ಕೆ ಆತ ಒಳಗಾಗಿದ್ದ. ಸಮವಸ್ತ್ರಧಾರಿಗಳಾದ ಸೈನಿಕರ ಜತೆ ತಾನಾಗಿಯೆ ವಹಿಸಿಕೊಂಡ ಕರ್ತವ್ಯದಲ್ಲಿ ಆತನೂ ನಿರತನಾದ. ಯದ್ವಾತದ್ವಾ ರಾಶಿ ಹಾಕಲಾದ ಹೆಣಗಳನ್ನು ರಸ್ತೆ ಬದಿಗಳಲ್ಲಿ ಚಾದರಗಳನ್ನು ಹಾಸಿ ಅವರು ಸಾಲಾಗಿ ಮಲಗಿಸಿದರು. ಎಲ್ಲವೂ ಮುಖಚಹರೆಗಳು ನಷ್ಟವಾದ ಕಬಂಧಗಳೇ. ಕೊಲೆಯಾದವರಲ್ಲಿ ಬಹುಮಟ್ಟಿಗೆ ಎಲ್ಲರೂ ಗಂಡಸರೇ. ಪಗಡಿ ಕಿತ್ತೆಸೆದು ಭಾರವಾದ ಯಾವುದೋ ವಸ್ತುವಿನಿಂದ ಬಲವಾಗಿ ಹೊಡೆದದ್ದರಿಂದಲೆ ಹೆಚ್ಚಿನವರೆಲ್ಲರೂ ಕೊಲ್ಲಲ್ಪಟ್ಟಿರುವರು. ತಲೆಗಳೊಡೆದು ಚೆಲ್ಲಾಪಿಲ್ಲಿಯಾಗಿ ಬಿದ್ದುಕೊಂಡಿದೆ ಮಿದುಳು. ದುರುಗುಟ್ಟಿಕೊಂಡೇ ಇವೆ ಕಣ್ಣುಗಳು. ಬಾಯಿ, ಮೂಗುಗಳಿಂದ ಹರಿದು ಗಟ್ಟಿ ಕಟ್ಟಿದ್ದ ರಕ್ತದಲ್ಲಿ ಹರಿದಾಡುತ್ತಿವೆ ಕಠ್ರಗಿನ ಇರುವೆಗಳು.

ಸೈನಿಕರ ಸಾನ್ನಿಧ್ಯದಲ್ಲಿ, ಆತನಕವೂ ಮನೆಯೊಳಗೇ ಅವಿತುಕೊಂಡಿದ್ದ ಹೆಂಗಸರೂ ಮಕ್ಕಳೂ ಹೊರಗೆ ಬಂದರು. ಅವರೊಡನೆ ಏನನ್ನೂ ಪ್ರಶ್ನಿಸುವ ಅಗತ್ಯವಿರಲಿಲ್ಲ. ಅವರ ಕಣ್ಣೆದುರೇ ಆ ಭಯಾನಕ ಕೃತ್ಯಗಳೆಲ್ಲವೂ ನಡೆದಿವೆಯೆಂಬುದು ಸ್ಪಷ್ಟವಾಗಿಯೇ ಗೊತ್ತಾಗುತ್ತಿತ್ತು. ಅವರ ಕಣ್ಣುಗಳಲ್ಲಿ ಭಯ, ದುಃಖ, ಕ್ರೋಧಗಳು ಜ್ವಲಿಸುತ್ತಿದ್ದವು. ಕೈಗಳಲ್ಲಿನ ತಾಮ್ರದ ಕಡಗಗಳ ಮೂಲಕವೂ ಉಂಗುರಗಳ ಮೂಲಕವೂ ಅವರು ಹಲವಾರು ಒಡಲುಗಳನ್ನು ಗುರುತಿಸಿದರು. ಬಂಗಾರದ ಉಂಗುರಗಳೂ ಚಿನ್ನದ ಕಟಕಗಳೂ ಮಾಯವಾಗಿದ್ದುವು. ಉಪಕಾರ್ ಸಿಂಗ್ ಪ್ರತಿಯೊಂದು ಮನೆಯನ್ನೂ ಹೊಕ್ಕು, ಹೆದರಿ ಕಂಗಾಲಾಗಿದ್ದ ಹೆಂಗಸರನ್ನು ಹೊರಹೊರಡಿಸಿದನು. ರಜಾಯಿಗಳನ್ನೂ ಉಣ್ಣೆ, ಉಡುಪುಗಳನ್ನೂ ತುಂಬಿಡುತ್ತಿದ್ದ ತವರದ–ಪೆಟ್ಟಿಗೆಗಳಲ್ಲಿ ಅವರು ಬಚ್ಚಿಟ್ಟುಕೊಂಡಿದ್ದರು. ಅನೇಕ ಮಂದಿ ಗಂಟೆಗಟ್ಟಲೆ ಕಾಲ ಅದರೊಳಗೇ ಕಳೆದಿದ್ದರು. ಕೆಲವರು ಮಲ, ಮೂತ್ರ ವಿಸರ್ಜನೆ ಕೂಡ ಅದರೊಳಗೇ ಮಾಡಿದ್ದರು. ಹಸಿವೆ, ಹೆದರಿಕೆ, ಅವಮಾನ, ದುಃಖ ಮುಂತಾದವುಗಳು ಅವರನ್ನು ಹೆಣ ಸಮಾನರನ್ನಾಗಿ ಮಾಡಿದ್ದುವು.

ಉಪಕಾರ್ ಸಿಂಗ್, ಬಾಯಾರಿದವರಿಗೆ ನೀರು ಕೊಟ್ಟ. ಗಾಯಗೊಂಡವರ



ಆರೈಕೆಮಾಡಿದ. ಸೈನಿಕರು ಕೂಡ ಎಲ್ಲರನ್ನೂ ದಯೆಯೊಂದಿಗೇ ನೋಡಿಕೊಂಡರು. ಗಬ್ಬುನಾತ ಹೊಡೆಯುತ್ತಿರುವ ಗಲ್ಲಿಬಿಟ್ಟು ಹತ್ತಿರದ ಶಾಲಾ ಕಟ್ಟಡಕ್ಕಾಗಲೀ, ಗುರುದ್ವಾರಕ್ಕಾಗಲಿ ಹೋಗಿ ಇರಲು ಯಾರೊಬ್ಬರೂ ಒಪ್ಪಲಿಲ್ಲ. ಅವರ ನೆಚ್ಚಿನವರ– ಅಪ್ಪ, ಗಂಡ, ಮಗ, ಅಳಿಯ, ಸಹೋದರ–

ನಸುಕು ಹರಿಯುತ್ತಿದ್ದಂತೆಯೇ, ಕಾನೂನು ಪಾಲನೆಯ, ತುಕ್ಕು ಹಿಡಿದ ಯಂತ್ರ ನಿಧಾನವಾಗಿ ಚಲಿಸತೊಡಗಿತು. ಕಲ್ಯಾಣ್‌ಪುರಿ ಪೊಲೀಸ್ ಸ್ಟೇಶನ್‌ನಿಂದ ಸ್ಟೇಶನ್ ಹೌಸ್ ಆಫೀಸರ್ ಮತ್ತು ಇಬ್ಬರು ಪೊಲೀಸರು ಬಂದರು. ಮುಂದೆ ಯಾವುದೋ ಹೊತ್ತಿನಲ್ಲಿ ಮುನಿಸಿಪಲ್ ಕೌನ್ಸಿಲರ್ ಸಹ ಬಂದ. ಸತ್ತವರ ಕುರಿತು ತಾನಿನ್ನು ತಲೆಕೆಡಿಸಿಕೊಳ್ಳಬೇಕಾಗಿಲ್ಲ. ಪೊಲೀಸರೂ ಸೈನಿಕರೂ ರಾಜಕಾರಣಿಗಳೂ ಆ ಕಾರ್ಯವನ್ನು ನೋಡಿಕೊಳ್ಳುವರು ಎಂದುಕೊಂಡನು ಉಪಕಾರ್.

ಪುನಃ ಉಪಕಾರ್‌ನ ನರಗಳಲ್ಲಿ ಕ್ರೋಧದ ಲಾವಾ ಹರಿಯತೊಡಗಿತ್ತು. ರವಿಯ ಮನೆಯಲ್ಲಿ ಬಿಟ್ಟು ಬಂದಿದ್ದ ಪಿಸ್ತೂಲ್ ಮೊದಲಬಾರಿ ನೆನಪಿಗೆ ಬಂತು. ಹೌದು, ದುಷ್ಟ ಬನಿಯಾಗಳನ್ನು ಸಂಪೂರ್ಣ ಸುಟ್ಟು ಹಾಕಿದರೂ ಈ ಸಾಮೂಹಿಕ ಹತ್ಯಾಕಾಂಡಕ್ಕೆ ಮುಯ್ಯಿ ತೀರಿಸಿದ ಹಾಗಾಗುವುದಿಲ್ಲ. ಆತನ ಮೈ ಕಂಪಿಸಿತ್ತು. ಹಲ್ಲು ಕಡಿಯುತ್ತ ಮುಷ್ಟಿ ಬಿಗಿದು ಸ್ವಂತ ಅಂಗೈಯಲ್ಲೇ ಗುದ್ದಿದ. ಕಾಲುಗಳು ದಣಿದಿದ್ದವು. ಗಲ್ಲಿಯ ಪಕ್ಕದಲ್ಲಿ ಅನಾಥವಾಗಿ ಬಿದ್ದುಕೊಂಡಿದ್ದ ಹುರಿಮಂಚದ ಮೇಲೆ ಕುಳಿತುಕೊಂಡ. ಹುರಿ ಮಂಚದ ಹಗ್ಗಗಳು ಅಲ್ಲಲ್ಲಿ ಮುರಿದಿದ್ದವು. ಆದರೂ ಕಷ್ಟದಲ್ಲಿ ಕುಳಿತಿರಬಹುದು. ಅಂಗೈಗಳಲ್ಲಿ ಮುಖ ಒತ್ತಿ ಕುಳಿತುಕೊಂಡ. ಸೇಡಿನ, ಸಿಟ್ಟಿನ ಉರಿಯಲ್ಲಿ ಆತ ಸ್ಥಳಕಾಲಗಳನ್ನೂ ಮರೆತು ಬಿಟ್ಟ.

ಗೊರಸಿನ ಸಪ್ಪಳ ಕೇಳಿಸಿದ್ದು ಥಟ್ಟನೆಯಾಗಿತ್ತು. ಮೊದಲು ಆತ ಅದನ್ನು ಗಮನಿಸಲಿಲ್ಲ. ಆದರೆ, ತಾಳಬದ್ಧವಾದ ಗೊರಸಿನ ಸಪ್ಪಳಗಳು ಹತ್ತಿರ, ಹತ್ತಿರಕ್ಕೇ ಬರುತ್ತಿತ್ತು. ಯಾವುದೋ ದಿವ್ಯ ಸಾನ್ನಿಧ್ಯ ಆತನ ಅರಿವಿಗೆ ಬಂತು. ದಿವ್ಯವಾದ ಪ್ರಖರ ಕಾಂತಿಯಲ್ಲಿ ಆ ರೂಪವನ್ನು ಆತ ಗುರುತಿಸಿದ. ಪಟ್ಟೆ ವಸ್ತ್ರ ಹೊದೆಸಲಾದ ಶ್ವೇತಾಶ್ವದ ಬೆನ್ನ ಮೇಲೆ ದಿವ್ಯ ಗುರು, ದಶಮಗುರು. ಆ ಕಣ್ಣುಗಳಲ್ಲಿ ಕರುಣೆಯ ತೇವ, ಹೆಗಲಲ್ಲಿ ಇಳಿಬಿದ್ದಿರುವ ಬಿಲ್ಲು. ಬತ್ತಳಿಕೆಯಲ್ಲಿ ಬಂಗಾರದ ಕಟ್ಟು ಹಾಕಲಾದ ಬಾಣಗಳು. ಕುಂಕುಮ ರಂಗಿನ ಪಗಡಿ. ಆಕರ್ಷಕವಾದ ಸುಂದರ ವದನ, ಹೆಗಲ ಮೇಲೆ ಬಂಗಾರ ಬಣ್ಣದ ಗಿಡುಗ.

ಪುತ್ತರ್, ನಿನ್ನ ವ್ಯಥೆ ನನಗೆ ಗೊತ್ತಾಗುತ್ತದೆ.

ಖಲ್ಸ ಎದುರಿಸಬೇಕಾಗಿ ಬಂದ ಅಗ್ನಿಪರೀಕ್ಷೆಗಳೆಲ್ಲವೂ ದೇವರ ಇಚ್ಛೆಯೆಂದೇ ತಿಳಿ. ಒಂದೊಂದು ಅಗ್ನಿಪರೀಕ್ಷೆಯಿಂದಲೂ ಮತ್ತಷ್ಟು ತೇಜಸ್ವಿಗಳಾಗಿ ಸಿಕ್ಖರು ಪುನರುತ್ಥಾನ ಹೊಂದುತ್ತಾರೆ.

ಶ್ರೀ ವಾಹ್ ಗುರುಜಿ ಕಾ ಖಲ್ಸಾ...

ಶ್ರೀ ವಾಹ್ ಗುರುಜಿ ಕಾ ಫತಾ....

ಉಪಕಾರ್ ಸಿಂಗ್ ಯಾವುದೊ ಕನಸಿನಲ್ಲೆಂಬಂತೆ ಎದ್ದ. ಗಲ್ಲಿಯ ತೀಕ್ಷ್ಣತರ ಗಬ್ಬುನಾತವನ್ನು ಲೆಕ್ಕಿಸದೆ ನಡೆಯತೊಡಗಿದ. ಮುಚ್ಚಿದ್ದ ಬಾಗಿಲು ಒಳಗಿನಿಂದ ಅಗುಳಿ ಹಾಕಿಕೊಂಡಿತ್ತು. ಆತ ಬಾಗಿಲು ತಟ್ಟಿದ. ಬಹಳ ಹೊತ್ತಿನ ಬಳಿಕ ಬಾಗಿಲು ತೆರೆಯಲ್ಪಟ್ಟಿತ್ತು. ತೆರೆದದ್ದು, ಪೈಜಾಮ ಮತ್ತು ಬನಿಯನ್ ತೊಟ್ಟಿದ್ದ ಒಬ್ಬಾತ. ತಲೆ ಪೂರ್ತಿ ಹಣ್ಣಾಗಿದ್ದರೂ ಗಟ್ಟಿಮುಟ್ಟಾದ ಮೈಕಟ್ಟು ಆತನದು. ಮೊದಲು ಆತ ಬಾಗಿಲಿಗೆ ಅಡ್ಡವಾಗಿಯೇ ನಿಂತುಕೊಂಡಿದ್ದ. ಬಳಿಕ ದಾರಿಬಿಟ್ಟುಕೊಟ್ಟು ಉಪಕಾರ್‌ನನ್ನು ಒಳಗಡೆಗೆ ಕರೆದು ಕುಳಿತುಕೊಳ್ಳಲು ಹೇಳಿದ.

ಮೌನ ಅಸಹನೀಯವಾದಾಗ ಉಪಕಾರ್ ಸಿಂಗ್ ಅಳುಕುತ್ತಲೇ ಹೇಳತೊಡಗಿದ:

ನಾನು ಬಂದದ್ದು.....

ಕಳೆದ ಕೆಲವು ತಾಸುಗಳಲ್ಲಿ ನೀವು ಗಲ್ಲಿಯಲ್ಲಿ ಓಡಾಡುತ್ತಿರುವುದನ್ನು ನಾನು ಗಮನಿಸುತ್ತಲೇ ಇದ್ದೆ. ಹೇಳಿ, ನೀವು ಯಾಕೆ ಇಲ್ಲಿಗೆ ಬಂದದ್ದು?

ಥಟ್ಟನೆ, ಶ್ವೇತಾಶ್ವದ ಮೇಲೆ ಕುಳಿತು ತನ್ನನ್ನು ಮುನ್ನಡೆಸಿದ್ದ ದಶಮ ಗುರುವನ್ನು ಜ್ಞಾಪಿಸಿಕೊಂಡನು. ಆತ ಎದ್ದು ಬಾಗಿಲು ತೆರೆದು ಹೊರಗೆ ದಿಟ್ಟಿಸಿದ. ಬೀದಿಯಲ್ಲಿ ಮಬ್ಬು ಬೆಳಕಿನ ತುಣುಕುಗಳಷ್ಟೇ ಕಾಣಿಸಿದವು. ಶ್ವೇತಾಶ್ವವಾಗಲೀ ದಶಮಗುರುವಾಗಲೀ ಬಂಗಾರದ ಬಣ್ಣದ ಗಿಡುಗವಾಗಲೀ ಕಾಣಿಸಲಿಲ್ಲ.

ನಾನು ಇಲ್ಲಿಗೆ ಬಂದದ್ದು ಯಾಕೆಂದು ನನಗೇ ಗೊತ್ತಿಲ್ಲ. ಕ್ಷಮಿಸಿ, ನಾನು ಹೋಗ್ತೇನೆ.

ಉಪಕಾರ್ ಬಾಗಿಲಿನತ್ತ ಕಾಲು ಹಾಕಿದ.

ಆತನನ್ನು ತಡೆಯುತ್ತ ಆ ಗೃಹಸ್ಥ ಅಡಿಮುಡಿ ದಿಟ್ಟಿಸುತ್ತ ಹೇಳಿದ:

"ಬನ್ನಿ, ಹಾಲಿಲ್ಲದ ಚಾ ಅಥವಾ ಕಾಫಿ ಕುಡಿಯುವಿರಂತೆ. ತಿನ್ನಲಿಕ್ಕೆ ಏನೇನೂ ಇಲ್ಲ. ಒಂದು ತಿಂಗಳಿಗೆ ಸಾಕಾಗುವಷ್ಟು ಹಿಟ್ಟು ದಾಸ್ತಾನು ಮಾಡಿದ್ದೆ. ಆದರೆ ಅನಿರೀಕ್ಷಿತವಾಗಿ ಒಂದಷ್ಟು ಅತಿಥಿಗಳು ಬಂದು ಬಿಟ್ಟರು."

ಎಂದ ಗೃಹಸ್ಥ ಒಳಕೋಣೆಯ ಬಾಗಿಲು ತೆರೆದ. ಕಿಟಕಿಗಳೆಲ್ಲವೂ ಮುಚ್ಚಿಕೊಂಡಿದ್ದರಿಂದ ಒಳಗೆ ಬೆಳಕಿರಲಿಲ್ಲ. ಗೃಹಸ್ಥ ಲೈಟ್ ಹಾಕಿದ. ಅಚ್ಚರಿಯೊಂದಿಗೆ ಉಪಕಾರ್ ಗಮನಿಸಿದ: ಮಂಚದ ಮೇಲೆ, ಮೇಜಿನ ಮೇಲೆ, ನೆಲದಲ್ಲಿ–ಎಲ್ಲೆಡೆಯೂ ಬಹಳಷ್ಟು ಮಂದಿ ಸಿಕ್ಖರು! ಹೆಚ್ಚಿನವರೂ ಕಿರಿಯರೇ. ಹದಿನೇಳೊ ಹದಿನೆಂಟೋ ವಯಸ್ಸಿನವರು. ಉಪಕಾರ್ ಕೋಣೆಯಿಡೀ ಕಣ್ಣಾಡಿಸಿದ. ಸುಮಾರು ನಲ್ವತ್ತು ನಲ್ವತ್ತೈದು ಮಂದಿ ಇದ್ದಾರೆ.



ಯಾರನ್ನೂ ತುಳಿಯದ ಹಾಗೆ ಹೆಜ್ಜೆಗಳನ್ನು ಎಚ್ಚರದಿಂದಿರಿಸುತ್ತ ಅವರಿಬ್ಬರೂ ಅಡುಗೆ ಮನೆ ಹೊಕ್ಕರು. ಹತ್ತು ಹನ್ನೆರಡು ಮಂದಿ ಅಲ್ಲೂ ಇರುವರು.

ಗ್ಯಾಸ್ ಸ್ಟೌವ್ ಹಚ್ಚಿ ನೀರು ಕುದಿಯಲಿಕ್ಕಿರಿಸುವಾಗ ಆ ಗೃಹಸ್ಥ ತನ್ನಷ್ಟಕ್ಕೇ ಎಂಬಂತೆ ಹೇಳಿದ:

ನನ್ನಿಂದ ಇಷ್ಟೇ ಸಾಧ್ಯ. ಇನ್ನೂ ಎಷ್ಟೋ ಮಂದಿಯನ್ನು ಕಾಪಾಡಬೇಕೆಂದು ಅಂದುಕೊಂಡಿದ್ದೆ. ಆದರೆ ದುಷ್ಕರ್ಮಿಗಳು ಬಹಳ ಮಂದಿ ಇದ್ದಿದ್ದರು.

ಉಪಕಾರ್ ಸಿಂಗ್‌ನ ಕಂಠ ಬಿಗಿದುಕೊಂಡ ಹಾಗಾಯಿತು. ದಶಮ ಗುರುವಿನ ದಿವ್ಯ ಸಾನ್ನಿಧ್ಯ ತನ್ನನ್ನು ಈ ಮನೆಗೆ ನಡೆಸಿದ್ದೇಕೆ? ರಕ್ಷಿಸಲೂ ಶಿಕ್ಷಿಸಲೂ ಮೇಲ್ಗಡೆ ಒಬ್ಬಾತ ಇರುವನೆಂದು ಹೇಳಿದುದರ ತಿರುಳೇನು? ಆತ ಆ ಗೃಹಸ್ಥನನ್ನು ಅಪ್ಪಿಕೊಂಡ. ಆತನ ಹೆಗಲ ಮೇಲೆ ಮುಖ ಒತ್ತಿ ಬಿಕ್ಕಿ ಬಿಕ್ಕಿ ಅತ್ತುಬಿಟ್ಟ.

ಒಲೆಯ ಮೇಲಿನ ನೀರು ಕೊತಕೊತನೆ ಕುದಿಯಿತು. ಹಸಿವೆಯಿಂದ ಬಸವಳಿದು ಬಿದ್ದುಕೊಂಡಿದ್ದ ಮಗು ಉಪಕಾರ್‌ನ ನೆನಪಿಗೆ ಬಂದದ್ದು ಥಟ್ಟನೆಯಾಗಿತ್ತು. ಸದ್ಯಕ್ಕಂತೂ ಇತರ ಮನೆಗಳಲ್ಲೂ ಒಲೆ ಹಚ್ಚುವ ಸಾಧ್ಯತೆ ಇದ್ದಂತಿಲ್ಲ. ವೆರಾಂಡದಲ್ಲಿರುವ ಸೈಕಲ್ ಆತನ ಕಣ್ಣಿಗೆ ಬಿದ್ದದ್ದೂ ಆಗಲೇ.

ಹೊರ ಹೊರಡುತ್ತ ಉಪಕಾರ್ ಹೇಳಿದ: ತಾನು ವಾಪಾಸ್ ಬರುತ್ತೇನೆ. ಹಿಟ್ಟು, ಬ್ರೆಡ್, ತರಕಾರಿ ವಗೈರೆಗಳೊಂದಿಗೇ ನಾನು ಕೂಡಲೆ ವಾಪಾಸ್ ಬರುತ್ತೇನೆ.

ಸಾಲಾಗಿ ಮಲಗಿಸಲಾದ ಮೃತ ದೇಹಗಳಿಗೆ ತಾಗದ ಹಾಗೆ, ಹೆಪ್ಪುಗಟ್ಟಿದ್ದ ರಕ್ತದಲ್ಲಿ ಹರಿದಾಡುತ್ತಿರುವ ಇರುವೆಗಳನ್ನು ಗಮನಿಸದೆ ಆತ ಗಲ್ಲಿಗುಂಟ ಸೈಕಲ್ ಮೇಲೆ ದೌಡಾಯಿಸಿದ.

* * *

## ಅಧ್ಯಾಯ ೨೨

## ಬಿಡುಗಡೆ

ಹರ್‌ಭಜನ್ ಸಿಂಗ್ ರೂಢಿಗಿಂತ ಮುಂಚಿತವಾಗಿ ಎಚ್ಚರಗೊಂಡ. ಸ್ಲಿಂಗ್‌ನಲ್ಲಿರಿಸಿದ್ದ ಕೈಯ ನೋವು ತುಸು ತಗ್ಗಿದೆ. ತಲೆಯ ಬಿಗಿತವೂ ಕಡಿಮೆಯಾಗಿದೆ. ಆಸ್ಪತ್ರೆ ಸೇರಿ ಮೂರು ದಿನಗಳಷ್ಟೇ ಆಗಿದ್ದರೂ ಎಷ್ಟೋ ದಿನಗಳಾದಂತೆ ಅನ್ನಿಸಿತ್ತು ಆತಗೆ.

ಕೆಳಗೆ ಡರಿ ಹಾಸಿ ಮಲಗಿದ್ದಾಳೆ ಪ್ರೀತಂ. ಅವಳೀಗ ಒಳ್ಳೆಯ ನಿದ್ದೆಯಲ್ಲಿದ್ದಾಳೆ. ಕಳೆದ ಎರಡು ಮೂರು ದಿನಗಳಲ್ಲಿ ಅವಳಿಗೆ ಸಾಕಷ್ಟು ನಿದ್ರಿಸಲು ಸಾಧ್ಯವಾಗಲಿಲ್ಲ. ಯಾವ ಹೊತ್ತಿನಲ್ಲೂ ಮನೆಯ ಬಗೆಗಿನ ಚಿಂತೆ ತಪ್ಪುತ್ತಿರಲೇ ಇಲ್ಲ. ಮಾತಾಜಿ ಮನೆಯಲ್ಲಿದ್ದರೂ ದೈನಂದಿನ ಕಾರ್ಯಗಳ ನಿರ್ವಹಣೆಯೆಲ್ಲ ಪ್ರೀತಂಳದ್ದೇ. ನನ್ನ ಅನುಪಸ್ಥಿತಿಯಲ್ಲಿ ಮನೆಯ ಕಾರ್ಯಗಳಲ್ಲಿ ಕುಂದು ಕೊರತೆಗಳು ಸಂಭವಿಸಿಯಾವು. ಸತ್‌ವೀರ್ ಮತ್ತು ಕರ್ತಾರ್ ಈಗಲೂ ಹುಡುಗಾಟಿಕೆಯ ಮಕ್ಕಳಷ್ಟೇ. ಪ್ರೀತಂ ಯಾವಾಗಲೂ ಹೇಳುತ್ತಾಳೆ ಅವರನ್ನು ಮನೆಯ ಪ್ರಾಯಕ್ಕೆ ಬಂದ ಇಬ್ಬರು ಮಕ್ಕಳಾಗಿ ಮಾತ್ರವೇ ಪರಿಗಣಿಸಿದರೆ ಸಾಕು. ಮಾತಾಜಿಯೂ ಅವಳನ್ನೇ ಬೆಂಬಲಿಸುತ್ತಾರೆ. ಅವರು, ಸುನೀಂದರ್ ಮತ್ತು ಮನೀಂದರ್‌ರಿಗಿಂತ ಹಿರಿಯ ಮಕ್ಕಳು. ಅಷ್ಟೇ.

ನೆರೆಹೊರೆಯ ಅನೇಕ ಮನೆಗಳಲ್ಲಿ ಕೊಳ್ಳೆ, ಕೊಲೆ ಮುಂತಾದುವುಗಳು ನಡೆದಿರುವುದನ್ನು ಮಾತಾಜಿ ನಿನ್ನೆ ರಾತ್ರಿ ಊಟ ತಂದಾಗ ಸೂಚಿಸಿದ್ದರು. ಮನೀಂದರ್ ಮತ್ತು ಸುನೀಂದರ್‌ರನ್ನು ರವಿ ಸಾಬ್ ಕರೆದೊಯ್ದಿರುವುದಾಗಿಯೂ ಹೇಳಿದ್ದರು. ಜನರ ಗುಂಪು ತಮ್ಮ ಮನೆ ಮುಂದೆ ಬಂದದ್ದನ್ನೂ ಹೊರಬಾಗಿಲಿಗೆ ದೊಡ್ಡ ಬೀಗ ನೀಡಿ ಮರಳಿ ಹೋದದ್ದನ್ನೂ ಸತ್‌ವೀರ್ ಮತ್ತು ಕರ್ತಾರ್ ಬಿಸಿರಕ್ತದ ಉಕ್ಕುವಿಕೆಯೊಂದಿಗೆ ಅವರನ್ನೆದುರಿಸಲು ಹೊರಟಿದ್ದನ್ನೂ ಮಾತಾಜಿ ಕಣ್ಣೀರನ್ನು ತಡೆಹಿಡಿಯುತ್ತ ವಿವರಿಸಿದ್ದರು.

"ಪುತ್ತರ್, ಬೇರೆಲ್ಲಾದರೂ ಹಿಂದೂ ಮತ್ತು ಸಿಕ್ಖರು ಹೋರಾಟಕ್ಕಿಳಿದರೂ ದೆಹಲಿಯಲ್ಲಿ ಅದು ಸಂಭವಿಸಲಾರದೆಂದೇ ನನ್ನ ಗ್ರಹಿಕೆಯಾಗಿತ್ತು. ಆದರೆ, ದೆಹಲಿಗೂ



ಇನ್ನು ತಡೆಯಲಾಗದು. ಸರಕಾರದ ಮೂಗಿನ ಕೆಳಗೇನೇ ಈಗ ಇದು ನಡೀತಾ ಇದೆ. ಬೆಂಕಿ ಕೆಂಡದ ಮೇಲೆಯೇ ಇರುವೆಗಳು ಹರಿದಾಡತೊಡಗಿವೆ.

ದುಪ್ಪಟದಿಂದ ಮುಖ ಮರೆ ಮಾಡಿಕೊಂಡು ಮಾತಾಜಿ ಬಿಕ್ಕಿ ಬಿಕ್ಕಿ ಅತ್ತುಬಿಟ್ಟರು. ಆಗಲೇ ಪ್ರೀತಂಗೆ ಅನುಮಾನ ಹುಟ್ಟಿಕೊಂಡದ್ದು: ಮೈದುನರಿಬ್ಬರೂ ಅಡುಗೆ ಮನೆಯಲ್ಲಿ ಬಂದಿಗಳಾಗಿಯೇ ಇದ್ದಾರಾ ಈಗಲೂ?

ಕಣ್ಣೀರಿನಡಿಯಲ್ಲೆ ಮಾತಾಜಿ ಮುಗುಳು ನಗಲು ಯತ್ನಿಸಿದರು. ಬಳಿಕ, ಅಕ್ಕರೆಯೊಂದಿಗೆ ತುಸು ಅಪರಾಧ ಪ್ರಜ್ಞೆಯೂ ಬೆರೆತ ಮಾತುಗಳು ಉದುರಿದುವು:

ಮನೀಂದರ್‌ಗೋ ಸುನೀಂದರ್‌ಗೊ ಆಗಿದ್ದರೆ ಕುಂಡೆಗೆರಡು ಬಾರಿಸಿ ಹದ್ದಿನಲ್ಲಿರಿಸಬಹುದಾಗಿತ್ತು. ಕೋಣಗಳ ಹಾಗೆ ಬೆಳೆದಿರುವ ಸತ್‌ವೀರ್‌ನನ್ನೂ ಕರ್ತಾರ್‌ನನ್ನೂ ಹಾಗೆ ಹೊಡೆಯಬಹುದೇನು? ಅದೂ ಸೊಸೆಯಂದಿರೆದುರು?

ಹರ್‌ಭಜನ್ ಆ ಮಾತು ಕೇಳಿ ಗಹಗಹಿಸಿ ನಕ್ಕ. ಆ ನಗೆಯಲ್ಲಿ ಪಾಲ್ಗೊಳ್ಳದಿರಲು ಮಾತಾಜಿ ಮತ್ತು ಪ್ರೀತಂಳಿಗೆ ಸಾಧ್ಯವಾಗಲಿಲ್ಲ. ಆದರೂ ಬದಲಾಗಿ ಅವರಿಬ್ಬರ ಕಣ್ಣುಗಳೂ ತುಂಬಿ ಹರಿಯುತ್ತಾ ಇದ್ದವು.

ನಗೆಯ ಮಧ್ಯದಲ್ಲೆ ಹರ್‌ಭಜನ್‌ಗೆ ಪ್ರಶ್ನಿಸದಿರಲು ಸಾಧ್ಯವಾಗಲಿಲ್ಲ.

ಪಂಜರದೊಳಗಿಂದ ಆ ಹೆಗ್ಗಣಗಳನ್ನು ಬಿಟ್ಟುಬಿಡಬಾರದಾಗಿತ್ತೆ, ಅಮ್ಮಾ?

ಮಾತಾಜಿ ಗಾಂಭೀರ್ಯ ತಾಳಿದರು:

ನೀನೇನೊ ಹಾಗೆಲ್ಲ ಹೇಳಬಹುದು. ಅದರೆ ಹುಚ್ಚು ಹಿಡಿದ ಜನರ ಗುಂಪು ಅವರನ್ನು ಹಿಸುಕಿ ಬಿಸುಡುತ್ತಿತ್ತು. ಇನ್ನು ನೀನೇ ಬಂದು ನಿನ್ನಿಷ್ಟದಂತೆ ಮಾಡುವಿಯಂತೆ.

ಡಾಕ್ಟರರನ್ನು ಕಂಡು, ಆದಷ್ಟು ಬೇಗ ಆಸ್ಪತ್ರೆಯಿಂದ ಬಿಡುಗಡೆ ಮಾಡಬೇಕೆಂದು ಕೇಳಿಕೊಂಡರು. ಸಂಭವಗಳ ಸಾಮಾನ್ಯ ಚಿತ್ರವೊಂದನ್ನು ಮುಂದಿಟ್ಟಾಗ ಡಾಕ್ಟರ್ ಎಂದರು: ಈ ಪರಿಸ್ಥಿತಿಯಲ್ಲಿ ಮನೆಯಿಂದ ಕೆಲವು ದಿನ ದೂರವಿರುವುದೇ ಒಳ್ಳೆಯದಲ್ಲವೆ?

ಡಾಕ್ಟರ್, ನನ್ನ ಆರೋಗ್ಯ ನನಗೊಂದು ಸಮಸ್ಯೆಯಲ್ಲ. ಆದರೆ, ನನ್ನ ಕುಟುಂಬದ ಎಲ್ಲರ ರಕ್ಷಣೆಯ ಹೊಣೆ ನನ್ನ ಮೇಲೆಯೇ ಇದೆ.

ಡಾಕ್ಟರ್ ಪುನಃ ಅನುಮಾನಿಸಿದರು. ಆಗ ಹರ್‌ಭಜನ್ ಅರ್ಧ ತಮಾಷೆ, ಅರ್ಧ ಸಹಜ ಎಂಬ ರೀತಿಯಲ್ಲಿ ಹೇಳಿದ:

ಸರಿ, ಡಾಕ್ಟರ್. ನೀವು ಒತ್ತಾಯಿಸುವುದೇ ಆದರೆ ನಾನು ಇಲ್ಲೇ ಇರ್ತೇನೆ. ಆದರೆ ಒಂದು ಶರತ್ತು ಇದೆ. ನನ್ನ ಇಬ್ಬರು ತಮ್ಮಂದಿರನ್ನೂ ಅವರ ಹೆಂಡಂದಿರನ್ನೂ ಇಲ್ಲಿ ಅಡ್ಮಿಟ್ ಮಾಡಲು ದಯೆದೋರಬೇಕು.

ಇದನ್ನು ಕೇಳಿ ಡಾಕ್ಟರ್ ನಕ್ಕರು. ಬಳಿಕ ಏನನ್ನೊ ಜ್ಞಾಪಿಸಿಕೊಂಡು ಹೇಳಿದರು:

ಮಿಸ್ಟರ್ ರವಿ ತಾನೆ ನಿಮ್ಮನ್ನು ಅಡ್ಮಿಟ್ ಮಾಡಿದ್ದು? ಅವರೊಡನೆ ನನ್ನನ್ನು

ಕಾಂಟಾಕ್ಟ್ ಮಾಡಲು ಹೇಳಿ. ನಾಳೆಯೇ ಡಿಸ್ಚಾರ್ಜ್ ಮಾಡುವ ಬಗ್ಗೆ ನಾನು ಗಮನ ಹರಿಸುತ್ತೇನೆ.

ನಿನ್ನೆ ಮೂರು ನಾಲ್ಕು ಬಾರಿ ಆಫೀಸ್‌ಗೆ ಫೋನ್ ಮಾಡಿದ್ದರೂ ಹರ್‌ಭಜನ್‌ಗೆ ರವಿಸಾಬ್ ಸಿಕ್ಕಲಿಲ್ಲ. ಹೊರಗೆಲ್ಲೊ ಗಡಿಬಿಡಿಯಲ್ಲಿರುವರೆಂದು ಉತ್ತರ ದೊರೆತಿತ್ತು. ಮನೆಗೆ ಫೋನಿಸಿದಾಗ ಫೋನ್ ಎತ್ತಿಕೊಂಡದ್ದು ಮನೀಂದರ್:

ಆಪ್ ಕೈಸಾ ಹೈ ಡ್ಯಾಡಿ?

ಬದ್ಮಾಶ್, ಪಂಜಾಬಿ ಭೂಲ್ ಗಯಾ ಕ್ಯಾ? ತಾನು ತಮಾಷೆಗೆಂದೇ ಗದರಲು ಮಗ ಭಾಷೆ ಬದಲಾಯಿಸಿದ್ದ:

ಕೈಸಾ ಹೈ ಡ್ಯಾಡಿ.

ಸಬ್ ಕುಶ್ ಮಂಗಲ್ ಹೈ ಬೇಟಾ, ತಾನು ಶುದ್ಧ ಹಿಂದಿಯಲ್ಲೆ ಪ್ರಶ್ನಿಸಿದ್ದೆ: ಸುನೀಂದರ್ ಚೆನ್ನಾಗಿದ್ದಾನ?

ಚೆನ್ನಾಗಿದ್ದಾನೆ ಡ್ಯಾಡಿ. ಇನ್ನೊಂದು ವಿಷಯ ಡ್ಯಾಡಿ, ನನ್ನ ಸ್ವರ ಹುಡ್ಗನದ್ದೊ, ಹುಡ್ಗಿಯದ್ದೊ?

ಎರಡರ ನಡುವೆಯೇ ಇರುವಂತೆ ಭಾಸವಾಗಿತ್ತು. ಕಿಶೋರತನದ ಮೃದುತ್ವ ಮಾಯವಾಗಿದ್ದರೂ ಬಿರುಸುತನ ಇನ್ನೂ ಬಂದಂತಿಲ್ಲ.

ಯಾಕೆ ಈ ಪ್ರಶ್ನೆ?

ದರ್ಶನ್ ದೀದಿ ಹೇಳ್ತಾರೆ, ಸಲ್ವಾರ್ ಕಮೀಜ್ ತೊಟ್ಟದ್ದರಿಂದ ನಾವಿಬ್ರೂ ಚಂದದ ಹುಡ್ಗಿಯರಾಗಿದ್ದೀವಿ ಅಂತ.

ಯಾರು ದರ್ಶನ್ ದೀದಿ?

ದರ್ಶನ್ ದೀದಿ ಗೊತ್ತಿಲ್ವೆ?

ಯಾರೆಂದು ಥಟ್ಟನೆ ಹೊಳೆದಿತ್ತು. ಹಾಗಾದ್ರೆ ರವಿ ಸಾಬ್ ತಮ್ಮ ವಸತಿಯನ್ನು ನಿರಾಶ್ರಿತರ ಶಿಬಿರವನ್ನಾಗಿ ಮಾರ್ಪಡಿಸಿದ್ದಾರೆ.

ಸಾಬ್ ಬಂದ ಬಳಿಕ ಆಸ್ಪತ್ರೆಗೆ ಫೋನ್ ಮಾಡಲು ಹೇಳಿ ಫೋನ್ ಕೆಳಗಿರಿಸಿದ್ದೆ.

ಆ ಬಳಿಕ ರವಿಸಾಬ್ ಡಾಕ್ಟರರನ್ನು ಸಂಪರ್ಕಿಸಿದ್ದರೋ ಗೊತ್ತಿಲ್ಲ. ಇವತ್ತಾದರೂ ಪೂರ್ವಾಹ್ನವೆ ಡಿಸ್ಚಾರ್ಜ್ ಆಗಿ ಮನೆಗೆ ಸೇರಿದರೆ ಸಾಕಿತ್ತು. ಗುಂಪನ್ನೆದುರಿಸಲು, ಒಂದು ಕಾಲಿಲ್ಲದ, ಒಂದು ಕೈ ಸ್ಲಿಂಗ್‌ನಲ್ಲಿ ಬಿದ್ದುಕೊಂಡಿರುವ, ಗಾಯಗಳನ್ನೂ ಹೊಂದಿರುವ ತನಗೆ ಸಾಧ್ಯವಾಗದು. ಆದರೆ ಗುಂಪಿನ ಪ್ರತಿಯೊಬ್ಬ ಸದಸ್ಯನೂ ನಮ್ಮ ಕಾಲನಿಯವನೇ ಆಗಿದ್ದಲ್ಲಿ ನನಗೆ ಪರಿಚಿತನೇ ಆಗಿರುತ್ತಾನೆ. ಎ.ಐ.ಐ.ಎಂ.ಎಸ್.ನ ಎದುರು ತನ್ನ ಮೇಲೆ ನಡೆದಿದ್ದ ಹಲ್ಲೆ ಮಾತ್ರ ಬೇರೆಯೇ ಥರದ್ದಾಗಿತ್ತು. ಅದರಲ್ಲಿದ್ದ ಯಾರೊಬ್ಬನೂ ತನ್ನ ಪರಿಚಯದವನಾಗಿರಲಿಲ್ಲ. ನಿಮಿಷದ ಮುಳ್ಳಿನ ಮೊನೆಯಿಂದ



ದಿಡೀರನೆ ಹುಟ್ಟಿಕೊಂಡ ಆ ಹಲ್ಲೆಯನ್ನು ತಾನು ಅರ್ಥಮಾಡಿಕೊಳ್ಳಬಲ್ಲೆ. ದಾಡಿ, ಪಗಡಿಗಳಿರುವ ಯಾರನ್ನೂ ಕ್ಷಮಿಸಲು ಆ ಕ್ಷಣಕಾಲದ ಕ್ಷುದ್ರತೆಗೆ ಸಾಧ್ಯವಾಗುತ್ತಿರಲಿಲ್ಲ. ಆದರೆ ನಿನ್ನೆ ಮತ್ತು ಮೊನ್ನೆ ನಡೆಸಲಾದ ಕೊಳ್ಳೆ, ಕೊಲೆ, ಕೊಳ್ಳಿಯಿಕ್ಕುವಿಕೆಗಳಿಗೆ ಯಾವುದೇ ಸಮರ್ಥನೆ ಇಲ್ಲ. ಆ ಗುಂಪುಗಳೆಲ್ಲ ಯಾವುದೊ ದುಷ್ಟಶಕ್ತಿಗಳ ನಿರ್ದೇಶನಕ್ಕೊಳಗಾಗಿಯೇ ಆ ರೀತಿ ವರ್ತಿಸಿದೆ. ಸಬರ್ಬ್‌ನಲ್ಲಿರುವ ಕೊಳೆಗೇರಿಗಳಿಂದ ಬಾಡಿಗೆಗೆ ಪಡೆಯಲಾದ ಜನರ ಗುಂಪು, ಟ್ರಕ್‌ಗಳಲ್ಲೂ ಬಸ್‌ಗಳಲ್ಲೂ ನಿರ್ದಿಷ್ಟ ಕಾಲನಿಗಳಿಗೆ ಸಾಗಿಸಲ್ಪಟ್ಟು, ಅಲ್ಲಿ ಏನು ಮಾಡಲಿಕ್ಕೂ ಪರವಾನಗಿ ಹೊಂದಿರುವ, ಕಟ್ಟು ಕಳಚಲ್ಪಟ್ಟದ್ದಾಗಿತ್ತು.

ಬಲು ಚಿಕ್ಕದ್ದು ಅವರಿಗೆ ನೀಡಲಾದ ನಿರ್ದೇಶನ–ಸಿಕ್ಖರಿಗೊಂದು ಪಾಠ ಕಲಿಸಿ.

ವಿಭಜನೆಯ ಬಳಿಕ ಕಠಿಣ ದುಡಿಮೆಯಿಂದಲೂ ಅಸಾಮಾನ್ಯವಾದ ಕರ್ಮ–ಕುಶಲತೆಯಿಂದಲೂ ಬಹಳಷ್ಟು ಸಾಧಿಸಿದವರು ಸಿಕ್ಖರು. ಸ್ವಾಭಿಮಾನಿಗಳಾದ ಅವರು ಯಾರದ್ದೇ ಅಡಿಯಾಳಾಗಲು ಇಷ್ಟಪಡಲಿಲ್ಲ. ಯಾವ ಕೆಲಸವನ್ನೇ ಆದರೂ ಚೆನ್ನಾಗಿ ಮಾಡಿ ಮುಗಿಸಲು ಸಿಕ್ಖರು ಮುತುವರ್ಜಿ ವಹಿಸಿದ್ದರು. ಮಣ್ಣಿನಿಂದ ಹೊನ್ನು ಬೆಳೆಸಲು ಅವರಿಗೆ ಸಾಧ್ಯವಾಗಿದೆ. ಅವರ ಬೆರಳ ಸ್ಪರ್ಶಕ್ಕೆ ಯಂತ್ರಗಳು ಪಳಗಿದ್ದವು. ಚಿಕ್ಕದ್ದೂ ದೊಡ್ಡದ್ದೂ ಆದ ಉದ್ದಿಮೆಗಳನ್ನು ಅವರು ಸ್ವಂತ ಮಾಡಿಕೊಂಡಿದ್ದರು. ಧಾಬಾಗಳಿಂದ ಮೊದಲ್ಗೊಂಡು ಪಂಚತಾರಾ ಹೊಟೇಲುಗಳ ತನಕ, ಸೈಕಲ್ ರಿಪೇರಿ ಶಾಪ್‌ಗಳಿಂದ ತೊಡಗಿ ಆಟೋಮೊಬೈಲ್ ಸ್ಪೇರ್ ಪಾರ್ಟ್‌ಗಳನ್ನು ನಿರ್ಮಿಸುವ ಫ್ಯಾಕ್ಟರಿಗಳ ತನಕ. ತಂಪು ಮಾಡಲಾದ ನೀರು ಮತ್ತು ಲಸ್ಸಿಗಳನ್ನು ಮಾರುವ ತಳ್ಳುಗಾಡಿಗಳಿಂದ ಮೊದಲ್ಗೊಂಡು ಭಟ್ಟಿ ಇಳಿಸುವ ಕಾರ್ಖಾನೆ ಮತ್ತು ಸಾಫ್ಟ್ ಡ್ರಿಂಕ್ಸ್ ಫ್ಯಾಕ್ಟರಿಗಳ ತನಕವೂ ಅವರ ಅಧೀನದಲ್ಲಿವೆ.

ಆರ್ಮಿಯಲ್ಲೂ ನೇವಿಯಲ್ಲೂ ಏರ್‌ಫೋರ್ಸಿನಲ್ಲೂ ತೀರಾ ಕೆಳಸ್ತರದಿಂದ ಮೊದಲ್ಗೊಂಡು ಎಲ್ಲಾ ಸ್ತರಗಳಲ್ಲೂ ಅವರು ರಾರಾಜಿಸಿದ್ದರು. ಅವರು ಹೆಸರಾಂತ ಆರ್ಥಿಕ ತಜ್ಞರೂ ಆಡಳಿತಗಾರರೂ ಬ್ಯಾಂಕ್ ಮೆನೇಜರ್‌ಗಳೂ ಆಗಿರುವರು. ಅವರು ಸಾರ್ವಜನಿಕ ಕ್ಷೇತ್ರದ ಸಂಸ್ಥೆಗಳಲ್ಲೂ ಖಾಸಗಿ ಕ್ಷೇತ್ರದ ಸಂಸ್ಥೆಗಳಲ್ಲೂ ಎಕ್ಸಿಕ್ಯುಟಿವ್ ಆದರು. ಕಠಿಣ ದುಡಿಮೆ ಮತ್ತು ಸಮರ್ಪಣ ಮನೋಭಾವಗಳಾಗಿದ್ದವು ಅವರ ಆಸ್ತಿ–ಮಾರ್ಕೆಟಿಂಗ್‌ನಲ್ಲಿ, ಮ್ಯಾನ್ಯುಫ್ಯಾಕ್ಚರಿಂಗ್‌ನಲ್ಲಿ, ಮೆನೇಜ್‌ಮೆಂಟ್‌ನಲ್ಲಿ, ಜಾಹೀರಾತಿನಲ್ಲಿ. ಪಂಜಾಬಿಗಷ್ಟೇ ಅಲ್ಲ ಸಮಗ್ರ ಭಾರತಕ್ಕೇ ಸಾಕಾಗುವಷ್ಟು ಗೋಧಿ ಮತ್ತು ಅಕ್ಕಿಯನ್ನು ಅವರು ಬೆಳೆಸಿದ್ದರು.

ಅಪಕ್ವ ಮನಸ್ಸಿನ ಯುವಕರು ಕೆಲವರು ಸಂದರ್ಭ ಸಾಧಕರಾದ ರಾಜಕಾರಣಿಗಳ ದುಷ್ಪ್ರೇರಣೆಯಿಂದಾಗಿ, ಸಾಹಸ ಕಾರ್ಯಗಳಲ್ಲಿ ಮಗ್ನರಾದರು.

ಆ ಹುಚ್ಚು ಸಾಹಸಿಕತೆಯನ್ನು ಮೊಳಕೆಯಲ್ಲೇ ಚಿವುಟಿ ಹಾಕಲಿಕ್ಕಾಗಲೀ ಬಲಾಢ್ಯವಾದ ಆ ಯುವ ಚೈತನ್ಯವನ್ನು ಅರ್ಥವತ್ತಾದ ಕ್ಷೇತ್ರಗಳತ್ತ ಹಬ್ಬಿಸಲಿಕ್ಕಾಗಲೀ ಯಾರೂ ಮುಂದಾಗಲಿಲ್ಲ. ಭಿಂದ್ರನ್‌ವಾಲಾರಂಥವರ ಆಜ್ಞಾನುವರ್ತಿಗಳಾಗಲು ವಿಧಿಸಲ್ಪಟ್ಟಿದ್ದವು. ಆ ಯುವ ಶಕ್ತಿಗಳು–ಸ್ವತಂತ್ರ ಭಾರತದಲ್ಲಿ ಕಾಲಕಾಲಗಳಲ್ಲಿ ಮೂಡಿಬಂದಿದ್ದ ಆದರ್ಶಗಳ ಮಿಥ್ಯಾಜ್ವಾಲೆಗಳತ್ತ ಆವಾಹಿಸಲ್ಪಟ್ಟ ವ್ಯರ್ಥತೆಗಳ ಎಳೆಯ ರೆಕ್ಕೆಗಳು. ಕಳೆದ ಎರಡು ಮೂರು ದಶಕಗಳಲ್ಲಿ ಈ ದೇಶ ಏನೆಲ್ಲ ಕಂಡಿಲ್ಲ? ಚೀನಾದಿಂದಲೂ ರಶ್ಯಾದಿಂದಲೂ ಪ್ರಚೋದನೆ ಹೊಂದಿದ್ದ ಕಮ್ಯೂನಿಸಂನ ವಿವಿಧ ಆವೃತ್ತಿಗಳಿಂದ ಮೊದಲ್ಗೊಂಡು ನಕ್ಸಲ್‌ಬಾರಿಯ ಅಡ್ವೆಂಚರಿಸಂ ತನಕವೂ ನೋಡಿಯಾಗಿದೆ. ಪಂಜಾಬಿನ ಭಯೋತ್ಪಾದಕರಾದರೂ ಕಾಲಚಕ್ರದ ಉರುಳಾಟದಲ್ಲಿ ಸಿಡಿದ ಕೆಲವು ಬೆಂಕಿ ಕಿಡಿಗಳಷ್ಟೇ. ಖಾಲಿಸ್ಥಾನ್ ರೂಪುಗೊಂಡರು ಕೂಡ ಅದೊಂದು ಹಗಲ್ಗನಸಿನ ಹಾಗೆ ನಿರ್ನಾಮವಾಗುತ್ತದೆ. ರಾಜಕೀಯವಾಗಿಯಾಗಲೀ ಭೂವಿಜ್ಞಾನದ ನೆಲೆಯಲ್ಲಾಗಲೀ ಖಾಲಿಸ್ಥಾನ್ ಉಳಿಯಲಾರದು.

ಆತ ಭವಿಷ್ಯದ ಬಗ್ಗೆ ಆತಂಕಿತನಾದ. ಒಟ್ಟು ಜನ ಸಂಖ್ಯೆಯಲ್ಲಿ ಕೇವಲ ಎರಡು ಶತಾಂಶವಷ್ಟೇ ಭಾರತದಲ್ಲಿ ಸಿಕ್ಖರಿರುವರು. ಆದರೆ, ಆರ್ಮಿ ಆಫೀಸರ್‌ಗಳಲ್ಲಿ ಮೂವತ್ತು ಶತಾಂಶವೂ ಸಿಕ್ಖರೇ. ದೇಶದ ಪ್ರಧಾನಿಯನ್ನು ನಿಷ್ಕರುಣೆಯಿಂದ ಗುಂಡಿಟ್ಟು ಕೊಂದದ್ದು ಸಿಕ್ಖ್ ವಂಶದ ಅಳಿಸಲಾಗದ ಕಳಂಕವಾಗಿ ಎಂದೆಂದೂ ಮುಂದುವರಿಯುತ್ತದೆ. ಸಿಕ್ಖನ ವಿಶ್ವಾಸಾರ್ಹತೆ, ದೇಶಪ್ರೇಮ ಮುಂತಾದವುಗಳೆಲ್ಲವೂ ಪ್ರಶ್ನಿಸಲ್ಪಡುವಾಗ, ರಿಕ್ರೂಟ್‌ಮೆಂಟ್ ಸೆಂಟರ್‌ಗಳಿಂದ ಸಿಕ್ಖ್ ಯುವಕರು ತಲೆ ತಗ್ಗಿಸಿ ಹತಾಶರಾಗಿ ಮರಳಬೇಕಾಗಿ ಬರುವಾಗ, ಮಿಲಿಟರಿ ಮತ್ತು ಪಾರಾಮಿಲಿಟರಿ ಫೋರ್ಸ್‌ಗಳಲ್ಲಿರುವ ಸಿಕ್ಖ್ ಯುವಕರಿಗೆ ನ್ಯಾಯವಾಗಿ ದೊರೆಯಬೇಕಾದ ಬಡತಿ ದೊರೆಯದಾದಾಗ... ದೇವರೇ! ಏನೆಲ್ಲ ಸಂಭವಿಸಲಿಕ್ಕಿಲ್ಲ? ಸಿಕ್ಖರಲ್ಲಿ ಪಾರಿವಾಳಗಳ ಸಂಖ್ಯೆ ಅಡಿಗಡಿಗೆ ತಗ್ಗಬಹುದು: ಹದ್ದುಗಳು ಮೇಲಿಂದ ಮೇಲೆ ವೃದ್ಧಿಸಬಹುದು. ದ ಗ್ರೇಟ್ ಬ್ಯಾಕ್‌ಲಾಶ್. ಮೀನನ್ನು ಹಿಡಿಯಲು ಸಜ್ಜಾಗಿ ದಡದಲ್ಲಿ ಹೊಂಚು ಹಾಕುತ್ತಿರುವ ಮುಂದಾಳುಗಳು ಸಿಕ್ಖರ ಹಾಗೂ ಹಿಂದೂಗಳ ನಡುವೆ ಸಾಕಷ್ಟಿದ್ದಾರೆ. ೧೯೪೭ರ ದುರಂತ ಇನ್ನೆಷ್ಟು ಬಾರಿ ಮರುಕಳಿಸುತ್ತದೊ ಏನೊ ಎಂದು ಚಿಂತಿತನಾದನು ಹರ್‌ಭಜನ್.

ಇಷ್ಟರಲ್ಲೇ ಪ್ರೀತಂ ಎಚ್ಚರಗೊಂಡಿದ್ದಳು. ಆತನ ಮುಖಭಾವವನ್ನು ಅವಳು ಗಮನಿಸುತ್ತಾ ಇದ್ದಾಳೆ.. ಆತನ ಚಡಪಡಿಕೆ ಹೆಚ್ಚಾಯಿತು. ಬಿಚ್ಚಿಕೊಂಡಿದ್ದ ಕೃತಕ ಕಾಲನ್ನು ಸ್ವಂತ ಕಾಲಿಗೆ ಸಿಕ್ಕಿಸಿ ಬಕ್ಕಲ್‌ಗಳನ್ನು ಹಾಕಿದ. ಅಷ್ಟರಲ್ಲಿ ಡಾಕ್ಟರ್ ಬಂದರು: ಜತೆಯಲ್ಲೆ ಟ್ರೇಯಲ್ಲಿ ಮದ್ದು ಸಹಿತ ದಾದಿ ಕೂಡ. ಸ್ಲಿಂಗ್‌ನಲ್ಲಿರುವ ಕೈಯ ಊತದಲ್ಲಿ ಬೆರಳಮುಕಿ ಡಾಕ್ಟರ್ ಪ್ರಶ್ನಿಸಿದರು:



"ಇದು ಹೇಗಿದೆ?"

"ಕಡಿಮೆ ಇದೆ."

ಸ್ಟೆತೊಸ್ಕೋಪ್ ಹೆಗಲಲ್ಲಿರಿಸಿ ಕಿವಿಗೊಡುತ್ತಿರುವುದರ ನಡುವೆ ದಾದಿ ಥರ್ಮಾಮೀಟರ್ ನಾಲಗೆಯಡಿಗೆ ತುರುಕಿದಳು. ಚಾರ್ಟ್ ನೋಡಿ ಡಾಕ್ಟರ್ ತಮ್ಮಷ್ಟಕ್ಕೇ ಏನನ್ನೊ ಗೊಣಗಿದರು:

ರವಿ ಫೋನ್ ಮಾಡಿದ್ದರು. ಅವಸರವಿದ್ದರೆ ಈಗಲೇ ಡಿಸ್ಚಾರ್ಜ್ ಮಾಡ್ತೇನೆ.

ಪ್ರೀತಂಳ ಮುಖ ಅರಳಿತು. ಅವಳು ಡಾಕ್ಟರ್‌ಗೆ ಬಹುತ್ ಬಹುತ್ ಶುಕ್ರಿಯಾ ಹೇಳಿದಳು. ತೆಗೆದುಕೊಳ್ಳಬೇಕಾದ ಔಷಧಿಗಳ ವಿವರವನ್ನು ಅವಳು ದಾದಿಯಿಂದ ತಿಳಿದುಕೊಂಡಳು.

ನಾಲ್ಕು ದಿನಗಳ ಬಳಿಕ ಇನ್ನೊಂದು ಸಲ ಚೆಕಪ್ ಮಾಡಿಸಬೇಕೆಂದು ಡಾಕ್ಟರ್ ನಿರ್ದೇಶಿಸಿದರು.

ಡಾಕ್ಟರ್ ಮತ್ತು ನರ್ಸ್ ಹೊರಟು ಹೋಗುವಷ್ಟರಲ್ಲೆ ಪ್ರೀತಂ ಚಿಕ್ಕಪುಟ್ಟ ಸಾಮಾನುಗಳನ್ನು ಒಟ್ಟು ಮಾಡಿ ಚೀಲದಲ್ಲಿ ತುಂಬತೊಡಗಿದ್ದಳು.

ಮಾತಾಜಿ ಮಧ್ಯಾಹ್ನದ ಊಟದ ಸಹಿತ ಹೊರಡುವ ಮುನ್ನ ಮನೆಗೆ ತಲಪಬಹುದು.

ಡ್ರೆಸ್ ಬದಲಾಯಿಸುವಷ್ಟರಲ್ಲಿ ಡಿಸ್ಚಾರ್ಜ್ ಮಾಡಲಾದ ಕಾಗದ ಹಿಡಿದುಕೊಂಡು ನರ್ಸ್ ಬಂದಳು. ನರ್ಸ್‌ಗೆ ಹಾಗೂ ಅಲ್ಪಾವಧಿಯಲ್ಲೆ ಪರಿಚಿತರಾಗಿರುವ ರೋಗಿಗಳಿಗೆ ವಿದಾಯ ಹೇಳಿ ಅವರು ಹೊರಹೊರಟರು.

ಹೊರಗೆ ಶಿಶಿರದ ಮಬ್ಬು ಬಿಸಿಲು ನಗರಕ್ಕೆ ನಿರ್ಲಜ್ಜವಾದ ಒಂದು ಪ್ರಸನ್ನತೆ ಇದೆಯೆ? ಹೆಚ್ಚು ಕಡಿಮೆ ನಿರ್ಜನವಾಗಿಯೇ ಇದೆ ರಿಂಗ್ ರೋಡ್. ಟ್ಯಾಕ್ಸಿ ಅಥವಾ ಆಟೋರಿಕ್ಷಾ ಸಿಕ್ಕೀತೆಂಬ ನಿರೀಕ್ಷೆಯೊಂದಿಗೆ ಅವರು ಮಾರ್ಗದ ಬದಿಯಲ್ಲಿ ಕಾದು ನಿಂತರು.

ಟ್ಯಾಕ್ಸಿ ಸ್ಟ್ಯಾಂಡ್‌ನಲ್ಲಿ ಒಂದೇ ಒಂದು ಟ್ಯಾಕ್ಸಿಯೂ ಇಲ್ಲವೆಂಬುದನ್ನು ಹರ್‌ಭಜನ್ ಗಮನಿಸಿದ. ಆಟೋ ರಿಕ್ಷಾಗಳೂ ಓಡಾಡುತ್ತಾ ಇಲ್ಲ. ಹಾದುಹೋಗುವ ಒಂದೊ ಎರಡೋ ಟ್ಯಾಕ್ಸಿಗಳು ಕಾಣಿಸಿಕೊಂಡಿತಾದರೂ ಅವುಗಳಲ್ಲೆಲ್ಲ ಪ್ರಯಾಣಿಕರಿದ್ದರು. ಸಾಮಾನ್ಯ ರೀತಿಯಲ್ಲಾಗಿದ್ದರೆ ಮೂಲ್‌ಚಂದ್ ಹಾಸ್ಪಿಟಲ್‌ನಿಂದ ಅಮರ್ ಕಾಲನಿಗೆ ನಡೆಯತಕ್ಕ ದೂರವಷ್ಟೇ ಇದೆ. ಅದರೆ ಒಂದು ಕಾಲು ಕೃತಕವಿದ್ದು ಒಂದು ಕೈ ಸ್ಲಿಂಗ್‌ನಲ್ಲೂ ಇರುವುದೇ ಸದ್ಯದ ಸಮಸ್ಯೆಯಾಗಿದೆ.

ಪ್ರೀತಂಳ ಕೈಯಲ್ಲಿ ಕಂಬಳಿ, ಚಾದರಗಳೇ ಮುಂತಾದವುಗಳ ಒಂದು ಮೂಟೆ. ಅಲ್ಲದೆ ಔಷಧಿಗಳು, ಪಾತ್ರೆಗಳು, ಸ್ಟವ್ ವಗೈರೆಗಳೂ ಒಳಗೊಂಡ ಒಂದು ಪ್ಲಾಸ್ಟಿಕ್ ಬುಟ್ಟಿ ಕೂಡ ಇದೆ.

ಇಲ್ಲಿ ಹೀಗೆ ನಿಲ್ಲುವುದು ಸರಿಯಲ್ಲ. ಪ್ರೀತಂಳ ಮಾತಿನಲ್ಲಿ ಚಡಪಡಿಕೆ ಮತ್ತು ಭಯ ಬೆರೆತುಕೊಂಡಿವೆ. ಯಾವುದೇ ನಟ್ಟಿರುಳಿನಲ್ಲೂ ಕೂಡ ದೆಹಲಿಯ ದೂರದ ಗಲ್ಲಿಗಳಲ್ಲೂ ಸಹ ಅಪಾಯದ ಭಯ ತನ್ನನ್ನು ಸೋಂಕಿರಲಿಲ್ಲ. ದೆಹಲಿಯನ್ನು ದೆಹಲಿಯಾಗಿಸುವುದರಲ್ಲಿ ತನ್ನಂಥ ಅಸಂಖ್ಯ ಸರ್ದಾರ್‌ಗಳ ಬೆವರಿಗೂ ನೆತ್ತರಿಗೂ ಪಾಲಿದೆ. ಸರ್ದಾರ್‌ಗಳಿಲ್ಲದ ಚಂಡಿಗಢ್ ಅನ್ನು ತಾನು ಕಲ್ಪನೆಯಲ್ಲಿ ಕಾಣಬಲ್ಲೆ. ಆದರೆ ದೆಹಲಿಯೂ ಸಿಕ್ಖನೂ ಪರಸ್ಪರ ಬೇರ್ಪಡಿಸಲಾಗದಷ್ಟು ಬೆಸೆದುಕೊಂಡಿವೆ. ದೆಹಲಿ ಸಿಕ್ಖನಿಗೆ ಕೊಟ್ಟಿರುವುದಕ್ಕಿಂತಲೂ ಹೆಚ್ಚೇ ಸಿಕ್ಖನು ದೆಹಲಿಗೆ ಕೊಟ್ಟಿರುವನು. ಆದರೆ ಕಳೆದ ಎರಡು ಮೂರು ದಿನಗಳಲ್ಲಿ ಪರಿಸ್ಥಿತಿ ಸಂಪೂರ್ಣ ಬದಲಾಗಿ ಬಿಟ್ಟಿದೆ.

ಬೂದು ಬಣ್ಣದ ಆಕಾಶದಲ್ಲಿ ಅಡ್ಡಾಡುತ್ತಿರುವ ಕಾರ್ಮೋಡಗಳೆಡೆಯಿಂದ ಮಬ್ಬು ಬಿಸಿಲಿನ ತುಣುಕುಗಳು ತೂರಿ ಬರುತ್ತಾ ಇವೆ. ಕಾದು ನಿಲ್ಲುವಿಕೆಯ ಕಿರಿಕಿರಿ ಹೆಚ್ಚುತ್ತಲೇ ಇದೆ. ಅಡುಗೆ ಮನೆಯೊಳಗೆ ಸೆರೆಯಾಗಿರುವ ತಮ್ಮಂದಿರು. ಹೊರಗೆ ಕಾವಲು ಕುಳಿತಿರುವ ಅಮ್ಮ ಮತ್ತು ನಾದಿನಿಯರು. ಹುಚ್ಚೆದ್ದ ತೀವ್ರವಾದಿಗಳ ನಡುವೆ ಓರ್ವ ಹಿಂದೂವಿನ ಸಂರಕ್ಷಣೆಯಲ್ಲಿ ದಿನಗಳೆಯುತ್ತಿರುವ ಮನೀಂದರ್ ಮತ್ತು ಸುನೀಂದರ್. ಸಲ್ವಾರ್ ಕಮೀಜ್‌ಗಳನ್ನು ತೊಟ್ಟುಕೊಂಡದ್ದರಿಂದ ಅವರು ಸುಂದರಿಯಾಗಿರುವರು ಎಂಬ ಮನೀಂದರ್‌ನ ಅಮಾಯಕ ಹೇಳಿಕೆಯಲ್ಲಿರುವ ಮೊನಚಾದ ಮುಳ್ಳುಗಳು ಹೃದಯವನ್ನು ಚುಚ್ಚಿ ಸೀಳುತ್ತಿವೆ. ಚಿನ್ನಕ್ಕಾಗಿ, ಹಣಕ್ಕಾಗಿ, ಟಿ.ವಿ.ಗಾಗಿ, ಮಾರುತಿ ಕಾರ್‌ಗಳಿಗಾಗಿ ನವವಧುಗಳನ್ನು ಸೀಮೆ ಎಣ್ಣೆ ಸುರಿದು ಸುಡಲು ಹಿಂಜರಿಯದ ಲಾಲಾಗಳ ದೆಹಲಿಯಲ್ಲಿ ಸಿಕ್ಖ್ ತರುಣಿಗಳ ಜೀವಕ್ಕೆ ಅಪಾಯವಿಲ್ಲವೆಂಬ ಅರಿವು ಸಮಾಧಾನ ನೀಡುತ್ತಾ ಇಲ್ಲ. ಅವರಿಗೆ ಬೇಕಾಗಿರುವುದು ಪಗಡಿಯಿರುವ ತಲೆಗಳು: ಜಾಲಿಯೊಳಗೆ ತೀಡಿ ಕಟ್ಟಲಾದ ಗಡ್ಡವಿರುವ ಮುಖಗಳು. ಶತಮಾನಗಳ ಹಿಂದೆ ಮೊದಲ ಚಕ್ರವರ್ತಿಗಳು ಹೇಳಿದ್ದೂ, ಬೇರೇನಲ್ಲ–ಉಸಿರು ಬೇಕಾದರೆ ಇಸ್ಲಾಂ ಆಗಿರಿ. ಅಂಗಾಂಗಗಳನ್ನು ಬಲಿಕೊಟ್ಟು ತಲೆಯನ್ನುಳಿಸಿಕೊಂಡವರು ಎಷ್ಟೋ ಮಂದಿ ಇದ್ದರು. ಅದಕ್ಕೆ ಒಪ್ಪದಿದ್ದವರು ಸಿಕ್ಖ್ ಚರಿತ್ರೆಯಲ್ಲಿನ ಹೊಳೆ ಹೊಳೆಯುವ ದಾರಿ ದೀಪಗಳಾಗಿ ಬೆಳಕು ಚೆಲ್ಲುತ್ತಲೇ ಇದ್ದಾರೆ; ಗುರುತೇಜ್ ಬಹದ್ದೂರ್: ಗುರುಗೋವಿಂದ್ ಸಿಂಗರ ಕಿರಿವಯಸ್ಸಿನ ಪುತ್ರರು....

ಬಿಸಿಲಿಗೆ ಹೊಳಪು ಹೆಚ್ಚುತ್ತಲಿದೆಯೆ? ನೋವಿನ ಶಮನಕ್ಕೆಂದು ತೆಗೆದುಕೊಂಡ ಮಾತ್ರೆಗಳು ಕೆಲಸ ಮಾಡತೊಡಗಿರುವಂತೆ ಅನ್ನಿಸುತ್ತದೆ. ಕಣ್ಣರೆಪ್ಪೆಗಳು ಭಾರವೆನ್ನಿಸುತ್ತವೆ. ಸುತ್ತಲೂ ಬಿಸಿಲಿನ ಬದಲು ಹಳದಿ ಹೂ ಬಿಟ್ಟ ಸಾಸಿವೆ ಹೊಲಗಳೇ ಕಾಣಿಸುತ್ತಿವೆ. ಸಾಸಿವೆ ಹೊಲದ ಹಳದಿ ಹೂವುಗಳನ್ನು ಇಬ್ಬದಿಗೂ



ಸರಿಸುತ್ತ ಹತ್ತಿರ ಹತ್ತಿರಕ್ಕೆ ಬರುತ್ತಾ ಇದೆ. ಹಾಲಿನ ಬಣ್ಣದ ಶ್ವೇತಾಶ್ವ, ಬೆಳ್ಳಿಗೊಂಡೆಗಳನ್ನು ಅಳವಡಿಸಲಾದ ಕೆಂಪು ಛತ್ರಿಯ ಕೆಳಗೆ ಗುರು ಆಸೀನರಾಗಿದ್ದಾರೆ. ಅಗಲವಾದ ಎದೆ, ನೆಟ್ಟಗಿರುವ ಶಿರ, ಕಣ್ಣುಗಳಲ್ಲಿ ದೀಪ್ತವಾದ ಪ್ರಶಾಂತಿ, ಹೆಗಲ ಮೇಲೆ ರೆಕ್ಕೆ ಮಡಿಸಿ ಕುಳಿತಿರುವ ಸ್ವರ್ಣ ವರ್ಣದ ಗಿಡುಗ. ಗುರು ಕರೆದರು–ಬಾ.... ನಾನು ಮನೆಯಲ್ಲಿ ಇಳಿಸುತ್ತೇನೆ.

ಬಲಿಷ್ಠವಾದ ಆ ಕೈಗಳು ತನ್ನನ್ನು ಬಾಚಿ ಎತ್ತಿ ಕುದುರೆ ಮೇಲೆ ಕೂರಿಸಿದವು. ಚಿನ್ನದೆಳೆಗಳಿಂದ ಕಸೂತಿ ಮಾಡಲಾದ ರೇಶಿಮೆ ಹಾಸಿನ ಮೇಲೆ ಪ್ರೀತಂ ಸಹ ಕುಳಿತಳು. ಕ್ರಮ ಕ್ರಮವಾಗಿ ಕುದುರೆಯ ವೇಗ ಹೆಚ್ಚತೊಡಗಿತು.

ತನ್ನ ಮನಸ್ಸಿನಲ್ಲಿ ಆ ಪ್ರಶ್ನೆ ಮತ್ತೂ ಮತ್ತೂ ಏಳುತ್ತಲೇ ಇದೆ–ದೆಹಲಿ ಸಿಕ್ಖನಿಗೆ ಪರಕೀಯವಾಗುತ್ತಿದೆಯೆ?

ಗುರು ಈ ಪ್ರಶ್ನೆಯನ್ನು ಕೇಳಿಸಿಕೊಂಡರೆಂದು ತೋರುತ್ತದೆ. ಅವರ ಮುಖದಲ್ಲಿ ಪ್ರಸನ್ನವಾದ ತೇಜಸ್ಸು ವ್ಯಾಪಿಸಿತು.

ಪುತ್ತರ್, ನೀನು ಈ ಕಥೆ ಕೇಳಲಿಲ್ಲವೇನು? ಗುರುನಾನಕರು ಒಮ್ಮೆ ಮುಲ್ತಾನ್ ಸಂದರ್ಶಿಸಿದ್ದರು. ಗುರುನಾನಕರ ಸಂದರ್ಶನವನ್ನು ಇಷ್ಟಪಡದ ಫಕೀರ್‌ಗಳು ಗುರುವಿಗೆ ಒಂದು ಪಾತ್ರೆ ತುಂಬ ಹಾಲು ಕಳಿಸಿಕೊಟ್ಟರು. ಪಾತ್ರೆ ಅಂಚಿನ ತನಕವೂ ತುಂಬಿಕೊಂಡಿತ್ತು. ಒಂದು ಹನಿ ಹಾಲಿಗೂ ಅದರಲ್ಲಿ ಸ್ಥಳವಿರಲಿಲ್ಲ. ಆ ಮೂಲಕ ಫಕೀರ್‌ಗಳು ಮುಲ್ತಾನ್‌ನಲ್ಲಿ ಸಾಕಷ್ಟು ಫಕೀರ್‌ಗಳಿರುವರೆಂದೂ ಗುರುವಿಗೆ ಇಲ್ಲಿ ಸ್ಥಾನವಿಲ್ಲವೆಂದೂ ಬೇರೊಂದು ರೀತಿಯಲ್ಲಿ ತಿಳಿಸಿದ್ದಾಗಿತ್ತು. ಗುರುವಿಗೆ ಫಕೀರ್‌ಗಳ ಸಂದೇಶ ವೇದ್ಯವಾಯ್ತು. ಗುರು, ಪಾತ್ರೆಯ ಅಂಚಿನ ತನಕವೂ ತುಂಬಿಕೊಂಡಿದ್ದ ಹಾಲಿನಲ್ಲಿ ಒಂದು ಮಲ್ಲಿಗೆ ಹೂವನ್ನು ಹಾಕಿದರು. ಹಾಲು ತುಳುಕಲಿಲ್ಲ. ಆ ಪಾತ್ರೆಯನ್ನು ಗುರು ಫಕೀರ್‌ಗಳಿಗೇ ವಾಪಾಸ್ ಕಳಿಸಿಕೊಟ್ಟರು.

ಮಲ್ಲಿಗೆ ಹೂವು ಹಾಲಿಗೆ ಕೇಡು ಮಾಡಲಿಲ್ಲ. ಬದಲಾಗಿ ಅದರಲ್ಲಿದ್ದುಕೊಂಡು ಸುವಾಸನೆಯನ್ನುಂಟು ಮಾಡಿದ್ದಷ್ಟೇ, ಯಾರಿಗೂ ಯಾವ ಕೇಡೂ ಉಂಟು ಮಾಡದೆ ಆಧ್ಯಾತ್ಮಿಕತೆಯ ಸುವಾಸನೆ ಹರಡುತ್ತಾ ತನಗೂ ಮುಲ್ತಾನ್‌ನಲ್ಲಿ ಸ್ವಂತವಾದ ಒಂದು ಸ್ಥಾನ ಹೊಂದಲು ಹಕ್ಕಿದೆ ಎಂದೇ ಗುರು ಆ ಮೂಲಕ ಸಾರಿದ್ದರು.

ಪುತ್ತರ್, ನಿನಗೆ ಗೊತ್ತಾಗುತ್ತಿದೆಯೆ? ದೆಹಲಿಯಲ್ಲೂ ಹಿಂದೂಸ್ಥಾನದಲ್ಲೂ ಮಾತ್ರವಲ್ಲ, ಜಗತ್ತಿನೆಲ್ಲೆಡೆಯೂ ಸಿಕ್ಖನಿಗೆ ಸ್ಥಾನವಿದೆ. ಮುಲ್ತಾನ್‌ನ ಫಕೀರ್‌ಗಳು ನಾನಕ್ ದೇವನನ್ನು ಬರಮಾಡಿಕೊಂಡ ಹಾಗೆ ಈ ಜಗತ್ತೆಲ್ಲವೂ ಸಿಕ್ಖನನ್ನು ಆದರಿಸಲಿದೆ; ಸ್ವೀಕರಿಸಲಿದೆ. ಆ ದಿನ ಬೇಗನೆ ಬರಲಿದೆ.

ಕಣ್ಣು ಬಿಟ್ಟಾಗ ಕುದುರೆಯಾಗಲಿ, ಗುರುವಾಗಲೀ ಕಾಣಿಸಲಿಲ್ಲ. ಮಾತಾಜಿಯ

ಮಡಿಲಿನಲ್ಲಿ ಮಲಗಿಕೊಂಡಿದ್ದೆ ತಾನು. ಸುತ್ತಲೂ ಆತಂಕಗೊಂಡ ಪ್ರೀತಂ, ಸತ್‌ವೀರ್, ಕರ್ತಾರ್ ಮತ್ತು ಅವರಿಬ್ಬರ ಹೆಂಡಂದಿರು.

ಪ್ರೀತಂ ತುಟಿಗೆ ತಾಗಿಸಿದ ಲಸ್ಸಿಗೆ ಒಳ್ಳೆಯ ತಂಪು; ಒಳ್ಳೆಯ ಸಿಹಿ; ಒಳ್ಳೆಯ ಹುಳಿ.

* * *



## ಅಧ್ಯಾಯ ೨೩

# ಇಂದೂ ದೀದಿ

ಸ್ಟೇಶನ್ ಹೌಸ್ ಆಫೀಸರ್‌ರನ್ನು ಕಾಯುತ್ತ ಪೊಲೀಸ್ ಸ್ಟೇಶನ್ ವೆರಾಂಡದ ಸಿಮೆಂಟ್ ಕಂಬಕ್ಕೊರಗಿ ಅಂಗದ್ ಕುಳಿತುಕೊಂಡ. ಡ್ಯೂಟಿ ಆಫೀಸರ್‌ರ ಕುರ್ಚಿ ಕೂಡ ಬರಿದೇ. ಒಳಕೋಣೆಯಲ್ಲೆಲ್ಲೊ ಕಾನ್‌ಸ್ಟೇಬಲ್ ಒಬ್ಬ ಮೇಜಿನ ಮೇಲೆ ತಲೆಯಿಟ್ಟು ನಿದ್ರಿಸುತ್ತಿರುವನು.

ರವಿ ಸ್ಟೇಶನ್ ಅಂಗಳದ ಬೀದಿದೀಪಗಳ ಬೆಳಕು ತೊಂದರೆಕೊಡದ ನೆರಳಿನಲ್ಲಿ ಅತ್ತಿತ್ತ ನಡೆದಾಡುತ್ತಿರುವನು. ಅಶಾಂತಿ ಮತ್ತು ದಣಿವು ಆತನನ್ನು ಕಂಗೆಡಿಸಿ ಬಿಟ್ಟಿವೆ. ಕಳೆದ ಮೂರು ದಿನಗಳಲ್ಲಿ ಆತನಿಗೆ ದೊರೆತಿದ್ದ ವಿಶ್ರಾಂತಿ ಒಟ್ಟು ಎರಡೋ ಮೂರೋ ತಾಸುಗಳು ಮಾತ್ರ. ಹೀಗಿದ್ದೂ ಆತ ಎಲ್ಲಾದರೂ ಕುಳಿತಿರಲಿಕ್ಕಾಗಲೀ ಬೆನ್ನೊರಗಿಸಲಿಕ್ಕಾಗಲೀ ಒಪ್ಪಲಿಲ್ಲ.

ಅಂಗದ್ ಮೊದಲ ನಡುಕದಿಂದ ಸ್ವತಃ ಚೇತರಿಸಿಕೊಂಡ. ತನ್ನ ಎಲ್ಲವೂ ಆಗಿರುವ ದರ್ಶನ್. ಅವಳ ವಿಹ್ವಲವಾದ ಕಣ್ಣುಗಳು ಎಲ್ಲವನ್ನೂ ಹೇಳುತ್ತಾ ಇದ್ದವು. ಆ ಅಲ್ಪಕಾಲದ ಭೇಟಿಯಲ್ಲಿ ಇಬ್ಬರೂ ಮಾತುಗಳ ವಿನಿಮಯ ಮಾಡಲಿಲ್ಲ. ಆದರೆ ಮಾತುಗಳಿಗೆ ಆವಾಹಿಸಲು ಸಾಧ್ಯವಾಗದ ಭಾವನೆಗಳ ತೀರಾ ನವುರಾದ ಚಲನೆಗಳು ಕೂಡ ಅವರ ನಡುವೆ ರಹಸ್ಯವಾಗಿ ಉಳಿಯಲಿಲ್ಲ. ದರ್ಶನ್‌ಳ ಆರ್ದ್ರವಾದ ನೀಲ ಕಂಗಳ ಆಳದಲ್ಲಿ ತನಗೆ ಓದಲು ಸಾಧ್ಯವಾಗಿತ್ತು–ಅಂಗದ್, ನಾನೇನಾಗಿ ಬಿಟ್ಟೆ? ಆ ಕೊಳಕರು ಪರಚಿ–ಸೀಳಿರುವ ಈ ಹೂವೆಸಳನ್ನು ಇನ್ನು ನಾನು ಹೇಗೆ ನಿನಗೆಂದು ನಿವೇದಿಸಲಿ. ಈ ಮೈಯಿಡೀ ಹೊಲಸಾಗಿ ಬಿಟ್ಟಿದೆಯಲ್ಲ. ನನ್ನನ್ನು ಅಪಾರ್ಥ ಮಾಡದಿರು ಅಂಗದ್. ನಾನು ಏನನ್ನೂ ಬೇಡಿಕೊಳ್ಳುತ್ತಾ ಇಲ್ಲ–ಕಾಲ, ದೂರಗಳು ನಮ್ಮ ನಡುವೆ ಆಕಾಶ, ಸಾಗರಗಳನ್ನೇ ನಿರ್ಮಿಸಿದರೂ ನನ್ನ ಹೃದಯ ಯಾವತ್ತೂ ನಿನ್ನದ್ದೇ ಆಗಿರುತ್ತದೆ. ಅಂಗದ್, ನಿರ್ಮಲವಾದ ಈ ಹೃದಯದಲ್ಲಿ ಇನ್ನಾರಿಗೂ ಸ್ಥಾನವಿರದು. ನಾನು ಬೇರೇನನ್ನೂ ಆಶಿಸುತ್ತಿಲ್ಲ. ಅಂಗದ್. ನಿನ್ನ ಮನಸ್ಸಿನಲ್ಲಿ ನನಗಾಗಿ ಒಂದಿನಿತು ಸ್ಥಳವನ್ನು ಎಂದೆಂದಿಗೂ ಕಾದಿರಿಸು, ಅಂಗದ್.

ದರ್ಶನ್‌ಳನ್ನು ಎದೆಗವಚಿ ಅವಳ ಬೆನ್ನು ಸವರುತ್ತ ಹೇಳಬೇಕೆಂದೆನ್ನಿಸಿತು ತನಗೆ. ದರ್ಶನ್, ಇದೊಂದು ಕೆಟ್ಟ ಕನಸಷ್ಟೇ. ನೀನು ಹೆದರಬೇಡ. ಮುಂಜಾನೆಯ ಬೆಳಕು ಹರಿದು ಬರುವಷ್ಟರಲ್ಲಿ ದೂರವಾಗುವ ದುಃಸ್ವಪ್ನ ಇದು. ನಿನ್ನನ್ನು ನಾನು ಎಂತು ಕೈಬಿಟ್ಟೇನು? ನಮ್ಮ ಮಿಲನಕ್ಕೆ ಇದಾವುದೂ ತಡೆಯಾಗಲಾರದು. ನಮ್ಮ ಪ್ರೀತಿ–ಪವಿತ್ರ, ಉದಾತ್ತ. ನೀನು ನೆಮ್ಮದಿಯಾಗಿರು.

ಆದರೆ ಮಾತುಗಳು ಹೊರಬರಲಿಲ್ಲ. ತನ್ನ ಕಣ್ಣುಗಳಲ್ಲೇ ಅವಳು ಆ ಮಾತುಗಳಷ್ಟನ್ನೂ ಓದಿರಬಹುದು. ಅವಳ ಕಣ್ಣುಗಳ ವಿಹ್ವಲತೆಗಳ ನಡುವೆ ಯಾವುದೋ ಸಾಂತ್ವನದ ಎಸಳುಗಳು ಅರಳುತ್ತಿರುವುದನ್ನು ನಾನು ಕಂಡಿದ್ದೆನಲ್ಲ.

ನನ್ನ, ದರ್ಶನ್‌ಳ ಹಾಗೂ ತಮ್ಮ ಸಮಾಜದವರೆಲ್ಲರ ಹೃದಯ ವ್ಯಥೆಗೆ ಎಂದು ಬಂದೀತು ಕೊನೆ?

ಸಿಕ್ಖರೊಳಗಿನ ಯುವತ್ವ ಆಪಾದಿಸುವ ಹಾಗೆ ಸಿಕ್ಖರು ಯಾವತ್ತೂ ಹೊರಾಂಗಣದಲ್ಲೇ ಅಲೆಯಲು ಶಪಿಸಲ್ಪಟ್ಟಿರುವವರು. ವ್ಯವಸ್ಥೆಯ ಎಲ್ಲೆಗಳನ್ನು ಉಲ್ಲಂಘಿಸಲು ಅವರು ಯಾವತ್ತೂ ಆತುರಪಟ್ಟರು. ಎಲ್ಲಾ ಒಡಂಬಡಿಕೆಗಳಲ್ಲೂ ಅವರು ಮೋಸಗೊಳಿಸಲ್ಪಟ್ಟರು. ಎಲ್ಲಾ ಯುದ್ಧಗಳಲ್ಲೂ ಅವರು ಬಲಿಪಶುಗಳಾದರು. ಬ್ರಿಟಿಷರ ವಿರುದ್ಧ ಸಿಕ್ಖರು ಎರಡನೆಯ ಬಾರಿ ಯುದ್ಧಕ್ಕೆ ಸಜ್ಜಾದಾಗ ಡಾಲ್ ಹೌಸಿ ಘೋಷಿಸಿದ್ದ–ಸಿಕ್ಖರಿಗೆ ನಾನು ಒಂದು ಪಾಠ ಕಲಿಸುತ್ತೇನೆ. ಮುಂದೆ ನಡೆದ ಹಲವಾರು ಯುದ್ಧಗಳ ಬಳಿಕ ಸಿಕ್ಖ್ ಸೇನೆಯನ್ನು ಸೋಲಿಸಿ ಪಂಜಾಬನ್ನು ಪಂಜಾಬ್ ಕಮಿಶನ್‌ನ ಅಧೀನಗೊಳಿಸಲಾಯಿತು. ಆದರೂ ಸಿಕ್ಖರ ಶ್ರಮಶೀಲತೆ, ಆದರ್ಶಧೀರತೆ, ವಿಶ್ವಾಸಾರ್ಹತೆಗಳು ಬ್ರಿಟಿಷರನ್ನು ಒಲಿಸಿದವು. ಬ್ರಿಟಿಷ್ ಆಡಳಿತೆ ಪಂಜಾಬನ್ನು ಸ್ವಾರ್ಥ ಪೂರ್ಣವಾದ ಸಹನೆಯೊಂದಿಗೆ ವೀಕ್ಷಿಸಿತ್ತು. ಅಲ್ಲಿ ಅತ್ಯುತ್ತಮ ರಸ್ತೆಗಳನ್ನು ನಿರ್ಮಿಸಲಾಯಿತು. ಅತ್ಯುತ್ತಮ ನೀರಾವರಿ ಸೌಲಭ್ಯಗಳನ್ನೂ ಒದಗಿಸಲಾಯಿತು. ಅತ್ಯುತ್ತಮ ಅಡಳಿತ ವಿಧಾನವನ್ನು ಖಾತ್ರಿಗೊಳಿಸಿತ್ತು. ಇವೆಲ್ಲದರ ಹಿಂದೆಯೂ ಬ್ರಿಟಿಷರಿಗೆ ತಮ್ಮ ಕಾರ್ಯಲಾಭದ ದೂರ ದೃಷ್ಟಿ ಇದ್ದಿತ್ತು. ಬಲಾಢ್ಯರಾದ ಪಂಜಾಬಿಗಳು ಬ್ರಿಟಿಷ್ ಆಡಳಿತೆಯ ಉಕ್ಕು ಹಸ್ತಗಳಾಗಿದ್ದುವು. ೧೮೫೭ರ ದಂಗೆಯಲ್ಲಿ ಸಿಕ್ಖರು ಬ್ರಿಟಿಷರ ಪಕ್ಷ ವಹಿಸಿದ್ದರು. ಆಫ್‌ಘಾನಿಸ್ಥಾನ್, ಆಫ್ರಿಕ ಮತ್ತು ಚೀನಾಗಳಲ್ಲಿ ನಡೆದ ಚಿಕ್ಕ, ಪುಟ್ಟ ಯುದ್ಧಗಳಲ್ಲಿ ಸಿಕ್ಖರನ್ನು ಸಮರ್ಥವಾಗಿ ಬಳಸಲು ಬ್ರಿಟಿಷರು ಹಿಂಜರಿಯಲಿಲ್ಲ. ಒಂದನೆಯ ಮತ್ತು ಎರಡನೆಯ ಮಹಾಯುದ್ಧಗಳಲ್ಲಿ ಸಿಕ್ಖರು ಸಲ್ಲಿಸಿದ್ದ ಪಾಲನ್ನು ಬ್ರಿಟನ್ ಯಾವತ್ತೂ ಕೃತಜ್ಞತೆಯೊಂದಿಗೆ ನೆನೆಯುತ್ತಾ ಇದೆ.

ಹೀಗಿದ್ದೂ ಇಂಡಿಯಾ ಮೂರು ತುಂಡುಗಳಾಗಿ ವಿಭಜಿಸಲ್ಪಟ್ಟಾಗ ಸಿಕ್ಖರಿಗೆ ಅವರದ್ದೇ ಆದ ಒಂದಿಷ್ಟು ಸ್ಥಳ ಬಿಟ್ಟುಕೊಡಲು ಮೌಂಟ್‌ಬ್ಯಾಟನ್ ಒಪ್ಪಿಕೊಳ್ಳಲಿಲ್ಲ. ಮುಂದಿಡಲು ಮೌಂಟ್‌ಬ್ಯಾಟನ್‌ನ ಬಳಿ ಅಂಕಿಸಂಖ್ಯೆಗಳಿದ್ದುವು; ಸಿಕ್ಖರನ್ನೇ



ದಿಗ್‌ಭ್ರಮೆಗೊಳಿಸುವಂಥ ಅಂಕೆಸಂಖ್ಯೆಗಳು. ರಣ್‌ಜಿತ್ ಸಿಂಗ್ ರಾಜ್ಯಭಾರ ಮಾಡಿಕೊಂಡಿದ್ದ ಖಲ್ಸ ರಾಜ್ಯದಲ್ಲಿ ಒಂದು ಜಿಲ್ಲೆಯಲ್ಲು ಕೂಡ ಸಿಕ್ಖರಿಗೆ ಬಹುಮತವಿಲ್ಲ!

ಹೀಗಿದ್ದೂ ಸಿಕ್ಖರು ಗೊಣಗುಟ್ಟದೆ ಭಾರತದ ಜತೆ ನಿಂತುಕೊಂಡರು. ಅವರ ನಿರಾಶೆಯನ್ನಷ್ಟೂ ಅವರು ದುಡಿಮೆಯತ್ತ ತಿರುಗಿಸಿಬಿಟ್ಟರು. ಮಣ್ಣಿನಿಂದ ಹೊನ್ನು ಬೆಳೆಯಿಸಿದರು. ಫ್ಯಾಕ್ಟರಿಗಳಲ್ಲಿ ಯಂತ್ರಗಳು ಸಿಕ್ಖರ ಬೆರಳುಗಳಿಂದ ಜೀವ ಪಡೆದವು. ಭಾರತದ ಸೇನೆ ಶಸ್ತ್ರವೆತ್ತಬೇಕಾಗಿ ಬಂದಾಗಲೆಲ್ಲ ಸಿಕ್ಖರು ಆತ್ಮಾಹುತಿ ನಡೆಸಲು ಸಿದ್ಧರಾಗಿ ರಣಭೂಮಿಗೆ ಧಾವಿಸಿದರು. ೧೯೬೨ರಲ್ಲಿ ಚೀನವು ಭಾರತದ ಗಡಿಗಳಲ್ಲಿ ವಿಧ್ವಂಸನವೆಸಗಿದ್ದಾಗ ಒಟ್ಟಿನಲ್ಲಿ ದೊರೆತ ಏಕಮಾತ್ರ ಗೆಲುವು ವಲೊಂಗ್‌ನಲ್ಲಾಗಿತ್ತು. ಮಳೆಹಾತೆಗಳ ಹಾಗೆ ನುಗ್ಗಿ ಬಂದ ಹಳದಿ ಮುಖಗಳನ್ನು ಎದುರಿಸಿ ನಿಂತದ್ದು ಸಿಕ್ಖ್ ರೆಜಿಮೆಂಟಾಗಿತ್ತು. ೧೯೬೫ರಲ್ಲಿ ಏರ್‌ಚೀಫ್ ಮಾರ್ಶಲ್ ಆಗಿದ್ದ ಅರ್ಜುನ್ ಸಿಂಗ್ ಸ್ವತಃ ಬಾರ್ಗೋಡೆಗೆದುರಾಗಿ ಸೋರ್ಟಿಗಳನ್ನು ನಡೆಸಿದ್ದರು. ಅಲ್ಲದಿದ್ದರೂ ಸಿಕ್ಖರು ಶೋಭಿಸದ ಯಾವ ಕ್ಷೇತ್ರವಿದೆ ಈ ದೇಶದಲ್ಲಿ? ಕ್ರೀಡೆಗಳಲ್ಲೂ ಕಾರ್ಯಗಳಲ್ಲೂ ಅವರು ಮುಂದೆಯೇ ಇದ್ದಾರೆ. ಕಲೆ, ಥಿಯೇಟರ್, ವಾಸ್ತುಶಿಲ್ಪ, ಸಂಗೀತ, ಮೆಡಿಸಿನ್, ಅಡ್‌ಮಿನಿಸ್ಟ್ರೇಟರ್, ಸರ್ವೀಸ್ ಎಲ್ಲ ಕ್ಷೇತ್ರಗಳಲ್ಲೂ ಸಿಕ್ಖರು ಗಣನೀಯ ಕೊಡುಗೆಗಳನ್ನು ನೀಡಿರುವವರು. ಭಾರತ ಸಿಕ್ಖರಿಗೆ ಕೊಟ್ಟಿದ್ದಕ್ಕಿಂತಲೂ ಹೆಚ್ಚು ಅವರು ಭಾರತಕ್ಕೆ ಮರಳಿಕೊಟ್ಟಿರುವವರು.

ಆದರೆ ಇಂದು ಸಿಕ್ಖರೆಲ್ಲರೂ ಸಂಶಯಕ್ಕೆ ಗುರಿಯಾಗಿರುವವರು. ಅವರ ಹೆಂಡಂದಿರೂ ಪ್ರೇಯಸಿಯರೂ ಸೋದರಿಯರೂ ಪುತ್ರಿಯರೂ ಅತ್ಯಾಚಾರಕ್ಕೆ ಗುರಿಯಾಗುತ್ತಿರುವವರು. ಸಿಕ್ಖರೆಲ್ಲರೂ ತಲೆಮಾರುಗಳಿಂದ ಆರಾಧಿಸುತ್ತ ಬಂದಿರುವ ಹರಿಮಂದಿರದ ಪಾವಿತ್ರ್ಯವನ್ನು ಕಡೆಗಣಿಸಿ ಭಾರತೀಯ ಸೇನೆ ಸ್ವರ್ಣಮಂದಿರವನ್ನು ಮಲಿನಗೊಳಿಸಿದೆ. ದಾರಿ ತಪ್ಪಿದ ಒಂದು ಮುಷ್ಟಿ ಸಿಕ್ಖರ ದುರ್ವರ್ತನೆಯೇ ಅದಕ್ಕೆ ಕಾರಣವಾಗಿತ್ತು ಎನ್ನಬಹುದು. ಈಗ ಮಾತ್ರ ಅವಿವೇಕಿಗಳಾದ ಇಬ್ಬರು ಸಿಕ್ಖ್ ಯುವಕರು ಇಡೀ ಸಿಕ್ಖ್ ಸಮಾಜದ ಮುಖಕ್ಕೇ ಮಸಿ ಬಳಿದಿರುವವರು. ಅವರೆಡೆಯಲ್ಲಿ ಪಕ್ವತೆಯ, ವಿವೇಕದ ಧ್ವನಿ ದುರ್ಬಲಗೊಳ್ಳುತ್ತಲೇ ಇದೆ. ಸಂಯಮದ ಹಾದಿಯನ್ನು ಅವರು ಸಂಪೂರ್ಣ ತೊರೆದಿರುವವರು. ಗಲ್ ಸಹೀ ಗೋಲೀ. ರಾಜಿ ಮಾತುಕತೆ ಎಂಬುದು ಒಂದು ಹೀನ ವಾಕ್ಯವಾಗಿ ಬಿಟ್ಟಿದೆ: ಅವರೆಡೆಯಲ್ಲಿ ಮದ್ದುಗುಂಡಿನ ಭಾಷೆಯಷ್ಟೇ ಉಳಿದುಕೊಂಡಿದೆ.

ಇಂದಿನ ಪರಿಸ್ಥಿತಿಯಲ್ಲಿ ಸಿಕ್ಖರಿಗಿರುವಷ್ಟೇ ಅಥವಾ ಅದಕ್ಕಿಂತಲೂ ಹೆಚ್ಚೇ ಜವಾಬ್ದಾರಿ ಸರಕಾರಕ್ಕೂ ಇದೆ. ಬಹಳಷ್ಟು ಚಿಕ್ಕ ಮತ್ತು ದೊಡ್ಡ ಘಟನೆಗಳ ಹಿಂದಿನ ಸರಣಿ ಚಟುವಟಿಕೆಗಳೇ–ಮೊಳಕೆಯಲ್ಲೇ ಹಿಸುಕಬೇಕಾಗಿದ್ದ ಸಮಸ್ಯೆಗಳೇ–

ಇಂದಿನ ಈ ಸ್ಫೋಟನಾವಸ್ಥೆಗೆ ಕಾರಣವಾಗಿವೆ. ಅಧಿಕಾರಾರೂಢರ ಪರೋಕ್ಷ ಬೆಂಬಲ ಇರದಿದ್ದರೆ ಭಿಂದ್ರನ್‌ವಾಲ ಎಂಬ ದೈತ್ಯನಿಗೆ ಅಸ್ತಿತ್ವವಿರುತ್ತಿರಲಿಲ್ಲ. ಭಿಂದ್ರನ್‌ವಾಲ ಇರದಿದ್ದರೆ ಬ್ಲೂಸ್ಟಾರ್‌ನ ಅಗತ್ಯಬೀಳುತ್ತಿರಲಿಲ್ಲ. ಇಂದಿರಾ ಕೊಲೆಗೈಯಲ್ಪಡುತ್ತಿರಲಿಲ್ಲ. ಡೆಪ್ಯೂಟಿ ಐ.ಜಿ. ಅತ್‌ವಾಲರ ಕೊಲೆಯ ಸಂಬಂಧ ಭಿಂದ್ರನ್‌ವಾಲಾರನ್ನ ಅರೆಸ್ಟ್ ಮಾಡಿರುತ್ತಿದ್ದರೆ ಮುಂದೆ ಸಂಭವಿಸಿದ್ದ ಅನೇಕ ಆಪತ್ತುಗಳನ್ನು ತಪ್ಪಿಸಬಹುದಾಗಿತ್ತು. ಭಿಂದ್ರನ್‌ವಾಲ ಶಸ್ತ್ರಾಸ್ತ್ರಗಳನ್ನು ದಾಸ್ತಾನು ಮಾಡತೊಡಗಿದ್ದ ಪ್ರಾರಂಭದ ದಿನಗಳಲ್ಲಿ ಸೇನೆಯನ್ನು ಕಳುಹಿಸಿದ್ದರೂ ಇಷ್ಟೊಂದು ನಾಶನಷ್ಟಗಳು ಸಂಭವಿಸುತ್ತಿರಲಿಲ್ಲ. ಬ್ಲೂಸ್ಟಾರ್‌ನ ಟೈಮಿಂಗ್‌ನಲ್ಲಿ ಸಂಭವಿಸಿದ್ದ ದೋಷವೇ ಒಂದು ಮುಖ್ಯ ಕಾರಣವಾಗಿರಬಹುದು. ೧೯೮೨ರಲ್ಲಿ ಎರಡು ಬಾರಿ ರಾಜಿ ಒಡಂಬಡಿಕೆಯ ಕಾಗದ ಪತ್ರಗಳು ಸಿದ್ಧವಾಗಿದ್ದವು. ಎರಡು ಬಾರಿಯೂ ದೂರಸರಿದದ್ದು ಸಿಕ್ಖರಲ್ಲ.

ಬ್ಲೂಸ್ಟಾರ್‌ನ ಬಳಿಕ ಸರಕಾರದ ವಿವಿಧ ಸ್ತರಗಳಲ್ಲಿರುವ ಸರ್ದಾರ್‌ಗಳಷ್ಟೂ ಶಂಕಿಸಲ್ಪಟ್ಟರು. ಇಪ್ಪತ್ತೈದು ವರ್ಷಗಳಿಗಿಂತಲೂ ಹೆಚ್ಚು ಕಾಲ ಉನ್ನತ ಹುದ್ದೆಯನ್ನು ನಿರ್ವಹಿಸುತ್ತಾ ಬಂದಿರುವ ತನ್ನ ತಂದೆ ಗುರುದೇವ್ ಸಿಂಗ್ ಒಂದು ದಿನ ಮನೆಗೆ ತಲಪಿದ್ದು ಗಾಯಗೊಂಡ ಹೃದಯ ಮತ್ತು ಬಹಳ ವ್ಯಥೆಯೊಂದಿಗೇ ಆಗಿತ್ತು. ಏನೇ ಸಂಭವಿಸಿದರೂ ಒಂದು ತಮಾಷೆ ಹೇಳಿ ಅದರಲ್ಲಿ ಸ್ವಂತ ನೋವನ್ನು ಮುಳುಗಿಸಿ ಕೊಲ್ಲುತ್ತಿದ್ದ ಅಪ್ಪ ಅಂದು, ರೂಢಿಯ ಚಹಾವನ್ನು ಕೂಡ ಕುಡಿಯದೆ ಸೀದಾ ಮಲಗುವ ಕೋಣೆಗೇ ಹೋಗಿದ್ದರು. ಉಡುಪು ಕೂಡ ಬದಲಾಯಿಸದೆ ಹಾಸಿಗೆಯ ಮೇಲೆ ಉರುಳಿದ್ದರು. ಏನೋ ಅಸ್ವಾಸ್ಥ್ಯವಿರಬಹುದೆಂದುಕೊಂಡ ಅಮ್ಮನೂ ತಾನೂ ಮಂಚದ ಬಳಿಗೆ ಹೋದೆವು. ಅಪ್ಪ ದಿಂಬಿನ ಮೇಲೆ ಮುಖವೊತ್ತಿ ಬಿಕ್ಕಿ ಬಿಕ್ಕಿ ಅಳುತ್ತಾ ಇದ್ದರು.

ಅಮ್ಮ ಗಾಬರಿಯಾದಳು. ಅಪ್ಪನಿಗೆ ಬಿಕ್ಕಳಿಕೆಯಿಂದಾಗಿ ಮಾತು ಸಿಕ್ಕದಾಯಿತು. ಕೊನೆಗೆ ಬಿಕ್ಕಳಿಸುತ್ತಲೇ ಅಪ್ಪ ಹೇಳಿ ಮುಗಿಸಿದರು:

ಸಿಕ್ಕಿತ್ತು; ನನಗೆ ಪ್ರತಿಫಲ ಸಿಕ್ಕಿತು. ನಾನು ವಿತ್ತ ಸಚಿವಾಲಯದಲ್ಲೂ ಗೃಹಸಚಿವಾಲಯದಲ್ಲೂ ರಕ್ಷಣಾ ಸಚಿವಾಲಯದಲ್ಲೂ ಜವಾಬ್ದಾರಿಯುತ ಹುದ್ದೆಗಳನ್ನು ನಿರ್ವಹಿಸಿದ್ದೆ. ಚೀನಾ ಆಕ್ರಮಣದ ವೇಳೆ ಡಿಫೆನ್ಸ್ ಮಿನಿಸ್ಟ್ರಿಯಲ್ಲಿ ಸೇನಾ ಚಲನವಲನಗಳಿಗೆ ಸಂಬಂಧಿಸಿದ ಪೋಸ್ಟಾಗಿತ್ತು ನನ್ನದು. ಬಾಂಗ್ಲಾದೇಶ್ ಆಪರೇಶನ್ ವೇಳೆ ನಾನು ಹೋಮ್ ಮಿನಿಸ್ಟ್ರಿಯಲ್ಲಿ ತೀರಾ ಸೂಕ್ಷ್ಮವಾದ ಇಂಟಲಿಜನ್ಸ್ ಕೋ–ಆರ್ಡಿನೇಶನ್ ವಿಂಗ್‌ನಲ್ಲಿದ್ದೆ. ಬ್ಯಾಂಕ್ ರಾಷ್ಟ್ರೀಕರಣದ ವೇಳೆ ಫೈನಾನ್ಸ್‌ನ ಬ್ಯಾಂಕಿಂಗ್ ವಿಂಗ್‌ನಲ್ಲೂ ಇದ್ದೆ. ಎಲ್ಲವೂ ಬಹಳ ಜವಾಬ್ದಾರಿಯ ಸ್ಥಾನಗಳೇ. ದೇಶದ ಭದ್ರತೆಗೆ ಸಂಬಂಧಿಸಿದ್ದ, ಬಲುರಹಸ್ಯವಾಗಿ ಇರಿಸಬೇಕಾಗಿದ್ದ ಕಾರ್ಯಗಳು



ನನ್ನ ಮೇಜಿಗೆ ತಲಪುತ್ತಿದ್ದವು. ರಹಸ್ಯಗಳನ್ನು ಬಿಟ್ಟುಕೊಟ್ಟರೆ ಸಂಭವಿಸಬಹುದಾದ ಅಪಾಯ ಭೀಕರವಾದುದಾಗಿತ್ತು. ಆ ಅವಧಿಗಳಲ್ಲೆಲ್ಲ ಎಂದೂ ಯಾರೂ ನನ್ನನ್ನು ಶಂಕಿಸಿದ್ದಿಲ್ಲ.

ಆದರೆ, ಈ ದಿನ ವಿಜ್ಞಾನ್ ಭವನ್‌ನಲ್ಲಿ ಜರಗುವ ಸೆಮಿನಾರ್‌ನಲ್ಲಿ ಪಾಲ್ಗೊಳ್ಳಲು ನನಗೂ ಆಮಂತ್ರಣವಿದ್ದಿತ್ತು. ಸಾರ್ವಜನಿಕ ವಲಯ ಮತ್ತು ಪಂಚ ವಾರ್ಷಿಕ ಯೋಜನೆ ಎಂಬ ಒಂದು ಪೇಪರ್ ಮಂಡಿಸಬೇಕಾಗಿ ಹೊಣೆಯೂ ನನ್ನದಾಗಿತ್ತು. ಪ್ರಧಾನಮಂತ್ರಿ ಸೆಮಿನಾರ್ ಉದ್ಘಾಟಿಸುವವರಿದ್ದರು. ಬ್ಲೂಸ್ಟಾರ್‌ನ ಅನಂತರದ ಭದ್ರತಾ ವ್ಯವಸ್ಥೆಯ ಅಂಶವಾಗಿ, ಹಾಲ್‌ಗೆ ಪ್ರವೇಶಿಸುವವರನ್ನು ನಿಯಂತ್ರಿಸಲೆಂದು ಪಾಸ್ ಹಂಚಿದ್ದರು. ನಾನು ಮತ್ತು ನನ್ನ ಕೈಕೆಳಗಿನ ಸೆನ್‌ಗುಪ್ತ ಜತೆಯಾಗಿಯೇ ಹಾಲ್‌ನ ಬಾಗಿಲು ತಲಪಿದ್ದೆವು. ಬಾಗಿಲಲ್ಲಿ ಮೆಟಲ್ ಡಿಟೆಕ್ಟರ್ ಹಿಡಿದುಕೊಂಡು ಭದ್ರತಾ ಸಿಬ್ಬಂದಿ ನಿಂತಿದ್ದರು. ಬೇರೆಯೂ ಬಹಳ ಮಂದಿ ಗೇಟಿನ ಬಳಿ ನಿಂತುಕೊಂಡಿದ್ದರು. ಸೆನ್‌ಗುಪ್ತರನ್ನು ನೇರವಾಗಿ ಒಳಗೆ ಹೋಗಲು ಬಿಟ್ಟರು. ನನ್ನ ಸರದಿ ಬಂದಾಗ ಭದ್ರತಾ ಸಿಬ್ಬಂದಿ ಇದ್ದಕ್ಕಿದ್ದಂತೆ ಜಾಗೃತರಾದರು. ನನ್ನ ಕೈಕೆಳಗಿನ ಬಹಳ ಮಂದಿ ನೌಕರರ ಎದುರಿನಲ್ಲೇ ನನ್ನನ್ನು ಮೆಟಲ್ ಡಿಟೆಕ್ಟರ್ ನಖಶಿಖಾಂತ ತಪಾಸಣೆ ಮಾಡಿತು. ಎರಡು, ಮೂರು ನಿಮಿಷಗಳ ತನಕವೂ ಮುಂದುವರಿದಿತ್ತು ತಪಾಸಣೆ. ನನಗಷ್ಟೇ ಅಲ್ಲ ಗಡ್ಡ, ಪಗಡಿಗಳಿರುವ ಅನೇಕ ಮಂದಿಗೆ ಈ ಅನುಭವವಾಗಿತ್ತು. ಸೆಕ್ರೆಟರಿ ರ್‍ಯಾಂಕ್‌ನ ಹರ್ ಮೋಹನ್ ಸಿಂಗ್ ಗಿಲ್, ಮನ್‌ಮೋಹನ್ ಸಿಂಗ್ ಮುಂತಾದವರಿಗೆ ಕೂಡ.

ಇಂತಹ ನಾಚಿಕೆಗೇಡು ನನ್ನ ಜೀವನದಲ್ಲಿ ಹಿಂದೆಂದೂ ನಡೆದಿಲ್ಲ...

ಅಪ್ಪ ಮುಂದಿನ ಎರಡು ದಿನ ಆಫೀಸ್‌ಗೆ ಹೋಗಲಿಲ್ಲ. ಅಂದಿನ ಗಾಯ ಯಾವತ್ತೂ ಮಾಸಲಿಲ್ಲ. ಆ ನೆನಪು ಮರುಕಳಿಸುವಾಗಲೆಲ್ಲ ಅಪ್ಪ ಹೇಳ್ತಾ ಇರ್ತಾರೆ. ಅಂದಿನ ಪ್ರೇಕ್ಷಕರಲ್ಲಿ ಅನೇಕ ಮಂದಿ ನನ್ನ ಕೈಕೆಳಗಿನ ನೌಕರರಿದ್ದರು. ಅವರ ಕಾನ್‌ಫಿಡೆನ್ಶಿಯಲ್ ಫಾರ್ಮಿನಲ್ಲಿ ಇಂಟೆಗ್ರಿಟಿ ಎಂಬ ಒಂದು ಕಾಲಂ ಇದೆ. ಅದನ್ನು ಸರ್ಟಿಫೈ ಮಾಡಬೇಕಾದ ಜವಾಬ್ದಾರಿ ನನ್ನದು. ಸಂಶಯಾಸ್ಪದವಾದದ್ದು ಏನಾದರೂ ಇದ್ದಲ್ಲಿ ಎತ್ತಿ ತೋರಿಸಬೇಕಾದ ಹೊಣೆಯೂ ನನಗಿದೆ. ಅವರೆಲ್ಲರ ಕಣ್ಣ ಮುಂದೆ ನನ್ನ ಇಂಟೆಗ್ರಿಟಿಯನ್ನು–ವಿಶ್ವಾಸಾರ್ಹತೆಯನ್ನು ಬಹಿರಂಗವಾಗಿ ಪ್ರಶ್ನಿಸುವುದು! ನನಗಿದನ್ನು ಸಹಿಸಲು ಸಾಧ್ಯವಾಗುತ್ತಾ ಇಲ್ಲ.

ಹೌದು, ಮೊನ್ನೆ ಪುನಃ ಅಪ್ಪ ಗುಂಪಿನ ಆಕ್ರಮಣಕ್ಕೆ ಗುರಿಯಾದರು. ನಿಂದ್ಯವೂ ನೀಚವೂ ಆದ ಇಂತಹ ಅನುಭವಗಳು ಇನ್ನೆಷ್ಟು ಬಾರಿ ಮರುಕಳಿಸಲಿದೆಯೋ ಏನೊ?

ಪಕ್ಕನೆ ಅಪ್ಪನ ಆರೋಗ್ಯದ ಬಗ್ಗೆ ನೆನಪಾಯಿತು. ರವಿ ಅಂಕಲ್‌ರ ಫೋನ್

ಸಿಕ್ಕಿದಾಗ ಅಪ್ಪ ನಿದ್ರಿಸಿರಲಿಲ್ಲ. ಜ್ವರ ಕಡಿಮೆಯಾಗಿದ್ದರೂ ಅವರು ಮಾನಸಿಕವಾಗಿ ತೀರಾ ಅಸ್ವಸ್ಥರಾಗಿದ್ದರು. ಕೆನ್ನೆಗಳ ಊತ ಇಳಿದಿದೆ. ಆದರೆ ಅಪ್ಪ ತನ್ನಷ್ಟಕ್ಕೇ ಎಂಬಂತೆ ಉರು ಹೊಡೆಯುತ್ತಾ ಇದ್ದರು:

“ನನ್ನ ಮನಸ್ಸಿನ ಗಾಯಗಳು ಗುಣವಾಗುತ್ತವೆ ಎಂಬ ಭರವಸೆಯೇ ನನಗಿಲ್ಲ.”

ಪಕ್ಕನೆ ಒಂದು ಜೀಪ್ ಅಂಗಳಕ್ಕೆ ಬಂದು ನಿಂತಿತು. ಬಂದವರು ಎಸ್.ಎಚ್.ಓ. ರವಿ ಜೀಪ್‌ನ ಸದ್ದು ಕೇಳಿಸಿದಾಗ ವೆರಾಂಡಕ್ಕೆ ಹತ್ತಿ ಬಂದ.

ಕಲ್ಪನೆಯಲ್ಲಿರುವ ಪೊಲೀಸ್ ಅಧಿಕಾರಿಯ ಚಿತ್ರದೊಂದಿಗೆ ಸ್ವಲ್ಪವೂ ಹೊಂದಿಕೊಳ್ಳುತ್ತಾ ಇಲ್ಲ ಎಸ್.ಎಚ್.ಓ.ರ ಸ್ವರೂಪ. ಟೋಪಿ ತೆಗೆದು ಮೇಜಿನ ಮೇಲಿರಿಸಿ, ನರೆತ ಕೂದಲಿನಲ್ಲಿ ಬೆರಳಾಡಿಸುತ್ತ ಸೌಹಾರ್ದ ಭಾವದೊಂದಿಗೆ ಆತ ರವಿಯನ್ನೂ ಅಂಗದ್‌ನನ್ನೂ ಕುಳಿತುಕೊಳ್ಳಲು ಆಹ್ವಾನಿಸಿದರು. ಜೇಬಿನ ಮೇಲ್ಗಡೆಯಿರುವ ಪ್ಲಾಸ್ಟಿಕ್ ನೇಮ್‌ಪ್ಲೇಟ್‌ನಲ್ಲಿ ಅವರ ಹೆಸರು ಗೋಚರಿಸಿತು– ಕೆ.ಎಲ್.ಆರೋರಾ. ಸೊರಗಿ ಬಿಳಿಚಿಕೊಂಡ ಮುಖವಿರುವ ಆರೋರಾರ ಕಣ್ಣುಗಳಲ್ಲಿ ಸೌಮ್ಯ ಭಾವಕ್ಕೇ ಹೌದು ಹೆಚ್ಚಿನ ಸ್ಥಾನ.

ರವಿ ಹೇಳತೊಡಗಿದ:

“ಆರೋರಾ ಸಾಬ್, ತೊಂದರೆ ಕೊಡುತ್ತಿರುವ ಬಗ್ಗೆ ಕ್ಷಮಿಸಬೇಕು.”

ಆರೋರಾ, ಕುರ್ಚಿಯ ಪಟ್ಟಿಯ ಮೇಲಿದ್ದ ಮಾಸಿದ್ದ ಟವಲ್‌ನಿಂದ ಮುಖ ಒತ್ತಿ ಒರೆಸುತ್ತ ತಾಳ್ಮೆಯಿಂದ ಕೇಳಿಸಿಕೊಂಡರು.

ರವಿ ಸಂಕ್ಷಿಪ್ತ ಮಾತುಗಳಲ್ಲಿ ವಿಷಯ ತಿಳಿಸಿದ. ಮನ್ಮೋಹನ್‌ನ ಹಾಗೂ ಆತನ ತಾಯಿ ಇಂದರ್ ಕೌರ್‌ನ ಮೃತದೇಹಗಳನ್ನು ಮೋರ್ಚರಿಗೆ ತತ್‌ಕ್ಷಣವೇ ಸ್ಥಳಾಂತರಿಸುವ ವ್ಯವಸ್ಥೆ ಮಾಡಲಾಯಿತು. ಗುರು ದಯಾಲ್‌ಗೆ ಸಂಬಂಧಿಸಿದ್ದ ವಿಶದ ವಿವರಗಳನ್ನು ಬರೆದುಕೊಂಡರು. ಹೊತ್ತು ಬೆಳಗಾದೊಡನೆ ಮಿಸ್ಸಿಂಗ್ ಪರ್ಸನ್ ಸ್ಕ್ವ್ಯಾಡ್‌ಗೆ ವಿಷಯ ತಿಳಿಸಲಾಗುವುದು. ಅವರು ಗುರುದಯಾಲ್‌ನನ್ನು ಪತ್ತೆ ಹಚ್ಚಲು ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳುವರು.

ಔಪಚಾರಿಕವಾಗಿ ಎಫ್.ಐ.ಆರ್. ಆಮೇಲೆ ಫೈಲ್ ಮಾಡಿದರಾಯ್ತು. ಅದಕ್ಕೆ ದರ್ಶನ್‌ಳ ಹೇಳಿಕೆ ಬೇಕಾಗುತ್ತದೆ. ದರ್ಶನ್‌ಳ ಮಾನಸಿಕಾವಸ್ಥೆ ಸದ್ಯ ಪ್ರಶ್ನೆಗಳನ್ನೆದುರಿಸುವ ಸ್ಥಿತಿಯಲ್ಲಿಲ್ಲ. ಗುಂಪಿನ ಜನರಲ್ಲಿ ಕೆಲವರನ್ನಾದರೂ ದರ್ಶನ್ ಗುರುತಿಸಿದ್ದಿರಬಹುದು. ಕಾಲನಿಯವರೇ ಆಗಿದ್ದರೆ ಖಂಡಿತವಾಗಿಯೂ ಗುರುತಿಸಿರುತ್ತಾಳೆ.

ಆದರೆ ಆರೋರಾರಿಗೆ ಖಚಿತವಾಗಿತ್ತು. ಇದು ಕಾಲನಿಯವರೇ ನಡೆಸಿದ್ದ ಹಲ್ಲೆಯಾಗಿರಲಿಕ್ಕಿಲ್ಲ. ಇತರ ಅನೇಕ ಕಾಲನಿಗಳಲ್ಲಿ ಸಂಭವಿಸಿದ ಹಾಗೆಯೇ ಇದು ಕೂಡ ಹೊರಗಿನಿಂದ ಬಂದವರ ಕೆಲಸವೇ ಇರಬೇಕು. ಅಗತ್ಯ ತನಿಖೆಗಳನ್ನೆಲ್ಲ



ಮಾಡಿಸೋಣ–ಬೈದವೇ ದರ್ಶನ್‌ಳನ್ನು ಪ್ರಶ್ನಿಸುವುದರೊಂದಿಗೇ ಅವಳನ್ನು ಮೆಡಿಕಲ್ ಟೆಸ್ಟ್‌ಗೆ ಗುರಿಪಡಿಸಬೇಕು.

ರವಿ ಮತ್ತು ಅಂಗದ್ ಒಂದು ಕ್ಷಣ ಮುಖಮುಖ ನೋಡಿಕೊಂಡರು. ರವಿ ಸ್ಪಷ್ಟಪಡಿಸಿದ: “ದರ್ಶನ್‌ಳ ಗಾಯಗಳು ಕ್ಷುಲ್ಲಕವಷ್ಟೇ. ಅದನ್ನೊಂದು ಇಶ್ಯೂ ಮಾಡಲು ನಾವು ಇಚ್ಛಿಸುವುದಿಲ್ಲ. ಮನ್ಮೋಹನ್‌ನನ್ನು ಕ್ರೂರವಾಗಿ ಕೊಲೆಗೈದಿರುವುದೇ ನಮ್ಮ ಮುಖ್ಯ ಇಶ್ಯೂ. ಇಂದರ್ ಕೌರ್ ತೀರಿಕೊಂಡದ್ದು ಶಾಕ್‌ನಿಂದೆಂದು ನನ್ನೆಣಿಕೆ. ಆದರೂ ಪೋಸ್ಟ್‌ಮಾರ್ಟಂ ವರದಿಗನುಗುಣವಾಗಿ ನಾವು ಮುಂದುವರಿಸಬಹುದು. ದರ್ಶನ್ ಈ ಮೊಕದ್ದಮೆಯ ಓರ್ವ ಪ್ರತ್ಯಕ್ಷದರ್ಶಿಯಷ್ಟೇ. ತಮ್ಮನ ಮೇಲೆ ಗುಂಪು ನಡೆಸಿದ್ದ ಆಕ್ರಮಣ ಕಾಣುತ್ತಲೇ ಅವಳು ಪ್ರಜ್ಞೆ ಕಳಕೊಂಡಿರಬಹುದು. ಆದುದರಿಂದ ಪ್ರತ್ಯಕ್ಷದರ್ಶಿಯಾಗಲು ಕೂಡ ಅವಳಿಗೆ ಅರ್ಹತೆ ಇಲ್ಲವೆಂದೇ ನನಗನ್ನಿಸುತ್ತದೆ.”

ಆರೋರಾ ರವಿಯನ್ನು ಸಂತೈಸಿದರು:

“ಎಫ್.ಐ.ಆರ್. ಬರೆಯುವಾಗ ನಾನು ಈ ವಿಚಾರವನ್ನು ಗಮನಿಸುತ್ತೇನೆ.”

ರವಿ ಅಂಗದ್‌ನನ್ನು ಆತನ ಮನೆಗೆ ಡ್ರಾಪ್ ಮಾಡುವಷ್ಟರಲ್ಲಿ ಹೊತ್ತು ಮುಂಜಾನೆಯಾಗಿತ್ತು. ಗುರುದೇವ್ ಸಿಂಗರನ್ನು ಕಂಡು ಆರೋಗ್ಯ ಸ್ಥಿತಿಯ ಕುರಿತು ವಿಚಾರಿಸಲಿಕ್ಕೂ ಭಾಭಿಯ ಕೈಯಿಂದ ಅದ್ರಕ್ ಮತ್ತು ಇಲಾಚಿ ಹಾಕಿ ಸ್ವಾದ ಹೆಚ್ಚಿಸಲಾದ ಒಂದು ಕಪ್ ಬಿಸಿ ಚಹಾ ಕುಡಿಯಲಿಕ್ಕೂ ವಿಪರೀತ ಆಸೆಯಾಗಿತ್ತು. ಆದರೆ, ಗುರುದೇವ್ ಸಿಂಗ್ ನಿದ್ರಿಸುತ್ತಿರಬಹುದು. ಭಾಭಿ ಕೂಡ. ಎರಡು, ಮೂರು ದಿನಗಳ ಟೆನ್ಶನ್ ಕಳೆದು ತುಸು ವಿಶ್ರಾಂತಿ ಪಡೆಯುತ್ತಿರಬಹುದು. ಅಲ್ಲದೆ ತಾನು ಮಾಡಲೇಬೇಕಾದ ಕಾರ್ಯಗಳು ಇನ್ನೂ ಇವೆ. ಕಾಫಿ ಬ್ರೌನ್ ಬಣ್ಣದಲ್ಲಿ ಬಿಳಿ ಚೌಕಗಳಿರುವ ಸೀರೆ ಉಟ್ಟಿರುವ ಹಾಗೂ ಕಿವಿಗಳಲ್ಲಿ ದೊಡ್ಡ ರಿಂಗ್‌ಗಳನ್ನು ತೊಟ್ಟುಕೊಂಡಿರುವ ಯುವತಿ ದೆಹಲಿಯತ್ತ ಬರುತ್ತಿದ್ದ ಯಾವುದೋ ಟ್ರೈನ್‌ನಲ್ಲಿ ಬಂದು ನಿಜಾಮುದ್ದೀನ್‌ನಲ್ಲಿ ಇಳಿದಿರಬಹುದು. ನೂರಕ್ಕಿಂತಲೂ ಹೆಚ್ಚು ಮಹಾರಾಜರುಗಳನ್ನೂ ಪ್ರೆಸಿಡೆಂಟ್‌ಗಳನ್ನೂ ಪ್ರಧಾನಮಂತ್ರಿಗಳನ್ನೂ ಅವರೆಲ್ಲರ ಪರಿವಾರಗಳನ್ನೂ ಬರಮಾಡಿಕೊಳ್ಳಲು ಅಗತ್ಯವಾದ ಕಾರ್‌ಗಳ ಸ್ಥಿತಿ ಏನೆಂದು ಗೊತ್ತಿಲ್ಲ. ತನ್ನ ಸಹೋದ್ಯೋಗಿಗಳು ದಕ್ಷರಿರುವರಾದರೂ ತೇಜ ತನ್ನಲ್ಲಿರಿಸಿರುವ ನಂಬಿಕೆಗೆ ಹಾನಿತಟ್ಟಬಾರದು. ಮನೆಯಲ್ಲಿ ಸುನೀಂದರ್ ಮತ್ತು ಮನೀಂದರ್ ದರ್ಶನ್‌ಗೆ ಬೇಕಾದ ಸೌಕರ್ಯಗಳನ್ನು ಮಾಡಿಕೊಡುತ್ತಿರಬಹುದು. ಅಂಗದ್ ಒತ್ತಾಯಿಸಿದರೂ ಮತ್ತೆ ಬರುವುದಾಗಿ ಹೇಳಿ ರವಿ ಕಾರ್ ಸ್ಟಾರ್ಟ್ ಮಾಡಿದ. ಗುರುದೇವ್ ಸಿಂಗ್‌ರಿಗೆ ಪ್ರಣಾಮಗಳನ್ನು ತಿಳಿಸಲು ಹೇಳಿದಾಗ, ಅಂಗದ್ ನಗುತ್ತ ಹೇಳಿದ:

“ನಾನು ಪ್ರಾತರ್ವಿಧಿಗಳನ್ನು ತೀರಿಸಿ ಅತ್ತ ಬರುತ್ತೇನೆ. ಅಪ್ಪನ ಅರೋಗ್ಯ

ಅನುಕೂಲವಾಗಿದ್ದರೆ ಅವರನ್ನೂ ಕರೆತರುತ್ತೇನೆ."

ಒಂದು ನಿಮಿಷ ತಡೆದು ಅಂಗದ್ ಮತ್ತೂ ಹೇಳಿದ: "ಇವತ್ತಲ್ಲವಾದರೆ ನಾಳೆ ದರ್ಶನ್‌ಳನ್ನು ಅಪ್ಪನಿಗೆ ತೋರಿಸಲೇಬೇಕಲ್ಲ."

ಎರಡು ಬೆರಳುಗಳನ್ನೆತ್ತಿ ಶುಭಾಶಂಸನೆ ಹೇಳಿ ರವಿ ಕಾರ್ ನಡೆಸಿದ.

ಮನೆ ಮತ್ತು ಆಫೀಸ್‌ಗಳ ಕಡೆಗಿನ ತಿರುವಿಗೆ ತಲಪಿದಾಗ ರವಿಗೆ ಆಫೀಸ್‌ಗೆ ಹೋಗಿ ವಿಷಯಗಳ ಸ್ಥಿತಿಗತಿಗಳ ಬಗ್ಗೆ ತಿಳಿಯುವ ಕಾತರ ತಡೆಯದಾಯ್ತು. ಆಮೇಲೆಯೇ ಮನೆಗೆ ಹೋಗಿ ಸ್ನಾನ ಮಾಡಿಕೊಂಡು ವಿಶ್ರಾಂತಿ ಪಡೆಯಬಹುದು ಎಂದುಕೊಂಡನು.

ಆಫೀಸ್ ತಲಪಿದಾಗ ಸಹೋದ್ಯೋಗಿಗಳು ಕರ್ತವ್ಯ ನಿರತರಾಗಿ ಅವರವರ ಸೀಟ್‌ಗಳಲ್ಲೇ ಇದ್ದರು. "ನಾನೂರ ಐವತ್ತೆಂಟು ಕಾರ್‌ಗಳನ್ನು ಇಷ್ಟರಲ್ಲೇ ಕಳುಹಿಸಿಯಾಗಿದೆ. ಇಪ್ಪತ್ತಮೂರು ಕಾರ್‌ಗಳು ಡ್ರೈವರ್ ಸಹಿತ ಸಜ್ಜಾಗಿ ನಿಂತಿವೆ. ಅರುವತ್ತೆಂಟು ಕಾರ್‌ಗಳು ಪೈಪ್ ಲೈನ್‌ನಲ್ಲಿವೆ. ಆದರೆ ಡ್ರೈವರ್‌ಗಳಿಲ್ಲ. ತ್ರಿಲೋಕ್‌ಪುರಿ, ಕಲ್ಯಾಣ್‌ಪುರಿ ಏರಿಯಾದಲ್ಲಿ ಹನ್ನೆರಡು ಮಂದಿ ಡ್ರೈವರ್‌ಗಳಿದ್ದಾರೆ. ಅವರ ವಿಳಾಸವೂ ಗೊತ್ತು. ಅಗತ್ಯ ಎಂದನ್ನಿಸುವುದಾದರೆ ಅವರನ್ನು ಕರೆಸಲು ವ್ಯವಸ್ಥೆ ಮಾಡಬಹುದು."

ರವಿ ಸಂತೃಪ್ತನಾದ. ಸ್ಥಿತಿ ಸಂಪೂರ್ಣ ಅಂಕೆಯಲ್ಲಿದೆ.

"ಏನಾದರೂ ಅಗತ್ಯವಿದ್ದರೆ, ನಾನು ಮನೆಯಲ್ಲಿರುತ್ತೇನೆ."

ಮನೆ ತಲಪಿದ ರವಿ ಕಾಲಿಂಗ್ ಬೆಲ್‌ನಲ್ಲಿ ಬೆರಳೊತ್ತಿದ. ಎಂದಿನದ್ದಲ್ಲ ಬೆಲ್‌ನ ಧ್ವನಿ. ಮ್ಯೂಸಿಕ್ ಬಜರ್‌ನದ್ದು! ಹಿಂದೆ ಯಾವತ್ತೊ ಹಾಳಾಗಿದ್ದ ಅದನ್ನು ಸರಿಪಡಿಸಿ ಫಿಟ್ ಮಾಡಿದವರು ಮನೀಂದರ್ ಮತ್ತು ಸುನೀಂದರ್ ಇರಬಹುದು. ಬಾಗಿಲು ತೆರೆಯಲ್ಪಟ್ಟಿತ್ತು.

ತೆರೆದದ್ದು ಸುನೀಂದರ್ ಅಥವಾ ಮನೀಂದರ್ ಅಲ್ಲ.

ದರ್ಶನ್.

ಅವಳ ಸೊಂಟದಲ್ಲಿ ಫೀಡಿಂಗ್ ಬಾಟಲ್‌ನಿಂದ ಹಾಲು ಕುಡಿಯುತ್ತಿರುವ ಮಗು.

ಮನೀಂದರ್ ಮತ್ತು ಸುನೀಂದರ್ ಧಾವಿಸಿ ಬಂದರು.

"ಅಂಕಲ್, ಅಂಕಲ್ ಸರ್‌ಪ್ರೈಸ್... ಸರ್‌ಪ್ರೈಸ್... ಸರ್‌ಪ್ರೈಸ್!"

"ಹೌದು. ಮೂರು ಅದ್ಭುತಗಳು!"

ಮನೀಂದರ್ ಬೆಟ್ಟು ಮಾಡಿದ:

ಮೊದಲು ದರ್ಶನ್‌ಳ ಸೊಂಟದಲ್ಲಿ ಕುಳಿತಿರುವ ಮಗುವಿನ ಕಡೆಗೆ, ಅನಂತರ ಮ್ಯೂಸಿಕಲ್ ಬಜರ್‌ನ ಕಡೆಗೆ. ಕೊನೆಗೆ ಮುಚ್ಚಿಕೊಂಡಿರುವ ಸ್ನಾನದ ಕೋಣೆಯ ಬಾಗಿಲಿನ ಕಡೆಗೆ.



ಸ್ನಾನದ ಕೋಣೆಯೊಳಗೆ ಶವರಿನಿಂದ ಸುರಿಸಲ್ಪಡುತ್ತಿರುವ ನೀರಿನ ಝೇಂಕಾರ–ಯಾವುದೂ ಅರ್ಥವಾಗದೆ ರವಿ ಚಕಿತನಾಗಿ ನಿಂತುಬಿಟ್ಟ. ಸುನೀಂದರ್ ವಿವರಿಸಿದ:

"ಅಂಕಲ್, ಯಾರು ಅಲ್ಲಿ ಸ್ನಾನ ಮಾಡುತ್ತಿರುವುದು ಗೊತ್ತೆ?"

ಇಲ್ಲವೆಂದು ರವಿ ತಲೆಯಾಡಿಸಿದ.

ಕಿವಿಗಳಲ್ಲಿ ಚಿನ್ನದ ಉಂಗುರಗಳಿರುವ, ಸೊಂಟಕ್ಕಿಂತಲೂ ಕೆಳಗಿಳಿಯುವ ಕೂದಲಿರುವ ದೀದಿ.

"ಇಂದೂ ದೀದಿ."

* * *

## ಅಧ್ಯಾಯ ೨೪

# ಚೇತರಿಸಿಕೊಂಡ ಗುರುದೇವ್‌ಸಿಂಗ್

ಹೊರಗೆ ಕಾರ್ ಬಂದು ನಿಂತದ್ದಾಗಲೀ ಅದರಿಂದ ಅಂಗದ್ ಇಳಿದದ್ದಾಗಲೀ ಗುರುದೇವ್‌ಸಿಂಗ್‌ಗೆ ಗೊತ್ತಾಗಲಿಲ್ಲ. ರಾತ್ರಿಯಿಡೀ ನಿದ್ರಿಸಲಾಗದೆ ಆತ ಹಾಸಿಗೆಯಲ್ಲಿ ಅತ್ತಿತ್ತ ಹೊರಳಾಡುತ್ತಲೇ ಇದ್ದ. ಶಾರೀರಿಕ ನೋವು ಹೆಚ್ಚಿನದಾಗಿರಲಿಲ್ಲ. ಆದರೆ, ಜನರೂ ಸರಕಾರವೂ ಸರಕಾರಿ ನೌಕರರೂ ತಾನು ಸಿಕ್ಖ್ ಸಮಾಜದಲ್ಲಿ ಹುಟ್ಟಿದವನೆಂಬ ಒಂದೇ ಕಾರಣಕ್ಕಾಗಿ ತನ್ನ ಪ್ರಾಮಾಣಿಕತೆಯನ್ನು ಶಂಕಿಸತೊಡಗಿದ್ದಾಗಲೇ ಆತನ ಮನಸ್ಸಿಗೆ ನೋವಾಗಿತ್ತು. ಮೊದಮೊದಲು ಸಮಸ್ಯೆ ಅಷ್ಟೊಂದು ಕಠಿಣವಾಗಿರಲಿಲ್ಲ. ಆದರೆ ದಿನಗಳೆದಂತೆ ಅದರ ಕಹಿ ಮತ್ತು ಮೊನಚು ಹೆಚ್ಚುತ್ತಲೇ ಇವೆ.

ಏನಿದೆ ಇದಕ್ಕೊಂದು ಪರಿಹಾರ? ಕೇವಲ ಗುರುದ್ವಾರಗಳ ಆವರಣ ಗೋಡೆಗಳ ಒಳಾಂಗಣಕ್ಕಷ್ಟೇ ಸೀಮಿತವಾಗಿದ್ದ ಸಿಕ್ಖ್ ರಾಜಕಾರಣ ಹಂತಹಂತಗಳಾಗಿ ಮತಪೆಟ್ಟಿಗೆಗಳತ್ತವೂ ಬೀದಿಗಳತ್ತವೂ ವ್ಯಾಪಿಸುವುದರೊಂದಿಗೆ ಸಿಕ್ಖ್ ಧರ್ಮ, ಸಿಕ್ಖ್ ರಾಜಕಾರಣ ಮತ್ತು ಸಿಕ್ಖರ ದೈನಂದಿನ ಜೀವನ ಒಂದರೊಡನೊಂದು ಬೆರೆತುಕೊಂಡವು.

ಪಂಚ ನದಿಗಳು ಹರಿಯುತ್ತಿರುವ ನಾಡಿನಲ್ಲಿ ಇದ್ದಕ್ಕಿದ್ದಂತೆ ಒಂದು ದಿನ ನೆತ್ತರ ತೊರೆಗಳು ಹರಿಯತೊಡಗಿದುವು. ನಾಡಕೋವಿಗಳೂ ಚೀನಾ ಮತ್ತು ಪಾಕಿಸ್ತಾನದಿಂದ ಗಡಿ ದಾಟಿ ಬಂದ ಮೆಷಿನ್‌ಗನ್‌ಗಳೂ ಸದ್ದುಂಟು ಮಾಡತೊಡಗಿದವು. ಸಾವು ಅದರ ತಾಂಡವ ನೃತ್ಯವನ್ನು ಮುಂದುವರಿಸುತ್ತಲೇ ಬಂದಿತ್ತು. ಕೊಲೆಯ ಗರ್ಜನೆಗಳು ಮೊಳಗಿದವು. ಒಂದು ಕೊಲೆ ಅನೇಕ ಕೊಲೆಗಳ ಸರಪಳಿಯನ್ನೇ ಜಗ್ಗಿತ್ತು. ಒಂದು ಇಡಿಯ ಜನಾಂಗವೇ ಭಯದೊಂದಿಗೆ, ಗಲಿಬಿಲಿಯೊಂದಿಗೆ ದಿನದೂಡಬೇಕಾಯಿತು. ಪಂಜಾಬಿನ ಇಡಿಯ ಯುವಜನತೆಯೇ ಮುಖ್ಯ ಪ್ರವಾಹದಿಂದ ಬೇರ್ಪಟ್ಟಿತ್ತು. ಅವರು ಆಡಳಿತ ವರ್ಗಕ್ಕೂ ಭಾರತೀಯ ಜನತೆಗೂ ಸವಾಲೊಡ್ಡಿದರು. ರಾಜಕೀಯ ನಾಯಕತ್ವ ಅವರಿಂದ ದೂರ ಸರಿಯಿತು. ಕೊಳ್ಳೆ, ಕೊಲೆಗಳು ಅವರ ಹಾಬಿಯಾದವು. ಮತಪುರೋಹಿತರು ಆ ಉಗ್ರರಿಗೆ



ಆಶ್ರಯವನ್ನೂ ಪರೋಕ್ಷವಾಗಿ ನೆರವನ್ನೂ ನೀಡಲು ನಿರ್ಬಂಧಿತರಾದರು. ಜಾತೇದಾರ್‌ಗಳೂ ಗ್ರಂಥಿಗಳೂ ಜ್ಞಾನಿಗಳೂ ಉಗ್ರರಿಗೆ ಮತೀಯ ಪ್ರಭಾವಳಿಗಳನ್ನು ದಯಪಾಲಿಸಿದರು.

ಈ ಸಂದರ್ಭಗಳೆಲ್ಲ ವಿವೇಕಿಗಳಾದ ಹಿರಿಯರೂ ಬುದ್ಧಿಜೀವಿಗಳೂ ಮೌನವಹಿಸಿದರು–ತಾವು ಮಾಡತಕ್ಕದ್ದು ಏನೂ ಇಲ್ಲ ಎಂಬಂತೆ. ಸರಕಾರದ ಹಾಗೂ ಉಗ್ರವಾದಿಗಳ ನಡುವೆ ಸೌಹಾರ್ದದ ಭಾಷೆಯಲ್ಲಿ ಮಾತಾಡಲೂ ಯಾರೂ ಮುಂದೆ ಬರಲಿಲ್ಲ; ಯಾರೂ ಅದಕ್ಕಾಗಿ ಮುಂದಾಳ್ತನ ವಹಿಸಲಿಲ್ಲ. ತಾನೂ ಒಳಗೊಂಡ ಇಂಟೆಲಿಜೆನ್ಷ್ಯ ಕೂಡ ದೂರದಲ್ಲೇ ಉಳಿದುಕೊಂಡಿತ್ತು. ಅಂಗದ್‌ನ ಹಾಗೆ ಸುಶಿಕ್ಷಿತರಾದ, ದೂರದೃಷ್ಟಿ ಹೊಂದಿದ್ದ ಯುವಕರು ವೇದಿಕೆಗೆ ಬರಲಿಲ್ಲ. ಗೋಲಿಗಿಂತ ಗಲ್ ದೀರ್ಘಕಾಲೀನ ತಳಹದಿಯ ಮೇಲೆ ಹೆಚ್ಚು ಫಲಕಾರಿಯಾಗುತ್ತದೆ ಎಂಬುದನ್ನು ಉಗ್ರವಾದಿಗಳಿಗೆ ಮನವರಿಕೆ ಮಾಡಿಸಲು ಯಾವ ಪ್ರಯತ್ನವೂ ಈ ತನಕ ನಡೆದಿಲ್ಲ.

ಚಿಂತೆಗಳು ತಲೆಯೊಳಗೆ ದುಂಬಿಗಳ ಹಾಗೆ ಗುಂಯಿಗುಟ್ಟಿದವು. ಸರಕಾರಿ ನೌಕರಿ, ಸರಕಾರಿ ಬಂಗಲೆ ಹಾಗೂ ಇತರ ಸುಖ ಸೌಲಭ್ಯಗಳನ್ನು ಹೊಂದಿರುವ ತಾನು ಕೂಡ ಏನಾದರೂ ಮಾಡಬಹುದಾಗಿತ್ತು. ಅತ್ಯುತ್ತಮ ಪಬ್ಲಿಕ್ ಸ್ಕೂಲ್ ಮತ್ತು ಕಾಲೇಜ್‌ಗಳಲ್ಲಿ ಓದಿರುವ ಅಂಗದ್ ಮತ್ತು ಅಂಗದ್‌ನಂತಹ ಅಸಂಖ್ಯ ಯುವಕರು ಯಾಕೆ ಕರ್ತವ್ಯ ವಿಮುಖರಾಗಿದ್ದಾರೆ? ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳಲಾಗದೆ, ಮುಂಜಾವದ ಯಾವುದೋ ಹೊತ್ತಿನಲ್ಲಿ ಗುರುದೇವ್‌ಸಿಂಗ್ ಮಂಪರಿಗೊಳಗಾದನು. ಅಶಾಂತವಾದ ನಿದ್ದೆ ಯಾವ್ಯಾವುದೋ ಭಯಾನಕ ಕನಸುಗಳು ಆತನನ್ನು ಕಾಡಿದವು. ಪರಸ್ಪರ ಸಂಬಂಧವಿಲ್ಲದ ಸ್ಥಳ ಕಾಲ ಸಾಂಗತ್ಯ ಇಲ್ಲದ ಕನಸುಗಳು. ಹೊಗೆಯಾಡುತ್ತಿರುವ ಚಿತೆಗಳು–ಮಾತಾಡುತ್ತಿರುವ ಅಸ್ಥಿಪಂಜರಗಳು. ಏಕಾಂತವಾದ ಮರಳ ಹರವಿನಲ್ಲಿ ಬೀಸಿ ಹೊಡೆಯುತ್ತಿರುವ ಸುಂಟರಗಾಳಿಯಲ್ಲಿ ಸಿಲುಕಿ ತಪ್ಪಿಸಿಕೊಳ್ಳಲಾಗದೆ ಒದ್ದಾಡುತ್ತಿರುವ ತಾನು. ಭಯಾನಕ ಕನಸುಗಳದ್ದೇ ಮುಂದುವರಿಕೆಯೆಂಬಂತೆ, ಎಚ್ಚರದ ಒತ್ತಿನಲ್ಲೇ ಕಂಡ ಕನಸು ಮನಸ್ಸಿಗೆ ಹೊಳೆಯುತ್ತಾ ಇದೆ. ನಿಜಕ್ಕೂ ಅದೊಂದು ಕನಸು ಹೌದೆ? ತನ್ನ ಪ್ರಜ್ಞೆ ಮತ್ತು ಪ್ರಜ್ಞಾಹೀನತೆಗಳ ಎಲ್ಲೆಗಳು ಪರಸ್ಪರ ಕರಗಿ ಇಲ್ಲದಾಗಿಬಿಟ್ಟ ಯಾವುದೋ ಸ್ಥಿತಿಯಲ್ಲಿ ಆ ಚಿತ್ರದ ಮೂರ್ತತೆ ಹೆಚ್ಚಿತ್ತು. ಭಯಾನಕವಾಗಿತ್ತು ಅದರ ಆರಂಭ–ಆದರೆ ತಾತ್ಕಾಲಿಕ ಸಮಸ್ಯೆಯ ವಿಹ್ವಲತೆಯಲ್ಲಿದ್ದೂ ಆ ಕನಸಿಗೆ ಯಾವಾಗಲೋ ಒಂದು ಪರಿಮಳ ಪ್ರಾಪ್ತವಾಗಿತ್ತು. ಎಚ್ಚರಗೊಂಡಾಗ ತಾನು ಅನಿರ್ವಚನೀಯವಾದ ಸ್ವಸ್ಥತೆ ಮತ್ತು ಶಾಂತಿಯನ್ನು ಅನುಭವಿಸಿದೆ. ಯಾವುದೊ ದಿವ್ಯಸಾನ್ನಿಧ್ಯದ ಪ್ರಭಾವಳಿ ತನ್ನನ್ನು ಮುಗ್ಧನನ್ನಾಗಿ ಮಾಡುತ್ತಿರುವಂತೆ ಭಾಸವಾಯ್ತು. ಯಾವುದೋ

ಅಮೃತವಾಣಿಯ ಸಂಗೀತ ಕಿವಿಗಳಲ್ಲಿ ಅನುರಣಿಸಿತು.

ಅಪರಿಚಿತ ದಾರಿಗುಂಟ ತಾನು ಮತ್ತು ಅಂಗದ್ ನಡೆಯುತ್ತಾ ಇದ್ದೆವು. ದೃಷ್ಟಿಗೆಟುಕುವಷ್ಟೂ ದೂರದ ತನಕ ವಿವಿಧ ಗಾತ್ರದ ಹುಲ್ಲುಗಾವಲುಗಳು ಹಬ್ಬಿಕೊಂಡಿದ್ದುವು. ಹುಲ್ಲು ಮಾಳದ ಹಸುರಿನಲ್ಲಿ ಹರಿದು ಹಬ್ಬುತ್ತಾ ಇದೆ ಬೆಳದಿಂಗಳು. ಸುತ್ತಲೂ ಮೌನ ಹೆಪ್ಪುಗಟ್ಟಿದೆ. ಹುಲ್ಲುಗಾವಲುಗಳನ್ನು ಸುತ್ತುವರಿಯುತ್ತಾ ಇದೆ ಕಾಲುಹಾದಿ–ಕವಲುಗಳೇ ಇಲ್ಲದ ಕಾಲುಹಾದಿ. ಎಷ್ಟೋ ಹೊತ್ತು ನಡೆದಿರಬೇಕು. ತಿಟ್ಟುಗಳ ಮೂಲಕವೂ ತೆವರುಗಳ ಮೂಲಕವೂ ಸಾಗುತ್ತಲೇ ಇರುವ ಕಾಲುಹಾದಿ. ಮೊದಲು ಅನುಮಾನ ಹುಟ್ಟಿಕೊಂಡದ್ದು ಅಂಗದ್‌ಗೆ:

ಡ್ಯಾಡೀ ಈ ಹಾದಿ ಎಲ್ಲಿಗೂ ತಲಪುತ್ತಾ ಇಲ್ಲವಲ್ಲ?

ಮಗನ ಮಾತಿನಲ್ಲಿ ಭಯ ಬೆರೆತಿತ್ತು. ತಾನು ಸಾಂತ್ವನ ಹೇಳಿದ್ದೆ:

ಎಷ್ಟೋ ಕಾಲದಿಂದ ಎಷ್ಟೋ ಜನರು ನಡೆದ ಹಾದಿ ಇದು. ಎಲ್ಲಾದರೂ ತಲಪದೆ ಇರಲಾರದು.

ಡ್ಯಾಡೀ, ನಾವು ಇಲ್ಲೆಲ್ಲಾದರೂ ಕುಳಿತುಕೊಳ್ಳೋಣ.

ಪುತ್ತರ್... ನಾವು ಕುಳಿತಿರಕೂಡದು. ಈ ನಿರ್ಜನ ಸ್ಥಳದಲ್ಲಿ ಕುಳಿತಿರುವುದು ಸರಿಯಲ್ಲ. ನಾವು ನಿಧಾನವಾಗಿ ನಡೆಯೋಣ.

ಹಸಿವಾಗುತ್ತಿದೆ, ನೀರಡಿಕೆಯಾಗುತ್ತಿದೆ, ದಣಿವಾಗುತ್ತಿದೆ....

ಮಗನ ಮಾತುಗಳಲ್ಲಿ ಅಸಹಾಯಕತೆ, ನೋವು ಮತ್ತು ಅಸಹನೆ.

ಆಗ ದೂರದಲ್ಲೆಲ್ಲೋ ಒಂದು ಚಲನೆ ಗೋಚರಿಸಿತ್ತು. ಮಬ್ಬು ಬೆಳದಿಂಗಳಿನಲ್ಲಿ ಒಂದು ಬೆಳಕಿನ ವೃತ್ತ ಕಾಣಿಸಿತು. ನಾವು ನಡಿಗೆಯ ವೇಗ ಹೆಚ್ಚಿಸಿದೆವು. ಹಾದಿಯ ಅಂಚಿನಲ್ಲಿ ಪಟ್ಟೆ ವಸ್ತ್ರ ಹೊದಿಸಲಾದ ಒಂದು ಹೆಣ. ಪಕ್ಕದಲ್ಲೇ ಕುಂಕುಮ ಬಣ್ಣದ ನಿಲುವಂಗಿ ತೊಟ್ಟ ಓರ್ವ ಸನ್ಯಾಸಿ. ಸನ್ಯಾಸಿಯ ಮುಖವನ್ನು ಸೂಕ್ಷ್ಮವಾಗಿ ಗಮನಿಸಿದೆ–ಮಡಿಲಿನತ್ತ ಚಾಚಿಕೊಂಡಿರುವ ಬಿಳಿಗಡ್ಡ. ಅರೆ ತೆರೆದ ಕಣ್ಣುಗಳು, ಕೊರಳಿನಲ್ಲಿ ರುದ್ರಾಕ್ಷಿ ಸರಗಳು. ತಲೆಯ ಸುತ್ತಲೂ ಪಸರಿಸಿಕೊಂಡಿರುವ ಪ್ರಭಾವಳಿಯಿಂದಾಗಿ ಆ ಮುಖ ಪರಿಚಿತವೆನಿಸಿತ್ತು. ಸಿಕ್ಖರ ಮನಸ್ಸಿನಲ್ಲಿ ಯಾವತ್ತೂ ಕಂಗೊಳಿಸುತ್ತಿರುವ ಮುಖ: ನಾನಕ್‌ದೇವನ ಮುಖ!

ಅವರ ಪಾದಕ್ಕೆರಗಿದೆವು. ಅಂಗದ್‌ನ ತಲೆಮೇಲೆ ಕೈ ಇರಿಸಿ ನಾನಕ್ ಗುರು ಅರುಹಿದರು:

ನಿನಗೆ ಹಸಿವಾಗುತ್ತಿದೆ ಅಲ್ವೆ?

ಹೌದು. ಬಾಬಾ.

ಆ ಹೊದ್ದಿಕೆಯ ಅಡಿಯಲ್ಲಿ ಕೊಳೆತು ನಾರುವ ಒಂದು ಹೆಣ ಇದೆ. ನೀನದನ್ನು ತಿನ್ನು. ನಿನ್ನ ಹಸಿವೆ ಇಂಗುತ್ತದೆ.



ತಾನು ಬೆಚ್ಚಿ ಬಿಟ್ಟೆ. ಆದರೆ ಅಂಗದ್‌ನ ಮುಖ ಶಾಂತವೂ ಪ್ರಸನ್ನವೂ ಆಗಿತ್ತು.

ಹೇಳಿ ಬಾಬಾ. ನಾನು ಎಲ್ಲಿಂದ ತಿನ್ನತೊಡಗಲಿ ಕಾಲಬದಿಯಿಂದಲೊ ತಲೆಯಬದಿಯಿಂದಲೊ?

ಗುರುವಿನ ತುಟಿಗಳಿಂದ ನಗೆಯ ಬೆಳದಿಂಗಳು ಪಸರಿಸಿತ್ತು. ಪುನಃ ಆಜ್ಞೆ ಹೊರಟಿತ್ತು:

ತಲೆಬದಿಯಿಂದಲೂ ಅಲ್ಲ, ಕಾಲಬದಿಯಿಂದಲೂ ಅಲ್ಲ. ಮಧ್ಯದಿಂದ.

ಅಂಗದ್ ಶವ ವಸ್ತ್ರದ ಮಧ್ಯಭಾಗವನ್ನು ಮೇಲಕ್ಕೆತ್ತಿ ತಿನ್ನತೊಡಗಿದನು.

ತನ್ನ ಕಣ್ಣುಗಳೂ ಘ್ರಾಣೇಂದ್ರಿಯವೂ ತನಗೆ ಮೋಸ ಮಾಡುತ್ತಿವೆಯೆ? ಘಮಘಮಿಸುತ್ತಿದೆ ದಿವ್ಯ ಪರಿಮಳ–ಭೀತಿಯ ಹಾಗೂ ಅನುಭೂತಿಯ ಗಲಿಬಿಲಿಯಲ್ಲಿ ದಣಿದು ನಿಲ್ಲಲಿಕ್ಕಷ್ಟೇ ತನಗೆ ಸಾಧ್ಯವಾದದ್ದು.

ತನ್ಮಧ್ಯೆ ಗುರುವರ್ಯರು ಶವ ವಸ್ತ್ರವನ್ನು ಸರಿಸಿದರು. ಶವವಸ್ತ್ರದ ಅಡಿಯಲ್ಲಿ ಹೆಣವಿಲ್ಲ. ಬದಲಾಗಿ ಚಿಕ್ಕ ಗಾತ್ರದ ಹಾಗೂ ದೊಡ್ಡ ಗಾತ್ರದ ಕೋವಿಗಳು, ಖಡ್ಗಗಳು, ಕಠಾರಿಗಳು.

ಹೂವೆಸಳಿನ ಮರ್ಮರದ ಹಾಗೆ ಪುನಃ ದಿವ್ಯವಾಣಿ:

ಮಗೂ, ಇವನ್ನೆಲ್ಲ ಎತ್ತಿ ಆ ಗುಡ್ಡದ ಇಳಿಜಾರಿನತ್ತ ಬಿಸಾಕಿ ಬಿಡು.

ಪಟ್ಟೆ ಶವವಸ್ತ್ರವನ್ನು ಎರಡಾಗಿ ಮಡಚಿ ಅಂಗದ್ ಅದರಲ್ಲಿ ಶಸ್ತ್ರಾಸ್ತ್ರಗಳನ್ನು ಒಂದೊಂದಾಗಿ ತೆಗೆದಿರಿಸಿದ. ಬಳಿಕ ಮೂಟೆ ಕಟ್ಟಿ ಗುಡ್ಡದ ಶಿಖರದತ್ತ ನಡೆದ.

ಅಂತರಿಕ್ಷದಲ್ಲಿ ಅಮೃತವಾಣಿ ಆಷಾಢದ ತುಂತುರು ಮಳೆಯ ಹಾಗೆ ತೊಟ್ಟಿಕ್ಕಿದವು:

ನಿನ್ನ ಮನಸ್ಸನ್ನು ಹೊಲವನ್ನಾಗಿಸು.
ಸತ್ಕರ್ಮಗಳನ್ನು ಕೃಷಿಯನ್ನಾಗಿಸು.
ಸತ್‌ನಾಂ ಅನ್ನು ಬೀಜವನ್ನಾಗಿಸು.
ವಿನಯದಿಂದ ಬೇಲಿ ನಿರ್ಮಿಸು.
ಪ್ರೀತಿಯಿಂದ ಬೀಜಗಳು ಮೊಳಕೆಯೊಡೆಯಲಿ.

ಕಣ್ಣು ಬಿಟ್ಟಾಗ ಹೆಂಡತಿ ಚಹಾ ಹಿಡಿದುಕೊಂಡು ತನ್ನನ್ನು ದಿಟ್ಟಿಸುತ್ತಾ ಇದ್ದಳು.

ಅವಳು ಹಣೆ ಮುಟ್ಟಿ ನೋಡಿದಳು. ಜ್ವರವಿಲ್ಲ. ನಿದ್ದೆಯಲ್ಲಿ ಏನೇನೋ ಹೇಳುತ್ತಿರುವುದು ಕೇಳಿ ನಾನು ಹೆದರಿಬಿಟ್ಟಿದ್ದೆ. ಅವಳು ತುಸು ಆತಂಕದೊಂದಿಗೆ ಹೇಳಿದಳು.

ಏನೇನೊ ಕನಸು ಬಿದ್ದಿತ್ತು. ಚಹಾ ಚಪ್ಪರಿಸಿ ಕುಡಿಯುತ್ತಾ ಗುರುದೇವ್

ಹೇಳಿದರು.

ಆಗಲೂ ಆ ದಿವ್ಯ ಸಾನ್ನಿಧ್ಯ ತನ್ನನ್ನು ಸುತ್ತುವರಿದು ಮುತ್ತಿಕೊಂಡಿರುವಂತೆ ಗುರುದೇವ್‌ಗೆ ಅನ್ನಿಸಿತು. ಆ ಅಮೃತವಾಣಿಯ ತಿರುಳನ್ನರಸುತ್ತ ಆತ ಗಾಢವಾದ ಚಿಂತನೆಯಲ್ಲಿ ಮಗ್ನನಾದನು. ಆ ಕನಸಿನ ಮೂಲಕ ಗುರುನಾನಕರು ತನಗೆ ಸೂಚಿಸಿದ್ದಾದರೂ ಏನು? ಸಿಕ್ಖರಿಗೆ ಆಯುಧಗಳಿಂದ ಹಿತವಾಗುವುದಿಲ್ಲ ಎಂದಿರಬಹುದೆ?

ಅಥವಾ ಮಗನನ್ನು ಭಯೋತ್ಪಾದಕರ ಮಧ್ಯಕ್ಕೆ ಕಳುಹಿಸಿ ಅವರನ್ನು ನಿರಾಯುಧರನ್ನಾಗಿ ಮಾಡಲು ಪ್ರೇರೇಪಿಸು ಎಂದು ಸೂಚಿಸಿದ್ದಿರಬಹುದೆ?

ಆಳವಾಗಿ ಯೋಚಿಸಿದಾಗ ಆ ಕನಸಿನಲ್ಲಿ ಅಸಾಮಾನ್ಯವಾಗಿ ಏನೂ ಇಲ್ಲವೆಂದು ಆತನಿಗೆ ಅನ್ನಿಸಿತು.

ತನ್ನ ಏಕಮಾತ್ರ ಪುತ್ರನಿಗೆ ಎರಡನೆಯ ಗುರು ಅಂಗದ್‌ನ ಹೆಸರಿಡಲು ತನ್ನನ್ನು ಪ್ರೇರೇಪಿಸಿದ್ದು ಅವನಲ್ಲಿ ಎಳವೆಯಲ್ಲೇ ಕಾಣಿಸಿದ್ದ ವಿಧೇಯತೆಯಾಗಿತ್ತು. ಗುರುಗ್ರಂಥ ಸಾಹಿಬ್ ಬಿಡಿಸಿದಾಗ ಮೊದಲ ಅಕ್ಷರ ಅ ಆಗಿತ್ತು. ವಿಧೇಯತೆಯಿಲ್ಲದ ಸ್ವಂತ ಮಕ್ಕಳಿಗೆ ಗುರುಪಟ್ಟ ಕಟ್ಟಲು ನಾನಕ್ ಬಾಬಾ ನಿರಾಕರಿಸಿದ್ದರು. ಲೇನನು ಶ್ರೀಮಂತ ವ್ಯಾಪಾರಿಯೊಬ್ಬನ ಮಗನಾಗಿದ್ದನು. ಜ್ವಾಲಾಮುಖಿಯಲ್ಲಿನ ದುರ್ಗಾಜಿಯ ಉಪಾಸಕನಾಗಿದ್ದನು ಲೇನ. ಭಾಯಿಲೇನ ಗುರುನಾನಕರನ್ನು ಭೇಟಿಯಾದದ್ದು ಆಕಸ್ಮಿಕವಾಗಿಯಾಗಿತ್ತು. ಮೊದಲ ಭೇಟಿಯಲ್ಲೇ ಲೇನನು ಗುರುವಿನ ದಿವ್ಯತೇಜಸ್ಸಿನಿಂದ ಆಕರ್ಷಿತನಾಗಿದ್ದ; ಗುರು ಕೂಡ, ತಮ್ಮ ಮೊದಲ ನೋಟದಲ್ಲೇ ಈತನೇ ತನ್ನ ಉತ್ತರಾಧಿಕಾರಿ ಎಂದು ನಿರ್ಧರಿಸಿದ್ದರಲ್ಲದೆ ಹೇಳಿಯೂ ಇದ್ದರು; ಕೊನೆಗೆ ನೀನು ಬಂದಿದ್ದೀಯೇ, ನನ್ನ ಸಾಲ ವಸೂಲಿಗೆ.

ಲೇನ ಎಂದರೆ ಸಾಲ ವಸೂಲಿ ಎಂದೆಲ್ಲ ಅರ್ಥಗಳಿವೆ.

ಆದರೂ ಗುರು, ಲೇನನನ್ನು ಕಠಿಣ ಪರೀಕ್ಷೆಗಳ ಬಳಿಕವಷ್ಟೇ ತಮ್ಮ ಉತ್ತರಾಧಿಕಾರಿಯನ್ನಾಗಿ ನೇಮಿಸಿದ್ದರು.

ಒಮ್ಮೆ ಕರ್ತಾರ್‌ಪುರ್‌ನ ತನ್ನ ಹಳ್ಳಿಯಿಂದ ಬೆಲೆಬಾಳುವ ಪಟ್ಟೆ ವಸ್ತ್ರಗಳನ್ನು ಧರಿಸಿ ಭಾಯಿ ಲೇನನು ಗುರುವಿನ ಮನೆಗೆ ಹೋಗಿದ್ದನು. ಗುರು ಆಗ ಗದ್ದೆಯಲ್ಲಿ ಹುಲ್ಲು ಕೊಯ್ಯುತ್ತಾ ಇದ್ದರು. ಲೇನನು ಅವರ ಬಳಿಗೆ ಹೋದನು. ಮಣ್ಣೂ, ಕೆಸರೂ ಮೆತ್ತಿಕೊಂಡಿರುವ ಮೂರು ಹೊರೆಗಳನ್ನು ಗುರು ಕಟ್ಟಿ ಇಟ್ಟಿದ್ದರು. ಒಂದೊಂದು ಹೊರೆಯೂ ಭಾರವಾದುದಾಗಿತ್ತು. ಗುರು ತಮ್ಮಷ್ಟಕ್ಕೆ ಎಂಬಂತೆ ಹೇಳಿದರು: ಯಾರು ಈ ಹೊರೆಗಳನ್ನು ಮನೆಗೆ ತಲಪಿಸುತ್ತಾರೊ?

ಬೆಲೆಬಾಳುವ ವಸ್ತ್ರಗಳನ್ನು ಕಡೆಗಣಿಸಿ ಲೇನನು ಮೂರು ಹೊರೆಗಳನ್ನೂ ತಲೆಮೇಲೆ ಹೊತ್ತುಕೊಂಡು ಮನೆಗೆ ತಲಪಿಸಿದನು. ಗುರುಪತ್ನಿ, ಮಾತಾ ಸುಲಕ್ಷಣೆಗೆ



ಲೇನನ ಪಟ್ಟೆ ವಸ್ತ್ರಗಳಲ್ಲಿ ಪೂರ್ತಿ ಕೆಸರನ್ನು ಕಂಡು ವಿಪರೀತ ಕೆಡುಕೆನಿಸಿತ್ತು. ಕೊಳೆಗಳು ಮೆತ್ತಿಕೊಂಡಿರುವುದಷ್ಟೇ ಅಲ್ಲ. ಒಬ್ಬ ಆಳು ಹೊರುವಷ್ಟು ಭಾರ ಒಂದು ಹೊರೆಗೇ ಇದೆ. ಲೇನನ ತಲೆ ಮೇಲೆ ಅಂಥ ಮೂರು ಹೊರೆಗಳು. ಆಕೆ ಗುರುವನ್ನು ಗದರಿದರು:

ಇಷ್ಟೆಲ್ಲ ಭಾರವನ್ನು ಲೇನನ ತಲೆ ಮೇಲೆ ಯಾಕೆ ಹೊರೆಸಿದ್ದು? ಆ ಪಟ್ಟೆ ವಸ್ತ್ರಗಳೆಲ್ಲ ಕೊಳೆಯಾಯ್ತಲ್ಲ? ಗುರು ಶಾಂತವಾಗಿ ಹೇಳಿದರು:

ಮನುಷ್ಯ ಜೀವನದ ಕಷ್ಟಕೋಟಲೆಗಳ ಹೊರೆ ಅವು. ಆ ವಸ್ತ್ರಗಳಿಗೆ ಅಂಟಿಕೊಂಡಿರುವುದು ಕೆಸರಲ್ಲ ಸ್ವರ್ಗದ ವಿಭೂತಿ.

ಶಿಶಿರದ ಕಠಿಣವಾದ ಚಳಿಯಿದ್ದ ರಾತ್ರಿಯಲ್ಲಿ ಸುರಿದ ಹುಚ್ಚುಮಳೆಗೆ ಮನೆಯ ಗೋಡೆ ಪೂರಾ ಜರಿದು ಬಿದ್ದಿತ್ತು. ಗುರು ಮಕ್ಕಳನ್ನೂ ಶಿಷ್ಯರನ್ನೂ ಕರೆದೆಬ್ಬಿಸಿ ಕೂಡಲೆ ಗೋಡೆ ಕಟ್ಟಲು ಆಜ್ಞಾಪಿಸಿದರು. ಮಕ್ಕಳು, ಹೊತ್ತು ಬೆಳಗಾದ ಬಳಿಕ ಒಪ್ಪಾರರನ್ನು ಕರೆದು ಕಟ್ಟಿಸಿದರಾಯ್ತು ಎಂದರು. ಈ ಚಳಿಯಲ್ಲಿ ಆ ಕೆಲಸ ಮಾಡಲು ತಮಗೆ ಸಾಧ್ಯವಿಲ್ಲವೆಂದು ಅವರು ಕಡ್ಡಿ ಮುರಿದಂತೆ ಹೇಳಿದರು. ಆದರೆ ಲೇನನು, ಮುಂದೆ ಬಂದು ಮಳೆ, ಚಳಿಗಳನ್ನು ಲೆಕ್ಕಿಸದೆ ಗೋಡೆಯ ಕೆಲಸವನ್ನು ಆರಂಭಿಸಿದ. ಕೆಲಸ ಮುಗಿದಾಗ ಗುರು, ಲೇನನ ಕೆಲಸದ ಬಗ್ಗೆ ಅಸಂತೃಪ್ತಿ ಸೂಚಿಸಿದರು: ಗೋಡೆ ವಾಲಿಕೊಂಡಿದೆ. ಅದನ್ನು ಕೆಡವಿ ಪುನಃ ಕಟ್ಟಬೇಕು.

ಲೇನನು ಚಕಾರವೆತ್ತದೆ ಗೋಡೆ ಕೆಡವಿ ಪುನಃ ಕಟ್ಟಿದ. ಆಗಲೂ ಗುರುವಿಗೆ ತೃಪ್ತಿಯಾಗಲಿಲ್ಲ. ಲೇನನು ಕೆಲಸ ಮುಂದುವರಿಸಿದನು. ಗುರುವಿನ ಮಕ್ಕಳು ಆತನನ್ನು ಗೇಲಿ ಮಾಡಿದರು. ಅದಾವುದನ್ನೂ ಲೆಕ್ಕಿಸದೆ ಲೇನನು ಗುರುವಿಗೆ ತೃಪ್ತಿಯಾಗುವ ತನಕವೂ ಕೆಲಸ ಮಾಡಿಯೇ ಮಾಡಿದನು.

ಗುರುನಾನಕ್ ತಮ್ಮ ಶಿಷ್ಯನ ವಿಧೇಯತೆಯನ್ನು ಇನ್ನೂ ಒಮ್ಮೆ ಪರೀಕ್ಷಿಸಿದ್ದರು. ತಮ್ಮ ಮಕ್ಕಳನ್ನೂ ಶಿಷ್ಯರನ್ನೂ ಜತೆಗೆ ಕರೆದುಕೊಂಡು ಗುರು ಕಾಡಿಗೆ ಹೊರಟರು. ದಾರಿಯಲ್ಲಿ ಒಂದಷ್ಟು ತಾಮ್ರದ ನಾಣ್ಯಗಳು ಬಿದ್ದುಕೊಂಡಿದ್ದವು. ಶಿಷ್ಯರಲ್ಲಿ ಕೆಲವರು ಆ ತಾಮ್ರದ ನಾಣ್ಯಗಳನ್ನು ಹೆಕ್ಕಿ ಹಿಂದಕ್ಕೇ ಹೋದರು.

ಗುರು ಮತ್ತು ತಂಡ ಮತ್ತಷ್ಟು ಮುಂದೆ ಹೋದಾಗ ದಾರಿಯಲ್ಲಿ ಬೆಳ್ಳಿ ನಾಣ್ಯಗಳು ಕಾಣಿಸಿದವು. ಅವನ್ನೂ ಹೆಕ್ಕಿ ಇನ್ನೂ ಕೆಲವು ಶಿಷ್ಯರು ಅಪ್ರತ್ಯಕ್ಷರಾದರು.

ಪುನಃ ಮುಂದೆ ಸಾಗಿದರು. ನಿರ್ಜನವಾದ ದಾರಿಯಲ್ಲಿ ಬಹಳಷ್ಟು ಚಿನ್ನದ ನಾಣ್ಯಗಳು ಚೆಲ್ಲಿಕೊಂಡಿದ್ದುವು. ತಂಡದ ಉಳಿದ ಮಂದಿಯಲ್ಲಿ ಹೆಚ್ಚಿನವರು ಚಿನ್ನದ ನಾಣ್ಯದ ಹೊಳಪಿಗೆ ಮನಸೋತರು.

ಕೊನೆಗೆ ಗುರುವಿನ ಜತೆಯಲ್ಲಿ ಲೇನನೂ ಮತ್ತಿಬ್ಬರು ಶಿಷ್ಯರೂ ಮಾತ್ರ

ಉಳಿದರು. ಗುರು ತಮ್ಮ ಪರೀಕ್ಷೆಯನ್ನು ಮುಂದುವರಿಸಿದರು.

ದಾರಿಯಲ್ಲಿ ಒಂದು ಚಿತೆ ಸಿದ್ಧವಾಗಿತ್ತು. ಹತ್ತಿರದಲ್ಲೇ ವಸ್ತ್ರದಿಂದ ಮುಚ್ಚಲಾದ ಒಂದು ಹೆಣವೂ ಇತ್ತು. ಮಣ್ಣ ಹಣತೆಗಳಲ್ಲಿ ಮಬ್ಬಾಗಿ ಉರಿಯುತ್ತಿತ್ತು ದೀಪ. ಹೆಣ ಕೊಳೆಯತೊಡಗಿತ್ತು. ಸುತ್ತಲೂ ಗಬ್ಬುನಾತ ಹೊಡೆಯುತ್ತಿತ್ತು. ಗುರು ತಮ್ಮ ಶಿಷ್ಯರೊಡನೆ ಹೇಳಿದರು:

ನನ್ನೊಂದಿಗೆ ಪ್ರಯಾಣ ಮುಂದುವರಿಸಬೇಕೆಂದು ಇಚ್ಛಿಸುವವರು ಈ ಗಬ್ಬು ಹೊಡೆಯುತ್ತಿರುವ ಹೆಣವನ್ನು ತಿನ್ನಬೇಕು...

ಶಿಷ್ಯರು ಚಕಿತರಾದರು. ಗುರುವಿನ ಮೇಲಿನ ಪ್ರೀತ್ಯಾದರಗಳು, ಕೊಳೆತು ದುರ್ವಾಸನೆ ಹೊಡೆಯುವ ಹೆಣವನ್ನು ತಿನ್ನುವಷ್ಟು ಮಟ್ಟಿಗೆ ಗಾಢವಾಗಿರಲಿಲ್ಲ. ಅವರು ಹಿಂತಿರುಗಿ ಓಡಿದರು.

ಆದರೆ ಲೇನನಿಗೆ ಅನುಮಾನವೇನೂ ಇರಲಿಲ್ಲ.

ಗುರುದೇವಾ... ಹೇಳಿರಿ. ಎಲ್ಲಿಂದ ಆರಂಭಿಸಲಿ ನಾನು? ಕಾಲಬದಿಯಿಂದಲೊ ತಲೆಯಿಂದಲೊ?

ತತ್‌ಕ್ಷಣ ದುರ್ಗಂಧ ಮಾಯವಾಯಿತು. ಹೊದಿಕೆ ಸರಿಸಿದಾಗ ಕಾಣಿಸಿದ್ದು ತಿಂಡಿ, ತೀರ್ಥಗಳು.

ಲೇನನ ಗುರುಭಕ್ತಿಯಿಂದ ನಾನಕ್ ಸಂತೃಪ್ತರಾದರು. ಅವರು ಉರುಹೊಡೆದರು.

ನೀನು ನನ್ನ ಪ್ರತಿರೂಪವಾಗಿರುವೆ: ನಾನೇ ನೀನಾಗಿರುವೆ. ನೀನೇ ಅಂಗದ್; ನನ್ನದ್ದೇ ಅಂಗ. ಅವರು ಮತ್ತೂ ಹೇಳಿದರು.

ದೇವರಿರುವುದು ಒಂದೇ
ಸತ್ಯ ಅದರ ಹೆಸರು
ಸತ್‌ನಾಮವನ್ನು ಜಪಿಸು
ಅದು ಯಾವತ್ತೂ ಇದ್ದಿತ್ತು
ಈಗಲೂ ಇದೆ
ಯಾವತ್ತೂ ಇರುತ್ತದೆ....

ಖಾಲಿ ಕಪ್ ಹಿಂದೆ ಪಡೆಯುವಾಗ, ಕಳೆದ ದಿನಗಳಲ್ಲಿ ಸದಾ ಹೊತ್ತು ಕಾಣಿಸಿಕೊಂಡಿದ್ದ ನೋವು, ಕಾವುಗಳೆಲ್ಲ ಮಾಯವಾಗಿರುವುದನ್ನು ಆತನ ಪತ್ನಿ ಗಮನಿಸಿದಳು. ಬದಲಾಗಿ ಯಾವುದೊ ಪ್ರಕಾಶದ ಕಾಂತಿ ಆ ಕಣ್ಣುಗಳಲ್ಲಿ ಹೊಡೆಯುತ್ತಿತ್ತು. ನಗೆ ಎಂಬ ಸಿದ್ಧಿಯನ್ನು ಆತ ಮರಳಿ ಪಡೆದಿರುವನು.

ಅಂಗದ್ ಎಲ್ಲಿ?

ಅವನು ಈಗ ಬಂದದ್ದಷ್ಟೇ.



ಅಷ್ಟರಲ್ಲಿ ಟರ್ಕಿಷ್‌ನಿಂದ ಮುಖ ಒರೆಸುತ್ತ ಅಂಗದ್ ಅಲ್ಲಿಗೆ ಬಂದ. ಅವನು ವೇಷ ಬದಲಾಯಿಸಿದ್ದ–ಅಚ್ಚ ಬಿಳಿ ಕುರ್ತಾ ಮತ್ತು ಪೈಜಾಮ, ಕಾಲುಗಳಲ್ಲಿ ಕೋಲಾಪುರ್ ಪಾದರಕ್ಷೆ. ತಲೆಯಲ್ಲಿ ಸಮೃದ್ಧವಾದ ಕೂದಲು ಹೆಗಲಿನ ತನಕ ಹರಡಿಕೊಂಡಿದೆ.

ಪುತ್ತರ್, ನನ್ನ ಪಕ್ಕದಲ್ಲಿ ಬಂದು ಕುಳಿತುಕೊ. ನನಗೆ ನಿನ್ನೊಡನೆ ಒಂದಿಷ್ಟು ಮಾತಾಡಲಿಕ್ಕಿದೆ.

ಅಂಗದ್ ವಿಧೇಯತೆಯೊಂದಿಗೆ ಹಾಗೂ ತುಸು ಅಚ್ಚರಿಯೊಂದಿಗೆ ಅಪ್ಪನ ಪಕ್ಕದಲ್ಲಿ ಮಂಚದ ಮೇಲೆ ಕುಳಿತುಕೊಂಡ. ಅವನ ಹೆಗಲ ಮೇಲೆ ಕೈಯಿರಿಸುತ್ತ ಗುರುದೇವ್‌ಸಿಂಗ್ ಹೇಳತೊಡಗಿದರು.

* * *

## ಅಧ್ಯಾಯ ೨೫

# ರವಿ ಕಂಡ ಇಂದೂ

ರವಿ ಉಡುಗೆ ಬದಲಾಯಿಸಿದ. ಮನೆಯಲ್ಲಿರುವಾಗ ಇತರ ದಿನಗಳಲ್ಲಿ ಒಂದು ಲುಂಗಿಯನ್ನಷ್ಟೇ ಸುತ್ತಿಕೊಳ್ಳುತ್ತಿದ್ದ. ಆದರೆ ಇವತ್ತು ಅದಷ್ಟೇ ಸಾಲದು. ಹೆಂಗಸರೇ ತುಂಬಿರುವರಲ್ಲ ಮನೆಯೊಳಗೆ! ದರ್ಶನ್ ಮತ್ತು ಇಂದೂ ಮಾತ್ರವಲ್ಲ. ಸುನೀಂದರ್ ಮತ್ತು ಮನೀಂದರ್ ಕೂಡ ಹೆಣ್ಣುಗಳ ಹಾಗೆಯೇ ಕಾಣಿಸುತ್ತಿದ್ದಾರೆ– ಉಡುಗೆ ಮತ್ತು ಹಾವಭಾವಗಳಿಂದ ಕೂಡ. ಸ್ವಂತ ಮನೆಯಲ್ಲೆ ತಾನು ಇದ್ದಕ್ಕಿದ್ದಂತೆ ಒಬ್ಬ ಅತಿಥಿಯಾಗಿರುವಂತೆ ಭಾಸವಾಯಿತು ರವಿಗೆ. ಆತ ಅಲ್ಮಾರಾದಿಂದ ಒಂದು ಜುಬ್ಬಾ ತೆಗೆದು ತೊಟ್ಟುಕೊಂಡ. ಬಳಿಕ ಸ್ವಾಗತ ಕೊಠಡಿಗೆ ಬಂದು ಸೋಫಾದ ಮೇಲೆ ಕುಳಿತುಕೊಂಡ.

ದರ್ಶನ್‌ಳ ಹೆಗಲ ಮೇಲೊರಗಿ ಮಗು ಇಷ್ಟರಲ್ಲೇ ನಿದ್ದೆ ಮಾಡತೊಡಗಿತ್ತು. ಅವಳು ಮಗುವನ್ನು ಬೆಡ್ ರೂಮಿನ ಬೆಡ್‌ನಲ್ಲಿ ಮಲಗಿಸಿದ್ದಳು.

ಅಷ್ಟರಲ್ಲಿ ಟ್ರೆಯಲ್ಲಿ ಚಹಾ ಕಪ್‌ಗಳೊಂದಿಗೆ ಸುನೀಂದರ್ ಬಂದ: ಮತ್ತೊಂದು ಟ್ರೆಯಲ್ಲಿ ಬಿಸ್ಕತ್‌ಗಳೊಂದಿಗೆ ಮನೀಂದರ್ ಸಹ.

ಇಂದೂ ಈಗಲೂ ಸ್ನಾನದ ಕೋಣೆಯಲ್ಲೆ ಇರುವಳು. ಮ್ಯೂಸಿಕಲ್ ಬಜರ್ ದನಿಗೈದಾಗ ಮನೀಂದರ್ ಬಾಗಿಲು ತೆರೆದ–ಲೇಡಿ ಡಾಕ್ಟರ್ ಮಿಸ್ ಸಕ್ಸೇನಾ. ಆಕೆ ದರ್ಶನ್‌ಳನ್ನು ಮಲಗುವ ಕೋಣೆಯ ಏಕಾಂತತೆಯಲ್ಲಿ ವಿಶದವಾಗಿ ತಪಾಸನೆ ಮಾಡಿದರು.

ಆಕೆ ದರ್ಶನ್‌ಳಿಗೆ ಸಾಂತ್ವನ ಹೇಳುತ್ತಲೂ ಇದ್ದರು: ನತಿಂಗ್ ಟು ವರಿ, ಜಸ್ಟ್ ಇಮ್ಯಾಜಿನ್ ದಿಸ್ ವಾಸ್ ಆ್ಯನ್ ಆ್ಯಕ್ಸಿಡೆಂಟ್. ಡೋಂಟ್ ಫೀಲ್ ಗಿಲ್ಟಿ. ಜಸ್ಟ್ ಟ್ರೈ ಟು ಫಾರ್ಗೆಟ್ ದ ಥಿಂಗ್ ಲೈಕ್ ಎ ಡ್ರೀಂ. ಯು ವಿಲ್ ಫೀಲ್ ಬೆಟರ್.

ಡಾಕ್ಟರ್ ಹೊರಹೊರಟಾಗ ರವಿ ಆಕೆಯ ಜತೆ ಕೊಂಚ ಮುಂದಕ್ಕೆ ಹೆಜ್ಜೆ ಹಾಕಿದ.

ಡಾಕ್ಟರ್ ವಿವರಿಸಿದರು:

ಇಲ್ಲ, ಭಯಪಡತಕ್ಕದ್ದೇನೂ ಇಲ್ಲ. ಟೆಂಪರೇಚರ್ ನಾರ್ಮಲ್. ಶಾರೀರಿಕವಾದ



ಗಾಯಗಳು ಒಣಗತೊಡಗಿವೆ. ನಾನು ಹೆದರುತ್ತಿರುವುದು ಅವಳ ಮನಸ್ಸಿಗಾದ ಆಘಾತದ ಕುರಿತೇ. ಷಿ ವಿಲ್ ನೀಡ್ ಸಂ ಎಕ್ಸ್‌ಪರ್ಟ್ ಕೌನ್ಸಲಿಂಗ್. ಕೂಡಲೇಬೇಕೆಂದಿಲ್ಲ. ಸಾಕಷ್ಟು ಸಮಯಾವಕಾಶ ಕೊಡಿ, ಷಿ ವಿಲ್ ಕಂ ತ್ರೂ.

ಬಳಿಕ ಒಂದು ಮರುಚಿಂತನೆಯಿಂದೆಂಬಂತೆ ಆಕೆ ಮುಂದುವರಿಸಿದರು: ಪೊಸಿಬಿಲಿಟಿ ಆಫ್ ಪ್ರೆಗ್ನೆನ್ಸಿ ಕೆನಾಟ್ ಬಿ ರೂಲ್ಡ್ ಔಟ್. ಐ ವಿಲ್ ಕೀಪ್ ಹರ್ ಅಂಡರ್ ಅಬ್ಸರ್ವೇಶನ್. ಅಗತ್ಯ ಬಿದ್ದರೆ ಒಂದು ಡಿ ಆ್ಯಂಡ್ ಸಿ ಮಾಡಬಹುದು.

ರವಿ ಮರಳಿ ಸ್ವಾಗತ ಕೊಠಡಿ ತಲಪುವಷ್ಟರಲ್ಲಿ ಇಂದೂಸ್ನಾನ ಮುಗಿಸಿ ಬಂದಿದ್ದಳು.

ಅವಳ ಒದ್ದೆ ಕೂದಲಿನಿಂದ ನೀರಹನಿಗಳು ತೊಟ್ಟಿಕ್ಕುವುದರಲ್ಲಿದ್ದವು.

ಹಲೋ ರವಿ!

ಹಲೋ ಇಂದೂ!

ಅವರು ಒಬ್ಬರನ್ನೊಬ್ಬರು ದಿಟ್ಟಿಸಿದರು, ಒಂದು ಕ್ಷಣ. ಮುಂದಲೆಯ ಕೆಳಬದಿಗಳಲ್ಲಿ ತುಸುನರೆ ಕಾಣಿಸಿಕೊಂಡಿರುವುದರ ಹೊರತು ರವಿಯಲ್ಲಿ ಬದಲಾವಣೆಯೇನೂ ಆಗಿಲ್ಲ. ಹಿಂದಿನಬಾರಿ ಕಂಡಾಗ ತೀರ ಸಪೂರವಾಗಿದ್ದರು. ಆದುದರಿಂದಲೇ ಎತ್ತರ ಹೆಚ್ಚಿಗೆ ಇರುವಂತೆಯೇ ಅನ್ನಿಸಿತ್ತು. ಈಗ ತುಸು ಹೆಚ್ಚಿಗೆ ಇರುವಂತೆಯೂ ಅನ್ನಿಸಿತ್ತು. ಈಗ ತುಸು ತೋರವಾಗಿರುವರು ಎಂದುಕೊಂಡಳು ಇಂದೂ.

ರವಿ ಇಂದೂವನ್ನೂ ಗಮನಿಸುತ್ತಾ ಇದ್ದ. ಲಂಗ ಮತ್ತು ದಾವಣಿಧಾರಿಯಾಗಿದ್ದು ಬಣ್ಣದ ಚಿಟ್ಟೆಯ ಹಾಗೆ ಒಂದೇ ಕಡೆ ಇರಲೊಲ್ಲದ ಹುಡುಗಿಯಲ್ಲ ಈಗ ಇವಳು. ಬಟ್ಟಲುಕಂಗಳಲ್ಲಿ ತಾನು ದೊಡ್ಡವಳಾಗಿದ್ದೇನೆ ಎಂಬ ಭಾವವಿದೆ. ಬಿಳಿ ಬಣ್ಣದಲ್ಲಿ ನೀಲಿ ಶಂಖಪುಷ್ಪಗಳನ್ನು ಅಚ್ಚಿಸಲಾದ ವಾಯಿಲ್ ಸೀರೆ ಇವಳಿಗೆ ಚೆನ್ನಾಗಿ ಒಪ್ಪುತ್ತಿದೆ. ಕಿವಿಯ ದೊಡ್ಡ ರಿಂಗ್‌ಗಳು ಕೋಲು ಮುಖಕ್ಕೆ ಹೆಚ್ಚು ಶೋಭೆಯನ್ನುಂಟು ಮಾಡುತ್ತಿವೆ.

ಚಹಾ ಕುಡಿಯುವುದರ ನಡುವೆ ಅವಳು ತನ್ನ ಸಂಕಷ್ಟಭರಿತ ಪ್ರಯಾಣದ ಅನುಭವಗಳನ್ನು ವಿವರಿಸಿದಳು. ಎಷ್ಟೆಲ್ಲ ನಿರೀಕ್ಷೆಗಳಿರಲಿಲ್ಲ ಊರಿನಿಂದ ಹೊರಟಾಗ. ಹೊರಟ ಬಳಿಕ ಎಷ್ಟೋ ವರ್ಷಗಳೇ ಕಳೆಯಿತೆಂದನ್ನಿಸುತ್ತಾ ಇದೆ. ಹಣೆಯ ಮೂಲೆಯಲ್ಲಿರುವ ಚಿಕ್ಕ ಬಾಸುಂಡೆಯ ಮೇಲೆ ಬೆರಳಾಡಿಸುತ್ತಾ ಅವಳೆಂದಳು: ಬಹುಶಃ ನನ್ನ ತಲೆಗೂ ಪೆಟ್ಟು ಬಿದ್ದಿರಬೇಕು. ಸರ್ದಾರ್ ಬಾಬಾ, ನನ್ನ ರಕ್ಷಣೆಗೆ ಮುನ್ನುಗ್ಗಿ ಮುಂದಿನ ಪೆಟ್ಟುಗಳನ್ನೆಲ್ಲ ಸ್ವತಃ ಪಡೆದಿರಬಹುದು. ಅದೃಷ್ಟವೆಂದೇ ಹೇಳ್ಬೇಕು. ಇತರರ ಮರಣ ಸಂಕಟಗಳನ್ನು ಕಾಣಬೇಕಾಗಿ ಬರಲಿಲ್ಲ. ಎಚ್ಚರಗೊಳ್ಳುವಷ್ಟರಲ್ಲಿ ಪೋರಿ ನನ್ನ ಮಡಿಲಿಗೆ ಬಂದಿದ್ದಳು.

ಅವಳು ವಿರಮಿಸಿದಳು. ಪ್ರವಾಹದ ಮಧ್ಯೆ ಹೆಪ್ಪುಗಟ್ಟಿದ್ದ ಜಲಪಾತದ ಹಾಗೆ ಮಾತು ನಿಂತುಬಿಟ್ಟಿತು. ಕೋಣೆಯೊಳಗೆ ನಿಶ್ಯಬ್ಧತೆ ಮಡುಗಟ್ಟಿತು.

ಅವಳ ತುಟಿಗಳು ಬಿಕ್ಕಳಿಸುತ್ತಿದ್ದುವು. ಕಣ್ಣುಗಳು ತುಂಬಿ ಹರಿದವು. ಮನೀಂದರ್ ಮತ್ತು ಸುನೀಂದರ್ ಬಿಕ್ಕಿ ಬಿಕ್ಕಿ ಅತ್ತುಬಿಟ್ಟರು.

ದರ್ಶನ್ ಮಾತ್ರ ಒಂದು ಪ್ರತಿಮೆಯ ಹಾಗೆ ನಿಶ್ಚಲ ಕುಳಿತಿರುವಳು. ಅವಳ ಕಣ್ಣುಗಳಲ್ಲಿ ಪ್ರತಿಫಲಿಸುತ್ತಾ ಇರುವ ವ್ಯಥೆಯ ತೀವ್ರತೆ ರವಿಗೆ ಗೋಚರಿಸುತ್ತಾ ಇದೆ. ಭಯಾನಕವಾದ ಆ ದುರಂತಗಳಿಗೆ ಹೋಲಿಸಿದರೆ ಇಂದೂವಿಗಾದ ಕೆಡುಕು ಕಡಿಮೆಯೇ. ಅಷ್ಟಾದರೂ ಕರುಣೆ ತೋರಿದ್ದಕ್ಕಾಗಿ ದೇವರನ್ನು ಸ್ತುತಿಸಬೇಕಾಗುತ್ತದೆ.

ಇಷ್ಟಾಗಿಯೂ ಮೊದಲು ಚೇತರಿಸಿಕೊಂಡವಳು ದರ್ಶನ್‌ಳೇ. ಅವಳು ಒಳಕೋಣೆಗೆ ಹೋಗಿ ಯುಡಿಕೊ ಲೋನ್ ಬಾಟಲಿ ಮತ್ತು ಹತ್ತಿಯನ್ನು ಪತ್ತೆಹಚ್ಚಿದಳು. ತುಸುಹತ್ತಿಯನ್ನು ಯುಡಿಕೊಲೋನ್‌ನಲ್ಲಿ ಅದ್ದಿ ಇಂದೂವಿನ ಹಣೆಯ ಬಾತಿರುವುಲ್ಲಿರಿಸಿ ಒತ್ತಿದಳು.

ಹಿತಕರವಾದ ತಂಪು: ಇಂದೂ ಕಣ್ಣುಮುಚ್ಚಿ ಮೆಲ್ಲಗೆ ಸೋಫಾದ ಮೇಲೆ ಒರಗಿ ಕುಳಿತಳು. ದರ್ಶನ್, ಅವಳ ಹಣೆಯ ಮೇಲೆ ಒತ್ತುತ್ತ ಕುಳಿತಳು.

ಕಣ್ಣುಗಳನ್ನು ಪೂರ್ತಿ ಮುಚ್ಚಿಕೊಂಡೇ ಇಂದೂ ಮುಂದುವರಿಸಿದಳು: ಫರೀದಾಬಾದ್ ತಲಪಿ ಟ್ರೈನ್ ನಿಂತಾಗ ಏನು ಮಾಡುವುದೆಂದು ಗೊತ್ತಾಗದೆ ನಾನು ಗೊಂದಲಕ್ಕೊಳಗಾದೆ. ಸೊಂಟದಲ್ಲಿ ಮಗು, ಕೈಯಲ್ಲಿ ಸೂಟ್‌ಕೇಸ್ ಹಿಡಿದು ಲೆಕ್ಕಿಸದೆ ಬೋಗಿಯ ಬಾಗಿಲ ಬಳಿ ತಲಪಿದೆ. ಪ್ಲ್ಯಾಟ್‌ಫಾರ್ಮಿನ ಕಡೆಗಿರುವ ಬಾಗಿಲು ಮುಚ್ಚಿಕೊಂಡಿತ್ತು. ವಿರುದ್ಧ ದಿಕ್ಕಿನ ಬಾಗಿಲು ಪೂರ್ತಿ ತೆರೆದುಕೊಂಡೇ ಇತ್ತು.

ನಾನು ಅವಸರವಸರವಾಗಿ ಟ್ರೈನ್‌ನಿಂದ ಇಳಿದೆ. ಜಲ್ಲಿಕಲ್ಲುಗಳನ್ನು ತುಳಿಯುತ್ತ ರೈಲು ಹಳಿಗಳನ್ನು ಅಡ್ಡಕ್ಕೆ ಹಾಯುತ್ತ ಮರುಬದಿಯ ಪ್ಲ್ಯಾಟ್ ಫಾರ್ಮ್ ತಲಪಿದೆ.

ಸ್ಟೇಶನ್ ಮಾಸ್ಟರ್‌ರನ್ನು ಕಂಡು ವಿಷಯಗಳನ್ನು ಹೇಳಬೇಕೆಂದೇ ಮೊದಲು ಅಂದುಕೊಂಡಿದ್ದೆ. ಮಗುವನ್ನು ಹಕ್ಕುದಾರರಿಗೆ ಒಪ್ಪಿಸಲೂ ಯೋಚಿಸಿದ್ದೆ. ಆದರೆ ಅವರೆಲ್ಲರೂ ಕೊಲೆಗೈಯಲ್ಪಟ್ಟಿರುವರು. ಯಾವುದಾದರೂ ಅನಾಥಾಲಯದಲ್ಲೆ ಕೊನೆಗಾಣಬೇಕಾದೀತು ಈ ಮಗುವಿನ ಮುಂದಿನ ಬದುಕು, ಎಂದನ್ನಿಸಿದಾಗ ಅದಕ್ಕೆ ಮನಸ್ಸು ಒಪ್ಪಲಿಲ್ಲ....

ಅವಳು ವಿರಮಿಸಿದಳು. ದರ್ಶನ್ ಪುನಃ ಹತ್ತಿ ಯುಡಿಕೊಲೋನ್‌ನಲ್ಲಿ ಮುಳುಗಿಸಿ ಹಣೆಗಿಟ್ಟು ತಡವಿದಳು.

ರವಿ ಸಂದೇಹ ಪರಿಹರಿಸಲು ಏನನ್ನೋ ಕೇಳಲು ಹವಣಿಸಿದ. ಬಳಿಕ ಬೇಡವೆಂದುಕೊಂಡ. ಅವಳ ನೆನಪುಗಳ ಕ್ರಮ ತಪ್ಪಿಸುವುದು ಅಸಮಂಜಸವಾದೀತು.



ಒಳಗಡೆ ಮಗು ಅಳುವುದು ಕೇಳಿಸಿದ್ದರಿಂದ ದರ್ಶನ್ ಎದ್ದು ಒಳಗೆ ಹೋದಳು ಹಾಗೂ ಮಗುವನ್ನು ಎತ್ತಿಕೊಂಡು ಮರಳಿ ಬಂದಳು. ದರ್ಶನ್ ಮಗುವಿನ ಕೆನ್ನೆಗಳನ್ನು ಮುದ್ದಿಸಿ ಶಿಶುಗಳಿಗಷ್ಟೇ ಅರ್ಥವಾಗುವ ಭಾಷೆಯಲ್ಲಿ ಏನೇನೋ ಲಲ್ಲೆಗರೆದು ಹೇಳುತ್ತಾ ಇರುವಳು.

ಮಗು ಅಳು ನಿಲ್ಲಿಸಿತು. ಮಗುವಿನ ಗಮನ ಸೆಳೆಯಲು ಯಾವುದಾದರೂ ಆಟಿಕೆಗಳನ್ನು ಹುಡುಕಿ ತೆಗೆಯುವ ಹವಣಿಕೆಯಲ್ಲಿದ್ದಾರೆ ಮನೀಂದರ್ ಮತ್ತು ಸುನೀಂದರ್. ಆಟಿಕೆ, ಗಿಲಿಗಟ್ಟಿಗಳೆಲ್ಲ ಇಲ್ಲಿ ಹೇಗೆ ತಾನೆ ಸಿಕ್ಕೀತು? ಕೊನೆಗೆ ಅವರು ಫ್ಲವರ್ ವಾಸ್‌ನಿಂದ ಎರಡು ಪ್ಲಾಸ್ಟಿಕ್ ಹೂವುಗಳನ್ನು ಆಯ್ದುಕೊಂಡರು. ಮಗು ಅದನ್ನು ನೋಡಿ ಖುಶಿಪಟ್ಟಿತು. ಎಳೆಯರು ಲಲ್ಲೆಗರೆದು ಕಚಗುಳಿಯಿಟ್ಟಾಗ ಮಗು ಪುಟ್ಟ ಹಲ್ಲುಗಳನ್ನು ಹೊರ ತೋರಿಸಿ ಕಿಲಕಿಲನೆ ನಗತೊಡಗಿತು.

ದರ್ಶನ್‌ಳ ಕಣ್ಣುಗಳಲ್ಲಿ ಬೆಳಕು ಹಬ್ಬುತ್ತಿರುವುದನ್ನೂ ಅಲ್ಲಿ ವಾತ್ಸಲ್ಯದ ಒರತೆ ಜಿನುಗುತ್ತಿರುವುದನ್ನೂ ರವಿ ಗಮನಿಸಿದ. ಹೌದು, ಅವಳು ಜೀವನದ ಪುಟ್ಟ ಸಂತೋಷಗಳತ್ತ ಮರಳುತ್ತಾ ಇದ್ದಾಳೆ. ಕೊಲೆಗಳ ಮತ್ತು ಘೋರಾನುಭವಗಳ ಕರಾಳತೆಯಿಂದ ಅವಳು ಮೆಲ್ಲಮೆಲ್ಲಗೆ ಬಿಡುಗಡೆ ಹೊಂದುತ್ತಿದ್ದಾಳೆ. ಭಯಾನಕ ಕನಸುಗಳ ಗಾಢಾಂಧಕಾರದಿಂದ ಮುಂಜಾವದ ಹೊಂಬೆಳಕಿನತ್ತ ಎಚ್ಚರಗೊಳ್ಳುತ್ತಿದ್ದಾಳೆ.

ಮನೀಂದರ್‌ಗೆ ಅನುಮಾನ– "ಗುಡಿಯಾ ಕಾ ನಾಮ್ ಕ್ಯಾ ಹೈ?"

ಗೊತ್ತಿಲ್ಲವೆಂದು ಇಂದೂ ತಲೆಯಾಡಿಸಿದಳು. ಗುಡಿಯಾ ಎಂದೇ ಇರಲಿ ಸುನೀಂದರ್‌ನ ಸಲಹೆ. ದರ್ಶನ್‌ಳಿಗೆ ಅದು ಒಪ್ಪಿಗೆಯಾಗಲಿಲ್ಲ. ಗುಡಿಯಾ ಎಂದು ಯಾವುದೇ ಮಗುವನ್ನೂ ಕರೆಯಬಹುದು. ಆದರೆ ಈ ಗುಡಿಯಾಗೆ ಸ್ವಂತಿಕೆಯಿರುವ ಒಂದು ಹೆಸರನ್ನೇ ಇಡಬೇಕು. ಇಂದೂ ಕಣ್ಣು ಬಿಟ್ಟಳು.

"ಅನಾಮಿಕ ಆದೀತೆ?"

ಒಳ್ಳೆಯ ಹೆಸರು–ದರ್ಶನ್‌ಗೆ ಅದು ಇಷ್ಟವಾಯ್ತು. "ಅನ್ನಾ ಎಂದೂ ಕರೆಯಬಹುದು."

ಮನೀಂದರ್ ಮಗುವಿನ ಕಿವಿಯಲ್ಲಿ ಮೂರು ಬಾರಿ ಕರೆದ; ಅನ್ನಾ, ಅನ್ನಾ, ಅನ್ನಾ!

ಮಗುವಿನೊಂದಿಗೆ ದರ್ಶನ್ ಮಲಗುವ ಕೋಣೆಯತ್ತ ನಡೆದಳು. ಸುನೀಂದರ್ ಮತ್ತು ಮನೀಂದರ್ ಬೆಳಗ್ಗೆ ಎರಡು ಬಾರಿ ಮಾರ್ಕೆಟ್‌ಗೆ ಹೋಗಿದ್ದರೂ ಬ್ರೆಡ್, ಹಾಲು, ಹಣ್ಣು–ಯಾವುದೂ ಸಿಕ್ಕಿರಲಿಲ್ಲ. ಎರಡು, ಮೂರು ದಿನಗಳಿಂದ ದೆಹಲಿ ಸಂಪೂರ್ಣ ಮರಗಟ್ಟಿದ ಹಾಗಾಗಿ ಬಿಟ್ಟಿದೆ. ವಾಹನಗಳ ಓಡಾಟವಿಲ್ಲ. ಹರಿಯಾಣ ಮತ್ತು ಯು.ಪಿ.ಯ ಹಳ್ಳಿಗಳಿಂದ ಬಂದು ತಲಪಬೇಕಾಗಿದ್ದ ತರಕಾರಿಗಳು ತಲಪಲಿಲ್ಲ. ಕರ್ಫ್ಯೂ ಜಾರಿಯಲ್ಲಿರುವುದರಿಂದ ಅಂಗಡಿ ಮುಂಗಟ್ಟುಗಳಾವುದೂ ತೆರೆಯಲಿಲ್ಲ.

ಆದರೂ ಎಳೆಯರು ನಿರಾಶರಾಗಲಿಲ್ಲ. ಅವರು ಪುನಃ ಮಾರ್ಕೆಟ್‌ನತ್ತ ಹೊರಟರು. ಹಾಲುಪುಡಿ, ಬಿಸ್ಕತ್–ಏನಾದರೂ ಸಿಕ್ಕದಿರಲಾರದು.

ರವಿ ಪ್ರಶ್ನಿಸಿದ.

"ದರ್ಶನ್‌ಳ ಪರಿಚಯವಾಯ್ತೆ, ಇಂದೂ?"

"ಹೆಸರು ದರ್ಶನ್ ಎಂದು ಗೊತ್ತಾಗಿದೆ. ಅಷ್ಟೇ."

"ಭಾರೀ ದೊಡ್ಡ ದುರಂತಕ್ಕೆ ಬಲಿಪಶುವಾಗಿದ್ದಾಳೆ ಅವಳು. ಅವಳ ತಮ್ಮ ನಿನ್ನೆಯಲ್ಲ, ಮೊನ್ನೆ ಮೃಗೀಯವಾಗಿ ಕೊಲೆಗೈಯಲ್ಪಟ್ಟ. ತಾಯಿ ಆ ದೃಶ್ಯ ನೋಡಲಿಕ್ಕಾಗದೆ ಹೃದಯಾಘಾತದಿಂದ ತೀರಿಕೊಂಡಳು. ತಂದೆ ತನ್ನ ಶೋರೂಂ ಬಂದ್ ಮಾಡಿ ಮನೆಗೆ ಹೊರಟಿದ್ದ. ಆದರೆ ಮನೆಗೆ ತಲಪಲಿಲ್ಲ. ಹಾದಿಯಲ್ಲಿ ಏನಾಯಿತೆಂದು ಗೊತ್ತಿಲ್ಲ. ಇವೆಲ್ಲವನ್ನೂ ಮೀರಿಸುವಂತೆ ಅವಳ ಮಾನ ಹರಣವೂ ಆಯ್ತು; ದುಷ್ಕರ್ಮಿಗಳ ಗುಂಪಿನಿಂದ."

"ಓ ಮೈ ಗಾಡ್!"

ಇಂದೂವಿಗೆ ಇನ್ನಷ್ಟು ಕೇಳಿಸಿಕೊಳ್ಳುವ ಬಲವಿರಲಿಲ್ಲ. ಅವಳು ಅಂಗೈ ಮೇಲೆ ಮುಖವೊತ್ತಿ ಬಿಕ್ಕಿ ಬಿಕ್ಕಿ ಅಳತೊಡಗಿದಳು.

ಅವಳ ಭಾವಿ ವರ ಅಂಗದ್ ಮತ್ತು ನಾನು ಅವಳ ತಾಯಿ ಮತ್ತು ತಮ್ಮನ ಮೃತ ದೇಹಗಳನ್ನು ಮೋರ್ಚರಿಗೆ ತಲಪಿಸಿ ಮರಳಿ ತಲಪಿದ್ದಷ್ಟೇ.

"ಸುನೀಂದರ್ ಮತ್ತು ಮನೀಂದರ್, ಆಫೀಸ್ ಡ್ರೈವರ್‌ನ ಮಕ್ಕಳು. ಅವರು ಹುಡುಗರು ಎಂಬುದನ್ನು ನೀನು ಗಮನಿಸಿರುವೆಯ?"

"ಓ! ರಿಯಲಿ?"

"ಅವರ ಅಪ್ಪ ಹರ್‌ಭಜನ್ ನನ್ನೊಂದಿಗೆ ಎ.ಐ.ಎಂ.ಎಸ್.ಗೆ ಬಂದಿದ್ದ. ಅಲ್ಲಿ ಹಲ್ಲೆಗೆ ಗುರಿಯಾದ. ಆಗಿರುವ ಗಾಯಗಳು ಅಷ್ಟು ಗಂಭೀರವೇನೂ ಅಲ್ಲ. ಇವತ್ತು ಮನೆ ತಲಪಿರಬಹುದು."

"ಎಂತೆಂತಹ ಕಷ್ಟಗಳು. ಚೆನ್ನಾಗಿದೆ ನಾನು ಬಂದ ಸಂದರ್ಭ! ತೊಂದರೆಯಾಯ್ತು ನಿಮಗೆ ಅಲ್ವೆ ರವಿ?"

ಆತ ತುಸು ಮುನಿಸಿನೊಂದಿಗೇ ಹೇಳಿದ: "ಹೌದು, ಭಾರೀ ತೊಂದರೆಯಾಗಿದೆ. ಓ ಒಂದು ವಿಷಯ ಹೇಳಲು ಮರೆತೆ. ಒಬ್ಬ ಭಯೋತ್ಪಾದಕ ಕೂಡ ಇಲ್ಲಿ ಅತಿಥಿಯಾಗಿದ್ದಿದ್ದ. ನೋಡಬೇಕೆ ನಿನಗೆ?"

ರವಿ ಅಲ್ಮಾರಾದಿಂದ ಪಿಸ್ತೂಲ್ ಹೊರತೆಗೆದ.

ಬಳಿಕ ಇಂದೂವಿನ ಕಡೆಗೆ ಗುರಿ ಹಿಡಿದ : "ಹ್ಯಾಂಡ್ಸ್ ಅಪ್!"

ಅವಳು ಯಾಂತ್ರಿಕವಾಗಿ ಕೈಯೆತ್ತಿದಳು. ಕಣ್ಣುಗಳಲ್ಲಿ ಗಲಿಬಿಲಿ.

ರವಿ ಗೇಲಿ ಮಾಡಿದ: "ಪೆದ್ದು ಹುಡುಗಿ, ಇದರಲ್ಲಿ ಗುಂಡುಗಳಿಲ್ಲ."



ಆತ ನಕ್ಕ ಅವಳೂ ಜತೆಯಲ್ಲಿ ನಕ್ಕಳು. ಆತ ಅಪರಾಧ ಪ್ರಜ್ಞೆಯೊಂದಿಗೆ ತನ್ನಷ್ಟಕ್ಕೇ ಹೇಳಿದ:

ನಗಬಲ್ಲ ಸಾಮರ್ಥ್ಯ ನಷ್ಟವಾಗಿಲ್ಲ. ಸುತ್ತಲೂ ಸಾವಿನ ಕರಾಳ ನರ್ತನ–ನ್ಯಾಯ ಹೀನವಾದ ವಿಧಿಯ ತಾಂಡವ ನರ್ತನ–ಸಾಗಿದೆ. ಹೀಗಿದ್ದೂ ಮನುಷ್ಯರು ಅವಾಸ್ತವಿಕವಾದ ನೊರೆಯಲ್ಲೂ ಬುರುಜಿನಲ್ಲೂ ಸುರಕ್ಷೆಯನ್ನು ಕಂಡುಕೊಳ್ಳುತ್ತಾರೆ!

ಅವಳು ಮೌನ ವಹಿಸಿದಳು. ಬಳಿಕ ಮೃದು ಸ್ವರದಲ್ಲಿ:

"ಕಷ್ಟಗಳ ಮೂಟೆಯಾದ ಈ ಮನುಷ್ಯನ ಆಯುಷ್ಯವನ್ನು ಹೆಚ್ಚಿಸಲು ನಡೆಸುವ ಪ್ರಯತ್ನ ಎಷ್ಟೊಂದು ನಿರರ್ಥಕ! ಮನುಷ್ಯನ ಆಯುಷ್ಯ ನೂರ ಹದಿನೈದು ವರ್ಷವಿರುವುದನ್ನು ಜಗ್ಗಿ ಮುನ್ನೂರೊ ನಾಲ್ಕುನೂರೊ ವರ್ಷದಷ್ಟು ನಿಡಿದಾಗಿಸುವುದರಿಂದ ದೊರೆಯುವ ಪ್ರಯೋಜನವಾದರೂ ಏನು? ಈ ಪಿಸ್ತೂಲ್‌ನಿಂದ, ಒಂದು ಹೂ ಕೊಯ್ಯುವಷ್ಟು ಸುಲಭವಾಗಿ ಒಂದು ಜೀವವನ್ನು ಕೊನೆಗೊಳಿಸಬಹುದಾಗಿದೆ. ಲಾಠಿಗಳನ್ನೂ ಈಟಿಗಳನ್ನೂ ಇತರ ಆಯುಧಗಳನ್ನೂ ಹಿಡಿದುಕೊಂಡೆ ಜನರ ಗುಂಪು ನೂರು ನೂರು ಜೀವಿತಗಳನ್ನು ಮೆಟ್ಟಿ ತುಳಿಯುಬಲ್ಲದು. ಅಣುಬಾಂಬ್‌ಗಳು ಅನುನಿಮಿಷವೂ ಹಿರೊಶಿಮಾ, ನಾಗಾಸಾಕಿಗಳನ್ನು ಸೃಷ್ಟಿಸಬಲ್ಲವು. ವಿಯೆಟ್ನಾಂಗಳನ್ನು ಸೃಷ್ಟಿಸಿದ್ದು ಮನುಷ್ಯನ ಅಧಿಕಾರದ ದುರಾಸೆಯೇ ಹೊರತು ಮಾರಕ ರೋಗಗಳಾವುದೂ ಅಲ್ಲ, ಕಾಲರಾ, ಸಿಡುಬು, ಏಯ್ಡ್ಸ್‌ಗಳನ್ನೆಲ್ಲ ತಡೆಗಟ್ಟಲು ಸಾಧ್ಯವಾಗಲೂಬಹುದು. ಆದರೆ ಮತೀಯ ಉನ್ಮಾದಕ್ಕೆ, ಅಧಿಕಾರದ ಉದರಾಸೆಗೆ, ಮನುಷ್ಯನ ಮೂಲಭೂತ ಸ್ವಾರ್ಥಕ್ಕೆ, ಅಸಹನೆಗಳಿಗೆಲ್ಲ ಏನಿದೆ ಮದ್ದು! ಕ್ಯಾನ್ಸರ್, ಆತ್ರಿಟಿಸ್ ರೋಗಗಳಿಗೆ ಔಷಧಿಗಳು ಶೋಧಿಸಲ್ಪಟ್ಟಾವು. ವೃದ್ಧಾಪ್ಯದ ಒಳಗುಟ್ಟು ಬಹಿರಂಗಗೊಳಿಸಲ್ಪಟ್ಟೀತು. ಆದರೆ ದರ್ಶನ್‌ನಂತಹ ಯುವತಿಗೆ ಮಾನಾಭಿಮಾನಗಳೊಂದಿಗೆ ಸಮಾಜದಲ್ಲಿ ಬಾಳಲು ಸಾಧ್ಯವಿಲ್ಲವಾದರೆ, ಸುನೀಂದರ್ ಮತ್ತು ಮನೀಂದರ್‌ಗೆ ಜೀವ ಉಳಿಸುವ ಸಲುವಾಗಿ ಹುಡುಗಿಯರ ಉಡುಗೆ ತೊಟ್ಟುಕೊಳ್ಳಬೇಕೆಂದಾದರೆ ನಾನು ನಾಚಿಕೆ ಪಡ್ತೇನೆ, ರವಿ. ನನಗನ್ನಿಸುತ್ತದೆ ಫ್ಲೋರಿಡಾ ವಿಶ್ವವಿದ್ಯಾಲಯದ ಲಿಯಾನಾರ್ಡ್ ಹೆಯ್‌ಫ್ಲಿಕ್ ಹಾಗೂ ಕ್ಯಾಲಿಫೋರ್ನಿಯಾ ವಿಶ್ವವಿದ್ಯಾಲಯದ ಥಾಮಸ್ ಜಾನ್ಸನ್‌ರು ವೃದ್ಧಾಪ್ಯದ ರಹಸ್ಯವನ್ನು ಭೇದಿಸಲು ವ್ಯಯಿಸುವ ಅಮೂಲ್ಯ ವೇಳೆ ಮತ್ತು ಕೋಟಿಗಟ್ಟಲೆ ಡಾಲರ್‌ಗಳು ನಿರರ್ಥಕವೆಂದು: ಮಹಾಪಾಪವೆಂದು ಕೂಡ. ಅವರಿಬ್ಬರೂ ನನಗೆ ಒಂದೊಂದು ಸ್ಕಾಲರ್‌ಶಿಪ್ ವಾಗ್ದಾನ ಮಾಡಿದ್ದಾರೆ. ಹೆಯ್‌ಫ್ಲಿಕ್ ಬರೆದಿದ್ದಾರೆ ಕೂಡ: ಇಂದೂ, ನಿನ್ನಂತಹ ಓರ್ವ ಸಮರ್ಥ ಜೆರಂಟಾಲಜಿಸ್ಟ್ ಅನ್ನು ಬರಮಾಡಿಕೊಳ್ಳಲು ನಾನು ಸಂತೋಷಪಡುತ್ತೇನೆ."

"ಲಾಂಗಿವಿಟಿ ಜೀನ್ಸ್ ಅನ್ನು ಪ್ರಾಯಶಃ ಬೇರ್ಪಡಿಸಿ ಪಡೆಯಲು

ಸಾಧ್ಯವಾಗದೆ ಹೋಗಬಹುದು. ಆದರೆ ಕೊಕ್ಕೆಹುಳ ಮತ್ತು ಸಮುದ್ರ ಹಾವುಗಳ ಮೇಲೆ ನಡೆಸಲಾದ ಪ್ರಯೋಗಗಳಿಂದ ಅವುಗಳ ಆಯುಷ್ಯ ಅರುವತ್ತು ಶತಾಂಶದಷ್ಟು ಹೆಚ್ಚಿಸಲು ಸಾಧ್ಯವಾದೀತೆಂದು ಇಷ್ಟರಲ್ಲೇ ಸ್ಪಷ್ಟವಾಗಿದೆ. ವಯಸ್ಸು ಹೆಚ್ಚಿದ ಹಾಗೇ ಶಾರೀರಿಕತಾಳದಲ್ಲಿ ಸಂಭವಿಸುವ ಕ್ರಮರಾಹಿತ್ಯಗಳನ್ನು ಸಂಖ್ಯೆ ಹಚ್ಚಿ ವಿವರಿಸಲು ಸಾಧ್ಯ. ಎನ್‌ಸೈಮುಗಳು ತಾಳತಪ್ಪುವಿಕೆಗಳನ್ನು, ಡಿ.ಎನ್.ಎ.ಯಲ್ಲಿನ ಕ್ರಮತಪ್ಪುವಿಕೆಗಳನ್ನು ಎಲ್ಲವನ್ನೂ."

"ಬೋರ್ ಹೊಡೆಯುತ್ತದೆಯೇ ರವಿ ನಿಮಗೆ?"

ಕೋಣೆಯ ನಿಶ್ಯಬ್ದತೆಯಲ್ಲಿ ಮಾತುಗಳು ಮಾಯವಾದಾಗ ರವಿ ಚಡಪಡಿಸಿದ. ಇಂದೂ ಹೇಳುವ ವಿಷಯಕ್ಕಿಂತಲೂ ಆತ ಗಮನಿಸಿದ್ದು ಇಂದೂ ಮಾತನಾಡುವ ರೀತಿಯನ್ನು–ಅವಳ ತುಟಿಗಳು ಅಕ್ಷರಗಳಿಗೆ ರೂಪು ಕೊಡುವುದನ್ನು, ಹುಬ್ಬುಗಳು ಚಲಿಸುವುದನ್ನು, ಕಣ್ಣುಗಳ ಹೊಳಪಿನಲ್ಲಿ ಕಾಣಿಸಿಕೊಳ್ಳುತ್ತಿದ್ದ ನವುರಾದ ಬದಲಾವಣೆಗಳನ್ನು, ಹಣೆಗೆ ಬೀಳುತ್ತಿದ್ದ ಮುಂಗುರುಳುಗಳನ್ನು ಮೃದುಲವಾದ ಬೆರಳುಗಳಿಂದ ತೀಡಿ ಮೇಲೆ ಕೂರಿಸುವುದನ್ನು, ನುಣ್ಣಗಿರುವ ಮುಂಗೈಗಳಲ್ಲಿನ ಚಿನ್ನದ ಧೂಳಿನಂತಹ ರೋಮಗಳಲ್ಲಿ ಬೆಳಕು ಕಣ್ಣುಮುಚ್ಚಾಲೆಯಾಡುತ್ತಿರುವುದನ್ನು. ಅವಳ ಹಾವಭಾವಗಳಿಗನುಗುಣವಾಗಿ, ಸೀರೆ ಮತ್ತು ಕುಪ್ಪಸದ ನಡುವಿನ ಚಿಗುರೆಲೆಯಂಥ ಉದರದ ಏರಿಳಿತಗಳನ್ನು, ಮಾತುಗಳ ಹುಡುಕಾಟದ ವೇಳೆ ಉದ್ದನೆಯ ಕಣ್ಣರೆಪ್ಪೆಗಳು ಕ್ರಮಮೀರಿ ಮುಚ್ಚುತ್ತಾ ತೆರೆಯುತ್ತಾ ಇರುವುದನ್ನು.

ಅವಳು ನಿರ್ಮಿಸಿದ್ದ ಮಾತುಗಳ ವ್ಯೂಹದೊಳಗೆ ಆತ ವಿವರಿಸಲಾಗದಂಥ ಸುರಕ್ಷಿತತ್ವವನ್ನು ಅನುಭವಿಸಿದ. ಅವಳ ತುಟಿಗಳಿಂದ ಮಾತುಗಳುದುರಲು ಮತ್ತಷ್ಟು ಕಾತರಿಸಿದ.

"ನೀನು ಕಲ್ಪನೆಯಲ್ಲಿ ಕಾಣಬಲ್ಲೆಯಾ ಇಂದೂ, ಮುನ್ನೂರ ಮೂವತ್ತು ವಯಸ್ಸಾಗಿರುವ ನನ್ನನ್ನು ಮತ್ತು ಮುನ್ನೂರ ಹದಿನೈದು ವಯಸ್ಸಿನ ನಿನ್ನನ್ನು? ಬಹಳ ಮೋಜಾಗಿರಬಹುದು."

"ಹಾಗಾದರೆ ಅದು ನಮ್ಮ ನಡುವಿನ ವಯಸ್ಸಿನ ಅಂತರ–ಹದಿನೈದು ವರ್ಷ."

"ಅಲ್ಲ, ಹದಿನೈದು ವರ್ಷ ನಮ್ಮ ನಡುವಿನ ಸಾಮೀಪ್ಯ..."

ಬಜರ್ ದನಿಗೈಯುತ್ತಿದೆ. ಮಾರ್ಕೆಟ್‌ಗೆ ತೆರಳಿರುವ ಮನೀಂದರ್ ಮತ್ತು ಸುನೀಂದರ್ ಬಂದಿರಬಹುದು. ರವಿ ಎದ್ದು ಹೋಗಿ ಬಾಗಿಲು ತೆರೆದ.

ಬಂದಿರುವಾತನ ಗುರುತು ಸಿಕ್ಕಲಿಲ್ಲ.

"ಗೊತ್ತಾಗಲಿಲ್ಲ, ಅಲ್ವೆ?"

ಸ್ವರ, ಪರಿಚಿತನಿರುವಂತೆ ಭಾಸವಾಯಿತು, ರವಿಗೆ.



"ನಾನು ಉಪಕಾರ್ ಸಿಂಗ್!"

ದಾಡಿ, ಪಗಡಿಗಳಿಲ್ಲದ ಉಪಕಾರ್ ಸಿಂಗ್‌ನನ್ನು ಮನಸ್ಸಿನಲ್ಲಿ ಪ್ರತಿಷ್ಠಾಪಿಸುತ್ತ ರವಿ ಹೇಳಿದ:

"ಬನ್ನಿ. ಒಳಗೆ ಬನ್ನಿ."

* * *

## ಅಧ್ಯಾಯ ೨೬

# ಸಯನೈಡ್ ಕ್ಯಾಪ್ಸೂಲ್‌ಗಳು

ರವಿಯ ಫ್ಲ್ಯಾಟ್‌ನಿಂದ ಹೊರಟ ಬಳಿಕ ತನಗಾದ ಅನುಭವಗಳನ್ನು ಉಪಕಾರ್ ಸಿಂಗ್ ಸಂಕ್ಷಿಪ್ತವಾಗಿ ಹೇಳತೊಡಗಿದ–ಗಡ್ಡ ಮತ್ತು ಪಗಡಿಗಳನ್ನು ಕಂಡಾಗ ಜನರು ಒಂದು ಅದ್ಭುತ ಜೀವಿಯನ್ನೊ ಎಂಬಂತೆ ತನ್ನನ್ನು ನೋಡತೊಡಗಿದ್ದು; ಲೋಧಿ ಗಾರ್ಡನ್‌ನ ಹಿಂಬದಿಯಲ್ಲಿ ಆಕಸ್ಮಿಕವಾಗಿ ಕಣ್ಣಿಗೆ ಬಿದ್ದ ಕ್ಷೌರಿಕನಿಂದ ಪುಣ್ಯಕೇಶ ಮತ್ತು ಗಡ್ಡವನ್ನು ಆಹುತಿ ಮಾಡಿಸಿದ್ದು.... ಬಳಿಕ ತ್ರಿಲೋಕ್‌ಪುರಿ ತಲಪಿದ್ದು. ಅಲ್ಲಿ ಮರಣದ ಕರಾಳ ಕುಣಿತ ಕಂಡದ್ದು... ಆ ಸಾಮೂಹಿಕ ಹತ್ಯಾಕಾಂಡದ ಮಧ್ಯದಲ್ಲೂ ಸ್ವಂತ ಜೀವನವನ್ನು ತೃಣಸಮಾನ ಮಾಡಿ ಬಹಳಷ್ಟು ಸಿಕ್ಖರನ್ನು ತನ್ನ ಮನೆಯಲ್ಲೆ ಬಚ್ಚಿಟ್ಟು ಕಾಪಾಡಿದ್ದ, ಹೆಸರು ಕೂಡ ಗೊತ್ತಿಲ್ಲದ ಮನುಷ್ಯನನ್ನು ಕಂಡದ್ದು....

ದರ್ಶನ್, ಇಂದೂ ಮತ್ತು ರವಿ ಆತನ ವಿವರಣೆ ಕೇಳಿ ಮರವಟ್ಟು ಕುಳಿತುಬಿಟ್ಟರು. ಗಡ್ಡ ಮತ್ತು ರುಮಾಲಿನ ಪ್ರಭಾವಳಿ ಇಲ್ಲವಾದುದರಿಂದ ಉಪಕಾರ್‌ನ ಕಣ್ಣುಗಳಿಗೆ ಹೆಚ್ಚಿನ ಆರ್ದ್ರತೆ ಬಂದಂತೆ ಭಾಸವಾಯಿತು ರವಿಗೆ. ಈತನ ದನಿ ಕೂಡ ಮೆತ್ತಗಾಗಿದೆಯೆ? ಈತ ಬಾಹ್ಯವಾಗಿ ಮಾತ್ರವಲ್ಲ ಆಂತರಿಕವಾಗಿ ಕೂಡ ಬದಲಾಗಿರುವನು–ಕಣ್ಣುಗಳ ಆಳದಲ್ಲಿ ಹೊಳೆಯುತ್ತಾ ಇದ್ದ ವಜ್ರ ಸೂಜಿಗಳು ಮೊನೆ ಮಡಚಿಕೊಂಡಿವೆ. ಕೇವಲ ಮೂರೇ ದಿನಗಳಲ್ಲಿ ಒಬ್ಬ ಮನುಷ್ಯ ಇಷ್ಟೊಂದು ಬದಲಾಗಬಲ್ಲನೆ? ರವಿ ಅಚ್ಚರಿ ಪಟ್ಟ. ಅನುಭವಗಳ ಅಗ್ನಿಕುಂಡದ ಗುಂಟ ಸಾಗಿದ್ದ ಪ್ರಯಾಣ ಉಪಕಾರ್‌ನನ್ನು ಸಂಪೂರ್ಣ ಬದಲಾಯಿಸಿಬಿಟ್ಟಿದೆ.

ಮೌನದ ಗುಂಫನ ಅಸಹನೀಯವಾದಾಗ ಉಪಕಾರ್ ಮುಂದುವರಿಸಿದ:

ನನ್ನ ಮನದಲ್ಲಿ ಸಿಟ್ಟಾಗಲೀ ಅಪರಾಧ ಪ್ರಜ್ಞೆಯಾಗಲೀ ಪಶ್ಚಾತ್ತಾಪವಾಗಲೀ ಆತ್ಮನಿಂದೆಯಾಗಲೀ ಇಲ್ಲ. ಯಾವ ಕಾರಣದಿಂದಲೊ ಏನೊ ನನ್ನ ಅಂತರಾಳದಲ್ಲಿ ಭಗ್ಗನೆ ಉರಿಯುತ್ತಾ ಇದ್ದ ದೊಂದಿಗಳು ನಂದಿಹೋಗಿವೆ.

ಭಿಂದ್ರನ್‌ವಾಲಾರ ಶಿಷ್ಯ ಸ್ವಇಚ್ಛೆಯಿಂದಲೇ ಪುಣ್ಯಕೇಶ ಕತ್ತರಿಸಲು ಸಿದ್ಧನಾಗುವುದು! ದಂದಮಿ ತಕ್ಸಾಲ್‌ನ ಸಕ್ರಿಯ ಸದಸ್ಯನಾಗಿರುವ ತನಗೆ ಅಂತಹ



ಒಂದು ಕೃತ್ಯವನ್ನು ನಾಲ್ಕು ದಿನಗಳ ಹಿಂದೆ ಯೋಚಿಸಲಿಕ್ಕೂ ಸಹ ಸಾಧ್ಯವಾಗುತ್ತಿರಲಿಲ್ಲ. ಸ್ವರ್ಣ ಮಂದಿರದ ಆಸುಪಾಸಿನಲ್ಲಿರುವ ಎಲ್ಲಾ ಕ್ಷೌರಿಕರನ್ನೂ ಗಡಿಪಾರು ಮಾಡಲು ಮುಂದಾಳ್ತನ ವಹಿಸಿದ್ದೇ ನಾನು. ಸಿಕ್ಖ ಸಮಾಜದ ವರಮಾನ ಹೆಚ್ಚಿದಾಗ ಅವರ ಯುವ ಜನಾಂಗದ ಶಿಕ್ಷಣ ಮಟ್ಟ ಮೇಲೇರಿದಾಗ ಹೆಚ್ಚು ಹೆಚ್ಚು ಸಿಕ್ಖರು ತಮ್ಮ ಕುಲ–ಕಸುಬಾಗಿದ್ದ ಕೃಷಿ ಮತ್ತು ಸೈನಿಕ ವೃತ್ತಿಗಳನ್ನು ತೊರೆದು ಸಾಗರದಾಚೆಗೆ ತೆರಳಿ ಪಾಶ್ಚಾತ್ಯ ಸಂಸ್ಕೃತಿಯಲ್ಲಿ ಮುಳುಗಾಡತೊಡಗಿದಾಗ ಅಂಥವರು ಗುರುವಾಣಿಯನ್ನು ಮರೆತುಬಿಟ್ಟರು.

ಸಿಕ್ಖನಿಗೆ ಅನಿವಾರ್ಯವಾದ ಕಕಾರದಿಂದಾರಂಭಿಸುವ ಐದು ನಿರ್ಬಂಧಗಳನ್ನು ತ್ಯಜಿಸುವುದರಲ್ಲಿ ಯುವ ಪೀಳಿಗೆಗೆ ತಪ್ಪೇನೂ ಕಾಣಿಸಲಿಲ್ಲ. ಗುರು ನಿಷೇಧಿಸಿರುವ ತಂಬಾಕು ಮತ್ತು ಸಿಗರೇಟುಗಳನ್ನು ಅವರು ಯಥೇಷ್ಟ ಬಳಸತೊಡಗಿದರು. ಆಡಿನ ಮತ್ತು ದನದ ಮಾಂಸ ಅವರಿಗೆ ವರ್ಜ್ಯವಲ್ಲದಾಯ್ತು. ಯುವ ತಲೆಮಾರಿನ ಹಾದಿ ತಪ್ಪಿದ ಪಯಣ ಭಿಂದ್ರನ್‌ವಾಲಾರಲ್ಲಿ ದುಃಖವನ್ನೂ ಸಿಟ್ಟನ್ನೂ ಉಂಟುಮಾಡಿತ್ತು. ತಮ್ಮ ಅನುಯಾಯಿಗಳಿಗೆ ಅವರು ಕರೆ ಕೊಟ್ಟರು: ಹೀಗೇ ಮುಂದುವರಿದರೆ "ಖಲ್ಸ ಕರೇಗ ರಾಜ್" ಎಂಬ ಗುರುವಿನ ಕನಸು ನನಸು ಮಾಡಲು ಸಾಧ್ಯವಾಗದು. ಅಮೃತಪಾನ ಮಾಡಿರುವ ಒಬ್ಬನೇ ಒಬ್ಬ ಸಿಕ್ಖನೂ ಧೂಮಪಾನ ಮಾಡಕೂಡದು. ಹಿಂದು ಎಂಬ ಅಕ್ಟೋಪಸ್ ಜೈನ ಮತವನ್ನೂ ಬುದ್ಧ ಮತವನ್ನೂ ನುಂಗಿಬಿಟ್ಟ ಹಾಗೆ ಸಿಕ್ಖ ಮತವನ್ನೂ ನುಂಗುವ ಕಾಲ ಹೆಚ್ಚು ದೂರವಿಲ್ಲ. ಆದುದರಿಂದ ಹುಡುಗರಿರಾ ಜಾಗರೂಕರಾಗಿರಿ. ಕೂದಲು ಕತ್ತರಿಸುವ ಒಬ್ಬನೇ ಒಬ್ಬ ನಾಯಿ ಕೂಡ ಪಂಜಾಬ್‌ನಲ್ಲಿ ಇರಕೂಡದು. ಸಿಗರೇಟ್ ಮಾರುವ ಒಬ್ಬನೇ ಒಬ್ಬ ಬನಿಯಾ ಕೂಡ ಇಲ್ಲಿ ಕಾಣಿಸಕೂಡದು.

ಆದುದರಿಂದಲೇ ಕ್ಷೌರಿಕರನ್ನೂ ಸಿಗರೇಟ್ ಅಂಗಡಿಯವರನ್ನೂ ಬೇಟೆಯಾಡತೊಡಗಿದ್ದೆವು. ಅಂಗಡಿ ಬಂದ್ ಮಾಡಲು ಒಪ್ಪದಿದ್ದವರನ್ನು ಬೆದರಿಸಲಾಯಿತು. ಕ್ಷೌರಿಕರಷ್ಟೂ ಉದ್ಯೋಗ ಅರಸುತ್ತ ಹರಿಯಾನ ಮತ್ತು ದೆಹಲಿಯ ಕಡೆಗೆ ಓಡಿಹೋದರು. ನನ್ನ ಕೂದಲು, ಗಡ್ಡಗಳನ್ನು ಕತ್ತರಿಸಿದವನು ನಾವು ಓಡಿಸಿದವರಲ್ಲೇ ಒಬ್ಬಾತನಿರಬಹುದು. ಆತನ ಮುಂದೆ ಬಗ್ಗಿ ಕುಳಿತಿದ್ದಾಗ ಆತ ಮನಸ್ಸಿನಲ್ಲಿ ನಗಾಡಿರಬಹುದು. ಹಲ್ಕಾ ಸರ್ದಾರ್ ಎಂದು ಶಾಪ ಹಾಕಿರಲೂ ಬಹುದು. ಗೋರಿ ಕಟ್ಟಡದೊಳಗೆ ಮಲಗಿರುತ್ತ ಸಿಕಂದರ್ ಲೋದಿ ಮತ್ತು ಸಯ್ಯದ್ ವಂಶದ ಮಹಮ್ಮದ್ ಶಾ ಆ ದೃಶ್ಯ ನೋಡಿ ನಾನಕ್ ದೇವನ ಅನುಯಾಯಿಗಳಿಗೆ ಎದುರಾದ ದುರಂತವನ್ನು ನೆನೆದು ಗೊಳ್ಳನೆ ನಗೆಯಾಡಿರಬಹುದು.

ಉಪಕಾರ್ ನಕ್ಕ: ನೋವಿನ ಕಹಿ ಬೆರೆತುಕೊಂಡ ನಗೆ. ದಂದಮಿ ತಕ್ಸಾಲ್

ಸ್ಥಾಪನೆ ಮಾಡಿದವರು ಬಾಬಾ ದೀಪ್ ಸಿಂಗ್. ಅಹಮ್ಮದ್ ಶಾ ಅಬ್ದಾಲಿ ಸುವರ್ಣ ಮಂದಿರವನ್ನು ಧ್ವಂಸ ಮಾಡಿದ್ದಾಗ ಅದನ್ನು ತಡೆಯಲಾರದೆ ಹೋದ ಸಿಕ್ಖರ ಅಸಾಮರ್ಥ್ಯದ ಬಗ್ಗೆ ಸಿಟ್ಟಿಗೆದ್ದ ಬಾಬಾ ಜೀವ ಬಲಿಕೊಟ್ಟೂ ಸುವರ್ಣ ಮಂದಿರವನ್ನು ಮರಳಿ ವಶಪಡಿಸುವುದಾಗಿ ಪ್ರತಿಜ್ಞೆ ಮಾಡಿದ್ದರು. ಅಫ್ಘಾನ್ ಸೇನೆ ಅಪವಿತ್ರಗೊಳಿಸಿದ್ದ ಸುವರ್ಣ ಮಂದಿರವನ್ನು ವಶಪಡಿಸಲಿಕ್ಕಾಗಿ ಐದು ಸಾವಿರ ಹಳ್ಳಿಗರನ್ನು ಬಾಬಾ ಒಟ್ಟುಗೂಡಿಸಿದ್ದರು. ನೇಗಿಲು, ಗುದ್ದಲಿಗಳನ್ನಷ್ಟೇ ಬಳಸಲು ಗೊತ್ತಿರುವ ಆ ರೈತ ಸೇನೆಯನ್ನು ಬಲಿಷ್ಠರಾದ ಅಫ್ಘಾನರು ಮಾರಕಾಯುಧಗಳೊಂದಿಗೆ ನಡುಹಾದಿಯಲ್ಲೆ ತಡೆಗಟ್ಟಿದರು. ಆಯುಧಬಲ ಮತ್ತು ತರಬೇತಿಯಲ್ಲಿ ಎಷ್ಟೋ ಪಟ್ಟು ಹೆಚ್ಚು ಸಾಮರ್ಥ್ಯ ಹೊಂದಿರುವ ಪಠಾನರೊಡನೆ ಸಿಕ್ಖರು ವೀರಾವೇಶದಿಂದ ಕಾದಾಡಿದರು. ಅಹ್ಮದ್ ಶಾ ಅಬ್ದಾಲಿಯ ಸೇನೆಗೆ ಬಹಳಷ್ಟು ನಾಶ ನಷ್ಟಗಳು ಸಂಭವಿಸಿದವು. ಆತ ಬೇರೊಂದು ಸೇನೆಯ ನೆರವಿನೊಂದಿಗೆ ಎದುರಿಸಿದ. ಪ್ರತಿಯೊಬ್ಬ ಸಿಕ್ಖನೂ ನೂರು ಸಿಂಹಗಳ ಕಸುವಿನೊಂದಿಗೆ ಹೋರಾಡಿದನು. ಬಾಬಾ ದೀಪ್‌ಸಿಂಗ್‌ರ ತಲೆ ಕಡಿದು ಒಡಲಿನಿಂದ ಬೇರ್ಪಡಿಸಲಾಯಿತು. ಆದರೆ ಬಾಬಾ ಒಂದು ಕೈಯಲ್ಲಿ ತನ್ನ ಕತ್ತರಿಸಲ್ಪಟ್ಟ ತಲೆ ಮತ್ತು ಇನ್ನೊಂದು ಕೈಯಲ್ಲಿ ನೆತ್ತರು ತೊಟ್ಟಿಕ್ಕುತ್ತಿರುವ ಖಡ್ಗದೊಂದಿಗೆ ಅಫ್ಘಾನ್ ಸೈನಿಕರನ್ನು ಹೊಡೆದು ತರಿಯುತ್ತ ಸ್ವರ್ಣ ಮಂದಿರದ ಮಾರ್ಬಲ್ ಮೆಟ್ಟಿಲುಗಳನ್ನು ತಲಪಿದರು.

ಬಾಬಾ ದೀಪ್ ಸಿಂಗ್ ಆರಂಭಿಸಿದ್ದ ದಂದಮಿ ತಕ್ಸಾಲ್‌ಗೆ ಜರ್ನೈಲ್ ಸಿಂಗ್ ಭಿಂದ್ರನ್‌ವಾಲಾ ಸದಸ್ಯತ್ವ ಹೊಂದುವಾಗ ಕೇವಲ ಬಾಲಕನಾಗಿದ್ದ. ಆದರೆ, ಬಲುಬೇಗನೆ ಭಿಂದ್ರನ್‌ವಾಲಾ, ತಕ್ಸಾಲ್‌ನ ಮುಖ್ಯಸ್ಥ ಕರ್ತಾರ್ ಸಿಂಗ್‌ರ ಉತ್ತರಾಧಿಕಾರಿಯಾದ. ರಸ್ತೆ ಅಪಘಾತವೊಂದರಲ್ಲಿ ಬಲು ಗಂಭೀರವಾದ ಗಾಯಕ್ಕೊಳಗಾದಾಗಲೂ ಕರ್ತಾರ ಸಿಂಗ್ ತನ್ನ ಸಿಕ್ಖ ತತ್ತ್ವಗಳನ್ನು ಲವ ಮಾತ್ರವೂ ಬಿಡಲೊಪ್ಪಲಿಲ್ಲ. ಅವರ ಜೀವ ಉಳಿಸಲಿಕ್ಕಾಗಿಯೇ ತಲೆಗೆ ಶಸ್ತ್ರಕ್ರಿಯೆಯಾಗಬೇಕೆಂದು ಡಾಕ್ಟರುಗಳು ತೀರ್ಪಿತ್ತರು. ಅದಕ್ಕಾಗಿ ತಲೆ ಕ್ಷೌರ ಮಾಡಿಸಬೇಕಾಗುತ್ತದೆ. ಆದರೆ ಕರ್ತಾರ್ ಸಿಂಗ್ ಒಂದಿಷ್ಟೂ ವಿಚಲಿತರಾಗದೆ ಹೇಳಿದರು: ನಾನು ಸಿಕ್ಖನಾಗಿ ಹುಟ್ಟಿದೆ; ಸಿಕ್ಖನಾಗಿ ಬಾಳಿದೆ; ಸಿಕ್ಖನಾಗಿಯೇ ಸಾಯಬೇಕಾಗಿದೆ. ಕೇಶ ಕತ್ತರಿಸಿ ನನ್ನ ಜೀವ ಉಳಿಸಬೇಕಾಗಿಲ್ಲ.

ಡಾಕ್ಟರ್‌ಗಳು ಹಿಂತಿರುಗಿದರು. ಕರ್ತಾರ್ ಸಿಂಗ್ ಸಿಕ್ಖನಾಗಿಯೇ ಮರಣವನ್ನು ಬರಮಾಡಿಕೊಂಡರು.

ಗುರು ನಾನಕ್ ಮಾಡಿದ ಹಾಗೆಯೇ ಕರ್ತಾರ್ ಸಿಂಗ್ ಕೂಡ ತನ್ನ ಮಗ ಅಮೃತ್ ಸಿಂಗ್‌ಗೆ ಬದಲು ಭಿಂದ್ರನ್‌ವಾಲಾರನ್ನೇ ತನ್ನ ಉತ್ತರಾಧಿಕಾರಿಯನ್ನಾಗಿ ಮಾಡಿದರು.



ಆ ಪರಂಪರೆಯ ಈ ತುದಿಯ ಕೊಂಡಿಯಾಗಿರುವ ನಾನು ಗಡ್ಡ, ಕೇಶಗಳನ್ನು ಬೋಳಿಸಿ ಬೇರೊಬ್ಬನಾಗಿರುವವನು. ಆದರೂ ನನಗೆ ಅಪರಾಧ ಪ್ರಜ್ಞೆ ಇಲ್ಲ. ನಿಮಗೆ ಗೊತ್ತಿಲ್ಲವಲ್ಲ. ನಾನು ದಂದಮಿ ತಕ್ಸಾಲ್‌ನ ಸದಸ್ಯತ್ವ ಗಳಿಸಿದ್ದು ಹೇಗೆಂದು. ಹಿಂತಿರುಗಿ ನೋಡುವಾಗ ಅಚ್ಚರಿಯೆನಿಸುತ್ತದೆ. ಆದರೆ ಅಂದಿನ ತನ್ನ ಮಾನಸಿಕ ಸ್ಥಿತಿ ಗೊಂದಲಮಯವಾಗಿತ್ತು. ಸರಿ ಮತ್ತು ತಪ್ಪುಗಳ ನಡುವಿನ ನವುರಾದ ಗಡಿದಂಡೆಯ ಬಗೆಗಿನ ನನ್ನ ಗ್ರಹಿಕೆಗಳು ಬುಡಮೇಲಾಗಿದ್ದುವು.

ನನ್ನ ಅಪ್ಪನಿಗೆ ಮೂವರು ಗಂಡು ಮಕ್ಕಳು. ಹಿರಿಯ ಅಣ್ಣ ಕೆನಡಾದಲ್ಲಿ ಬಿಸಿನೆಸ್ ಮಾಡುತ್ತಿರುವನು. ಗ್ರೀನ್ ಕಾರ್ಡ್ ಹೋಲ್ಡರ್ ಆಗಿರುವ ಅಣ್ಣ ಓರ್ವ ಕೆನಡಾದವಳನ್ನು ಮದುವೆಯಾಗಿ ನಮ್ಮ ಕುಟುಂಬದೊಂದಿಗಿನ ಸಂಬಂಧವನ್ನು ಕೊನೆಗೊಳಿಸಿದನು. ಜಾಟ್‌ಗಳ ಕುಲ ಕಸುಬಾಗಿರುವ ಸೈನಿಕರ ವೃತ್ತಿಯಲ್ಲಿದ್ದಾನೆ ಎರಡನೆಯವನು. ಬಿ.ಎ. ಆದ ಬಳಿಕ ನಾನು ಸ್ನಾತಕೋತ್ತರ ಪದವಿ ಗಳಿಸಲು ಇಚ್ಛಿಸಿದೆ. ಎಂ.ಎ. ಆಗಿ ಯಾವುದಾದರೂ ಕಾಲೇಜ್‌ನಲ್ಲಿ ಅಧ್ಯಾಪಕನಾಗಬೇಕೆಂಬುದು ನನ್ನ ಆಸೆಯಾಗಿತ್ತು. ಆದರೆ, ಅಪ್ಪ ವಿರೋಧಿಸಿದರು. ನೀನು ನೌಕರಿ ಹಿಡಿದರೆ ಕೃಷಿಯನ್ನು ನೋಡಿಕೊಳ್ಳುವವರು ಯಾರು? ಜಾಟ್‌ಗಳಿಗೆ ಹೇಳಿರುವುದು ಕೃಷಿ ಮತ್ತು ಸೈನಿಕ ವೃತ್ತಿ. ಇರುವ ನಾಲ್ಕೆಕ್ರೆ ಹೊಲವನ್ನು ಯಾರು ನೋಡಿಕೊಳ್ತಾರೆ? ನೀನು ಓದಿದ್ದು ಸಾಕು ಎಂದು ಅಪ್ಪ ಖಂಡತುಂಡವಾಗಿ ಹೇಳಿದರು. ಅಣ್ಣಂದಿರಿಗೆ ಬರೆದು ನೋಡಿದೆ. ಅವರೂ ಅಪ್ಪನ ಪಕ್ಕದಲ್ಲೆ ಉಳಿದರು. ಅವರಿಗೂ ಅದೇ ಆಗಿತ್ತಲ್ಲ ಅನುಕೂಲ. ಹಾಗಾಗಿ ನಾನು ಜಗಳವಾಡಿ ಮನೆಯಿಂದ ಹೊರಬಿದ್ದೆ. ಸೀದಾ ಹೋದದ್ದು ಸ್ವರ್ಣ ಮಂದಿರಕ್ಕೆ. ಮನೆಯವರೊಂದಿಗೆ ಜಗಳವಾಡಿ ಓಡಿ ಹೋದ ಎಲ್ಲಾ ಯುವಕರಿಗೂ ಆಶ್ರಯವನ್ನು ನೀಡುತ್ತಿದ್ದವರು ಭಿಂದ್ರನ್‌ವಾಲಾ ಬಾಬಾ ಆಗಿದ್ದರು. ನಿರಂಕಾರಿ ಬಾಬಾ ಬಚ್ಚನ್ ಸಿಂಗ್‌ರನ್ನು ಮುಗಿಸಿದ ಬಳಿಕ ಭಿಂದ್ರನ್‌ವಾಲಾ ತಮ್ಮ ಹೆಡ್‌ಕ್ವಾರ್ಟರ್ಸ್‌ನ್ನು ಸ್ವರ್ಣ ಮಂದಿರಕ್ಕೆ ಸ್ಥಳಾಂತರಿಸಿದ್ದರು. ನಿರಂಕಾರಿ ಗುರುವನ್ನು ಕಡಿದು ತುಂಡರಿಸಿದ್ದವನು ಫೌಜಾ ಸಿಂಗ್. ಆ ಗಲಾಟೆಯಲ್ಲಿ ಭಿಂದ್ರನ್‌ವಾಲಾರ ಅನುಯಾಯಿಗಳಾಗಿದ್ದ ಹನ್ನೊಂದು ಮಂದಿಯನ್ನು ಕೊಲೆ ಮಾಡಿದ್ದ ನಿರಂಕಾರಿಗಳ ಹೆಸರು, ವಿಳಾಸಗಳನ್ನು ಬರೆಯಲಾದ ಕಾಗದ ತುಂಡುಗಳನ್ನು ಒಂದು ಮಣ್ಣಿನ ಭರಣಿಯಲ್ಲಿ ಇಟ್ಟುಕೊಂಡಿದ್ದರು, ಭಿಂದ್ರನ್ ಬಾಬಾ. ದಂದಮಿ ತಕ್ಸಾಲ್‌ನಲ್ಲಿ ಆಶ್ರಯ ಪಡೆಯಲು ಬರುವ ಯುವಕರನ್ನು ತಮ್ಮ ಅನುಯಾಯಿಯಾಗಿ ಸೇರ್ಪಡೆಗೊಳಿಸುವ ಮುನ್ನ ಭರಣಿಯಿಂದ ಒಂದೊಂದು ಚೀಟಿ ತೆಗೆದು ಕೊಡುತ್ತಿದ್ದರು. ಚೀಟಿಯಲ್ಲಿ ಗುರುತಿಸಲ್ಪಟ್ಟಿರುವ ವ್ಯಕ್ತಿಯನ್ನು ಕೊನೆಗೊಳಿಸಿ ಮರಳಿ ಬಂದರೆ ಮಾತ್ರ ಆಶ್ರಯ ನೀಡುತ್ತಿದ್ದರು.

ನಾನು ಹೋದಾಗ ಬಾಬಾ ಪ್ರಶ್ನಿಸಿದರು:

ಊಂ?

ನನ್ನ ಗಂಟಲು ಬತ್ತಿ ಹೋಗಿತ್ತು. ಏನನ್ನೂ ಹೇಳಲು ಸಾಧ್ಯವಾಗಲಿಲ್ಲ.

ಅಪ್ಪನೊಂದಿಗೆ ಜಗಳವಾಡಿದ್ದಿ, ಅಲ್ವೆ?

ಹೌದು ಬಾಬಾ.

ಬಳಿಕ ಯಾವ ಪ್ರಶ್ನೆಯನ್ನೂ ಕೇಳಲಿಲ್ಲ.

ಅವರ ಬೆರಳುಗಳು ಭರಣಿಯೊಳಗೆ ಇಳಿದವು.

ಇಂದೂ ಮತ್ತು ದರ್ಶನ್ ಒಟ್ಟಿಗೇ ಎದ್ದರು. ದರ್ಶನ್ ಇಂದೂವನ್ನು ತಡೆದಳು: ನಾನು ಹೋಗ್ತೇನೆ.

ದರ್ಶನ್ ಮಗುವನ್ನು ಸೊಂಟಕ್ಕೇರಿಸಿಕೊಂಡು ಮರಳಿ ಬಂದಳು. ಆಗಷ್ಟೇ ಎಚ್ಚರಗೊಂಡಿದ್ದ ಮಗು ಗಲಿಬಿಲಿಯಿಂದ ಪ್ರತಿಯೊಬ್ಬರನ್ನೂ ಸರದಿಯಂತೆ ದಿಟ್ಟಿಸತೊಡಗಿತು. ಪ್ರಾಯಶಃ ಅದರ ಎಳೆಯ ಮನಸ್ಸಿನಲ್ಲಿ ಅಮ್ಮನ ಮುಖ ಮತ್ತು ಹಾಲೊಸರುವ ಮಮ್ಮ ನೆನಪಾಗಿರಬೇಕು. ಮಗು ತುಟಿ ಸೊಟ್ಟಗೆ ಮಾಡಿ ಅಳತೊಡಗಿತು. ದರ್ಶನ್ ಮಗುವಿನ ಕೆನ್ನೆಗಳನ್ನು ಮುದ್ದಿಸುತ್ತ ಉಪಕಾರ್ ಸಿಂಗ್‌ನನ್ನು ತೋರಿಸಿ ಪ್ರಶ್ನಿಸಿದಳು:

ಯಾರು ಈ ಹೊಸ ಅಂಕಲ್?

ಉಪಕಾರ್ ಸಿಂಗ್ ಎದ್ದು ಮಗುವಿನತ್ತ ಕೈ ಚಾಚಿದ.

ಬಳಿಕ ಏನನ್ನೊ ಯೋಚಿಸುತ್ತ ಅಂಗೈ ಮೇಲ್ಮುಖ ಮಾಡಿ ಅವನ್ನೇ ದಿಟ್ಟಿಸಿ ನೋಡಿ ಹೇಳಿದ:

ಇದರ ತುಂಬ ನೆತ್ತರೇ ಪುಟ್ಟೀ?

ಆತನ ಧ್ವನಿ ಕಂಪಿಸುತ್ತಾ ಇತ್ತು; ಕಣ್ಣುಗಳು ಒದ್ದೆಯಾಗಿದ್ದವು.

ಆತ ಪುನಃ ಸೋಫಾದ ಮೇಲೆ ಕುಸಿದು ಕುಳಿತುಕೊಂಡ. ಆತನ ಹಣೆಯಲ್ಲಿ ಬೆವರ ಹನಿಗಳು ಮೂಡಿದ್ದವು. ಆತ ತನ್ನಷ್ಟಕ್ಕೇ ಪ್ರಶ್ನಿಸಿದ.

ಏನಾಗಿ ಬಿಟ್ಟಿದೆ ನಿನಗೆ?

ರವಿ ಆತನನ್ನು ಸಂತೈಸಿದ: ಪ್ರತಿಯೊಬ್ಬನಿಗೂ ಅವನವನಿಗೆ ವಿಧಿಸಲಾದ ಕರ್ತವ್ಯವಿರುತ್ತದೆ ಉಪಕಾರ್. ಸ್ವಂತ ವಿಧಿಯೊಂದಿಗೆ ಮುನಿಸಿಕೊಳ್ಳುವುದರಿಂದ ಪ್ರಯೋಜನವೇನೂ ಇಲ್ಲ. ಪೂರ್ವ ನಿರ್ಧರಿತವಾದ ಜೀವನದ ಅನೂಹ್ಯ ಹಾದಿಯಲ್ಲಿ ಸಾಗಲೇಬೇಕಾಗುತ್ತದೆ. ಅರ್ಧ ದಾರಿ ಕ್ರಮಿಸಿದ ಬಳಿಕ–ಇದೇ ಹೌದೆ ನನ್ನ ದಾರಿ ಎಂದು ಪ್ರತಿಯೊಬ್ಬನೂ ತನ್ನನ್ನೇ ಪ್ರಶ್ನಿಸುತ್ತಾನೆ. ನೀವು ಭಿಂದ್ರನ್‌ವಾಲಾರ ಅನುಯಾಯಿಯಾಗುವುದರ ಬದಲು ಯಾವುದಾದರೂ ಕಾಲೇಜ್‌ನಲ್ಲಿ ಉಪನ್ಯಾಸಕನಾಗಿದ್ದರೂ ಇದೇ ಹೌದೆ ನನ್ನ ದಾರಿ ಎಂಬ ಪ್ರಶ್ನೆ ಕಾಡದೆ ಇರುತ್ತಿರಲಿಲ್ಲ.

ಉಪಕಾರ್ ಬಾತ್‌ರೂಂಗೆ ಹೋಗಿ ಮುಖ ತೊಳೆದು ಮರಳಿ



ಬರುವಷ್ಟರೊಳಗೆ ತಕ್ಕಮಟ್ಟಿಗೆ ಸಾವರಿಸಿಕೊಂಡಿದ್ದ.

ಆತ ರವಿಯೊಡನೆ ಹೇಳಿದ:

ನಾನು ವಾಪಸ್ ಬಂದದ್ದು ನನ್ನ ಸ್ವತ್ತುಗಳನ್ನು ಮರಳಿ ಪಡೆಯಲಿಕ್ಕೆ.

ರವಿಗೆ ಮೊದಲು ಅರ್ಥವಾಗಲಿಲ್ಲ. ಪಿಸ್ತೂಲ್ ನೆನಪಾಗಲು ಅಲ್ಮೇರಾ ತೆರೆದು ಅದನ್ನು ಕೊಡುವಾಗ ರವಿ ತಮಾಷೆಯಾಗಿ ಪ್ರಶ್ನಿಸಿದ:

ಗುಂಡು ಇಲ್ಲದ ಈ ಪಿಸ್ತೂಲ್ ಯಾಕೆ? ಹಸಿದವರಿಗೆ ಆಹಾರ ಕೊಡಲೂ ಬಾಯಾರಿದವರಿಗೆ ನೀರು ಕೊಡಲು ದುಃಖಿತರಿಗೆ ಸಾಂತ್ವನ ನೀಡಲು ಈ ಪಿಸ್ತೂಲ್ ಅಗತ್ಯವೆ?

ಉಪಕಾರ್ ಒಂದು ಕ್ಷಣ ಅನುಮಾನಿಸುತ್ತ ನಿಂತುಕೊಂಡ. ಬಳಿಕ ರವಿಯ ದೃಷ್ಟಿಯಲ್ಲೇ ದೃಷ್ಟಿ ನೆಟ್ಟುಕೊಂಡು ನಕ್ಕು ನುಡಿದ:

ಮಿತ್ರಾ, ಈ ಪಿಸ್ತೂಲ್‌ನಿಂದ ಇನ್ನು ನನಗೆ ಸಾಧಿಸತಕ್ಕದ್ದೇನೂ ಇಲ್ಲ. ಆದರೆ ಇನ್ನೂ ಒಂದು ಸ್ವತ್ತನ್ನು ನಾನು ನಿಮ್ಮ ವಶ ಕೊಟ್ಟಿದ್ದೆನಲ್ಲ. ಅದು ನನಗೆ ಬೇಕಾಗಿ ಬರಬಹುದು. ಅದನ್ನು ನನಗೆ ಹಿಂತಿರುಗಿಸಿರಲ್ಲ.

ರವಿ ಮೊದಲು ಗೊಂದಲಕ್ಕೊಳಗಾದ. ಪಿಸ್ತೂಲ್‌ನೊಂದಿಗೆ ತಾನು ಇನ್ನೇನನ್ನೂ ಪಡೆದದ್ದು ನೆನಪಿಲ್ಲ.

ಬಳಿಕ ನೆನಪಿಗೆ ಬಂತು. ಒಂದು ಚಿಕ್ಕ ಕವರ್ ಸಹ ಉಪಕಾರ್ ಕೊಟ್ಟಿದ್ದ. ಹಣ ಇರಬಹುದು ಎಂದುಕೊಂಡು ರವಿ ಪಿಸ್ತೂಲ್‌ನ ಪಕ್ಕದಲ್ಲೇ ಅದನ್ನೂ ಇರಿಸಿದ್ದ.

ಅಲ್ಮೇರಾದಿಂದ ಕವರ್ ಹೊರತೆಗೆದು ಉಪಕಾರ್‌ನತ್ತ ಚಾಚಿದ.

ಅದನ್ನು ಇಸಿದುಕೊಳ್ಳುತ್ತ ಉಪಕಾರ್ ಪ್ರಶ್ನಿಸಿದ: ಏನಿದೆ ಗೊತ್ತೆ ಇದರಲ್ಲಿ? ಸಂತ ಬಾಬಾ ಅವರ ಅನುಯಾಯಿಗಳು ಅಚ್ಚುಮೆಚ್ಚಿನಿಂದ ವಶದಲ್ಲಿರಿಸುತ್ತಿರುವ ವಿಷಗುಳಿಗೆಗಳು–ಸಯನೈಡ್ ಕ್ಯಾಪ್ಸೂಲ್ಸ್.

ದರ್ಶನ್‌ಳ ಆಸಕ್ತಿ ಎಚ್ಚರಗೊಂಡದ್ದು ಹಠಾತ್ತನೆಯಾಗಿತ್ತು:

ಸಯನೈಡ್ ಬಗ್ಗೆ ನಾನು ಕೇಳಿದ್ದು ಮಾತ್ರ, ನಾಲಿಗೆ ಮೇಲಿರಿಸಿ ಅದರ ರುಚಿ ಸಿಹಿಯೇ ಹುಳಿಯೇ ಎಂದು ಬರೆಯಲು ಸಾಧ್ಯವಾಗುವ ಮುನ್ನವೇ ಕತೆ ಮುಗಿಯುವುದಂತೆ. ತೋರಿಸಿ ಅದನ್ನು.

ದರ್ಶನ್ ಮಗುವನ್ನು ಸೊಂಟದಲ್ಲಿರಿಸಿಕೊಂಡೇ ಉಪಕಾರ್‌ನ ಬಳಿಗೆ ಸರಿದಳು. ರವಿ ಇಂದೂವಿನ ಮುಖ ದಿಟ್ಟಿಸಿದ. ಯಾಕೋ ಅವಳು ಭಯಗ್ರಸ್ತೆಯಾಗಿರುವಳು. ಒಂದು ಪ್ರತಿಮೆಯ ಹಾಗೆ ಅವಳು ನಿಂತಳು. ಕವರ್‌ನಿಂದ ಅಂಗೈಗೆ ಉದುರಿಬೀಳುತ್ತಿರುವ ಕ್ಯಾಪ್ಸೂಲ್ ತೋರಿಸುತ್ತಾ ಇದ್ದಾನೆ ಉಪಕಾರ್; ಒಂದು ಚಿಕ್ಕ ಮಗುವಿಗೆ ಆಟಿಕೆಯನ್ನು ತೋರಿಸುವ ಲವಲವಿಕೆಯೊಂದಿಗೆ.

ಇದ್ದಕ್ಕಿದ್ದಂತೆ ದರ್ಶನ್‌ಳ ಬೆರಳುಗಳು ಬಾಚಲ್ಪಟ್ಟವು. ಆ ಬೆರಳ ತುದಿಗಳು ಒಂದು ಕ್ಯಾಪ್ಸೂಲ್ ಅನ್ನು ಎತ್ತಿಕೊಂಡವು.

ಅವಳ ಕಣ್ಣುಗಳಲ್ಲಿ ಯಾವುದೊ ಸಾಂತ್ವನ ಹೊಳೆಯಿತು; ತುಟಿಗಳಲ್ಲಿ ನಿರ್ಜೀವ ನಗೆ ಕೂಡ.

ಆ ತುಟಿಗಳತ್ತ ಸಾಗುತ್ತಿರುವ ಬೆರಳುಗಳನ್ನು ತಡೆಗಟ್ಟತಕ್ಕ ಸಮಯಪ್ರಜ್ಞೆ ತೋರಲಿಲ್ಲ ರವಿ. ಮರಗಟ್ಟಿ ನಿಂತಿದ್ದಾಳೆ ಇಂದೂ. ಉಪಕಾರ್‌ಗೆ ಮಾತ್ರ ಇದಾವುದೂ ಗೊತ್ತಾಗಲೇ ಇಲ್ಲ.

ಕ್ಷಣಾರ್ಧವೊಂದರ ಸೂಜಿಮೊನೆಯಲ್ಲಿ ಕಾಲವೇ ಸ್ತಬ್ಧವಾದಂತೆ.

ಆದರೆ, ಅನಾಮಿಕಳ ಪುಟ್ಟ ಕೈಗಳು ಚಲಿಸಿದುವು. ಯಾವುದೋ ಅಂತಃಪ್ರೇರಣೆಯಿಂದೆಂಬಂತೆ ಮಗು ಕೊಸರಿ ಕೆಳಗಿಳಿಯಲು ಹವಣಿಸಿದ್ದಿರಬೇಕು ಹಾಗೂ ದರ್ಶನ್‌ಳ ಹೆಣ್ತನದ ಅಕ್ಕರೆ ಆಕೆಯ ಸಾವಿನಾಸೆಯನ್ನೂ ಮೀರಿಸಿದ್ದಿರಬೇಕು. ಮಗುವನ್ನು ಅವುಚಿ ಹಿಡಿಯುವ ಗಿಡಿಬಿಡಿಯಲ್ಲಿ ಸಯನೈಡ್ ಮಾತ್ರೆ ಕೆಳಗೆ ಬಿತ್ತು.

ರವಿ ತತ್‌ಕ್ಷಣ ಕಾರ್ಯನಿರತನಾದ. ಮಾತ್ರೆಯನ್ನು ತೆಗೆದು ಉಪಕಾರ್‌ಗೆ ಕೊಟ್ಟ. ಉಪಕಾರ್ ಕವರನ್ನು ಭದ್ರವಾಗಿ ಜೇಬೊಳಗಿರಿಸಿದ್ದ.

ಯಾವುದೊ ಕನಸಿನಿಂದ ಎಚ್ಚೆತ್ತವಳ ಹಾಗೆ ದರ್ಶನ್ ನಿಂತುಕೊಂಡಳು.

ಅವಳ ಕಣ್ಣುಗಳು ತುಂಬಿ ತುಳುಕಿದವು.

ಆದರೆ, ಮುಖ ಶಾಂತವಾಗಿದೆ.

ಡೋರ್ ಬೆಲ್ ದನಿಗೈದದ್ದು ಆಗಲೇ.

ಇಂದೂ ಬಾಗಿಲು ತೆರೆದಳು.

ಅಂಗದ್ ಮತ್ತು ಗುರುದೇವ್ ಸಿಂಗ್.

ರವಿ ಆಹ್ವಾನವಿತ್ತ:

ಬನ್ನಿ, ಬನ್ನಿ.

* * *



## ಅಧ್ಯಾಯ ೨೭

## ರವಿಯ ಅಳಲು

ಬೆಲೆ ತೆರದೆ ಏನನ್ನಾದರೂ ದಿಟ್ಟಿಸಲು ಅಥವಾ ಗಿಟ್ಟಿಸಲು ದೊರೆಯುವ ಸಂದರ್ಭಗಳನ್ನು ದೆಹಲಿ ನಿವಾಸಿಗಳು ವ್ಯರ್ಥಗೊಳಿಸುವುದಿಲ್ಲ. ಹೊಡೆದಾಟವೇ ಆಗಿದ್ದರೂ ಅದು ಪುಕ್ಸಟೆಗಾಗಿದ್ದರೆ ಅಲ್ಲಿ ಕ್ಯೂನ ಬಾಲಕ್ಕೆ ಅಂಟಿ ನಿಲ್ಲಲು ಅವರು ಅಳುಕುವುದಿಲ್ಲ. ಮಾರ್ಗದ ಬದಿಯ ಮೋಟರ್ ಅಪಘಾತ ಅಥವಾ ಮಂಗನ ಕುಣಿತ, ಉದ್ಯಾನವನದ ಹುಲ್ಲುಗಾವಲಿನಲ್ಲಿ ಜರಗುವ ಸತ್‌ಸಂಗ ಅದೂ ಅಲ್ಲವಾದರೆ ಯಾವನಾದರೂ ಸ್ವಾಮೀಜಿ ನಡೆಸುವ ಗೀತಾಪ್ರವಚನ, ಬೋಟ್‌ಕ್ಲಬ್‌ನಲ್ಲಿ ಆಗಾಗ ಜರಗುವ, ಯಾವುದಾದರೂ ರಾಜಕೀಯ ಪಕ್ಷದ ಮತಪ್ರದರ್ಶನ. ಮಧ್ಯಾಹ್ನದ ವಿರಾಮ ವೇಳೆಗಳಲ್ಲಿ, ಸಾಹೇಬರುಗಳ ರಮ್ಮಿಯಾಟ–ಇವನ್ನೆಲ್ಲ ವೀಕ್ಷಿಸಲು ಕುತೂಹಲ ಮತ್ತು ತಾಳ್ಮೆಯೊಂದಿಗೆ ಜನಜಂಗುಳಿ ಕಾದು ನಿಂತಿರುತ್ತದೆ.

ಆದರೆ, ಇವತ್ತು ಯಾಕೆ ದೆಹಲಿಗೆ ಪರಿಚಿತವಾಗಿದ್ದ ಜನಪ್ರವಾಹ ಕಾಣಿಸುತ್ತಾ ಇಲ್ಲ? ಸರಕಾರಿ ಅಧಿಕಾರಿಗಳಿಗೆಂದೇ ಪ್ರತ್ಯೇಕ ನಿರ್ಮಿಸಲಾದ ಎನ್‌ಕ್ಲೋಜರ್‌ನಲ್ಲಿ ಕುಳಿತು ಸುತ್ತಲೂ ದಿಟ್ಟಿಸಿದನು ರವಿ. ಶಾಂತಿವನದ ವಿಶಾಲವಾದ ಹುಲ್ಲುನೆಲದಲ್ಲಿ ಖಾಲಿ ಜಾಗಗಳು ಅಲ್ಲಲ್ಲಿ ಹರವಾಗಿಯೇ ಕಾಣಿಸುತ್ತಿವೆ. ಅತಿಥಿಗಳಿಗೆ ಮೀಸಲಾಗಿರುವ ಕುರ್ಚಿಗಳೂ ಒಂದಿಷ್ಟು ಖಾಲಿಬಿದ್ದಿವೆ. ಅಷ್ಟೇ ಅಲ್ಲ. ಫಿಲ್ಮ್ ಫೆಸ್ಟಿವಲ್ ಇರಲಿ. ರಿಪಬ್ಲಿಕ್ ಡೇ ಇರಲಿ ಪಾಸ್‌ಗಳಿಗಾಗಿ ಏನು ಮಾಡಲೂ ಹಿಂಜರಿಯದ ಸರಕಾರಿ ಅಧಿಕಾರಿಗಳ ಎನ್‌ಕ್ಲೋಜರ್‌ನಲ್ಲೂ ಕುರ್ಚಿಗಳು ಖಾಲಿ ಬಿದ್ದಿವೆ.

ರವಿ, ಈ ಹಿಂದಿನೆರಡು ಅಂತಿಮ ಯಾತ್ರೆಗಳ ನೆನಪುಗಳನ್ನು ಕೆದಕಿ ನೋಡಿದನು. ಮೊದಲನೆಯದ್ದು ನೆಹರೂರದ್ದು. ಅಂದು ಈ ಯಮುನಾ ತೀರದ ವಿಶಾಲತೆಯಲ್ಲಿ ಶವಮಂಚ ನಿಧಾನವಾಗಿ ತೆವಳುತ್ತ ಸಾಗಿದ್ದ ರಾಜಪಥ. ಮಧುರಾರೋಡ್, ರಿಂಗ್ ರೋಡ್‌ಗಳೆಲ್ಲವುಗಳ ಇಬ್ಬದಿಗಳಲ್ಲೂ ಸಾಸಿವೆ ಬಾಚಿ ಎಸೆದರೂ ನೆಲಕ್ಕೆ ಬೀಳಲಾರದಷ್ಟು ಜನಸಂದಣಿ. ಹರಿದ್ವಾರ್, ಉಜ್ಜಯಿನಿ, ನಾಸಿಕ್, ಕಾಶಿಗಳ ಕುಂಭ ಮೇಳಗಳೆಲ್ಲಕ್ಕೂ ಸೇರಿದ್ದ ಒಟ್ಟು ಮೊತ್ತಕ್ಕಿಂತಲೂ ಹೆಚ್ಚಿನ ಜನಸಂದಣಿ ಇದು! ತಾಶ್ಕೆಂಟ್‌ನಿಂದ ಶಾಸ್ತ್ರೀಜಿಯ ಕಳೇಬರ ತಂದಾಗಲೂ ಬಳಿಕ ಅದರ

ಸಂಸ್ಕಾರ ಯಮುನೆಯ ದಡದಲ್ಲಿ ನಡೆದಾಗಲೂ ಒಟ್ಟಾಗಿದ್ದ ಜನಸಂದಣಿ ಕೂಡ ಭಾರೀ ದೊಡ್ಡದಾಗಿತ್ತು.

ಆದರೆ, ಇವತ್ತು ಜನಸಂದಣಿಯ ಕಣ್ಣ ಮುಂದೆಯೇ ಬೆಳೆದು, ಜನಸಮೂಹದ ಹೃದಯ ಸ್ಪಂದನದೊಂದಿಗೇ ಒಂದಾಗಿದ್ದ ಇಂದಿರಾರಿಗೆ ಅಶ್ರುತರ್ಪಣ ಸಲ್ಲಿಸಲು ಸಹಜ ರೀತಿಯಲ್ಲಾಗಿದ್ದರೆ ಒಂದು ಜನ ಪ್ರಳಯವೇ ಯಮುನಾ ತೀರಕ್ಕೆ ಹರಿದು ಬರಬೇಕಾಗಿತ್ತು. ಸಂಜಯ್‌ನ ಶವಯಾತ್ರೆಗೆ ಕೂಡ ಇದಕ್ಕಿಂತಲೂ ಹೆಚ್ಚು ಜನ ಜಮಾಯಿಸಿದ್ದರು.

ರವಿ ಸುತ್ತಲೂ ನೋಡಿದ. ಆತನ ಅನುಭವೀ ದೃಷ್ಟಿ ನೆರೆದ ಸಂದಣಿಯಲ್ಲಿರುವ ಜನರ ಸಂಖ್ಯೆಯನ್ನು ಲೆಕ್ಕ ಹಾಕಿತು. ಒಂದು ಲಕ್ಷಕ್ಕಿಂತ ಕಡಿಮೆಯೇ. ಎಂಬತ್ತೈದೋ ತೊಂಬತ್ತೋ ಸಾವಿರ, ಅಷ್ಟೇ. ವರ್ಷ ವರ್ಷವೂ ಜರಗುತ್ತಿರುವ ರಾಮಲೀಲೆ ವೀಕ್ಷಿಸಲು ಕೂಡ ಇದಕ್ಕಿಂತ ಹೆಚ್ಚು ಜನ ಬಂದು ಜಮಾಯಿಸುತ್ತಾರೆ. ದೆಹಲಿಯಲ್ಲಿ ಅರುವತ್ತು ಲಕ್ಷ ಜನರಿದ್ದಾರೆ ಎಂಬುದನ್ನು ಗಣನೆಗೆ ತೆಗೆದುಕೊಂಡಾಗ ಒಂದು ಲಕ್ಷ ಅಷ್ಟು ದೊಡ್ಡ ಸಂಖ್ಯೆಯೇನೂ ಅಲ್ಲ; ಅದರಲ್ಲೂ ಇಂದಿರಾರಂಥ ಜನಪ್ರಿಯ ನಾಯಕಿಯ ಅಂತ್ಯ ಸಂಸ್ಕಾರ ಸಮಾರಂಭ ಎಂದ ಮೇಲೆ. ಕೊಲೆ ಮಾಡಲ್ಪಟ್ಟ ಪರಿಸ್ಥಿತಿಯ ಬರ್ಬರತೆಯ ಕುರಿತು ಯೋಚಿಸಿದ್ದೇ ಆದರೆ ಸಮಗ್ರ ದೆಹಲಿಯೇ ಇಲ್ಲಿ ಪ್ರತ್ಯಕ್ಷದರ್ಶಿಯಾಗಬೇಕಿತ್ತು. ಒಂದು ಕಾಲಘಟ್ಟದ ಒಳತುಡಿತಗಳಷ್ಟೂ ಚಿತ್ತಾಗ್ನಿಯಲ್ಲಿ ಕರಗಿ ಇಲ್ಲವಾಗುತ್ತಿರುವ ಮುಹೂರ್ತ ಇದು. ಮರಣದ ಹಿಂದಿನ ದಿನ ಇಂದಿರಾ ಒರಿಸ್ಸಾದಲ್ಲಿ ಜನರನ್ನು ಉದ್ದೇಶಿಸಿ ಮಾಡಿದ ಸಭೆಯಲ್ಲಿ ಇದಕ್ಕಿಂತಲೂ ಜಾಸ್ತಿ ಜನ ಸೇರಿದ್ದರು. ಅಲ್ಲಿ ಅವರು ಘೋಷಿಸಿದ್ದರು. ಇವತ್ತು ನಾನು ಸಾಯುವುದಾಗಿದ್ದರೂ ನನ್ನ ಒಂದೊಂದು ಹನಿ ರಕ್ತವೂ ಭಾರತೀಯರ ಒಗ್ಗಟ್ಟಿನ ಬೆಸುಗೆಗೇ ನೆರವಾಗುತ್ತದೆ. ಮರುದಿನವೇ ಆಕೆ ಮೃಗೀಯವಾಗಿ ಕೊಲೆಗೈಯಲ್ಪಟ್ಟರು. ಆಕೆ ಸುರಿಸಿದ್ದ ರಕ್ತದ ಹನಿಗಳು ವ್ಯರ್ಥವಾಗುತ್ತಿವೆಯೇ? ಕಳೆದ ಮೂರು ದಿನಗಳಲ್ಲಿ ಎಷ್ಟು ಮಂದಿ ಭಾರತೀಯರು ಜೀವಂತ ಸುಡಲ್ಪಡಲಿಲ್ಲ ಈ ಇಂದ್ರಪ್ರಸ್ಥದ ಹೊರವಲಯದಲ್ಲಿ?

ಪಕ್ಕದಲ್ಲಿ ಕುಳಿತಿರುವ ಇಂದೂ ಶ್ರೀಗಂಧದ ಕೊರಡುಗಳಿಂದ ಚಿತೆ ಸಜ್ಜುಗೊಳಿಸಲಾದ ವೇದಿಕೆಯತ್ತ ಬೆರಳು ತೋರಿಸುತ್ತ ಏನೋ ಹೇಳಿದಳು. ಹೌದು, ವಿವಿಧ ರಾಜ್ಯಗಳಿಂದ ಬಂದಿರುವ ಮಂತ್ರಿಗಳ, ಖದ್ದರ್‌ಧಾರಿಗಳಾದ ಪಕ್ಷ ಕಾರ್ಯಕರ್ತರ ಹಾಗೂ ಸಮವಸ್ತ್ರ ತೊಟ್ಟ ಸೆಕ್ಯೂರಿಟಿ ಗಾರ್ಡ್‌ಗಳ ನಡುವೆ ಚಿಕ್ಕ ಜಗ್ಗಾಟವೊಂದು ನಡೆಯುತ್ತಾ ಇದೆ. ನಾಮುಂದೆ, ನಾಮುಂದೆ ಎಂಬಂತೆ.

ಈ ಹೊತ್ತಿನಲ್ಲಾದರೂ ಅವರೆಲ್ಲ ತುಸು ಶಿಸ್ತು, ಸಂಯಮಗಳನ್ನು ಪಾಲಿಸಬಾರದೆ ಇಂದೂ ತನ್ನಷ್ಟಕ್ಕೇ ಎಂಬಂತೆ ಉದ್ಗರಿಸಿದಳು.



ಅವರ ಮಟ್ಟಿಗೆ ಇಂದಿರಾರ ಮರಣ ವಿಕ್ರಯಿಸಿ ಹಣ ಮಾಡಬಹುದಾದ ಒಂದು ಘಟನೆಯಷ್ಟೇ. ನೂತನ ಪ್ರಧಾನಮಂತ್ರಿಯ ಗಮನಕ್ಕೆ ಬರಬೇಕೆಂಬ ಸ್ವಾರ್ಥವೇ ಅವರ ಪರದಾಟದ ಹಿಂದೆ ಇರುತ್ತದೆ.

ರಾಜೀವ್‌ಗಾಂಧಿ ಮಾತ್ರ ತನ್ನ ಖಾಸಗಿ ದುಃಖಗಳಷ್ಟನ್ನೂ ಮನದೊಳಗೆಲ್ಲೋ ಬಚ್ಚಿಟ್ಟು ನಿರ್ಲಿಪ್ತತೆಯ ಮುಖವಾಡ ತೊಟ್ಟುಕೊಂಡಿರುವರು. ಸರಿದು ಹೋಗುತ್ತಿರುವ ಪ್ರತಿಯೊಂದು ನಿಮಿಷವೂ ರಾಜೀವರ ಮಟ್ಟಿಗೆ ಅಗ್ನಿಪರೀಕ್ಷೆಯದ್ದೇ. ವಿದೇಶಗಳಿಂದ ಬಂದಿರುವ ನೂರಕ್ಕೂ ಮೀರಿದ ಮುಖ್ಯಾತಿಥಿಗಳಲ್ಲಿ ರಾಜರುಗಳೂ ರಾಷ್ಟ್ರಪತಿಗಳೂ ಪ್ರಧಾನ ಮಂತ್ರಿಗಳೂ ಇರುವರು. ಅವರಲ್ಲದೆ ಮಿಲಿಯಗಟ್ಟಲೆ ಟಿ.ವಿ. ಪರದೆಗಳ ಮೂಲಕ ಕೋಟಿಗಟ್ಟಲೆ ಜನರೂ ತನ್ನ ವರ್ತನೆಯನ್ನು ವೀಕ್ಷಿಸುತ್ತಿರಬಹುದು. ಈ ನಿಮಿಷಗಳ ಮುಳ್ಳಿನ ಮೊನೆ ಮೇಲೆ ನಿಲ್ಲುವಾಗ ಸಂಯಮ ಕಳಕೊಳ್ಳಕೂಡದು. ವೈಯಕ್ತಿಕ ಒಳ ತುಮುಲಗಳು ಸಾರ್ವಜನಿಕ ಸ್ವತ್ತಾಗಿರುವ ತನ್ನ ಇಮೇಜ್ ಅನ್ನು ಕೆಡಿಸಕೂಡದು. ಪರಂಪರಾಗತವಾಗಿ ಕಿರೀಟ ಮತ್ತು ರಾಜ್ಯಭಾರವನ್ನು ವಹಿಸಿಕೊಳ್ಳಬೇಕಾದಂಥ ವ್ಯವಸ್ಥೆಯಿರುವ ದೇಶಗಳಲ್ಲಿ ಕಿರೀಟದ ಹಕ್ಕುದಾರರಿಗೆ ಕಲಿಸಲ್ಪಡುವ ಬಾಲಪಾಠಗಳಲ್ಲಿ ಇದೂ ಒಂದೇ–ಸಾರ್ವಜನಿಕ ವೇದಿಕೆಗಳಲ್ಲಿ ಖಾಸಗಿ ದುಃಖ, ನೋವು, ಸಂಕಟ ಸಂಕೋಚಗಳಾವುದನ್ನೂ ಬಹಿರಂಗಪಡಿಸದಿರಬೇಕು.

ರಾಜೀವ್ ಯೋಚಿಸುತ್ತಿರಬಹುದು: ತನಗೆ ಇದಾವುದನ್ನೂ ಯಾರೂ ಕಲಿಸಿದ್ದಿಲ್ಲ. ಒಂದರ್ಥದಲ್ಲಿ, ತನಗೆ ಪ್ರಧಾನಿ ಪಟ್ಟ ದೊರೆತಿರುವುದು ಪಾರಂಪರ್ಯವಾಗಿಯೇ. ಆದರೆ, ತಾನು ಈ ವೇಷತೊಡಲು ಬಯಸಿರಲಿಲ್ಲ. ಲಂಡನ್‌ನ ಇಂಪೀರಿಯಲ್ ಆ್ಯಂಡ್ ಸೈಂಟಿಫಿಕ್ ಕಾಲೇಜಿನಲ್ಲಿ ವ್ಯಯಿಸಿದ್ದ ಎರಡು ವರ್ಷಗಳಲ್ಲಿ ತಾನು ಅಧ್ಯಯನ ಮಾಡಿದ್ದು ಇದಾವುದೂ ಆಗಿರಲಿಲ್ಲ. ಮೆಕ್ಯಾನಿಕಲ್ ಇಂಜಿನಿಯರಿಂಗ್‌ನಲ್ಲಿ ಪದವಿ ಮತ್ತು ಓರ್ವ ಪೈಲೆಟ್ ಆಗತಕ್ಕ ತರಬೇತಿಗಳಷ್ಟೇ ಹೊಂದಿದ್ದರೆ ಈ ಹುದ್ದೆಗೆ ಅರ್ಹನಾಗುತ್ತೇನೆ ಎಂಬ ನಂಬಿಕೆಯೂ ತನಗಿರಲಿಲ್ಲ. ಕಿರೀಟ, ಅಧಿಕಾರ ದಂಡ ವಗೈರೆಗಳನ್ನೆಲ್ಲ ಧರಿಸಿ ರಾಜಾಪಾರ್ಟ್ ಅಭಿನಯಿಸುವ ಆಸೆ ಇದ್ದದ್ದು ತನ್ನ ತಮ್ಮನಿಗೆ. ಆತ ತಕ್ಕಮಟ್ಟಿಗೆ ಆ ಪಾತ್ರಾಭಿನಯಕ್ಕೆ ತಯಾರಾಗುತ್ತಲೂ ಇದ್ದ. ಸಫ್ದರ್‌ಜಂಗ್ ಏರ್‌ಪೋರ್ಟಿನಿಂದ ಮೇಲಕ್ಕೆ ಹಾರಿದ್ದ ಆ ಕ್ರೀಡಾ ವಿಮಾನದಿಂದ ಸ್ಟಂಟ್ ಮಾಡುವ ಮೂರ್ಖತನವನ್ನು ಆತ ತೋರ್ಪಡಿಸದೆ ಇರುತ್ತಿದ್ದರೆ ರಾಜೀವ್ ಇವತ್ತು ಎಲ್ಲಿರುತ್ತಿದ್ದರೊ ಏನೊ.

ಹೌದು. ಅಮ್ಮನ ವಿಶೇಷ ಅನುಮತಿಯೊಂದಿಗೆ ವರಿಸಿದ್ದ ಇಟಾಲಿಯನ್ ಚೆಲುವೆಯ ಜತೆಗೂಡಿ ತಾನು ಯಾವತ್ತೂ ಮೆಚ್ಚಿಕೊಂಡಿದ್ದ ಮೊಝಾರ್ಟ್ ಆಲಿಸುತ್ತಾ ರಾಜಕೀಯ ಗದ್ದಲದಿಂದೆಲ್ಲ ದೂರವಿದ್ದುಕೊಂಡು ರಾಜೀವ್ ಶಾಂತ

ಜೀವನ ಸಾಗಿಸುತ್ತಿದ್ದರು. ಖದ್ದರ್ ಕುರ್ತಾ ಮತ್ತು ಪೈಜಾಮಗಳನ್ನು ರಾಜೀವ್ ಎಂದೂ ಮೆಚ್ಚಿಕೊಂಡಿರಲಿಲ್ಲ. ಗಾಂಧಿ ಟೋಪಿಧಾರಿಗಳಾದ ಡೊಳ್ಳು ಹೊಟ್ಟೆಯ ಪುಢಾರಿಗಳ ಜತೆ ಹೊಂದಿಕೊಳ್ಳಲು ಅವರಿಗೆ ಯಾವತ್ತೂ ಸಾಧ್ಯವಾಗಿರಲಿಲ್ಲ. ಆ ಪುಢಾರಿಗಳಲ್ಲಿ ಹೆಚ್ಚಿನವರು ತಮ್ಮ ಭವಿಷ್ಯ ಜೀವನವನ್ನು ತಿಹಾರ್ ಜೈಲಿನ ಅಂಧಕಾರದಲ್ಲಿ ಸವೆಸತಕ್ಕಷ್ಟು ಅಪರಾಧಗಳನ್ನು ಎಸಗಿದ್ದಾರೆ. ದರೋಡೆ, ಕೊಲೆ ಮುಂತಾದವುಗಳೆಲ್ಲ ಅವರಿಗೆ ಮಕ್ಕಳಾಟಿಕೆಗಳೇ. ತಾನು ಜೀನ್ಸ್ ತೊಟ್ಟುಕೊಂಡು, ಮೊಝಾರ್ಟ್ ಆಲಿಸುತ್ತ, ತನ್ನ ಮೆಚ್ಚಿನ ಮೂರೊ, ನಾಲ್ಕೊ ಡೋಬರ್‌ಮನ್ ಪಿನ್‌ಶರ್, ಬುಲ್‌ಡೋಗ್, ಆಲ್ಸೇಷನ್‌ಗಳನ್ನು ಜತೆಗೊಯ್ಯುತ್ತ ಕುಲುವಿನಲ್ಲೊ, ಗೋವಾದಲ್ಲೊ, ಸಿಮ್ಲಾದಲ್ಲೊ ಆರಾಮವಾಗಿ ಜೀವನ ಸಾಗಿಸುವುದು. ಜತೆಗೆ ಸೋನಿಯಾ ಹಾಗೂ ಪ್ರಿಯಾಂಕಾ ಮತ್ತು ರಾಹುಲ್; ಇಂಡಿಯಾ ಏರ್‌ಲೈನ್‌ನ ನೌಕರಿ. ಎಷ್ಟೊಂದು ಶಾಂತವೂ ಸಂತೃಪ್ತವೂ ಆಗಿರುತ್ತಿತ್ತು ಆ ಜೀವನ!

ಚೀಫ್ ಮೋರ್ನರ್ಸ್ ಎಂದು ದೊಡ್ಡ ಅಕ್ಷರಗಳಲ್ಲಿ ಬರೆಯಲಾದ ಎನ್‌ಕ್ಲೋಜರ್‌ನತ್ತ ಹೊರಳಿತು ರಾಜೀವರ ಮುಖ. ಹೌದು, ಮೇನಕಾ, ಮಗ ವರುಣ್ ಫಿರೋಜ್ ಜತೆಯಲ್ಲಿರುವಳು. ಆಕೆ ತಾನು ಉಟ್ಟುಕೊಂಡಿರುವ ಬಿಳಿ ಸೀರೆಯ ಸೆರಗಿನಿಂದ ತಲೆ ಮತ್ತು ಭಾಗಶಃ ಮುಖವನ್ನು ಮರೆ ಮಾಡಿರುವಳು. ಸಂಜಯ್ ಮದುವೆಯಾದ ಕೆಲವೇ ದಿನಗಳಲ್ಲಿ ನವದಂಪತಿಗಳನ್ನು ತಾನು ಕಂಡಿದ್ದನ್ನು ಜ್ಞಾಪಿಸಿಕೊಂಡನು ರವಿ. ಅಕ್ಬರ್ ಹೊಟೇಲಿನ ಶೀಶ್ ಮಹಲ್‌ನಲ್ಲಿ ಏರ್ಪಡಿಸಲಾದ ಸತ್ಕಾರ ಸಮಾರಂಭದ ವೇಳೆ, ಅಚ್ಚ ಬಿಳಿ ಪೈಜಾಮ, ಮತ್ತು ಕುರ್ತಾಗಳನ್ನು ಧರಿಸಿದ್ದ ಸಂಜಯ್‌ರ, ಮೊದಲ ಹಂತದ ಬಕ್ಕ ತಲೆಯಲ್ಲಿ, ಒಳಾಂಗಣದ ಅಲಂಕಾರದ ಭಾಗವಾಗಿದ್ದ ಗಾಜಿನ ಬಳೆಗಳ ಮೂಲಕ ತೂರಿ ಬಂದ ಬೆಳಕಿನ ಕಣಗಳು ಹೊಳೆ ಹೊಳೆಯುತ್ತಾ ಇದ್ದುವು. ಅಗಲವಾದ ಜರಿಯಂಚಿರುವ ಗಿಣಿ ಹಸುರು ಬಣ್ಣದ ಸೀರೆ ಉಟ್ಟಿದ್ದಳು ಮೇನಕಾ. ಶಾಂಪೂ ಹಚ್ಚಿ ಸ್ವಚ್ಛ ಮಾಡಿದ ಕೂದಲನ್ನು ಹೆಗಲ ಮಟ್ಟದಲ್ಲಿ ಕತ್ತರಿಸಿ ಮುದುಡಿಸಲಾಗಿತ್ತು. ಆ ನಂಟಾಗಿತ್ತೇ ಇಂದಿರಾ ಮತ್ತು ಸಿಕ್ಖರ ನಡುವಿನ ಸೌಹಾರ್ದದ ಕೇಂದ್ರ ಬಿಂದು? ಇಂದಿರಾ ಯಾವತ್ತೂ ಸಿಕ್ಖರೊಂದಿಗೆ ಸಲುಗೆ ಹೊಂದಿದ್ದರು. ೧೯೬೬ರಲ್ಲಿ ಪ್ರಧಾನಿ ಹುದ್ದೆ ವಹಿಸಿಕೊಂಡೊಡನೆಯೇ ಅವರು ವಿಶಾಲ ಪಂಜಾಬನ್ನು ಪಂಜಾಬ್ ಮತ್ತು ಹರಿಯಾಣಗಳನ್ನಾಗಿ ವಿಭಜಿಸಿ ಸಿಕ್ಖರಿಗೆ ಪಂಜಾಬನ್ನು ಉಡುಗೊರೆ ನೀಡಿದ್ದರು. ಅಂದು ಯಾರೋ ಕೃತಜ್ಞತಾಪೂರ್ವಕ ಹೇಳಿಯೂ ಇದ್ದರು–ರಂಜಿತ್ ಸಿಂಗನ ಅನಂತರ ಸಿಕ್ಖರಿಗೆ ಅವರದ್ದೇ ಆದ ಒಂದು ರಾಜ್ಯವನ್ನು ಒದಗಿಸಿದವರು ಇಂದಿರಾ ಎಂದು. ಆಕೆ ಸಿಕ್ಖರ ಆದರಾಭಿಮಾನಗಳಿಗೆ ಪಾತ್ರರಾಗಿದ್ದರು. ೧೯೬೯ರಲ್ಲಿ ಜರುಗಿದ್ದ ಇಂದಿರಾರ ರಾಜಕೀಯ ಜೀವನದ ಪ್ರಮುಖ ಮೈಲುಗಲ್ಲುಗಳಲ್ಲಿ ಒಂದಾಗಿದ್ದ ರಾಷ್ಟ್ರಪತಿ



ಚುನಾವಣೆಯಲ್ಲಿ ಅಕಾಲಿಗಳು ಇಂದಿರಾರ ಪಕ್ಷ ವಹಿಸಿದ್ದರು. ಪಂಜಾಬ್ ಮತ್ತು ಹರಿಯಾಣಗಳು ಸಮಾನ ಹಕ್ಕು ಹೊಂದಿದ್ದ ಚಂಡೀಘಡವನ್ನು ಪಂಜಾಬ್‌ಗೆ ದಾನವಾಗಿ ನೀಡಲೂ ಇಂದಿರಾ ಮನಸ್ಸು ಮಾಡಿದ್ದರು. ಮಗನು ಓರ್ವ ಸಿಕ್ಖ್ ಯುವತಿಯನ್ನು ಮದುವೆಯಾಗುವುದರೊಂದಿಗೇ ಆ ಮಮತಾ ಭಾವ ಮತ್ತಷ್ಟು ಸುದೃಢವಾಗಿತ್ತು.

ಆದರೆ, ವಿಧಿ ವೈಪರೀತ್ಯವೆಂದೇ ಹೇಳಬೇಕು. ಇವತ್ತು ಮೇನಕಾ ಮತ್ತು ಮಗ ವರುಣ್ ಅನ್ಯರ ಹಾಗೆ ದೂರದಲ್ಲೇ ಕುಳಿತಿದ್ದಾರೆ. ಇಂದಿರಾರ ಚಿತೆಯ ಸಮೀಪದಲ್ಲಿರುವವರು ರಾಜೀವ್, ಸೋನಿಯಾ, ಪ್ರಿಯಾಂಕಾ, ರಾಹುಲ್ ಹಾಗೂ ಕುಟುಂಬ ಪುರೋಹಿತ ಗೋಸ್ವಾಮಿ ಗಿರಿಧಾರಿ ಲಾಲ್‌ರೇ. ಔತಣ ಚಪ್ಪರದೊಳಗಿನ ಪಾರುಪತ್ಯಗಾರನ ಹಾಗೆ ಧೀರೇಂದ್ರ ಬ್ರಹ್ಮಚಾರಿ ಕೂಡ ಅಲ್ಲೆಲ್ಲ ಸುಳಿದಾಡುತ್ತಾ ಇದ್ದಾರೆ. ಆಳವಾಗಿ ಯೋಚಿಸುವಾಗ ಒಂದು ಸಂಗತಿ ಹೆಚ್ಚು ನಿಚ್ಚಳವಾಗುತ್ತಿದೆ. ರಾಜೀವರನ್ನು ರಾಜಕೀಯಕ್ಕೆ ಎಳೆದು ತರಲು ಇಂದಿರಾರನ್ನು ಪ್ರೇರೇಪಿಸಿದ್ದು ಮೇನಕಾಳ ಅದಮ್ಯ ರಾಜಕೀಯ ದುರಾಸೆಯೇ. ಅರಮನೆಯ ದಾಳಗಳ ಚಲನವಲನಗಳನ್ನು ಗಮನಿಸುತ್ತಾ ಇದ್ದವರು ಈ ವಿಚಾರವಾಗಿ ಖಾಸಗಿ ಮಾತುಕತೆಯ ವೇಳೆ ಹೇಳುತ್ತಲೂ ಇದ್ದರು.

ರಾಜೀವರನ್ನು ಉತ್ತರಾಧಿಕಾರಿಯನ್ನಾಗಿ ಮಾಡಬೇಕು ಎಂಬುದಕ್ಕಿಂತಲೂ ಹೆಚ್ಚು ಮೇನಕಾಳಿಗೆ ಅಂತಹ ಅವಕಾಶ ಕೊಡದಿರಬೇಕು ಎಂಬ ಚಿಂತನಾ ಕ್ರಮವಾಗಿತ್ತು ಇಂದಿರಾರ ಅತ್ತೆ ಮನಸ್ಸಿನಲ್ಲಿ ಎಂದು ಯಾರೋ ಹೇಳಿದ್ದು ನೆನಪಾಗುತ್ತಿದೆ. ರಾಜೀವರ ರಾಜಕೀಯ ಕಾರ್ಯ ಸಾಮರ್ಥ್ಯದ ಬಗ್ಗೆ ತಾಯಿಗೆ ಆತಂಕಗಳಿದ್ದವು. ಸಂಜಯನೊಂದಿಗೆ ಹೋಲಿಸಿದಾಗ ಈ ನೇರ ದಾರಿಯ ಮಗನಿಗೆ ರಾಜಕೀಯದ ಗೊಂಡಾರಣ್ಯಗಳಲ್ಲಿ ದಾರಿ ತಪ್ಪಬಹುದೆಂದು ಆ ತಾಯಿ ಹೆದರಿದ್ದಿರಬೇಕು.

ರಾಜೀವರ ಉಭಯ ಸಂಕಟವೂ ಅರ್ಥವಾಗುವಂಥದ್ದೇ. ಒಂದು ಬದಿಯಲ್ಲಿ ಶಾಂತವೂ ಸಂತೃಪ್ತವೂ ಆದ ಕುಟುಂಬ ಜೀವನ. ಇನ್ನೊಂದು ಬದಿಯಲ್ಲಿ ಅನಿಶ್ಚಿತತ್ವದ, ಗಂಡಾಂತರಗಳು ತುಂಬಿರುವ ನೆಮ್ಮದಿಯಿಲ್ಲದ ರಾಜಕೀಯ ಜೀವನ.

ಇಂತಹ ಸಂದರ್ಭಗಳಲ್ಲಿ ಅವನವನಿಗೆ ಸಂಬಂಧಪಟ್ಟ ನಿರ್ಧಾರಗಳನ್ನು ಅವನವನೇ ತೆಗೆದುಕೊಳ್ಳಬೇಕಾಗುತ್ತದೆ. ಆಯ್ಕೆಯ ಸಂಕಷ್ಟವನ್ನು ಇತರರೊಂದಿಗೆ ಹಂಚಿಕೊಳ್ಳಲು ಸಾಧ್ಯವಾಗುವುದಿಲ್ಲ. ಸ್ವತಃ ಸರಿ, ತಪ್ಪುಗಳನ್ನು ವಿಶ್ಲೇಷಿಸುತ್ತ ನಿರ್ಧಾರಕ್ಕೆ ಬರಬೇಕು. ಒಬ್ಬೊಬ್ಬ ಮನುಷ್ಯನೂ ಕೆಲವೊಂದು ಉಭಯ ಸಂಕಟಗಳ ಹೊರೆ ಹೊರಲೇಬೇಕಾಗುತ್ತದೆ. ತುಸು ಹೊತ್ತಿನ ಮುನ್ನ ಅಂಗದ್, ದರ್ಶನ್, ಇಂದೂ– ಈ ಮೂವರೂ ತಂತಮ್ಮ ಮುಂದಿನ ದಾರಿ ಯಾವುದೆಂದು ನಿರ್ಧರಿಸಲಿಕ್ಕಾಗದೆ ಗೊಂದಲಕ್ಕೊಳಗಾಗಿ ರವಿಯ ನೆರವನ್ನು ಯಾಚಿಸಿದ್ದರು. ಅವರ ಸಲುವಾಗಿ

ನಿರ್ಧಾರ ತೆಗೆದುಕೊಳ್ಳುವ ಹೊಣೆಯನ್ನು ಅವರು ರವಿಗೆ ಒಪ್ಪಿಸಲು ಹವಣಿಸಿದ್ದರು.

ರವಿ ಅವರಿಗೆ ತಿಳಿಸಿ ಹೇಳಲು ಯತ್ನಿಸಿದ್ದ. ಉಭಯ ಪಾರ್ಶ್ವಗಳಲ್ಲೂ ಇರಬಹುದಾದ ಒಳಿತು ಕೆಡುಕುಗಳ ಬಗ್ಗೆ ವಿಚಾರಮಾಡಲು ಪ್ರೇರೇಪಿಸಿದ್ದ. ಸ್ವಂತ ದೃಷ್ಟಿಕೋನದಿಂದ ವಿಶ್ಲೇಷಿಸಲು ನಿರ್ದೇಶಿಸಿದ್ದ.

ಅಮೆರಿಕದ ವಿಶ್ವವಿದ್ಯಾಲಯದಲ್ಲಿ ಸಂಶೋಧನೆಗಳನ್ನು ಮಾಡುತ್ತ, ಆಯುಷ್ಯ ಹೆಚ್ಚಿಸುವ ಜೆನಿಟಿಕ್ ಸೂತ್ರಗಳನ್ನು ಕಂಡುಹಿಡಿಯುವುದೇ ತನ್ನ ಜೀವನದ ಗುರಿ ಎಂದೆನ್ನಿಸುವುದಾದರೆ ಇಂದೂ ಆ ದಾರಿಯನ್ನು ಆಯ್ಕೆ ಮಾಡಬೇಕು. ಅದಲ್ಲ, ಕಳೆದ ಮೂರು ನಾಲ್ಕು ದಿನಗಳಲ್ಲಿ ಹಲವು ಬಗೆಯ ಕ್ರೌರ್ಯಗಳಿಗೆ ಗುರಿಯಾಗಿರುವ ವಿಧವೆಯರ ಮತ್ತು ಮಕ್ಕಳ ಆರೈಕೆ ಮಾಡುತ್ತ ಮುಂದಿನ ಜೀವನವನ್ನು ಸಂತ್ರಸ್ತರ ಸೇವೆಗೆ ಮೀಸಲಿಡಬೇಕೆಂದು ಮನಸ್ಸು ಹೇಳುವುದಾದರೆ ಇಂದೂ ಅದನ್ನೊಪ್ಪಿಕೊಳ್ಳಬೇಕು ಎಂದಿದ್ದನು ರವಿ.

ಸೇವೆಯ ಜತೆಯಲ್ಲೇ ರವಿಯಣ್ಣನ ಬಾಳಸಂಗಾತಿಯಾಗುವ ಭಾಗ್ಯ ಕೂಡ ಬೋನಸ್ ಆಗಿ ದೊರೆತಾಗ ತಕ್ಕಡಿಯ ಯಾವ ತಟ್ಟೆ ತಗ್ಗಲಿದೆಯೆಂದರಿತುಕೊಳ್ಳಲು ನನಗೆ ಹೆಚ್ಚಿನ ವೇಳೆಯೇನೂ ಬೇಕಾಗಿಲ್ಲ.

ರವಿ ತತ್‌ಕ್ಷಣ ತಿದ್ದಿದ್ದ.

ರವಿಯಣ್ಣನು ನಡುವಯಸ್ಸು ದಾಟಿದ ಓರ್ವ ಸರಕಾರಿ ನೌಕರನಷ್ಟೇ ಎಂದು ಮನವರಿಕೆಯಾಗುವಾಗ ತಕ್ಕಡಿಯ ಮರು ತಟ್ಟೆಯೇ ತಗ್ಗಬಾರದೆಂದಿಲ್ಲ.

ಆಗಲಿ, ನಾನು ಈ ಸವಾಲನ್ನು ಒಪ್ಪಿಕೊಳ್ಳುತ್ತೇನೆ–ಇಂದೂ ಹೇಳಿದ್ದಳು.

ಹೆಚ್ಚು ಆಳವಾದುದಾಗಿತ್ತು ದರ್ಶನ್‌ಳ ವ್ಯಥೆ. ಈಗಲೂ ಆ ಕ್ಷಣದ ಆಘಾತ ರವಿಯ ಅನುಭವಕ್ಕೆ ಬರುತ್ತಾ ಇದೆ. ಆತ್ಮಹತ್ಯೆಯ ಕುರಿತು ಅವಳು ಯೋಚಿಸಿದ್ದು ಆಗ ಥಟ್ಟನೆಯಾಗಿರಲಿಕ್ಕಿಲ್ಲ. ಹಳೆಯ ವಸ್ತ್ರವೊಂದನ್ನು ಹರಿದು ಬಿಸುಡುವಷ್ಟೇ ನಿಷ್ಕಾಳಜಿಯೊಂದಿಗೆ ದುಷ್ಕರ್ಮಿಗಳ ಗುಂಪು ಅವಳನ್ನು ಸಮೀಪಿಸಿದ್ದ ಕ್ಷಣದಿಂದಲೇ ಅವಳು ಆ ಕುರಿತು ಚಿಂತಿಸುತ್ತಲೇ ಇದ್ದಿರಬಹುದು. ಪಾಪಪ್ರಜ್ಞೆ, ಅಪಮಾನ, ಅವಳನ್ನು ಸ್ವತಃ ಮುಗಿಸಿ ಬಿಡಲು ಒತ್ತಾಯಿಸುತ್ತಲೇ ಇದ್ದಿರಬಹುದು. ಗುರುಗ್ರಂಥ ಸಾಹಿಬ್‌ನ ನಿರಂತರ ಪಠನದಿಂದ ಪ್ರಾಪ್ತವಾಗಿದ್ದ ಆಧ್ಯಾತ್ಮಿಕ ಧೈರ್ಯ, ಅಂಗದ್‌ನಲ್ಲಿ ತನ್ನ ಅಳಿವು ಉಂಟುಮಾಡಬಹುದಾದ ದುಷ್ಪರಿಣಾಮ ಹಾಗೂ ಎಲ್ಲಕ್ಕಿಂತ ಜೀವನದ ಬಗೆಗಿನ ಆಸಕ್ತಿ ಅವಳನ್ನು ಮುಂದೆಯೂ ಬದುಕಲು ಪ್ರೇರೇಪಿಸುತ್ತಿರಬಹುದು.

ಉಪಕಾರ್‌ಸಿಂಗನ ಅಂಗೈಯಿಂದ ದರ್ಶನ್ ಸಯನೈಡ್ ಮಾತ್ರೆಯನ್ನು ಎತ್ತಿ ಬಾಯಿಗೆ ಒಯ್ದ ದೃಶ್ಯ ಒಂದು ಸ್ಲೋ ಮೋಶನ್ ಚಿತ್ರದಲ್ಲೆಂಬಂತೆ ರವಿಯ ಮನಸ್ಸಿನಲ್ಲಿ ಮಿಂಚಿ ಮಾಯವಾಯಿತು.....

* * *



## ಅಧ್ಯಾಯ ೨೮

## ಇತಿಹಾಸದಲ್ಲಿ ಲೀನವಾದ ಇಂದಿರಾ

ನಿಮಿಷಗಳ ತನಕ ಮುಂದುವರಿದಿದ್ದ ಮೂಕತೆಯನ್ನು ಮುರಿಯಲು ಯಾರ ಮನಸ್ಸೂ ಮುಂದಾಗಲಿಲ್ಲ. ಮುಂದೆ ಎಲ್ಲವನ್ನೂ ಆಲಿಸಿದ ಬಳಿಕ ಅಂಗದ್ ಹೇಳಿದ್ದ; ದರ್ಶನ್, ಅದೇ ನಿನ್ನ ಇಚ್ಛೆಯಾಗಿದ್ದರೆ ಈ ಕ್ಯಾಪ್ಸೂಲ್ ಅನ್ನು ನಾನು ಇಟ್ಟುಕೊಳ್ಳುತ್ತೇನೆ; ನಿನಗೆ ಎರಡು ದಿನಗಳ ಕಾಲಾವಕಾಶವನ್ನೂ ಕೊಡುತ್ತೇನೆ. ನನಗಿಂತಲೂ ಈ ಕ್ಯಾಪ್ಸೂಲ್ ಅನ್ನೇ ನೀನು ಹೆಚ್ಚು ಮೆಚ್ಚಿಕೊಳ್ಳುವುದಾದರೆ ನಾನಿದನ್ನು ನಿನಗೆ ಹಿಂದಿರುಗಿಸುತ್ತೇನೆ.

ಅಂಗದ್‌ನ ಕಣ್ಣುಗಳು ತುಂಬಿದ್ದುವು. ತುಟಿಗಳು ಕಂಪಿಸುತ್ತಿದ್ದುವು.

ದರ್ಶನ್ ಅಂಗದ್‌ನ ಎದೆಗೆ ಮುಖವೊತ್ತಿಕೊಂಡಾಗ, ಎರಡು ದಿನಗಳ ಬಳಿಕ ಅವಳು ಯಾವ ಹಾದಿಯನ್ನು ಆಯ್ಕೆ ಮಾಡುವಳು ಎಂಬ ಬಗ್ಗೆ ರವಿಗೆ ಯಾವ ಅನುಮಾನವೂ ಇರಲಿಲ್ಲ.

ಗುರುದೇವ್ ಸಿಂಗ್ ಕೂಡ ಅಂಗದ್‌ಗೆ ಸ್ವಂತ ಹಾದಿ ಯಾವುದೆಂದು ಆಯ್ಕೆ ಮಾಡುವ ಹೊಣೆಯನ್ನು ವಹಿಸಿಕೊಟ್ಟಾಗಿತ್ತು. ರಾಷ್ಟ್ರೀಕೃತ ಬ್ಯಾಂಕೊಂದರಲ್ಲಿ ಆಫೀಸರ್ ಉದ್ಯೋಗ ಒಪ್ಪಿಕೊಂಡು ದರ್ಶನ್‌ಳನ್ನು ಮದುವೆಯಾಗಿ ಎಲ್ಲರಂತೆ ಬದುಕು ಸಾಗಿಸಬಹುದು. ಅಲ್ಲವಾದರೆ ಅನಿಶ್ಚಿತತೆ ಹಾಗೂ ಗಂಡಾಂತರಗಳು ತುಂಬಿರುವುದಂತಿದ್ದು ಇನ್ನೊಂದು ಹಾದಿ; ಭಯೋತ್ಪಾದಕರ ಸಂಘಟನೆಗಳ ಒಳನುಗ್ಗಿ ಅವರನ್ನು ಒಳಿತಿನ ಮಾರ್ಗದಲ್ಲಿ ನಡೆಸುವುದು. ಕ್ರಿಸ್ತನಿಗೂ ಬುದ್ಧನಿಗೂ ಮಹಾತ್ಮಾ ಗಾಂಧಿಗೂ ಮಾತ್ರ ಸಾಧ್ಯವಾಗುವಂಥ ಸಾಹಸಕಾರ್ಯ; ಗುರು ನಾನಕ್, ಗುರು ಅಂಗದ್, ಗುರು ತೇಜ್ ಬಹದೂರ್ ಹಾಗೂ ಗುರು ಗೋವಿಂದ್ ಸಿಂಗ್ ಮಾತ್ರ ಮಾಡಬಲ್ಲ ಮಹತ್ಕಾರ್ಯ ಅದು. ಹೌದು, ತ್ಯಾಗಪೂರ್ಣವಾದ ಸಿಕ್ಖ್ ಚರಿತ್ರೆಯಲ್ಲಿ ಅಂಗದ್‌ನ ಹೆಸರು ದಾಖಲಿಸ್ಪಡಬಹುದು–ಅಂಗದ್ ತಲೆತಿರುಕ ಯುವಕನ ಗುಂಡೇಟಿಗೆ ಗುರಿಯಾಗಿ ಕೊಲೆಗೈಯಲ್ಪಟ್ಟ ಅಸಂಖ್ಯ ಮಂದಿಯಲ್ಲಿ ಅಂಗದ್ ಕೂಡ ಒಂದು ಸಂಖ್ಯೆಯಷ್ಟೇ ಆಗಿಬಿಟ್ಟಾನು.

ಆದರೆ, ಯಾವ ಹಾದಿಯನ್ನು ಆಯ್ಕೆ ಮಾಡಬೇಕೆಂಬ ಸ್ವಾತಂತ್ರ್ಯ ಅಂಗದ್‌ಗಷ್ಟೇ

ಇದೆ. ಆ ಸ್ವಾತಂತ್ರ್ಯದಲ್ಲಿ ಕಠಿಣವಾದ ವ್ಯಥೆಯ ಭಾರವಿದೆಯೆಂಬ ವಾಸ್ತವಿಕತೆಯನ್ನು ಇನ್ನಾರಿಗಿಂತಲೂ ಹೆಚ್ಚು ಚೆನ್ನಾಗಿ ಅಂಗದ್ ಅರಿತಿರುವನು.

ಉಪಕಾರ್ ಸಿಂಗ್ ಕೂಡ ತನ್ನ ಹಾದಿಯನ್ನು ಆಯ್ಕೆ ಮಾಡಿಯಾಗಿದೆ, ಆತ ಆಯ್ಕೆಯ ಕವಲು ಮಾರ್ಗದಲ್ಲಿ ಅನುಮಾನಿಸುತ್ತ ನಿಂತುಕೊಂಡಿದ್ದನು, ಬಹಳ ಹೊತ್ತು. ಐವತ್ತು ಸಾವಿರ ರೂಪಾಯಿ ಬೆಲೆ ಕಟ್ಟಲಾದ ತನ್ನ ತಲೆಯಿಂದ ಪಗಡಿ ಕಳಚಿದ್ದ; ಕೇಶಕರ್ತನ ಮಾಡಿಸಿದ್ದ; ಗಡ್ಡ ಬೋಳಿಸಿದ್ದ. ತ್ರಿಲೋಕ್ ಪುರಿಯ ದುರಂತ ಆತನ ಕಣ್ಣುಗಳನ್ನು ತೆರೆಯಿಸಿತ್ತು. ಪಿಸ್ತೂಲ್ ಮತ್ತು ಸಯನೈಡ್ ಮಾತ್ರೆಗಳನ್ನು ಅಂಗದ್‌ಗೆ ಒಪ್ಪಿಸಿದ್ದ, ತಾನು ಸದಸ್ಯತ್ವ ಹೊಂದಿದ್ದ ಭಯೋತ್ಪಾದಕ ಸಂಘಟನೆಯ ಮನಃಪರಿವರ್ತನೆಗಾಗಿ. ಅಂಗದ್ ನಡೆಸಲಿರುವ ಪ್ರಯತ್ನವನ್ನು ಅನುಗ್ರಹಿಸಿ ಉಪಕಾರ್ ಸಿಂಗ್ ಹೊರಟು ಹೋಗಿದ್ದ–ಸೇವೆಯ, ಸಂತ್ರಸ್ತರ ಸೇವೆಯ, ನಿಷ್ಕಾಮಕರ್ಮದ ಹಾದಿಯತ್ತ.

ತಾನು? ರವಿ ಯೋಚಿಸಿದ; ತನಗೆ ಆಯ್ಕೆ ಮಾಡಲು ಹಾದಿಗಳಿಲ್ಲ. ಯಾವುದೇ ಕವಲು ಮಾರ್ಗಗಳಲ್ಲೂ ತಾನು ಅನುಮಾನಿಸುತ್ತಾ ನಿಂತದ್ದಿಲ್ಲ. ಯಾವುದೋ ಶಕ್ತಿ ತನ್ನನ್ನು ಯಾವತ್ತೂ ಮುಂದಕ್ಕೆ ತಳ್ಳುತ್ತಲೇ ಇತ್ತು. ಗರ್ಭಕೋಶದ ಸುರಕ್ಷಿತತ್ವದಿಂದ ಜೀವನದ ಅನಿಶ್ಚಿತತ್ವದತ್ತ ಹೊರಟಾಗ ತನಗೆ ಆಯ್ಕೆ ಮಾಡುವ ಅವಕಾಶವಿರಲಿಲ್ಲ. ಅದೇ ನಿಶ್ಚಿಂತೆಯೊಂದಿಗೆ ಅದೇ ಅಲಿಪ್ತತೆಯೊಂದಿಗೆ ಮುಂದಕ್ಕೆ ಮುಂದಕ್ಕೆ ಸಾಗುತ್ತಲೇ ಇದ್ದೇನೆ.

ಕಾಲ ಕಿಟಿಕಿಗಳು ಯಾವತ್ತೂ ಹಿಂದಕ್ಕೆ ತೆರೆಯಲ್ಪಡುವುದಿಲ್ಲ.

ಎಲ್ಲವನ್ನು ನೋಡಲಿಕ್ಕಲ್ಲದೆ ಯಾವುದನ್ನೂ ಪಡೆಯಲಿಕ್ಕೆ ವಿಧಿ ತನ್ನನ್ನು ನಿಯೋಜಿಸಲಿಲ್ಲ.

ತಾನು ಕೇವಲ ಸಾಕ್ಷಿ; ಪ್ರತ್ಯಕ್ಷ ಸಾಕ್ಷಿ.

ಇಂದಿರಾರ ಅಂತ್ಯ ಸಂಸ್ಕಾರ ಕ್ರಿಯೆ ನೋಡಲು ಇಲ್ಲಿಗೆ ಬಂದದ್ದೂ ಸ್ವಇಚ್ಛೆಯಿಂದಲ್ಲ. ಕಳೆದ ಎರಡು, ಮೂರು ದಿನಗಳಲ್ಲಿದ್ದ ಗಜಿಬಿಜಿ ಇದ್ದಕ್ಕಿದ್ದಂತೆ ಕೊನೆಗೊಂಡಂತೆ ಅನ್ನಿಸಿತ್ತು. ಇವತ್ತು ಮಧ್ಯಾಹ್ನ. ಒಂದು ತಂಗುದಾಣವಾಗಿ ಮಾರ್ಪಟ್ಟಿದ್ದ ತನ್ನ ಮನೆಯಿಂದ ಒಬ್ಬೊಬ್ಬರೇ ಹೊರಟು ಹೋಗತೊಡಗಿದ್ದರು. ಗುರು ದಯಾಲ್ ಸಿಂಗ್ ಪತ್ತೆಯಾಗಿರುವ ಸುದ್ದಿ ಅರೋರಾ ಫೋನಾಯಿಸಿ ಹೇಳಿದಾಗ ಅಂಗದ್ ದರ್ಶನ್‌ಳನ್ನೂ ಜತೆಗೂಡಿಸಿಕೊಂಡು ರೇಕಾಬ್‌ಗಂಜ್ ಗುರುದ್ವಾರಕ್ಕೆ ಹೋದ. ದರ್ಶನ್ ಅಪ್ಪನನ್ನು ಕಂಡು, ಅಮ್ಮನ ಹಾಗೂ ತಮ್ಮನ ಸಾವಿನ ಸುದ್ದಿಯನ್ನು ಹೇಗೆ ತಿಳಿಸುವಳೋ, ಏನೋ!

ಹರ್‌ಭಜನ್ ಸಿಂಗ್ ಮನೀಂದರ್ ಮತ್ತು ಸುನೀಂದರ್‌ನನ್ನು ಕರೆದೊಯ್ಯುವಾಗ ಅನಾಮಿಕಳನ್ನೂ ಜತೆಗೊಯ್ಯುವ ಆಶಯವನ್ನು ಪ್ರಕಟಪಡಿಸಿದ್ದ.



ಮನೀಂದರ್ ಮತ್ತು ಸುನೀಂದರ್ ಇಷ್ಟರಲ್ಲೇ ಅನಾಮಿಕಳೊಂದಿಗೆ ತುಂಬು ಸಲುಗೆಯನ್ನು ಹೊಂದಿದ್ದರು. ಮಕ್ಕಳೆಲ್ಲ ದೊಡ್ಡವರಾದ ಬಳಿಕ ಪ್ರೀತಂಳಿಗೆ ಹೊತ್ತು ಕಳೆಯುವುದೂ ಕಷ್ಟವಾಗಿದೆ. ತಮ್ಮಂದಿರೂ ನಾದಿನಿಯರೂ ಮಕ್ಕಳಿಗೆ ಅವಸರವಿಲ್ಲ ಎಂಬಂತೆ ಮಧುಚಂದ್ರದ ದಿನಗಳನ್ನು ಹೆಚ್ಚಿಸುವುದರಲ್ಲೇ ಇದ್ದಾರೆ. ಈ ಮಗುವನ್ನು ಪ್ರೀತಂ ಬಂಗಾರದ ಹಾಗೆ ನೋಡಿಕೊಳ್ಳುವಳು ಎಂದಿದ್ದನಾತ.

ಅದಕ್ಕೆ ಅಡ್ಡಿಯೊಡ್ಡಿದವರು ಗುರುದೇವ್ ಸಿಂಗ್: ಬೇಡ, ಈ ಮಗುವನ್ನು ಸಾಕಿ ಸಲಹಬೇಕಾದ ಹೊಣೆ ನನ್ನದು. ಅದೇ ದೈವೇಚ್ಛೆಯೆಂದೂ ಅನ್ನಿಸುತ್ತದೆ. ಅಲ್ಲವಾದರೆ ಅಂಗದ್ ಅನ್ನು ಭಯೋತ್ಪಾದಕರ ಮಧ್ಯಕ್ಕೆ ಕಳುಹಿಸುವ ನಿರ್ಧಾರ ತೆಗೆದುಕೊಳ್ಳುವಷ್ಟರಲ್ಲೆ ಇಂತಹ ಒಂದು ಮಗು ನಮ್ಮ ಮಧ್ಯಕ್ಕೆ ತಲಪಬೇಕಾಗಿರಲಿಲ್ಲ. ನನ್ನ ಇಬ್ಬರು ಮಕ್ಕಳೂ ಬೆಳೆದು ದೊಡ್ಡವರಾದಾಗ ನನ್ನ ಹೆಂಡತಿಯ ಆಕ್ಷೇಪಣೆಯೂ ಇದೇ ಆಗಿತ್ತು–ಹೊತ್ತು ಕಳೆಯಲು ಮಕ್ಕಳಿಲ್ಲ. ಮಗಳು ಮದುವೆಯಾದ ಬಳಿಕ ಕೆನಡಾದಲ್ಲೇ ನೆಲೆಸಿರುವಳು. ವರ್ಷದಲ್ಲೊಮ್ಮೆ ಮಾತ್ರ ಮನೆಗೆ ಬರುತ್ತಾಳೆ. ಅದೂ ಎರಡೋ ಮೂರೋ ವಾರಗಳ ಮಟ್ಟಿಗಷ್ಟೇ. ಮಗಳೂ ಮಕ್ಕಳೂ ಹೊರಟು ಹೋಗುತ್ತಲೇ ಹೆಂಡತಿ ಬೇಸರಕ್ಕೊಳಗಾಗುತ್ತಾಳೆ. ಅಂಗದ್ ಆದರೂ ಅಧ್ಯಯನ ಮುಗಿದ ಬಳಿಕ ಉದ್ಯೋಗ ಸಿಕ್ಕಲಿ ಎಂದು ಹೇಳಿ ಮದುವೆಯನ್ನು ಮುಂದೂಡಿದ್ದ. ಉದ್ಯೋಗ ಸಿಕ್ಕುವುದರಲ್ಲಿದ್ದಾಗ, ಇನ್ನಷ್ಟು ಉದಾತ್ತವಾದ ಕರ್ತವ್ಯ ನಿರ್ವಹಣೆಗಾಗಿ ಅವನು ಹೊರಟು ಹೋಗುವುದರಲ್ಲಿದ್ದಾನೆ. ಒಂದು ಕುಟುಂಬ ಜೀವನ ನಡೆಸಲು ಅವನಿಗೆ ಅವಕಾಶ ದೊರೆಯಬಹುದೊ ಏನೊ!

ಗುರುದೇವ್ ಸಿಂಗ್‌ರ ಕಣ್ಣುಗಳು ತುಂಬಿದ್ದವು. ಬಳಿಕ ದರ್ಶನ್‌ಳ ಕೈಯಿಂದ ಅನಾಮಿಕಾಳನ್ನು ಪಡೆದು ಕಾರು ಹತ್ತಿದ್ದರು.

ದರ್ಶನ್‌ಳ ಕೆನ್ನೆ ಸವರುತ್ತ ಗುರುದೇವ್ ಸಾಂತ್ವನ ಹೇಳಿದ್ದರು–ನೀನು ಕೊರಗಬೇಡ. ಈ ಮಗುವನ್ನು ಅಂಗದ್ ಮರಳಿ ಬರುವ ತನಕ ನಾನು ಸಾಕಿ ಸಲಹುತ್ತೇನೆ. ಅಂಗದ್ ಮರಳಿ ಬಂದಾಗ ನಿಮಗೇ ಇವಳನ್ನು ವಾಪಾಸ್ ಕೊಡ್ತೇನೆ.

ಬಳಿಕ ಮನೆಯಲ್ಲಿ ಇಬ್ಬರೇ ಉಳಿದಿದ್ದೆವು.

ತಾನು ಮತ್ತು ಇಂದೂ.

ಟಿ.ವಿ.ಆನ್ ಮಾಡಿದ್ದೆ. ತೀನ್ ಮೂರ್ತಿ ಭವನದ ಬೃಹತ್ ಗೇಟ್ ದಾಟಿ ಇಂದಿರಾರ ಶವಮಂಚ ಒಳಗೊಂಡ ಗನ್ ಕ್ಯಾರೇಜ್ ಹೊರಬರುತ್ತಾ ಇತ್ತು. ಗಡಿಯಾರದಲ್ಲಿ ಸಮಯನೀಡಿದೆ–೧೨.೩೫. ಪರದೆ ಸರಿಸಿ ಹೊರಗೆ ದಿಟ್ಟಿಸಿದೆ. ಬಿಳಿಚಿಕೊಂಡಿರುವ ಬಿಸಿಲು. ನರೆತ ಆಕಾಶ.

ಬೆಳ್ಳಗಿನ ಲಿಲ್ಲಿ ಹೂಗಳು. ರೋಜಾ ದಳಗಳು ಮತ್ತು ಕಿತ್ತಲೆ ರಂಗಿನ ಮರಿಗೋಲ್ಡ್ ಹೂಗಳಿಂದ ಶವಮಂಚ ಮುಚ್ಚಲ್ಪಟ್ಟಿದೆ.

ಆರ್ಮಿಯಿಂದಲೂ ನೇವಿಯಿಂದಲೂ ಏರ್ ಫೋರ್ಸ್‌ನಿಂದಲೂ ಆರಿಸಲ್ಪಟ್ಟ ತೊಂಬತ್ತು ಮಂದಿ ಗನ್ ಕ್ಯಾರೇಜ್ ಅನ್ನು ಎಳೆಯುತ್ತಿದ್ದಾರೆ. ರಜಪುತಾನ್ ರೆಜಿಮೆಂಟ್‌ನ ಇಪ್ಪತ್ತನಾಲ್ಕು ಬ್ಯೂಗ್ಲರ್‌ಗಳು. ಮೃತ್ಯು ಮಾರ್ಚ್‌ನ ತಾಳದಲ್ಲಿ ಮೆಲ್ಲಗೆ ಸಾಗುತ್ತಿದೆ ಕಳೇಬರದ ಮೆರವಣಿಗೆ.

ಇದ್ದಕ್ಕಿದ್ದಂತೆ ಪ್ರಕಟಣೆ ಕೇಳಿಸಿತ್ತು: ದೆಹಲಿಯಲ್ಲಿ ಕರ್ಫ್ಯೂ ಹಿಂತೆಗೆಯಲಾಗಿದೆ. ಡಿ.ಟಿ.ಸಿ. ಬಸ್‌ಗಳು ಓಡತೊಡಗಿವೆ.

ಸೌತ್ ಅವೆನ್ಯೂವಿನ ಇಬ್ಬದಿಗಳಲ್ಲೂ ಜನಸಂದಣಿ ಹೆಚ್ಚಿಗೆ ಇಲ್ಲವೆಂದು ಗಮನಿಸಿದ್ದೂ ಆಗಲೇ.

ನಾವೂ ಹೋಗೋಣವೇ?

ಇಂದೂ ಆಸೆ ವ್ಯಕ್ತಪಡಿಸಿದ್ದಳು.

ತೇಜ ಫೋನಾಯಿಸಿ ವಾಹನ ವ್ಯವಸ್ಥೆ ಸಮರ್ಪಕವಾಗಿ ನೆರವೇರಿಸಿದ್ದ ಬಗ್ಗೆ ಧನ್ಯವಾದ ಹೇಳಿದ್ದರು. ಆಗ ವಿಚಾರಿಸಿಯೂ ಇದ್ದರು: ಶಾಂತಿವನದಲ್ಲಿ ಇರುತ್ತೀರಲ್ಲ, ಎಂದು. ಅನುಕೂಲವಾದರೆ ಬರುವುದಾಗಿ ಹೇಳಿದ್ದೆ. ಮುಂದಿನ ಗಡಿಬಿಡಿಯಲ್ಲಿ ಆ ವಿಚಾರ ಮರೆತು ಹೋಗಿತ್ತು. ಇಂದೂ ಕೂಡ ಒತ್ತಾಯಿಸಿದಾಗ ಹೊರಟೆವು.

ಮಥುರಾ ರೋಡ್‌ನಿಂದ ಔಟರ್ ರಿಂಗ್ ರೋಡ್‌ಗೆ ಪ್ರವೇಶಿಸಿದಾಗ ಜನಸಾಗರವನ್ನೇ ನಿರೀಕ್ಷಿಸಿದ್ದೆ. ಆದರೆ ಅಚ್ಚರಿಯೆಂದೇ ಹೇಳಬೇಕು. ತೀರ ಕಡಿಮೆ ಪ್ರಮಾಣದಲ್ಲಷ್ಟೇ ಜನರಿದ್ದರು. ವಾಹನಗಳ ಕೊರತೆ, ದೆಹಲಿಯ ಕರ್ಫ್ಯೂ ಮತ್ತು ಕಳೆದ ಎರಡು, ಮೂರು ದಿನಗಳಲ್ಲಿ ಸಂಭವಿಸಿದ್ದ ದೊಂಬಿಗಳು ಜನರನ್ನು ದೂರದಲ್ಲಿರಿಸಿದ್ದಿರಬಹುದು.

ಶವಯಾತ್ರೆ ಶಾಂತಿವನದಲ್ಲಿ ಕೊನೆಗೊಂಡಾಗ, ರಾಜೀವ್ ಗಾಂಧಿ, ಅರುಣ್ ನೆಹರೂ, ಭೂಸೇನೆ, ವಾಯುಸೇನೆ ಮತ್ತು ನೌಕಾಸೇನೆಗಳ ಮುಖ್ಯಸ್ಥರುಗಳು ಹಾಗೂ ಫೀಲ್ಡ್ ಮಾರ್ಶಲ್ ಮಾಣೇಕ್ ಶಾ ಒಟ್ಟಾಗಿ ಕಳೇಬರವನ್ನು ಪಡೆದುಕೊಂಡರು.

ಮದರ್ ತೆರೇಸಾ ಅವರ ಮಾರ್ಗದರ್ಶನದಲ್ಲಿ ಪ್ರಾರ್ಥನಾ ಸಭೆ–ವೇದಗಳಿಂದಲೂ ಬೈಬಲ್‌ನಿಂದಲೂ ಕುರಾನ್‌ನಿಂದಲೂ ಸಮುಚಿತ ಭಾಗಗಳ ಪಠನ ನಡೆಯುತ್ತಾ ಇದೆ.

ವಿ.ವಿ.ಐ.ಪಿ.ಯ ಎನ್‌ಕ್ಲೋಜರ್ ನೋಡುತ್ತ, ಒಬ್ಬೊಬ್ಬರನ್ನೂ ಗಮನಿಸುತ್ತಾ ಇದ್ದಾಳೆ ಇಂದೂ. ಸೋವಿಯತ್ ಪ್ರಧಾನಿ ನಿಕೋಲಾಯ್ ತಿಖನೋವ್ ಅನ್ನು ಅವಳು ಕೇಳಿ ತಿಳಿದುಕೊಂಡಳು. ಅಮೆರಿಕವನ್ನು ಯಾರು ಪ್ರತಿನಿಧಿಸುತ್ತಾರೆಂದು ರವಿಗೂ ಗೊತ್ತಿರಲಿಲ್ಲ. ಪ್ರೆಸಿಡೆಂಟ್ ರೇಗನ್ ಬರುವುದಿಲ್ಲವೆಂಬ ಸುದ್ದಿಯನ್ನು ತೇಜ ತಿಳಿಸಿದ್ದರು. ಜಾರ್ಜ್ ಶುಲ್‌ಟ್ಸ್ ಬಂದಿರುವ ಸಾಧ್ಯತೆ ಇದೆ. ಜನಸಂದಣಿಯಲ್ಲಿ ಶುಲ್‌ಟ್ಸ್ ಕಾಣಸಿಕ್ಕಲಿಲ್ಲ.



ಇತರರ ಮುಖಗಳನ್ನು ಇಂದೂ ಸ್ವತಃ ಗುರುತಿಸಿದಳು: ಪಿ.ಎಲ್.ಓ.ದ ಯಾಸರ್ ಅರಾಫತ್, ಪಾಕಿಸ್ತಾನ್ ಅಧ್ಯಕ್ಷ ಜಿಯಾ, ಬ್ರಿಟನ್‌ನ ಮಾರ್ಗರೇಟ್ ಥ್ಯಾಚರ್, ಕೆಲವೇ ವಾರಗಳ ಹಿಂದೆ ಥ್ಯಾಚರ್ ಭಯೋತ್ಪಾದಕರ ಆಕ್ರಮಣದಿಂದ ಪಾರಾದ ಘಟನೆಯನ್ನು ಅವಳು ಜ್ಞಾಪಿಸಿಕೊಂಡಳು.

ಜಪಾನ್‌ನ ನಕಸೋನೆ. ಸಂಯುಕ್ತ ರಾಷ್ಟ್ರ ಸಂಘದ ಸೆಕ್ರೆಟರಿ ಜನರಲ್ ಕುಲ್ಲರ್. ಬಾಂಗ್ಲಾದೇಶ್‌ನ ಜನರಲ್ ಅರ್ಷದ್...

ವಿದೇಶೀ ರಾಷ್ಟ್ರ ಪ್ರಮುಖರುಗಳ ಭದ್ರತೆಯನ್ನು ದೃಢ ಪಡಿಸಲು ಗೂರ್ಖಾಗಳು. ಅವರ ಕೈಯಲ್ಲಿ ಇಸ್ರೇಲ್‌ನಲ್ಲಿ ನಿರ್ಮಿಸಲಾದ ೨೧ ಸಬ್ ಮೆಶಿನ್ ಕೋವಿಗಳು. ಪ್ರತಿಯೊಬ್ಬ ವಿದೇಶೀ ರಾಷ್ಟ್ರ ಮುಖ್ಯಸ್ಥನಿಗೂ ತನ್ನದೇ ಆದ ವೈರಿಗಳಿದ್ದಾರೆ. ಇಂದಿರಾರ ವಿಧಿ ಅವರನ್ನೂ ಹಿಂಬಾಲಿಸೀತು....

ಸಾಮಾನ್ಯ ರೀತಿಯಲ್ಲಾಗಿದ್ದರೆ ವಿದೇಶೀ ನಾಯಕರುಗಳು ಶವಮಂಚದ ಜತೆಯಲ್ಲೇ ಮೆರವಣಿಗೆಯಲ್ಲಿ ಪಾಲ್ಗೊಳ್ಳಬೇಕಾಗಿತ್ತು. ಆದರೆ ಭದ್ರತಾ ವ್ಯವಸ್ಥೆಯ ಹೊಣೆ ಹೊತ್ತವರು ಒಬ್ಬೊಬ್ಬರನ್ನೂ ಪ್ರತಿ ಪ್ರತ್ಯೇಕವಾಗಿ ಬುಲೆಟ್‌ಪ್ರೂಫ್ ಲಿಮೋಸ್‌ನ ಒಳಗೇ ಶಾಂತಿವನಕ್ಕೆ ತಲಪಿದ್ದರು.

ಈ ಜಗತ್ತಿನಲ್ಲಿ ಯಾವ ರಾಷ್ಟ್ರ ನಾಯಕನೂ ಸುರಕ್ಷಿತನಲ್ಲ.

ತ್ರಿವರ್ಣ ಧ್ವಜದಲ್ಲಿ ಸುತ್ತಲಾದ ಇಂದಿರಾರ ಕಳೇಬರವನ್ನು ಗಂಧದ ಚಿತೆಯ ಮೇಲೆ ಮಲಗಿಸಲಾಯಿತು. ಜೈಲ್ ಸಿಂಗ್ ಚಿತೆಗೆ ಸುತ್ತ ಬಂದರು. ಅವರನ್ನು ಕೇಂದ್ರ ಸಚಿವರುಗಳೂ ರಾಜ್ಯಗಳ ಮುಖ್ಯ ಸಚಿವರುಗಳೂ ಹಿಂಬಾಲಿಸಿದರು. ಜನರ ಗುಂಪು ನಿಯಂತ್ರಣಾತೀತವಾಯಿತು. ಅವರನ್ನು ದೂರವಿರಿಸಲು ಸೆಕ್ಯೂರಿಟಿ ಗಾರ್ಡ್‌ಗಳಿಗೆ ಸಾಧ್ಯವಾಗಲಿಲ್ಲ. ಎರಡುಬಾರಿ ಸ್ವತಃ ರಾಜೀವರೇ ಮುನ್ನುಗ್ಗಿ ಬರುತ್ತಿರುವ ಜನಸಂದಣಿಯನ್ನು ದೂರ ನಿಲ್ಲಲು ವಿನಂತಿಸಿದರು.

ಇಂದಿರಾ ಗಾಂಧಿಯ ಕುರಿತು ಯೋಚಿಸುವಾಗಲೆಲ್ಲ ಮನಸ್ಸಿಗೆ ನುಗ್ಗಿಬರುವ ದೃಶ್ಯಗಳೆಲ್ಲದರಲ್ಲೂ ಇಂದಿರಾ ಎಂಬ ಪ್ರಧಾನಮಂತ್ರಿಗಿಂತಲೂ ಇಂದಿರಾ ಎಂಬ ಮಹಿಳೆಯೇ ಮುಂದಿರುತ್ತಾರೆ.

ತಾನು ಲಂಡನ್‌ನ ಸುವಿಖ್ಯಾತವಾದ ಮೇಡಂಮೊಸದ್‌ಳ ಮೇಣದ ಪ್ರತಿಮೆಗಳ ಪ್ರದರ್ಶನಾಲಯಕ್ಕೆ ಭೇಟಿಯಿತ್ತಾಗ ಒಂದು ತುಂಟತನಕ್ಕೆ ಮನಸ್ಸು ಮಾಡಿದ್ದನ್ನು ರವಿ ಜ್ಞಾಪಿಸಿಕೊಂಡನು. ಜಾಗತಿಕ ಮುಂದಾಳುಗಳಾದ ಥ್ಯಾಚರ್, ಇಂದಿರಾ, ರೇಗನ್ ಮುಂತಾದವರೆಲ್ಲರ ಆಳೆತ್ತರದ ಜೀವಕಳೆ ಸೂಸುವ ಪ್ರತಿಮೆಗಳು ಅಲ್ಲಿವೆ. ಇಂದಿರಾರ ಪ್ರತಿಮೆಯ ಪಕ್ಕದಲ್ಲಿ ನಿಂತುಕೊಂಡು ತಾನೊಂದು ಫೋಟೋ

ತೆಗೆಸಿದ್ದೆ. ಒಂದು ಅವಕಾಶ ದೊರೆತಾಗ ಫೋಟೋದಲ್ಲಿ ಆಟೋಗ್ರಾಫ್ ನೀಡಲು ಇಂದಿರಾರನ್ನು ಕೇಳಿಕೊಂಡೆ. ಅವರು ಫೋಟೋದಲ್ಲಿ ದಿಟ್ಟಿಸಿ ನೋಡಿ ನಗೆಯನ್ನು ತಡೆಹಿಡಿಯುತ್ತ ಹೇಳಿದ್ದರು: ಎಷ್ಟು ಕೆಟ್ಟದಾಗಿ ಅವರು ಪ್ರತಿಮೆಗೆ ಸೀರೆ ಉಡಿಸಿದ್ದು! ಹೈಕಮಿಶನರ್‌ಗೆ ನಾನು ಇವತ್ತೆ ಪತ್ರ ಬರೆಯುತ್ತೇನೆ–ಇಂತಹ ಸಂಗತಿಗಳಲ್ಲಿ ವಿಶೇಷ ಗಮನ ಹರಿಸಲು.

ಅವರು ಸಹಿ ಹಾಕಿ ಕೊಟ್ಟಿರುವ ಫೋಟೋ ಈಗಲೂ ನನ್ನ ಆಲ್ಬಂನಲ್ಲಿ ಇದೆ. ಫೋಟೋ ವಾಪಾಸ್ ಕೊಡುವಾಗ ಅವರು ಹೇಳಿದ್ದ ಸಂಗತಿ ನೆನಪಾಗುತ್ತದೆ: ಕಾಟೇಜ್ ಎಂಪೋರಿಯಂನಿಂದ ಅದಕ್ಕೆಂದೇ ಆಯ್ಕೆ ಮಾಡಲಾದ ಸೀರೆಯನ್ನು ನಾನು ಅವರಿಗೆ ಕೊಟ್ಟದ್ದು. ಸೀರೆ ಉಡಿಸಿದ್ದ ಕ್ರಮದಿಂದಲೇ ಗೊತ್ತಾದದ್ದು–ಅದು ನಿಜವಾದ ನಾನಲ್ಲವೆಂದು. ಅದೂ ಅಲ್ಲದೆ, ಆ ಸೀರೆಯನ್ನು ನಾನು ಉಡಲೇ ಇಲ್ಲವಲ್ಲ.

ಮೊರಾರ್ಜಿ ದೇಸಾಯಿ ಪ್ರಧಾನಿಯಾಗಿದ್ದಾಗ ಅವರನ್ನು ನೋಡಲು ಇಂದಿರಾ ಎರಡೋ ಮೂರೋ ಬಾರಿ ಔದ್ಯೋಗಿಕ ವಸತಿಗೆ ಹೋಗಿದ್ದರು. ಮೊದಲ ಬಾರಿ ಹೋಗಿದ್ದಾಗ ಮೊರಾರ್ಜಿಯವರ ಪರ್ಸನಲ್ ಸ್ಟಾಫ್ ಅವರನ್ನು ಗೌರವದಿಂದ ಆದರಿಸಿ ಕೂಡಿಸಿದ್ದರು. ಈ ಸಂಗತಿ ಮೊರಾರ್ಜಿಗೆ ಗೊತ್ತಾಗಿತ್ತೊ ಏನೊ. ಅಂತೂ ಎರಡನೆಯ ಬಾರಿ ಹೋದಾಗ ಅವರೊಂದಿಗಿನ ವರ್ತನೆ ಬಹಳ ಬದಲಾಗಿತ್ತು. ಅವರನ್ನು ಎದುರ್ಗೊಳ್ಳಲಿಕ್ಕಾಗಲೀ ಕುಳಿತುಕೊಳ್ಳಲು ಹೇಳಲಿಕ್ಕಾಗಲಿ ಯಾರೂ ಮುಂದೆ ಬರಲಿಲ್ಲ. ಈ ನಡೆವಳಿಕೆ ಅವರನ್ನು ಬಹಳ ನೋಯಿಸಿತು. ಜತೆಯಲ್ಲಿದ್ದವರು ಅವರನ್ನು ಸಾಂತ್ವನಗೊಳಿಸಿದರು.

ಎತ್ತರದಲ್ಲಿ ಹೆಲಿಕಾಪ್ಟರುಗಳು ಪುಷ್ಪವೃಷ್ಟಿ ನಡೆಸಿದವು.

ಯಾರೋ ವರುಣ್‌ನ ಬಗ್ಗೆ ನೆನಪು ಮಾಡಿದ್ದು ಆಗಲೇ. ವರುಣ್‌ನ ಜತೆ ಮೇನಕಾ ಸಹ ವೇದಿಕೆಗೆ ಬಂದರು. ಚಿತೆಗೆ ಸುತ್ತು ಬಂದ ಬಳಿಕ ವರುಣ್ ಕೆಳಗಿಳಿಯಲು ಒಪ್ಪದೆ ಪ್ರಿಯಾಂಕ ಮತ್ತು ರಾಹುಲ್‌ರ ಸಮೀಪಕ್ಕೆ ಹೋಗಲು ಹಟ ಹಿಡಿದ. ಮೇನಕಾ ಮಗುವನ್ನು ಎತ್ತಿಕೊಂಡು ತನ್ನ ಸ್ಥಾನದಲ್ಲಿ ಹೋಗಿ ಕುಳಿತರು. ರಾಜೀವ್ ತುಸು ಚಡಪಡಿಕೆಯೊಂದಿಗೆ ಆ ದೃಶ್ಯವನ್ನು ನೋಡುತ್ತ ನಿಂತರು. ಇಂದ್ರಪ್ರಸ್ಥ ಮತ್ತು ಕುರುಕ್ಷೇತ್ರ ಪುನಃ ಮರುಕಳಿಸಲಿವೆಯೆ? ಯಾರು ಕೌರವರೊ? ಯಾರು ಪಾಂಡವರೊ? ಕುಂತಿಯ ಪಾತ್ರವನ್ನು ಯಾರು ವಹಿಸುವರೊ? ದ್ರೌಪದಿಯಾಗುವವರು ಯಾರೊ? ಪಾರ್ಥನ ರಥ ನಡೆಸಲು ಚಾಟಿಯೊಂದಿಗೆ ಕೃಷ್ಣನು ಇರುವನೊ ಏನೊ? ತುಸು ದೂರದಲ್ಲಿ ಧೀರೇಂದ್ರ ಬ್ರಹ್ಮಚಾರಿ ತನ್ನ ಗಡ್ಡ ನೀವುತ್ತ ಯೋಚಿಸುತ್ತಿದ್ದಾರೆ. ತನಗೆ ಹೊಂದುವಂಥದ್ದು ಯಾರ ಭೂಮಿಕೆ? ಅಶ್ವತ್ಥಾಮನದ್ದೆ? ದ್ರೋಣರದ್ದೆ? ಶಕುನಿಯದ್ದೆ?



ರಾಜೀವ್ ಏಳು ಬಾರಿ ಚಿತೆಗೆ ಪ್ರದಕ್ಷಿಣೆ ಮಾಡಿದರು. ತುಪ್ಪ ಮತ್ತು ಜೇನು ಸುರಿದು ಹಚ್ಚಲಾದ ದೊಂದಿಯನ್ನು ಏಳು ಬಾರಿ ಇಂದಿರಾರ ಶಿರಕ್ಕೆ ತಾಗಿಸಿದರು. ಬಳಿಕ ಚಿತೆಯ ಅಡಿಯಲ್ಲಿ ದೊಂದಿಯಿಂದ ಬೆಂಕಿ ಎಸಳುಗಳು ಹಬ್ಬಿದವು.

ಸೋನಿಯಾರ ಮನಃಸ್ಥೈರ್ಯ ತಪ್ಪಿತೆಂದು ತೋರುತ್ತದೆ. ಪ್ರಿಯಾಂಕ ತಾಯಿಯನ್ನು ಆನಿಸಿ ಹಿಡಿದು ಹೆಗಲು ತಟ್ಟಿ ಸಂತೈಸುತ್ತಿದ್ದಾಳೆ. ರಾಹುಲ್, ಆಕಾಶಕ್ಕೆ ಹೊಮ್ಮುತ್ತಿರುವ ಅಗ್ನಿಜ್ವಾಲೆಗಳನ್ನೇ ದಿಟ್ಟಿಸುತ್ತಾ ನಿಂತಿದ್ದಾನೆ.

ರಾಜೀವ್ ಚಿತೆಯಲ್ಲಿ ದೃಷ್ಟಿ ನೆಟ್ಟುಕೊಂಡು ತುಸು ದೂರದಲ್ಲಿ ನಿಂತಿದ್ದಾರೆ.

ಜನಜಂಗುಳಿಯ ಮಧ್ಯದಲ್ಲೂ ಅವರು ಏಕಾಂಗಿಯಾಗಿಯೇ ಇರುವರು. ಸಮೀಪದಲ್ಲೆ ಇರುವ ಸೋನಿಯಾ, ರಾಹುಲ್, ಪ್ರಿಯಾಂಕ ಯಾರನ್ನೂ ಕಾಣುತ್ತಾ ಇಲ್ಲ.

ಸಮಗ್ರ ರಾಷ್ಟ್ರವೊಂದರ ಭವಿಷ್ಯ ತನ್ನ ಹೆಗಲ ಮೇಲಿದೆ ಎಂಬುದನ್ನೂ ಒಂದು ಕ್ಷಣ ಮರೆತರು.

ಹಿಡಿ ಬೂದಿಯಾಗಿ ಮಾರ್ಪಡುತ್ತಿರುವ ತಾಯಿಯನ್ನೇ ಮನಸ್ಸಿನಲ್ಲಿ ತುಂಬಿಕೊಂಡರು.

ಅವರು, ಜಗತ್ತು ಕಂಡಿದ್ದ ಅತ್ಯಧಿಕ ಅಧಿಕಾರ ಬಲ ಹೊಂದಿದ್ದ ಮಹಿಳೆ ಎಂಬುದೂ ಅಪ್ರಸಕ್ತವಾಯಿತು.

ದೂರದ, ಕುಸಿದು ನಾಶವಾಗುತ್ತಲೂ ಪುನಃ ಭವ್ಯವಾಗಿ ತಲೆಯೆತ್ತುತ್ತಲೂ ಇದ್ದ ಏಳು ದೆಹಲಿಗಳ ಪಳೆಯುಳಿಕೆಗಳಲ್ಲಿ ಇತಿಹಾಸ ನಿದ್ರಿಸುತ್ತಾ ಇದೆ. ಪೃಥ್ವಿರಾಜ್ ನಿರ್ಮಿಸಿದ್ದ ರಾಯಿ ಫಿಥೋರದ ಅವಶೇಷಗಳಿಂದ ಕುತ್ಬುದ್ದೀನ್ ಐಬಕ್ ಎಬ್ಬಿಸಿದ್ದ ಕುತುಬ್ ಮಿನಾರ್ ತಲೆಯೆತ್ತಿ ನಿಂತಿದೆ. ಅಲ್ಲಾವುದ್ದೀನ್ ಖಿಲ್ಜಿ ಕಟ್ಟಿಸಿದ್ದ ಸಿರಿಕೋಟದ ಆವರಣ ಗೋಡೆಗಳಿಗೆ ಇಟ್ಟಿಗೆಗೆ ಬದಲಾಗಿ ಬಳಸಲಾದ ಗುಲಾಮರ ಎಂಟುಸಾವಿರ ತಲೆಬುರುಡೆಗಳು ಕಾಲದ ಫಾಸಿಲ್‌ಗಳಾಗಿ ಮಾರ್ಪಟ್ಟಿವೆ. ಘಿಯಾಬುದ್ದೀನ್ ತುಘಲಕ್‌ನ ತುಘಲಕಾಬಾದ್ ಎಂಬ ಮೃತ ನಗರದಿಂದ ಗತಕಾಲದ ನಿಟ್ಟುಸಿರುಗಳು ಕೇಳಿಸುತ್ತಿವೆ. ಮಹಮ್ಮದ್ ಬಿನ್ ತುಘಲಕ್‌ನ ಪ್ರೇತ ಗತಿ ಪ್ರಾಪ್ತಿಯಾಗದೆ ಅಂಡಲೆಯುತ್ತಿದೆ. ಫಿರೋಜ್ ಶಾ ತುಘಲಕ್‌ನ, ಐದನೆಯ ದೆಹಲಿಯ ಅವಶೇಷಗಳು ಕೋಟ್‌ಲಾ ಫಿರೋಜ್ ಶಾದಲ್ಲಿ ಚದುರಿ ಬಿದ್ದುಕೊಂಡಿವೆ. ಪುರಾಣ್ ಕಿಲಾದಲ್ಲಿ ಶೇರ್‌ಶಾ ಸುರಿಯ, ಆರನೆಯ ದೆಹಲಿ ಚಿರನಿದ್ದೆಯಲ್ಲಿ ಕಂತಿಬಿಟ್ಟಿದೆ. ಯಮುನಾ ತೀರದ ಕೆಂಪುಕೋಟೆಯ, ಭೂಮಿಯಲ್ಲಿನ ಸ್ವರ್ಗವಾಗಿದ್ದ ಒಳಮನೆಗಳಲ್ಲಿ ಷಾಜಹಾನನ, ಏಳನೆಯ ದೆಹಲಿಯ ಸ್ಮರಣಿಕೆಗಳೊಂದಿಗೆ ಬಾವಲಿಗಳು ಹಾರಾಡುತ್ತಿವೆ.

ನೆಹರೂ ಮತ್ತು ಇಂದಿರಾರ ದೆಹಲಿಗೆ ಅಗೊ ಉತ್ತರಾಧಿಕಾರಿ ದೊರೆತಿದೆ.

ಎತ್ತರಕ್ಕೆ ಹೊಮ್ಮುತ್ತಿರುವ ಜ್ವಾಲೆಗಳ ಮೂಲಕ, ಬಾನಿನ ಇಳಿಜಾರಿನತ್ತ

ಜಾರುತ್ತಿರುವ ಸೂರ್ಯಬಿಂಬದ ಕೆಂಪು ವೃತ್ತವನ್ನು ದಿಟ್ಟಿಸಿ ನೋಡುತ್ತ ರಾಜೀವ್ ನಿಂತುಕೊಂಡರು.

ಅಮ್ಮನ ಕಣ್ಣುಗಳ ಹೊಳಪು ಆ ಸೂರ್ಯ ಗೋಲದ ಅನಶ್ವರತೆಯಲ್ಲಿ ಲೀನವಾಗುತ್ತಿದೆಯೇ?

* * *